ಪ್ರಾಕ್ಕಾವ್ಯ ಮಾಲಿಕೆ.

ಪ್ರಾಕ್ಕಾವ್ಯ ಮಾಲಿಕೆ.

CANARESE POETICAL ANTHOLOGY.

CANARESE

POETICAL ANTHOLOGY

OR

SELECTIONS

FROM THE

STANDARD POETICAL WORKS OF ANCIENT CANARESE LITERATURE

WITH

INTRODUCTIONS AND FOOT NOTES

BANGALORE:

PRINTED FOR THE DIRECTOR OF PUBLIC INSTRUCTION, MADRAS,

AT THE MYSORE GOVERNMENT PRESS.

1868.

PRINTED AND PUBLISHED
BY J. P. GARRETT, SUPT. MYSORE GOVT. PRESS.

ADVERTISEMENT.

The following Selections from the Standard Poetical orks of Ancient Canarese Literature, with introductions ıd notes, were prepared by the Rev. G. Würth of the Basel Iission. The work of printing was carried out at the Mysore overnment Press; and the Rev. Mr. Würth having been ompelled by ill health to return to Europe, Mr. J. Garrett, ıe Director of Public Instruction in Mysore, very kindly onducted the sheets through the Press.

PREFACE.

Canarese is one of the five *dravidian* or South-Indian tongues. (Tamil, Telugu, Canarese, Malayalam, Toulava). The language, as it is spoken and written now, is called the "*modern dialect*" in contra-distinction to the "*ancient dialect*," which was spoken and used in literary composition from about 800—1500 A. D. And it is sometimes used even now in poetical compositions, the modern dialect being not always equal to the requisitions of poetry. To a comprehensive study of the language a knowledge of this ancient dialect is indispensable, from which the grammatical forms now used have been derived and developed, by a process of euphonization and softening away of the rougher and fuller sounding ancient forms.

Canarese is now spoken by about ten millions, namely:

1. in the Madras Presidency
   - *a.* in the Collectorate of *Mangalore.*
   - *b.* in the larger part of the Collectorate of *Bellary*;
2. in the Presidency of Bombay
   - *a.* in the Collectorate of *North-Canara,*
   - *b.* in the Collectorate of *Dharwar,*
   - *c.* in the Collectorate of *Belgaum,*
   - *d.* in the newly formed Collectorate of *Kalladighee*;
3. in the Principalities of Mysore and Coorg;
4. in the Dominions of the Nizam
   - *a.* in the *Raichore Doab,*
   - *b.* in the *country north* of the river *Krishna* as far as the banks of the river *Bhīma.*

The dialects spoken by the tribes on the Neilgherries, the *Badagas,* i. e. the *Northerners,* the *Kotas* and *Todas,* are derived from ancient Canarese. Many grammatical forms of the ancient dialect are still found in use among them. The Mohammedan fraction of

the population in the above named regions is very often inconsiderable. They have been more assimilated to the Hindoos than their brethren in the north, and generally speak Canarese in addition to their Hindustanee. The Canarese population consists of,

1. *Brahmans*; they are only a small fraction of the whole people, and their influence and power has been greatly diminished by the establishment of the Lingait sect.

2. *Artisans*, as *Goldsmiths, Blacksmiths, Carpenters*, who wear the holy thread; they are not very numerous.

3. *Shepherds*; they are in many places numerous, and either keeping sheep and weaving blankets, or cultivating fields.

4. *Hunters*; they are rather numerous in some places, and served under the former native Governments as soldiers. They have now all become cultivators.

(2—4.) The sections named here are still, though they have priests from their own caste, under Brahmanical sway, inasmuch as they cannot, for instance, celebrate marriages without the assistance of Brahmans.

5. *Jains*; their number is very small. They are chiefly shopkeepers, or cultivators, or braziers.

6. *Lingaits*. They are nearly every where the most influential and numerous portion of the population. Their sect was established 800 years ago by Basava. They are *merchants, cultivators, potters, masons, weavers*, and there is scarcely a craft, which is not practised by some of them. A portion of the weavers, about 200 years ago, separated from this community and is forming now a new sect, which is called *Sevangas*. They have abolished the wearing of the linga, and assumed the holy thread. Their priests are of their own caste.

These are the chief divisions of the Canarese population. Besides them there are some weavers and cultivators, who belong to the *Veishnava sect*; there are in some places *Rajpoots* and *Mahratta cultivators* and *tradesmen*, who have adopted the Canarese language and forgotten their own.

In the modern dialect no books have been composed, which could lay claim to the distinction of being called classical or standard works of the language, and all of them are more or less unsafe

models of style. The classical works have all been written in the ancient dialect many centuries ago. The selections in this book have been taken from the best and most famous authors.

In *ancient Canarese Literature three periods* are clearly discernible.

I. One thousand years ago the *Jain persuasion* was prevailing in the Karnataka country (Deccan.) That the Jains were very clever. is evident from the fine temples they have built all over the country, They cultivated every where the vernaculars. So they seem to have been the first also, who reduced the Canarese language to writing, and cultivated it to a high degree of perfection. Their works, still extant, are the oldest. Among them *Dharma parikshe,* i. e. religious enquiry, giving an account of a disputation on Brahmanical mythology beween Jains and Brahmans,—and *Shastra sara,* i. e. essence of the shastras, are fine specimens, which show their high literary attainments. The excellent Canarese grammar, called *Shabda-mani-darpana,* seems to have been composed by Jains also. This time, in which Jainism and Canarese Jain-literature flourished in Karnataka, may be called the *Jain-period.*

II. In the mean time the Brahmans had begun to regain their ascendancy in the country. They soon saw, that, in order to get a hold on the minds of the masses, they must imitate the Jains and cultivate the vernaculars. Accordingly they set to work, and translated the *Mahábhárata* and *Rámáyana* from the Sanskrit into Canarese, and succeeded so well, that these translations are still admired and read throughout the country. The beauty however of these two works was surpassed by *Jaimini Bhárata,* a free translation of the 15th Section of the Mahábhárata, detailing the horse sacrifice. The work is rightly considered also by the Jains and Lingaits to be the first classical work of the language, though it advocates tenets quite antagonistic to their sects. "He has read Jaimini" is equivalent to saying "he is an accomplished man." The time when these translations were made, is the *Brahman period.*

III. The power of the Jains was on the decline, and the *Brahmans* had scarcely regained a firm footing among the Canarese population, when to their great astonishment and grief one of their

own caste, an *Aradhya Brahman,* rose, declared their religion to be only a multitude of vain ceremonies, refused to conform to its precepts, and commenced to set up a sect of his own. This was *Basava,* a really historical person of great independency of mind and of great moral courage. He was born 800 years ago in a village to the east of Bijapoor in the Collectorate of Kalladighee. Having become prime minister at the Court of Kalyana, the capital of a great empire, which then stretched from ocean to ocean, he succeeded by degrees, to establish his own sect, called *Lingait,* from its votaries wearing the Linga, which they consider to be the true symbol of the creative divine power. This great success must be attributed to two, perhaps three, causes. Basava had immense power, popularity, and influence by his high station in life. Converts from Jainism to Lingaitism were unduly favoured, though Basava's master, king Bijjala, with the majority of his subjects, was still a devout Jain. Basava connived at the intercourse the king had with his beautiful sister, as the Jains say, and had great power over him. Pecuniary assistance was in great profusion given to itinerant priests of the sect, who went about preaching and converting the people. The second cause of Basava's success was, that he addressed himself chiefly to the lower classes. These were flattered with a prospect of their social position being bettered by embracing the new religion. And indeed taking the Linga and becoming a Lingait, was according to the ideas of the Hindoos a step in advance. For this great privilege of wearing this sacred symbol on the body, had been to that time confined exclusively to the Brahmans. In fact Basava did nothing else but introduce the peculiar Linga worship, as it was performed by the Aradhya Brahmans only, to whom he himself belonged, among the different classes of the Shudras. A third cause of Basava's success may have been the stupid insolence of the Jain priesthood towards their disciples.

The spread of the sect was wide and rapid, so that even in the neighbouring *Telugu* and *Tamil* countries many became the worshippers of Basava, and sacred books, still extant, were written in those tongues in honour and praise of him. Basava's master, the king, did not like this great change. He hated and persecuted the Lingaits. Therefore two fanatic Lingaits, encouraged by Basava, assassinated him in his palace. A civil war broke out, and the empire of *Kalyana*

was annihilated. Thus Basava was the cause of great revolutions in the Deccan. It was to be expected, that such a man as he, would, after the lapse of some time, be deified by credulous men, and the real facts of his history obscured by a mass of legendary lore. From this time to the fall of the empire of *Vijayanagara*, and downwards, a great number of Canarese works have been written, for instance *Basava-Purána*, nearly all in praise or explanatory of Lingaitism. This time is the *Lingait period of Canarese literature.* During this period poems were also composed, some by Brahmans, some by Lingaites, which teach the *Vedánta*, and have become very popular now. There was also, it would seem, a *revival* among the worshippers of *Vishnu* in this time. To promote this worship of Vishnu, and his incarnation *Krishna*, the *Bhágavata Purána* was translated from Sanscrit into Canarese, and religious minstrels, servants of this God, composed verses and sang them in his praise. *(Dásara-Pada)*. Not a single work however of this period attained to the high perfection of the *Jain* and *Brahman periods*, with the exception of *Rája Shékhara*, which contains descriptive poetry of great beauty, and is considered by the learned, to be the *ne plus ultra* of poems.

This Anthology would not have been complete, it would seem, if some hymns, used among native Christians, had not been added to it. This is a new kind of poetry in Canarese. Those hymns have been composed according to the prosody of the Teutonic languages, (English, German, &c.) and will, no doubt, be of interest to the native Canarese scholar, as showing how the use of his own language may be enlarged.

The study of the Grammar of the Ancient Dialect of the Canarese language, which was published by the Director of Public Instruction of Madras, is recommended as a great help to those who would read this book.

CANARESE

Poetical Anthology.

ಕರ್ನಾಟಕ

ಪ್ರಾಕ್ಕಾವ್ಯ ಮಾಲಿಕೆ.

(ಕರ್ನಾಟಕ ಗ್ರಂಥಗಳು, ಕೆಲವು ಬ್ರಾಹ್ಮಣ ಮತಕ್ಕೆ, ಕೆಲವು ಲಿಂಗವಂತ ಮತಕ್ಕೆ, ಕೆಲವು ಜೈನ ಮತಕ್ಕೆ, ಸಂಬಂಧವಾಗಿ ಹೀಗೆ ಮೂರು ಪ್ರಕಾರವಾಗಿವೆ. ಒಂದೊಂದು ಮತದ ಪ್ರಸಿದ್ಧ ಗ್ರಂಥಗಳಲ್ಲಿ ಕಾವ್ಯ ಲಕ್ಷಣ ಸಂಪೂರ್ಣವಾದ ಕೆಲವು ಭಾಗಗಳನ್ನು ಆರಿಸಿಕೊಂಡು ಸಂಮೇಳನ ಮಾಡಿ ಇದಕ್ಕೆ ಪ್ರಾಕ್ಕಾವ್ಯಮಾಲಿಕೆ ಎಂಬ ಹೆಸರನ್ನು ಇಟ್ಟಿದ್ದೇವೆ.)

I. BRAHMANICAL LITERATURE.

1. ಜೈಮಿನಿ ಭಾರತವು. (ವಾರ್ಧಿಕ ಷಟ್ಪದಿ.)

PREFACE OF THE AUTHOR TO HIS WORK.

೧. ಪೀಠಿಕಾಪದಗಳು.

1. ಕೆನೆವಾಲ ಗಡೆದು ನವನೀತಮಂ ತೆಗದು ಬಾ
ಯ್ಗಿನಿದಾಗಿ ಸವಿಯದದರೊಳಗೆ ಪುಳಿವಿಡಿದು ರಸ
ವನೇ ಕೆಡಿಸಿದೊಡೆ, ಕರೆದ ಸುರಭಿಗಪ್ಪುದೆ ಕೊರತೆ? ಕಾವ್ಯಮಂ
[ಕೇಳ್ದು ಮಥಿಸಿ

Hear and then judge of the poem.

1. ಆಗುವದೇ? ವ್ಯಾಕರಣ ಸೂತ್ರ 2.

ಜನಿಸಿದ ಪದಾರ್ಥಮಂ ತಿಳಿದು ನೋಡದೆ
ವಿನೂತನಕವಿತೆ ಯೆಂದು ಕುಂದಿ[2]ಟ್ಟು ಜರೆದೊಡೆ, ಪೇಳ್ದ
ವನೊಳಾವದೂಣೆಯುಂ? ಜಾಣರಿದನರಿದು ಮತ್ಸರವನುಳಿದಾಲಿಸು
[ವದೂ!

2. ಹೀಗೆ ಕಾವ್ಯ ಬರೆಯುವ ಪದ್ಧತಿ ಉಂಟು. ವ್ಯಾ. ಸೂ. 6. ಕವಿಯೇ ಸುರಭಿ, ಅವನ ಕಾವ್ಯವೇ ಕೆನೆಹಾಲು, ಅವನ ಕಾವ್ಯವನ್ನು ವಿಚಾರಿಸಿ ತಿಳಿಯದೆ ಸುಳ್ಳಿಗೆ ಕುಂದಿಟ್ಟವರೇ ಆ ಹಾಲನ್ನ ಹಾಗೆ ಬಿಟ್ಟರೆ, ಅದು ಹುಳಿ ಹಿಡಿಯುತ್ತದೆ ಆದ್ದರಿಂದ ಅವರು ಅದನ್ನ ಕೆಡಿಸಿದಂತೆ ಆಗುವದು. 3. ನೋಡು ವ್ಯಾ. ಸೂ. 19. 4. ವ್ಯಾ. ಸೂ. 18. 5. ವ್ಯಾ. 134.

2. ಮೊಗಮಾವಲೀಲೆಯಿಂದೆಸವುದಾಭಾವಮಂ
ಮಗುಳೆ ತೋರುವದಲ್ಲದನ್ಯಪ್ರಕಾರದಿಂ
ಸೊಗಯಿಪುದೆ ರನ್ನಗನ್ನಡಿ? ಧರೆಯೊಳಾರಾಜಿಸುವ ಕನ್ನಡದ ನು
[ಡಿಗಳಾ
ಬಗೆಯರಿದ[1]ರಾವಲಕ್ಷಣದಿಂದ ಮುನ್ನಿ[2]ನ ಕ
ಬ್ಬಿಗಳನುಸರಿದರದೆ ಲಕ್ಷ್ಯಮಲ್ಲದೆ ಪೆರತೆ
ನಗೆ ಸಲ್ಲದದರಿಂದ ಪೂರ್ವಸತ್ಕವಿಗಳ್ಗೆ ನಮಿಸಿ ನಾಂ ಕೃತಿ ಪೇ
[ಳ್ವೆನೂ.

In making this poem I followed the rules of the ancient poets.

ಕನ್ನಡ ನುಡಿಯೇ ರನ್ನಗನ್ನಡಿ, ಅದರಲ್ಲಿ ನೋಡಿದ ಮುಖವೇ ಪೂರ್ವ ಕವಿಗಳು, ಅದರಿಂದ ಹೊಳೆದ ಪ್ರತಿ ಬಿಂಬವೇ ಈ ಕೃತಿ ಹೇಳಿದ ಕವಿ. 1. ಅರಿದವರು, 2. ಮುಂಚಿನ.

3. ವಿದ್ವತ್ಸಭಾವಲಯಮರ್[1]ಯೆ, ವಿರಚಿಸಿದಂ ಭ
ರ[2]ದ್ವಾಜಗೋತ್ರಭವ[3]ನಣ್ಣಮಾಂಕನ ಸುತಂ
ಸದ್ವಿನುತಕರ್ನಾಟಕವಿಚೂತವನಚೈತ್ರ[4]ಲಕ್ಷ್ಮೀಶನೆಂಬೋರ್ವನೂ

Name & tribe of the author of this poem.

1. ಅರಿಯುವ ಹಾಗೆ ವ್ಯಾ. 2. ಸಪ್ತ ಋಷಿಗಳಲ್ಲಿ ಒಬ್ಬನು. 3. ಹುಟ್ಟಿದವನು. 4. ಕರ್ನಾಟಕ ಕವಿಗಳು ಎಂಬ ಮಾವಿನ ತೋಪಿಗೆ ಲಕ್ಷ್ಮೀಶನೆಂಬ ಕವಿಯೇ ವಸಂತಕಾಲ ಅಂದರೆ ಇವನಿಂದ ಉಳಿದ ಕವಿಗಳು ಸಂತೋಷ ಪಡುವರು.

ಹೃದ್ವನಜದೊಳ್ದೇವಪು[5]ರದ ಲಕ್ಷ್ಮೀಶನ ಪ

ದದ್ವಯವನಾವಗಂ ಧ್ಯಾನಿಸುವರಡಿಗಳಂ

ಸದ್ವಿನಯದಿಂ ಭಜಿಪೆ ಬಲ್ಪಿಂದ ವಿಮಲಜೈಮಿ[6]ನಿಭಾರತದ ಕಥೆ

[ಯ[7]ನೂ

5. ಇದು ಮೈಸೂರು ಜಿಲ್ಲಾ ದೇವನೂರು ಎಂಬ ಊರಂತೆ. 6. ಇದು ಮಹಾ ಭಾರತದ ೧೮ ಪರ್ವಗಳಲ್ಲಿ ೧೪ನೇ ಪರ್ವ. ವ್ಯಾಸಮುನಿ ಆ ೧೮ ಪರ್ವಗಳನ್ನು ರಚಿಸಿದ ಮೇಲೆ, ಅವನ ಶಿಷ್ಯನಾದ ಜೈಮಿನಿಮುನಿ ತಾನು ಅವಕ್ಕೆ ಪ್ರತಿಯಾಗಿ ೧೮ ಪರ್ವಗಳನ್ನು ಮಾಡಿ ವ್ಯಾಸಮುನಿಗೆ ತೋರಿಸಿದನು. ಅವನು ನೋಡಿ ಅವುಗಳಲ್ಲಿ ಈ ೧೪ನೇ ಅಶ್ವಮೇಧ ಪರ್ವ ಒಂದು ಮಾತ್ರ ಮಾನ ಮಾಡಿ ಉಳಿದವುಗಳನ್ನು ಬಿಟ್ಟನು. ಜೈಮಿನಿಮುನಿ ಮಾಡಿದ ಕಾರಣ, ಈ ೧೪ನೇ ಪರ್ವಕ್ಕೆ ಜೈಮಿನಿ ಭಾರತ ಎಂಬ ಹೆಸರಾಯಿತು. ಇದನ್ನು ಲಕ್ಷ್ಮೀಶನೆಂಬ ಈ ಕವಿ ಕನ್ನಡಿಸಿದನು. 7. ವಿರಚಿಸಿದಂ ಎಂದು ಸ್ಥಾಪಿಸ ಬೇಕು.

4. ವರವರ್ಣದಿಂದ ಶೋಭಿತವಾಗಿ ರೂಪ ವಿ

ಸ್ತರದಿಂದ ಚೆಲ್ವಾಗಿ ಮಧುರತರ ನವರಸೋ

ದರಭರಿತದಿಂದ ವಿಲಸಿತವಾಗಿ ಸುಮನೋನುರಾಗದಿಂ ಪ್ರಚುರ

[ವಾಗಿ

These verses, are like black bees in the lotus lake of the Learned Assembly.

ನಿರುತಮಂಜುಳಶಬ್ದದಿಂದ ಕಿವಿಗಿಂಪಾಗಿ

ಚರಿಸುವ ಸುಲಲಿತಷಟ್ಪದಿಗಳೆಡೆ ಬಿಡದೆ ಝೇಂ

ಕರಿಸದಿರ್ಪವೆ ಬಂದು ನೆರದ ವಿದ್ವತ್ಸಭಾನೀರೆರು ಹಾ[1]ಕರದೊಳೂ ?

1. ಈ ಪದದಲ್ಲಿ ಶ್ಲೇಷಾಲಂಕಾರವದೆ. ಷಟ್ಪದಿಗಳು = ೧. (ಭ್ರಮರ ೨. ಆರು ಚರಣವುಳ್ಳ ಪದ; ವರ್ಣ = ೧. ಅಕ್ಷರ ೨. ಬಣ್ಣ ಭ್ರಮರಗಳು ತಪ್ಪಾಗಿರುತ್ತವೆ); ರೂಪ ವಿಸ್ತರಣ = ೧. ವಿಸ್ತಾರವಾದ ರೂಪ ೨. ವಿಸ್ತಾರವಾದ ವ್ಯಾಕರಣದ ರೂಪ; ನವರ ಸೋದರ ಭರಿತ = ೧. ಸವಿಯಾದ ನೂತನವಾದ ಹೂವಿನ ರಸ ಕುಡಿದು ಹೊಟ್ಟೆತುಂಬಿ ಕೊಂಡಿರುವದು = ೨. ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯ, ಬೀಭತ್ಸ, ರೌದ್ರ, ಶಾಂತ ಎಂಬೀನವರಸಗಳಿಂದ ಈ ಷಟ್ಪದಿ ಪದಗಳು ಭರಿತವಾಗಿರುವದು; ಸುಮನ = ೧. ಪುಷ್ಪ ೨. ಒಳ್ಳೆ ಮನವುಳ್ಳವರು, ಭ್ರಮರಗಳು ಹೂವುಗಳ ಮೇಲೆ ಮಾಡುವ ಪ್ರೀತಿಯಿಂದ ಪ್ರಸಿದ್ಧವಾಗಿವೆ, ಈ ಪದಗಳು ಒಳ್ಳೆಯವರ ಪ್ರೀತಿಯಿಂದ ಪ್ರಸಿದ್ಧವಾಗುತ್ತವೆ; ಶಬ್ದ = ೧. ಭ್ರಮರಗಳು ಹಾಡುವ ಶಬ್ದ. ೨. ವ್ಯಾಕರಣ ಶಬ್ದ. ೧. ಕಮಲ ಸಮೂಹ = ಕೆರೆ ಕವಿಗಳ ಸಭೆ ಕಮಲ ಬೆಳದ ಕೆರೆಯು ಹಾಗೆ ಅದೆ. ೧. ಕಮಲ ಸಮೂಹ, ಕೆರೆ. ಕವಿಗಳ ಸಭೆ ಕಮಲ ಬೆಳದ ಕೆರೆಯು ಹಾಗೆ ಇದೆ.

THE HORSE CAUGHT AND LET LOOSE.

೨. ಅಶ್ವಮೇಧಕ್ಕೆ ತಕ್ಕ ಕುದುರೆ ಹಿಡಿತಂದು ಸಂಚಾರಕ್ಕೆ ಬಿಟ್ಟದ್ದು.

(೧—೭ ಸಂಧಿ.)

---

5. ಅಕನಕ[1] ಗಿರಿಯ ತೆಂಕಣದೆಸೆಯೊಳಿರ್ಪುದು ಸು
ಧಾಕರ[2]ಕುಲದ ನೃಪರ ಸಾಮ್ರಾಜ್ಯಪಟ್ಟಾಭಿ
ಷೇಕದಿಂವಿಸ್ತರ ಜಸಂ ಬಡೆದ ಹಸ್ತಿನಾಪುರಮ[3]ಲ್ಲಿಗರಸೆನಿಸುವಾ,
ಭೂಕಾಂ[4]ತಜನ[5]ಮೇಜಯಂ ಮಹಾಭಾರತ ಕ
ಥಾಕೌತುಕದೊಳಾಶ್ವ ಮೇಧಿಕವನೊಲವಿನಿಂ
ದೇಕಮಾನಸನಾಗಿ ಜೈಮಿನಿಮುನೀಂದ್ರನಂ ಬೆಸಗೊಂಡನೀ ತೆರ
[ದೊಳೂ ;

This king asks Jaimini, to give him an account of the horse sacrifice.

1. ಮೇರುಪರ್ವತ, ಭಂಗಾರ ಮಯವಾದದ್ದೆಂದು ಕಲ್ಪಿಸಿದ್ದಾರೆ. ಅದು ಹಿಮಾಚಲದ ಆಚೆಯ ಗುಡ್ಡಗಳಲ್ಲಿ ಒಂದು ಗುಡ್ಡ. 2. ಅಮೃತ ಕಿರಣವುಳ್ಳವನು ಚಂದ್ರ; ಚಂದ್ರನು ದೇವತೆಗಳಲ್ಲಿ ಒಬ್ಬನು, ಅವನಿಂದ ಕೌರುವರೂ ಪಾಂಡುವರೂ ಹುಟ್ಟಿದರು ಆದರೆ ಚಂದ್ರನು ಒಂದು ಗ್ರಹ. 3. ಪಾಂಡವರ ಸಂಸ್ಥಾನ. ಅದು ಇದ್ದಲ್ಲಿ ದಿಳ್ಳಿ ಎಂಬ ಪಟ್ಟಣ ಇನ್ನು ಅದೆ. 4. ಭೂಮಿ ಎಂಬ ಸ್ತ್ರೀಯಳಿಗೆ ಗಂಡನಾದವನು. ಇದು ಅರಸರಿಗೆ ಯೋಗರೂಢನಾಮ. 5. ಅರ್ಜುನನ ಮರಿಮಗನು.

6. ಪಿಂತೆ ಕೌರವ ಜಯಂ ತಮಗೆ ಕೈಸಾರ್ದ ಸಮ
ನಂತರದೊಳಾದ ಸಾಮ್ರಾಜ್ಯದೊಳ್ಪಾಂಡವರ
ದೆಂತಿಳಿಯನೋವಿದರದೇಗೈದರೆಂದು ? ಜನಮೇಜಯಮಹಿಪಾಲ
[ನೂ,
ಸಂತಸಂ ದಳೆದು ಜೈಮಿನಿಮುನಿಪನಂ ಕೇಳ್ದ
ಡಿಂತವಂ ಪೇಳ್ದನಾಭೂಪಂಗೆ ಸಕಲಜನ
ಸಂತತಿಗೆ ಕರ್ಣಾವತಂಸಮೆನೆ, ಮಧುರತರಭಾರತದಸತ್ಕಥೆಯನೂ.

As follows.

7. ಕೇಳಲೆ ನೃಪಾಲ! ಪಾಂಡವರ ಕಥೆ ಇದು ಪುಣ್ಯ
ದೇಳಿಗೆಯಲಾ! ಸುಯೋ[1]ಧನಮೇದಿನೀಶನಂ
ಕಾಳಗದೊಳುರೆ ಗೆಲ್ದು ಬಳಿಕ, ವರಹಸ್ತಿನಾಪುರದ ನಿಜಸಾಮ್ರಾ
[ಜ್ಯದಾ
ಳಿಕೆಯನನುಜರಿಂದೊಡಗೂಡಿ ಧರ್ಮಜಂ
ತಾಳಿದಂ; ಭರತನಳ ನ[2]ಹುಷಾದಿರಾಯರಂ
ಪೇಳುವಡವರ್ಗಿನಿತು ಸುಗುಣಮಿಲ್ಲೆಂದು ಭೂಮಂಡಲಂ ಕೊಂ
[ಡಾಡಲೂ

Answer of Jaimini, he begins to relate.

1. ಹಿರಿಯನು. 2. ಇವರು ಚಂದ್ರ ವಂಶದವರಲ್ಲಿ ಪ್ರಸಿದ್ಧಿಗೆ ಬಂದ ಪೂರ್ವದ ರಾಜರು.

8. ಹರಿಯಂತೆ ಬ[1]ಲಯುತಂ, ಶಿವ[2]ನಂತೆ ರಾಜಶೇ
ಖರನಬ್ಜಭವ[3]ನಂತೆ ಚತುರಾನನಂ, ಸರಿ
ದ್ವರನಂತೆ ರ[4]ತ್ನಾಕರಂ, ದಿವಾಕರನಂತೆ ನಿ[5]ರ್ದೋಷನಿಂದ್ರನಂತೇ
ಪರಿಚಿತಸು[6]ರಭಿರಮ್ಯನ[7]ಮೃತಾರ್ಚಿಯಂತೆ ವಿ
ಸ್ಫುರಿತಕು[8]ವಲಯನೆಂದು ಧರ್ಮಜನ ಧರೆ ಪೊಗಳು
ತಿರೆ, ಬಳಿಕ ಹಸ್ತಿನಾವತಿಗೆ ವೇದವ್ಯಾಸಮುನಿ ಯೊಂದಿನಂ ಬಂ
[ದನೂ.

Dharmaráya a wise and successful ruler.

1. ಬಲಯುತ = ಬಲವುಳ್ಳವನು, ಬಲನ ಬಂಧು, (ಬಲನು ಹರಿಗೆ ಸಹೋದರನಾಗ ಬೇಕು.) 2. ರಾಜರಿಗೆ ಮುಖ್ಯನು, ಚಂದ್ರನನ್ನು ತಲೆಯ ಮೇಲೆ ಧರಿಸಿದವನು. 3. ಅಬ್ಜಭವನು = ನಾರಾಯಣನ ನಾಭಿ ಕಮಲದಿಂದ ಜನಿಸಿದವನು = ಬ್ರಹ್ಮ, ವಾಕ್ಚಾತುರ್ಯನು, ನಾಲ್ಕು ಮುಖವುಳ್ಳವನು. 4. ರತ್ನ ಇದ್ದವನು, ಸರಿದ್ವರನು = ನದಿಗಳ ಒಡೆಯ = ಸಮುದ್ರ. 5. ಕತ್ತಲೆ ಇಲ್ಲದವನು, ತಪ್ಪಿಲ್ಲದವನು. 6. ಕಾಮಧೇನು, ಸುಗಂಧ. 7. ಅಮೃತಾರ್ಚಿ = ಅಮೃತ ಕಿರಣವುಳ್ಳವ ಚಂದ್ರ. 8. ಭೂಮಂಡಲ, ನೈದಿಲೆ.

9. ಬರಲಾನೃಪಾಲಕಂ ಸೋದರರ್ವೆರಸಿ ಮುನಿ
ವರನ ಪದಕೆರಗಿದೊಡೆ, ಮಣಿದೆತ್ತಿ ಬೋಳೈಸಿ
ಪರಸಿ ಮಂತ್ರಾಕ್ಷತೆಯನಿತ್ತು ಸತ್ಕಾರಮಂ ಕೊಂಡು ಕುಳಿರ್ದ ಬ
[ಳಿಕಾ,

Is visited by Véda Vyása;

ಅರಸನನುತಾಪದಿಂ ತಲೆವಾಗಿ ಮಾತಾಡ
ದಿರುತಿರ್ದನಖಿಲಸಂಚಾರವೊಂದಿನಿತಿಲ್ಲ
ದುರಿವ ಕಡುವೇಸಗೆಯ ಬಿಸಿಲಿಂದ ಬಸವಳಿದ ಕೋಮಲರಸಾಲ
[ದಂತೇ.

10\. ಕಂಡನರಸನ ಭಾವಮಂ; ಬಳಿಕ ನಗುತ ಬೆಸ
ಗೊಂಡನಿಂತೆಂದಾಮುನೀಂದ್ರನೆಲೆ ನೃಪತಿ! ಭೂ
ಮಂಡಲದ ಸಕಲಸಾಮ್ರಾಜ್ಯಮಂ ಪಾಲಿಸುವ ನಿನ್ನ ಸಂತಸ
[ದೇಳ್ಗೆಗೇ
ಖಂಡನಂ ಮಾಳ್ಪುದಾ[1]ನನದಿರವು; ಸಾಕು! ಮನ
ದಂಡಲೆಯನೊರೆ! ಯೆನಲ್ಜೀಯ! ಸಂತಾಪದಿಂ
ಬೆಂಡಾದುದೆಂನೊಡಲ್ಸೈರಿಸಲರಿಯೆನೆಂದೊಡಾತಪೋನಿಧಿ ನುಡಿ
[ದನೂ.

Who observing the grief of the king, asks him to tell him the reason.

1\. ಮಾಡುವದು. ವ್ಯಾ.

11\. ಕೆತ್ತಬಲ್ಗತ್ತಲೆಗೆ ತರಣಿ ಮುಂಗಾಣದಿರೆ,
ಪೊತ್ತುವೆಳಗಂ ಬೇರೆ ತೋರ್ಪರಾರ್ಬಿಡದೆ ಘ
ರ್ಮೋತ್ತರಕೆ ಮಾರುತಂ ಬೆಮರ್ದೊಡಾರ್ಬೀಸುವರ್ಬಳಿಕಾಲವ
[ಟ್ಟದಿಂದಾ
ಕೃತ್ರಿಮದ ವಿಷದ ಸೋಂಕಿಗೆ ಗರುಡನಳವಳಿಯೆ,
ಮತ್ತೆ ರಕ್ಷೆಗೆ ಮಂತ್ರಿಸುವರಾರುಭೂಪ! ನೀ
ನೊತ್ತುವನುತಾಪಕೆಡೆಗೊಟ್ಟರಾರ್ಬಿಡಿಸುವರ್ಪೇಳೆಂದನಾಮುನಿಪ
[ನೂ.

And admonishes the king not to give way to such grief.

12. ಎನಲಾಮುನೀಂದ್ರನಂ ನೋಡಿ ಬಿಸುಸುಯ್ಯುತೊ
ಯ್ಯನೆ ಮಹೀಪಾಲನಿಂತೆಂದನೆಂತೆನ್ನ ಮನ
ದನುತಾಪಮಂ ಬಿಡುವೆನಕಟ! ಶಿಶುತನದಿಂದ ಸಲಹಿದ ಪಿತಾಮ[1] [ಹಂಗೆ
ನೆನೆದಿವನುಚಿತವನಗ್ರಜ[2]ನೆಂದರಿಯದೆ, ಕ
ರ್ಣನನಿರಿದೆವಾಚಾರ್ಯ[3]ವಧೆಗೆಳಸಿದೆಂ ಸುಯೋ
ಧನಶಲ್ಯ[4]ಮುಖ್ಯಬಾಂಧವರನೀಡಾಡಿದೆವು; ಬದುಕಲೇಕಿನ್ನಿಳೆಯೊ [ಳು?

The king explains the cause of his grief,

1. ಭೀಷ್ಮ; ಯುದ್ಧ ಮಾಡಿದ ಇಬ್ಬರು ಅರಸರಿಗೆ ಇವನು ಅಜ್ಜ. ಕೌರವರ ಪಕ್ಷ ಹಿಡಿದದರಿಂದ ಅವರ ಸಂಗಡ ಸಂಹಾರವಾದನು. 2. ಮೊದಲು ಹುಟ್ಟಿದವನು = ಅಣ್ಣ ಕರ್ಣ; ಇವನು ಕುಂತಿಗೆ ಸೂರ್ಯನಿಂದ ಹುಟ್ಟಿದ ಮಗನು. ಕರ್ಣನ ಜನನವಾದಮೇಲೆ, ಈ ಕುಂತಿ ಪಾಂಡುರಾಯನಿಗೆ ಮದಿವೆಯಾಗಿ ಅವನಿಗೆ ಅರ್ಜುನ ಧರ್ಮರಾಯ ಭೀಮ ಎಂಬೀ ಮೂವರನ್ನು ಹಡೆದಳು. 3. ದ್ರೋಣಾಚಾರ್ಯ ಕೌರವರಿಗೂ ಪಾಂಡವರಿಗೂ ಧನುರ್ವಿದ್ಯ ಕಲಿಸುತ್ತಿದ್ದನು; ಯುದವಾಗುವ ಸಮಯಕ್ಕೆ ಕೌರವರ ಕಡೆಗೆ ನಿಂತಕಾರಣ, ಅವರ ಸಂಗಡ ಯುದ್ಧದಲ್ಲಿ ಸತ್ತನು. 4. ನಕುಲ ಸಹದೇವ ಎಂಬೀವರ ತಾಯಾದ ಮಾದ್ರಿ ದೇವಿಗೆ ಒಡ ಹುಟ್ಟಿದವನು ಶಲ್ಯನು.

13. ಶಿಷ್ಯರಿಂದಭಿವರ್ಧಿಸದ ಗುರುವಿನಂತೆ, ವೈ
ದುಷ್ಯದಿಂ ಪೂಜ್ಯನಾಗದ ವಿಪ್ರನಂತೆ, ಸುಹ
ವಿಷ್ಯದಿಂ ಸೇವ್ಯನಾಗದ ವಹ್ನಿಯಂತೆ, ಸಲಿಲಾಶ್ರಯವನಾಶ್ರೈಸದಾ
ಕೃಷ್ಯದಂತಖಿಳಬಾಂಧವರೊಡನೆ ಬದುಕದ ಮ
ನುಷ್ಯಸಂಸಾರದಿಂದೇನದರಿನೀನಿಜಾ
ಯುಷ್ಯಮುಳ್ಳನ್ನ[1]ಪರಿಯಂತ, ವನವಾಸಮಂ ಮಾಡುವದೆ ಲೇಸೆಂ [ದನೊ

And says that after the slaughter of his relatives he must become an ascetic.

1. ಅನ್ನ = ತನಕ.

14. ಆಗಲರಸನ ಮಾತಿನಾಸರಂ ಕೇಳ್ದು ತಲೆ

Vyása disapproves of this;

ದೂಗಿ ಮುನಿಪುಂಗವಂ ನುಡಿದನೆಲೆ ಭೂಪ! ನಿಗ

ಮಾಗಮಪುರಾಣಶಾಸ್ತ್ರಂಗಳ ವಿಚಾರಮಂ ನೀನರಿಯದ ಪ್ರಾಥನೇ?

ಈಗಳನುತಾಪಮೇತಕೆ? ನಿಖಿಳಸಾಮ್ರಾಜ್ಯ

ಮಾಗಲಿಳೆಯುಂ ಧರ್ಮದಿಂ ಪಾಲಿಸದೆ ಬಸಕೆ

ಪೋಗಲಾವುದು ಸಿದ್ಧಿ ನಿನಗಪ್ಪುದುಸುರೆನೆ? ಧರಾನಾಥನಿಂತೆಂದ

[ನೂ.

15. ಆದೊಡೆ, ತವಾನುಗ್ರಹಪ್ರಭಾವದೊಳನ್ನು

Whereupon the king asks, how he may get rid of the sin of having slaughtered his relatives.

ಮೇದಿನಿಯು ನಾನೆ ಪಾಲಿಸುವೆನೀಗೋತ್ರಹ

ತ್ಯಾದೋಷಮೇತರಿಂ ಪೋಪ್ಪುದಾತೆರಸಂ[1] ತಿಳುಪಿ ರಾಜಕುಲದ

[ನೃಪರಾ

ಸ್ಪ್ವದುಚಾರಿತ್ರಮೆಂನಿಂದ ಸೊಗಡಾಗದಂ·

ತಾದರಿಸಿ ನೀವೆ ಕಾರುಣ್ಯದಿಂ ಮಾಳ್ಪುದು ಸು

ಬೋದಯುವನೆನಗೆಂದು ಕೈಮುಗಿಯೆ, ಧರ್ಮಜಂಗಾಮುನಿಪನಿಂ

[ತೆಂದನೂ.

1. ಹೋಗುವದು. ವ್ಯಾ. 92.

16. ಎಣಿಕೆ ಬೇಡೆಲೆ ಮಗನೆ! ರಾಘವಂ[1] ಪಿಂತೆ ರಾ

Vyása replies by performing the horse sacrifice.

ವಣಸಂ ಮಥಿಸಿ ವಾಜಿಮೇಧದೊಳ್ಪೂರ್ವರಂ

ದಣಿಸಿದಂ; ನೀನುಮಂ[2]ತಾ ಮಹಾಧ್ವರವನೆಸಗಲ್ಕಿನಗೆ ಮೂಜಗ

[ದೊಳೂ

1. ಸೂರ್ಯ ವಂಶದವನಾದ ರಘು ಎಂಬ ಒಬ್ಬ ರಾಜನ ಸಂತತಿಯುವನಾದ್ದರಿಂದ ರಾಮುನಿಗೆ ರಾಘವ ಎಂಬ ಹೆಸರಾಯಿತು. 2. ನೀನುಂ = ನೀನೂ = ನೀನು ಸಹ, ವ್ಯಾ.

ಎಣೆಯಿಲ್ಲೆನಲ್ಕೆಂತು ಮಾಳ್ಪೆನಾ ನಾವಲ
ಕ್ಷಣದ ಹಯಮದಕೆ? ಋತ್ವಿಜರೆನಿಬರೆನಿಸುದ[3]
ಕ್ಷಿಣೆಗಳದರಂದಮಂ ಬೆಸವೇಳ್ವುದೆನಗೆನಲ್ಮುನಿನಾಥನಿಂತೆಂದನೂ.

3. ಎನಿಸು = ಎಷ್ಟು. ವ್ಯಾ. ಸೂ.

17. ಸ್ವಚ್ಛತರದವಳಾಂಗದತಿಮನೋಹರಪೀತ
ಪುಚ್ಛದ, ಸುಗಮನದೊಂದೇ ಕಿವಿಯೊಳೆಸೆವ ನೀ
ಲಚ್ಛವಿಯ, ಕೋಮಲ ತುರಂಗಮಂ ಸಾಧಿಸಿ ಮಹಾ ಕ್ರತುವ [ನಾಚರಿ[1]ಪಡೇ.

Vyása describes the sacrificial horse.

ಇಚ್ಛೆಗೈದುರೆ ಸಕಲಮೇದಿನೀತಳವನೇ
ಕಚ್ಛತ್ರದಿಂ[2] ಪಾಲಿಸುವನರೇಶ್ವರನವಂ
ಗಚ್ಛಿದ್ರವಾಗಿ ನಡೆವುದು, ಭೂಪ ಕುಲದೀಪ! ಕೇಳದರ ಮಾ [ಳ್ಕೆಗಳನೂ

1. ಆಚರಿಸ ಬೇಕಾದರೆ. ವ್ಯಾ. ಸೂ. 2. ಕೊಡೆ, ರಾಜರು ಹಿಡಿಸುವದರಿಂದ, ರಾಜ ಚಿನ್ಹೆಯಾಗಿ ರಾಜ್ಯಾಧಿಕಾರ ಸೂಚಿಸುತ್ತದೆ; ಆದ್ದರಿಂದ ಏಕಚ್ಛತ್ರ = ಏಕಾಧಿಪತ್ಯ.

18. ಸತ್ಯಶೌಚಾಚಾರಕುಲವೇದಶಾಸ್ತ್ರಪಾಂ
ಡಿತ್ಯದ ಸುವಿಪ್ರರಿಪ್ಪತ್ತುಸಾವಿರಕೆನೈ
ಪತ್ಯವಸ್ತ್ರಾದಿಪೂಜೆಗಳಿಂದ ಸತ್ಕರಿಸಿ ಬೇರೆಬೇರವರವರ್ಗೆ
ಪ್ರತ್ಯೇಕವೊಂದೊಂದು ಬಳ್ಳ ಮುಕ್ತಾ ಫಲವ
ನತ್ಯಧಿಕಹಯಗಜರಥಂಗಳೊಂದೊಂದನಾ
ಚಿತ್ಯಸಾಲಂಕಾರಗೋಸಹಸ್ರಪನೊಂದು ಭಾರಪೊನ್ನಂ ಕೊಡು [ವುದೊ

The gifts to be given to the priests.

19. ಸನ್ನುತಕುಲಾಚಾರಗುಣವೇದಶಾಸ್ತ್ರಸಂ
ಪನ್ನಭೂಸುರರಿನಿಬರೀತೆರದ ಸಾಖ್ಯತರ
ಮನ್ನಣೆಗಳಂ ಪಡೆದು ಸಭೆಯಾಗಿ ಕುಳ್ಳಿರ್ದನುಜ್ಞೆಯಂ ಕೊಟ್ಟೆಬ [ಳಿಕಾ,
ಬನ್ನ ಮೇದಿನಿಯೊಳಾರಾದೊಡಂ[1] ಪಿಡಕುಳ್ಳೆ[2]
ಡುನ್ನತಪರಾಕ್ರಮಿಗಳುಂ ತಡೆಯಲಿದನೆಂದು
ತನ್ನಬಿರುದಂ ಬರೆದು ಪೊಂಬಟ್ಟಮಂ ಕಟ್ಟಿ ಬಿಡುವುದಾ ಹಯದಫ [ಣೆಗೇ

The time for letting loose the horse.

1. ಆದರೂ ವ್ಯಾ. ಸೂ. 2. ಇದ್ದರೆ.

20. ಆಕುದುರೆ ಬಿಟ್ಟೊಂದು ವರುಷಪರ್ಯಂತ ತಾ
ನೇ ಕಂಡಕಡೆಗೆ ತಿರಳಲ್ಕದರ ಸಂಗಡಂ
ಭೂಕಾಂತಸೂನುಗಳ್ಪಲಬರಡಿಗಡಿಗೆ ಮಣಿಕನಕ ರಾಶಿಗಳ ಸುರಿ [ದೂ
ಲೋಕಮಂ ದಣಿಸುತ್ತೈತರಲಖಿಳದೆಸೆಯೊಳದ
ನಾಕೆವಾಳರ್ತಡೆಯೆ, ಪಿಡಿಸಬೇಕನಿಬರಿಂ
ನೂಕದೊಡೆ[1], ಕರ್ತೃ ತಾನಾದೊಡಂ, ಪೋಗಿ ನಡಿಸುವದು.ಬಳಿಕಾ [ಹಯವನೂ.

The duty of liberating it from those who may catch it, and the

1. ನೂಕದೊಡೆ = ನೂಕದಿದ್ದರೆ. ವ್ಯಾ. ಸೂ.

21. ಇಂತಾಹಯಂ ತಾನೆ ಮೇದಿನಿಯೊಳೊಂದು ವರು
ಷಂ ತಿರುಗಿ ತನ್ನಿಳೆಗೆ ಬಂದು ನಿಲುವಲ್ಲಿಪರಿ
ಯಂತಮಸಿಪತ್ರ[1]ಮೆಂಬುರುತರವ್ರತವನಾಚರಿಸುತಿರ್ದಾಮಖವನೂ

Duty of the king in the mean time to keep the Asipatra vow.

1. ಅಸಿಪತ್ರ = ಕತ್ತಿಯ ಅಲಗು; ಗಂಡ ಹೆಂಡರು ಮಲಗಿರುವಲ್ಲಿ ಇಬ್ಬರ ಮಧ್ಯೆ ಹಿರಿದ ಒಂದು ಕತ್ತಿ ಇಟ್ಟಿರ ಬೇಕು. [illegible] ಒಂದು ವರುಷದ ತನಕ ಈ ಕತ್ತಿ ದಾಟ ಹೋಗ ಬಾರದು ಎಂಬುವದೇ ಅಸಿಪತ್ರ ವ್ರತ.

ಷುಂತೆ ವೇದೋಕ್ತದಿಂ ಮಾಳ್ಪುದಿವರಂದಮಿದು
ಕುಂತೀಕುಮಾರ ! ನೀನಾರ್ಪಡುಜ್ಜುಗಿಸೆನ
ಲ್ಚಿಂತಿಸುತ ನುಡಿದನೊಯ್ಯನೆ ಧರಿತ್ರೀತಳಾಧಿಪನಾ ತಪೋಧನನೊ
[ಳೂ

2. ಆರ್ಪ = ಆಗುವ ; ಆರ್ಪಡೆ = ಆದರೆ ತ್ರಾಣವಿದ್ದರೆ. 3. ತಪವೆಂಬೈಶ್ವರ್ಯ ಇದ್ದವನು, ಇದು ತಪಸಿಗೆ ಯೋಗರೂಢ ನಾಮ.

22. ದ್ರವ್ಯಮೆನಗಿಲ್ಲ ; ಮೇದಿನಿಯೊಳರಸುವಡೆ, ಕೌ
ರವ್ಯ ರಿಂದಿಳೆ ನೊಂದುದಿನಿಸು ಲಕ್ಷಣಮುಳ್ಳ
ದಿವ್ಯಹಯಮಿಲ್ಲ; ಸೋದರರಾಹವದೊಳಲಸಿದರರ್ಥಹಾಯಂಗಳಿಲ್ಲಾ
ಸವ್ಯಸಾಚಿಯ ಮಿತ್ರನಿಲ್ಲಿಲ್ಲ ; ತನಗಧ್ವ
ರವ್ಯಸನಮೆಂತೊಡರ್ಪುದು ? ಪೇಳ ! ಯೆನಲು ವೇ
ದವ್ಯಾಸಮುನಿಕರುಣದಿಂದಾಯುಧಿಷ್ಠಿರನರೇಶ್ವರನೊಳಿಂತೆಂದನೂ.

The king enumerates the many difficulties he would have to encounter.

1. ಕೌರವರು ರಾಜ ನೀತಿ ಬಿಟ್ಟು ಆಳೆ ರಾಜ್ಯವನ್ನು ಹಾಳು ಮಾಡಿದ್ದರು. 2. ಸವ್ಯ = ಎಡಗೈಯುವನು = ಅರ್ಜುನ ಎಡಗೈಲಿ ಸಹ ಬಾಣ ಹೊಡೆಯುತ್ತಿದ್ದದರಿಂದ, ಅವನಿಗೆ ಸವ್ಯಸಾಚಿ ಎಂಬ ಹೆಸರಾಯಿತು. ಸವ್ಯಸಾಚಿಯು ಮಿತ್ರನು = ಕೃಷ್ಣ. 3. ಧರ್ಮರಾಯ್ನು ಯಮಧರ್ಮನಿಂದ ಹುಟ್ಟಿದಕಾರಣ ಇವನಿಗೆ ಧರ್ಮಜ ಎಂಬ ನಾಮ ಸಹ ಅದೆ.

23. ರಾಯ ! ನೀನಿದಕೆ ಚಿಂತಿಸಬೇಡ ! ಧನಮುಂ ಸಂ
ಹಾಯಮುಂ ತುರಗಮುಂ ತೋರುವೆಂ ಮರುತನಿಂ
ಬಾಯುಗದ ನೃಪನಶ್ವಮೇಧಮುಂ ಮಾಡಿ ಬಹುಕನಕಮುಂ ಭೂ
[ಸುರರ್ಗೇ.
ಈಯಲವರೊಯ್ಯುತಿಜಿಯೊಳಗಲಿಸಿ ಜಿಟ್ಟರ
ಪ್ರೀಯದಿಂದಾವಸ್ತುವಡೆ ಹಿಮಾಲಯದೊಳದ
ಕಾಯಸಂ ಕಿರಿದಿಲ್ಲ; ತಂದು ನೀನುಪಯೋಗಿಸೆನಲರಸನಿಂತೆಂದನೂ

But Vyása shows him treasure.

24. ಅಕಟ! ಜಡಮತಿಗೆ ಮರುಳುಂ ಮತವನಿಕ್ಕಿದೊಡೆ
ಸುಕಲೆ ಯಪ್ಪುದೆ? ಜೀಯ! ಗೋತ್ರಸಂಹರಣ ಪಾ
ತಕವನೊರಸುವ ಮಖವನಾವಿಪ್ರರೊಡವೆಯಿಂ ಮಾಡಲೆನಗಿಹೆಪರ
[ದೊಳೂ (ಸುಕರವಪ್ಪುದೆ)
ಪ್ರಕಟಮೆನಿಪ್ಪುದೆ ಕೀರ್ತಿ ಸದ್ಗತಿಗಳೆನೆ? ಮಗನೆ!
ಸಕಲ ಭೂಮಂಡಲಂ ದ್ವಿಜರದಲ್ಲವೆ? ರಾಜ
ನಿಕರಮಂ ತರಿದೀಯ್ವನೆ ಪರಶು[1]ರಾಮನೀಧರೆಯನವನೀಸುರರ್ಗೇ?

1. ರಾಜನೀತಿ ತಪ್ಪಿ ಆಳುತ್ತಿದ್ದ ಕ್ಷತ್ರಿಯರನ್ನು ಕೊಡ್ಲಿಯಿಂದ ಸಂಹಾರ ಮಾಡಿದನು.

25. ಬಾಹುಬಲಮುಳ್ಳನೃಪರೊಡೆಯರೀಧರೆಗೆ, ಸಂ
ದೇಹಮಿಲ್ಲದರಿಂ, ದ್ವಿಜರ್ಗೆ ಸಲ್ಲದು; ಬಗೆವ
ಡಾಹಿಮಾಲಯದೋಳಿ[1]ಹವಸ್ತು ನಿನ್ನದು; ಯೌವನಾಶ್ವನೆಂಬವ
[ನೀಶನೂ.
ಮೋಹದಿಂ ಭದ್ರಾವತೀನಗರದೊಳ್ದಶಾ
ಕ್ಷೋ[2]ಹಿಣೀಸೇನೆಯಿಂ ಪಾಲಿಸುವನಿಂತಿಹ ಮ
ಹಾಹಯೋತ್ತಮವೊಂದನದು ನಿನಗೆ ಬಾರದಿರ್ಪುದೆ? ಶೌರ್ಯ
[ಮುಂಟಾದೊಡೇ?

And the horse fit for this sacrifice.

1. ಇರ್ಪ, ಇಪ್ಪ ಎಂಬುದರಿಂದ ಇಹ = ಇರುವ ಎಂಬುದು ಆಯಿತು. ವ್ಯಾ. ಸೂ. 92.
2. ೧,೦೯,೩೫೦ ಪದಾತಿ, ೬೫,೬೧೦ ಅಶ್ವ, ೨೧,೮೭೦ ರಥ, ೨೧,೮೭೦ ಗಜ ಕೂಡಿದರೆ ಒಂದು ಅಕ್ಷೋಹಿಣಿ ಆಯಿತು.

26. ಇಂದುಕುಲತಿಲಕಜನಮೇಜಯ ನರೇಂದ್ರ! ಕೇ
ಳಂದವ[1]ರ್ಮೂವರುಂ ತುರಗಮಂ ಕೊಂಡು ಬಹೆ[2]
ವೆಂದು ಬೆಸನಂ ಬೇಡಿ ನಿಂದಿರಲ್ಬಾದರಾಯ[3]ಣನ ಮೊಗಮಂ ನೋ
[ಡುತಾ.

Bhíma, Vrishakétu and Meghanáda are appointed

1. ಧರ್ಮರಾಯನ ತಮ್ಮನಾದ ಭೀಮ (ವಾಯುವಿನ ಮಗನಂತೆ,) ಕರ್ನ ಸುತನಾದ ವೃಷಕೇತು ಭೀಮನ ಮೊಮ್ಮಗನಾದ ಮೇಘನಾದ ಈ ಮೂವರು. 2. ಇದು ಬರ್ಪೆವು, ಬಪ್ಪೆವು ಎಂಬುದರಿಂದ ಆಯಿತು. ವ್ಯಾ. ಸೂ. 65. 3. ವೇದವ್ಯಾಸ ಮುನಿ.

ಇಂದಿವರನಾಂ ಕಳುಪಲಸುರವೈ[4]ರಿಗೆ ಬೇಸ
ರೊಂದಿನಿಸು ತೋರದಿರ್ಪುದೆ ? ಜೀಯ! ತನಗಿದಕೆ
ಮುಂದುಗಾಣಿಸದು ; ಕರುಣಿಪುದೆನೆ, ಯುಧಿಷ್ಠಿರಂಗಾತಪೋನಿಧಿ[5] ನು
[ಡಿದನು.

4. ರಾಕ್ಷಸರನ್ನು ಹೊಡೆದ ಕೃಷ್ಣ. 5. ತಪವೆಂಬ ನಿಕ್ಷೇಪವಿದ್ದವನು = ತಪಸ್ಸಿ

27. ಭೂಪ! ನೀಂ ಮರುಳಹರೆ[1]? ಹರಿ ನಿಂನೆಡೆಯೊಳಲಸ
To fetch the horse. ಲಾಪನೆ? ಬೆಸನ ಬೇಡುವವೃಕೋ[2]ದರನಪ್ರ
ತಾಪನೆ? ವೃಷಕೇತು ಮೇಘವರ್ಣಕರನೊಡಗೊಂಡು ಕುದುರೆ
[ಗೆ ನಡೆಯಲೀ.

ಈ ಪವನತನಯನಂ ಕಳುಹೆಂದು ನಯದೊಳಾ
ತಾಪಸೋತ್ತಮನೊಡಂಬಡಿಸಿ ನುಡಿದಾಜ್ಞಾನು
ರೂಪದಿಂದರಸನಿತ್ತಂ ಭೀಮಹೈ[3]ಡಿಂಬಿಕರ್ಣಜರ್ಗನು ಮತಿಯನೂ.

1. ಆಗ್ಪ, ಅಪ್ಪ ಎಂಬ ರೂಪದಿಂದ ಅಪ ಎಂಬುದಾಯಿತು. ವ್ಯಾ. ಸೂ. ಅಹರೆ = ಆಗುವರೆ ಇಲ್ಲಿ ಮಧ್ಯಮ ಪುರುಷದ ಸರ್ವನಾಮ ಪದಕ್ಕೆ (ನೀಂ) ಕ್ರಿಯಾಪದವು ಬಹು ವಚನದ ಪ್ರಥಮ ಪುರುಷದಲ್ಲಿ ಜೋಡಿಸಿ ಅದೆ. ಹೀಗೆ ಗ್ರಂಥಗಳಲ್ಲಿ ಪ್ರಯೋಗಿಸುವದುಂಟು ಜೈ. ೨,೧೪೭. ಮರುಳಹರೆ ಭೂಪಾಲ. 2. ತೋಳನ ಹೊಟ್ಟೆಯುವನು = ಭೀಮ, ಅವನು ಹೊಟ್ಟೆಬಾಕನು ಆಗಿದ್ದನು. 3. ಮೇಘನಾಥನ ತಂದೆ ಹೈಡಿಂಬ.

28. ಮಿತ್ರೋ[1]ದಯಾತ್ಪರದೊಳೈತಂದು ಹಯಮೇಧ
Vyása takes leave. ಸತ್ರಸಾಧನಕೆ ವೇದವ್ಯಾಸಮುನಿ ಧರ್ಮ
ಪುತ್ರನಂ ಬೋಧಿಸಿ ಮರಳ್ದನಾರಾತ್ರಿಯೊಳ್ಬಂದನೊಲಿದಿಭ[2]ನಗರಿಗೇ

1. ಸಂಸ್ಕೃತದಲ್ಲಿ ೫ನೇ ವಿಭಕ್ತಿ ಉದಯಾತ್ಪರದೊಳ್ = ಉದಯವಾದ ಮೇಲೆ. 2. ಹಸ್ತಿನಾವತಿ.

Krishna pays a visit to the king.

ಪತ್ರೀಂದ್ರವಾಹನಂ ; ಬಳಿಕ್ಕೈದೆ ಪೌಂಡವಧ[3]
ರಿತ್ರೀ ರಮಣರಿದಿಗೊರ್ಳಂಡೆರುಗ್ಗಡಣೆಯುವಿ
ಚಿತ್ರಪಾಠಕರ ವಾದ್ಯಧ್ವನಿಯ ಸಾಲಕ್ಕೈದೀವಿಗೆಯ ಸಂಭ್ರಮ
[ದೊಳೂ

3. ಪಕ್ಷಿಗಳಿಗೆ ಒಡೆಯನಾದ ಗರುಡನನ್ನು ವಾಹನ ಮಾಡಿ ಕೊಂಡವನು = ಕೃಷ್ಣ.

29\. ದೇವ ! ನಿಂಮಡಿಯ ಕಾರುಣ್ಯವೊಂದುಳ್ಳೊಡೆ,[1] ಸ

And promises to assist him during the performance of the sacrifice.

ದಾವಿಜಯರಾವದಾರಿದ್ದೇನು ಮಾಳ್ಪರರಿ
ದಾವುದೊಲಿದೆನ್ನನುದ್ಧರಿಸವೇಳ್ಕೆಂದು[2] ನೃಪನಚ್ಯುತನ[3] ಪದಕೆರ
[ಗಲೂ
ಭೂವರನ ಮಕುಟಮಂ ಪಿಡಿದೆತ್ತಿ ರಾಜವಂ
ಶಾವಳಿಯೊಳುಂಟೆ ನಿಂನಂದದರಸಿನ್ನು ನಿನ
ಗೀವಾಜಿಮೇಧಮೇನಚ್ಚರಿಯೆ ! ಕೈಕೊಳಾವಿರ್ದು ನಡೆಸುವೆವೆಂ
[ದನೂ.

1\. ಉಳ್ಳೊಡೆ = ಇದ್ದರೆ. 2. ಶ್ರೀಕು, ಇದು ವೇಳ್ಕು ಎಂಬ ರೂಪದಿಂದ ಆಗಿದೆ. 3. ಅ
ಚ್ಯುತ = ಲಯವಾಗದವನು = ಕೃಷ್ಣ.

30\. ನಳಿನೋದರನ[1] ವಚನಮಂ ಕೇಳ್ದು ಸಂತಸಂ

Krishna entertained by the king.

ದಳೆದು ನೃಪನಧ್ವರದಕಾರ್ಯಮಂ ನಾಡೆ
ನೆಳೆಗೊಳಿಸಿ ಪವನಜವೃಷಧ್ವಜಮೇಘನಾದರಂ ಕುದುರೆ ತಹುದೆಂ
[ದು ಬೆಸಸೀ
ಬಳಿಕೋಲಗವನಂದು ಬೀಳ್ಕೊಟ್ಟು ಹರಿಸಹಿತ
ನಿಳಯದೊಳ್ ಷಡುರಸಾದಿಗಳನಾರೋಗಿಸಿ[3] ವಿ
ಮಳಹಂಸತೂಲದೊಳ್ಪವಳಿಸಿದನಂನೆಗಂ ತೋರಿತಿನಸೂತನೇಳ್ಗೆ.[4]

1\. ಕಮಲದ ಹೊಟ್ಟೆಯವನು = ಕೃಷ್ಣ. 2. ತರ್ಪುದು = ತರುವದು, ತಹುದು.
ವ್ಯಾ. ಸೂ. 3. ಮಧುರ, ಆಮ್ಲ, ಲವಣ, ತಿಕ್ತ, ಕಟು, ಕಷಾಯ ಎಂಬವೆ ಷಡುರಸ
ಗಳು. 1. ಸೂರ್ಯನ ಸಾರಥಿ = ಅರುಣ; ಅರುಣೋದಯವಾಯಿತು ಎಂಬರ್ಥ.

31. ಮೂಡದೆಸೆಯೊಳ್ಕೆಂಪುದೋರೆಯೆ, ತಾರಕಿ ಪರಿಯೆ
Next day the dawn appears, and the sun rises
ಕೂಡೆ ತಂಗಾಳಿ ಮುಂಬರಿಯೆ[1], ಕಮಲಂ ಬಿರಿಯೆ
ಪಾಡುವೆಳೆದುಂಬಿಗಳ್ಮೊರೆಯೆ, ಚಕ್ರಂ ನೆರೆಯೆ ನೈದಿಲೆಯ ಸೊಂಪು ಮುರಿಯೆ
ಬೀಡುಗೊಂಡಿರ್ದ ಕತ್ತಲೆಯ ಪಾಳೆಯಮೆತ್ತ
ಲೋಡಿದುದೊ ? ನೋಡಿದಪೆನೆಂದು ಪೂರ್ವಾಚಲದ[2]
ಕೋಡುಗಲ್ಲಂ ಪತ್ತುವವೋಲಿರ್ದನಾಪ್ರಭೆಯೊಳೌಚಿತ್ಯಸಾವಿತ್ರ [ನೂ.

1. ಮುಂದೆ ಹರಿಯೆ. ವ್ಯಾ. ಸೂ. 2. ಉದಯಾದ್ರಿ ಉದಯಿಸುವ ಮೊದಲು ಅದಕ್ಕೆ ಸೂರ್ಯ ಮರೆಯಾಗಿರುತ್ತಾನಂತೆ.

32. ಇಂದು ವೇದವ್ಯಾಸಮುನಿವರಂ ಕೃಪೆಯೊಳೈ
The king awakes in a state of great happiness.
ತಂದು ಸನ್ನುತವಾಜಿಮೇಧಮಂ ಮಾಡು ನೀ
ನೆಂದು ನೇಮಿಸಲೀತಕೊಡನೆ ಗರುಡಧ್ವಜಂ[1] ತಾನೆ ಕಾರುಣ್ಯದಿಂದಾ
ಬಂದು ಮೈದೋರಲೀಕ್ಷಿದು ತನ್ನ ಭಾಗ್ಯವಧು[2]
ವೊಂದುಗೂಡುವಕಾಲಮೆಂಬಹರುಷದೊಳರಸ
ನೆಂದು ನಿದ್ರಾಲಲನೆಯಂ[3] ಬಿಸುಟುಪ್ಪವಡಿಸಿದನೋಲಗಂ ಗೊಟ್ಟ [ನೂ.

1. ಕೃಷ್ಣ. 2. ಭಾಗ್ಯ ಎಂಬ ಸ್ತ್ರೀ. 3. ನಿದ್ರೆಯನ್ನು ಸ್ತ್ರೀಯಳಿಗೆ ಸಮಾನ ಮಾಡುತ್ತಾನೆ.

33. ಆವೇಳೆಯೊಳ್ಪವನಜಂ ಬಂದು ಭೂಪನಡಿ
Bhíma, with his two companions sets out,
ದಾವರೆಯೊಳೆರಗಿ ಪಯಣಕೆ ಬೆಸಂವಡೆದರಸು
ಗಾವಲಂ ಫಲುಗುಣನೊಳಿರಿಸಿ[1] ಹೈಡಿಂಬಿಯಂ[2] ಬರಿಸಿಕರ್ಣಿಯೆನಿಕೆ[3] [ರೆಸೀ

1. ಅರ್ಜುನ. 2. ಹೈಡಿಂಬನ ಮಗನು. 3. ಕರ್ಣನ ಮಗನು.

ಆವೀರರೀರ್ವರುಂ ಬೆರಸಿ ರಥಮಂ ತರಿಸಿ
ದೇವಪುರ ಲಕ್ಷ್ಮೀಶನಂಘ್ರಿಗುಪಚರಿಸಿ ಬಿರು
ದಾವಳಿಯ ಪಾಠಕರ ಗಡಣದಿಂ ಪೊರಮಟ್ಟನಾಹಸ್ತಿನಾವತಿಯನೂ

34. ಭೂವಧೂರಮಣ[1]! ಕೇಳ್ವೈ ! ಮುಂದೆ ನಡೆಸುವಕ

And arrives in the country of Bhadrávati.

ಥಾ ವಿಸ್ತರವನಿಂನು ! ಪಯಣಗತಿಯಿಂದ ಭ
ದ್ರಾವತೀ ದೇಶಮಂ ಪೊಕ್ಕರನಿಲಜ ವೃಷಧ್ವಜ ಘಟೋತ್ಕಚ[2] ತ
[ನುಜರೂ
ಆವಗಂ ನಿರ್ಮಲ ಶ್ರೀಕರಗ್ರಾಹಿ[3], ಮ
ತ್ತಾವಗಂ ಪ್ರಣುತವನಮಾಲಾಸುಶೋಭಿ[4] ತಾ
ನಾವಗಂ ಮನ್ಮಥೋದ್ಭವಕಾರಿ[5] ಹರಿಯೊಲಾಸೆಂಬ ಪೆಂಪಿಂದೆಸೆದು
[ದೂ

1. ಜನಮೇಜಯ. 2. ಮೇಘನಾದನು. 3. ಲಕ್ಷ್ಮಿಯ ಕೈ ಹಿಡಿದವನು = ಕೃಷ್ಣ. ಸಂಪತ್ತು ಹಿಡಿದಿರುವಂಥಾದ್ದು ಹೀಗೆ ದೇಶವನ್ನು ವರ್ಣಿಸುತ್ತಾನೆ. 4. ವನಮಾಲೆಯಿಂದ ಶೋಭಿಸುವ ಕೃಷ್ಣ, ವನಗಳ ಪಕ್ಷದಿಂದ ಶೋಭಿಸುವ ದೇಶ. 5. ಕೃಷ್ಣ ಮನ್ಮಥನನ್ನು ಹುಟ್ಟಿಸಿದವನು ; ಸುಖದ ಆಶೆಗಳನ್ನು ಹುಟ್ಟಿಸುವ ದೇಶ.

35. ಕುದ್ದಾಲ ಹತಿಯನುರೆತಾಳ್ದಿಂಮನಿಂನೆಗಂ[1]

The travellers admire the beauty of the country.

ಮುದ್ದುಗೈದೀವಸುಧೆ ಬೆಳಯಿಸಿದಳೆಂದು ತುರು
ಗಿದ್ದ ತನಿವಣ್ಗಳಂ[2]ದೆಸೆವಪೇರ್ಗೊನೆಗಳಂ ಸಲೆಮರ್ಬಿಸ ಲೊಡರ್ಚೆ
ಎದ್ದಿರದೆ ಬಾಗಿದವೊ ಕದಳಿಗಳ್ದರಣಿಗೆ ನ
ಲಿದ್ದಪರೆ ಮರದು ಪುರುಷಾರ್ಥಮಂ ಮಾಡಿದರ[3]
ನುದ್ದಾಮಗುಣಮುಳ್ಳಜೀವಿಗಳ್ತನುಜ! ನೋಡೆಂದನಾಪವನಸೂನೂ

1. ಇಂನೆಗಂ = ಈ ಹೊತ್ತಿನ ತನಕ ವ್ಯಾ. ಸೂ. 2. ಹಣ್ಣು. ವ್ಯಾ. ಸೂ.
3. ಮಾಡಿದವರನ್ನು. ವ್ಯಾ. ಸೂ. 24.

36. ಬೇರೆಬೇರಿನಿತೆಲ್ಲಮಂ ಕರ್ಣತನಯಂಗೆ
ತೋಱುತಿರ್ದಂ ಭೀಮಸಂನೆಗಂ ಬಿಸಿಯುಬಿಸಿ
ಲೇರಿದುದು; ಭದ್ರಾವತಿಯೊಳುಳ್ಳ ತೇಜಿಗಳ ಚಪಲತೆಯ ಸಾರಂ
[ಭದಾ
ವಿಹಾರಿದಜವಂಗಳಂ ಕಂಡು ಕಾಲ್ಗೆಟ್ಟಿಳೆಯ
ಲಾರದೊಯ್ಯನೆ ನಡೆವತೇಗು[1]ರ್ದುರೆಯಂ ಕಂಡು
ನೂರೆಲೆಗೆ[2]ಳೆಯನುಗ್ರಕೋಪದಿಂದುರಿಯನುಗುಳದೆ ಮಾಣನೆಂಬತಿ
[ರೇ.

1. ತನ್ನ ಕೇರಿಗೆ ಕಟ್ಟಿದ ಕುದುರೆ. 2. ಕಮಲದಗೆಳೆಯ = ಸೂರ್ಯ,

The horse pointed out by Vyása is led forth.

37. ಅನಿತರೊಳನೇಕಸೇನೆಗಳ ಸಂನಾಹದಿಂ
ಘನವಾದ್ಯರಭಸದಿಂ ಸೂತರ ಪೊಗಳ್ಕೆಯಿಂ
ದನುಕರಿಸಿದಮಲವಸ್ತ್ರಾಭರಣಗಂಧಮಾಲ್ಯಾದಿಗಳಪೂಜೆಯಿಂದಾ
ವಿನುತಾತಪತ್ರಚಮರಂಗಳಿಂದೆಡಬಲದೊ
ಳಸುವಾಗಿ ವಾಘೆಯಂ ಪಿಡಿದು ನಡೆತಪ್ಪನೃಪ
ತನುಜರಿಂದಾಹಯಂ ನೀರ್ಗೆ ಪೊರಮಟ್ಟು ಸಂಭ್ರಮದೊಳೈತರುತಿ
[ರ್ದುದೂ.

Meghanáda produces by magic an

38. ಮೂ[1]ಜಗದೊಳೀತುರಂಗಮನೆ ಪೊಸತೆಂದು ವರ
ವಾಜಿಯಂ ನಿಟ್ಟಿಸುವ ಭೀಮಸೇನನ ಪದಸ
ರೋಜಯುಗಳಕ್ಕೆರಗಿ ಮೇಘನಾದಂ ನೀವು ನೋಳ್ಪು[2]ದೆಂದಘಟ
[ನೀಗಾ

1. ಸ್ವರ್ಗ, ಮರ್ತ್ಯ, ಪಾತಾಳ. 2. ನೋಡುವದು. ವ್ಯಾ. ಸೂ.

ವಾಜಿಯುಂ ತಪೆನೆನುತ್ತಲ್ಲಿಂ ತಳರ್ದು ಮಾ
ಯಾಜಾಲಮಂ ಬೀಸಿದಂ ನಭೋಮಂಡಲ
ಕ್ಕಾಜನಪನಶ್ವರಕ್ಷೆಯಬಲಂ ಕಂಗೆಡುವ್ರೊಲರಸ! ಕೇಳದ್ಭುತವ
[ನೂ.

39 ಹುದುಗಿತೆತ್ತೆತ್ತಲುಂ ಪ್ರಳಯಕಾಲದ ಮೇಘ
awful thunder storm. ಮೊರಗುತಿನೆ ಬರಿಯಬರ[1]ಸಿಡಿಲ್ಗಳೆತ್ತೆತ್ತಲುಂ
ಕರೆವುತದೆ ಬಿರುಗಾಳಿ ಧೂಳ್ಗಳೆತ್ತೆತ್ತಲುಂ ಕತ್ತಲೆಗಳಟ್ಟಣಿಸಿ
[ವೇ
ತೆರೆಯ ಬಾರದು ಕಣ್ಣ; ಮರದು ಕಣ್ದೆರೆಯೆ, ದಿ
ಕ್ಕರಿಯ ಬಾ[3]ರದು; ಮಹಾದ್ಭುತಮಿದೆತ್ತಣದೊ! ಜಗ
ದೆರೆಯ[4]ನೇ ಬಲ್ಲನೆನುತಿರ್ದುದಾಸೈನಿಕಂ ಹೈಡಿಂಬಿ ಕೃತಮಾಯೆಗೇ.

ಇದು ಮಾಯಾ ಜಾಲ ಬೀಸಿದ ಫಲ. 1. ಗುಡುಗುಮಳೆ ಇಲ್ಲದೆ ಬರುವಂಥಾವು. 2. ಬಿರುಗಾಳಿ ಧೂಳನ್ನು ಮಳೆಯಂತೆ ಸುರಿಸುತ್ತಿತ್ತು. 3. ಅರಿಯುವಿಕ್ಕೆ ಬರುತ್ತಿದ್ದಿಲ್ಲ. 4. ದೇವರು.

40. ಇತ್ತಲೀಕುದುರೆಗಾವಲಭಟರ ಕಂಣ್ಗೆ ಬಲು
In the confusion he seizes & carries away the horse. ಗತ್ತಲೆಗಳಂ ಧೂಳ್ಗಳಂ ಗವಿಸಿ ಭೀತಿಯುಂ
ಬಿತ್ತಿ ನೆಲಕಿಳದು ಪಡಿವಾಘೆಯಂ ಪಿಡಿದರಸುಮಕ್ಕಳಂ ಬೀಳ
[ಹೊಯ್ದೂ
ತತ್ತುರಗಮಂ ಕೊಂಡು ಜಿಗಿದನಾಗಸಕೆ, ಸರ
ದತ್ತಣಿಂದಂಚೆ ಬೆಳ್ದಾವರೆಯನರ್ಥಿಯಿಂ
ಕಿತ್ತು ನಭಕೇಳ್ವಂತೆ, ಮೇಘನಾದಂ; ಭೀಮಕರ್ನಜರ್ಬರಗಾಗ
[ಲೂ.

41. ಬಳಿಕಾಬಲಂ[1] ಕಂಡುದಭ್ರಮಾರ್ಗದೊಳ್ ಮುಂ
The keepers of the horse remonstrate.
ದಳಿವ್ರತಿಹ ಮೇಘನಾದನನೆಲವೊ! ಬರಿಮಾಯೆ
ಗಳನಸಗಿ ಮೋಸದೊಳ್ತುರಗಮಂ ಕೊಂಡು ಬಾಂದಳಕಡರ್ದೊಡೆ, [ಸಿಂಸನೊ
ಉಳುಹುವರೆ? ಯೌವನಾಶ್ವನ ಸುಭಟರಕಟ! ನಿಂ
ನಳವನರಿಯದೆ ಬಂದು ಕೆಣಕಿದೆ! ಯೆಲಾ! ಜೀವ
ದುೞವನಾರೈದುಕೊಳ್ಳೆನುತಾತನಂ ಮುತ್ತಿಕೊಂಡು ಕವಿದೆಸುತಿರ್ದ [ರೂ.

1. ಯೌವನಾಶ್ವನ ಅಶ್ವರಕ್ಷೆಯ ಬಲ.

42. ಹಿಂತಿರುಗಿ ನೋಡಿದಂ; ಕಂಜನಲ್ಲವೆ! ಜೀವ
Meghanáda's answer to them.
ಮಂ ತೆಗೆದುಕೊಂಡೊಯ್ವಕಾಲನಂ[1] ಪೆಣಸಟ್ಟ
ವಂತಾಯ್ತಲಾ! ನಿಂಮ ಸಾಹಸಂ ಜಾಗುಜಾಗೆನುತ ಹೈಡಿಂಬಿ ನ [ಗುತಾ
ಸಂತತಂ ಕರೆವಕಲ್ಮಳೆಗಳಂ ಸೃಜಿಸಿ ಬಲ
ಮಂ ತವೆ ಪೊರಳ್ಚಿ ಮುಂದಳೆಯಲಾಪುದ್ಯ್ಯಲೂ
ರಂ ತಾಗೆ, ಪೊರಮಟ್ಟುದಾನೃಪನ ಸೈನ್ಯಮಕ್ಷೋಹಿಣಿಯ ಗಣನೆ [ಯಿಂದಾ.

1. ಯಮ.

43. ತಡೆಯೊಳಿರ್ದಖಿಳಮೇಘಂಗಳಂ ಪ್ರಳಯದೊಳ್
The fight for the horse commences.
ಬಿಡಲು, ಘುಡಿಘುಡಿಸುತ್ತ ನಡೆವಂದದಿಂದ ಬೊ
ಬ್ಬಿಡುತವಧಿಯಿಲ್ಲದೈತರುತಿರ್ದಯೌವನಾಶ್ವನ ಸೈನ್ಯಮಂ ನೋ [ಡುತಾ

ಎಡಗೈಯ್ಯ ತುರಗಮಂ ಬದಿಗಳವಡಿಸಿ ತಂನ
ಖಡುಗಮಂ ಜಡಿದನಿಬರೆಲ್ಲರಂ ಚಿತ್ತದೊಳ್
ಗಡಣಿಸದೆ ಕಲಿಘಟೋತ್ಕಜಸುತಂ ನಸುನಗುತ ಗಗನದೊಳ್ಬ
[ರುತಿರ್ದನೂ

44. ಪೊಡೆವಸಿಡಿಲ್ಗರೆವಮಳೆ, ಜಡಿವಕಲ್ಲುಂಡು, ಧೂ
ಳಿಡುವಬಿರುಗಾಳಿ ಕಂಗೆಡಿಪಕತ್ತಲೆ ಮೇಲೆ.
ಕೆಡವಗಿರಿತರುಗಳುರೆ ಕಡಿವವಿವಿಧಾಯುಧಂ ನೆಡುವ ಶಸ್ತ್ರಾಸ್ತ್ರಂ
[ಗಳೂ,
ಪಿಡಿವಪುಲಿಕರಡಿ ಬಾಯ್ಬಿಡುವ ಭೂತಂಗಳಸು
ಗುಡಿವ ಪಾವುಗಳಟ್ಟಿಸುಡುವ ಕಾಡ್ಗಿಚ್ಚುಳಿಯ
ಗೊಡದವನನಮಾಯೆಯಂ ತಡೆವರಿಲ್ಲಾ; ಬಲವಂ ಪಡಿಗೈದುದೇಪೇಳ್ವೆ
[ನೂ.

Description of the fight.

1. ಗೊಡದ. 2. ನೋಡು ವ್ಯಾ. ಸೂ. 74.

45. ಮಾಯದಿಂ ಬಲಮೆಲ್ಲಮಂಕೊಂಡು ಹಯಮಂ ವಿ
ಹಾಯಸಪಥದೊಳೊಯ್ವ ಹೈಡಿಂಬಿಯಂ ಕಂಡ
ಜೇಯರಂಬರದ ವಿವರಂಗಳಂ ಪೊಗುವೆಂಟುಸಾವಿರಮಹಾರಥರ
[ನೂ
ಅಯೌವ್ವನಾಶ್ವನೃಪನಟ್ಟಿದೊಡೆ, ನಭದೊಳಸ
ಹಾಯಶೂರನ ಮಾರ್ಗಮಂ ಕಟ್ಟಿ ನಿಲ್ಲುಖಳ
ಸಾಯದಿರ್ಬಿಡು ತುರಂಗಮಮನೀಸೆನುತ ಸೈಗರೆದರಂಬಿನ ಮಳೆಯ
[ನೂ.

1. ಇದು ಮಹಾರಥರನ್ನು ಎಂಬುವ ನಾಮ ಪದಕ್ಕೆ ವಿಶೇಷಣ ಪದವಾಗಿದೆ. ಮೊದಲನೇ ವಿಭಕ್ತಿಯು ಆಗುತ್ತದೆ. ವ್ಯಾ ಸೂ. 2. ಎರಡನೆಯವರ ಸಹಾಯ ಬೇರಲ್ಲದವನು = ಮೇಘನಾದ.

46. ಶೂರರಹುದೋ ಜಗಕೆ ನೀವಲಾ! ಸ್ವಾಮಿಹಿತ
ಕಾರಿಗಳ್ತಲೆ ಯಾಶೆಯಿಲ್ಲೆನುತ ಹೈಡಿಂಬಿ
ತೋರಗದೆಯಿಂದವರ ತೇರ್ಗಳಂ ಚಾಪಬಾಣಂಗಳಂ ಕುದುರೆಗಳ
[ನೂ.

ಸಾರಥಿಗಳಂ ಧ್ವಜಪತಾಕೆಗಳ ನಪ್ಪಳಿಸಿ
ವಾರುವಂ ಪೇರಿಸಿ ಕಡುವೇಗದಿಂದೈತಂದು
ಮಾರುತಸುತನ ಮುಂದೆ ನಿಲುತಿರ್ದನಂನೆಗಂ ಮತ್ತೆ ಪಡೆಬಲಬಂ
[ದುದೂ.

47. ಕಟ್ಟಿತರುಮೂಲಕಶ್ವಮನದರ ಕಾವಲ್ಗೆ
ದಿಟ್ಟಹೈಡಿಂಬಿಯಂ ಬೈಚಿಟ್ಟು ತಂಮನುರೆ
ಯುಟ್ಟುಬಹಯೌವನಾಶ್ವನ ಪಡೆಗೆ ಕರ್ನಿಯಂ ಕಳುಪಿ ಕಾಲಾಗ್ನಿ
[ಯಂತೆ;

ಇಟ್ಟಣಿಸುತೈದು ವಸುವೇಗನ[1] ಬಲೌಘಕಿದಿ
ರಿಟ್ಟು ಸಿಂದಂ ಭೀಮಸುತ್ಸಾಹಮಾಗಿಪೋ
ರ್ಬಿಟ್ಟುತ್ತಿನೂಕುವ ಮಹಾವಾತಘಾತ[2]ಮಂ ತಡದೊಲೆಯುದಿಪ್ಪಂತಿ
[ರೇ.

1. ಯುವನಾಶ್ವನ ಮಗನು 2. ಘಾತಿಯು ಹೊಡತಕ್ಕೆ ಅಗಲಾಪದ ಗುಡ್ಡದಂತೆ ನಿಂತನು.

48. ಕೇಳ್ಮಹೀಪಾಲಕ! ಸುವೇಗನಭಟಚರ್ಣಿ
ಯೊಳ್ಮುತ್ತಿಕೊಂಡರು ವೃಕೋದರನನಿತ್ತ ಕೆಂ
ಧೂಳ್ಮುಸುಕಿತೆಣ್ದೆಸೆಗಳಂ, ನೃಪರ ಮಣಿಭೂಷಣದಕಾಂತಿ ಝಗ
[ಝಗಿಸಲೂ.

ತೋಳ್ಮಡುಕಿನಿಂದಾರ್ದು ಝಳಪಿಸುವ ಭಟರ ಕರ
ವಾಳ್ಮಿಂಚೆ, ಛತ್ರಚಮರಂಗಳ ವಿಡಾಯಿಮಿಗೆ,
ಸೂಳ್ಮೊರೆವ ನಿಸ್ಸಾಳಕೋಟಿ, ಕಲಿಯೌವನಾಶ್ವ ಕ್ಷಿತಿಪನೈತಂ
[ದನೂ.

49. ತರಿತರಿದು ಕತ್ತರಿಸಿ ಕೊಚ್ಚಿ ಸಟ್ಟುಳ್ಳಿಸಿ
ಕೊರೆದರೆದು ಕಡಿದಿರಿದು ಬಗಿದುಗಿದು ಗಬ್ಬರಿಸಿ
ಪರಿದು ಸೀಳ್ದುತ್ತರಿಸಿ ಕೆತ್ತಿ ಖಂಡಿಸಿ ಬಳಚಿ ತಿವಿದಿಕ್ಕಿ ಕೊಯ್ದು
[ಪೊಯ್ದು
ಎರಗಿ ಕನಿದಿಡಿದೊತ್ತಿ ಕದುಕಿ ಕೀಲಿಸಿ ಕೀರಿ
ತುರುಗಿ ತುಂಡಿಸಿ ತುಳಿಕಿ ನಾಂಟೆ ಮುರುಮೊನೆಯಗೊಂ
ಡುರೆ ಪೊರಳ್ದವರಿಂ ಚತುರ್ಬಲವನೆಲ್ಲಮಂ ಕರ್ಣಜನೆಸುವಕಣೆ
[ಗಳೂ.

50. ತಲೆ ಬೀಳಲಟ್ಟೆಗಳ್ಕುದಿದವು ; ಮೋಣಟ್ಟೆ
ನೆಲಕುರುಳೆ, ತಲೆಗಳೆದ್ದಾಡಿದವು ; ಕೈದುಗಳ
ಸಲುಗಿದವು ಖಂಡಿಸಿದತೋಳ್ಗಳುರೆ ಕಡಿದಕಾಲ್ಗಳ್ಮಂದ ಕಡಿಯಿ
[ಟ್ಟವೂ,
ಕಲಿತನಮಿದೆಂತೊ! ಪಟುಭಟರಳವಿಗೊಟ್ಟಾಗಿ
ನಲಿ ನರಳಘಾಯದಿಂ ಮಡಿವುತಿರ್ದರು, ಸಮು
ಜ್ವಲದೀಪದೆಡೆಗೆ ಮುಗ್ಗುವಪತಂಗಪ್ರಸರಮೆನೆ, ವೃಷಧ್ವಜನಿದಿರೊ
[ಳೂ.

51. ಕಡಿಕಡಿದು ಬಿದ್ದಕೈಕಾಲ್ಗಳಿಂ ತೋಳ್ಗಳಿಂ
ಪೊಡೆಗೆಡೆದ ಪೇರೊಡಲ ಶೀಳ್ಗಳಿಂ ಪೋಳ್ಗಳಿಂ
ಮಡಿಮಡಿದುರುಳ್ವ ಕರಿತ್ತ್ಗಳಿಂ ಬಾಕ್ಗಳಿಂದೊಗೆದ ತಲೆಯೋಡ
[ಳಿಂದಾ

ಕಡು ಭಯಂಕರವಾಗಲಾರ್ಣದಸಾರ್ಣವ
ನಡುವೆ ಕಲ್ಪಾಂತಭೈ[1]ರವನಂತೆ, ಜವ[2]ನಂತೆ,
ಕಡು ಮುಳಿದವನ ಕಾಣುತಲೆ, ಬಿಟ್ಟು ನಲೆಕೆಟ್ಟು ಸರಿದರೆಣ್ದೆಸೆಗೆ
[ಭಟರೂ.

1. ಶಿವನ ಅವತಾರ, ಲೋಕ ಸಂಹಾರಕನು. 2. ಯಮ ಇವನು ಸಂಹಾರಿ. 3. ವೃಷಕೇತು.

52. ವೈಮನದ ಭೂಪನಂ ಬಿಟ್ಟು ಪಟುಭಟರುಳಿದೆ
ವೈ ಮಹಾದೇವೆನುತ ಸರಿದರೆಣ್ದೆಸೆಗಿವಂ
ಕೈಮಾಡಲೋರ್ವರಂ ಕಾಣದೆ ಬಳಲ್ದ ರಿಪು ಚೇತರಿಸಿಕೊಳ್ಳದಿರ
[ಲು
ವೈಮನಸ್ಯದೊಳಕಟ! ತಪ್ಪಿತೆ ರಣಾಟೋಪ?
ವೈ[1]ಮೊಗಂ ಬಲ್ಲನೆನುತವನೆಡೆಗೆ ಬಂದಿವೀ
ನೈ; ಮೂರ್ಛೆ ನಿನಗೆನಲ್ಕುಡಿಯದಿರಲೌಯ್ಯನಾನೃಪನುಸುರನಾ
[ರೈದನೂ

The king Youvanáshva vanquished,

1. ವೈಮೊಗಂ = ಈಶ್ವರ.

53. ಮಾ[1]ನವಾಧೀಶ ಕೇಳ್ಬಳಿಕ ವೃಷಕೇತು ಸುಂ
ಮಾನದಿಂದಾಯೌವನಾಶ್ವಭೂಪತಿಗೆ ಪವ
ಮಾನಸುತನಂ ಕಾಣಿಸುವೆನೆಂಬತವಕದಿಂದಾತನ ವರೂಥದೊಳಗೇ
ಮಾನದಿಂದಡರ್ದವಂವೇರಿಸಿ ನಡೆತರುತಿರೆ ವಿ
ಮಾನದಿಂ, ನೋಡುವನಿಮಿಷನಿಕರಮೀತನ ಸ
ಮಾನದವರಿಲ್ಲೆಂದು ಕೊಂಡಾಡುತಾಗಸದೊಳಲರಸರಿಯಂ ಕರೆದ
[ರೂ

And brought to Bhima by Vrishakétu.

1. ಅರಸ.

54. ಅನ್ನೆಗಂ ಭದ್ರಾವತೀಶ್ವರನ ಸುತನ ಸೈ
ನ್ಯಂ ನಡೆದು ಬಂದಾ ವೃಕೋದರನ ಮುತ್ತಿದೊಡ
ವಂ ನಿಜಗದಾದಂಡವುಂ ಕೊಂಡು ದಿಂಡುಗೆಡಿಪಿದೊಡಾನೃಪಾಲ [ಸೂನೂ
ತಂನ ಸಾಹಸದೊಳ್ಸಿಲುಜನ ಕೋಪಾಟೋಪ
ಮಂಸಿಲಿಸಿ ಕಾದುತಿರಲಾಸಮಯುಕಿವರೊಂದೆ
ರಂನದೇರೊಳಗೀರ್ವರುಂ ಬರುತಿರಲ್ಕಂಡು ಬೆರಗಾದರವರತ್ತಲೂ.

55, ಪವಮಾನನಂದನಸುವೇಗರನ್ಯೋನ್ಯಮಾ
ಹವದ ಬೇಳಂಬಮುಂ ಮರದೊಂದೆ ಪೊಂದೇರೊ
ಳವರೀರ್ವರುಂ ಬರಲ್ಕಂಡು ವಿಸ್ಮಿತರಾಗಿ ನಿಂದಿರನಿತರೊಳಿತ್ತಲೂ
ರವಿಸುತನಸೂನು ಕಲಿಯೌವನಾಶ್ವಂಗೆ ಪಾಂ
ಡವರಾಯನನುಜನಂ ತೋರಿಸಿದೊಡಾವರೂ
ಥವನಿಳಿದು ನಡವುತಾಭೂವರಂ ತನ್ನ ತನುಸಂಭವಂಗಿಂತೆಂದನೂ.

56. ತನಯ ! ದಿವ್ಯಾಶ್ವಮಂ ಪಿಡಿದರಿವರೆಂಬಮನ
ದನುತಾಪಮಂ ಬಿಡು ! ಸರೋಜಾಂಬಕಂ[1] ಪಾಂಡು
ಜನಪನಂದನಯುಧಿಷ್ಠಿರನರೇಶ್ವರನ ಮುಖಕೆಂದು ನಂಮಿಾಕುದು [ರೆಗೇ
ಅನಿಲಸುತನಂ ಕಳುಹಿದೊಡೆ, ಬಂದನಾತಂಗೆ
ವಿನಯದಿಂದೆಂಮುಸರ್ವಸ್ವಮಂ ಕೊಡುವೆವಿಂ
ನನುವರವದೇಕೆ? ನಿಲ್ಲೆನಲವಂ ಶರಧನುವನಿರಿಸಿ ಪಿತನಂ ಸಾರ್ದ [ನೂ.

Youvanashva orders his son to cease fighting.

1. ಕಮಲದ ಕಂಣುಳ್ಳವನು = ಕೃಷ್ಣ.

57\. ಬಳಿಕ ತನುಜಾತನಂ ಕೂಡಿಕೊಂಡಾನೃಪಂ
ನಳಿನಸಖಸುತನ ಮಗನೊಡನೆ ಬಂದನಿಲಜನ
ಬಳಿಸಾರ್ದು ಕಾಲ್ಗೆರಗಲವನೀವೃಷಧ್ವಜನ ಮೊಗ ನೋಡುತಿವರಾ [ರೆನೇ ?
ಎಳೆನಗೆಯೊಳಾತನಿವನೀಗಳೀಮೇದಿನೀ
ತಳಕರಸೆನಿಪಯೌವನಾಶ್ವನೀತಂಗೆ ಪ್ರಿ
ನೆಳಲೆನಿಪಕುವರಂ ಸುವೇಗನೆಂಬವನೀತನೆಸುತ ಮಣಿದಂ ಪದ [ದೊಳೂ.

Reconciliation of the hostile parties.

58\. ತರಿಸಿ ಕೋಳ್ವಿಡಿದಹಯಮಂ ಸುವೇಗನ ವಶದೊ
ಳಿರಿಸಿ ಬಳಿಕನಿಲಜಂ ಹೈಡಿಂಬಿ ಕರ್ಣಜ
ರ್ವೆರಸಿ ಭದ್ರಾವತಿಗೆ ಬರಲಾನೃಪಂ ಪೊಳಲ ಸಿಂಗರಿಸಿ ಮೇಣಿವ [ರನೂ,
ಅರಸಿಯರ ಗಡಣದೊಳಿದಿರ್ಗೊಂಡು ಮನೆಯೊಳಾ
ದರಿಸಿ ದಿವಸತ್ರಯಂ ತಪದೊಡನೆ, ಮಂತ್ರಿಯಂ
ಕರಸಿ ರಾಜ್ಯದ ಭಾರಮಂ ಪೊರಿಸಿ ಹಸ್ತಿನಾಪುರಕ್ಕೈದಲನುವಾದ [ನೂ.

Youvanashva joins them

59\. ನುತವಸಂತಾಗಮವನೆ[1]ಚ್ಚರಿಪಮಲಯಮಾ
ರುತನುಪವನಸ್ಥಳದಿ ಸುಳಿವಂತೆ, ಪವನಜಂ
ಕ್ಷಿತಿಪನಾಸ್ಥಾನಮಂ ಪೊಕ್ಕರಸನಂ ಕಂಡು ಪಾದಪಲ್ಲವಕೆರಗಲೂ,
ಅತಿಶಯದಪ್ರೀತಿಯಿಂ ತೆಗದು ಬಿಗಿಯಪ್ಪಿ ರವಿ
ಸುತಜಹೈಡಿಂಬಿಗಳದೆಲ್ಲಿ? ನೀಪೋದಸಂ
ಗತಿ ಯದೆಂತೈ ? ನಿನ್ನ [2]ಭಾಷೆಗಳಿವಿಲ್ಲಲಾ ತುರಗವಿಷಯದೊಳೆಂದ [ನೂ.

And all return to Hastinávati with the horse.

1\. ದಕ್ಷಿಣ ಘಟ್ಟಗಳಲ್ಲಿ ಒಂದು ಗುಡ್ಡ, ಅಲ್ಲಿಂದ ಬರುವ ಘಾಳಿ ವಿಶೇಷವಾಗಿ ವಸಂತ ಕಾಲದಲ್ಲಿ ಬೀಸುವದು. 2. ಕುದುರೆ ತಕ್ಕೊಂಡು ಬರುತ್ತೇನೆಂಬ ಭಾಷೆ.

60. ಎನಲವನಿಪತಿಗೆ ಬಿನ್ನೈಸಿದಂ ಪವಮಾನ
Bhíma relates to the king their adventures,
ತನಯನಲ್ಲಿಂದ ಭದ್ರಾವತಿಗೆ ನಡೆದುದಂ
ವಿನುತಹಯರತ್ನಮಂ ಪಿಡಿದುದಂ, ಮುಂಕೊಂಡು ಸೇನೆಯಂ ಸದೆ [ಬಡಿದುದಂ,
ಅನುಪರದೊಳಹಿತನಂ ಜಡಿದುದಂ, ಬಳಿಕವಂ
ತನಗೆರಗಿ ನುಡಿದುದಂ, ತಂನ ಸರ್ವಸ್ವಮಂ
ದನು[1]ಜಾರಿಗೀಯಲ್ಕುದುರೆವೆರಸಿ ಹೈಡಿಂಬಿಕರ್ಣಜರೊಡನೆ ಬಹು[2]ದ [ನುಂ.

1. ದನುಜ ಎಂಬ ರಾಕ್ಷಸನ ವಂಶದವರ ವೈರಿ = ಕೃಷ್ಣ. 2. ಬರುವದನ್ನೂ ನಡೆದ್ದನ್ನೂ ಮುಂತಾದ್ದನ್ನೂ ಬಿನ್ನೈಸಿದನು.

61. ತತ್ಸಂಗತಿಯನಾಲಿಸಿನೆಲೆ ಮಹೀಶ್ವರ! ಮ
and to Krishna.
ರುತ್ಸು[1]ತನ ಮನೆಗೆ ಬೀಳ್ಕೊಟ್ಟನೊಲವಿಂ ಭಕ್ತ
ವತ್ಸ[2]ಲಂ ಬಳಿಕಿತ್ತಲರಸಾಳ್ಗಳಾಯುಧಿಷ್ಠಿರನೃಪನ ಮನೆಗೆ ಬಂದೂ
ತ್ವ[3]ತ್ಸಮೀಪದ ಸೇವೆಗೋಸುಗಂ ತಂನ ಸಂ
ಪತ್ಸ[4]ಹಿತಲಾಯೌವನಾಶ್ವಧರಣೀಂದ್ರನ
ತ್ಯುತ್ಸವದೊಳೈತಂದನಿದೆ ಸಿಂಮುಪಟ್ಟಣ ಬಹಿಪ್ರದೇಶದೊಳೆಂದರೂ.

1. ಷಷ್ಠಿ ದ್ವಿತಿಯಾರ್ಥದಲ್ಲಿ ಬಂದದೆ (ಮರುತ್ಸುತನನ್ನು.) ವ್ಯಾ. ಸೂ. 2. ಕೃಷ್ಣ. ಭೀಮ ಧರ್ಮರಾಯನಿಗೆ ಕುದರೆ ಹಿಡಿತಂದ ಸುದ್ದಿಯು ಹೇಳಿದ ಮೇಲೆ ಇನ್ನು ಹಸ್ತಿನಾವತಿಯಲ್ಲಿ ಇದೆ ಕೃಷ್ಣನಲ್ಲಿ ಹೋಗಿ ಅವನಿಗೂ ಆದದ್ದನ್ನು ತಿಳಿಸಿದನು. 3. ತ್ವತ್ = ನಿಂನ (ಸಂಸ್ಕೃತದಲ್ಲಿ ಸರ್ವನಾಮ ಪದ.) 4. ಸಹಿತಲೂ = ಸಹಿತವಾಗಿಯೂ ಸಮುಚ್ಚಯಾರ್ಥ. ವ್ಯಾ. ಸೂ.

62. ವಾಯುಸುತನೊಡನೆ ತಾನಿರ್ದಪೊರೆಗಾಗಿ ಬ
Meeting of the two kings Dharmaráya and Youvan.
ಪ್ಪಾಯೌವನಾಶ್ವನಂ ಕಂಡಿ ಭವನಿಳಿದು ಸಿಂ[1]
ದಾಯುಧಿಷ್ಠಿರನಡಿಗೆ ಬೇಕಾದ ಕಾಣಿಕೆಯನಿತ್ತೆರಗಿ ಕೈಮುಗಿಯ [ಲಂ,

1. ನಿಂದ, ಭೂತಕಾಲದ ಶಬ್ದ ನ್ಯೂನ ಎಂದು ಅನ್ವಯಿಸ ಬೇಕು.

ಪ್ರೀಯ ಮಿಗಿಲಾತನಂ ತೆಗದು ತಕ್ಕೈಸಿ ಮಾ
ದ್ರೀಯಭೀಮಾರ್ಜುನರ ಸಮುವಿನಗೆ ನೀನದರಿ
ನೀಯಾದವೇಂದ್ರನಂ ಭಾವಿಸೆಂದರಸಂ ಮುಕುಂದನಂ ತೋರಿಸಿದ
[ನೂ.

2. ಮುಕುಂದ, ಯಾದವರಿಗೆ ಒಡೆಯ = ಕೃಷ್ಣ.

63. ಕೊಂಡುಬಂದಾಹಯಮನೊಪ್ಪಿಸಿ ಯುಧಿಷ್ಠಿರನ
Suvéga delivers the horse and the other presents.
ಕಂಡಂ ಸುವೇಗನತಿಭಕ್ತಿಯಿಂದೆರಗಿದಂ ;
ಪುಂಡರೀಕಾಕ್ಷಂಗೆ ಬಳಿಕರ್ಜುನಾದಿಗಳುಚಿತದಿಂ ವಂದಿಸಿದನೂ ;
ಭಂಡಿಪೇರೆತ್ತೊಂಟೆಗಳ ಮೇಲೆ ತಂದಖಿಳ
ಭಂಡಾರಮಂ ಕರಿರಥಾಶ್ವಮಂ ನಾರಿಯರ
ತಂಡಮಂ ಗೋಮಹಿಷಿಮೊದಲಾದ ವಸ್ತುಗಳನಾಕ್ಷಣದೊಳೊಪ್ಪಿಸಿ
[ದನೂ.

1. ಕಮಲದ ಕಣ್ಣುಳ್ಳವನು = ಕೃಷ್ಣ.

64. ರಾಯ ! ನೀ ಕರೆಸಿದೊಡೆ, ನಿನ್ನ ಮಹದಧ್ವರಸ
Krishna takes leave and returns to his place.
ಹಾಯಕೆ ಸಮಸ್ತವಸ್ತುವನಖಿಳಯಾದವನಿ
ಕಾಯಮಂಕೂಡಿಕೊಂಡೈತಪ್ಪೆವೆನ್ನೆಗಂ ಸುಯಿಧಾನದಿಂ ಹಯವ
[ನೂ,
ಯಿಾಯೌವನಾಶ್ವ ಭೂಪತಿಸಹಿತ ಕಾವುದೆಂ
ದಾಯುಧಿಷ್ಠಿರಮುಖರನಂದು ಬೀಳ್ಕೊಂಡುಕಮ
ಲಾಯತಾಕ್ಷಂ ಬಂಧುಕೃತ್ಯದಿಂ ದ್ವಾರಕೆಯಪುರಕೆಬಿಜಯಂಗೈದನೂ

1. ಮೊದಲಾದವರನ್ನು. 2. ಬಳಗದವರಿಗೆ ಮಾಡುವ ರೀತಿ ಸಲ್ಲಿಸಿ ಹೋದನು. 3. ಕೃಷ್ಣನ ಸಂಸ್ಥಾನ. ಕೃಷ್ಣ ಹೋದ ಮೇಲೆ ವ್ಯಾಸಮುನಿ ತಿರಿಗಿ ಧರ್ಮರಾಯನಲ್ಲಿ ಬಂದು ಅವನಿಗೆ ಧರ್ಮೋಪದೇಶ ಮಾಡಿದನು.

65. ಈ ಪರಿಯೊಳಾಮುನಿ ಸಮಸ್ತಧರ್ಮಂಗಳಂ
The king sets out to fetch
ಭೂಪತಿಗೆ ವಿಸ್ತರಿಸಿ, ಬಳಿಕ ಮುಖಕಾಲಂ ಸ
ಮಿಾಪವಾದಪ್ಪುದಿನ್ನು ಹಿಮಗಿರಿಯೊಳಿರ್ದ ಧನಮಂ ತರಿಸವೇಳ್ಪ
[ದೆಂದೂ,

ಆಪರಾಶರಸುತಂ[1] ನೇಮಿಸಿದೊಡರಸಂ ಚ
ಮೂಪರಂ ಕರೆಸಿ ಪೊರಮಟ್ಟು ನಡೆಗೊಂಡಂಪ್ರ
ತಾಪದಿಂ ಪಯಣಪಯಣಕೆ ನಡೆವಬೀಡುಗಳ ಸರ್ವಸನ್ನಾಹದಿಂದಾ

1. ವ್ಯಾಸಮುನಿ.

66. ಸವ್ಯಸಾಚಿಪ್ರಮುಖರೊಡಗೂಡಿ ಹಿಮಗಿರಿಯ
ದಿವ್ಯಸ್ಥಳಂಗಳಂ ನೋಡುತೊಲವಿಂದ ವೇ
ದವ್ಯಾಸಮುನಿವೆರಸಿ ವಿಪ್ರರೊಡಗೂಡಿ ಮರುತಾಧ್ವರದೊಳಂದು [ಬಿಸುಟಾ,
ದ್ರವ್ಯದೆಡೆಗೈತಂದು ಗಂಧಾಕ್ಷತೆಗಳಿಂದ
ನವ್ಯಕುಸುಮೋತ್ಕರಸುಧೂಪದೀಪಂಗಳಿಂ
ಗವ್ಯಮಧುಶರ್ಕರಾದ್ಯುಪಹಾರದಿಂ ನೃಪಂ ಧನದನಂ[1] ಪೂಜಿಸಿದ [ನೂ.

the treasure in the Himalaya mountains.

1. ಧನದನ = ಧನ ಕೊಡುವವನು = ಕುಬೇರ.

67. ಅಷ್ಟದಿಕ್ಪಾಲರ್ಗೆ[1] ಪೂಜೆಯಂ ಮಾಡಿ ಚೌ
ಷಷ್ಟಿಯೋಗಿಣಿಯರ್ಗೆ[2] ಬಲಿಗೊಟ್ಟು ಭೂತಸಂ
ತುಷ್ಟಿಯಪ್ಪಂತೆ ಕುರಿಕೋಣಂಗಳಂ ಪೊಯಿಸಿ ಬಂಣಗೂಳಂಪಸ [ರಿಸೀ,
ದೃಷ್ಟವಾದಖಿಳಧನಮಂ ತೆಗಸಿ ಭೂಪನು
ತ್ಕೃಷ್ಟಮುಖಮಿನ್ನು ಸಂಪೂರ್ತಿ ಯಾದಪುದೆಂಬ
ಹೃಷ್ಟತೆಯೊಳರ್ಥಮಂ ಸಾಗಿಸಿದನಿಭಪುರಿಗೆ ಪೇರ್ಬೊರೆಗಳಟ್ಟಣಿ [ಸಲೂ.

After returning

1. ಇಂದ್ರ ಅಗ್ನಿ ಯಮ ನೈರುತಿ ವರುಣ ವಾಯು ಕುಬೇರ ಈಶಾನ್ಯ ಇವರು ಪೂರ್ವ ಮೊದಲಾದ ಅಷ್ಟ ದಿಕ್ಕುಗಳಿಗೆ ಪಾಲಕರು. 2. ೬೪ ಶಕ್ತಿಗಳು, ಇವರು ದುರ್ಗಿಯ ಸೇವೆ ಮಾಡುವವರು.

68. ಪೊಱೆಯೊಳ್ಗೊಂಟವೇಸರಮೆತ್ತು ಭಂಡಿಗಳ್

with it, he sends Bhíma, to call Krishna to be present at the sacrifices.

ನೆರೆ ಕನಕಭಾರದಿಂ ಪೈದಿಪವು ಮಾರ್ಗದೊಳ್,
ತೆರಪಿಲ್ಲಮೆನೆ, ಕೋಟಿಸಂಖ್ಯೆಯಿಂ ಕೃಷ್ಣಮುನಿ[1]ಸಹಿತ ನೃಪನುತ್ಸ [ವದೊಳೂ
ಮೆರವನಿಜನಗರ ಪ್ರವೇಶಮಂ ಮಾಡುತ
ಕ್ಕರೊಳಂದು ಭೀಮನಂ ಕಳುಹಿದಂ, ದೇವಪುರ
ದೆರೆಯುಲಕ್ಷ್ಮೀಶನಂ ದ್ವಾರಕಿಗೆ ಪೋಗಿ ಬಿಜಯಂಗೈಸಿ ತಪ್ಪದೆಂ[2] [ದೂ.

1. ವ್ಯಾಸಮುನಿ. 2. ತಪ್ಪದೆಂದು ಕಳುಹಿದಂ ಎಂಬ ಲಿಪ್ಪಿಯು. (ತರುವದು)

69. ಎಲೆಮಹೀಶ್ವರ! ನಾಗನಗರಮಂ[1] ಪೊರಮಟ್ಟು
ನಿಲಸುತಂ ಪಯಣಗತಿಯೋಳ್ಬರುತ ಕಂಡನಗ
ಕುಲದ ಪವಿಘಾತಭಯಶಮನೌಷಧಿಯನತುಲಕಲ್ಲೋಲಸಿರವಧಿ [ಯನೂ,

The sea and the city of Krishna described.

ಜಲಜಂತು ಚಾರಣವಿಧಿಯನಿಳಾಮಂಡಲದ
ಬಳಸಿನ ಪರಿಧಿಯನಪಹೃತಗಣಿತಸುಧೆಯನವಿ
ರಳಘೋಷದುದಧಿಯನನೇಕರತ್ನಪ್ರತತಿಗಳನಿಧಿಯನಂಬುಧಿಯ[2] [ನೂ.

1. ಹಸ್ತಿನಾವತಿ (ನಾಗ = ಆನೆ). 2. ಅಂಬುಧಿಯನ್ನು (ಅಂಬು = ನೀರು, ಧಿ = ಇಟ್ಟಿರುವಂಥಾದ್ದು, ಅಂಬುಧಿ = ಸಮುದ್ರ) ೭ ವಿಶೇಷಣಗಳಿಂದ ವರ್ಣಿಸುತ್ತಾನೆ. 1. ಇಂದ್ರನು ತನ್ನ ತೋಟದಲ್ಲಿ ಮೇಯಲಿಕ್ಕೆ ಹೊಕ್ಕಿದ್ದ ಗುಡ್ಡಗಳ ರೆಕ್ಕೆಗಳನ್ನು ವಜ್ರದಿಂದ ಕಡಿದಾಗ್ಯೆ ಅವು ಅಂಜಿ ಸಮುದ್ರದಲ್ಲಿ ಹಾರಿ ಉಪಶಮನವಾದದರಿಂದ ಇದು ಅವುಗಳಿಗೆ ಔಷಧಿಯಾಯಿತು; 2. ದೊಡ್ಡ ದೊಡ್ಡ ತೆರೆಗಳು ಮಿತಿಯಿಲ್ಲದೆ ಬರುವಂಥಾದ್ದು; 3. ನೀರಿನಲ್ಲಿ ಬದುಕುವ ಜೀವಿಗಳು ಸಂಚಾರ ಮಾಡುವಂಥಾ ಹಾದಿ; 4. ಭೂಮಂಡಲ ಸುತ್ತಿಕೊಳ್ಳುವಂಥಾ ಅಗಳ್ತೆ; 5. ಲೆಕ್ಕಿಸಲಿಕ್ಕೆ ಬಾರದಂಥಾದ್ದು; 6. ದೊಡ್ಡ ಘೋಷ ಮಾಡುವಂಥಾದ್ದು: 7. ಬಹಳ ರತ್ನಗಳ ನಿಕ್ಷೇಪವುಳ್ಳಂಥಾದ್ದು. ಈ ಪ್ರಕಾರವಾದ ಸಮುದ್ರವನ್ನು ಕಂಡನೆಂಬಭಿಪ್ರಾಯು.

70. ಆಮಹಾಂಭೋಧಿಯಂ ನೋಡಿ ಹರುಷಿತನಾಗಿ
ಭೀಮಸೇನಂ ಬಳಿಕ ನಲವಿನಿಂ ದ್ವಾರಕಿಯ
ಸೀಮೆಗೈತಂದು ನಗರದ್ವಾರಮಂ ಪೊಕ್ಕು ಬರೆ, ರಾಜಮಾರ್ಗದೊ [ಳಗೇ
ಸಾಮಜಗಿರಿಯ ಹಯತರಂಗದ ನೆರವಿದೊರೆಯ
ಚಾಮರಫೇನಿಯ ಬೆಳ್ಗೊಡೆನೊರೆಯ ಭೂಷಣ
ಸ್ತೋಮಮಣಿಗಣದ ಕಳಕಳರವದ ಜನಸಂದಣಿಯ ಕಡಲಂ ಕಂ [ಡನೂ.

ಆ ರಾಜ ಮಾರ್ಗದಲ್ಲಿ ಇದ್ದ ಸಂದಣಿಯೇ ಸಮುದ್ರ, ಆನೆಗಳೇ ಗುಡ್ಡ, ಕುದುರೆಗಳೇ ತೆರೆ, ಆಡ್ಡಾಡುವ ಜನರೇ ಪ್ರವಾಹ, ಚಾಮರಗಳೇ ಮೀನುಗಳು, ಬಿಳಿ ಕೊಡೆಗಳೇ ನೊರೆ, ಭೂಷಣದ ಸಮೂಹವೇ ರತ್ನ, ಆಗುತ್ತಿದ್ದ ಗದ್ದಲವೇ ಘೋಷ.

71. ಪಾರಿಜಾತ[1]ಪ್ರಸರಪರಿಮಳಕೆ ಗಗನದೋಳ್
ಸೇರಿದಳಿಮಾಲೆಗಳನುಜ್ವಲಿಪನೀಲಮಣಿ
ತೋರಣದ ಪ್ರಭೆಗಳಂ ಜೋರ್ಡಿ[2]ಸಲಿಂದೆನಲ್ಕೆರೆವಹರಿಯರಮನೆ [ಯನೂ
ಸೇರಿದಂ ಪವನಜಂ; ಬಾಗಿಲೊಳ್ತನ್ನ ಪರಿ
ವಾರಮಂ ನಿಲಿಸುತೊಳಪೊಕ್ಕನೇಂ ಸಲುಗೆಯೊ ಮು
ರಾರಿಯೆಡೆಯೊಳುದ್ವಾರ ಪಾಲಕರ್ತಡೆಯರೋರ್ವರುಮಂತರಾಂತರ [ದೊಳೂ.

Bhíma enters the palace of Krishna

1. ಕಲ್ಪ ವೃಕ್ಷದ ಹೂವು. 2. ಅಲ್ಲಿದ್ದ ನೀಲಮಣಿಯ ತೋರಣಗಳು, ಪಾರಿಜಾತ ಪುಷ್ಪದ ಪರಿಮಳಕ್ಕೆ ಹಾರುವ ಭ್ರಮರಗಳ ಸಾಲುಗಳಂತೆ ಕಾಣುತ್ತಿದ್ದವು.

72. ಭೂರಮಣ! ಕೇಳನಿಲತನಯನಂ ಕೂಡಿಕೊಂ
ಡಾರೋಗಿಸಿದ ಬಳಿಕ, ನವಕುಸುಮಗಂಧಕ
ರ್ಪೂರತಾಂಬೂಲಮಂ ಕೊಡುತ ಕೃತವರ್ಮ[1]ನಂ ಕಳಿಸಿ ಧರ್ಮಜ [ನಮುಖಕೇ

and returns with him to Hastinávat

1. ಆತನ [illegible]

ವಾರಣ[2]ನಗರಿಗೀಗ ಸಂಮೋದನೀಯದೆತರಲಿ
ದ್ವಾರಕೆಯೊಳಿರ್ದಜನರೆಲ್ಲರುಂ ! ಪ್ರೋಯಿಸಲಿಗು
ಡಾರವುಂಪೊರಗೆ ! ಸಾರಿಸು ಪುರದೊಳೆಂದು ಮಧುಸೂ[3]ದನಂ ನೇಮಿ
[ಸಿದನೂ

2. ಹಸ್ತಿನಾಪತಿ. 3. ಮಧು ಎಂಬ ರಾಕ್ಷಸನನ್ನು ಸೂದನ (= ಸಂಹಾರ) ಮಾಡಿದವನು=ಕೃಷ್ಣ.

73. ನಾಗನಗರಿಯನಗಧ[1]ರಂ ಪೊಕ್ಕು ಬರುತಿರ್ದ
ನಾಗ ನಗ[2]ರಿಪುಮುಖ್ಯರೈದೆ ಸಾಸಿರಪೆಡೆಯ
ನಾ[3]ಗನ ಗರಿಯಾ[4]ಂಗತಲ್ಪದವನಿವನೆಂದು ಗಗನದೊಳ್ ಕೈವಾರಿಸೇ
ಬಾಗಿಲಂ ಸಾರ್ದು ತಮತಮಗೆ ಕಾಮಿನಿಯರಿಂ
ಬಾಗಿ ಲಂಬಿಸುವೆಲರ್ಮಾಡಿಗಳ್ ಶಿರಂಗಳಂ
ಬಾಗಿ ಲಕ್ಷ್ಮೀಪತಿಗೆ ವಂದಿಸಿದರೊಲವಿಂದ ರಾಜಮಾರ್ಗಾಂತರದೊ
[ಳೂ

1. ಗುಡ್ಡ ಧರಿಸಿದವನು = ವಿಷ್ಣು; ಕೂರ್ಮಾವತಾರದಲ್ಲಿ ಮಂದರಾಚಲವನ್ನೂ, ಕೃಷ್ಣಾವತಾರದಲ್ಲಿ ಗೋವರ್ಧನ ಗಿರಿಯನ್ನೂ ಧರಿಸಿದನು. 2. ಗುಡ್ಡಗಳಿಗೆ ವೈರಿ = ಇಂದ್ರ. 3. ಆದಿಶೇಷ. 4. ಆದಿಶೇಷನ ಪೂರ್ಣಾಂಗವನ್ನು ಹಾಸಿಗೆ ಮಾಡಿಕೊಂಡವನು = ವಿಷ್ಣು.

74. ಧರ್ಮಸುತನಂ ಕಂಡು ನಗುತಮುರರಿಪು ಹೇಮ
Solemn reception there
ನಿರ್ಮಿತವರೂಥದಿಂದಿಳಿದು ನೃಪವರನಡಿಗೆ
ನಿರ್ಮಲಕಿರೀಟಮಂ ಚಾಚುತಿರೆ, ತೊಲಗಿ ಹರಿಯಂಘ್ರಿಗರಸಂ ನ
[ಮಿಸಲೂ
ಪೇರ್ಮೆಯಿಂತೆಗೆದು ಬಿಗಿಯಪ್ಪಲವನೀಶ್ವರಂ
ನಿರ್ಮಾ[1]ಯನಂ ಮಗುಳೆ ತಕ್ಕೈಸಲಾಗಲಮ
ರರ್ಮಹೀಪಾಲಕನ ಪೂರ್ವಕೃತಪುಣ್ಯಮಂ ಬಣ್ಣಿಸಿದರಂಬರದೊ
[ಳೂ,

1. ಮಾಯೆ ಇಲ್ಲದವನು = ವಿಷ್ಣು.

75. ಬಳಿಕ ನೃಪನಾಜ್ಞೆಯಿಂದಾಹಸ್ತಿನಾಪತಿಯ
ಪೊಳಲನುರೆ ಸಿಂಗರಿಸೆ, ಮೊಳಗಿದದು ಕೂಡೆ ಮಂ
ಗಳವಾದ್ಯಸಂಕುಲಂ ; ನೆರೆದುದು ಸಕಲಪೌರಜನಮಲಂಕಾರದಿಂದಾ

ಹೊಳವಮಣಿಭೂಷಣದ ಪೆಣ್ಗಳಿಟ್ಟಣಿಸಿದ
ತ್ತುಳತಂತ್ರಮ್ಮೈದೆ ಸಂದಣಿಸಿದದು ; ಪಾಠಕರ
ಕಳಕಳದ ನೃತ್ಯಗೀತಂಗಳ ವಿಲಾಸದಿಂದಿದಿರ್ಗೊಳಲ್ಪೊರಮಟ್ಟ
[ರೂ.

76. ಉತ್ಸವದೊಳಧ್ವರಹಯಂ ಮುಂದೆ ನಡೆಯೆ, ಬೀ
After the king had proceeded, to meet Krishna.
ಭತ್ಸ[1]ವೊದಲಾದನುಜರೆಡಬಲದೊಳಿರೆ, ಭಕ್ತ
ವತ್ಸಲಂ ಬಲದಭಾಗದೊಳುಬರೆ, ಪಿಂತೆ ಮುನಿನಿಕರಮೈತರೆ, ಮು
[ದದೊಳೂ

ಸತ್ಸಿಕತಮಯವಿರಾಜಿತವಿಮಲನಿರ್ಜರ[2]ಸ
ರಿತ್ಸಮೀಪದೊಳೆಸವಯಾದವರಪಾಳೆಯವ
ನುತ್ಸುಕದೊಳವನೀಶ್ವರಂ ಸಾರ್ದನಂಬುಧಿಯನಂಬೋಧಿ ಬೆರಸು
[ವಂತೇ.

1. ಅರ್ಜುನ (ಎಲ್ಲರನ್ನು ಅಂಜಿಸುವವನು.) 2. ದೇವತೆಗಳ ನದಿ = ಗಂಗೆ.

77. ಆಸಮಯದೊಳ್ಸಾಲ್ವನನುಜನನುಸಾಲ್ವನೀ
Anusálva attacks them, because Krishna
ವಾಸುದೇ[1]ವನ ಪೂರ್ವವೈ[2]ರಕಲ್ಲಿಗೆ ಬಂದು
ಮೋಸದೊಳ್ತಾಗಿತತ್ತುರಗಮಂ ಪಿಡಿದೆತ್ತಿ ಕೊಂಡೊಯ್ದು ಕಟ್ಟಿಬ
[ಳಿಕಾ,

1. ವಸುದೇವನ ಮಗನು = ಕೃಷ್ಣ. 2. ತನ್ನ ಅಗ್ರಜನಾದ ಸಾಲ್ವನನ್ನು ಕೃಷ್ಣ ಕೊಂದಕಾರಣ ಆ ವೈರದಿಂದ ಅನುಸಾಲ್ವನು ಬಂದನು.

ಆಸುತ್ರ್ಯವಳಯದೋಳ್ಪದ್ದಿನಾಕಾರಕೆ ಮ
ಹಾಸೇನೆಯುಂ ನಿಲಿಸಿ ತಾನವರ ಮುಖದೊಳ್ಳ
ರಾಸನದೊಳಂಬನೇರಿಸಿ ನಿಂದು ನುಡಿದಂ ಸುದಾರನೆಂಬಾಪ್ತನೊಡನೇ

78. ಅಂಣನಂ ಕೊಂದೆಂಮ ಸಾಭನಗರವಸಿರಿದ
had killed his brother, ಬೆಂಣೆಗಳ್ಳನ ಕೊಬ್ಬಿದುದರದೊಳ್ಪೊಚ್ಚಪೊಸ
ಸುಂಣಮುಂ ಪೊಯಿದು ಸೀರೆರದಂತೆ ಮಾಡಿ, ಯಾದವಪಾಂಡವರಬಿಂ
[ಕದಾ
ಬಂಣಮುಂ ಕೆಡಿಸಿ ಕಾಳಗದೊಳುಬ್ಬಸವನುರೆ
ಹಂಣಿದಲ್ಲದೆ ಮಾಣೆನಹಿತರ್ಗೆ ; ಪಗೆಯೆನ್ನ
ಕಂಣ ಮುಂದಕೆ ಸುಳಿದು ಜೀವಿಪನೆ? ಸೇನೆ ಸನ್ನದ್ಧವಾಗಿರಲೆಂ
[ದನೂ

79. ಕರ್ನಜನ ಕಣೆಗಳಂ ಕತ್ತರಿಸಿ ಪೊಸಮಸೆಪೊ
and is defeated in the fight ಗರ್ನಭೊಮಂಡಲವನಂಡಲೆಯುಲೊಪ್ಪುವಸು
ಪರ್ನಪುಂಖದ ಸರಳ್ಗರದಸನುಸಾಲ್ವನದನೆಲ್ಲಮುಂ ತಕ್ಷಣದೊಳೂ
ನಿರ್ನೈಸಿ ವೃಷಕೇತು ಕೈಗೊಂಡನೆಸುಗೆಯುಂ
ದುರ್ನಿರೀಕ್ಷಣಮಾದುದರಸ ! ಕೇಳಡನೆನಗೆ
ವರ್ನಿಸುವಡರಿದು ಕೂರಂಬುಗಳ್ಗಂಬರದೊಳಂಬಿಲ್ಲಮಿಂಬೊಲಾ
[ಯ್ತು.

80. ಮಂಡಲಾಕೃತಿ ಯಲ್ಲದಿರದು[1] ನೋಡಲ್ಕೆ ಕೋ
by Vrishkétu ದಂಡವಂಬುಗಿವಹೂಡುವ ಬಿಡುವ ಭೇದಮುಂ
ಕಂಡವರದಾರಸ್ತ್ರಮುಯಮಾದುದೇಣ್ದೆಸೆಗಳನುಸಾಲ್ವ ನಳವಳಿದ
[ನೂ.

1. ಬಿಲ್ಲು ಯಾವಾಗಲು ಮಂಡಲಾಕೃತಿಯಿಂದಿರುವಂತೆ ಎಡೆಬಿಡದೆ ಎಸೆಯುತ್ತಿದ್ದನು.
2. ದೆಸೆಗಳ್ ಅಸ್ತ್ರಮಯವಾದುದು ಎಂಬ ಅನ್ವಯದ ವಿಷಯಕ್ಕೆ ನೋಡು. ವ್ಯಾ. ಸೂ.

ದಿಂಡುರುಳಿತಾತನ ಚತುರ್ಬಲಂ ; ಬಳಿಕ ಕೋ
ದಂಡಮಂ ಕೊಂಡವನ ರಥದೆಡೆಗೆ ಬಂದೆಳದು
ಕೊಂಡು ಕೃಷ್ಣನ ಪದಾಂಬುಜದ ಹೊರೆಗಾಗಿ ನಡೆತಂದಿಳುಹಿ ಕೈ
[ಮುಗಿದನೂ.

81. ಕೊಂಡಾಡಿ ಶೌರಿ[1] ತಕ್ಕೈಸಿದಂ; ನೃಪನಪ್ಪಿ
This hero is praised. ಮುಂಡಾಡಿ ಮಂನಿಸಿದನರ್ಜುನಾದಿಗಳಳಿಕೆ
ಗೊಂಡಾಡಿದರ್ತಂಮ ಸಾಹಸಂ ; ಸಲೆಯುಪ್ರೋಗಳ್ದರೀಕ್ಷತ್ರಿಯರೊ
[ಳೂ

ಉಂಡಾಡಿಗಳ್ಪಲಬರಿರ್ದೊಡೇನಹುದಿವಂ
ಗಂಡಾಡಿದುರುಭಾಷೆಗರಿಗಳ ಶಿರಂಗಳಂ
ಚೆಂಡಾಡಿ ಪಗೆವಸಂ ಪಿಡಿದೊಪ್ಪಿಸಿದನೆಂದರೆಲ್ಲರುಂ ಕರ್ನ[2]ಜನನೂ.

1. ಶೂರರಾಯನ ವಂಶದವನು = ಕೃಷ್ಣ 2. ಕರ್ನಜನನ್ನು ಹೀಗೆ ಕೊಂಡಾಡಿದರು.

82. ಧಾತ್ರೀಶ! ಕೇಳ್ಬಳಿಕ ಧರ್ಮಜಂ ತಾಮರಸ
Preparations for the sacrifice, the horse let loose. ನೇತ್ರ ವೇದವ್ಯಾಸರಾಜ್ಞೆಯಿಂದಖಿಳರುಷಿ
ಗೋತ್ರದ ಮುನಿಗಳೆಲ್ಲರಂ ಕರಸಿ ಮೋಣವರನುಜ್ಞೆಯಿಂದಾ ಯಜ್ಞ
[ದಾ

ಸೂತ್ರಪ್ರಕಾರದಿಂದಾರಾಜಿಸುವಬಹಿಃ
ಕ್ಷೇತ್ರದಧ್ವರಶಾಲೆಯೊಳ್ ದೀಕ್ಷೆಯಂಕೊಂಡು
ಚೈತ್ರಸಿತಪೌರ್ಣಮಾಸಿಯ ದಿನದಿ ಬಿಟ್ಟರರ್ಚಿಸಿ ಹಯವನುತ್ಸವ
[ದೊಳೂ.

THE STORY OF THE KING MAYURADHVAJA.

3. ಮಯೂರಧ್ವಜನ ಕಥೆ. (25--26) ಸಂಧಿ.

Arjoona and his host who had been beaten, recover.

83. ಭೂರಮಣ! ಕೇಳ್! ಕೃಷ್ಣ ಕಾಂಕ್ಷೆಯೊಳಾಗಿರ್ದಂ ಮ
ಯೂರ[1]ಧ್ವಜಕ್ಷಿತೀಶ್ವರನಿತ್ತ ಲತ್ತರಣ
ಧಾರುಣಿಯೊಳಸುರಾರಿಗೆಚ್ಚರಿಕೆ ತಲೆದೋಱಿತರ್ಜುನಂಗರಿವಾದ [ದೂ
ವೀರಭಟರೆಲ್ಲರ್ಗೆ ಮೂರ್ಛೆ ತಿಳಿದುದು ; ಬಳಿಕ
ವಾರಿಜಾಕ್ಷಂ ಸಕಲಸೇನೆಯಂ ಸಂತೈಸಿ
ಚೋರಬುದ್ಧಿಯೊಳೊಂದುಪಾಯಮಂ ಕಂಡಾಧ[2]ನಂಜಯಂಗಿಂತೆಂದ [ನೂ

1. ತನ್ನ ಧ್ವಜದಲ್ಲಿ ನವಿಲಿನ ಚಿತ್ರ ಬರೆಸಿದ ಕಾರಣ ಈ ಹೆಸರು ಅವನಿಗಾಯಿತು, ಇವನ ಮಗನಾದ ತಾಮ್ರಧ್ವಜನು(= ತಾಮ್ರದ ಹಾಗೆ ಕೆಂಪಾದ ಧ್ವಜವುಳ್ಳವನು) ಕೃಷ್ಣಾರ್ಜುನರನ್ನು ಯುದ್ಧದಲ್ಲಿ ಗೆದ್ದು ಅವರ ಕುದುರೆ ತಕ್ಕೊಂಡು ಹೋಗಿ ತಂದೆಗೆ ಒಪ್ಪಿಸಿದನು. 2. ಧನವನ್ನು ಜಯಿಸುವವನು = ಅರ್ಜುನ.

Krishna and Arjoona go in the disguise

84. ನೋಡಿದೈ! ಕುಂತೀಕುಮಾರ ತಾಮ್ರಧ್ವಜಂ
ಮಾಡಿದ ವಿಘಾತಿಯಂ ; ನಂಮೆಲ್ಲರಂ ಧುರದೊ
ಳೋಡಿರಿದುರುಳ್ಚಿ ಹಯಮಂ ಕೊಂಡು ರತ್ನಪುರಿಗೈದಿದಂ ಪಿತನಬ [ಳಿಗೇ
ಆಡಲೇನಹುದಿಂನು ಸೇನೆ ಮೆಲ್ಲನೆ ಪಿಂತೆ
ಬೀಡಾಗಿ ನಡೆತರಲಿ! ಮುಂದೆ ಪೋದಪೆನೆನ್ನ
ಕೂಡೆ ಬಾ! ನಿನಗೊಂದುಪಾಯಮಂ ತೋರಿಸುವೆನೆಂದನಸುರಾರಿ [ನಗುತಾ

85. ಆ ಹರಿಯ ನುಡಿಗೇಳ್ದು ಫಲುಗುಣಂ ಸೇನಾಸ
of beggars to Mayuradhvaja. ಮೂಹಮಂ ಪಿಂದುಳಿಪಿ ರತ್ನನಗರಿಗೆ ಪಕ್ಷಿ
ವಾಹನನ ಕೂಡೆ ನಡೆತಂದನವರೀರ್ವರುಂ ಮಾತಾಡಿಕೊಂಡು ಬ
[ಳಿಕಾ
ರೂಪುಗಾಣಿಸದಂತೆ, ವಿಪ್ರವೇಷವನಾಂತು
ದೇಹಿಕರ[1] ತೆರದಿಂದ, ವೃದ್ಧನಾದಂ ಶೌರಿ;
ಮೋಹದಿಂ ತನಗೆ ಕೈಗೊಡುವಬಾಲಕಶಿಷ್ಯನಾದನಮರೇಂದ್ರಸೂ[2]
[ನು.

1. ದೇಹಿ = ಕೊಡು (ಸಂಸ್ಕೃತ ಭಾಷೆಯಲ್ಲಿ) ದೇಹಿಕರು = ಭಿಕ್ಷುಕರು. 2. ದೇವತೆಗಳ ಒಡೆಯನು = ಇಂದ್ರ ಅರ್ಜುನನ ತಂದೆ.

86. ಬಟ್ಟೆವಿಡಿದವರೀರ್ವರುಂ ಮಯೂರಧ್ವಜನ
Sunset. ಪಟ್ಟಣಕೆ ನಡೆತಂದರಂನೆಗಂ ದೆಸೆದೆಸೆಯೊ
ಳಿಟ್ಟಣಿಸಿ ಲೋಕಮಂ ಕಂಗೆಡಿಸುವಂಧಕಾರಂಗಳಂ ನಿಲಲೀಯ್ಯದೇ[1]
ಅಟ್ಟಿಪರಿಹರಿದುರೆಬಳಲ್ದು ಕಾಹುರದಿ ಕಂ
ಗೆಟ್ಟುಕಳೆಗೊಂದಿ ಮೆಲ್ಲನೆ ನಭೋಮಾರ್ಗಮಂ
ಬಿಟ್ಟು ಪಶ್ಚಿಮಗಿರಿ[2]ಯತಪ್ಪಲಂ ಸಾರ್ದನೆನೆ, ರವಿಪಡುಗಡಲೊಳೆಸೆದ
[ನು.

1. ನಿಲಗೊಡಿಸದೆ. 2. ಸೂರ್ಯ ಮುಣಗುವಾಗ್ಯೆ ಮರೆಯಾಗುವ ಗುಡ್ಡ.

87. ಗಾಲಿಯೊಂದೇ ರಥಕೆ; ಜೋಡಾಗಿ ಪೂಡುವರೆ[1]
Sunrise. ಸಾಲದೇಳೇಹಯಂ; ನಡೆಸುವರೆ, ಸಾರಥಿಗೆ
ಕಾಲಿಲ್ಲ; ಲೋಕಯಾತ್ರೆಯನೊಲ್ಲೆನೆಂದೊಡಾಗದೆ? ತನಗೆತಿರುಗ
[ಲೇಕೇ?

1. [illegible]

ಕಾಲಗತಿಯಂ ಮೀರಬಾರದೆಂದೆಂಬುದಂ
ಮೂಲೋಕಕೆಚ್ಚರಿಸುವಂತೆ, ಪ್ರಾರ್ವಾಚಲದ
ಮೇಲೆ ಮೂಡಿದನೆಂದಿನಂತೊಲ್ಬಾಂಧವಂನಯನಾಂಧಮಂಪಡಗ
[ಲೂ

2. ಸೂರ್ಯ, ತನ್ನ ಸಾಹಿತ್ಯ ಲೋಕ ಯಾತ್ರೆಗೆ ತಕ್ಕಂಥಾದ್ದಿಲ್ಲ, ಆದರೆ ಈ ಕೆಲಸಕ್ಕೆ ಒಪ್ಪಿಕೊಂಡ ಮೇಲೆ, ಬಿಡಲಿಕ್ಕೆ ಬಾರದು ಎಂದು ಎಚ್ಚರಿಸುತ್ತಾನೆ.

88. ಜನನಾಥ! ಕೇಳ್ಮಯೂರಧ್ವಜಮಹೀಶ್ವರಂ
ದಿನನಾಥನುದಯದೊಳ್ವಿಮಲಸಂಧ್ಯಾವಿಧಿಯ
ನನುಕರಿಸಿ ಕೃಷ್ಣನಿದ್ದೆಡೆಗೆ ತಾಂ ಪೋಗಿ ಕಂಡಪೆನೆಂಬ ಕಾರಿಯವ
[ನೂ

Mayuradhvaja intends to go and see Krishna,

ಮನದೊಳಗೆ ನಿಶ್ಚೈಸಿ ಪೊರಮಡುವನಾಗಿ ನಿಜ
ತನುಜನಂ ಕರೆಸಿ ಮಂತ್ರಿಗಳೆಲ್ಲರಂ ಬರಿಸಿ
ವಿನುತಭೂಸುರನೃಪಾಲಸ್ತೋಮದೊಡಗೂಡಿ ಕುಳ್ಳಿರ್ದನೋಲಗ
[ದೊಳೂ

89. ಅಂನೆಗಂ ವೃದ್ಧವಿಪ್ರಾಕಾರಮಂತಳೆದ
ಪಂನಗಾರಿಧ್ವಜಂ[1] ನಿಜಶಿಷ್ಯಪಾರ್ಥನಂ[2]
ತಂನೊಡನೆ ಕೂಡಿಕೊಂಡೊಯ್ಯನೊಯ್ಯನೆ ಹಯದ್ವಯದಿಂದ ಪ
[ತ್ರಿಸಹಿತಾ

when Krishna suddenly appears before him as a mendicant brahman.

ರಂನದೊಡವುಗಳ ಕತ್ತುರಿಯತಿಲಕದನೊಸಲ
ಮುಂನೆಯುರ ಗಡಣದಿಂ ದ್ವಿಜನಿಕರದಿಂದ ಸಂ
ಪಂನದೀಕ್ಷಿಯೊಳೆಸೆವಭೂಪನಲ್ಲಿಗೆ ಬಂದು ಸ್ವಸ್ತ್ಯಸ್ತು[3] ನಿನಗೆಂದ
[ನೂ

1. ಸರ್ಪಗಳಿಗೆ ವೈರಿಯಾದ ಗರುಡನ ಧ್ವಜವುಳ್ಳವನು = ಕೃಷ್ಣ. 2. ಪೃಥೆ ಎಂಬ ಉಪನಾಮವುಳ್ಳ ಕುಂತಿಯ ಮಗನು = ಅರ್ಜುನ, ಪಾಂಡವರಲ್ಲಿ ವಿಶೇಷವಾಗಿ ಇವನಿಗೆ ಈ ಹೆಸರು ವರ್ತಿಸುವದು. 3. ಸ್ವಸ್ತಿ (ಪರಿಣಾಮ) ಇರಲಿ.

90. ಮತ್ತಿಲೆ ಮಹೀಪಾಲಶಾ[1]ರ್ದೂಲ! ನಿನಗಾಗ

and is kindly treated.

ಉತ್ತರೋತ್ತರಮೆಂದು ತನಗೆ ನೀಂ ಬೇಡಿದುದ
ನಿತ್ತಪೆ, ಮಹಾದಾನಿ ಯೆಂದು ಶಿಷ್ಯಂ ಪೆಱಸಿ ಬಂದೆನಾನೀಗ ನಿಂನಾ
ಉತ್ತಮಾಧ್ವರಶಾಲೆಗೆಂಬದ್ವಿಜನಂ ಕಂಡು
ಚಿತ್ತದೊಳ್ಬೆದರಿ ನೃಪನಿದಿರೆದ್ದು ಪದಕೆಱಗಿ
ದತ್ತಾರ್ಘ್ಯಪಾದ್ಯಾಸನಂಗಳಿಂದುಪಚರಿಸಿ ಕುಳ್ಳಿರಿಸುತಿಂತೆಂದನೂ

1. ಅರಸರಲ್ಲಿ ಹುಲಿಯಂತಿರುವವನು = ಶ್ರೇಷ್ಠ.

91. ಎಂದುಪರಿಯಂತ ದ್ವಿಜರ್ಗವಜ್ಞೆಯನೆಸಗ

The king's doubts regarding the blessing of this brahman.

ದಂದು ಪರಿಯಂತಮ್ಮೈಸ[1]ಲೆ ನರರಬಾಳ್ಕೆ; ನೀಂ
ಬಂದು ಪರಸಿದೊಡಾದುದಿಂದುತ್ತರೋತ್ತರಂ ತನಗೆ, ನಿಶ್ಚಯಮಿಳೆ
[ಯೊಳೂ
ಸಂಧಿಸದಜನದವಂದನೆಗೆ ಮೊದಲೇಸ್ವಸ್ತಿ
ಯೆಂದೊಡಾಭೂಸುರಂ ಪ್ರಿಯದೊಳಾಪ್ರಾಣಿಯಂ
ಕೊಂದನಲ್ಲದೆ, ಬೇರೆಶಾಪಮೇತಕೆ? ವಿಪ್ರ! ಪೇಳೆಂದೊಡಿಂತೆಂದ
[ನೂ

1. ನೆಟ್ಟಗದೆ.

92. ಪರಸಲಾ[1]ಗದು ನಮಸ್ಕಾರಕ್ಕೆ ಮುನ್ನಭೂಸು

The brahman's answer.

ರರನ್ಯರಂ; ತಂನಸಂಕಟನಿಮಿತ್ತದಿಂ
ದರಸಂಗೆಬಿಂನಪಂ ಗೈವನಾಶೀರ್ವಾದಮಂ ಮೊದಲೆ ಮಾಡದಿಹನೇ?
ಧರಣಿಪತಿ ವಂ[2]ದ್ಯನಲ್ಲವೆ? ದೋಷಮೇನಿದಕೆ?
ಪಿರಿದಾರ್ತನಾಗಿ ನಿಂನೆಡೆಗೆ ನಾ ಬಂದೆನ
ಧ್ವರಶಾಲೆಗೆಂದು ಕಪಟದ್ವಿಜಂ ನುಡಿಯಲ್ಕೆ, ನರನಾಥನಿಂತೆಂದನೂ.

1. ಭೂಸುರರ್ ಅನ್ಯರಂ ಪರಸಲಾಗದು ಎಂದು ಅನ್ವಯಿಸಬೇಕು. 2. ಬಂದಿಸಿಕೊಳ್ಳೆ ತಕ್ಕವನು.

93. ದ್ವಿಜತಿಲಕ: ನೀನನುಗ್ರಹಿಸೆನಗೆ ? ಧನ್ಯನಾಂ :

The king asks him what he wants.

ನಿಜಶಿಷ್ಯನಂ ಕೂಡಿಕೊಂಡು ಮಖಮಂಟಪಕೆ
ಬಿಜಯಮಾಡಿದ ಕಜ್ಜವಾವುದೇತರೊಳಾಶೆ ? ನಿನಗಾರ್ತಮೇನಿದ [ರೊಳೂ ?
ತ್ಯಜಿಸಬೇಡೊಂದನುಂ ಪೇಳ್ದೊಡಾನೀವೆನಾ
ರಜ[1]ಮಿಲ್ಲದೆಲ್ಲಮಂ ವಾಚಿಸೆಂದಾಶಿಖಿ[2]
ಧ್ವಜನಾಡಲಾವಿಪ್ರನಿಂತೆಂದು ತನ್ನ ವೃತ್ತಾಂತಮಂ ವಿರಚಿಸಿದನೂ.

1. ಒಂದನ್ನಾದರು ಬಿಡದೆ 2. ವ್ಯಾ. ಸೂ. ನವಲಿನಧ್ವಜನು = ಮಯೂರಧ್ವಜನು.

94. ಉರ್ವೀಂದ್ರ? ಕೇಳಾದೊಡಾಂ ಧರ್ಮಪುರದೊಳ್ಪ್

The brahman's story, a lion seized his

ಸರ್ಪಡದಿಹೆಂ, ಕೃಷ್ಣಶರ್ಮನೆಂದೆನಗೆ ಸುತ
ನೋರ್ವನುಂಟಾತನ ವಿವಾಹಕ್ಕೆ ತವಪುರೋಹಿತಸತ್ಯಶೀಲನಲ್ಲೀ
ಓರ್ವಕನ್ನಿಕೆ ಮದುವೆಗಿಹಳೆಂದೊಡಲ್ಲಿಗ
ಕ್ಕರ್ವಿರಸಿ ಮಗನೊಡೊಂಗೊಂಡು ಬರುತಿರ್ದೆಂ ಪ್ರೊ
ದರ್ವರಿದಡವಿಯು ಪಥದೊಳ್ಪಿಡಿದುದೊಂದು ಕೇಸರಿ ತನ್ನ ನಂದನ [ನನೂ.

95. ಆಸಿಂಗಮತಿಭರದೊಳೆರಗಲಾಭೀತಿಗೆ ನೃ

son on the way, and seeing his grief spoke

ಕೇ[1]ಸರಿಸ್ಮರಣೆಯುಂ ಬಿಡದೆ ನಾನಕಟ? ಹಾ
ಹಾ ಸೂನು? ಹಾ? ಯೆಂದು ಹಂಬಲಿಸಲದು ನನ್ನ ಘೋರನಖದಂಷ್ಟ್ರ [ದಿಂದಾ
ಘಾಸಿಮಾಡದೆ ಪುತ್ರನಂ ಪಿಡಿದುಕೊಂಡಟ್ಟ
ಹಾಸದಿಂ ಮಾನವರ ತೆರದಿಂದ ನುಡಿದುದೆಲೆ
ಭೂಸುರೋತ್ತಮ! ತನ್ನ ಮಾತನಾಲಿಸು: ಬರಿದೆ ಹಲುಬಲೇನಪ್ಪ [ದೆಂದೂ.

1. ನರಸಿಂಹ ಎಂಬ ವಿಷ್ಣುವಿನ ಅವತಾರ.

96. ಮಕ್ಕಳಿಲ್ಲದವರ್ಗೆ ಲೋಕಮಿಲ್ಲೆಂಬುದೇ

with him. ನಕ್ಕಜವೆ! ಅಖಿಳನಿಗಮಾರ್ಥಮಿದು ; ತನಗೀಗ

ಸಿಕ್ಕಿದನಲಾ ನಿಂನ ತನುಭವಂ! ಬಿಡಿಸಿಕೊಳಲಾರ್ಪರಾರಿನ್ನು ಬರಿ [ದೇ

ಕಕ್ಕುಲಿತೆ ಬೇಡ! ನಡೆ! ಶಿಷ್ಯನಂ ಕರಕೊಂಡು ;

ಮಿಕ್ಕ ಸುತರುಳ್ಳೊಡಾರೈವುದೆನೆ; ಮಗನ ಮೇ

ಲಕ್ಕರಾವರಿಸಿ ಕಡು ಶೋಕದಿಂದುಗ್ರಕೇಸರಿಗೆ ತಾನಿಂತೆಂದನೂ.

97. ಅತಿವೃದ್ಧನಲ್ಪದಿನಮಿರ್ಪವಂ ? ಪುತ್ರನ

The brahman offers himself but the lion refuses. ರ್ಜಿತನಿಂನು ತಾನಿರ್ದು ಮಾಳ್ಪುದೇನೆಂನನಾ

ಮತಿಗೊಂಡು ತನಗೆ ಗತಿ ಕೊಡುವಸುತನಂ ಬಿಡುವುದೆಂದು ನಾ [ಬೇಡಿಕೊಳಲೂ.

ಮೃತಿಯು ಬಯಸುವದುಃಖಿಗಾವಕಂಟಕಮಿಲ್ಲ;

ಹತವಹುದು ಸುಖದಿಂದ ಬಾಳ್ವಂಗೆ ಕಾಲಕ

ಲ್ಪಿತದಿಂದ; ದೊರಕಿದನಿವಂ; ನಿನ್ನನೊಲ್ಲೆನಾಂ ಪೋಗೆಂದು ಹರಿ [ನುಡಿದದೂ.

98. ಆ ನುಡಿಗೆ ನಡುಗಿ ತನಯನ ಮೇಲಣಾಶೆಯಿಂ

Lamentations of the brahman. ದಾನೆಂದೆನಾಸಿಂಹಕೆಲೆ ಮೃಗಾಧಿಪ! ತನ್ನ

ಸೂನುವಂ ಕಾವರಿಲ್ಲವೆ ಧರೆಯೊಳುಗ್ರತಪದಾನಧರ್ಮಂಗಳಿಂದಾ!

ಏನುಪಾಯಂ ಗೈಯ್ವೆನೆಂದು ಮರುಗಲ್ಕೆ, ಪಂ

ಚಾನನಂ ಬಳಿಕ ತನಗೊಂದಾಶೆಯುಂ ಕೊಟ್ಟು

ಭೂನಾಥ! ನಿಂನೆಡೆಗೆ ಕಳುಹಿದೊಡೆ, ಬಂದೆನೆನಲವನೀಶನಿಂತೆಂದ [ನೂ.

99. ವಿಪ್ರೇಂದ್ರ ! ಕೇಳಿನ್ನ ರಾಷ್ಟ್ರದೊಳ್ನರಸಿಂ

The lion advises him, to go to this king,

ಹಪ್ರವರ್ತಕಮಲ್ಲದೆಲ್ಲಿಯುಂ ಕ್ಷುದ್ರಸಿಂ
ಹಪ್ರಸಂ[1]ಗವನರಿಯೆನಿಂನೆಗಂ ನಿನ್ನ ಸುತನಂ ಪಿಡಿದಸಿಂಹಮುಂಟೇ?
ಅಪ್ರಸಿದ್ಧಪ್ರೋಕ್ತಮಿದು ! ಸಿಂಹಕೆಂನಿಂದ
ಹಪ್ರಯೋಜನಮದೇಂ ? ಮಾಜದಂಜದೆತನಗೆ
ಕ್ಷಿಪ್ರದಿಂಪೇಳೆಂದುಭೂವರಂ ಬೆಸಗೊಂಡೊಡಾಪಾರ್ವನಿಂತೆಂದನೂ

1. ನಂನ ದೇಶದಲ್ಲಿ ವಿಷ್ಣುವಿನ ಅವತಾರವಾದ ನಾರಸಿಂಹನ ವಿಗ್ರಹಗಳು ಪ್ರಸಿದ್ಧವಾಗಿರುತ್ತವಲ್ಲದೆ ಮಂದಿಯನ್ನು ತಿನ್ನುವ ಸಿಂಹಗಳು ಇಲ್ಲ.

100. ಎಂನೊಳಾಸಿಂಹಮಾಡಿದನುಡಿಯನೀಗಳಾಂ

and bring one half of his body.

ನಿಂನೊಳೆಂಬುದು ನೀತಿಯಾದಪುದೆ ? ಸುತಹೀನ
ಮಿಂನೇಸು ದಾರುಣಮೊ! ಪೇಳಬೇಕಾಗಿಹುದು ; ನೃಪ! ಕೇಳದರ [ಮಾತನೂ
ಮುಂನಮುದಿಗೂಡು, ತಪದಿಂದೊಣಗಿತಿದನೊಲ್ಲೆ
ನುಂನಿಸುವೆನಾರ್ಪಡೀವುದು ಯಜ್ಞದಿಂದ ಸಂ
ಪಂನಫಲತೃಪ್ತನಾಗಿಹಮಯೂರಧ್ವಜನ ಮೈಯ್ಯೊಳರ್ಧವನೆಂದು [ದೂ

101. ಈ ಮಗನಮೇಲೆ ನಿನಗಾಶೆಯುಳ್ಳೊಡೆ, ಬಿಡುವೆ

The brahman has his doubts

ನಾಮಯೂರಧ್ವಜನ ದೇಹಾರ್ಧಮಂ ಕೊಂಪು
ಬಾ! ಮಹೀಪಾಲನಲ್ಲಿಗೆ ಪೋಗು ! ಕೊಲ್ಲೆನಾನಂನೆಗಂ ; ನಡೆ ! ಯೆ [ನಲ್ಕೇ
ಭೂವಿಳಾಸನಿತ್ತಪನೆ ತನ್ನ ತನುಭಾಗಮಂ ?
ಭ್ರಾಮಕಮಿದೆಂದು ಜರಿದಾಂ ತಿರಸ್ಕರಿಸೆ, ಮ
ತ್ತೀಮಾತನಾಡಿದುದು ತನ್ನೊಳಾಕೇಸರಿ ; ನರೇಂದ್ರ ! ಕೇಳ್ಕೌತು [ಕವನೂ!

F

102. ಎಲೆ ಮರುಳೆ! ವಿಪ್ರ! ಪರಪುರುಷಾರ್ಥಕೆಳಸುವಂ

regarding this; but the lion removes them. ನೆಲದ ಮೇಲಣ ಬಾಳ್ಕೆಯುಂ ನಿಜಶರೀರಮುಂ

ನೆಲೆ ಯೆಂದು ನೋಡುವನೆ! ಕವಚಮಂ ಕರ್ಣಂ[1] ದಧೀಚಿ[2] ತನ್ನ

[ಸ್ಥಿಗಳನೂ

ಒಲಿದಿತ್ತು ಕೀರ್ತಿಯಂ ತಳೆದುದಿಲ್ಲವೆ! ನಿನ್ನ

ಕುಲಮುಳಿಯ ಬೇಕೆಂದು ಪೋಗಿ ನೀಂ ಬೇಡಿದೊಡೆ,

ಸಲೆಕರುಣದಿಂದಾನೃಪಂ ಕಾಯಮಂ ಕೊಯ್ದು ಕೊಡದಿರಂ;

[ಪೋಗೆಂದುದೂ.

1. ಬ್ರಾಹ್ಮಣವೇಷ ಹಾಕಿಕೊಂಡು ದಾನ ಬೇಡ ತನ್ನ ಕಡೆಗೆ ಬಂದ ಕೃಷ್ಣನಿಗೆ ಬಾಣ ತಾಕದ ಕವಚವನ್ನು ಕೊಟ್ಟನು. (ಮಹಾಭಾರತ, ಕರ್ಣಪರ್ವ) 2. ಒಬ್ಬ ರಾಕ್ಷಸನಿಂದ ಉಪದ್ರ ಪಡುತ್ತಿದ್ದ ದೇವತೆಗಳು ಈ ಋಷಿಯ ಹತ್ತರ ಬಂದು ಆ ವೈರಿಯನ್ನು ಹೊಡೆಯ ಸಾಮರ್ಥ್ಯವುಳ್ಳ ವಜ್ರಾಯುಧ ಮಾಡುವದಕ್ಕೆ ಅವನ ಅಸ್ಥಿಗಳನ್ನು ಬೇಡಿದರು.

103. ಕೇಳ್ದನವನೀಶ್ವರಂ ಪ್ರಥಂನಭೂಸುರಂ

The king assents, to offer one half ಪೇಳ್ದ ವೃತ್ತಾಂತಮಂ, ಕೀರ್ತಿ ನಿಲುವದು ; ನರರ

ಬಾಳ್ದಿಟಮಿದಲ್ಲೆಂದು ನಿಶ್ಚೈಸಿ ವಿಪ್ರನಂ ಕರೆದು ನಿನಗೀತನುವನೂ

ಸೀಳ್ದು ಕೊಟ್ಟಪೆನೆಂದಭಯನಿತ್ತು ಬಳಿಕ ತಾ

ನಾಳ್ದಿಳೆಯನಾತ್ಮಜಂಗೊಪ್ಪಿಸಿಯು ಹರುಷಮಂ

ತಾಳ್ದಿಸಿಬರೆಲ್ಲರಂ ಮಂಟಪದೊಳಿಹುದೆಂದು ಕುಳ್ಳಿರಿಸಿ ಪೊರಮಟ್ಟ

[ನೂ.

104. ತರಿಸಿ ಗಂಗಾತೋಯದೊಳ್ಮಜ್ಜನಂ ಗೈದು

of his body to the lion. ಪರಮಸಾಲಗ್ರಾಮ[1]ತೀರ್ಥಮಂ ಕೈಕೊಂಡು

ತರುಣತುಲಸಿಯಮಾಲೆಯಂ ಕಂಧರದೊಳಾಂತು ಯಾಗಮಂಟಪ

[ಕೆ ಬಂದೂ.

1. ಜಲಂಧರಾಸುರನ ಹೆಂಡತಿಯಾದ ಬೃಂದೆಯು ತನ್ನ ಪಾತಿವ್ರತ್ಯ ಕೆಡಿಸಿದನೆಂದು ವಿಷ್ಣುವಿಗೆ ಶಾಪಕೊಟ್ಟ ಕಾರಣ ಅವನು ಸಾಲಗ್ರಾಮ ಎಂಬ ಕಲ್ಲಾದನು. ಈ ಶಾಪದ ಸಿಟ್ಟಿನಿಂದ ಅವನು ಆಕೆಗೆ ಗಿಡವಾಗಿ ಹುಟ್ಟೆಂದು ಶಪಿಸಿದನು.

ನೆರೆದ ಭೂಸುರಸಭೆಗೆ ಸಾಷ್ಟಾಂಗದಿಂದೆಱಗಿ
ಕರಯುಗಳಮಂ ಮುಗಿದು ನಿಂದು ಬಿಂನೈಸಿದಂ
ಧರಣೀಶ್ವರಾಗ್ರಣಿ ಮಯೂರಧ್ವಜಂ; ಜನಾಧೀಶ! ಕೇಳ್ಕೌತುಕ
[ವನೂ !

105. ಈ ಮಹಾಸ್ಥಾನದೊಳ್ನೆರೆದಖಿಳಭೂಸುರ
ಸ್ತೋಮಮಂ ನಿರೀಕ್ಷಿಸುವುದಂದು ಬಲಿಯ[1]ಧ್ವರಕೆ
ವಾಮನಂ ಬಂದಂತೆ, ತನ್ನ ಮಖಕೀದ್ವಿಜಂ ತಾನೆ ಬಿಜಯಂಗೈದ
[ನೂ

ಶ್ರೀಮಾ[2]ಧವಸ್ವರೂಪದೊಳದಱಿನೀಗ ತಂ
ನೀಮೈಯೊಳರ್ಧಮಂ ಕೊಯ್ದು ಕೊಟ್ಟಪೆನತಿ
ಪ್ರೇಮದಿಂದೀತಂಗೆ ಬದುಕಲೀತನ ಸುತಂ! ಪೊಸತಾಗಲಿಳೆಗೆಂದ
[ನೂ

and is not shaken

1. ಬಲಿ ಎಂಬ ಚಕ್ರವರ್ತಿ ಇಂದ್ರ ಪದವಿ ಪಡೆಯಬೇಕೆಂತ ಶತಾಶ್ವಮೇಧ ಮಾಡು ವಾಗ್ಯೆ, ವಿಷ್ಣು ವಾಮನಾವತಾರವಾಗಿ ಬಂದು ಮೂರು ಪಾದ ಭೂಮಿಯನ್ನು ಬೇಡಿದನು; ಬಲಿ ಇವನಿಗೆ ಭೂಮಿಯನ್ನು ಅಳೆದು ಕೊಡು ಎಂದಾಗ್ಯೆ, ತನ್ನ ಮೂರು ಹೆಜ್ಜೆಗಳಿಗೆ ಮೂರು ಲೋಕ ಸಾಲದಂಥಾ ತ್ರಿವಿಕ್ರಮ ರೂಪವನ್ನು ವಾಮನನು ಧರಿಸಿದ್ದರಿಂದ, ಆ ಬಲಿ ಕೊಡಲಾರದ ಹಾಗಾಗಿ ಸೋತನು 2. ಮಾಧವ=ಲಕ್ಷ್ಮೀ ಗಂಡನು=ವಿಷ್ಣು.

106. ಭೂನಾಥನೆಂದ ಮಾತಂ ಕೇಳ್ದು ಸಕಲ ಪ್ರ
ಧಾನಿಗಳುಮರಸನ ಪುರೋಹಿತಮಹಾದ್ವಿಜರಿ
ದೇನಿದೆತ್ತಣಕೃತ್ಯಮೀವಿಪ್ರನಂತಕೋಪ[1]ಮನೆಂದು ಭೀತಿಯಿಂದಾ
ದಾನಮೆಂದೊಡೆ, ರಾಜ್ಯಲಕ್ಷ್ಮೀಧನಕನಕಮಣಿ
ಧೇನುಗಳನೀವರೀಕಾಯಮಂ ಕೊಯ್ದುಕೊಡು
ವೀನಿಮಿತ್ತವನಱಿಯೆವೆಂದೆಲ್ಲರುಂ ಕಂಪಿಸಲ್ನೃಪತಿ ಯಿಂತೆಂದನೂ:

in his resolution by the lamentations of his people.

1. ಯಮನಿಗೆ ಸಮಾನವಾದವನು.

107. ಯಾಚಿಸಿದನಂಗವಂ, ಸುತನನುಳುಹೆಂದೆನಗೆ
ಸೂಚಿಸಿದನೀವಿಪ್ರ ; ತಾಂ ಕೊಡುವೆನೆಂದೊಡನೆ
ವಾಚಿಸಿದೆನಿಂತಿದಕೆ ತಪ್ಪಿದೊಡೆ, ಲೋಕದೊಳ್ತನ್ನಂಸಮಸ್ತಜನ [ರೂ
ನಾಚಿಸದೆ ಮಾಣ್ದಪರೆ ! ಪುಸಿದೊಡಂತಕನವ
ರ್ಪಾಚಿಸರೆ ನರಕದೊಳ್ವೈಯನರಿದೀಯ್ಯಲಾ
ಳೋಚಿಸಲದೇಕಿನ್ನು ? ತೊಲಗಿ ನೀವೆಂದು ನೃಪನನಿಬರಂಸ್ಸೈಪಿ [ಟ್ಟನೂ.

108. ಆಮಯೂರಧ್ವಜಂ ಬಳಿಕಲ್ಲಿ ವಿಪ್ರರ್ಗೆ
ಹೇಮಮಣಿಗಜತುರಗವಸ್ತ್ರಭೂಷಣಧೇನು
ಭೂಮಿದಾನಂಗಳಂ ದಣಿಸಿನೆಡಿಸಿ ದನೆರಡು ಕಂಬಮಂ; ನಡುವೆತನ್ನಾ
ಕೋಮಲಶರೀರಮಂ ಪೊಗಿಸಿ ಕಾಂಚನಮಯಸು
ದಾಮದಿಂ ತೋಳ್ತೊಡೆಗಳಂ ಬಿಗಿಸಿಕೊಂಡು ನಿಂ
ದಾಮಹೀಸುರನ ಪದಕಮಲಂಗಳಂ ತೊಳೆದು ಸಾದರದೊಳಿಂತೆಂದ [ನೂ

109. ಭೂಸುರೋತ್ತಮ! ನಿನಗೆ ತಾಂ ಕೊಡುವದೇಹಾರ್ಧ
The king calls the butchers.
ಮೀಸುದಾನದೊಳಧಿಕ ; ಯಜ್ಞನಾಯಕನಾದ
ವಾಸುದೇವಂ ಪ್ರೀತನಾಗೆಲಸ್ಮತ್ಕುಲೋದ್ಭವರಾದ[1] ಜೀವಿಗಳೊಳೂ
ಲೇಸಿಂದ ಪಾರ್ವರ್ಗೆ ತನುಧನವನೀವೆಡೆಯೊ
ಳೋಸರಿಸದಿರಲಿ ಬುದ್ಧಿಗಳೆಂದು ನೃಪತಿ ಕ
ಟ್ಟಾಸುರದ ಕೊಯ್ಗಾರರಂ ಕರೆಸಿ ತೆಗೆಸಿದಂ ಮಸದ ಕೈಗತ್ತಿಗಳನೂ

1. ನಂಮ ಕುಲದಲ್ಲಿ ಹುಟ್ಟಿದವರು.

110. ಕೊಡುವನಿರೆ, ತನಗೆ ಬೇಕಾದುದಂ ಬೇಡುವಂ
Lamentations ಬಿಡುವನೇ? ಬೇಡುವಂ ಬರೆ, ತಂನೊಳಿರ್ದುದಂ
ತಡದಪನೆ ಕೊಡುವವಂ? ಕೊಡುವಬೇಡುವರೊಳಗೆ ಕೊಡೆನೆಂಬ [ಬೇಡನೆಂಬಾ
ಎಡೆತಡೆಗಳಿಲ್ಲೆಂಬ ನಾಣ್ನುಡಿಯನೀ ಪಾರ್ವ
ಪೊಡವೀಶರೊಳ್ಕಂಡೆನೆಂದು ನಡನಡುಗಿ ಮೊರೆ
ಇಡುತಿರ್ದುದವನ ರಾಷ್ಟ್ರದ ಜನಂ ಬೆದರಿ ಕೂಡಿದ ಗಣಂಗಳ ತೆರ [ದೊಳೂ

111. ಪೂರ್ವಮಂ ನೆನದು ಕಂಬನಿಗಳಿಂ ಧ್ವನಿಗಳಿಂ
of his subjects. ಜೀರ್ವರಂ ಪ್ರಜೆಗಳಂ ಪಾಲಿಸದೆ, ಲಾಲಿಸದೆ
ಜಾರ್ವಪರಿಯೆಂತೆಂದಳಲ್ವರ ಬಳಲ್ವರಂ, ಬೆರಗಾಗಿ ಬೆಗಡುಗೊಂ [ಡೂ,
ಸಾರ್ವಭೌಮಕ[1]! ನಿಂನ ರಕ್ಷೆಯಂ ಶಿಕ್ಷೆಯಂ
ಮಿಾರ್ವರಿಲ್ಲೆಂಮ ನೀಂ ಬಿಡುವರೇ? ಕೊಡುವರೇ
ಪಾರ್ವಂಗಸುವನೆಂದು ಬೈಯ್ವರಂ ಸೂಯ್ವರಂ ನೋಡಿ ನೃಪಸಿಂ [ತೆಂದನೂ

1. ಸರ್ವ ಭೂಮಿಯನ್ನು ಆಳುವಾತ.

112 ಪ್ರಜೆಗಳಿರ! ನೀವಿದಕೆ ದುಃಖಿಪರೆ? ಧನ್ಯನಾಂ
The king appeases them. ನಿಜಶರೀರದೊಳರ್ಧಮಂ ಕೊಯ್ದು ಕೊಡುವೆನೀ
ದ್ವಿಜನ ಹಸ್ತದೊಳವಂ ನೃಹರಿ ಯೆಂದೀತನಡವಿಯ ಸಿಂಹಕೀಯ [ಲಿದನೂ
ಗಜಬಜವಿದೇಕೆಲೆ? ಪರೋಪಕೃತಿಗಲ್ಲದ ಮ
ನುಜನ ಬಾಳ್ ಸಣಬುರಿದ ಬೂದಿಯಂತಪ್ಪುದಾ
ರಜಮಿಲ್ಲದೀಕ್ಷಿಪುದು ಕೌತುಕವನೆಂದೊಡಂಬಡಿಸಿದಂ ನರನಾಥನೂ

113\. ಮತ್ತೆಮನುಜೇಂದ್ರನಾವಿಪ್ರನಂ ಕರೆದು ನಿನ
ಗಿತ್ತೆನೀದೇಹಾರ್ಧಮಂ ಪರಿಗ್ರಹಿಸೆಂದು
ಚಿತ್ತದೊಳ್ಮಿಗೆ ಹರುಷಮಂ ತಾಳ್ದು ಪೊರೆಯೊಳಿಹ ಸೂದಕರ್ಮ [ಜ್ಞರೊಡನೇ
ಪೊತ್ತು ಗಳಿಯದೆ ತನ್ನ ತನುವನೆರಡಾಗಿ ಮುಸಿ
ವೆತ್ತ[1] ಕರಪತ್ರದಿಂ ಸೀಳ್ವುದೆಂದಾಜ್ಞಾಪಿ
The queen — ಸುತ್ತಿರೆ, ಶಿಖಿಧ್ವಜನ ಸತಿಕುಮುದ್ವತಿ ನುಡಿದಳತಿವಿನಯದಿಂದ ಪತಿ [ಗೇ :

1\. ವೆತ್ತ=ತಾಳಿದ ವ್ಯಾ. ಸೂ.

114\. ನೀಂ ತಿಳಿದುದಿಲ್ಲರಸ! ವಿಪ್ರೇಂದ್ರನರಿಯಂ ವ
comes forward, to offer herself as his other half; — ನಾಂತರದೊಳಾಸಿಂಹವೆಂದನುಡಿ, ಶಾಸ್ತ್ರಸಿ
ದ್ಧಾಂತಮಂಗನೆ ಪುರುಷನರ್ಧಾಂಗಮೆಂಬುದಕೆ, ನಿನ್ನ ವಾಮಾಂಗಿ[1] [ಯಾದಾ
ಕಾಂತೆಯಂ ಬೇಡಿಪಡೆ, ಕೊಯ್ದು ಕಾಯುವನೀವ
ಭ್ರಾಂತಿ ಯಾತಕೆ? ತನ್ನನಸುವೆರಸಿಕೊಟ್ಟು ಕಳೆ
ತಾಂ ತಳವೆನ್ನೈದೆತನದಿಂದ ಸದ್ಗತಿ[2]ಯನೆಂದಾಕುಮುದ್ವತಿ ನುಡಿದಳೂ

1\. ಹೆಂಡತಿ; ದಂಪತಿಗಳು ಕೂಡಿ ಒಂದೇ ದೇಹವಾದ ಹಾಗಾಯಿತು ಇದರಲ್ಲಿ ಬಲದ ಭಾಗವೇ ಗಂಡ, ಎಡಭಾಗವೇ ಹೆಂಡತಿ. 2. ಸದ್ಗತಿಯು ತಳವೆನೆಂಬನ್ವಯ.

115\. ಸಂಮತಮಿದಹುದೆಂದರೆಲ್ಲರುಂ; ಭೂವರಂ
but the lion wants the right half — ಸುಮ್ಮನಿರೆ, ಕಂಡನೀತೆರನಂ ದ್ವಿಜೋತ್ತಮಂ,
ನೆಮ್ಮದೆ ಮುಕುಂದನೆಲೆ ರಾಯ! ನಿಂನರಸಿ ನುಡಿದುತ್ತರವನೊಪ್ಪ [ಬಹುದೂ

ಸಂಮಾನದಿಂ ಜನೇಶ್ವರನ ದಕ್ಷಿಣಭಾಗ
ಮಂ ಮೆಚ್ಚಿಸೆಂದು ಪ್ರೋಕ್ಷಣಿಸಿತಲ್ಲದೆ ಸಿಂಹ
ವೆಂದೊಡನೆ ವಾಮಾಂಗವೆಂದಾಡಿತೆನಲ್ನೃಪನ ಸುತನಿಂತೆಂದ [ನೂ

116. ಕರುಣಿಸೆಲೆ ವಿಪ್ರ! ನಿನ್ನಂ ಬೇಡಿಕೊಂಬೆನಾಂ
The son offers himself to save his father, ತರುಣಂ, ಸುಪುಷ್ಟಿವಪು; ತುಷ್ಟಿ ಮೃಗಪತಿಗಾಗ[1]
ದಿರದು; ತಾತನ ಋಣತ್ರಯಕೆ[2] ಹರಿವಹುದು; ರಾಘವಭೀಷ್ಮರಂ[3] [ತೆ ಕೀರ್ತಿ
ಸ್ಥಿರವಹುದು, ಪಿತನ ಭಾಷೆಗೆ ನಿಲಲ್ಜನಕನವ
ತರಿಪನಾತ್ಮಜನಾಗಿ; ತಂದೆಮಕ್ಕಳ್ಗೆ ಪೆರೊ
ಳೆರವಿಲ್ಲ; ತನ್ನಂಗಮಂ ತೆಗೆದುಕೊಳ್ಳೆಂದು ತಾಮ್ರಧ್ವಜಂ ನುಡಿದ [ನೂ.

1. ಮೃಗಪತಿಗೆ ತುಷ್ಟಿ ಆಗದಿರದು ಎಂದು ಅನ್ವಯಿಸಬೇಕು. 2. ಮನೋವಾಕ್ಕಾಯಗಳಿಗೆ ಸಂಬಂಧವಾದದ್ದು; ಮನಸ್ಸಿನಲ್ಲಿ ಕೊಡಬೇಕೆಂದು ನೆನಸಿದ್ದು, ಕೊಡುತ್ತೇನೆಂದು, ವಚನ ಕೊಟ್ಟದ್ದು, ಕೈಲಿ ಈಸುಕೊಂಡದ್ದು. 3. ಶಾಂತರಾಯನಿಗೆ ಗಂಗೆಯಿಂದ ಹುಟ್ಟಿದ ಮಗನು, ತಾನು ಲಗ್ನವಾಗುವದು ಬಿಟ್ಟು ತಂದೆಗಿಷ್ಟವಾದ ಮತ್ಸ್ಯಗಂಧಿಯನ್ನು ಮದಿವೆ ಮಾಡಿಕೊಟ್ಟು ಕೀರ್ತಿಗೊಂಡನು.

117. ಭೂಪಾಲ! ಕೇಳವನ ಮಾತಿಗೆ ಮಹೀಸುರಂ
but is not accepted. ಕಾಪಟ್ಯಮಿಲ್ಲಲೆ ಕುಮಾರ! ನೀನೆಂದ ನುಡಿ
ಪಾಪಿಕೇಸರಿ ತನ್ನೊಳವನಿಪನ ಸತಿಯೆಂದು ಸುತನೆಂದು ಪೇಳ್ದ [ದಿಲ್ಲಾ;
ಆಪಡೆ, ಮಯೂರಧ್ವಜನ ದಕ್ಷಿಣಾಂಗಮಂ
ತಾ! ಪುತ್ರನಂ ಬಿಡುವೆನೆಂದಡಿಲ್ಲಿಗೆ ಬಂದೆ
ನೀಪರಿಯೊಳಳುಕುವರೆ, ಕೊಡಬೇಡ! ಪೋಪೆನೆನೆ, ನರನಾಥನಿಂ [ತೆಂದನೂ.

118. ರಾಣಿಯುಂ ಕೊಡುವದಿಲ್ಲಾತ್ಮಜನನೀವುದಿ
ಲ್ಲೂಣೆಯುಂ ತನ್ನ ಭಾಷೆಗೆ ಬಾರದಂತಬ್ಜ[1]
ಪಾಣಿ ಮೆಚ್ಚುವೊಲರ್ಧದೇಹಮಂ ಕೊಯ್ದುಕೊಟ್ಟಪೆನೀಗ ಸೈರಿ
[ಸೆನುತಾ.
ಸಾಣೆವಿಡಿದಿರ್ದ ಕರಪತ್ರಮಂ ಕೊಡಿಸಿದಂ
ಪ್ರಾಣನಾಥೆ[2]ಯ ಕೈಯ್ಯೊಳುನ್ನತ್ತಮಾಂಗ[3]ಮಂ
ಕೇಣಮಿಲ್ಲದೆ ತನುಜನಂ ಕೂಡಿಕೊಂಡು ನೀಂ ಸೀಳೆಂದು ನೇಮಿಸಿ
[ದನೂ

The queen and her son divide the king with a saw.

1. ಶಂಖ ಹಿಡಿದವನು=ಕೃಷ್ಣ. 2. ಹೆಂಡತಿ. 3. ಮೇಲಣ ಅವಯವ=ತಲೆ.

119. ಆ ಮಹೀಪಾಲನೀತೆರದೊಳ್ಕುಮುದ್ವತಿಗೆ
ನೇಮಿಸೆ, ಕುಮಾರನಂ ಕೂಡಿಕೊಂಡವಳತಿ
ಪ್ರೇಮದಿಂ ಕರಪತ್ರಮಂ ಕೊಂಡು ಮುನ್ನ ದೈತ್ಯನನಿಂತು ಸೀಳ್ದ
[ನೆಂದೂ
ಆ ಮಹಾಸಭೆ ನಾರಸಿಂಹನಂ ನೆನೆವಂತೆ,
ರಾಮ ರಾಮೆಂದು ಜಪಿಸುತ ಕೊಯ್ದಳವನಿಪಶಿ
ರೋಮಣಿಯ ಮಸ್ತಕವನೆರಡಾಗಿ ಸರಿಸದಿಂದೋರೆಪೋರೆಗಳಿಲ್ಲದೇ
ಸ್ತಂಭದ್ವಯದ ನಡುವೆ ನಿಂದ ನೃಪನಂ ತನ್ನ

120. ಸಂಭವಂ ಮಡದಿ ಪಿಡಿದೊಬ್ಬರೊಂದೊಂದು ಕಡೆ
ಯಿಂ ಭಾಳಮಧ್ಯಮಂ ತೀಕ್ಷ್ಣಕರಪತ್ರದಿಂ ಘರಿಘರಿನೆ ಸೀಳುತಿರ
[ಲೂ;
ಜಂಭ[1]ರಿಪುನಂದನಮುರಾರಿಗಳ್ಬೆರಗಾದ
ರಂಭೋಧಿಘೋಷದಿಂದೆದ್ದ ಹಾಹಾಕಾರ
ದಿಂ ಭಯಂಗೊಂಡೊರಲುತಿರ್ದುದಾಸ್ಥಾನದೊಳ್ ಭೂಪ! ಕೇಳ್ಕೌ
[ತುಕವನೂ.

1. ಜಂಭ ಎಂಬ ರಾಕ್ಷಸನನ್ನು ಕೊಂದವನು=ಇಂದ್ರ; ಇಂದ್ರನ ಮಗನು=ಅರ್ಜುನ.

121. ಪೆಂಡತಿಯೊಳಾತ್ಮಜನೊಳರಸನೊರ್ಮೆಗೆ ನೋಡಿ

[illegible] are vi-[illegible] the left [illegible] the king.

ಕಂಡುದಿಲ್ಲೊಂದಿನಿಸು ಖಿಯುಖೋಡಿಯುಂ; ಬಳಿಕ
ಪುಂಡರೀಕಾಂಬಕಂ ನೃಪನ ವಾಮನಾಕ್ಷಿಯೊಳ್ಕಂಬನಿಗಳೊಸರುತಿರ [ಲೂ,
ಅಂಡಲೆದಡಳುತಳುತ ಕೊಡುವವನ ದಾನಮಂ
ಕೊಂಡಪರೆ ಬುಧರಕಟ ಲೋಕದೊಳ್ಬೀಡುವಂ
ಭಂಡನೆನುತೊಡೆಮುರಿದು ತಿರುಗಿದಂ, ತನಯುನಂ ತಿನಲಿ ಹರಿ ಬನ [ದೊಳೆನುತಾ.

122. ಬೆರಗಾದಳಾ ಕುಮುದ್ವತಿ ನುಡಿದಳರಸಂಗೆ.

The brahman refuses a gift, which is given with tears;

ಬರಿದೆ ಕೊಯಿಸಿದೆ ನಿನ್ನ ಮಸ್ತಕವನೆಡಗಂಣೊ
ಳೊರವ ಕಂಬನಿಗಳಂ ಕಂಡಾದ್ವಿಜೋತ್ತಮಂ ನೀನಳುತ ಕೊಡು [ವೆ ಯೆಂದೂ
ಪೊರಮಟ್ಟು ಪೋದನಲ್ಲದೆ; ವಿಫಲಮಾದುದ
ಕ್ಕೆರೊಳಿತ್ತೆ ದಾನ[illegible]ಲೆಂತೆನಲ್ಭೂವರಂ
ಮರುಗಿ ಕರಸಾತನಂ! ತಿಳುಪುವೆಂ, ಪೋಳ್ಗಳೆರಡಂ ಕೂಡಿ ಬಿಡಿ [illegible]

123. ಬಳಿಕಾ ಕುಮುದ್ವತಿ ನರೇಂದ್ರಮಸ್ತಕದ ಪೋ

The king's explanations satisfy him.

ಳ್ಗಳನೊಂದು ಗೂಡಿ ಪಿಡಿದಾಗ, ನಿಜತನಯುನಂ
ಕಳುಹಲವನಾಪ[illegible]ನಂ ತಡಮೊಡಂಬಡಿಸಿ ವಿನಯುದಿಂ ಕರೆತರೆ [ಲ್ಕೇ,
ತಿಳುಪಿದಂ ಭೂಪನೆಲೆ ವಿಪ್ರ! ಕರಪತ್ರಹತಿ
ಗಳುಕಿ ದಿಲ್ಲುಪಕಾರಕಾಯ್ತು ದಕ್ಷಿಣಭಾಗ
ಮುಳಿದುದು ನಿರರ್ಥಕಕೆ ವಾಮಾಂಗಮೆಂದೊಸರಿತೆಡಗಂಣಜಲ [ಮೆಂದನೂ.

124. ಮೆಚ್ಚಿದಂ ನೃಪನಂದ ಮಾತಿಗೆ ಮುರಧ್ವಂಸಿ ;
ಹೆಚ್ಚಿರ್ದ ರಾಯನ ಕಳೇವರದ ಪೋಳ್ಗಳಂ
ಬೆಚ್ಚು[1] ಕಾರುಣ್ಯದಿಂ ಮೈದಡವಿ ತಕ್ಕೈಸಿ ನಿನ್ನಂ ಪರೀಕ್ಷಿಸಿದೆನೊ,
ನಿಚ್ಚಟದ ಚಿತ್ತಮಂ ಕಂಡೆನಿವನರ್ಜುನಂ ;
ಮುಚ್ಚುಮರೆ ಯೇಕಿನ್ನು ? ತಾನೀಗ ಕೃಷ್ಣನೆಂ
ದೆಚ್ಚರಿಸಿ ನಿಗಮದೆರಿಕೆಯ[2] ತನ್ನ ಸಾಕಾರಮೂರ್ತಿಯಂ ತೋರಿಸಿ [ದನೊ.

Krishna pleased with the king, makes him whole.

1. ಬೆಸ ಎಂಬ ಧಾತುವಿನ ಕ್ರಿಯಾನ್ಯೂನ. ವ್ಯಾ. ಸೂ. 2. ವೇದಗಳಿಗೂ ತಿಳಿಯದಂಥಾದ್ದು ; ದೇವರು ವೇದಾತೀತನೇ.

125. ಸುರನದಿಯು ತೋಯಮಿರೆ, ನೀರಡಸಿ ಹಿಮಜಲಕೆ
ಪರಿವಂತೆ, ನಿನ್ನ ದರುಶನಮಿರ್ದುಮೀಮಹಾ
ಧ್ವರಕೆಳಸುವವನಲ್ಲ; ತನ್ನನುಂ, ತನ್ನ ಸತಿಸುತರನುಂ, ತನ್ನೊಳಿ [ರ್ದ
ತುರಗಂಗಳಂ, ತನ್ನ ಯಜ್ಞಮಂ, ಯಜ್ಞೋಪ
ಕರಣಂಗಳಂ, ತನ್ನ ರಾಜ್ಯಮಂ, ತನ್ನ ಮಂ
ದಿರದ ಸರ್ವಸ್ವಮಂ, ನಿನ್ನ ಪದಕರ್ಪಿಸಿದೆನೆಂದವಂ ಕೈಮುಗಿದ [ನೊ.

The king gives his horses and proceeds with Krishna.

126. ಇಂತೆಂದು ಭೂವರಂ ನುಡಿಯೆ, ಹರುಷಿತನಾಗಿ
ಕುಂತೀಸುತಂಗವನ ಭಕ್ತಿಯಂ ತೋರಿಸುತ
ನಂತರದೊಳಾನೃಪನ ನಗರದೊಳ್ಮೂರು ದಿನಮಿರ್ದು ನಿಜಸೇನೆ ಬ [ರಲೊ,

ದಂತಿ[1]ಪುರಕಲ್ಲಿಯು ಸಮಸ್ತವಸ್ತುಗಳೈದು
ವಂತೆ, ನೇಮಿಸಿ ಮಯೂರಧ್ವಜಂ ಸಹಿತ ನಡೆ
ದಂ ತುರಗವೆರಡನುಂ ಬಿಡಿಸಿ ಮುಂದಕೆ ದೇವಪುರದ ಲಕ್ಷ್ಮೀಕಾಂ
[ತನೂ.

1. ಹಸ್ತಿನಾವತಿ (ದಂತಿ=ಕೋರೆಯುಳ್ಳದ್ದು=ಆನೆ.)

THE STORY OF THE KING CHANDRAHASA.

4. ಚಂದ್ರಹಾಸನ ಕಥೆ. (28—32. ಸಂಧಿ.)

Arjoona and Krishna proceed further.

127. ಭೂಮಿಪತಿ! ಕೇಳ್ಬಳಿಕ ಸಾರಾಷ್ಟ್ರದಿಂದ ಸು
ತ್ರಾ[1]ಮಸುತನಸುರಾರಿಸಹಿತ ಕುದುರೆಗಳ ಕೂ
ಡಾಮಹಾನದವನುತ್ತರಿಸಿ ನಡೆತರುತಿರ್ದನಾಪಥದೊಳೈಕಿಲಿಂದಾ
ಹೇಮಂತಶ್ಶೈಶಿರದ ವಾಗಿ ಮಡಲಿಡೆ, ತರಣಿ
ಸೋಮನಂತಿರೆ, ಬಿಸಿಲ್ಬೆಳದಿಂಗಳೋಲಾಗೆ,
ತಾಮರಸರಾಜಿನಸಿದವು, ಕೂಡೆ ಕುಗ್ಗಿದವು ಕೋಗಿಲೆಯ ಕೊರ
[ಧ್ವನಿಗಳೂ.

1. ಅರ್ಜುನ (ಸುತ್ರಾಮ=ಇಂದ್ರ.)

The two sacrificial horses go astray, and are no where

128. ಉರ್ವೀಶ! ಕೇಳ್ಬಳಿಕ ಸೇನಾಸಮಗ್ರದಿಂ
ಗೀರ್ವಾಣಪತಿ[1]ನಂದನಂ ಬಹಳ ದೇಶವನ
ಪರ್ವತನದೀನದಂ[2]ಗಳನುತ್ತರಿಸಿ ಕುದುರೆಗಳ ಹಿಂದುಗೊಂಡು ಬರ
[ಲು,

1. ದೇವತೆಗಳ ಒಡೆಯನ ಮಗನು=ಅರ್ಜುನ. 2. ನದಿ=ಸ್ತ್ರೀಗೆ ಸಮಾನವಾದ ಹೊಳೆ, ನದ=ಪುರುಷನಿಗೆ ಸಮಾನವಾದ ಹೊಳೆ.

ತವಾರ್ಗಯದೊಳು [illegible]ವನಿಲಜವೆಡಿಂ ಪಡೆಯೊ [illegible]
ಳೋರ್ವರುಮರಿಯದಂತೆ, ಕುಂತಳಪುರಕ್ಕೆ[3]; ಬಲ[illegible]
ಗರ್ವಿತಂ ಚಂದ್ರಹಾಸಾಖ್ಯನರಸಲ್ಲಿಗವನಾಹರಿಗಳಂ ತಡ[illegible]

3. ಕುಂತಳ ಮಂಡಲವು ಈಗಿನ ಕರ್ನಾಟಕ ದೇಶದಲ್ಲಿ ಇತ್ತೆಂದು ತೋ[illegible]ರೆ. ರಾಮಾಯಣದ ೪೬ನೇ ಸಂಧಿಯಲ್ಲಿ ಹೇಳಿದ ಮಾತಿನ ಪ್ರಕಾರ ಪಂಪಾಕ್ಷೇತ್ರವೂ ತುಂಗ[illegible]ದ್ರೆನದಿಯೂ ಕುಂತಳ ದೇಶದಲ್ಲಿ ಅದೆ; ಕುಂತಳಪುರ ಈಗಿನ ಬಳ್ಳಾರಿ ಅಂತೆ [illegible]ನ್ನುತ್ತಾರೆ.

129. ಬೆಂಗಾವಲಾಗಿರ್ದ ಪಟುಭಟವಿರ್ಗಾರಿದ ತು
ರಂಗಯುಗಮಂ ಕಾಣದೈತಂದು ಸಿತವಾಹ[1]
ನಂಗೆ ಬಿಂನೈಸಿದರ್ಜೀಯ್ಯ! ಪೋದವು ಹರಿಗಳೆಂಬಿದೊಡೆ, [illegible]
[illegible];
ಮುಂಗೈವ ಕಜ್ಜಮಂ ಬೆಸಸೆನೆ! ಧನಂಜಯಂ
ಮಂಗಳಾತ್ಮಕನ[2] ಮೊಗನೋಡಿ ಚಿಂತಿಸುವಿನಂ[3]
ಕಂಗೊಳಿಸಿತಾಗಸದೊಳೊಂದು ಬೆಳಗೆರಡನೆಯ ದಿನಮಣಿಯ[4] ತೇ
[illegible]

found; in this perplexity the Muni Nárada

1. ಬಿಳಿ ಕುದುರೆ ಹತ್ತಿದವನು= ಅರ್ಜುನ. 2. ಮಂಗಳ ಸ್ವರೂಪವುಳ್ಳವನು, [illegible]ರು. 3. ಚಿಂತಿಸುವಷ್ಟರಲ್ಲಿ. ವ್ಯಾ. ಸ್ಥೂ. 4. ಸೂರ್ಯ.

130. ಅಂಭೋಜಮಿತ್ರನಾಸರೊಳಾಗಸವನುಳಿದು
ಕುಂಭಿಣಿಗೆ ಬಂದವನೊ? ಪೇಳೆನಲ್ಗಗನಪಥ
ದಿಂ ಭಾಸುರಪ್ರಭೆಯೊಳಾಮುನಿಪನಿಳಿತಂದಡಸುರಾಂತಕಾದಿ [illegible]
[illegible]
ಸಂಭಾವಿಸಿದರಾತಪೋನಿಧಿಯ ನತಿವಿನಯ
ಗಂಭೀರವಾಕ್ಯದಿಂ ಬೆಸಗೊಂಡನುಪಚರಿಸಿ
ಜಂಭಾರಿನಂದನಂ ನಾರದನನಖಿಳಲೋಕಸ್ಥಿತಿ ವಿಚಾರದನನೂ.

appears to them from heaven

...nd tells them ... Chandra- ... [illegible]

131. ಎಲೆ ಮುನೀಶ್ವರ! ತನ್ನ ಕುದುರೆಗಳ್ಪೋದವೀ
ನೆಲದೊಳಾವೆಡೆಯೊಳಿರ್ದಪವೆಂದರಿಯೆನಿನ್ನು
ಬಲವಂತರೀಸ್ಥಳದೊಳಿಲ್ಲಲೇ! ಕಂಡುಪಂ ತನಗೊರೆಯು ಪೇಳ್ವು [ದೆಂದೂ.
ಫಲುಗುಣಂ ಕೇಳ್ದೊಡಾನಾರದಂ ನಸುನಗುತ
ಸುಲಲಿತಾಶ್ವಂಗಳೈದಿದವು ಕುಂತಳಪುರಕೆ
ಕಲಿಚಂದ್ರಹಾಸಾಖ್ಯನರಸಲ್ಲಿಗಾನೃಪಂ ಕಟ್ಟಿಕೊಂಡಿಹನೆಂದನೂ,

... mighty king of Kuntala, has [illegible]

132. ಹಿಂದಣರಸುಗಳ ಬಲಮಿವನ ಹದಿನಾರರೊಳ
ಗೊಂದು ಕಳೆಯಿಲ್ಲಿವಂ ಪರಮವೈಷ್ಣವನಿವನ
ಮುಂದಧಟರಂ ಕಾಣೆನಾಹವದೊಳೀತನ ಚರಿತ್ರಮತಿಚಿತ್ರಮೆಂದೂ
ಮಂದಸ್ಮಿತದೊಳಾತಪೋಧನಂ ಪೇಳ್ದೊಡೆ, ಪು
ರಂದರಾ[1]ತ್ಮಜನವನ ವರ್ತನವನಾದ್ಯಂತ
ದಿಂದೆನಗೆ ವಿಸ್ತರಿಸ ವೇಳ್ಪುದೆನಲರ್ಜುನಂಗಾತಪೋನಿಧಿ ನುಡಿದ [ನೂ.

1. ಪುರನಾಶಮಾಡುವವನು = ಇಂದ್ರ; ಅವನ ಮಗನು = [illegible].

The Muni relates the story of this Chandrahasa; he is the son of a king of Ma- [illegible] and had [illegible] born with six toes on his left foot.

133. ಇಂನೊರವೆನಾಲಿಸಾದಡೆ, ಪಾರ್ಥ! ಧಾರ್ಮಿಕಂ
ಮುಂನೋರ್ವನುಂಟು ಕೇರಳದೇಶದವನಿಪಂ;
ಸಂಸ್ತುತಗುಣೋದಯಂ, ಮೇಧಾವಿ ಯೆಂಬವಂ, ಬಲಯುತಂ; [ಬಳಿಕವಂಗೇ
ತನ್ನ ಪಟ್ಟದ ರಾಣಿಯೊಳ್ಪಹಳ ಭಾಗ್ಯಸಂ
ಪಂನನೆಡದಂಘ್ರಿಗರುವೆರಳಾಗಿ ದಿವದೊಳು
ತ್ಪಂನನಾದಂ ಮೂಲನಕ್ಷ[illegible]ಂದರಿಷ್ಟಾಂಶದೊಳ್ಸುಕುಮಾರನೂ.

134. ಪುತ್ರೋತ್ಸವಂ ಮಾಡಿ ಕೆಲವು ದಿನಮಿರೆ, ನೃಪಂ
ಶತ್ರುಗಳ್ಬಂದು ನಿಜನಗರಮಂ ಮುತ್ತಿದೊಡೆ,
ಕ್ಷತ್ರಧರ್ಮದೊಳವರೊಡನೆ ಯುದ್ಧರಂಗದೊಳ್ಪೊಯ್ದಾಡಿ ಮಡಿ
[ಯೆ, ಕೇಳ್ಗೆ

ಚಿತ್ರಭಾನುಪ್ರವೇಶಂ ಗೈದಳಂದು ಚಿತ್ರ
ಪತ್ರಲೋಚನೆ ಪತಿವ್ರತೆಯಾಗಿ ; ಬಳಿಕಾಧ
ರಿತ್ರೀಶ್ವರನ ರಾಜ್ಯಮಂ ತೆಗದುಕೊಂಡಹಿತರಾಳ್ದರವನೀಪೇಳ್ವನೂ !

The king killed in battle, the Queen burns herself;

135. ಬಳಿಕೋರ್ವ್ವಧಾತ್ರಿ ಶಿಶುವಂ ಕೊಂಡು ಪೊರಮಟ್ಟು
ತೊಳಲಿ ಬಳಲುತ ಮೆಲ್ಲಮೆಲ್ಲನೈತಂದು ಕುಂ
ತಳನಗರಮಂ ಪೊಕ್ಕಳಲ್ಲಿ ಸಾಕಿದಳರ್ಭಕನನತಿಸ್ನೇಹದಿಂದಾ

ಎಳೆಯಂಗೆ ಬೇಕಾದುದಿಲ್ಲದಿರೆ, ಮರುಗುವ
ಳ್ಪೊಳಲೊಳಗೆ ತಿರಿದು ಹಸದಳಲುವಳ್ಮದ್ದಿಸಿ ಪ
ಸುಳಿಯ ಬಿಸದಂಗಳ್ಗೆ ಹಿಗ್ಗಿ ಬಿಸುಸುಯ್ವಳವಳನುದಿನದೊಳಾರ್ತೆ
[ಯಾಗೀ.

their child a helpless orphan is taken care of by a nurse.

136. ಇಡೆ, ತೊಟ್ಟಿಲಿಲ್ಲಾಡಿಸುವರಿಲ್ಲ ನಿನಗೆ ! ಪೊಂ
ಜೊಡಿಗೆ ಯಿಲ್ಲಿರೆ, ನಿಳಯಮಿಲ್ಲ ; ಬಿಜದೆರವ ನೀ
ರ್ಗುಡಿವಾಲ್ಗೆಂಣೆ ಬೆಂಣೆಗಳಿಲ್ಲ; ಲಾಲಿಸಿ ನಲಿವ ತಂದೆತಾಯ್ಗಳಿಲ್ಲಾ;

ಪೊಡವಿಪತಿಕೇರಳಾಧೀಶ್ವರಂ ತನಯನಂ
ಪಡೆದನಿದಕೀಗ ನಿನ್ನಂ ನೋಡುವೆನ್ನ ಕಂ
ಣೊಡೆಯದಿರದಕಟೆಂದು ! ಬಿಸುಸುಯ್ದಳಲ್ದು ಮರಗುವಳಾಕೆ ದಿನ
[ದಿನದೊಳೂ

She goes with him from Malabar to Kuntala. Her grief and

137\. ಮೊಳೆವಲ್ಲೊಗುವ ಜೊಲ್ಲು, ದಟ್ಟಡಿ, ತೊದಲ್ನುಡಿಯು
ತೊಳತೊಳಗುತಿಹ ಸೊಬಗು, ಮಿರವ ನಗೆಮೊಗದ ಬಗೆ
ಪೊಳೆವ ಕಣ್ಮಿಸುಪನುಣ್ಗದಪಿನೆಸೆಣೆ, ಜೆಲ್ವಪಣೆ, ಕುರುಳು, ಜೋ
[ಲ್ವಂಬೆಗಾಲೂ,
ಸುಳಿನಾಭಿ, ಮಿಗೆ ಶೋಭಿಪಧರದೆಡೆ, ಬಟ್ಟದೊಡೆ
ನಳಿತೋಳಿಡಿದ ಧೂಳಿ ಸೊಗಯಿಸುವ ವರಶಿಶುವ
ನಲಿದಾಡಿಸುವ ರೂಢಿಯಿಲ್ಲೆಂದು ನೆರೆ ನೊಂದು ಮರುಗುವಳಜಸ್ರಮ
[ವಳೂ.

...nxiety about the boy. His loveliness moves her.

1\. ಮೊಳೆವಲ್ಲು ಧೂಳಿ ಎಂಬೀಶಬ್ದಗಳನ್ನು ಸೊಗಯಿಸುವ ಎಂಬ ಕ್ರಿಯಾಪದಕ್ಕೆ ಅನ್ವಯಿಸಬೇಕು.

138\. ಬಾಲಕನ ಲೀಲೆಯಂ ಕಂಡು ಹಿಗ್ಗುವಳೊಂಮೆ
ಲಾಲನೆಗಳಿಲ್ಲೆಂದಳಲ್ದು ಮರುಗುವಳೊಂಮೆ;
ಪಾಲಿಸಿದಳಿಂತು ನಡೆನುಡಿಗಳಂ ಕಲಿವಲ್ಲಿ ಪರಿಯಂತವಾಶಿಶುವನೂ
ಮೇಲೆ ರುಜೆ ಬಂದಡಸಿ ವಿಧಿವಶದೊಳಾಧಾತ್ರಿ
ಕಾಲನರಮನೆಗೈದಿದಳ್ಬಳಿಕ ಪಸುಳಗೆ ನಿ
ರಾಲಂಬವಾಗಲಾಪಟ್ಟಣದೊಳೆಲ್ಲರ್ಗೆ ಕಾರುಣ್ಯಕೀಡಾವನೂ.

When he had learned to walk, she dies.

139\. ಚೆಲ್ವಶಿಶು ಬೀದಿಯೊಳ್ಬಂದು ದೇಶಿಗನಾಗಿ
ನಿಲ್ವನಿಂ, ಕಂಡಕಂಡಬಲೆಯರ್ಕರೆಕರೆದು
ಮೆಲ್ಪ ತನಿವಣ್ಗಳಂ ಕಜ್ಜಾಯಸಕ್ಕರೆಗಳಂ ಕೊಡುವರೆತ್ತಿಕೊಂ
[ಡೂ
ಸೋಲ್ವ ಮಾತುಗಳನಾಲಿಸಿ ಮುದ್ದುಗೈವರವ
ರುಲ್ವ[1]ದಕಮಜ್ಜನಂ ಗೈಸಿ ಮುಡಿಯಂ ಪೊದಿಸಿ
ಮೇಲ್ವಾಸಿನೊಳ್ಮಲಗಿಸುವರರ್ಥಿಯಿಂದೊಸೆದು ತಮ್ಮ ಮಕ್ಕಳುಗ
[ಳೊಡನೇ

The boy goes about in the streets and moves the women

1\. ಉರ್ವ್ವ ಎಂಬ ರೂಪದಿಂದ ಉಲ್ವ(=ಉಬ್ಬುವ) ಎಂಬದು ಆಯಿತು.

140. ಆಡುವೆಳೆಮಕ್ಕಳೊಡನಾಡುವಂ ; ಲೀಲೆ ಮಿಗೆ
ನೋಡುವಜ್ಜರಿಗಳಂ ನೋಡುವಂ ; ಬಾಲಕರ
ಕೂಡಿ ಮನೆಮನೆಗಳೊಳ್ಳಾಡುತಿಲ್ಲರ್ಗೆ ಮುದ್ದಾಗಿ ಮೋಹಿಸುತಿ
[ರ್ಪನೊ ;
[illegible]
ಮಾಡುವರನರ್ಥಿಯಿಂ ಬೇಡುವರ ನೆರವಿಯೊ
ಳ್ಕ್ರೀಡಿಸುವನಾಪುರದ ರೂಢಿಸಿದ ಬೀದಿಯೊಳ್ಪಸುಳೆ ಪರಪುಟ್ಟನಾ
[ಗೀ.

who see him, to give him food and clothes.

141. ಬಟ್ಟೆಯೊಳ್ಪುಣ್ಯವಶದಿಂದರ್ಭಕನ ಕಣ್ಗೆ
ಪುಟ್ಟೆ ಸಾಲಗ್ರಾಮದೊಂದು ರಮಣೀಯ್ಯಶಿಲೆ
ಕಟ್ಟೆಸಕದಿಂದ ಕಾಣಿಸಲದಂ ತಾನೆತ್ತಿಕೊಂಡು ಕೆಳೆಯರ್ಗೆ ತೋ
[ರೀ
ಬಟ್ಟಗಲ್ಲಿಂತು ವರ್ತುಳದಿಂದ ಚೆಲ್ವಾಗಿ
ಪುಟ್ಟುವುದೆ ? ಪೊಸತೆಂದು ಪಿಡಿದಾಡುತೊಡನೆ ಬೈ
ಚಿಟ್ಟುಕೊಂಬಂ ಬಾಯೊಳನವರತಮಿರಿಸಲ್ಕೆ ತನಗೆ ಮನೆಯಿಲ್ಲವಾ
[ಗೀ

He finds a salagrama stone.

142. ಜೊಳಪ ಸಾಲಗ್ರಾಮಫಲದಿಂದ ಬಾಲಕಂ
ಕೆಳೆಮಕ್ಕಳೊಡನಾಟದಶ್ಮಗೋಳಕಮೆಂದು
ತಿಳಿದಂಣೆಕಲ್ಲೊಡ್ಡುಗಳನಾಡುತದರಿಂದ ಗೆಲ್ದೆಲ್ಲರಂ ಜರವುತಾ
ಕಳಕಳಿಸಿ ನಗುತತಿಸ್ನೇಹದಿಂ ಕ್ರೀಡೆಯಂ
ತಳೆದಾಗಳುಣಿಸುಗಳುನುಂಬಲ್ಲಿ ತನ್ನ ಕೈ
ದಳಕೆ ತಂದುಳಿದು ಪೊತ್ತುಗಳಾವಗಂ ಬಾಯೊಳಿರಿಸಿಕೊಂಡಿರುತಿ
[ರ್ಪನೊ.

143. ಕುಂತೀಕುಮಾರ ! ಕೇಳಾಮಹಾಪಟ್ಟಣದೊ
ಳಂತರ್ಭಕರೊಳಾಡುತಿಪ ಪಸುಳೆಗೈದು ವರು
ಷಂ ತುಂಬಿತಾಸಮಯದೊಳ್ಪ್ರಬಲದಿಂ ಪ್ರವರ್ತಿಪ ದುಷ್ಟಬುದ್ಧಿ [ಯೆಂಬಾ
ಕುಂತಳೇಂದ್ರನ ಮಂತ್ರಿ ತನ್ನ ಮನೆಯೊಳ್ವಿಪ್ರ
ಸಂತರ್ಪಣಂ ಗೈದೊಡಾದ್ವಿಜಭೋಜನಾ
ನಂತರದೊಳೈದೆ ಸತ್ಕೃತರಾಗಿ ಕುಳ್ಳಿರ್ದು ಪರಸುತಲ್ಲಿರುತಿರ್ದರೂ.

Dushtabuddhi, the minister of the king of Kuntala.

144. ಅಲ್ಲಿ ಕೆಳೆಯರೊಳಾಡುತಿರ್ದ ಶಿಸುವಂ ಕಂಡ
ರುಲ್ಲಾಸದಿಂದೆಸೆವ ಭೂಸುರರ್ಬಾಲಕನ
ಸಲ್ಲಲಿತರಾಜಲಕ್ಷಣಕೆ ಬೆರಗಾದರವನಂಗಮಂ ನೋಡಿ ನೋಡೀ
ನಿಲ್ಲದನುರಾಗದಿಂದಾರಸುತನೀತರುಣ
ನೆಲ್ಲಿಂದ ಬಂದನೆಂದಾದುಷ್ಟಬುದ್ಧಿಯಂ
ಮೆಲ್ಲನೆ ವಿಚಾರದಿಂ ಕೇಳ್ದೊಡಾವಿಪ್ರರ್ಗೆ ನಗುತಾತನಿಂತೆಂದನೂ.

Brahmans direct his attention to the boy,

145. ಈಪರಿಯೊಳೆನಿತಿಲ್ಲನಾಥರಾಗಿಹ ಬಾಲ
ರೀಪುರದೊಳೆತ್ತಣವನಾರ ಸುತನೆಂದರಿಯೆ
ವೀಪಸುಳೆಯುಂ ; ರಾಜಕಾರಿಯದೊಳಹೆವಿದರ ಚಿಂತೆ ನಮಗೇತಕೆ [ನಲೂ ;
ಆಪಾರ್ವರೆಂದಿರ್ದೊಡಂ, ಚಾರುಲಕ್ಷಣದೊ
ಳೀಪೊಳಲ್ಗೀಕುಂತಳಾಧೀಶನಾಳ್ವ ನಂ
ವೀಪೊಡವಿಗೊಡೆಯನಹನೀತನಂ ನೀಸಿರಿಸಿಕೊಂಡು ರಕ್ಷಿಪುದೆಂದ [ರೂ.

as he would become the future ruler of Kuntala.

146\. ಕ್ರೂರನಕ್ರಕುಲದೊಳ[1]ಡಿದಿರ್ದ ಪೇರ್ಮಡು ಗ
ಭೀರನಿರ್ಮಲಜಲದೊಳೆಸೆವಂತೆ, ಮನದೊಳ್ಕ
ಠೋರತರಭಾವಮಂ ತಳೆದು ಬಹಿರಂಗದೊಳ್ವಿನಯಮುಳ್ಳಾತನಾ [ಗೀ
ಚಾರುಲಕ್ಷಣದ ಶಿಶುವಂ ನೋಡಿ ಧರೆಯನೃಂ
ಪಾಠಕರ ನುಡಿಗೊಪ್ಪಿದೋಲಿರ್ದ ಬಳಿಕ ಸ
ತ್ಕಾರದಿಂದಾವಿಪ್ರರಂ ಕಳುಹಿದಂ ದುಷ್ಟಬುದ್ಧಿ ನಿಜಭವನದಿಂದಾ.

The Minister conceals his envy,

1\. ತೃತಿಯಾರ್ಥದಲ್ಲಿ ಸಪ್ತಮಿ ವ್ಯವಹರಿಸುವದು. ವ್ಯಾ. ಸೂ.

147\. ಈ ಕುಂತಳೇಂದ್ರಂಗೆ ಸುತರಿಲ್ಲ; ರಾಜ್ಯವೆ.ನ
ಗೇಕಾಧಿಪತ್ಯಮಾಗಿರ್ದಪ್ಪುದು ; ಮುಂದಿವಂ
ಭೂಕಾಂತನಾದಪಂ, ಗಡ ! ವಿಪ್ರರೆಂದ ನುಡಿ ತಪ್ಪದೆಂನಾತ್ಮಜ [ಗೆನೀ
ಬೇಕಾದ ಸಂಪದಂ ಬಯಲಾಗಿ ಪೋಪ್ಪುದೆಂ
ದಾಕುಮತಿ ಬೇರೊಂದುಪಾಯಮಂ ಚಿಂತಿಸಿ ಭ
ಯಾಕಾರದೊಡಲ ಚಾಂಡಾಲರಂ ಕರೆಸಿ ಬೆಸಸಿದನಾರುಮರಿಯ [ದಂತೇ.

and calls secretly butchers, and orders them to

148\. ಕಾನನಾಂತರದೊಳೀತರಳನಂ ಕೊಂದು ನೀ
ವೇಸಾದೊಡಂ ಕುರುಪ ತಂದೆನಗೆ ತೋರ್ಪುದೆಂ
ದಾನರೇಂದ್ರನ ಮಂತ್ರಿ ಬೆಸಸಿದೊಡೆ, ಪಶುಘಾತಕಿಗಳಾಡುತಿಹ ಶಿ [ಶುವನೂ
ಹೀನದಯದಿಂದ ಪಿಡಿದೆತ್ತಿಕೊಂಡೊಯ್ದು ಭರ
ಯಾನಕದಲಂದು ಕೊಲೆಗೆಳಸಿ ಪ್ರಹ್ಲಾದನಂ[1]
ದಾನವೇಶ್ವರನಾಜ್ಞೆಯಿಂ ಕಾಳರಕ್ಕಸರ್ಬಂದು ಕೈದುಡುಕುವಂತೇ.

take the boy to the forest and to kill him.

1\. ರಾಕ್ಷಸರ ಅರಸನಾದ ಹಿರಣ್ಯಕಶಿಪುವಿನ ಮಗನು ; ಇವನನ್ನು ಕೊಲ್ಲುವದಕ್ಕೆ ಹಾಗೆ ಪ್ರೈದರು.

149. ಪೆಗಲೊಳೇರಿಸಿ ಬನಕೆ ಚಾಂಡಾಲರೊಯ್ವುತಿರೆ,
ಮಿಗೆ ಬೆದರಿ ಭಯದಿಂದ ಬಾಲಕಂ ಬಾಯೊಳಾ
ವಗಮಿರಿಸಿಕೊಂಡಿರ್ಪ ದಿವ್ಯಸಾಲಗ್ರಾಮದುಪಲವತಿಮಹಿಮೆಯಿಂ [ದಾ
ಬಗೆದೋಱಲಾಗ ಮುಱಹರ! ಕೃಷ್ಣ! ಕಮಲಾಕ್ಷ!
ಖಗರಾಜಗಮನ! ಸಲಹೆಂದು ಚೀರಿದೊಡವನ
ಮೊಗ ನೋಡಿ ಕಱುಣದಿಂ ಕಟಿಕರೆದೆ ಕಱಗಿದುದದೆಂತೊ ಹರಿನಾ [ಮದೇಳ್ಗೇ!

The butchers moved with compassion, cut off the sixth toe of his left foot, leave him and show the toe to the Minister.

150. ವೈದು ಪಸುಳೆಯನರಣ್ಯದೊಳಿರಿಸಿ ಮಱುಗಿ ಬಿಸು
ಸೊಯ್ದು ಪಶುಘಾತಕಿಗಳಾದುಷ್ಟಬುದ್ಧಿಯಂ
ಬೈದು ಶಿಶುವಧೆಗಳುಕಿ ನಿಂದು ನೋಡುತ ಕಂಡರರ್ಭಕನೆಡದ ಕಾ [ಲೊಳಾ
ಐದಲ್ಲದೊಂದು ಬೆರಳಿರ್ಪುದಂ; ಬಳಿಕದಂ
ಕೊಯಿದು ಕುಱುಪಂ ಕೊಂಡು ತಮ್ಮ ದಾತಾರನೆಡೆ
ಗೈದಿ ತೋರಿದೊಡವನವರ್ಗಳಂ ಮನ್ನಿಸಿ ಮಹೋತ್ಸವದೊಳಿರುತಿ [ರ್ದನೂ.

The grief of the birds, seeing the pain of the boy,

151. ಬಸಿವ ನೆತ್ತರಘಾಯದೆಡದಡಿಯ ವೇದನೆಗೆ
ಪಸುಳೆ ಹರಿಹರಿ! ಯೆಂದೊಱಲ್ದಳುತಿರಲ್ಕಂಣೊ
ಳೊಸರ್ವ ಬಾಷ್ಪಂಗಳಂ ಕಂಡು ಮಿಗೆ ಪಕ್ಕಿಗಳ್ನೊಂದು ಕಡುಶೋ [ಕದಿಂದಾ
ಪಸಿವು ನೀರಡಿಕೆಯಂ ತೊರೆದಲ್ಲಿ ನಿಂದುಪಚ
ರಿಸುತಿರ್ದವಾಶಿಶುವನೆಂದೊಡೆಲೆ ಪಾರ್ಥ! ಕೇ
ಳ್ವಸುಮತಿಯೊಳಾರ್ತರಂ ನೋಡಿ ಮಿಗೆ ಮಱುಗದಿಪ ಮಾನವಂ [ಪಾಪಿಯಲ್ಲೈ?

152. ಗರಿಗೆದರಿ ಕೊಡೆವಿಡಿದು ನಿಂದವು ಬಿಸಿಲ್ಗೆ ನವಿ
and their kind offices. ಲೆರಕೆಯಂ ಬೀಸಿ ಬಿಜ್ಜಣವಿಕ್ಕಿತಂಚೆ ; ತುಂ
ತುಱನುದುರ್ಚಿತು ಸಾರಸಂ ಸಲಿಲದೊಳ್ವನದ ಪಕ್ಕಂಗಳಂ ಬಿದಿ [ರ್ಚೆ ;

ಮಱುಗಿ ಮೇಲ್ಮುಡಿಯಲುಪಚರಿಸಿದವು ಗಿಳಿಗಳ
ಕ್ಕರೊಳ್ಳಿಗಳರ್ಭಕನ ರೋದನದ ಕೂಡಳುವ
ತೆಱದೊಳ್ಮೊರೆದವಲ್ಲಿ; ಕರುಬರಿದ್ದೂರ್ಗಿಂದ ಕಾಡೊಳ್ಳಿತೆನಿಸುವಂತೆ

153. ಕೋಗಿಲೆಯ ನಿಡುಸರಂ ಪಾರಿವದ ಕಲ್ಲುಣಿಸು
The whole forest appears as if plunged into grief. ಗೂಗೆಗಳ ಕಣ್ದೊಳಸು ಬಕನ ಮೌನದ ಬೆಱಗು
ನಾಗದ ನಿರಾಹಾರಮಳಿಗಳ ಪರಿಭ್ರಮಣಮಿಭದ ಸೀತ್ಕಾರಂಗಳೂ

ಪೋಗಲಡಿ ಇಡಲರಿಯದಾರ್ಯೈವ ಜನಮಿಲ್ಲ
ದಾಗಹನಗಂಹರದೊಳಳುವ ಶಿಶುವಂ ನೋಡ
ಲಾಗಿ, ಬಂದೆಡೆಗೊಂಡ ದುಃಖಾತಿರೇಕಮೆಂಬಂತೆ ಕಾಣಿಸುತಿರ್ದುದೂ

154. ದಿನಪನುಪಟಳದಿಂದ ಸಲೆಗೆಟ್ಟು ಪಲವು ರೂ
Hunters enter the forest, ಪನೆ ತಾಳ್ದು ವನವಾಸದುರುವಾದ ಸಿದ್ಧಿಯಿಂ
ಘನತೆಯಂ ಪಡೆದು ಮಿಗೆ ಪಗೆಯಾದ ಪಗಲಂ ತೊಲಗಿಪಂಧಕಾರ [ಮೆನಲೂ,

ಅನುಪಮದ ಕಾರೊಡಲ ಬೇಡಪಡೆ ವೇಟೆಗೆ ವಿ
ಪಿನ ಕೈತರುತಲಿರ್ದುದಬ್ಬರದ ಬೊಬ್ಬೆಗಳ
ನಿನದದಿಂ ಜೀವಿಗಳ ಕೊಲೆಗೆಳಸಿದಂತಕನ ದೂತಸಂಘಾತದಂತೇ.

155. ತಪ್ಪತಪ್ಪಲೊಳಲ್ಲಿಗಲ್ಲಿ ಮಂಜುಗಳೆಸೆವ

and kill many animals. ಕಪ್ಪಕಪ್ಪನೆಯ ಗಿರಿಗಳ ಪರ್ಬುಗೆಗಳಂತೆ,

ಬಪ್ಪ ಬಪ್ಪೆಳೆನಾಯ್ಗಳಂ ಹಾಸೊಳಾಂತು ಬಂದುದು ಶಬರಸೇನೆ ಬ

[ಳಿಕಾ

ಸೊಪ್ಪುಸೊಪ್ಪುಗಳ ಮೆಳೆಮೆಳೆಗಳಂ ಸೋವುತ್ತ

ತಪ್ಪತಪ್ಪದೆ ಶರಶರಂಗಳಂ ತೆಗದೆಚ್ಚು

ತೊಪ್ಪತೊಪ್ಪನೆ ಮೃಗಮೃಗಂಗಳಂ ಕೆಡಹಿದರ್ಕಾನನದೊಳೇವೇ

[ಳ್ವಿನೊ !

156. ಇದೆ ಪಂದಿ ಕೆದರಿದ ನೆಲಂ ! ನೋಡಲಿದೆ ದಂತಿ

Description of the hunt, ಕದಡಿದ ಕೊಳಂ ! ತೋರಲಿದೆ ಪುಲಿ ಯುಗಿದ ಮೃಗದ

ಮಿದುಳತ್ತಲಿದೆ ಸಿಂಗಮೆರಗಿದಾನೆಯ ತಲೆಯ ಮುತ್ತುದುರಿ ನೆತ್ತ

[ರೊಡನೇ !

ಇದೆ ವನಮಹಿಷನುದ್ದಿಕೊಂಡ ಮರದಿಗುಡಿತ್ತ

ಲಿದಿಕೋ ! ಸಾರಂಗಮಿಕ್ಕಡಿ ಗೈದ ಪಾವಿತ್ತ

ಲಿದೆ ಪುಲ್ಲೆಗಳ ಪಕ್ಕೆ ! ಮರಗಳಿಕ್ಕೆಗಳೆಂದು ಪರಿದಪ್ಪರ್ಗಳಂದರಂ

[ದೂ.

157. ನಡೆ ! ಪಜ್ಜೆವಿಡಿ ಪೋಗು ! ತಡೆ ! ನಿಲ್ಲು ! ಜಡಿ ! ಬೊಬ್ಬೆ

ಗೊಡು ! ಪೊದರೊಳಡುಗು ! ಕೈಗೆಡದಿರೆಸೆ ! ನಿಡುಸರಳ

ತೊಡು ! ಕೆಲಕೆ ಸಿಡಿಯದಿರ್ಪೋಡೆ ! ಸಾರ್ಚು ! ತುಡುಕು ! ಪೊ

[ಗಸಡಗು ! ಮರಕಡದೊಡರ್ಚು !

ಅಡಗಿ ಪೊಯಿ ! ಜಡಿ ! ಕೋಲನಿಡು ! ಮುಂದಗಡೆ ನಾಯಿ

ವಿಡು ! ಕೂಡೆ ಪಡಿತಳಿಸು ! ಸೆಡೆಯದಿರ್ಕೆಡಪೆಂಬ

ನುಡಿಗಳಡಿಗಡಿಗೆ ಕಿವಿಗಿಡಿದುದೆಲ್ಲೆಡೆಯೊಳಂದಡವಿಯೊಳ್ಕುಚುಪೊಸ

[ತೆನೇ.

158\. ಉಬ್ಬಿದುರ[2]ದೇರೆದೆಗದೊಡಲ, ಬಾಗಿದ ಬೆನ್ನ,
and of the dogs. ಹಬ್ಬುಗೆಯ ಪೆಜ್ಜಳದ, ಸೆಳೆದ ಬಾಲದ ಕೊನೆಯ,
ಕೊಬ್ಬಿದ ಕೊರಳ, ಸಣ್ಣಜಂಘೆಗಳ, ಕೊಂಕುಗುರ ಮಡಿಗಿವಿಯ,
[ಕಿಡಿಗಂಗಳಾ,
ಪೆಬ್ಬ[1]ಲ್ಲ, ಬಿಡುವಾಯ, ಜೋಲ್ವ ಕೆಂನಾಲಿಗೆಯ,
ಗಬ್ಬಿನಾಯ್ಗಳ ಹಾಸನುಗಿದು ಬಿಡೆ, ಪಂದಿಗಳ
ನಬ್ಬರಿಸಿ ತುಡುಕಿದವು ; ಕೇಸರಿಗಡರ್ದು ಮೋಲ್ವಾಯ್ದು ಪುಲಿ
[ಯಂ ಕೊಂದವೂ.

1\. ದೊಡ್ಡ ಹಲ್ಲಿನ. 2. ಉರದ ಮೊದಲಾದ ಷಷ್ಠಿಗಳು ನಾಯಿಗಳು ಎಂಬ ಪದವನ್ನು ವಿಶೇಷಿಸುತ್ತವೆ.

159\. ಪುಲಿಕರಡಿಕರಿಸಿಂಗಸಾರಂಗವೃಕಪಂದಿ
Kulindaka, the chief of the hunters, hunts after a deer ; ಮೊಲಹುಲ್ಲೆ ಕಾಡೆಂಮೆ ಚಮರಿಗಳ್ಮೊದಲಾದ
ಪಲವು ಮೃಗಜಾತಿಯಂ ಕ್ರೌಂಚಶಿಖಿತಿತ್ತಿರಿಕಪೋತಾದಿಪಕ್ಷಿಗಳ
[ನೂ.
ಕೊಲುತ ಬಹ ಬೇಡರ್ಗೆ ಸಿಕ್ಕದೋಡಿದುದೊಂದೆ
ರಳೆ; ಕುಳಿಂದಕನೆಂಬ ಧೊರೆ ಕಂಡು ತನ್ನ ಚಾ
ಪಲಹಯದೊಳದರ ಬಳಿಸಂದನತಿವೇಗದಿಂ ಬಿಲ್ವಿಡಿದು ಕೊಲ್ವೆನೆಂ
[ದೂ.

160\. ಆಕುಳಿಂದಂ ದುಷ್ಟಬುದ್ಧಿಯ ನಿಯೋಗದಿಂ
(he is tributary to the king of Kuntala); he happens ದಾಕಾನನದ ನಾಡವಳಿತನಮಂ ಕೈಕೊಂಡು
ಭೂಕಾಂತನಾಗಿಹಂ ಚಂದನಾವತಿ ಯೆಂಬ ಪುರದೊಳವನರ್ಥಿಯಿಂ
[ದಾ

ಈ ಕಿರಾತಪ್ರಕರದೊಡನೆ ಪೊರಮಟ್ಟು ಮೃಗ
ಯಾಕಾವನಾಗಿ ಬಂದಿರ್ದವಂ ; ಸಿಡಿದೋಡು
ವಾಕುರಂಗದ ಬೆಂನನ್ನೈದಿದಂ, ತೇಜಿಯು ಜವಂ ಗಾಳಿಯಂ ಮುಂ
[ಚಲೂ.

161. ಹರಿಣನಂ ಬೆಂಬತ್ತಿ ಬರಲಾ ಕುಳಿಂದಕಂ
ಹರಿಯನೇ ಜಪಿಸುತಳುತಿಪ ಬಾಲನಂ ಕಂಡು — to see the weeping boy, and having no children,
ಹರಿಯನಲ್ಲಿಯೆ ನಿಲಿಸಿ ನೋಡಿ ನಿಜಶಿರವನಲ್ಲಾಡಿ ತಾ ಮೃಗದ ಕೊ
[ಲೆಗೇ
ಹರಿತಂದ ಪಾಪಮತಿ ಪುಣ್ಯವಂ ಪೊದವಿಸಿತು ; ವಿ
ಹರಿಸುವಡೆ, ಶಿವಶಿವಾ ! ಪೊಸತೆಂದು ಹರುಷದ ಲ
ಹರಿಯೊಳೋಲಾಡಿದಂ, ಕಡವರವನೆಡಹಿ ಸಂಧಿಸಿದ ಕಡುಬಡವನಂ
[ತೇ.

162. ಇಳಿದು ನಿಜವಾಜಿಯಂ ಸಾರ್ದು ಮೈದಡವಿ ಬರ
ಸೆಳೆದು ಬಿಗಿಯಪ್ಪಿ ಕಂಬನಿ ದೊಡೆದು ಕೂಡೆ ಸ — he adopts him,
ಗ್ಗಳೆಯ ನೀರಿಂದ ಕಾಲ್ದುದಿಯೊಳ್ಬಸಿವ ನೆತ್ತರಂ ತೊಳೆದು ಮೋ
[ಹದಿಂದಾ
ಗಳದೊಳುಬ್ಬುವ ಗದ್ಗದಂಗಳಂ ಸೈಪಿಟ್ಟು
ಲಿಳುಪಿ ಲಾಲಿಸಿದಂ ಕುಳಿಂದಕಂ ಸೌಭಾಗ್ಯ
ನಿಳಯುದೆರಕೆಯ ವಸುವನೊದವಿದಗ್ಗದ ಪುಣ್ಯದೊಡಲೊಲೆಸವಾ
[ಶಿಶುವನೂ.

163. ಎಡಬಲದೊಳಿಹ ತಂನವರೊಳಾ ಕುಳಿಂದಕಂ
ನುಡಿದನೀ ಬಾಲಕಂ ತನ್ನ ತಾಯ್ತಂದೆಗಳ
ನೊಡಹುಟ್ಟಿದವರ ಹಂಬಲಿಸದೆ, ಮುರಾರಿಯಂ ನೆನವನದರಿಂದಿವಂ
[ಗೇ

ಪೋಷಯನಚ್ಯುತನಾದಕಾರಣಂ, ಮೃಗವಾಸ
ದಡವಿಯೊಳ್ಜೀವಿಸಿದನೆಲ್ಲರ್ಗೆ ತನುಜನಂ
ಕೊಡುವವಂ ಕೃಷ್ಣನೈಸಲೆ ! ತನಗೆ ಮಕ್ಕಳಿಲ್ಲೀತನೇ ಸುತನೆಂದ
[ನೂ.

164. ಪತ್ತುವಿಧಮುಂಟು ಸುತರದರೊಳೌರಸಪುತ್ರ
ನುತ್ತಮಂ ಮೋಕ್ಷಾತನಿಲ್ಲದೊಡೆ, ಮಿಕ್ಕ ಪೊಂ
ಭತ್ತು ಬಗೆಯೊಳಗೊಂದು ತೆರದ ಮಗನಾದೊಡಂ, ಬೇಕಲಾ ಮಾ
[ನವರ್ಗೀ.

and returns ತತ್ತನಯರೊಳ್ತಂನ ತಾನೆ ದೊರಕೊಂಡವಂ
ತತ್ತನಂದನನಿವಂ ತನಗೆಂದವಂ ಮುದದೊ
ಳೆತ್ತಿಕೊಂಡಶ್ವಮನಡರ್ದು ಪರಿಜನಸಹಿತ ನಿಜಪುರಕೆ ಬರುತಿರ್ದ
[ನೂ.

165. ಮೃಗಯಾವ್ಯಸನದಿಂದ ಕಾನನಕೆ ತಾಂ ಕೃಷ್ಣ
with him to his town Chandanávati. ಮೃಗದ ಕೂಡೈದಿದೊಡೆ, ದೊರಕೊಂಡನೀಕೃಷ್ಣ
ಮೃಗಭಾವದರ್ಭಕಂ ಪಾಪಕೆಳಸಿದೊಡಾಯ್ತು ಪುಣ್ಯಮೆನುತಲ್ಲಿ
[ಮುಡಿದಾ

ಮೃ[2]ಗಜಾತಿಗಳನವರವರ್ಗೆ ವಿಚ್ಛಿಸಿ ನೆರದ
ಮೃಗಜೀ[1]ವಿಗಳನೆಲ್ಲರಂ ಕಳುಹಿ ನಿಜಪುರಕೆ
ಮೃಗಧರನೊಲೆಸವ ಶಿಶುವಂ ಕೊಂಡು ಪರಿಜನದೊಡನೆ ಬಂದನು
[ತ್ಸವದೊಳೂ.

1. ಬೇಟೆಯಲ್ಲಿ ಮೃಗಗಳನ್ನು ಹಿಡಿದು ಉಪಜೀವನ ಮಾಡಿಕೊಳ್ಳುವವರು=ಬೇಡರು ;
2. ಚಂದ್ರ.

166. ಮುಂದೆ ಪರಿತಂದು ಚರರರುಪೆ, ಸಿಂಗರಿಸಿದ
Joy of his wife. ಳ್ಚಂದನಾವತಿಯು ಸಂಭ್ರಮದಿಂ ; ಕುಳಿಂದಕಂ
ಬಂದು ನಿಜಭವನಮಂ ಪೊಗಳಿದಿರ್ವಂದು ನಲಿದವನ ಸತಿಮೇಧಾ [ವಿನೀ
ಕಂದನಂ ತೆಗೆದೆತ್ತಿಕೊಳುತ ಬಿಗಿಯಪ್ಪಿ ಸಾ
ನಂದದಿಂ ಪೊರೆಯೇರಿದಳ್ತನ್ನ ಬಂಜೆತನ
ಮಿಂದು ಪೋದುದು, ಪುತ್ರವತಿಯಾದೆನೆನ್ನ ಪುಣ್ಯಾಪ್ಯವುಂ ಫಲಿ [ಸಿತೆಂದು.

167. ಬಳಿಕ ನಗರದೊಳಾದುದುತ್ಸವಂ ; ಪೌರ್ವರ್ಗೆ
The boy is called Chandrahása, ನಿಳಯುವ ಸಮಸ್ತವಸ್ತುಗಳನೊಲಿದಿತ್ತನೊಂ
ದುಳಿಯದೆ ; ವಿದಿತಜಾತಕರ್ಮಮಂ ಮಾಡಿಸಲ್ಬುಧರುತ್ತರೋತ್ತ [ರವನು.
ತಿಳಿದು ನಿರ್ಮಲಮುಖಾಂಬುಜದಿಂ ಶಶಾಂಕನಂ
ಕಳಕಳಿಸಿನಗುವನದರಿಂ[1] ಚಂದ್ರಹಾಸನೆಂ
ದಿಳೆಯೊಳೀತಂಗೆ ಪೆಸರಾಗಲೆಂದುಚ್ಚರಿಸಿ ನಾಮಕರಣಂಗೈದರು.

1. ಅವನ ಮುಖ ಚಂದ್ರನಿಗಿಂತ ಹೆಚ್ಚು ಶೋಭಿಸುತ್ತಿತ್ತೆಂಬರ್ಥ.

168. ಕತ್ತಲೆಯ ಮನೆಗೆ ಮಣಿ ದೀಪವಾದಂತೆ, ಸಲೆ
he is a great acquisition to the house of Kulinda. ಬತ್ತಿದ ಸರೋವರಕೆ ನವಜಲವೊದವಿದಂತೆ,
ಬಿತ್ತರದ ಕಾವ್ಯರಚನೆಗೆ ದೇವತಾಸ್ತುತಿ ನೆಗಳ್ದಂತೆ, ಭೂತಳದೊ [ಳೂ
ಮತ್ತೆ ಸಂತಾನವಿಲ್ಲದ ಕುಳಿಂದನ ಬಾಳ್ಕೆ
ಗುತ್ತಮಕುಮಾರನಾದಂ ಚಂದ್ರಹಾಸನೆನ
ಲುತ್ತರೋತ್ತರಮಪ್ಪುದಚ್ಚರಿಯೆ ಸುರಪುರದ ಲಕ್ಷ್ಮೀವರನ ಶರ [ಣ[1]ರೂ ?

1. ಶರಣರು ಉತ್ತರೋತ್ತರವಾಗುವದು ಅಚ್ಚರಿಯೇ ಎಂಬನ್ವಯು.

169\. ಲಕ್ಷಣದೊಳೆಸೆವ ಸುಕುಮಾರನಂ ನಗರಿಗ

He learns only the two syllables Hari (= Vishnu) To the com-

ಧ್ಯಕ್ಷನಾಗಿಹ ಕುಳಿಂದಂ ಕೆಲವು ದಿನದ ಮೇ
ಲಕ್ಷರಾಭ್ಯಾಸಕಿರಿಸಿದೊಡೆ, ಹರಿ ಯೆಂಬೆರಡು ವರ್ಣಮಲ್ಲದೆ ಪೆರ [ತನೂ
ಅಕ್ಷಿಯಿಂದೀಕ್ಷಿಸದೆ ವಾಚಿಸದಿರಲ್ಕೆ, ಗುರು
ಶಿಕ್ಷಿಸಿ ಕನಲ್ದು ಬರೆ! ಯೆಂದೊಡಂ, ಕೇಳದಿರೆ,
ತತ್ಕ್ಷಣದೊಳಾತನೈತಂದವನ ತಾತಂಗದಂ ಪೇಳ್ದೊಡಿಂತೆಂದನೂ.

170\. ಈತನೇಕಾದಶಿಯೊಳುಪವಾಸಮಂ ಮಾಳ್ಪ

plaints of his teacher his father answers: that he must not

ನೀತನಂ ಕಂಡು ನಾವೆಲ್ಲರುಮನುಷ್ಠಿಸುವೆ
ವೀತನಚ್ಯುತಭಕ್ತನೀತನಿಂದೆನಗಪ್ಪುದಭ್ಯುದಯಮಿಹಪರದೊ [ಳೂ ;
ಈತನಲ್ಲದೆ ಬೇರೆ ತನುಜಾತರಿಲ್ಲ ತನ
ಗೀತನಲ್ಲಿಯೆ ಜೀವಮಾಗಿರ್ಪೆನಾನದರಿ
ನೀತನೆಂತಾದೊಡಿರಲೀತಂಗೆ ಶಿಕ್ಷೆ ಬೇಡೆಂದಂ ! ಕುಳಿಂದನೆಂದೂ.

171\. ಮೆಲ್ಲನಿಂತಿರಲೆಂಟನೆಯ ವರುಷಮಾಗಲ್ಕೆ,

punish the boy. He learns the art of war,

ನಿಲ್ಲದುಪನಯನಮಂ ವಿರಚಿಸಿ ಕುಳಿಂದಂ ಸ
ಮುಲ್ಲಾಸಮಂ ತಾಳ್ದನಂಗಸಹಿತಖಿಳವೇದಂಗಳಂ ನೀತಿಗಳನೂ.
ಸಲ್ಲಲಿತಶಬ್ದಾದಿಶಾಸ್ತ್ರಸಿದ್ಧಾಂತಂಗ
ಳೆಲ್ಲಮಂ ಗುರುಮುಖದೊಳಧಿಕರಿಸಿ ಬೇಕಾದ
ಬಿಲ್ಲವಿದ್ಯವನರಿದು ಗಜತುರುಗದೇರಾಟದೊಳ್ಚತುರನಾದನವನೂ.

172\. ಷೋಡಶಪ್ರಾಯದೊಳವಂ ಪ್ರಬಲಬಲನಾಗಿ

subdues the rebellious vassals of his father,

ಮೂಡಿದಗ್ಗಳಿಕೆಯಿಂದೈದೆ ರಥಿಕರ್ಕಳಂ
ಕೂಡಿಕೊಂಡೈದಿ ನಿಜತಾತಂಗೆ ಮಲವ ಮಂನೆಯರೆಲ್ಲರಂ ಘಾತಿ [ಸೀ

1\. ಪರಿಣ್ಣಾರು (ಸಂಸ್ಕೃತ)

ಮಾಡಿದಂ ದಿಗ್ವಿಜಯಮಂ ; ಕುಳಿಂದಕನಾಳ್ವ
ನಾಡಲ್ಲದೇಳ್ದೆಸೆಯ ಸೀಮೆಗಳನೊತ್ತಿದಂ ;
ಪೂಡಿಸಿದನವರವರ ಮನೆಗಳ ಸುವಸ್ತುಜಾಲಂಗಳಂ ತನ್ನ ಪುರಕೇ.

2. ಅಷ್ಟದಿಕ್ಕುಗಳಲ್ಲಿ ಒಬ್ಬನು ಉಳಿಯದಂತೆ ಎಲ್ಲಾ ವೈರಿಗಳನ್ನು ಜೈಸುವದು.

173. ಹರಿಯನಾರಾಧಿಸುವ ರಾಜ್ಯಮದದಿಂ ಸೊಕ್ಕಿ
ದರಿಭೂಪರಂ ಗೆಲ್ದು ಮಣಿಕನಕಮುಕ್ತಾಳಿ
ಕರಿತುರಗಮೊದಲಾದ ಮುಖ್ಯವಸ್ತುಪ್ರತತಿಸಹಿತ ಪಟ್ಟಣಕೆ ಬರ [ಲೂ,
ಪುರದ ಸಿಂಗರದ, ಮಂಗಳವಾದ್ಯರವದಬಲೆ
ಯರ ಸೊಡರ್ವೆಳಗಿನಾರತಿಗಳ ಮಹೋತ್ಸವದ
ಸಿರಿಯೊಳ್ಕುಳಿಂದಂ ಕುಮಾರನನಿದಿರ್ಗೊಳಿಸಿ ಮತ್ತೆ ಕಾಣಿಸಿಕೊಂ [ಡನೂ.

174. ನಿಶ್ಚಯಕ್ಕೈತಂದನುತ್ಸವದಿಂ ; ಕುಳಿಂದಕಂ
and is intrusted with the government. ಬಳಿಕ ತನ್ನಾಧಿಪತ್ಯವನಾತ್ಮಜಂಗೆ ಮಂ
ಗಳಮುಹೂರ್ತದೊಳಿತ್ತನಂದಿನಿಂ ಚಂದ್ರಹಾಸಂ ಪಾಲಿಸುವನಿಳೆ [ಯನೂ;
ತುಳುಕಾಡಿತಾನಾಡೆಸಿರಿ ; ಚಂದನಾವತಿಯ
ಪ್ರೋಳಲಸೌಭಾಗ್ಯಮಭಿವರ್ಧಿಸಿತು ; ವೈಷ್ಣವಂ
ಬೆಳವಳಿಗೆ ಯಾದುದೆಲ್ಲಾಜನದೊಳಾಚಾರಗುಣದಾನಧರ್ಮದಿಂದಾ.

175. ಈತೆರದೊಳಿರೆ, ಕುಳಿಂದಂ ಚಂದ್ರಹಾಸನಂ
Admonished by his father, ಪ್ರೀತಿಯಿಂದಲಿ ಕರೆದು ನುಡಿದನೆಲೆ ಮಗನೆ ! ವಿ
ಖ್ಯಾತವಾಗಿಹ ರಾಜಧಾನಿ ಕುಂತಳಮಿಲ್ಲಿಗಾರು ಯೋಜನದೊಳಿಹು [ದೂ

ಭೂತಳಮಿದಾನಗರದರಸಿನದು ; ನಮಗೊಡೆಯ
ನಾತನ ಶಿರಃಪ್ರಧಾನಂ[1] ದುಷ್ಟಬುದ್ಧಿ ಸಂ
ಜಾತವಸ್ತುಗಳ ಸಿದ್ಧಾಯಮಂ ಕೊಡ ವೇಳ್ಪುದರಸಂಗೆ ನಾವೆಂದ [ನೂ

1. ಮುಖ್ಯ.

176. ರಾಯಂಗೆ ವರುಷವರುಷಕೆ ನಾವು ಕೊಡುವ ಸಿ
ದ್ಧಾಯಮಂ ದುಷ್ಟಬುದ್ಧಿಗೆ ಸಲಿಸಿ ಬಪ್ಪ ನಿ
ಷ್ಕಾಯುತದ್ರವ್ಯಮಂ ನೃಪನ ರಾಣಿಗೆ ಪುರೋಹಿತನಾದ ಗಾಲವಂ [ಗೇ
ಪ್ರೀಯದಿಂದುಪಚರಿಸುವರ್ಥಮಂ ತತ್ಕಾಲ
ಕೀಯ್ಯ ಬೇಕೆಲೆ ಮಗನೆ! ಧನವನೊದವಿಸಿ ಕಳುಹ
ಸೂಯೆಗೀಡಾಗ ಬೇಡೆಂದು! ನಿಜನಂದನಂಗಾಕುಳಿಂದಂ ಪೇಳ್ದ [ನೂ.

he sends his annual tribute to Kuntalapur.

177. ಪಿತನ ಮಾತಂ ಕೇಳ್ದು ಚಂದ್ರಹಾಸಂ ಮಹೀ
ಪತಿಗೆ ಮಹಿಷಿಗೆ ಮಂತ್ರಿದುಷ್ಟಬುದ್ಧಿಗೆ ಪುರೋ
ಹಿತಗಾಲವಂಗೆ ಸಲಿಸುವ ಧನವನವರ ಸಂಗಡಕೆ ತಾನಾಹವದೊ [ಳೂ.
ಪ್ರತಿಭೂಪರಂ ಜಯಿಸಿ ತಂದ ವಸ್ತುಗಳನಂ
ಕಿತದಿಂದ ಕಟ್ಟಿ ಶಕಟೋಷ್ಟ್ರಕರಿಗಳ ಭಾರ
ಶತಸಂಖ್ಯೆಯಿಂದ ಕಳುಹಿದನಾಪ್ತರಂ ಕೂಡಿ ಕೊಟ್ಟು ಕುಂತಳನ [ಗರಿಗೇ.

178. ಹಸ್ತಿಹಯರತ್ನವಸ್ತ್ರಾಭರಣಕರ್ಪೂರ
ಕಸ್ತೂರಿಮಲಯಜಸುವರ್ಣರಜತಾದ್ಯಖಿಳ
ವಸ್ತುಚಯವಂ ಕೊಂಡು ಚಂದ್ರಹಾಸನ ಚರರ್ಬಂದು ಕುಂತಳನ [ಗರಿಗೇ

The Minister wonders at the devotion and cleanliness of his servants.

ವಿಸ್ತಾರದಿಂದೆಸೆವ ನಗರೋಪಕಂಠದ ಸ
ರಸ್ತೀರದೊಳ್ಮಿಂದು ಚಕ್ರಿ[1]ಯಂ ಪೂಜಿಸೈ
ದಸ್ತಮಯಸಮಯದೊಳ್ಪೊಕ್ಕರಾಪಟ್ಟಣವನತಿಶುಚೀಭೂತರಾ [ಗಿ.

1. ಚಕ್ರ ಹಿಡಿದವನು=ವಿಷ್ಣು.

179. ನೊಸಲೊಳೆಸೆವೂರ್ಧ್ವಪುಂಡ್ರದ, ಸುಧೌತಾಂಬರದ
ಮಿಸುಪ ತುಳಸಿಯ ದಂಡೆಗಳ ಕೊರಳ, ಸ್ವಚ್ಛತರ
ದಶನಪಙ್ತಿಯ, ನ[1]ಕಿಲ್ಬಿಷಗಾತ್ರದಚ್ಛಸಾತ್ವಿಕಭಾವದಿಂದ ಮೆರೆವಾ
ಪರಿಹಾಸನನುಚರರ್ಗಳಿಂದು ಕಾಣಲ್ಕಿದೇಂ
ಪೊಸತಕಟ ! ನಿಮಗಿವಿಂದೇಕೆ ಸಲಿಲಸ್ನಾನ
ಮಸುವಿಡಿದಿಹನೆ ಕುಳಿಂದಕನೆಂದು ? ಶಂಕೆಯಿಂ ಕೇಳ್ದನಾದುಷ್ಟ [ಬುದ್ಧಿ.

1. ಮೈಲಿಗೆ ಇಲ್ಲದ (ಸಂಸ್ಕೃತದಲ್ಲಿ ನ=ಇಲ್ಲ.) 2. ಈ ಷಷ್ಠಿಗಳು ಅನುಚರರ್ ಎಂಬ ಪದವನ್ನು ವಿಶೇಷಿಸುತ್ತವೆ.

They relate to him the wonderful story of their young master.

180. ಅಶುಭಕೋಟಿಯನೊರಸುವೀ ಕಾವೇರೀಪ್ರಕಟ
ವಿಶದಸಲಿಲಸ್ನಾನಮಿಂದೆಮಗೆ ಸಮನಿಸಿತು
ಕುಶಲದಿಂ ಬಾಳ್ವಂ ಕುಳಿಂದನಾತನ ಸೂನು ಚಂದ್ರಹಾಸಂಗೆ ನಾಡೂ
ವಶವರ್ತಿಯಾಗಿರ್ಪುದವನಾಜ್ಞೆಯಿಂದುಭಯ
ದಶಮಿಯೊಳ್ನಿಪಮುತ್ಸವಮಚ್ಯುತಂಗೆ ಕ
ರ್ಕಶಮಿಲ್ಲದಖಿಳಜನಮಂ ಬಿಡದೆ ಸಾಲಿಪಂ ಹರಿಭಕ್ತಿನಿರತನಾಗಿ.

181. ಸುತ್ತಲುಂ ದಿಗ್ವಿಜಯಮಂ ಮಾಡಿ ರಿಪುನೃಪರ
ನೊತ್ತಿ ಭುಜಬಲದಿಂದ ಕಪ್ಪಮಂ ಕೊಂಡು ಬಂ
ದುತ್ತಮಸುವಸ್ತುಗಳನೆಂದುಮೀ[1]ವರ್ಥಮಂ ಚಂದ್ರಹಾಸಂ ಕಳುಪ [ಲೂ

1. ಈವ = ಕೊಡುವ.

ಪೊತ್ತು ತಂದಿಹೆವೆನಲ್ಕದ್ರವ್ಯವರಮನೆಗೆ
ಹತ್ತು ನಿನಗೊಂದರೆಣಿಕೆಯೊಳಿದು ಲೇಖನವ
ನಿತ್ತಡೆ, ಕುಳಿಂದಕನ ಸೇವಕರ್ಗಾದುಷ್ಟಬುದ್ಧಿ ಮಗುಳಿಂತೆಂದ
[ನೂ.

182. ಏನಿದೆತ್ತಣ ಕೌತುಕದ ನುಡಿ ! ಕುಳಿಂದಂಗೆ
ಸೂನು ಜನಿಸಿರ್ದಪನೆ? ಬಂಜೆಯಾಗಿಹಳವನ
ಮಾನಿನಿ, ವಿಚಿತ್ರಮೆನಲಾಚರರ್ಜೇಯು ! ಪುಸಿಯಲ್ಲವಂ ಬೇಂಹೆ
[ಗೈದೇ
ಕಾನನದ ಮಧ್ಯದೊಳನಾಥನಾಗಿಹ ಶಿಶುನಿ
ಧಾನಮಿರೆ, ಕಂಡೆತ್ತಿಕೊಂಡು ಬಂದಾತ್ಮಜವಿ
ಧಾನದಿಂದೋವಿದಂ, ಪ್ರೀತಿ ಮಿಗೆ, ಚಂದ್ರಹಾಸಾಭಿಧಾನದೊಳೆಂದ
[ರೂ.

Dushta buddhi is astonished and recognizes in Chandrahása that boy

183. ಕೇಳಿ ವಿಸ್ಮಿತನಾದನಾದುಷ್ಟಬುದ್ಧಿ ನಾಂ
ಪೇಳಟವಿಯೊಳ್ಪಸುಳೆಯಂ ಕೊಂದು ಬಹುದೆಂದು
ಹೇಳಿದರೆ, ಚಾಂಡಾಲರಂದುಳುಹಿ ಬಂದರಹುದೆಂದು ನಿಶ್ಚೈಸಿ ಬಳಿ
[ಕಾ
ಕಾಳಿಪಂ ದ್ವೇಷಮಂ ಚಿತ್ತದೊಳ್ಪುರಗೆ ಕರು
ಣಾಳುಗಳ ತೆರದಿಂದವರ್ಗಳಂ, ಮನ್ನಿಸಿ ನಿ
ಜಾಲಯಕೆ ತೆಗಸಿದಂ ಚಂದ್ರಹಾಸಂ ಕಳುಹಿದಗಣಿತಸುವಸ್ತುಗಳ
[ನೂ.

whom he had given to the butchers.

184. ಇಂದುಹಾಸನ ದೂತರುಪವಾಸವಿರ ಬಾರ
ದೆಂದು ಬಾಣಸಿಗರಂ ಕರೆಸಿ ಬಹುವಿಧಶಾಕ
ದಿಂದ ಷಡುರಸಭೋಜ್ಯಮಂ ಮಾಡಿಸಿದರೂಟಕವರೊಲ್ಲೆವೆನೆ, ಕ
[ಸಲ್ಲು

His dissimulation.

ಎಂದಿನಂತಲ್ಲ ಗರ್ವಿಸಿದಂ ಕುಳಿಂದನವ
ನಿಂದ ಸೊಕ್ಕಿದರವನ ಭೃತ್ಯರವರೆಲ್ಲರಂ
ತಂದು ಕಾರಾಗಾರದೊಳ್ನಿಗಳವಂ ಪ್ರಾಪಿಸುವೆನೆಂದನಾಸಚಿವನು.

185. ಕಷ್ಟಮೇತಕೆ ? ಜೀಯ್ಯ ! ಪರಿವಾರರಪ್ರತ
ಘೃಷ್ಟರಾದರೆಂಬ ಭಯಕೆ ನಿಂನಾಳುವ
ವೃಷ್ಟಾನ್ನಕಾಪ್ರೊಲ್ಲದಿರ್ದಪ್ಪಸಲೆ ! ಗರ್ವದಿಂ ಜಿರಿತರಲ್ಲೆಂದೂ
ದುಷ್ಟಬುದ್ಧಿಯು ಚಿತ್ತಮಂ ತಿಳುಹಿ ಮರುದಿನದೊ
ಳಿಷ್ಟಭೋಜನದಿಂದ ಸನ್ಮಾನಮಂ ತಳೆದು
He dismisses ಹೃಷ್ಟಮಾನಸರಾಗಿ ಬೀಳ್ಕೊಂಡು ತಿರುಗಿದಚಂದ್ರಹಾಸನ ದೂತ
[ರೂ.

186. ಮಂನಿಸಿ ಕುಳಿಂದಕನ ಚರರಂ ಕಳುಹಿ ಮಂತ್ರ
the servants of Chandrahása, appoints his son Madana to be regent ಭಿಂನವಾಗದಪ್ರೊಲರಮನೆಗೆ ಬಂದಾಗ ತಾ
ನುಂಸಿಸಿದ ಬಗೆಯನಾಳೋಚಿಸಿ ನೃಪಾಲನಂ ಬೀಳ್ಕೊಂಡು ಮದ
[ನನೆಂಬಾ.

ತಂನ ತನಯನ ಮೇಲೆ ರಾಜಕಾರ್‍ಯದ ಭಾರ
ಮಂ ನಿಯೋಗಿಸಿ ದುಷ್ಟಬುದ್ಧಿ ಪೊರಮಡುತಿರ್ದ
ನಂನೆಗಂ ವಿಷಯಾಭಿಧಾನದಿಂದೆಸವ ನಿಜಸುತೆ ಭರದೊಳೈತಂದಳೂ

187. ಕಂನೆವೆಂಗಳ ಕೆಳದಿಯರ ಕೂಡೆ ಶೈಶವೋ
during his absence and takes leave of his daughter Vishye. ದ್ಭಿಂನಯೌವನೆಯಾದ ವಿಷಯೆ ಬರೆ, ಕಂಡಿವ
ಳ್ಗಿಂನು ವರನಾಗ ಬೇಕೆಂದು ಚಿಂತಿಸಿ ಮನದೊಳಾದುಷ್ಟಬುದ್ಧಿ ಬ
[ಳಿಕಾ

ತಂದೆ ಮಗಳಂ ತೆಗೆದು ತಕ್ಕೈಸಿ ವಾತ್ಸಲ್ಯ
ದಿಂ ನಾಳೆ ಬಂದಪೆಂ, ಪೋಗು ! ನಿಜಭವನಕೆನೆ
ಸಂನುತವಸಂತದೊಳ್ಬಾಯ್ದೆರವ ಕೋಗಿಲೆಯ ಮರಿಯೊಲವಳಂ [ತಂದಳಾ.

188\. ತಾತ ! ನಂದನದೊಳಾಂ ನೀರ್ವೊಯ್ದು ಬೆಳಯಿಸಿದ
Her request. ಚೂತಲತೆ ಕಾತುದಿಂನುದ್ಯಾಪನಂ ಗೈಸ
ದೇತಕಿರ್ದಪೆ ? ರಾಜಕಾರ್ಯಮೇನೆಂದು ತಲೆವಾಗಿ ನಸು ಲಜ್ಜೆಯಿಂ [ದಾ
ಮಾತನಾಡುವ ಮಗಳ ಭಾವಮಂ ಕಂಡು ಸಂ
ಪ್ರೀತಿಯಿಂ ತೆಳುಪಿ ಮೈದಡವಿ ಮುದ್ದಿಸಿ ತನ್ನ
ಜಾತಮುದನಂಗಿವಳ ನೋಂಪಿಯುಂ ಮಾಡಿಸೆಂದಾಮಂತ್ರಿ ನೇಮಿಸಿ [ದನೂ.

189\. ಮನೆಗೆ ಮಗಳಂ ಕಳುಹಿ ರಾಜಕಾರಿಯಕೆ ಮದ
He sets out and arrives at Chandanávati ನನ ನಿಲಿಸಿ ತನ್ನ ಪರಿಜನಸಹಿತ ಪೊರಮಟ್ಟು
ದಿನಪರಡಕ್ಕೈತಂದು ಮುನ್ನಿರ್ದ ಕಾಡೆಲ್ಲಮೆಸೆವ ನಾಡಾಗಿರಲ್ಕೆ,
ಮನದೊಳ್ಕರುಬನಾಂತು ಬೆಳ್ಳಿದವನಾಗಿ, ಲೇ
ಸಿನೊಳಾಕುಳಿಂದಕನಿದಿರ್ವಂದು ಸತ್ಕರಿಸೆ,
ಘನವಿಭವದಿಂದ ರಾಜಿಪ ಚಂದನಾವತಿಗೆ ಬಂದನಾದುಷ್ಟಬುದ್ಧಿ.

190\. ರಿಪುಮಥನ[1] ! ಕೇಳ್ಕುಳಿಂದಂ ಬಹಳ ವೈಭವದೊ
Kulinda introduces his son Chandrahása to him. ಳುಪಚರಿಸಿ ತನ್ನ ನಂದನಚಂದ್ರಹಾಸನಂ
ವಿಪುಲಪರಿತೋಷದಿಂದೊಡೆಯಂಗೆ ಕಾಣಿಕೆಯ ನೀಡಿ ಕಾಣಿಸಿದ [ಬಳಿಕಾ,

1\. ವೈರಿ ಸಂಹಾರಕ=ಅರ್ಜುನ.

ವಿಪಿನದೊಳ್ತನಗೀಕುಮಾರಕಂ ಮುಂಗೈದ
ತಪದ ಫಲದಿಂ ತಾನೆ ದೊರಕೊಂಡನೀತನಂ
ಕೃಪೆಯಿಂದ ನೀವೆ ಪಾಲಿಸ ವೇಳ್ಪುದೆಂದು ನಿಜಪತಿಗೆ ಕೈವರ್ತಿ
[ಸಿದನೂ.

191. ಗಾಡಿಸಿದ ನೃಪಲಕ್ಷಣದ ಚಂದ್ರಹಾಸನಂ
The Minister dissembles friendship ನೋಡಿ ವಿಸ್ಮಿತನಾಗಿ ತನ್ನ ಮನದೊಳ್ಪಂತೆ
ಮಾಡಿಸಿದ ಕೃತ್ಯಮಂ ನೆನದು ವಂಚಿಸಿದರೇ ಚಾಂಡಾಲರೆಂಮನೆಂ
[ದೂ

ಕೂಡೆ ಮಂಮಲಮುರುಗಿ ಪುಸಿಗೆ ನಸು ನಗುತ ಕೊಂ
ಡಾಡಿ ಮನ್ನಿಸಿ, ತನಗೆ ನಿನ್ನ ಸುತನಂ ಕಂಡು
ಮೂಡಿ ತುತ್ಸಹನೆಂದನಾದುಷ್ಟಬುದ್ಧಿ ವಿಸಯದೊಳಾಕುಳಂದನೊ
[ಡನೀ.

1. ಅನುಕರುಣ.

192. ವ್ಯಾಳದಂಗದ ನಯುವ್ರೊ? ಗರ್ತಸಂಛಾದಿತತೃ
and delight. ಣಾಳಿಗಳೊ? ಮುಕರದಿಕ್ಕೆಯು ಮಡುವಿನಂಬುಜವ್ರೊ?
ಬಾಳ ಧಾರೆಗೆ ಲೇಪಿಸಿದ ಮಧುವ್ರೊ? ಕಮಲಾಂಬಕಿಯರ ಕೃತಕ
[ದ ಬೇಟವ್ರೋ?

ಕಾಳಕೂಟಂ ಬೆರಸಿದಮೃತಾಂನಭೋಜನವ್ರೊ?
ಪೇಳಲರಿದೆನೆ, ಸೊಗಸಿತಾದುಷ್ಟಬುದ್ಧಿ ಘಾ
ತಾಳಿಕೆಯನೊಳಗೊಂಡು ಹರುಷಲಾಂಛನದಿಂದ ನಸುನಗುತ ನುಡಿ
[ದ ಮಾತೂ.

193. ಎತ್ತ ಬಲ್ಲರ್ಸುಜನರಿಲೆ ಪಾರ್ಥ ! ಪಾಪಿಗಳ
His anxiety. ಚಿತ್ತದೊಳ್ಪುದುಗಿರ್ದ ಮಾಟಮಂ ! ವೀಳೆಯವ
ನಿತ್ತು ಮನ್ನಿಸಿ ಮಂತ್ರಿಪತಿ ಚಂದ್ರಹಾಸನಂ ಕರೆದು ಕುಳ್ಳಿರಿಸಿ [ಕೊಂಡು
ಮತ್ತೆ ಮನದೊಳ್ಮುಂನ ಭೂಸುರರ್ತನಗೆಂದ
ವೃತ್ತಾಂತಮಂ ನೆನೆದು ತನ್ನ ಸುತರಾಳ್ಕೆಗಾ
ಯಿತ್ತು ಕಂಟಕಮಕಟ! ಪಗೆಯಾದನಿವನೋರ್ವನೆಂದು ಚಿಂತಿ [ಸುತಿರ್ದನು.

194. ಬಂಜೆಯಾಗದು[1] ವಿಪ್ರರಂದೆಂನೊಳೆಂದ ನುಡಿ ;
ರಂಜಿಸುವ ರಾಜಲಕ್ಷಣದೊಳೊಪ್ಪುವನಿವಂ
ಭಂಜಿಸದೊಡೀಧರಣಿಗೀತನರಸಾದಪಂ ; ಬಳಿಕ ತನ್ನಾತ್ಮಜರ್ಗೀ
ಸಂಜನಿಸಲರಿಯದು ನೃಪಾಲತ್ವಮಗ್ಗಳಿಕೆ
He resolves to poison him. ಗಂಜುವವನಲ್ಲ, ಬಲವಂತನಹನೀತಂಗೆ
ನಂಜನೂಡಿಸಿ ಕೊಲ್ವುಪಾಯಮಂ ಮಾಳ್ಪೆನೆಂದೆಣಿಸಿದಂ ದುಷ್ಟಬು [ದ್ಧಿ.

1. ಭಂಜಿಸದೆ ಇದ್ದರೆ. ವ್ಯಾ. ಸೂ. 2. ವ್ಯಾ. ಸೂ. (ಆಗುವನು)

195 ರಾಕಾಶಶಾಂಕನಭ್ಯುದಯಮಂ ಕೆಡಿಸಿ ತಂ
He sends a letter to his son Madana by Chandrahása. ನಾಕಾರಮಂ ತೋರಿಸುವೆನೆಂಬ ಕತ್ತಲೆಯೊ
ಲಾಕಮಲಲೋಚನನ ಭೃತ್ಯನಂ ಕೊಲಿಸಿ ತಾ ಬಾಳ್ವೆನೆಂಬುಜ್ಜು [ಗದೊಳು
ಆಕುಮತಿಯಹ ಮಂತ್ರಿ ಬಳಿಕೊಂದು ಲೇಖನವ
ನೇಕಾಂತದೊಳ್ಬರೆದು ಮೇಣದಕೆ ಮುದ್ರೆಯಂ
ಜೋಕೆಯಿಂದಳವಡಿಸಿ ಕರೆಸಿ ಶಶಿಹಾಸನಂ ನೋಡಿ ನಗುತಿಂತೆಂದ [ನು ;

196. ಉರ್ವಮಂತ್ರದ ಕಜ್ಜಮಿದು, ಚಂದ್ರಹಾಸ! ನೀ
ನೊರ್ವನೆ ಹಯಾರೂಢನಾಗಿ ನಾಲ್ವರು ಸೇವ
ಕರ್ವೆರಸಿ ರಾಜಧಾನಿಗೆ ಪೋಗಿ ತನ್ನ ಮಗಮದನಂಗೆ ಮುದ್ರಿಸ
[ಹಿತಾ
ಸರ್ವಜನಮರಿಯದಂತೀವುದೀಪತ್ರಿಕೆಯ
ನುರ್ವರೆಯೊಳಾವೆಸಗಿದತಿಶಯದ ಮಾಳ್ಕೆ ನಂ
ವಿರ್ವರೊಳ್ಗುಪ್ತಮಾಗಿರಲೆಂದು ಕೊಟ್ಟನಾಮಂತ್ರಿ ತಲ್ಗೊಳಿಸನವ
[ಸೂ.

197. ಪ್ರೀತಿಯಿಂ ಪೇಳ್ದನಂತಸ್ಥಮಂ ; ತನ್ನೊಳೀ
Chandrahása takes leave of his father, ಮಾತು ನಿಶ್ಚಯಮೆಂದು ನಂಬಿ ಕೈಕೊಂಡು ಹರು
ಷಾತಿಶಯದಿಂದ ಮಂತ್ರಿಗೆ ಮಣಿದು ಬೀಳ್ಕೊಂಡು ವಂದಿಸಿ ಕುಳಿಂ
[ದನಡಿಗೇ
ಅತನೊಳ್ಪರಕೆ ಪೆತ್ತೊಡನೆ ಕಳುಹಿಸಿಕೊಂಡು
ಮಾತೆಮೇಧಾವಿನಿಗೆ ಬಂದು ನಿರ್ಗಮನವನಾ
ಖ್ಯಾತಿಸಿ ಪದಾಂಬುಜಕೆ ಪಣಿ ಇಟ್ಟನಾಚಂದ್ರಹಾಸನಭ್ಯಗ್ರದಿಂದಾ

198. ಆಸುವತಿ ಪಣೆವಿಡಿದು ನೆಗಪಿ ಸುಕುಮಾರಂಗೆ
and mother, and receives her blessing. ಸೇಸೆದಳಿದಾರತಿಯನೆತ್ತಿ ತಿಲಕಮನಿಟ್ಟು
ಭಾಸುರಸುಲಾಜೆದಧಿದೂರ್ವಾಕ್ಷತೆಗಳೊಡನೆ ತಳಿಗೆತಂಬುಲವನಿತ್ತು
ಲೇಸೊದ[1]ವಲಧ್ವದೊಳ್ಕಿಂನವಯುವಂಗಳಂ
ವಾಸುದೇವಂ ಕಾಯಲನುಕೂಲೆಯಾಗಿಹ ವ
ಧೂಸಮನ್ವಿತನಾಗಿ ರಾಜ್ಯಮಂ ಪಡೆಯೆಂದು! ಪರಸಿ ಬೀಳ್ಕೊಟ್ಟ
[ಳಂದೂ.

1. ವಿಧಿ.

199. ಕ್ರಮದಿಂದ ಮಾತೆಯಂ ಬೀಳ್ಕೊಂಡು ಪೊಱಮಡುವ
Good omens at his setting out. ಸಮಯದೊಳ್ಚಂದ್ರಹಾಸಂ ಕಂಡನಿದಿರೆ ಕುಂ
ಕುಮಸುರಂಜಿತಹರಿದ್ರಾಂಗದಿಂ ಕಂಗೊಳಿಪ ನೂತನವಧೂವರರ [ನೂ,
ಸಮಸದಾಕಾರದಿಂ ಬರುತಿರ್ದ ಭೂಸುರೋ
ತ್ತಮಯುಗವನೆಳೆಗರುವು ವೆರಸಿ ಬಹಧೃಷ್ಟಿಯಂ,
ರಮಣೀಯ್ಯಕುಸುಮಫಲಮಂ ಕೊಂಡು ತನಗೀಯ್ಯಲೈತಹ ವ [ನಾಧಿಪರನೂ;

200. ಸೂಡಿದಂ ಪರಿಪರಿಯೊಳೆಸೆವ ಕುಸುಮಂಗಳಿಂ
ಮಾಡಿದ ಸುಮಾಲೆಯಂ ತಲೆಗೋರ್ವನೋರ್ವನೆಡೆ
ಗೂಡಿ ಸೇರಿಸಿ ಕಟ್ಟಿದಚ್ಚಸಂಪಗೆಯ ಮಾಲೆಯನಿಕ್ಕಿದಂ ಕೊರ [ಳೊಳೂ;
ನೀಡಿದಂ ಮತ್ತೋರ್ವನೊಪ್ಪುವ ಕರಾಂಬುಜಕೆ
ದಾಡಿಮದ ಫಲವನಿವನೆಲ್ಲಮಂ ಕೈಕೊಂಡು
ಗಾಡಿ ಮಿಗೆ, ಮೆಱೆವ ನನವರಸಂತೆ ಪೊಱಮಟ್ಟನಾಚಂದ್ರಹಾಸನಂ [ದೂ.

201. ಹಯವರಸಮಾರೂಢನಾಗಿ ಸೇವಕಚತು
Safe arrival. ಷ್ಟಯದೊಡನೆ ಸೂಚಿತಶುಭೋದಯದ ಶಕುನಾವ
ಳಿಯನಾಲಿಸುತ ಬಟ್ಟೆವಿಡಿದು ಕುಂತಳಪುರದ ಬಾಹ್ಯೋಪವನಕೆ [ಬರಲೂ,
ನಯಸರದ ಕೋಗಿಲೆಯ ಸ್ವಾದರದ[1] ನುಡಿಯೊಳೆತ್ತಿ
ಶಯಫಲೋತ್ಕರದ ತರುಶಾಖೆಗಳ ಕೈಗಾಣಿ
ಕೆಯೊಳಿದಿರ್ಗೊಂಡುಪಚರಿಸುವಂತೆ, ಚಂದ್ರಹಾಸನ ಮುಂದೆ ಕಣ್ಗೆ [ಸೆದದೂ.

1. ತನ್ನಲ್ಲಿ ಆಗುತ್ತಿದ್ದ ಕೋಗಿಲೆಯ ನುಡಿಯಿಂದಲೂ, ಫಲ ತುಂಬಿದ ಗಿಡದ ಕೊಂಬೆಗಳಿಂದಲೂ, ಉಪವನ ಇದಿರು ಬಂದು ಮಾತಾಡಿಸಿ ಫಲ ಕೈಗಾಣಿಗೆ ಕೊಟ್ಟು ಉಪಚರಿಸುವಂತೆ ಶೋಭಿಸುತ್ತಿತ್ತು.

He stops outside the town of Kuntalapur, takes his

202\. ತೇಜಿಯಂ ಕಟ್ಟಿದೆಡೆಯೊಳ್ಸೇವಕರನಿರಿಸಿ
ರಾಜವನದೊಳ್ಪೊಕ್ಕು ಶಶಿಹಾಸನಲ್ಲಿ ವಿ
ಭ್ರಾಜಿಸುವ ನಿರ್ಮಲಸರಸ್ತೀರದೊಳ್ಮಿಂದು ಶುಚಿಯಾಗಿ ಸುಸ್ಥಳ[ದೊಳೂ
ರಾಜೀವಮೊದಲಾದಲರ್ಗಳಂ ತಿರಿದು ಹರಿ
ಪೂಜೆಯಂ ಮಾಡಿ ತಾ ತಂದ ಪಾಥೇಯಮಂ
ಭೋಜನಂಗೈದು ವಿಶ್ರಮನಾಗಿ ತಳಿತ ಮಾಮರನ ನೆಳಲಂ ಸಾ[ರ್ದನೂ.

meal in the royal garden, and falls asleep under a mango-tree.

203\. ತಿರಿದೆಳೆದಳಿರ್ಗಳಂ ಪಾಸಿ ಕುಳ್ಳಿರ್ದೊಯ್ಯ
ನೊರಗಲ್ಕೆ, ನಡುವಗಲ[1] ಬಿಸಿಲಿಂದ ಮಾರ್ಗದೊ
ಳ್ನಿರೆ ಬಳಲ್ದಿಹ ಚಂದ್ರಹಾಸಂಗೆ ತಂಣೆಲರ ಸೊಗಸಿಂದ ಕಂಣೆವೆಗ[ಳೂ
ಸೆರೆಗೊಂಡವಾಲಿಗಳನಾತ್ಮೀಯಕೃತ್ಯಮಂ
ಮರದು ನಿದ್ರಾಲೋಲನಾಗಿ ಮಲಗಿದನನಂ,
ಮಿರಗುವಹಿತಲ್ಪದೊಳ್ದೇವಪುರನಿಲಯಲಕ್ಷ್ಮೀವರಂ ಪವಡಿಸುವವೊ[ಲೂ.

1\. ನಡು ಹಗಲು.

At this time the daughter of the king, with her companion

204\. ಕುಂತೀಕುಮಾರ ! ಕೇಳ್ಚಂದ್ರಹಾಸಂ ಬನದೊ
ಳಿಂತು ಸುಖನಿದ್ರೆಯಿಂದಿರುತಿರ್ಪ ಸಮಯದೋ
ಳ್ಕುಂತಳೇಂದ್ರಂಗೆ ಚಂಪಕಮಾಲಿನೀನಾಮದೋರ್ವ ಮಗಳುಂಟ[ವಳ್ಗೇ
ಸಂತತಂ ಮಂತ್ರಿಸುತೆವಿಷಯೆ ಸಖಿಯಾಗಿರ್ಪ
ಳಂತರಿಸದವರೀರ್ವರುಂ ಬಂದರಲ್ಲಿಗೆ, ವ
ಸಂತಕಾಲ ಪ್ರಾಪ್ತವಾಗಿರೆ ಜಲಕ್ರೀಡೆಗಾಳಿಯರ ಗಡಣದಿಂದಾ.

205. ಆಳಿಯರೊಳಂತು ಚಂಪಕಮಾಲಿನಿಗೆ ಸರಸ

Vishaye, come to the garden, to bathe.

ಕೇಳಿ ಪೆಗ್ಗಳಿಸಿರ್ದ ಸಮಯದೊಳಲಗೊರ್ವ್ವ
ಬೇಳಂಬದಿಂದ ಕೆಲಸಿಡಿದು ಬಂದಾವಿಷಯೆ ಚೂತದ್ರುಮದನೆಳಲೊ [ಳೂ
ತೋಳತಲೆದಿಂಬಿನ ತಳಿರ್ವಸೆಯ ಮೇಲೆ ತಂ
ಗಾಳಿಗೊಡ್ಡಿದಮೈಯ್ಯ ಸೊಗಸಿಂದ ಮರೆದು ನಿ
ದ್ರಾಲೋಲನಾಗಿ ಮಲಗಿಹ ಚಂದ್ರಹಾಸನಂ ಕಂಡು ಸ್ವೈರಗಾದ [ಳೂ.

206. ದಿವಿಜೇಂದ್ರತನಯ ! ಕೇಳೀತೆರದೊಳಾಗ ನವ

Vishaye goes aside to gather flowers, discovers the

ಯುವತಿ ನಿಂದೀಕ್ಷಿಸುತ ಕಂಡಳವನಂಗದೊಳೆ
ಸೆವ ರುಚಿರಕಂಚುಕದ ತುದಿಸೆರಗಿನೊಳ್ಕಟ್ಟಿಕೊಂಡಿರ್ದ ಪತ್ರಿಕೆ [ಯನೂ ;
ತವಕದಿಂ ಬಿಟ್ಟು ಮುದ್ರೆಯನೋಸರಿಸಿ ತೆಗದು
ವಿವರದೊಳ್ತನ್ನ ತಂದೆಯ ಹೆಸರ ಬರಹಮಿರೆ,
ಲವಲವಿಕೆ ಮಿಗೆ, ನೋಡಿ ಹರುಷಪುಳಕದೊಳಂದು ನಿಂದೋದಿ [ಕೊಳುತಿರ್ದಳೂ.

207. ಶ್ರೀಮತ್ಸಚಿವಶಿರೋಮಣಿದುಷ್ಟಬುದ್ಧಿ ಸು

sleeping Chandrahása, and falls in love with him

ಪ್ರೇಮದಿಂ ತನ್ನ ಮಗಮದನಂಗೆ ಮಿಗೆ ಪರಸಿ
ನೇಮಿಸಿದ ಕಾರ್ಯವಿದಾಚಂದ್ರಹಾಸಂ [1] ಮಹಾಹಿತನೆಮಗೆ, ಮೇಲೆ [ನಮ್ಮಾ
ಸೀಮೆಗರಸಾದಪಂ, ಸಂದೇಹಮಿಲ್ಲಿದಕೆ,
ಸಾಮಾನ್ಯದವನಲ್ಲ ; ನಮಗೆ ಮುಂದಕೆ ಸರ್ವ
ಥಾ[2]ಮಿತ್ರನಹ[3]ವನೆಂದೀತನಂ ಕಳುಹಿದೆವು ನಿನ್ನ ಬಳಿಗಿದನರಿವು [ದೂ !

1. ಮಹಾ ಹಿತನೆಂದೂ ಮಹಾ ಹಿತನೆಂದೂ ಅರ್ಥ ಮಾಡಿಕೊಳ್ಳ ಬಹುದು. 2. ಸರ್ವ್ವಥಾ ಮಿತ್ರನೆಂದೂ ಸರ್ವಥಾ ಅಮಿತ್ರನೆಂದೂ ಅರ್ಥವಾಗುವದು. 3. ಆಗುವವನು.

208. ಹೊತ್ತು ಗಳೆಯದೆ, ಬಂದ ಬಳಿಕಿವನ ಕುಲಶೀಲ
ವಿತ್ತವಿದ್ಯಾವಯೋವಿಕ್ರಮಂಗಳ ನೀಕ್ಷಿ
ಸುತ್ತಿರದೆ, ವಿಷವ ಮೋಹಿಸುವಂತೆ, ಕೊಡುವುದೀತಂಗೆ ! ನೀನವ [ರೊಳಿಮಗೇ
ಉತ್ತರೋತ್ತರಮಪ್ಪುದೆಂದು ಬರದಿಹ ಲಿಪಿಯು
ನೆತ್ತಿ ವಾಚಿಸಿಕೊಂಡು ತರಳಾಕ್ಷಿ ತಾನದಕೆ
ಮತ್ತೊಂದಭಿಪ್ರಾಯಮಂ ತಿಳಿದಳುಲ್ಲಂಘಿಸಲವರುಂಟೆ ವಿಧಿಕೃತವ [ನೂ!

Seeing the letter of her father, she takes it out of his pocket and reads it.

209. ಈತಂ ತಮಗೆ ಮಹಾಹಿತನೆಂದು ತಮ್ಮ ಧರೆ
ಗೀತನರಸಹನೆಂದು ಕುಲಶೀಲವಿದ್ಯಗಳ
ನೀತನೊಳರಸ ಬೇಡವೆಂದು ಮುಂದಕೆ ಸರ್ವಥಾ ಮಿತ್ರನಹವ [ನೆಂದೂ
ಈತಂಗೆ ವಿಷಯೆ ಮೋಹಿಸುವಂತೆ, ಕೊಡುವುದೆಂ
ದಾತಾತನಣ್ಣಂಗೆ ಬರಸಿ ಕಳುಹಿದ ಪತ್ರ
ವೇ ! ತಪ್ಪದಿದು ವರ್ಣಪಲ್ಲಟದ ಮೋಸಮೊಂದಬಲೆ ಭಾವಿಸತಿ [ರ್ದಳೂ.

Her interpretation of the letter:

210. ಕಡು ಚೆಲ್ವನಾದ ವರನಂ ಕಂಡು ನಿಶ್ಚೈಸಿ
ತಡೆಯದಿಂದೀತಂಗೆ, ವಿಷಯೆ ಮೋಹಿಸುವಂತೆ,
ಕೊಡುವುದೆಂದಲ್ಲಿಂದ ತನ್ನ ಪಿತನೀತನಂ ಕಳುಹಿದಂ ಸುತನಬಳಿ [ಗೇ
ಪೊಡಗೂಡದಿರದೆನ್ನ ಮನದೆಣಿಕೆ ಪತ್ರಿಕೆಯೊ
ಳೆಡಹಿ ಬರದಕ್ಕರದ ಬೀಳ್ದರ್ಡಿವರಿಂದ
ಕೆಡವುದಗ್ಗದ ಕಜ್ಜಮೊಂದಾತರುಣಿ ತಾನದಂ ತಿದ್ದಲನುಗೈದಳೂ

Vishaye to be given in marriage to Chandrahása.

She changes the word Visha

211. ತಪ್ಪಿರ್ದ ಲಿಪಿಯೊಳ್ವಕಾರಮಂ ತೊಡದಲ್ಲಿ

(poison) into Vishaye, and puts the letter into Chandrahása's pocket.

ಗೊಪ್ಪುವ ಯೆಕಾರಮಂ ಕೆಲಬಲದ ಮಾಮರದೊ
ಳಪ್ಪ ನಿರ್ಯ್ಯಾಸಮಂ ತೆಗೆದು ಕಿರುವೆರಳುಗುರ್ಗೊನೆಯಿಂದ ತಿದ್ದಿ [ಬರದೂ
ಅಪ್ಪಂತೆ ಮೊದಲಿರ್ದ ಮುದ್ರೆಯಂ ಸಂಘಟಿಸಿ
ಕುಪ್ಪಸದ ಸೆರಗಿನೊಳ್ಕಟ್ಟಿ ಪಳೆಯೋಲಿರಿಸಿ
ಸೊಪ್ಪುಳಾಗದ ತೆರದೊಳಿದ್ದು ಮೆಲ್ಲನೆ ಮಂತ್ರಿಸುತೆ ತೊಲಗಿ ಬರು [ತಿರ್ದಳೂ.

212. ಆಳಿಯರ್ಕಂಡರೀಕೆಯ ಮೊಗದ ಭಾವಮಂ ;

She returns to her companions.

ಕೇಳದರಿದೇನೆಲೆ ಮೃಗಾಕ್ಷಿ ! ತಳುವಿದೆ ! ಮನದ
ಬೇಳಂಬಮಾವುದುಕ್ಕುವ ಹರುಷರಸದೊಡನೆ ಬೆರಸಿಹುದು ಬೆದ [ರುವೊನಲೂ ;

Their enquiries.

ಗಾಳಿ ಪರಿಮಳವನಡಗಿಪುದುಂಟೆ ? ತನುಚಿತ್ತ
ದಾಳಾಪಮಂ ಮಾಜಲರಿದಪುದೆ ? ಸಾಕಿನ್ನು
ಹೇಳದೊಡೆ, ಮಾಣಲಂತಸ್ಥಮಂ, ತಾನೆ ತುಬ್ಬುವುದೆಂದು ನಗುತಿ [ರ್ದರೂ.

213. ಕೆಳದಿಯರ ನುಡಿಗೆ ನಸುನಗುತ ನಿಜಭಾವಮಂ

She conceals her affections, wounded by the arrow of love,

ಮೊಳೆಗಾಣಿಸದೆ, ಪುಸಿಗೆ ಸರಸವಾಡುತ ಪೊತ್ತು
ಗಳೆವ ಮಂತ್ರಿಜೆಸಹಿತ ತಿರುಗಿದಳ್ವನದಿಂದ ಮನೆಗೆ ಚಂಪಕ ಮಾ [ಲಿನೀ,
ಪ್ರೊಳಲೊಳ್ವಾಹೋತ್ಸವಂಗಳಾಸಮಯದೊ
ಳ್ಸಳಿದವಗ್ಗದ ಗೀತನೃತ್ಯವಾದ್ಯಂಗಳಿಂ
ಕಳಸಕನ್ನಡಿಗಳ ವಿಲಾಸದ ಪುರಂಧ್ರಿಯರ ಶೋಭನದ ಸುಸ್ವರ [ದೊಳೂ.

214. ಪದುಳದಿಂದೈತಂದು ಬಾಲಕಿಯರಂ ಕಳುಹಿ
she returns with the Princes. ಸದನಮಂ ಪೊಕ್ಕಳವನೀಶ್ವರಾತ್ಮಜೆಬಳಿಕ
ಮದುವೆಗಳ ಮಂಗಳೋತ್ಸವದ ಮಧುರಸ್ವನಂಗಳನಾಲಿಸುತ ಮನ [ದೊಳೂ
ಇದು ಶುಭನಿಮಿತ್ತಮಿಂದೆನಗೆ ವೈವಾಹದ
ಭ್ಯುದಯಮಾದಪುದು ಕಾಂತನೊಳಿಂಬೇಳ್ಕೆಯಿಂದ
ಮದನಶರದಿಂದ ಪೀಡಿತೆಯಾದ ಮಂತ್ರಿಸುತೆ ಮನೆಗೆ ಬರುತಿರ್ದ [ಳಂದೂ.

1. ಮರುಳು ಗೊಳಿಸುವವನು=ಮನ್ಮಥ.

215 ವಿಜಯ! ಕೇಳತ್ತ ಬನದೊಳ್ಚಂದ್ರಹಾಸನಂ
Chandrahasa awakes; enters the town, ಭುಜಮಿತ್ರನಪರಾಹ್ನಕೈದಲ್ಕೆ, ನಿದ್ರೆಯಂ
ತ್ಯಜಿಸಿ ಮೊಗದೊಳೆದು ಮುಕ್ಕುಳಿಸಿ ಕರ್ಪೂರವೀಳೆಯಂ ಗೊಂಡು [ಬಳಿಕ ಬಿಗಿಸೀ
ನಿಜವಾಜಿಯಂ ಬಂದಡರ್ದನುಚರರ್ವೆರಸಿ
ರುಜುವಾದ ಶಕುನಂಗಳಂ ಕೇಳುತೊಲಿದು ಪಾ
ರಜನಮಿವನಾರೆಂದು ನೋಡಲ್ಕೆ, ನಗರಮಂ ಪೊಕ್ಕು ನಡೆತರುತಿ [ರ್ದನೂ.

216. ಆನಗರದೊಳ್ಕುಂತಳೇಶ್ವರಂ ನಿರ್ಮಲ
where the king had made over the government to the Ministers ಜ್ಞಾನದಿಂ ಗಾಲವನ ಸೂಕ್ತಮಂ ಕೇಳುತ ಸ
ದಾನಂದಯೋಗಮಂ ಕೈಕೊಂಡು ದುಷ್ಟಬುದ್ಧಿಗೆ ವಿಚಾರವನೊ [ಪ್ಪಿಸೀ
ಧ್ಯಾನಪರನಾಗಿರ್ದನದರಿಂದ ಪೊಳಲಂ ಪ್ರ
ಧಾನಿ ಪಾಲಿಸುವವಂ ಪೊರಮಟ್ಟಿರಲ್ಕೆ, ತ
ತ್ಸೂನುಮದನಂ ಧುರಂಧರತೆವೆತ್ತಾಸಮಯದೊಳೋಲಗದೊಳಿ [ರ್ದನೂ.

217. ಲೀಲೆವಿಗೆ, ನಗರದೊಳ್ಪಡೆತಂದು ಮಂತ್ರಿಸುತ
ನಾಲಯದ ಮುಂದೆ ವಾಜಿಯನಿಳಿದು ತದ್ವಾರ
ಪಾಲಕರ್ಗಿಂದುಹಾಸಂ ಪೇಳ್ದೊಡವರಂತರಂತರದೊಳೆಚ್ಚರಿಸಲೂ,
ಯೋಳಸೆಯ ಬಾಗಿಲವಿವೇಕನೆಂಬವನಿದಂ
ಕೇಳಿ ತಾಂ ಪಿಡಿದ ಶ್ರದ್ಧಾಯಷ್ಟಿಸಹಿತ ಬಂ
ದೋಲಗದೊಳಿರ್ದ ಮದನಂಗೆ ಬಿಂನೈಸಲ್ಪರಾಕಾದೊಡಿಂತೆಂದನೂ.

and is kindly received by Madana,

218. ಅವಧರಿಸು ! ಜೀಯ್ಯ ! ನಿಂಮ್ಮಯ್ಯಂಗೆ ಕ್ರೋಧನಿಂ
ಬವನಾಪ್ತನಾಗಿ ಹಿಂಸೆಯುಷ್ಟಿ ಪಿಡಿದು ಸ
ಲ್ಲವನಲಾ ಬಾಗಿಲ್ಗೆ ! ತನಗಾತನಂತೆ ನಿಂನೊಳ್ನಲುಗೆಯುಂಟೆ ? ಬ [ರಿದೇ
ತವಭೃತ್ಯನಾಗಿಹೆಂ ? ಸಾಕದಂತಿರಲಖಿಳ
ಭುವನಕಧಿಪತಿಯಾದ ಮುರಹರನ ಭಕ್ತನ
ಲ್ಲನೆ ಚಂದ್ರಹಾಸನಾತನ ಬರವನರುಪಲೇತಕೆ ಸುಮ್ಮನಿಹೆ ? ಯೆಂ [ದನೂ.

to whom his arrival had been announced by porters.

219. ನೀತಿಸಂಮತದಿಂ ವಿವೇಕನಿಂತೆನೆ, ಕೇಳ್ದು
ಶಾತಕುಂಭಾಲಂಕೃತಾಸನವನಿಳಿದು ಹರು
ಷಾತಿಶಯದಿಂದ ಮದನಂ ಚಂದ್ರಹಾಸನಿದಿರ್ವಂದು ಕಂಡು ನಗು [ತಾ
ಪ್ರೀತಿಯಿಂದಪ್ಪಿ ಕೈವಿಡಿದೊಡನೆ ಸಭೆಗೆ ತಂ
ದಾತನಂ ಸತ್ಕರಿಸಿ ಚಂದನಾವತಿಯ ತ
ದ್ಭೂತಳದ ಮೇಧಾವಿನಿಯ ಕುಳಿಂದನ ಕುಶಲದೇಳ್ಗೆಯಂ ಬೆಸಗೊಂ [ಡನೂ.

220. ವಿನಯದಿಂ ಮತ್ತೆ ನಸುನಗೆವೆರಸಿ ನಿನ್ನ ದರು
ಶನವಿಂದಪೂರ್ವವಾದುದು, ಬಂದ ಕಾರ್ಯಮಂ
ತನಗೊರವುದೆಂದು ಮದನಂ ಚಂದ್ರಹಾಸನಂ ಕೇಳ್ದೊಡಾತಂಗೆ ನಿ [ನ್ನಾ

Chandrahása delivers the letter.

ಜನಕನೆಂನಂ ನಿನ್ನ ಬಳಿಗತಿರಹಸ್ಯದಿಂ
ದನುಮತಿಸಿ ಕಳುಹಲಾನೈತಂದೆನೆಂದು ಕುರು
ಪಿನ ಮುದ್ರೆಸಹಿತ ನಿಜಕರದೊಳಹ ಪತ್ರಮಂ ಕೊಟ್ಟನಾತನ ಕೈ
[ಯ್ಯೊಳೂ.

221. ಇದ್ದವರನಾಸಭೆಯೊಳಿರಿಸಿ ಶಶಿಹಾಸನಂ
Madana reads it. ಗದ್ದುಗೆಗೆ ನೆಲೆಗೊಳಿಸಿ ಮದನನಾಸ್ಥಾನದಿಂ
ದೆದ್ದಮಲನೆಂಬ ತನ್ನನುಜನಂ ಕೂಡಿಕೊಂಡೇಕಾಂತಭವನಕೈದೀ
ಹೊದ್ದಿಸಿದ ಮುದ್ರೆಯಂ ತೆಗೆದು ಪತ್ರವನೋದಿ
ತಿದ್ದಿದಕ್ಕರವನರಿಯದೆ, ನಿಜದ ಬರಹಮಂ
ದದ್ದನತಿಹರುಷಾರ್ಣವದೊಳಾಗ ಶತಯಾಗತನಯ ಕೇಳ್ಕೌತುಕವ
[ನೂ !

1. ಮುಳುಗಿದನು. ವ್ಯಾ. ಸೂ. 2. ನೂರು ಯಾಗ ಮಾಡಿದವನು=ಇಂದ್ರ ಅವನ ಮಗನು=ಅರ್ಜುನ.

222. ಲೇಸಾದುದೈಯ್ಯನಿಂದೆನಗೆ ನೇಮಿಸಿ ಕಳುಹಿ
His joy at the prospect of seeing his sister so suitably married. ದೀಸು ವಕ್ಕಣೆಗಳ್ಮಹಾಹಿತಂ ತನಗೀತ
ನೀಸೀಮೆಗರಸಾದಪಂ, ಸರ್ವಥಾಮಿತ್ರನಹನಹುದು, ನಿಶ್ಚಯಮಿ
[ದೂ,
ಮೋಸವೆ ! ಕುಲಾಚಾರಗತಿಯನಾರೈವಡೆ, ವಿ
ಲಾಸದಿಂ ವಿಷಯೆ ಮೋಹಿಸುವಂತೆ, ಕೊಡುವೆನಿದ
ಕೋಸರಿಸಲೇಕೆ? ತಂಗಿಗೆ ತಕ್ಕವರನೀತನೆಂದು ಮದನಂ ತಿಳಿದನೂ

223. ಮುಂನ ತಂದೆಯು ನಿರೂಪದ ಕಾರ್ಯಮದರ ಮೇ
ಲೆಂನ ಮನವಿವನೊಳಕ್ಕರ್ವೆರಸುತಿದೆ, ರೂಪ
ನುಂನಿಸುವಡನುಜೆಗೀತಂಗೆ ಪಾಸಟಿ! ವಿಚಾರಿಸೆ, ಕೃಷ್ಣಭಕ್ತನಿವ
[ನೂ

ಇನ್ನು ಸಂಶಯಮಿಲ್ಲವೀ ಚಂದ್ರಹಾಸಂಗೆ
ಕನ್ಯೆದಿಲಂದದಕ್ಷಿಯು ತಂಗಿಯುಂ ಕೊಟ್ಟು
ಮನ್ನಿಸುವೆನೆಂದು ನಿಶ್ಚೈಸಿ ಮದನಂ ಮತ್ತೆ ಬಂದನೋಲಗದ ಸಭೆ
[ಗೇ.

224. ಗಣಿತಜ್ಞರಂ ಕರೆಸಿ ನೋಡಿಸಿದನಾಗಲಸು
The Astrologers are consulted. ಗುಣದೋಷದ ರಾಶಿಕೂಟ[1]ವನಮಲಲ[2]ಗ್ನವುಂ
ಗುಣಿಸಿ ವಿಸ್ತರಿಸಿದರ್ಬಳಿಕ ಮದನಂ ಮಾಡಿಸಿದನೊಸಗೆಯುಂ ಪೊಳ
[ಲೊಳು.

Preparations. ಅಣಿದವಭ್ರವನೆಸೆವ ಗುಡಿತೋರಣಂಗಳ
ಟ್ಟಣಿಸಿದವು ಬೇಕಾದ ಮಂಗಳಸುವಸ್ತುಗಳ್
ಮಣಿಮಯದ ವೇದಿಯಂ ವಿರಚಿಸಿದರೊಪ್ಪಿನಿಂ ವೈವಾಹಮಂಟಪ
[ವನೂ.

1. ಕನ್ಯೆವರರು ಹುಟ್ಟಿದ ರಾಶಿಗಳನ್ನು ಜೋತಿಷ್ಕರು ನೋಡಿ ಅವುಗಳಲ್ಲಿ ಒಂದಕ್ಕೊಂದು ಮಿತ್ರತ್ವ ಕಂಡರೆ ಲಗ್ನ ಮಾಡಬೇಕು ಅನ್ನುತ್ತಾರೆ, ವಿರೋಧ ಕಂಡರೆ, ಬೇಡ ಅನ್ನುತ್ತಾರೆ, ಹ್ಯಾಗಂದರೆ: ವರನು ಮೇಷದಲ್ಲಿ ಕನ್ಯೆ ಸಿಂಹದಲ್ಲಿ ಹುಟ್ಟಿದರೆ, ಅಗವಿ ಮಾಡಬಾರದು, ಯಾಕಂದರೆ ಸಿಂಹಕ್ಕೂ ಮೇಷಕ್ಕೂ ವೈರವದೆ. ಆದರೆ ವರನೇ ಸಿಂಹದಲ್ಲಿ ಕನ್ಯೆ ಮೇಷದಲ್ಲಿ ಹುಟ್ಟಿದರೆ, ಒಂದು ವೇಳೆ ಮಾಡ ಬಹುದು; ಯಾಕಂದರೆ ವರಸ್ಥಿತಿಗೆ ಅನುಸಾರವಾಗಿಧೆ. 2. ಮದಿವೆ ಮಾಡತಕ್ಕ ಮುಹೂರ್ತ, ಲಗ್ನ ಮೂರು ಪ್ರಕಾರವಾಗಿದೆ. 1. ಸೂರ್ಯಲಗ್ನ, ಸೂರ್ಯನ ಸಂಗಡ ಯಾವ ರಾಶಿ ಮೂಡುತ್ತದೋ ಅದೇ ರಾಶಿ ಲಗ್ನದಲ್ಲಿ ಸೂರ್ಯನಿದ್ದಾನೆ; ಸಿಂಹ ರಾಶಿಯು ಸಂಗಡ ಮೂಡಿದರೆ, ಸೂರ್ಯನು ಸಿಂಹ ಲಗ್ನದಲ್ಲಿದ್ದಾನೆ. 2. ಚಂದ್ರಲಗ್ನ; ಅಂದರೆ ಆ ೨೭ ನಕ್ಷತ್ರಗಳಲ್ಲಿ ಚಂದ್ರನ ಸಂಗಡ ಉದಯವಾಗುವತ್ತಾದ್ದು ಯಾವ ರಾಶಿಯದೋ, ಅದೇ ಲಗ್ನದಲ್ಲಿ ಚಂದ್ರನು ಇದ್ದಾನೆಂದು ತಿಳಿಯ ತಕ್ಕದ್ದು, ಹ್ಯಾಗಂದರೆ ಚಂದ್ರ ಹಸ್ತ ನಕ್ಷತ್ರದ ಸಂಗಡ ಉದಯವಾದರೆ, ಇದು ಕನ್ಯೆ ರಾಶಿಯದಾದಕಾರಣ, ಚಂದ್ರ ಕನ್ಯೆ ಲಗ್ನದಲ್ಲಿದ್ದಾನೆಂದು ತಿಳಿಯಬೇಕು. 3. ನಿತ್ಯಲಗ್ನ ಅಂದರೆ ಒಂದು ದಿವಸ ೧೨ ರಾಶಿಗಳಲ್ಲಿ ಒಂದೊಂದು ಮೂಡುವ ಹೊತ್ತು. ಶುಭಾಶುಭ ನೋಡಿ ಮದಿವೆ ಮಾಡಬೇಕೆಂಬ ದಿವಸದಲ್ಲಿ ಮದಿವಿಗೆ ಇಂಥಿಂಥಾ ರಾಶಿಗೆ ಬಲವದೆ ಎಂದು ಆ ರಾಶಿ ಮೂಡುವ ಹೊತ್ತಿಗೆ ಲಗ್ನ ಮಾಡಿರೆಂದು ಜೋತಿಷ್ಕರು ಹೇಳುತ್ತಾರೆ. ಒಂದೊಂದು ದಿವಸ ಬಳ್ಳೇದು ಆದರೆ ಈ ದೇಶದಲ್ಲಿ ಹೀಗೆ ಕಲ್ಪನೆ ಮಾಡಿದ್ದಾರೆ.

225. ಬಳಿಕ ಮದನನ ಹೇಳಿಕೆಯೊಳಂದು ವಿದಿತನುಂ

The marriage ceremonies.

ಗಳವಿವಾಹೋಚಿತಕ್ರಿಯೆಗಳಂ ವಿರಚಿಸಿದ
ರಿಳೆಯದಿವಿಜಪುರಂಧ್ರಿಯರ್ಪೈದೆ ಮಜ್ಜನದ ಮಂಡನದ ಮಾಳ್ಕೆಗ [ಳನೂ,
ಅಳವಡಿಸಿದರ್ಪಣೆಯೊಳೆಸೆವ ಬಾಸಿಗದ ಮದ
ವಳಿಗನಾಗಿರ್ದಂ ಕುಳಿಂದಜಂ; ದೇವಪುರ
ನಿಳಯಲಕ್ಷ್ಮೀಕಾಂತನೊಲವಿಂದ ವಿಷಮಮೃತಮಹುದು, ಪೊಸ [ತೇನೆನಲ್ಕೇ!

226. ವಾಸವಾತ್ಮಜ[1]! ಕೇಳಲಂಕಾರದಿಂ ಚಂದ್ರ
ಹಾಸನಂ ಮದವಳಿಗನಂ ಮಾಡುತಿರ್ದಸುರ
ವಾಸಿನಿಯರುತ್ಸವದೊಳಂತೆ ಮದನನಂತಃಪುರದೊಳಿಚ್ಚರಿಸ [ಲು,
ಪ್ರಾಸಾದದಗ್ರದೊಳ್ತವಿಸುತಿಪ ವಿಷಯೆಗೆ ವಿ
ಲಾಸಿನಿಯರ್ತಂದು ನುಡಿದರಂಬುಜವನಕೆ
ನೇಸರುದಯಿಸುವ ಕಾಲದ ಮುಂದೆ ಕಂಪಿಡಿದು ಬೀಸುವೆಳೆಗಾಳಿ [ಯಂತೇ.

1. ಇಂದ್ರನ ಮಗನು=ಅರ್ಜುನನ.

227. ಉಲ್ಲಾಸಿಸಿಪ್ಪುದಿಪ ಚಂದ್ರಹಾಸನ ಸು
ಬಲ್ಲಿತಂ ನೋಡಿ, ಮದನಂ ಮುದದೊಳಾಗ ಸಂ
ಕಲ್ಪಿತಸ್ವೀಕ್ಷಣೆಗೆ ಸುಮುಹೂರ್ತಮಂ ಕೇಳ್ದು ತೆರೆದೆಗಸಿ ಭೂ [ದಿವಿಜರಾ
ನಲ್ಪರಕೆಯಿತ್ತು ಲೋಕಾಚಾರದೊಪ್ಪಮಿಸೆ
ಯೆಲ್ಲವದ ಸತ್ಕ್ರಿಯೆ ಸುತ್ತ ನೂಲ್ಕ್ರಮದಿ, ಘಟಿ
ಕ್ಕ್ಲನಿಮಿಷೊತ್ತರದಿ ಜಾತವಾಗಲಿಂದವನ ಕೈಗೆ ಧಾರೆಯ ನೆರೆದನು.

228. ಮೊರೆವ ಮರಿದುಂಬಿಗಳ ಮಾಲೆಯಂ ತಾಳ್ದ ನವ
ಪರಿಮಳದ ಮಂದಾರಮಾಲೆಯಂ ವಿಷಯೆ ನಾಂ
ದರಶಿರಿಷಮಾಲೆಯಂ ಪೊಲ್ವ ನಳಿತೋಳುಗಳನಿತ್ತು ಕಂದರದೊಳಿ
[ಡಲೂ

ಭರಿತಲಾವಣ್ಯಸಾಕಾರದಿಂ ಮಂಗಳಾ
ಭರಣಂಗಳೆಸೆವಲಂಕಾರದಿಂ ಪಾರ್ವರು
ಚ್ಚರಿಪಗ್ನಿಹೋತ್ರಪ್ರಕಾರದಿಂ ವಧುವಂ ಕುಳಿಂದಜಂ ಕೈವಿಡಿದ
[ನೂ.

229. ಭಂಡಾರದಖಿಳವಸ್ತುಗಳೊಂದು ತೃಣವಾಗಿ
ಕಂಡು ವೆಚ್ಚಿಸಿ ಚಂದ್ರಹಾಸನ ವಿವಾಹವಂ
ಕೊಂಡೆಸಗುತಿರ್ದನೊಲವಿಂ ಮದನನಿತ್ತ ಕುಂತಳಪುರದೊಳವಸತ್ತ
[ಲೂ

ಅಂಜಲೆದು ಚಂದನಾವತಿಯೊಳ್ಕುಳಿಂದನಂ
In the mean time, ದಂಡಿಸಿದನಾದುಷ್ಟಬುದ್ಧಿ ಜರದುರೆ ಬೈದು
ಹಿಂಡಿ ಹಿಳಿದರ್ಥಮಂ ತೆಗದು ಶೆರೆಮನೆಗಿಕ್ಕಿ ನಿಗಳಮಂ ಕಾಲ್ಗೆ ಪೂ
[ಡೀ.

230. ಹೆಕ್ಕಳಿಸಿ ರಾಜ್ಯಮಂ ಕೊಟ್ಟರೆನ್ನಂ ಮರೆದು
Dushta buddhi puts the chief of Chandanávati in prison. ಸೊಕ್ಕಿ ತನಗೋರ್ವಮಗನಂ ಮಾಡಿಕೊಂಡವನ
ಮಕ್ಕಳಾಟಿಕೆಯಿಂದ ದೇವಶಾಲಯುತಟಾಕಾರಾಮಕೋಟಿಗಳಗೇ
ಇಕ್ಕಿ ಕೆಡಿಸಿದನೆಂದವನ ವಳಿತಮಂ ತೆಗದು
ಕಕ್ಕಸದ ಬಂಧನದೊಳಿರಿಸಿ ಕುಂತಳನಗರಿ
ಗಕ್ಕರಿಂದೈತಂದನಾದುಷ್ಟಬುದ್ಧಿ ವಾಹಕರನವಘಡಿಸಿ ನಡಸೀ.

231. ಕೊಂದಪನೊ ವಿಷವನೂಡಿಸಿ ಚಂದ್ರಹಾಸನಂ ?

Full of anxiety he returns in great haste

ಮಂದಮತಿಯಾಗಿ ಮರೆದಿರ್ದಪನೊ ಮಗನೆಂಬ
ಸಂದೇಹದಿಂ ಚಂದನಾವತಿಯೊಳಿರದೆ ಕುಂತಳಪುರಕೆ ದುಷ್ಟಬುದ್ಧಿ
ನಿಂದಲ್ಲಿ ನಿಲ್ಲದೈತರೆ, ಪಥದೊಳಿದಿರಾಗಿ
ಬಂದು ನುಡಿದುದು ಸರ್ಪವೊಂದು ; ನಿಂನಾಲಯದೊ
ಳಿಂದುವರೆಗೊಡವೆಯಂ ಕಾದಿರ್ದೆನದು ನಿನ್ನ ಸುತನಿಂದ ಪೋದು
[ದೆಂದೂ

232. ಮಾಸವರ ತೆರದೊಳಿಂತೆಂದೊರೆದು ಫಣಿ ಬಿಲಕೆ

to Kuntalapur

ತಾನಿಳಿಯೆ, ಕೇಳ್ದು ವಿಸ್ಮಿತನಾಗಿ ಮಂತ್ರಿ ದುಂ
ಮಾನದಿಂ ನಗರದ ಸಮೀಪಕೈತರೆ, ವಾದ್ಯಘೋಷಿತಂ ಕಿವಿಯೊಳಿ
[ಡಿಯೇ,
ಯೇನಿದುತ್ಸಹಮೂರೊಳೆನೆ ? ಕಂಡವರ್ನಿಂನ
ಸೂನುಮದನಂ ಚಂದ್ರಹಾಸಂಗೆ ತಂಗಿಯ ವಿ
ಧಾನದಿಂ ಮದುವೆಯಂ ಮಾಡಿಸಿದನದರೊಸಗೆ ಪೊಳಲೊಳಾದಪುದೆಂ
[ದರೂ.

233. ಕೂರ್ದಸಿಯನಿಳುಹಿದಂತಾಯ್ತು ಕರ್ಣದೊಳಾಗ

His astonishment and grief.

ಶಾರ್ದವಕ್ಷಿಗಳರುಣತೆಯನುಗ್ರಕೋಪದಿಂ
ಮಿರ್ದನೇ ತನ್ನ ನೇಮವನಕಟ ! ಮಗನೆಂದು ಪಲ್ಗಡಿವುತೈತರ
[ಲ್ಕೇ:
ಸಾರ್ದ ಸಂತೋಷದಿಂ ಬಂದು ಕಾಲ್ಗೆರಗಿದೊಡೆ,
ಚೇರ್ದು ಸುತನಂ ಬೈದು ಮಂತ್ರಿ ನಿಜಸದನಮಂ
ಸೇರ್ದು ಪೊಂನಂದಣಮನಿಳಿದಾತ್ಮಜಾತನಂ ನೋಡಿ ಮುಳಿದಿಂತೆಂ
[ದನೂ,

234. ಮದನನಂ ಮದವರ್ಕಳಂ[1] ಮಹಾವೈಭವದ
He scolds the marriage guests, ಮದುವೆಯಂ ತ್ಯಾಗಭೋಗದ ವಿಚಿತ್ರರಚಿತಮಂ
ಮುದದಿಂದ ಬಂಣಿಸುವ ಭಟರನುಂಬಿತ್ತರಿಸಿ ಪರಸುವ ಮಹೀಸುರ [ರನೂ
ಸುದತಿವಿಷಯೆಗೆ ತಕ್ಕವರನಿಂದುಹಾಸನಂ
ದಿದಿರಾಗಿ ಬಂದಾರತಿಯನೆತ್ತಿ ನುಡಿವ ಶಶಿ
ವದನೆಯರನವಗಡಿಸಿ ಮಂತ್ರಿಬೈದಂ ತನ್ನ ಮನೆಗಾಪ್ತರಾದವರ [ನೂ.

1. ಮದವಕ್ಕಳು.

235. ಮೂಢ ನೀನೆಲವೆಲವೊ ಮದನ! ನಿಂನೆಡೆಗೆ ನಾಂ
reproves his son, ಗೂಢದಿಂ ಬರಸಿ ಕಳುಹಿದೊಡುರುವಕಜ್ಜಮಂ
ರೂಢಿಯಿಂ ಮಾಡಿ ಕೆಡಿಸಿದೆ, ಪಾಪಿ! ಹೃದಯಶೂಲವನೆನಗೆ ಮೇ [ದಿನಿಯೊಳೂ
ಗಾಢದಿಂ ಬಲಿದೆ! ಸಾಮ್ರಾಜ್ಯಸಿಂಹಾಸನಾ
ರೂಢನಾಗಿರಲೊಲ್ಲದಾರ್ಜಿಸಿದ ವಿತ್ತಮಂ
ಪ್ರೌಢಿಯಿಂದಖಿಳಜನಕಿತ್ತೆ! ವನವಾಸವೇ ಗತಿ ನಿನಗೆ ಹೋಗೆಂದ [ನೂ!

236. ಪಿತನ ಮಾತಂ ಕೇಳ್ದು ಮದನನುರೆ ಬೆರಗಾಗಿ
ಖತಿ ಯೇಕೆ? ಜೀಯ್ಯ! ನಿಂಮಡಿಗಳ ನಿರೂಪಮಂ
ಪ್ರತಿಪಾಲಿಸಿದೆನಲ್ಲದಾನತಿಕ್ರಮಿಸಿ ಮಾಡಿದ ಕಜ್ಜಮೇನಿದರೊಳೂ?
ಕ್ಷಿತಿಗೆ ಕೌತುಕವೆ, ತಂದೆಯ ಮಾತಿಗಾಗಿ ರಘು
ಪತಿ ವರ್ತಿಸನೆ[1] ವಿಪಿನವಾಸಮಂ? ಪತ್ರಸಂ
ಮತವಿಡಿದು ವಿಷಯೆಗೆ ವಿವಾಹಮಂ ವಿರಚಿಸಿದೊಡಾಯ್ತೆನಗೆ ವನ [ವೆಂದನೂ.

1. ದಶರಥನು ತನ್ನ ಹಿರಿಯ ಮಗನಾದ ರಘುಪತಿಗೆ ಪಟ್ಟ ಕಟ್ಟಲೊಲ್ಲದೆ ಹದಿನಾಲ್ಕು ವರುಷ ವನಕ್ಕೆ ಹೋಗುವ ಹಾಗೆ ಮಾಡಿದನು.

237. ಗಂನಗತಕದ ಮಾತು ಸಾಕೆಂಸ ಕಂಣ ಮುಂ

but after reading the letter himself,

ದಿಂನಿರದೆ ಪ್ಪೋಗೆಂದು ! ಮಂತ್ರಿ ಮಗನಂ ಬೈದು
ಮುಂನ ತಾ ಬರಸಿ ಕಳುಹಿದ ಪತ್ರಮಂ ತರಿಸಿ ನೋಡಿಕೊಂಡದ
[ರೊಳಿರ್ದಾ
ಭಿಂನಿಸಿದ ಭಾವಾರ್ಥಮಂ ತಿಳಿದು ತಪ್ಪಿಲ್ಲ
ತಂನ ತನಯನೊಳಿನ್ನು ಲೋಕದೊಳ್ವಿಧಿಲಿಖಿತ
ಮಂ ನಿವಾರಿಪರುಂಟೆ ? ಶಿವ ಶಿವಾ ! ಪೊಸತೆಂದು ಬಿಸುಸುಯ್ದು ಬೆ
[ರಗಾದನು.

238. ವಿಷವೆ ಮೋಹಿಸುವಂತೆ ಕೊಡುವುದೆನಲೀತಂಗೆ

he is convinced of his innocence,

ವಿಷಯೆ ಮೋಹಿಸುವಂತೆ ಲೇಖನದ ಬರಹ ತಾಂ
ವಿಷಮವಿದು ವಿಧಿಕೃತವೊ ? ತನ್ನ ಮೋಸವೊ ? ಬರದವನ ಮರ
[ಹೋ ? ಶಶಿಹಾಸನಾ
ಮೃಷೆಯೊ ? ಮದನನ ಮೇಲೆ ತಪ್ಪಿಲ್ಲ ; ಮೊದಲಿನಗೆ
ಋಷಿಗಳಾಡಿದ ಮಾತು ಪುಸಿಯದೆಂದಾಮಂತ್ರಿ
ವಿಷಮಬುದ್ಧಿಯೊಳೊಂದುಪಾಯಮಂ ಮನದೊಳಗೆ ನೆನದು ಚಿಂತಿ
[ಸುತಿರ್ದನು.

239. ವಿಧುಹಾಸನಂ ಪಲವುಪಾಯದಿಂದೀಗ ನಾಂ

and seems to acquiesce in the fact.

ವಧಿಸದಿರ್ದೊಡೆ, ತನ್ನ ಸಂತತಿಗೆ ಧರೆಯನಾ
ಳ್ವಧಿಕಸಂಪದವಾಗದದರಿಂದ ಕುಲಘಾತಕಗೆ ಮದುವೆಯಾದ ವಿ
[ಷಯೆ
ವಿಧವೆಯಾಗಿರಲೆಂದು ಹೃದಯದೊಳ್ನಿಶ್ಚೈಸಿ
ಮಧುರೋಕ್ತಿಯಿಂದ ಮದವರ್ಕಳಂ ಮನ್ನಿಸಿ ವಿ
ವಿಧವೈಭವಂಗಳಂ ನಡಸಿ ಜಾಮಾತನಂ ಮಂತ್ರಿ ಕರದಿಂತೆಂದನು:

240. ವೀರ! ಬಾರೈ! ಚಂದ್ರಹಾಸ! ನೀನಿಂನೆಗಂ

A second attempt, to kill Chandrahása.

ದೂರವಾಗಿರ್ದೆ, ನಮಗಿಂನಳಿಯನಾದ ಬಳಿ
ಕೂರ ಹೊರಬನದೊಳಹ ಚಂಡಿಕಾಲಯಕೆ[1] ಮದುವೆಯ ನಾಲ್ಕನೆ
[ಯದಿನದೊಳೂ
ನೀರಜಸಖಾಸ್ತಮಯದೊಳಗೋರ್ವನೇ ಪೋಗಿ
ಗೌರಿಯಂ ಪೂಜಿಸಿ ಬಹುದು! ನಮ್ಮ ವಂಶದಾ
ಚಾರವಿದು ವರನಾದವಂಗೆ; ನೀನಿಂದದಂ ಮಾಡೆಂದು ನೇಮಿಸಿದ
[ನೂ.

1. ಈ ಗುಡಿ ಇಂದೂ ಬಳ್ಳಾರಿಯಲ್ಲಿ ಅದಂತೆ.

241. ಲೇಸಾದುದೆಂದು ಮಾವನ ಮಾತಿಗೊಪ್ಪಿ ಶಶಿ
ಹಾಸಂ ಪ್ರಸೂನ ಗಂಧಾಕ್ಷತೆಗಳಂ ತರಿಸ
ಲಾಸಚಿವನತಿಗೂಢದಿಂದ ಚಾಂಡಾಲರಂ ಕರಸಿ ನೀವಂದಿನಂತೆ
ಮೋಸದಿಂ ಬಿಟ್ಟು ಬಾರದೆ, ಚಂಡಿಕಾಲಯಕೆ
ನೇ ಸರಂಬುಧಿಗಿಳಿಯಲರ್ಚನೆಗೆ ಬಹನೋರ್ವ
ನೋಸರಿಸದಡಗಿಕೊಂಡಿರ್ದಾತನಂ ಕೊಲ್ವುದೆಂದು ಬೆಸಸಿದನವ
[ರ್ಗೇ.

242. ವಿಜಯ! ಕೇಳಾಸಮಯದೊಳ್ಕುಂತಳೇಶ್ವರಂ

The king of Kuntala abdicates.

ನಿಜಶರೀರಚ್ಛಾಯೆ ತಲೆಯಿಲ್ಲದಿರೆ, ಕಂಡು
ದ್ವಿಜಶಿರೋಮಣಿಗಾಲವಂಗರಪಲಾತನಿದು ಮೃತಿಗೆ ಕಾರಣಮೆನ
[ಲ್ಕೆ,
ರುಜೆಗೆ ಮೈಗೊಡ ಬಾರದೆಂದು ನಿರ್ಮೋಕಮಂ
ಭುಜಗಪತಿ ಬಿಡುವಂತೆ, ಸಕಲಸೌಭಾಗ್ಯಮಂ
ತ್ಯಜಿಸಿ ನಿರುಪಮಯೋಗಸಿದ್ಧಿಯಂ ಪಡೆಯೆ, ವನವಾಸಕುದ್ಯೋ
[ಗಿಸಿದನೂ.

243. ಗಾಲವನ ಪದಕೆರಗಿ ಕೈಮುಗಿದು ನಿಂದು ಭೂ

His priest advises him to give his daughter to Chandrahása,

ಪಾಲಕಂ ತನಗಿನ್ನು ಸಾಕು ರಾಜ್ಯದ ಚಿಂತೆ!
ಕಾಲಮಂ ಸಾಧಿಸುವೆನತುಲಯೋಗದೊಳೆನಗೆ ಸುತರಿಲ್ಲ ; ಧರೆಯ [ನಾರ್ಗೀ ?
ಬಾಲೆ ಚಂಪಕಮಾಲಿನಿಯನಾರ್ಗೆ ಕೊಡುವೆಂ ? ವಿ
ಶಾಲಮತಿ ! ಬೆಸಸೆಂದು ಬೇಡಿಕೊಳೆ, ಲಕ್ಷಣಾಸು
ಶೀಲಸಹ ಚಂದ್ರಹಾಸಂಗೆ ಮೇದಿನಿಸಹಿತ ಮಗಳನಿತ್ತಪುದೆಂದನೂ.

244. ಎಂದೊಡರಸಂ ಗಾಲವನ ಬುದ್ಧಿಯಂ ಕೇಳ್ದು

and to appoint him as his successor. He is sent for.

ತಂದೆ ಮಾಡುವ ರಾಜಕಾರ್ಯಮಂ ನಿರ್ವಹಿಸು
ತಂದು ಬಾಗಿಲೊಳಿರ್ದ ಮದನನಂ ಕರೆಸಿ ಕೈವಿಡಿದು ಮೆಲ್ಲನೆ ಕಿವಿ [ಯೊಳೂ
ಮುಂದೆ ನಮಗುರ್ವರ್ಕೆಲಸದ ಪೊರಿಗೆ ಯುಂಟು ; ನೀ
ನಿಂದುಹಾಸನನಿಲ್ಲಿಗೀಗಲೊಡಗೊಂಡುಬಾ !
ಸಂದೇಹಿಸದೆ ಪೋಗೆನಲ್ಕೆ, ಭೂಪಾಲನಂ ಬೀಳ್ಕೊಂಡು ಪೊರಮ [ಟ್ಟನೂ.

245. ಉತ್ತಮ ಹಯಾರೂಢನಾಗಿ ಮದನಂ ಜವದೊ

Madana goes instead of Chandrahása

ಳತ್ತಲಿಂದೈದೆ, ರವಿ, ಪಶ್ಚಿಮಾಂಬುಧಿಗಿಳಿವ
ಪೊತ್ತು, ಪೊಂದಳಿಗೆಯೊಳ್ಪುಷ್ಪಫಲತಾಂಬೂಲಗಂಧಾಕ್ಷತೆಗಳನಿರಿಸೀ
ಎತ್ತಿಕೊಂಡತ್ತಣಿಂ ಬಹ ಚಂದ್ರಹಾಸನನಿ
ದೆತ್ತಪೋದಪೆ ? ಯೆಂದು ಬೆಸಗೊಳಲ್ತವ ಪಿತಗೆ
ತತ್ತಸುವ್ರತಮುಂಟು, ಗಡ ! ಚಂಡಿಕಾದೇವಿ ಪೂಜೆಗೈದಪೆನೆಂದ [ನೂ.

246. ತಟ್ಟನೆ ತುರಂಗಮುವನಿಳಿದೆಲೆ ಮರುಳೆ ! ಪಿತನ

to the temple of Chandícá. ಕಟ್ಟಳೆಯ ಚಂಡಿಕಾಪೂಜೆಗಾಂ ಪೋದಪೆಂ ;

ನೆಟ್ಟನೆ ಮಹೇಶ್ವರಂ ಪಿಡಿದು, ಕಜ್ಜಕೆ ನಿನ್ನ ನೊಡಗೊಂಡು ಬಾ !
[ಯೆನಲ್ಕೇ,

ಕಟ್ಟವಸರಕೆ ಬಂದೆನೆಂದರ್ಜನಾದ್ರವ್ಯ

ಮಿಟ್ಟ ಪೊಂಪಳಿಗೆಯುಂ ತೆಗದುಕೊಂಡಶ್ವಮಂ

ಕೊಟ್ಟಾತನಂ ಕಳುಹಿ ಪೊರಮಟ್ಟನೇಕಾಕಿಯಾಗಿ ಮದನಂ ಪೊ
[ಳಲನೂ

247. ತಂನ ಪಿತನಾಜ್ಞೆಯಂ ನಡಸುವ ಕುಲವ್ರತನ

ನಂನಿ ಚಂದ್ರಹಾಸಂಗೆ ಭಂಗಮಾದಪುದೆಂದು

ಮುಂನಿಸಿ ನೆರದ ಸಕಲಸೇವಕರನೆಲ್ಲರಂ ಕಳುಹಿ ತಾನೋರ್ವನಾಗೀ

ಉಂನತದ್ಯುಮಷಂಡಮಂಡಿತದ ಬನದೊಳ್ಪು

On his way to the temple, ಸಂನಿಯಾಗಿಹ ಚಂಡಿಕಾಲಯಕೆ ಬರುತಿರ್ದ

ನಂನೆಗಂ ಕರತಳದ ಗಂಧಪುಷ್ಪದ ಪಾತ್ರ ಯೋಸರಿಸಿ ಬಿದ್ದುದಿಳಿ
[ಗೇ.

248. ಚೀರುತ ಪೋಣರ್ದವು ಬಿಡಾಲಗಳ್ಪಕ್ಷಿಗ

Madana sees bad omens, ಳ್ಕಾರಿದವು ರುಧಿರಮಂ ; ಕೂಗಿದವು ಗೂಗೆಗ

ಳ್ಪಾರುತಿಹ ದುರ್ನಿಮಿತ್ತಂಗಳಂ ಕಂಡವಂ ವ್ರತಭಂಗಮಪ್ಪುದೆಂದೂ

ಪಿರಿದು ನಡೆವುತ ಮನದೊಳದರಿಂದ ಭೀತಿಗ

ಳ್ಪೇರದಿರಲಸನಿಯೊಳ್ಚಂದ್ರಹಾಸಂಗೆನುತ[1]

ಮೂರಂಬಕದೊಳೆಸೆವ ದೇವನಂ ನೆನೆಸಿಯು ಮದನಕಾಮದನಸ್ತೈತಂದ
[ನೆಂ.

1. ಭಿನ್ನಂದು ಓಲೆಯು ತಕ್ಕ [illegible].

249. ಖಳರಂತರಂಗಪ್ರವೇಶದ ವಿವೇಕಮಂ

and is killed by the men, whom his father had placed there.

ಬಳಸಿದರಿಷಡ್ವರ್ಗ[1]ಮೊತ್ತಿಸಿ ಮುರಿವಂತೆ,
ಪೊಳಲಬರಿಯದೊಳಪೋಗುವ ಮದನನಂ ಮಂತ್ರಿ ಕಳುಹಿದೊಡಲ್ಲಿ [ಬಂದಡಗಿದಾ
ಕೊಲೆಗಡಿಗ ಚಾಂಡಾಲರುಗಿದ ಕೈದುಗಳಿಂದ
ಕೆಲಬಲದೊಳಿರ್ದು ಪೊಯ್ದಿರಿದು ಕೆಡಹಿದೊಡೆ, ಭೂ
ತಲಕವಂ ಬೀಳುತ್ತ ಮಾಧವಸ್ಮರಣೆಯಿಂದಸುದೊರೆದನಾಕ್ಷಣದೊ [ಳೂ.

1. ಕಾಮ ಕ್ರೋಧ ಮೋಹ ಲೋಭ ಮದ ಮತ್ಸರ ಎಂಬೀಷಡರಿಗಳು ಕೆಟ್ಟವರ ಮನಸಿನಲ್ಲಿ ಯಾದರೂ ಒಂದು ವೇಳೆ ಹುಟ್ಟುವ ವಿವೇಕವನ್ನು ಮುರಿಯುವಂತೆ, ಖಳರ ಅಂತರಂಗವೇ ದೇವಾಲಯ, ವಿವೇಕವೇ ಮದನ, ಷಡರಿಗಳೇ ಚಾಂಡಾಲರು ಎಂಬಂತೆ ಹೋಲಿಸಬೇಕು.

250. ಅವಗಡಿಸಿ ಮದನನಂ ಘಾತಕರ್ ಚಂಡಿಕಾ

Chandrahása crowned as king of Kuntala and married to the Princess.

ಭವನದೊಳ್ಕೊಂದು ನಿಲ್ಲದೆ ಪೋದರಿತ್ತಲು
ತ್ಸವದಿಂದ ಚಂದ್ರಹಾಸಂ ಕುಂತಳೇಂದ್ರನಂ ಕಾಣಲಾನೃಪನವಂ [ಗೆ.
ಅವನಿಯಂ ಕೊಟ್ಟರಸುಪಟ್ಟಮಂ ಕಟ್ಟಿ ಗಾ
ಲವನ ಮತದಿಂದ ಗಾಂಧರ್ವ[1]ವೈವಾಹದಿಂ
ಕುವರಿಚಂಪಕಮಾಲಿನಿಯನಿತ್ತು ಸತ್ಕರಿಸಿ ಬನಕೆ ತಾಂ ಪೊರಮ [ಟ್ಟನೂ.

1. ವಧೂವರರು ದೊಡ್ಡವರಾಗಿ ಉಭಯಸಂಮತದಿಂದ ಲಗ್ನವಾದದ್ದು.

251. ಪಟ್ಟದರಸಾಗಲ್ಕೆ, ಚಂದ್ರಹಾಸಂ ಬಳಿಕ

Procession in the town.
The astonishment of the Minister.

ಪಟ್ಟಣದ ಜನಮರಿಯಲೆಂದು ಸಿಂಗರಿಸಿ ತೋ
ರ್ಪಟ್ಟಗಜಮಸ್ತಕದ ಮೇಲೆ ನೃಪಸುತೆಸಹಿತ ಪೊರಮಟ್ಟನುತ್ಸ [ವದೊಳೂ.

ಘಟ್ಟಿಸಿದ ವಾದ್ಯರವನೊದರಿಶೀವಾರ್ತೆ ಕಿವಿ
ದಟ್ಟೈಸಲು, ದುಷ್ಟಬುದ್ಧಿಗೆ ಮತ್ತೆ ಭೀತಿ ಹೊ
ಯ್ದಟ್ಟಿತೇನೆಂಬೆನಿದು ಪೂಸತಲಾ! ದೈವಕೃತವೆಂದು ಸೈವೆರಗಾದ [ನೂ.

252. ಗಾಲವನ ಮತದೊಳಿನ್ನಂ ಕರಸದಿಂದು ಭೂ
ಪಾಲಕ ಕುಳಿಂದತನೆಯಗೆ ಧರೆಯನೊಪ್ಪಿಸಿ ವ
ನಾಲಯಕೆ ತೆರಳಿದನೆ? ಮದನನಿದ್ದೇಗೈದನೆಂದು ಪಲ್ಮೊರೆದು ಮ [ಗನಾ

Chandrahása meets him,

ಮೇಲೆ ಕೋಪಿಸುತಿರ್ದನಂತೆಗಂ ಭ್ರಮರಾರಿ[1]
ಮಾಲಿನಿಸಹಿತ ಮಾವನಂ ಕಾಣಲೆಂದು ಪಂ
ತಾಲಮಸ್ತಕದಿಂದಲಿಳಿತಂದು ಶಶಿಹಾಸನೆರಗಿದಂ ಸಚಿವನಡಿಗೇ.

1. ಚಂಪಕಪುಷ್ಪ; ಇದರ ಗಂಧದಿಂದ ಭ್ರಮರಗಳು ಸಾಯುತ್ತಾವಾದಕಾರಣ ಅದಕ್ಕೆ ಭ್ರಮರಾರಿ ಎಂಬ ಹೆಸರು.

253. ಕಳವಳಿವ ಕೋಪದಿಂ ಮಂತ್ರಿ ಪಂಚಾಚಾರ

and tells him, that Madana had gone to the temple.

ಮುಳಿಯಲಾಗದು, ಚಂಡಿಕಾರ್ಚನೆಗೆ ನಡೆ ಯೆಂದು
ಕಳುಹಿದೊಡೆ, ನೀ ಮಾಡಿದುಜ್ಜುಗಮಿದೇನೆಂದು ಕೇಳ್ದೊಡಾಶಶಿಹಾ [ಸನೂ
ಅಳವಡಿಸಿಕೊಂಡು ನಾಂ ಪೋಗುತಿರೆ, ನಡುವೆ ಕುಂ
ತಳರಾಜನರಮನೆಗೆ ತನಗೆ ಪಸರನಿತ್ತು
ತಳೆದನೋರ್ವನೆ ನಿನ್ನ ಮಗನಂಬಿಕಾಪೂಜೆಗಿಂತಾಯ್ತು ಬಳಿಕೆಂ [ದನೂ

254. ಹಂಬೈಸಿದಂ ದುಷ್ಟಬುದ್ಧಿ ; ನಯದೊಳಗಳಿಯ

The Minister's despair ;

ನಂ ಮನೆಗೆ ಬೀಳ್ಕೊಟ್ಟನರಿದರಿದು ಪರಿಹಿಂಸೆ
ಯಿಂ ಮಾಡಿ ಮಾನವಂ ಬಾಳ್ವನೆ? ದೀಪಮಂ ಕೆಡಿಸುವ ಪತಂಗ [ನಂತೇ,

ಸಂಮುಖಾಯತವೆ ನಮಗಪಾಯಮುಮಂ ತಂದುದೆಂ
ದೊಂಮೆ ನಿಜಸದನಮಂ ಪೊಕ್ಕಾರುಮರಿಯದೋ
ಲುಂಮೞಿಸಿ ಶೋಕದಿಂ ಪೊಱಮಟ್ಟನೇಱಿೞಿದು ಕೋಟೆಯುಂ ಕತ್ತ
[ಲೆಯೊಳೂ.

255. ಮಿಾಂಟುವಗ್ಗದ ಶೋಕದಿಂದಿರದೆ ಪೊಱಮಟ್ಟು
in the dark of the night he goes to the temple in the cemetery. ನಾಂಟುಪೊತ್ತುವ ಮುಳ್ಳುಕಲ್ಗಳಂ ಬಗೆಗೊಳದೆ,
ದೀಂಟುಗುೞಿಗಳನರಿಯದೇಳುತ್ತ ಬೀಳುತ್ತ ತಲೆಗೆದರಿ ಬಾಯಿವಿ
[ಡುತಾ

ಕೋಂಟೆಗಳನೇಱಿೞಿದು ಪರಿಘೆಯ ಜಲಂಗಳಂ
ದಾಂಟಿ ಕತ್ತಲೆಯೊಳೋರ್ವನೆ ಮಂತ್ರಿ ಪೊಳಲ ಪೊಱ
ದೋಂಟದೆಡೆಯೊಳ್ನೆಲಸಿದಂಬಿಕಾಭವನಮಂ ಸಾರ್ದನವನೇಪೇಳ್ವೆ
[ನೂ!

256. ಪರಿದ ಪ್ರೇತಮಾಲೆಗಳ[1], ಬಂಣಗೂಳ್ಗಳ, ಬಲಿಯ
Its description. ಪೊಱದ, ಪಳೆಗೊಳ್ಳಿಗಳ, ಭಸ್ಮಮಾದೊಪಲುಗಳ,
ಮುಱಿದ ಗೂಡಂಗಳ, ಕಳಲ್ದ ಶಿಬಿಕೆಗಳ, ಚಿತಿಯೊಳ್ಬೇವ ಕುಣ
[ಪಂಗಳಾ,

ತುಱಿಗಿದೆಲುವಿನ, ಜಂಬುಕಾವಳಿಯ, ಗೂಗೆಗಳ
ಬಿರುದನಿಯ, ಭೂತವೇತಾಳ ಸಂಕುಲದಡಗಿ
ನರಕೆಗಳ ಸುಡುಗಾಡೊಳಾಮಂತ್ರಿ ಚಂಡಿಕಾಲಯದೆಡೆಗೆ ನಡೆತಂ
[ದನೂ.

1. ಅರಿಶಿಣ ಇತ್ಯಾದಿ ಅನ್ನದಲ್ಲಿ ಕೂಡಿಸಿ ಬೇರೆಬೇರೆ ಬಂಣವಾಗುವಂತೆ ಮಾಡಿ ದೆವ್ವಗಳಿಗೆ ಅರ್ಪಿಸುತ್ತಾರೆ.

257. ಪಾಕಶಾಸನತಯ[1] ! ಕೇಳ್ಬಳಿಕ ಮಂತ್ರಿ ಸುತ
He sees there his son's corpse. ಶೋಕದಿಂದಲ್ಲಿಹ ಮರುಳ್ಗಳಂ ಕಾಣದವ
ನೇಕದಿಂ ಬೇವ ಕುಣಪದ ಚಿತಿಯೊಳುರಿವ ಕಾಷ್ಠಂಗಳಂ ತೆದು [ದುಕೊಂಡೂ.

ಅಕಾಳಿಕಾಲಯಕೆ ಬಂದದರ ಬೆಳಗಿನೊ
ಳ್ವ್ಯಾಕೀರ್ಣಕೇಶದ, ಸಿಮಿರ್ದ ಕೈಕಾಲುಗಳ,
ನೇಕಾಯುಧದ ಘಾಯದೊಡಲ ರುಧಿರದ ಪೊಸಲ ಸುಕುಮಾರನಂ [ಕಂಡನೂ.

1. ಪಾಕಎಂಬ ರಾಕ್ಷಸನನ್ನು ಸಂಹಾರಮಾಡಿದವನು= ಇಂದ್ರ

258. ಕೈಯ್ಯೊಳಹ ಕಾಷ್ಠಂಗಳಂ ಬಿಸುಟು ತನುಭವನ
His lamentations. ಮೈಯ್ಯ ಘಾಯಂಗಳಂ ತಡಹಿ ತಕ್ಕೈಸಿ ಮಗು
ಳೊಯ್ಯನೊಯ್ಯನೆ ಕುಳ್ಳಿರಿಸಿ ಮೊಗಕೆ ಮೊಗವಿಟ್ಟು ಚುಂಬಿಸಿ [ಕುಮಾರನಿನ್ನಾ !

ಐಯ್ಯ ನಾ ಬಂದೆನೇಳೈ ! ತಂದೆ ! ನಾಡನಾ
ರೈಯ್ಯ ಬೇಡವೆ ? ಕಂದ ! ಕುಂತಳಾಧೀಶನೇ
ಗೈಯ್ಯ ಹೇಳದನೆನಗೆ ವಿವರಿಸದೆ ಸುಮ್ಮನಿರ್ದಪೆ ? ಯೆಂದೊರಲ್ದ [ನವನೂ.

259. ಕಂಬನಿಗಳರುಣಾಂಬುವಂತೊಳೆಯೆ[1], ಮುಂದಾಡಿ
He kills himself. ಪಂಬಲಿಸಿ ಹಲುಬಿದಂ ; ಮರುಗಿ ತಂನಿಂ ಮಡಿದ
ನೆಂಬಳಲ್ಕಿಗೆ, ಮಂತ್ರಿ ಸ್ಯೈರಿಸದೆ ಕೆಲಬಲದ ಕಂಬಂಗಳಂ ಪಾಯು [ಲೂ.

1. ಕೆಂಪುನೀರು = ರಕ್ತ.

ಕುಂಬಳದ ಕಾಯಂತೆ ಚಿಪ್ಪಾಗಿ ನಿಜಮಸ್ತ
ಕಂಬಿರಿದು ಬಿದ್ದನುರ್ವಿಗೆ ; ಪೋದದಸು ಕಾಯ
ದಿಂ ; ಬಳಿಕ ನಂದಿದ ಸೊಡರ್ಗಳೆನೆ, ಮೃತರಾಗಿ ಸುತತಾತರಿರ್ದು
[ಕಿರ್ದರು.

260\. ಅಱಿಯರಾರುಂ ಪುರದೊಳಿರ್ದಲ್ಲಿ ಮಡಿದುದಂ ;

Madana and his father are discovered by the priest of the temple.

ತುರುಗಿದ ತಮೋಂಧಮೊಯ್ಯನೆ ಜಾರಿತಳಿಕುಲದ
ಸೆರೆ ಬಿಟ್ಟುದಂಬುಜದೊಳೊಡನೆ ತಲೆದೋರಿದಂ ತರಣಿ ಮೂಡಣ
[ದೆಸೆಯೊಳು.
ಪೊರಮಟ್ಟು ಚಂಡಿಕಾಲಯಕೆ ಪೊಸಪೂಗಳಂ
ತಿರಿತಂದು ಪೂಜಿಸುವಡೊಳಪೊಗುವ ತಾಪಸಂ
ಬೆರತು ಬಿದ್ದಿಹ ತಂದೆಮಕ್ಕಳಂ ಕಂಡು ಹಂವೈಸಿ ವಿಸ್ಮಿತನಾದ
[illegible]

261\. ಪಟ್ಟಣದೊಳಿರುಳೊಸಗೆ ಪಸರಿಸಿತು, ರಾಜ್ಯಮಂ

He informs Chandrahása of it.

ಬಿಟ್ಟು ವನಕೈದಿದಂ ಕುಂತಳಾಧೀಶ್ವರಂ ;
ಪಟ್ಟಮಾದುದು ಚಂದ್ರಹಾಸಂಗೆ ; ಸೂನುಸಹಿತೀ[illegible]
ಕೆಟ್ಟೋಸಿದವರಾರೊ ! ಶಿವಶಿವಾದ್ಭುತಮೆನುತ
ನೆಟ್ಟನೆ ನೃಪಾಲಯಕೆ ತಾಪಸಂ ಬಂದು ಮೊರೆ
ಯಿಟ್ಟಡೆ, ಕುಳಿಂದಜಂ ಕೇಳ್ದರದೆ ಪೊರಮಟ್ಟು ಕಾಲ್ನಡೆಯೊಳೈ
[ತಂದನು.

262\. ಚಂಡಿಕಾಲಯಕಖಿಳಜನಸಹಿತ ನಡೆತಂದು
ದಿಂಡುಗೆಡವಿಹ ಮಾವಮೈದುನರ ಪಾಸಿಯಂ

He goes to the temple.

ಕಂಡು ಕಡು ಶೋಕದಿಂದಾರೆ ನೊಂದು ಚಂದ್ರಹಾಸಂ ದೇವಿಯಂ
[ನೋಡುತಾ

ಖಂಡಿಸಿದಲಾ ಎನ್ನ ಭಾಗ್ಯಮಂ ! ತಪ್ಪಾವು
ದಂಡಲೆದು ಪಡೆವೆನಿವರಸುಗಳಂ ; ವಿಾರಿದೊಡೆ
ಪುಂಡರೀಕಾಂಬಕನ ಸಾಯುಜ್ಯಮೆನಗಾಗಲೆಂದು ನಿಶ್ಚಿತನಾದನೊ.

263. ರಭಸದಿಂದೈತಂದು ಗೋಳಿಡುವ ಬಂಧುಜನ
ಅಭಯಮಂ ಕೊಟ್ಟು ನಿಶ್ಚಲನಾಗಿ ಸಹಿಹಾಸ
ನಭವನರಸಿಯುಂ ಮುಂದೆ ಚತುರಶ್ರದೊಳ್ಕುಂಡಮಂ ತೆಗೆಸಿ ಬಳಿಕ [ದರೊಳೂ.
ಅಭಿಶೋಭಿಸುವ್ರೊಲಗ್ನಿಯಂ ಪ್ರತಿಷ್ಠಿಸಿ ವಿಪ್ರ
ಸಭೆಸಹಿತ ಕುಳ್ಳಿರ್ದು ಬಲಿದೀಪಮುಂತಾದ
ವಿಭವಂಗಳಂ ಮಾಡಿ ಘೃತಪಾಯಸಾಜ್ಯತಿಲಹೋಮಂಗಳಂ ಬೇಳ್ದ [ನೂ.

and by performing a sacrifice, and offering himself,

264. ಮೊಳಗಿದವು ದೇವದುಂದುಭಿಗಳಂತಾಗ ಪೂ
ವಳೆಗರೆದುದಭ್ರದೊಳ್ಕೊಂಡಾಡಿತಮರತತಿ ;
ಬಳಿಕಶಾಂಭವಿ ಮಾಯ[1]ವಾದಳಸು ಪಸರಿಸಿತು ಮದನಮಂತ್ರಿಗಳೊ [ಡಲೊಳೂ.
ಬಲರೂಪುಕಾಂತಿಗಳ್ಮುಂನಿನಂದದೊಳೆಸೆಯೆ ;
ಮಲಗಿದವರೇಳ್ವಂತೆ, ಕಂದೆರದು ಕುಳ್ಳಿರ್ದ
ರೊಲವಿನಿಂ ಚಂದ್ರಹಾಸಂ ಮಾವನಡಿಗೆ ಮಣಿದಪ್ಪಿದಂ ಮೈದುನ [ನನೂ.

makes the son and father alive again.

1. ಪ್ರತ್ಯಕ್ಷವಾಗಿ ಬಂದು ಚಂದ್ರಹಾಸನು ಬೇಡಿಕೊಂಡ ಜೀವ ವರವನ್ನು ಕೊಟ್ಟಿದ್ದಳು.

265. ಇಂಮಡಿಸಿತುತ್ಸವಂ ; ಬಳಿಕನಿಬರೆಲ್ಲರುಂ
ಸುಂಮಾನದಿಂದ ನಗರಪ್ರವೇಶಂ ಗೈದ
ರುಂಮಳಿಸುತಿರ್ದಂ ಕುಳಿಂದಕಂ, ಪಾರ್ಥ ! ಕೇಳಾಚಂದನಾವತಿ [ಯೊಳೂ;

Their joy and happiness.

ಸಂಮತದೊಳಾತನಂ ಕರಸಿಕೊಂಡಾರಾಜ್ಯ
ಮಂ ಮಹಾವಿಭವದಿಂ ವರಿಸಿದಂ ಚಂದ್ರಹಾ
ಸಂ, ಮುದಾನ್ವಿತನಾಗಿ ವಿಷಯೆ ಚಂಪಕಮಾಲಿನಿಯರ ಸಂಭೋಗ
[ದಿಂದಾ.

266. ಕೇಳ್ದೆಲಾ ನರನಾಥ! ಪಾರ್ಥಂಗೆ ನಾರದಂ
ಪೇಳ್ದ ವೃತ್ತಾಂತಮಂ; ಬಳಿಕ ಸಂತೋಷಮಂ
ತಾಳ್ದು ಕುಂತೀಸುತಂ ಚಂದ್ರಹಾಸನ ಪುರಕೆ ಮುಖವಾಗಿ ನಡಿವು
[ತಿರಲೂ,

Arjoona and Krishna proceed to meet Chandrahása.

ಆಳ್ದೋ[1]ರಿ ತಮತಮಗೆ ಭೂಪಾಲರೈದೆ ಕೆಂ
ದೂಳ್ದೇವಲೋಕಮಂ ಕಿತ್ತಿತ್ತಿಕೊಂಡೊಯ್ದು
ದಾಳ್ದ ದಿಂ ಸೇನಂಬುಧಿಯೊಳವನಿತಳಮೆಂಬ ತೆರನಾಗೆ, ಪದಹತಿ
[ಯೊಳೂ.

1. ತಮ್ಮ ತಮ್ಮ ಆಳುಗಳು ತೋರುವಂತೆ ಮುಂದಕ್ಕೆ ಕಳುಹಿಸಿ ತಾವು ಹಿಂದೆ ಬರುತ್ತಿದ್ದರು.

267. ಭೂಪಾಲ! ಕೇಳ್ಬಳಿಕ ಫಲುಗುಣಂ ಕೃಷ್ಣನ ನಿ
ರೂ[1]ಪಮಂ ಕೈಕೊಂಡು ಹರುಷದಿಂದಾಗ ನಿ
ಷ್ಪಾಪನಾಗಿಹ ಚಂದ್ರಹಾಸನಂ ಬಂದು ಗಾಢಾಲಿಂಗನಂ ಗೈಯಲೂ,
ಆಪ್ರೌಢವಿಪತಿ ನುಡಿದನೆಲೆ ಪಾರ್ಥ! ಕದನದಾ
ಳಾಪಮಂ ನಿನ್ನೊಡನೆ ಮಾಡಿದೊಡೆ, ನೃಪಮುಖಂ
ಲೋಪಮಹುದೆಂದು ಕಳುಹಿದೆನೆನ್ನ ತನುಜರಂ ತುರಗರಕ್ಷಾರ್ಥ
[ಮಾಗೀ

They meet as friends.

1. ಚಂದ್ರಹಾಸನು ತನ್ನ ಭಕ್ತನಾದಕಾರಣ, ಅವನ ಸಂಗಡ ಯುದ್ಧ ಮಾಡಬೇಡೆಂಬುದು.

268. ಹಲವು ಮಾತುಗಳೇಕೆ? ನಮಗೆ ನಿಮಗಾಶ್ರಯಂ
ಜಲಜಾಕ್ಷನಾಗಿರ್ದ ಬಳಿಕಾವ ಧರ್ಮಕೆ
ಛಲಮುಕಟ! ಸಾಕಿನ್ನು ಪಾರ್ಥ! ನಿನ್ನಶ್ವಂಗಳಂ ತರಿಸಿ ಕೊಡು
[ವೆನೆನುತಾ

Chandrahása gives back the horses,

ಬಲಸಹಿತ ಕುದುರೆಗಾವಲ್ಗೆ ಪೋಗಿಹ ಸುತರ
ಬಳಿಗೆ ಚರರಂ ಕಳುಹಿ ಕರಸಲವರೈತಂದು
ಫಲುಗುಣನ ವಾಜಿಗಳನೊಪ್ಪಿಸಿ ಮುರಾರಿಯಂ ಕಂಡರತಿಭಕ್ತಿ.
[ಯಿಂದಾ

269. ಪ್ರೀತಿಯಿಂ ಚಂದ್ರಹಾಸಂ ತನ್ನ ರಾಜ್ಯಮಂ

and offers his kingdom to Krishna.

ಪೀತಾಂಬರನ ಚರಣಸರಸಿರುಹಕರ್ಪಿಸಿದ
ನಾತಂ ಧನಂಜಯನ ಸಂಮತದೊಳೊಸೆದು ವಿಷಯಾಕುವರಂಗೆ
[ಕೊಟ್ಟು
ಖ್ಯಾತಮಾದಖಿಳವಸ್ತುಗಳೊಡನೆ ಗಜಪುರಕೆ
ದೂತರಂ ಕಳುಹಿ ಸತ್ಕೃತನಾಗಿ ಭೂಪತಿ
ವ್ರಾತಸಹಿತಲ್ಲಿ ಮೂರಿರುಳಿರ್ದು ಪೊರಮಟ್ಟನೈದೆ ಕುದುರೆಗಳ
[ಕೂಡೇ.

ಅಲ್ಲಿಂದ ಮುಂದಕ್ಕೆ ಸಂಚಾರ ಮಾಡಿ ಬಂದು ವರುಷ ತುಂಬುವಷ್ಟರಲ್ಲಿ ಗಜಪುರಕ್ಕೆ ಬಂದರು. ಆಮೇಲೆ ಹಸ್ತಿನಾವತಿಯ ಅರಸನಾದ ಧರ್ಮರಾಯನು ಅಶ್ವಮೇಧವನ್ನು ನೇಮದ ಪ್ರಕಾರ ತೀರಿಸಿದನು.

BHARATA.

2. ಭಾರತವು. (ಭಾಮಿನೀ ಷಟ್ಪದಿ.)

ಭಾರತವೆಂಬ ಕಾವ್ಯದ ಕಥಾಸಾರ ಯಾವದೆಂದರೆ:

ವಿಷ್ಣು ಕೃಷ್ಣಾವತಾರದಲ್ಲಿ ಕ್ಷತ್ರಿಯರಾದ ಕೌರವರನ್ನು ನಾಶಮಾಡಿ ಪಾಂಡವರನ್ನು ಪರಿಪಾಲನೆ ಮಾಡಿದ್ದು—ಕೌರವರೂ ಪಾಂಡವರೂ ಚಂದ್ರವಂಶದಲ್ಲಿ ಹುಟ್ಟಿದ ಭರತ ಎಂಬ ಅರಸನ ಸಂತಾನದವರು, ಆದ್ದರಿಂದ ಈ ಕಾವ್ಯಕ್ಕೆ ಭಾರತವೆಂಬ ಹೆಸರು ಆಯಿತು. ಅವರು ಸುದಾ ಭಾರತರೆಂದು ಅನ್ನಿಸಿ ಕೊಳ್ಳುತ್ತಾರೆ. ವೇದವ್ಯಾಸನು ಅದನ್ನು ೧೮ ಪರ್ವಗಳನ್ನು ಮಾಡಿ ರಚಿಸಿದನು. ಅವು ಯಾವವೆಂದರೆ.

1. ಆದಿಪರ್ವ.—ಇದರ ಸಾರಾಂಶವೇನಂದರೆ: ಕೌರವರೂ ಪಾಂಡವರೂ ಹುಟ್ಟಿದ್ದು ಇವರ ವಂಶಾವಳಿ ವೃಕ್ಷ ಮುಂದೆ ಬರೆದದೆ.

ಚಂದ್ರ

ಪರಾಶರಮುನಿ + ಮತ್ಸ್ಯಗಂಧಿ + ಶಂತನುರಾಯ + ಭಾಗೀರಥಿ.

ಚಿತ್ರಾಂಗದನು. ವಿಚಿತ್ರವೀರ್ಯ. ಭೀಷ್ಮ

ವೇದವ್ಯಾಸನು. + ಅಂಬಿಕಾ=ಅಂಬಾಲಿಕಾ (ಇವರು ವಿಚಿತ್ರವೀರ್ಯನ ಹೆಂಡರು.)

ಧೃತರಾಷ್ಟ್ರ. ಪಾಂಡು. ವಿದುರ (ಸ್ತ್ರೈಳೇಂದ್ರಿ ಪುತ್ರ.)

ಕೌರವಾದಿ ಶತಪುತ್ರರು. ಧರ್ಮರಾಯ, ಭೀಮ, ಅರ್ಜುನ, ನಕುಲ, ಸಹದೇವ.

(ಕೌರವರು.) (ಯುಧಿಷ್ಠಿರ.) ಪಾಂಡವರು ಇವರೆ.

(+ ಇದು ಲಗ್ನವಾದ ಚಿನ್ಹೆ. | ಇದು ಲಗ್ನವಾದವರಿಂದ ಹುಟ್ಟಿದ ಮಕ್ಕಳ ಚಿನ್ಹೆ.)

ಧೃತರಾಷ್ಟ್ರನು ಹಸ್ತಿನಾವತಿಯಲ್ಲಿ ಆಳುತ್ತಿರುವಾಗ್ಯೆ, ತನ್ನ ತಮ್ಮನಾದ ಪಾಂಡು ಸತ್ತ ಮೇಲೆ, ಅವನ ಮಕ್ಕಳನ್ನು ತನ್ನ ಮಕ್ಕಳ ಜೋಡಿಗೆ ಇಟ್ಟುಕೊಂಡಿದ್ದನು. ಆದರೆ ಉಭಯ ಪುತ್ರರಿಗೆ ಜಗಳ ಹುಟ್ಟುತ್ತಾ ಬಂದದರಿಂದ, ಯೇನಾದರೂ ಮಾಡಿ ಪಾಂಡವರನ್ನು ಕೊಲ್ಲಬೇಕೆಂಬ ಕುಯುಕ್ತಿ ನಡಸಿದರು. ಇದಕ್ಕೆ ವಾರಣಾವತಿಯಲ್ಲಿ ಒಂದು ಅರಗಿನ ಮನೆ ಕಟ್ಟಿಸಿ, ಪಾಲು ಹಂಚಿಕೊಟ್ಟು, ಅಲ್ಲಿಗೆ ಹೋಗಿರಿ ಎಂದು ಕಳುಹಿಸಿದರು. ಪಾಂಡವರು ಅಲ್ಲಿಗೆ ಹೋದ ಮೇಲೆ, ಕೌರವರು ಒಂದು ರಾತ್ರಿ ಅವರಿದ್ದ ಅರಗಿನ ಮನೆಗೆ ಬೆಂಕಿ ಹಚ್ಚಿದರು, ಆದರೆ ಅವರು ಎಚ್ಚತ್ತು ಅರಣ್ಯಕ್ಕೆ ಓಡಿ ಹೋದರು. ಕೆಲವು ದಿವಸದ ಮೇಲೆ, ಏಕಚಕ್ರನಗರ ಎಂಬ ಅಗ್ರಹಾರದಲ್ಲಿ ಸೇರಿ, ಆ ಊರಿಗೆ ಉಪದ್ರ ಮಾಡುತ್ತಿದ್ದ ಬಕಾಸುರನನ್ನು ಕೊಂದರು. ತದನಂತರ ಪಾಂಚಾಲ ದೇಶದ ಅರಸನಾದ ದ್ರುಪದರಾಯನು ತನ್ನ ಮಗಳಾದ ದ್ರೌಪದಿಗೆ ಸ್ವಯಂವರ ಮಾಡುತ್ತಾನೆಂಬ ಸುದ್ದಿ ಕೇಳಿ, ಅ

ವನ ಸಂಸ್ಥಾನಕ್ಕೆ ಹೋದರು. ಅಲ್ಲಿ ಅರ್ಜುನನು ಬಿಲ್ಲೆತ್ತಿದದರಿಂದ, ಆಕೆ ಪಾಂಡವರಿಗೆ ಮದಿವೆಯಾದಳು. ಅವರು ಇನ್ನು ಇರುತ್ತಾರೆಂದು ಕೌರವರು, ತಿಳಿದ ಮೇಲೆ ಅವರನ್ನು ಮತ್ತು ಕರಕೊಂಡು, ಪಾಲು ಕೊಟ್ಟು ಇಂದ್ರಪ್ರಸ್ತದಲ್ಲಿ ಇಟ್ಟರು. ಅಲ್ಲಿ ಇರುವಾಗ್ಯೆ, ಕೃಷ್ಣ ತನ್ನ ತಂಗಿಯಾದ ಸುಭದ್ರಿಯನ್ನು ಅರ್ಜುನನಿಗೆ ಮದಿವೆ ಮಾಡಿ ಕೊಟ್ಟನು. ಇವರಿಂದ ಅಭಿಮನ್ಯು ಹುಟ್ಟಿದನು. ಆಗ ಅರ್ಜುನನು ಇಂದ್ರನ ಖಾಂಡವ ವನ ದಹನ ಮಾಡಿದಾಗ, ಅಗ್ನಿ ಪ್ರತ್ಯಕ್ಷವಾಗಿ ಬಲವುಳ್ಳ ಗಾಂಡೀವ ಧನುಸ್ಸನ್ನೂ ನಾಲ್ಕು ಬಿಳಿ ಕುದರೆಗಳನ್ನೂ ಬಂದು ರಥವನ್ನೂ ಅವನಿಗೆ ಕೊಟ್ಟನು.

2. ಸಭಾಪರ್ವ—ಮುಂದೆ ಪಾಂಡವರು ಇಂದ್ರಪ್ರಸ್ಥದಲ್ಲಿ ಇದ್ದು, ಸಕಲ ದೇಶದ ರಾಯರನ್ನು ಗೆದ್ದು ದಿಗ್ವಿಜಯ ಮಾಡಿ, ರಾಜಸೂಯ ಎಂಬ ಯಜ್ಞ ಮಾಡಿದರು. ಆ ಉತ್ಸವಕ್ಕೆ ಕೌರವರು ಬಂದು ಇವರ ಸಂಪತ್ತು ನೋಡಿ ಹೋಗಿ ಸೈರಿಸಲಾರದೆ, ಇವರನ್ನು ತಮ್ಮ ಊರಿಗೆ ಯುಕ್ತಿಯಿಂದ ಕರಸಿ ಕೊಂಡು, ಪಗಡಿ ಆಡುವ ನೆವ ಮಾಡಿ, ಅದರಲ್ಲಿ ಸೋತವರು ಗೆದ್ದವರಿಗೆ ಸಕಲ ರಾಜ್ಯವನ್ನು ಬಿಟ್ಟು, ೧೨ ವರುಷ ವನವಾಸದಲ್ಲಿ ೧ ವರುಷ ಅಜ್ಞಾತ ವಾಸದಲ್ಲಿ ಇರಬೇಕು ಅಂತ ಪಣ ಮಾಡಿ, ಕಪಟದಿಂದ ಆ ಪಾಂಡವರನ್ನ ಆಟದಲ್ಲಿ ಸೋಲಿಸಿ, ವನವಾಸಕ್ಕೆ ಕಳುಹಿಸಿದರು.

3. ಅರಣ್ಯಪರ್ವ—ಪಾಂಡವರು ವನವಾಸಕ್ಕೆ ಹೊರಟು ಹೋದರು. ಅಲ್ಲಿ ಅರ್ಜುನನು ಮಹಾದೇವರನ್ನು ಕುರಿತು ತಪಸ್ಸು ಮಾಡಿ, ಪಾಶುಪತ ಬಾಣ ಪಡಕೊಂಡು ಸ್ವರ್ಗಕ್ಕೆ ಹೋಗಿ, ಇಂದ್ರನಿಗೆ ಉಪದ್ರ ಮಾಡುವಂಥ ನಿವಾತಕವಚರೆಂಬ ರಾಕ್ಷಸರನ್ನು ಗೆದ್ದು ಬಂದನು. ಮತ್ತು ಕೌರವರು ತಮ್ಮ ಸಂಪತ್ತು ಇವರಿಗೆ ತೋರಿಸಬೇಕೆಂತ, ಇವರಿದ್ದ ಅಡವಿಗೆ ಸಕಲ ಸೈನ್ಯ ಸಹಿತ ಬಂದು, ಅಲ್ಲಿದ್ದ ದೇವೇಂದ್ರನ ತೋಟದಲ್ಲಿ ಇಳಿದು, ನಾಶ ಮಾಡಿದದರಿಂದ, ಇಂದ್ರನ ಲೋಕದವರಿಗೂ ಇವರಿಗೂ ಯುದ್ಧವಾಯಿತು. ಇಂದ್ರನ ಕಡೆಯವರು ಕೌರವರನ್ನ ಜಯಿಸಿ ಕೌರವರಾಯನನ್ನು ಹಿಡಕೊಂಡು ಹೋಗುವಾಗ್ಯೆ, ಪಾಂಡವರು ಅವನ ಹೆಂಡತಿಯ ಪ್ರಾರ್ಥನೆಯನ್ನು ಕೇಳ್ಯೆ ಬಿಡಿಸಿದರು. ಈ ಮೇರಿಗೆ ೧೨ ವರುಷ ವನವಾಸ ಅನುಭವಿಸಿದರು.

4. ವಿರಾಟಪರ್ವ—ಅಜ್ಞಾತವಾಸದ ದೆಶೆಯಿಂದ ಪಾಂಡವರು ತಮ್ಮ ರೂಪು ಬೇರೆ ಮಾಡಿಕೊಂಡು, ಹೆಸರು ಬೇರೆ ಯಿಟ್ಟುಕೊಂಡು, ಸೇವಾವೃತ್ತೀ ಜನರಂತೆ ಬಂದು ವಿರಾಟರಾಯನೆಂಬ ಅರಸನಲ್ಲಿ ಗುಪ್ತದಿಂದ ಇರುವಾಗ್ಯೆ, ಇವನ ಹೆಂಡತಿಯ ತಮ್ಮನಾದ ಕೀಚಕನೆಂಬವನು ದ್ರೌಪದಿಗೆ ಮನಸೋತು ಉಪದ್ರ ಮಾಡಿದದರಿಂದ, ಭೀಮಸೇನನು ರಾತ್ರಿಯಲ್ಲಿ, ಯಾರಿಗೂ ತಿಳಿಯದಂತೆ, ಅವನನ್ನು ಸಂಹಾರ ಮಾಡಿದನು. ಕೀಚಕನು ಸತ್ತನೆಂಬ ಸುದ್ದಿ ಜನಜನಿತವಾಗೋಣ, ಕೌರವರಾಯ ಕೇಳಿ, ಕೀಚಕ ಮಹಾವೀರನ ಭೀಮಸೇ ಕೊಂದಿದ್ದಾನು; ಅಲ್ಲೇ ಪಾಂಡವರು ಇದ್ದಾರಾಧೀತು, ಗೊತ್ತು ಹಚ್ಚಬೇಕೆಂತ, ಸೇನೆ ಸಹಿತ ಬಂದು, ವಿರಾಟರಾಯನ ಆಕಳ ಹಿಂಡು ತಿರುವಿದಕಾರಣ, ಅರ್ಜುನ ಹೋಗಿ ಯುದ್ಧ ಮಾಡಿ ಕೌರವರನ್ನೆಲ್ಲಾ ಸೋಲಿಸಿ ಆಕಳ ಬಿಡಿಸಿದನು. ಇದರಿಂದ ಇವರು ಪಾಂಡುವರೆಂಬುವದನ್ನು

ವಿರಾಟರಾಯನು ತಿಳಕೊಂಡು ತನ್ನ ಮಗಳು ಉತ್ತರಿಯನ್ನು ಅರ್ಜುನನ ಮಗ ಅಭಿಮನ್ಯುವಿಗೆ ಲಗ್ನ ಮಾಡಿ ಕೊಟ್ಟನು.

೫. ಉದ್ಯೋಗಪರ್ವ—ತದನಂತರ ಪಾಂಡವರು ವಿರಾಟರಾಯನ ಪಟ್ಟಣ ಬಿಟ್ಟು, ಪಪ್ಲವ್ಯವೆಂಬುವ ಒಂದು ಗ್ರಾಮವನ್ನು ನಿರ್ಮಾಣ ಮಾಡಿಸಿ ಅದರಲ್ಲಿ ನಿಂತು, ತಮ್ಮ ಇಷ್ಟ ಬಾಂಧವರಾದ ದ್ರುಪದ ವಿರಾಟ ಕೃಷ್ಣ ಮೊದಲಾದವರನ್ನೆಲ್ಲಾ ಕೂಡಿಸಿ ಅರ್ಧ ರಾಜ್ಯವನ್ನು ನಮಗೆ ಕೊಡಿ ಎಂದು ಕೌರವರಾಯನ ಕಡೆಗೆ ಕೃಷ್ಣನನ್ನು ಮಧ್ಯಸ್ಥನನ್ನು ಮಾಡಿ ಕಳುಹಿಸಿದರು. ಅವನು, ನಾನು ಏನು ಕೊಡುವದಿಲ್ಲ ಬೇಕಾದರೆ ಯುದ್ಧ ಮಾಡಿ ನನ್ನನ್ನು ಗೆದ್ದು ಎಲ್ಲಾ ರಾಜ್ಯ ತಕ್ಕೊಳ್ಳಿರಿ, ಅಂದನು. ಅಂದ ಮೇಲೆ ಯುದ್ಧ ಮಾಡುವದಕ್ಕೆ ಉಭಯತ್ರರು ಸಿದ್ಧರಾಗಿ ತಮ್ಮ ಸೇನೆಯ ಸಂಗತ ಕುರುಕ್ಷೇತ್ರಕ್ಕೆ ಬಂದರು.

6. ಭೀಷ್ಮಪರ್ವ—ಆ ಮೇಲೆ ಕೌರವರಾಯ ತನ್ನ ಸೇನಾಧಿಪತ್ಯದ ಪಟ್ಟ ತನ್ನ ಅಜ್ಜ ಭೀಷ್ಮನಿಗೆ ಕಟ್ಟಿ ೧೦ ದಿವಸ ಯುದ್ಧ ಮಾಡಲಾಗಿ ಭೀಷ್ಮನು ಘಾಯಹೊಂದಿ ನಿರ್ವಿಣ್ಣನಾಗಿ ಸರಳ ಮಂಚದ ಮೇಲೆ ಮಲಗಿದನು.

7. ದ್ರೋಣಪರ್ವ—ತದನಂತರ ದ್ರೋಣಾಚಾರ್ಯನಿಗೆ ಸೇನಾಪಟ್ಟ ಕಟ್ಟಿ ೫ ದಿವಸ ಯುದ್ಧ ಮಾಡಲಾಗಿ, ಅರ್ಜುನನಿಂದ ದ್ರೋಣನು ಮೃತಿ ಹೊಂದಿದನು. ಈ ಯುದ್ಧದಲ್ಲಿ ಅರ್ಜುನನ ಮಗ ಅಭಿಮನ್ಯು, ಭೀಮನ ಮಗ ಘಟೋತ್ಕಚನು, ಕೌರವರಾಯನ ೧೦೦ ಮಂದಿ ಮಕ್ಕಳು ಸಹ ಸತ್ತರು.

8. ಕರ್ಣಪರ್ವ—ಇದು ಆದಮೇಲೆ, ಕೌರವರು ಕರ್ಣನಿಗೆ ಸೇನಾಪಟ್ಟ ಕಟ್ಟಿ ಯುದ್ಧ ನಡಿಸಿದರು. ಕರ್ಣನು ೨ ದಿವಸ ಯುದ್ಧ ಮಾಡಿ ಅರ್ಜುನನಿಂದ ಸತ್ತು ಹೋದನು.

9. ಶಲ್ಯಪರ್ವ—ಆ ಮೇಲೆ ಶಲ್ಯನು ಕೌರವರ ದಂಡಿಗೆ ಅಧಿಪತಿ ಆದನು. ಇವನು ಅರ್ಧ ದಿವಸ ಯುದ್ಧ ಮಾಡಿ ಧರ್ಮರಾಯನಿಂದ ಸಂಹಾರವಾದನು.

10. ಗದಾಪರ್ವ—ಹೀಗಾಗಿ ಕೌರವರಾಯನು ಒಬ್ಬನೇ ಉಳಿದು ಓಡಿ ಹೋಗಿ ಒಂದು ಸರೋವರ ಹೊಕ್ಕಿದ್ದನು. ಅವನನ್ನು ಗೊತ್ತು ಹಚ್ಚಿ ಹೊರಗೆ ಹೊರಡಿಸಿದ ಮೇಲೆ ಅವನು ಭೀಮಸೇನನ ಸಂಗಡ ಗದಾಯುದ್ಧ ಮಾಡಿದಾಗ್ಯೂ, ಸೋತು ಸಂಹಾರವಾದನು. ಈ ಪ್ರಕಾರವಾಗಿ ೧೮ ದಿವಸದಲ್ಲಿ ಯುದ್ಧ ಮುಗೀತು. ತರುವಾಯ ಪಾಂಡವರು ಹಸ್ತಿನಾವತಿಗೆ ಹೋದರು ಧರ್ಮರಾಯನು ರಾಜ್ಯಪಟ್ಟಾಭಿಷೇಕ ಮಾಡಿಸಿಕೊಂಡು, ಆಳಲಿಕ್ಕೆ ಆರಂಭ ಮಾಡಿದನು.

11. ಶಾಂತಿಪರ್ವ—ಆದರೆ, ನಾನು ಬಾಂಧವರನ್ನು ಕೊಂದು ದೊಡ್ಡ ದೋಷಕ್ಕೆ ಒಳಗಾದೆ, ನಾನು ಆಳುವದು ಉಪಯೋಗವಿಲ್ಲವೆಂದು ಧರ್ಮರಾಯ ಅನುಮಾನ ಹಿಡಿದನು. ಆಗ ಕೃಷ್ಣನು ಭೀಷ್ಮ ಮಲಗಿದ್ದಲ್ಲಿಗೆ ಅವನನ್ನು ಕರಕೊಂಡು ಹೋಗಿ ಯುದ್ಧಕ್ಕೆ ಬಂದವರನ್ನು ಕೊಲ್ಲುವದು ಕ್ಷತ್ರಿಯರ ಧರ್ಮ, ನಿನಗೆ ಪಾಪವಿಲ್ಲ, ರಾಜ್ಯವನ್ನು ನೀತಿಯಿಂದ ಆಳು ಎಂಬುವ ಹಾಗೆ ಇವನಿಂದ ರಾಜನೀತಿ ಹೇಳಿಸಿ ಸಮಾಧಾನ ಮಾಡಿದನು. ಆಗಲೇ ಶಂತನುರಾಯನ ಮಗನಾದ ಭೀಷ್ಮನು ಸರಳ ಮಂಚದ ಮೇಲೆ ಸತ್ತನು.

12. ಸ್ತ್ರೀಪರ್ವ—ತಮ್ಮ ತಮ್ಮ ಗಂಡರ ಹೆಣಗಳನ್ನು ಹೆಂಡರು ರಣದಲ್ಲಿ ಹುಡಿಕಿಕೊಂಡು, ಅವರವರ ಸಂಗಡ ಮಕ್ಕಳಿಲ್ಲದವರೆಲ್ಲರೂ ಸಹಗಮನ ಮಾಡಿದರು.

13. ಸೂಕ್ತಪರ್ವ—ಯುದ್ಧದಲ್ಲಿ ಸತ್ತವರ ದೆಸೆಯಿಂದ ಧರ್ಮರಾಯ ಉತ್ತರಕ್ರಿಯಾದಿಗಳನ್ನು ಮಾಡಿ, ತನ್ನ ಮುಟ್ಟುಚಿಟ್ಟನ್ನು ಕಳದುಕೊಂಡು ಶುದ್ಧನಾದನು.

14. ಐಖ್ಯಪರ್ವ—ಧೃತರಾಷ್ಟ್ರನಲ್ಲಿ ಕೌರವರಾಯ ಮೊದಲಾದ ತನ್ನ ಮಕ್ಕಳೆಲ್ಲಾ ಸತ್ತರೆಂಬುವ ಸಿಟ್ಟು ಯಿತ್ತು. ಇವನಿಗೆ ಸಮಾಧಾನ ಮಾಡುವದಕ್ಕೆ ಪಾಂಡವರು ಬಂದಾಗ, ನನ್ನ ಮಗ ಕೌರವರಾಯನನ್ನು ಹೊಡೆದ ಭೀಮಸೇನನ್ನು ಅಪ್ಪಿಕೊಂಡೇನು ಎಂದು ಧೃತರಾಷ್ಟ್ರನು ಹೇಳಿದ್ದಕ್ಕೆ, ಅವರು, ಸಿಟ್ಟಿನಿಂದ ಅವನನ್ನು ಕೊಂದಾನು ಎಂಬ ಭಯದಿಂದ ಬಂದು ವೃಕ್ಷನ ಕಂಭವನ್ನು ಕುರುಡನಾದ ಧೃತರಾಷ್ಟ್ರನ ಮುಂದೆ ನಿಲ್ಲಿಸಿ ಇದೇ ಭೀಮನೆಂದು ಅಪ್ಪಿಸಿದಲ್ಲಿ, ಅದು ಅವನೊಳಗಣ ದುಃಖಾಗ್ನಿಯಿಂದ ಭಸ್ಮವಾಗಿ ಹೋಯಿತು. ಹೀಗೆ ಧೃತರಾಷ್ಟ್ರನ ಸಿಟ್ಟು ತೀರಿ ಹೋದ ಮೇಲೆ, ಸತ್ಯಭೀಮನನ್ನು ತೋರಿಸಿದರು. ಉಳಿದವರು ಸುದಾ ಧೃತರಾಷ್ಟ್ರನ ದರುಶನ ತಕ್ಕೊಂಡು ತಿರಿಗಿ ಅನ್ಯೋನ್ಯವಾದರು.

15. ಅಶ್ವಮೇಧ ಪರ್ವ—ಅಶ್ವಮೇಧವನ್ನು ನಡಿಸಿದ ಕಥೆ; ನೋಡು ಜೈಮಿನಿ ಭಾರತ.

16. ಮುಸಲಪರ್ವ—ಕೃಷ್ಣನು ಅರ್ಜುನನ್ನು ತನ್ನ ಸಂಸ್ಥಾನವಾದ ದ್ವಾರಕಾ ಪಟ್ಟಣಕ್ಕೆ ಕರಕೊಂಡು ಹೋಗಿದ್ದನು. ಅಲ್ಲಿ ಇರುವಾಗ್ಯೆ, ಒಂದು ದಿವಸ ಕೃಷ್ಣನ ಮಕ್ಕಳು ಒಬ್ಬ ಹುಡುಗನ ಹೊಟ್ಟೆಗೆ ಒಂದು ಮುಸಲ ಕಟ್ಟಿ, ಅರಿವಿ ಮುಚ್ಚಿ, ಗರ್ಭಿಣಿ ವೇಷ ಮಾಡಿ, ಸಮುದ್ರದ ದಂಡೆಯಲ್ಲಿಯ ಪ್ರಭಾಸಕ್ಷೇತ್ರದಲ್ಲಿ ತಪಸ್ಸು ಮಾಡುತ್ತಿದ್ದ ಒಬ್ಬ ಋಷಿಯ ಹತ್ತರಕ್ಕೆ ಕರಕೊಂಡು ಹೋಗಿ, ಎದರಿನಲ್ಲಿ ನಿಲ್ಲಿಸಿ, ಈ ಸ್ತ್ರೀ ಏನು ಹಡಿದಾಳು ಎಂದು ಅಡಿಸ್ಯಾಡುವದಕ್ಕೆ ಕೇಳಿದರು. ಇದಕ್ಕೆ ಋಷಿ ಕೋಪಮಾಡಿ, ನಿಮ್ಮ ವಂಶ ನಾಶ ಮಾಡುವಂಥಾ ಮನಿಕೆಯನ್ನು ಹಡಿಯುತ್ತಾಳೆ ಅಂದನು. ಅವರು ಭಯವುಳ್ಳವರಾಗಿ ಬಂದು ಈ ವೃತ್ತಾಂತವನ್ನು ಕೃಷ್ಣನ ಮುಂದೆ ತಿಳಿಸಿದರು. ಅವನು ಹೇಳಿದ ಪ್ರಕಾರ, ಆ ಮನಿಕೆಯನ್ನು ಅವರು ಸಮುದ್ರದಲ್ಲಿ ತೇದು ಬಿಟ್ಟರು. ತೇಯುಲಿಕ್ಕೆ ಬಾರದಂಥಾ ಅದರ ತುದಿಯ ಚೂರು ಸಮುದ್ರದಲ್ಲಿ ಒಕ್ಕೊಟ್ಟರು. ಅದನ್ನು ಒಂದು ಮೀನ ನುಂಗಿತು. ಒಬ್ಬ ಬೇಡನು ಅದನ್ನು ಹಿಡಿದು ಕೊಯ್ಯಲಾಗಿ, ಹೊಟ್ಟೆಯಲ್ಲಿ ಆ ಮನಿಕೆಯ ಚೂರು ಕಂಡು, ತನ್ನ ಬಾಣದ ತುದಿಗೆ ಹಾಕಿಕೊಂಡನು. ಮತ್ತು ಆ ಮನಿಕೆ ತೇದು ಬಿಟ್ಟ ಬುರುಗು ಆಪಾಗಿ ಬೆಳೆದಿತ್ತು. ಕೆಲವು ಕಾಲದ ಮೇಲೆ ಕೃಷ್ಣನು ಒಂದು ದಿವಸ ಸ್ನಾನಾರ್ಥವಾಗಿ ಎಲ್ಲಾ ಯಾದವರು ಸಹಿತ ಆ ಪ್ರಭಾಸಕ್ಷೇತ್ರಕ್ಕೆ ಹೋಗಿ, ತಮ್ಮ ತಮ್ಮ ಸತ್ಕರ್ಮಗಳೆಲ್ಲಾ ತೀರಿಸಿ ಭೋಜನ ಮಾಡಿದ ಬಳಿಕ ಅವರು ಸುರಾಪಾನ ಮಾಡಿ ಮತ್ತರಾಗಿ, ಕೌರವರಿಗೂ ಪಾಂಡವರಿಗೂ ಆದ ಯುದ್ಧ ಸುದ್ದಿ ತೆಗದು, ಕೆಲವರು ಕೌರವರ ಪಕ್ಷ ಹಿಡಿದು, ಕೆಲವರು ಪಾಂಡವರ ಪಕ್ಷ ಹಿಡಿದು ಮಾತಾಡಿ, ಜಗ್ಯಾಡಲಿಕ್ಕೆ ಆರಂಭ ಮಾಡಿದರು. ಆಗ ಅಲ್ಲಿ ಬೆಳದಿದ್ದ ಆಪನ್ನು ತಕ್ಕೊಂಡು ಹೊಡಿದಾಡಿ ಸತ್ತರು. ಈ ಲಯವನ್ನು ನೋಡಿ ಕೃಷ್ಣನು ಅರ್ಜುನನನ್ನು ಕರೆದು, ನೀನು ನನ್ನ ಹೆಂಡರನ್ನು ಮಥುರ ಪಟ್ಟಣಕ್ಕೆ ಕರಕೊಂಡು ಹೋ-

ಗಿ ಅಲ್ಲಿ ನನ್ನ ಮೊಂಮಗ ವಜ್ರರಾಯನಿಗೆ ಪಟ್ಟ ಕಟ್ಟು ಎಂದು ಆಜ್ಞೆ ಕೊಟ್ಟು, ತಾನು
ಬಂದು ಗವಿಯಲ್ಲಿ ತನ್ನ ಅವತಾರ ತೀರಿತೆಂದು ಮಲಗಿರುವಾಗ್ಯೆ, ಆ ವನಿಕೆ ಜೂರು ತ
ಕ್ಕೊಂಡಿದ್ದ ಬೇಡನು ಬಂದು, ಕೃಷ್ಣನ ಹಿಂಮಡ ಕಂಡು, ಮೊಲದ ಮೋರೆಯೆಂದು ತಿಳಿ
ದು ಬಾಣ ಬಿಡಲಾಗಿ, ದೇಹ ಬಿಟ್ಟನು. ಕೃಷ್ಣನು ಹೇಳಿದಂತೆ, ಅರ್ಜುನನು ಮಥುರ ಪ
ಟ್ಟಣಕ್ಕೆ ಹೋಗುವಾಗ್ಯೆ, ಗೊಲ್ಲರು ಬಂದು ಹಾದಿಯಲ್ಲಿ ಸುಲಕೊಂಡರು. ಆದರೂ ಕೃ
ಷ್ಣನ ಆಜ್ಞೆಯಂತೆ ಮಾಡಿ ಹಸ್ತಿನಾವತಿಗೆ ಬಂದು ಆದದ್ದನ್ನು ಹೇಳಿದನು.

17. ಪ್ರಸ್ಥಾನಿಕ ಪರ್ವ—ಪಾಂಡವರು ಈ ವರ್ತಮಾನವನ್ನು ಕೇಳಿದ ಮೇಲೆ, ನಮ್ಮ
ಒಡೆಯನಾದ ಕೃಷ್ಣನು ಹೋದನು, ನಾವು ಇನ್ನು ರಾಜ್ಯ ಆಳತಕ್ಕದ್ದಲ್ಲವೆಂದು ಅವರು
ಅರ್ಜುನನ ಮೊಂಮಗನಾದ ಪರೀಕ್ಷಿತ ರಾಯನಿಗೆ ಪಟ್ಟ ಕಟ್ಟಿ ಆಗಲೇ ಈ ದುಖ್ಖದಿಂದ
ಪ್ರಾಣ ಬಿಟ್ಟವರಿಗೆಲ್ಲಾ ಸಂಸ್ಕಾರ ಮಾಡಿ, ತಾವು ೫ ಮಂದಿ ಮಹಾಪಥ ಹಿಡಿದು ಹೋಗು
ವವರಾದರು.

18. ಸ್ವರ್ಗಾರೋಹಣ ಪರ್ವ—ಪಾಂಡುವರು ಹಿಮಾಚಲಕ್ಕೆ ಬಂದು ಅದನ್ನು ದಾಟಿ
ಹೋಗಿ, ಮನುಷ್ಯ ಸಂಚಾರವಿಲ್ಲದಲ್ಲಿ ನಡೆಯುವಾಗ ಧರ್ಮರಾಯನನ್ನು ಹೊರ್ತು ಉಳಿ
ದ ನಾಲ್ವರು ಬಹಳ ದಣಕೊಂಡು ಹೋಗುವದರೊಳಗೆ ಆಕಾಶ ಮಾರ್ಗವಾಗಿ ಅವರ ದೆ
ಸೆಯಿಂದ ಬಂದ ಒಂದು ವಿಮಾನದಲ್ಲಿ, ಧರ್ಮರಾಯನು ಸಶರೀರನಾಗಿ, ಉಳಿದವರು ಸ್ಥೂ
ಲ ದೇಹ ಬಿಟ್ಟು ಸೂಕ್ಷ್ಮ ದೇಹ ಧರಿಸಿದವರಾಗಿ ಕೂತು ಸ್ವರ್ಗಕ್ಕೆ ಹೋದರು.

ಈ ೧೮ ಪರ್ವಗಳಲ್ಲಿ ಕುಮಾರ ವ್ಯಾಸನೆಂಬ ಕವಿ ಮೊದಲಿನ ೧೦ ಪರ್ವಗಳನ್ನು ಸಂ
ಸ್ಕೃತಕ್ಕೆ ಸರಿಯಾಗಿ ಕನ್ನಡಿಸಿದನು. ಈ ಕವಿಯ ನಿಜ ಹೆಸರು ಗೊತ್ತಿಲ್ಲ. ಆದರೆ ಅವ
ನು ಗದಗಿನ ಶೀಮೆಯೊಳಗಣ ಕೋಳಿವಾಡ ಎಂಬ ಗ್ರಾಮದ ಗೌಡನು, ಬ್ರಾಹ್ಮಣ ಕುಲ
ದವನು, ಕವಿತಾಲಕ್ಷಣ ಬಲ್ಲವನಾಗಿ ದೇಶದಲ್ಲಿ ಸಂಚಾರ ಮಾಡುತ್ತಿರುವಾಗ್ಯೆ, ಗದಗಿಗೆ
ಬಂದನು. ಆಗ ಅದನ್ನು ಆಳುತ್ತಿದ್ದ ಒಬ್ಬ ಅರಸನು ತಾನು ಮಹಾಭಾರತ ಕಾವ್ಯವನ್ನು
ಕನ್ನಡದಲ್ಲಿ ಭಾಷಾಂತರ ಮಾಡ ಬೇಕೆಂದು ನೆನಸಿದನು, ಆದರೆ ತನ್ನ ಕೈಲಾಗಲಿಲ್ಲ.
ಇವನಿಂದ ಆದೀತೆಂದು ಸ್ವಪ್ನದಲ್ಲಿ ತಿಳಕೊಂಡು, ವ್ಯಾಸಕುಮಾರ ಕವಿಯನ್ನು ಈ ಕೆಲ
ಸಕ್ಕೆ ಇಟ್ಟುಕೊಂಡನು, ಅವನು ಗದಗಿನ ವೀರನಾರಾಯಣನ ಗುಡಿಯಲ್ಲಿ ೧೦ ಪರ್ವಗ
ಳನ್ನು ಕನ್ನಡಿಸಿದನು, ಹೀಂಗೆ ಸಂಪ್ರದಾಯ ಉಂಟು.

PREFACE.

1. ಪೀಠಿಕಾಪದಗಳು. (ಆದಿಪರ್ವ ಸಂಧಿ. 1—2.)

Ability of the Canarese translator of the Mahabhárata.

270. ಹಲಿಗೆ ಬಳಪವ ಹಿಡಿಯದೊಂದ
ಗ್ಗಳಿಕೆ, ಪದವಿಟ್ಟಳುಪದೊಂದ
ಗ್ಗಳಿಕೆ, ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೇ,
ಬಳಸಿ ಬರೆಯಲು, ಕಂಠಪತ್ರದ
ವುಲುಹು ಗೆಡದಗ್ಗಳಿಕೆ, ಯೆಂಬೀ
ಬಲುಹು ಗದುಗಿನ ವೀರನಾರಾಯಣನ ಕಿಂಕರಗೇ.

1. ಹಲಿಗೆ ಬಳಪ ಹಿಡಿದು ಬರೆಯುತ್ತಿದ್ದಿಲ್ಲ, ಬರೆಸಿದ ಮೇಲೆ, ಮತ್ತು ಅಳಿಸಿ ತಿದ್ದುತ್ತಿದ್ದಿಲ್ಲ; ಎರಡನೆಯವರ ಕಾವ್ಯ ನೋಡಿ ಅನುಸರಿಸಿ ಮಾಡುತ್ತಿದ್ದಿಲ್ಲ; ಬರೆಯುವ ಸಪ್ಪಳ ನಿಲ್ಲದಂತೆ ಎಡೆಬಿಡದೆ ಹೇಳಿ ಬರಿಸುತ್ತಿದ್ದನು.

He takes no notice of other poets.

271. ತಿಣಿಕಿದನು ಫಣಿರಾಯ ರಾಮಾ
ಯಣದ ಕವಿಗಳ ಭಾರದಲಿ; ತಿಂ
ಥಿಣಿಯ ರಘುವರಚರಿತೆಯಲಿ ಕಾಲಿಡಲು ತೆರಪಿಲ್ಲಾ;
ಬಣಗುಕವಿಗಳಲೆಕ್ಕಿಪನೆ? ಸಾ
ಕೆಣಿಸದಿರು! ಶುಕರೂ[2]ಪನಲ್ಲವೆ?
ಕುಣಿಸಿ ನಗನೇ ಕವಿಕುಮಾರ ವ್ಯಾಸನುಳಿದವರಾ?

1. ಆದಿಶೇಷ; ಭಾರ ತಾಳಲಾರದಷ್ಟು ರಾಮಾಯಣದ ಕಾವ್ಯಗಳನ್ನು ಮಾಡಿದರು, ಆದರೆ ನಾನು ಅವರನ್ನು ಅನುಸರಿಸಿ ಈ ಭಾರತ ಮಾಡಲಿಲ್ಲ. 2. ಕುಮಾರ ವ್ಯಾಸಕೃತ.

272. ಕೇಳಿದನು ಜನಮೇಜಯಕ್ಷಿತಿ
ಪಾಲಕನು ವರಸರ್ಪಯಜ್ಞಾ
ಸ್ಥೂ[1]ಲಪಾಪವಿಘಾತಿಗೋಸುಗವೀ ಮಹಾಕಥೆಯಾ
ಕೇಳಿದೆನು ತಾನಲ್ಲಿ ಮುನಿಜನ
ಮೌಳಿಮಂಡಿತಚರಣಕಮಲನಿ
ಶಾಲವೇದವ್ಯಾಸಕೃತಿಭಾರತ ಕಥಾಮೃತವಾ.

When this story was told to Janaméjeia, Suta heard and published it.

1. ಜನಮೇಜಯನು ಸರ್ಪಯಜ್ಞ ಮಾಡುವಾಗ, ಅನೇಕ ಸರ್ಪಗಳು ಬೆಂಕಿಯಲ್ಲಿ ಬಿದ್ದು ಸತ್ತವು, ಆದೋಷದಿಂದ ಇವನಿಗೆ ತೊನ್ನು ಹತ್ತಿತು. ಬಹಳ ಉಪಾಯ ಮಾಡಿದಾಗ್ಯೂ ಅದು ಹೋಗಲಿಲ್ಲ, ಅದಕ್ಕೆ ವ್ಯಾಸಮುನಿಯನ್ನು ಕೇಳುತ್ತಿರಲಿಕ್ಕೆ ನಿನ್ನ ಹಿರಿಯರಾದ ಪಾಂಡುವರ ಪುಣ್ಯದ ಕಥೆಯನ್ನು ಕೇಳಿದರೆ, ಹೋಗುತ್ತದೆ ಎಂದು ಹೇಳಿ, ತನ್ನ ಶಿಷ್ಯನಾದ ವೈಶಂಪಾಯ ಮುನಿಗೆ (ಜೈಮಿನಿ) ಹೇಳ ಆಜ್ಞಾಪಿಸಿದನು. ಇವನು ಹಸ್ತಿನಾಪತಿಯಲ್ಲಿ ಅದನ್ನು ಹೇಳುವಾಗ್ಗೆ ಸೂತನೆಂಬುವನು ಅಲ್ಲಿ ಇದ್ದು ಕೇಳಿದನು. ತರುವಾಯ ನೈಮಿಶಾರಣ್ಯದಲ್ಲಿಯ ಶೌನಕಾದಿ ಬ್ರಾಹ್ಮಣರಲ್ಲಿ ಹೋಗಿ ಕೇಳಿದ್ದನ್ನು ತಿರಿಗಿ ಹೇಳಿ ಪ್ರಕಟ ಮಾಡಿದನು.

---

2. ಪಾಂಡವರು ಅರಗಿನ ಮನೆಯಿಂದ ಹೊರಟು ಏಕಚಕ್ರನಗರದಲ್ಲಿ ಬಕಾಸುರ ನನ್ನು ಕೊಂದದ್ದು. (ಆದಿಪರ್ವ ಸಂಧಿ. 8—10.)

273. ಕೇಳು ! ಜನಮೇಜಯ ಧರಿತ್ರೀ
ಪಾಲ ! ಗಜನಗರಿಯಲಿ ಕೌರವ
ರಾಳ ಪಾಂಡವರಾಳ ಸೆಣಸಿನ ಕಾಲುಮುಟ್ಟುಗಳಾ
ಸೂಳಮತ್ಸರ,[1] ಬಿರಿದುಪಾಡಿನ
ಜೂಳಿಗಲಹದ ಕದಡು,[2] ಜೂಜಿನ
ತೋಳುವಲರೊಳತೋಟಿ[3] ಮಸಗಿತು ದಿವಸದಿವಸದಲೀ

The quarrel between the Kourava and Pandu princes commences.

ಕೌರವರಾಳ=ಮತ್ಸರವೂ, ಬಿರುದು=ಕದಡೂ, ಜೂಜಿನ= ಒಳತೋಟಿಯೂ, ಇವು ಮಸಗಿದವೆಂದನ್ವಯಿಸಬೇಕು.=1. ಕೌರವರ ಕಡೆಯುವರೂ ಪಾಂಡುವರ ಕಡೆಯವರೂ ಜೇಕೆಂದು ಜಗಳ ತೆಗದು, ಒಂದು ದಿವಸ ಇವರು, ಒಂದು ದಿವಸ ಅವರು, ನಡಿಸುತ್ತಿದ್ದ ಮತ್ಸರ. 2. ತಮ್ಮತಮ್ಮ ಬಿರಿದಾವಳಿಯನ್ನು ಹೊಗಳಿಸಿ ಆರಂಭಿಸಿದ ಜಗಳದ ಗಲಬಿಲಿ; 3. ಹೀಗೆಹಾಗೆ ಸೋಲಿಸುತ್ತೇವೆಂದು ಜೂಜು ಹಾಕಿಕೊಂಡು ಯಾರಿಗೆ ತ್ರಿಸಿಯುದಂತೆ, ಗೊತ್ತು ಮಾಡಿದ ಕಾಳಗ.

The fear of the inhabitants of Hastinavati;

274. ಬೀದಿಗೆಲಹದ ಕದಡು ಬೀಡಿನ
ಲೈದೆ ಹಬ್ಬಿತು ; ಬೀಡುಗಲಹದ
ಕೈದೊಳಸು ಕೊಂಡೆಸಗಿ ನಟಿಸಿತು ನಾಡನಾಡಿನಲೀ ;
ಆದುದೆಂದಿಭಪುರಿಗೆ[1] ಕಾ
ಳಾಮದಿಂನೇಸೆಂದು ಪುರಜನ
ವೈದೆ ಹೆದರಿತು ಭೀಮದುರ್ಯೋಧನರ[2] ಹೋರಟಿಗೇ.

1. ಹಸ್ತಿನಾವತಿ 2. ಕೌರವರಾಯ, ಅವನಿಗೆ ಸುಯೋಧನ ಎಂಬ ಹೆಸರು ಸುಧಾ ಇತ್ತು

and their remarks about the quarrel.

275. ಬೇರೆ ಪಾಂಡವರಿರಲಿ ! ರಾಯನ
ನೂರುಮಕ್ಕಳು ಪ್ರಬವನಾಳಲಿ !
ಬೇರೆ ಕೌರವರಿರಲಿ ? ಪಾಂಡವರಾಳಲಿಭಪುರಿಯಾ ?
ನೂರರೊಡನೈವರನು ಧರಿಸಿರ
ಲಾರದೀಪುರಿ ಯೆನುತ, ದುಗುಡವ
ಹೇರಿ ಹೊದಕುಳಿಗೊಳುತಲಿರ್ದುದು ಹಸ್ತಿನಾನಗರಾ.

Kouravaraya has a secret conversation with Shakuni Karna

276. ಒಂದು ದಿವಸ ಸುಯೋಧನನು ನಿಜ
ಮಂದಿರದೊಳೇಕಾಂತದಲಿ ಮನ
ನೊಂದು ನುಡಿದನು ಶಕುನಿ[1] ಕರ್ಣಜಯದ್ರಥಾದ್ಯರಿಗೇ[2] :
ಅಂದು ಭೀಮಾರ್ಜುನರು ದ್ರುಪದನ[3]
ತಂದು ದಕ್ಷಿಣೆಯಿತ್ತು ಗುರುವಿಗೆ
ಸಂದರ್ಥೈ ; ಸಮರದಲಿ ಪರಿಭವವಾಯ್ತು ತಮಗೆಂದಾ

1. ಕೌರವರಿಗೆ ಸೋದರಮಾವನು ; ಅವನ ಅಕ್ಕ ಗಾಂಧಾರಿಯು ಧೃತರಾಷ್ಟ್ರನ ಹೆಂಡತಿ. 2. ಸಿಂಧುದೇಶದ ಅರಸು ಸೈಂಧವ ಕೌರವರ ತಂಗಿ ದುಸ್ಸಳೆಯ ಗಂಡನು. 3. ಕೌರವರಿಗೂ ಪಾಂಡವರಿಗೂ ಧನುರ್ವಿದ್ಯ ಕಲಿಸುತ್ತಿದ್ದ ದ್ರೋಣಾಚಾರ್ಯನು ದ್ರುಪದರಾಯನನ್ನು ತಂದು ನನಗೆ ದಕ್ಷಣೆ ಸಲ್ಲಿಸಿರಿ ಎಂದು ಹೇಳಿದನು. ಅದರಂತೆ ಮಾಡಲಿಕ್ಕೆ ಕೌರವರಿಂದ ಆಗಲಿಲ್ಲಾದ ಕಾರಣ, ಪಾಂಡವರು ಹೋಗಿ ತಕ್ಕೊಂಡು ಬಂದರು. ತನ್ನ ಬಡತನ ಪರಿಹರಿಸೆಂದು ದ್ರೋಣನು ಪ್ರಾರ್ಥನೆ ಮಾಡಿದ್ದನ್ನು ದ್ರುಪದರಾಯನು ಲಕ್ಷ್ಯಕ್ಕೆ ತಾರದೆ ಹೋದದರಿಂದ, ಉಭಯರಿಗೆ ವೈರ ಬಿದ್ದಿತ್ತು.

277. ವನಜವನದಲಿ ತುರುಚಿ, ಕಬ್ಬಿನ

and other chiefs of his party. Kouravaraya's speech ;

ಬನದಿ ಕಡಸಿಗೆ, ಚೂತವನಯುಕಾ
ನನದಿ ಬೊಬ್ಬುಲಿ, ಭೀಮಸೇನನ ಬಿರವು ತಂನೊಳಗೇ ;
ಇನಿತು ಪಾರ್ಥನ ಮೇಲೆ ಯಮಳರ
ಜಿನುಗಿನಲಿ ಜಾರೆನು ; ಯುಧಿಷ್ಠಿರ
ಜನಪನಾಗಲಿ ! ಮೇಣು ಮಾಣಲಿ ! ಭೀತಿ ಇಲ್ಲೆಂದಾ

278. ಹಾದು ನಡೆಯದಿವರೊಡನೆ ; ನಮ್ಮಲಿ

"We, the Houravas and the Pándavas cannot get together."

ಕದನವೇ ಕೈಗಟ್ಟುವುದು ; ಕಾ
ದಿದೊಡೆ, ಹೆಬ್ಬುಲವಹುದು ದುರ್ಬಲ, ದೈವಗತಿ ಬೇರೇ ;
ನದಿಗಳರಳಿಯುಹಾಸು, ನವವಿಷ
ವುದರ, ದೀಪನಚೂರ್ಣವಾಪಂ
ಗದಲಿ ಸಾಪತ್ನರಲಿ ನದರವ ಕಾಣೆ ತಾನೆಂದಾ.

279. ದುಗುಡವೇತಕೆ ? ಜೀಯ ! ಜೊಂಬಿನ

Speech of Karna :

ಜಗಳವನು ತೆಗದರಿನ್ನೃಪರ ಸುಂ
ಟಿಗೆಯುನಾಯ್ನಿವೆನವರ ತನುವನು ಯುದ್ಧರಂಗದಲೀ

"The Pándavas must be killed in battle." *

ದಿಗುಬಲಿಯ[1] ಕೊಡಿಸುವೆನು, ಸಾಕಿಂ
ನೊಗುಮಿಗೆಯ ಚಿಂತಾಂಗನೆಯನೋ[2]
ಲಗಿಸದಿರು ! ಕುರುರಾಯ ! ಚಿತ್ತೈಸೆಂದನಾಕರ್ಣ.

1. ಅಷ್ಟದಿಕ್ಕುಗಳಿಗೆ ಕೊಯಿದ ಬಲಿಯನ್ನು ಚೆಲ್ಲುವದು. 2. ಚಿಂತೆ ಎಂಬ ಸ್ತ್ರೀಗೆ ಸೇವಕನಾಗ ಬೇಡ. ಇದು ರೂಪಕಾಲಂಕಾರ.

280. ಹೊಡೆದು ಹೊಡೆ! ಚಂಡಾಡಿ ರಿಪುಗಳ
ಗಡಣವನು ಯಮರಾಜಧಾನಿಗೆ
ನಡೆಸುವೆನು; ನೀ ನೋಡುತಿರು ! ಸಾಕೊಂದು ನಿಮಿಷದಲೀ

ಕೊಡು ತನಗೆ ನೇಮವನು! ದುಗುಡವ
ಬಿಡು! ಮನಸ್ಸಿನ ಕಂದುಕುಂದನು
ಹಿಡಿಯದಿರು! ಕುರುರಾಯ! ಚಿತ್ತೈಸೆಂದನಾಕರ್ಣ.

281. ಹಬ್ಬುಗೆಯ ಹದಿನಾಲ್ಕು ಲೋಕದ
ಮಬ್ಬುಗಳನೀಡಾಡಿ, ಸಭೆಯೊಳ
ಗೊಬ್ಬನೇ ರವಿ ತೊಳಗಿ ಬೆಳಗುವವ್ರೋಲು, ಪಾಂಡವರಾ
ಕೊಬ್ಬುಗಳ ನಿಲಿಸುವೆನು! ಧರೆಯೊಳ
ಗೊಬ್ಬನೇ ದುರ್ಯೋಧನನು! ಮ
ತ್ತೊಬ್ಬರಿಲ್ಲೆಂದೆನಿಸಿ ತೋರುವೆನೆಂದನಾಕರ್ಣ.

282. ವಿದುರಭೀಷ್ಮಾದಿಗಳು ನಿನ್ನಯ
ಸದನದೊಳಗುಂಡುಟ್ಟು ಪರರ
ಭ್ಯುದಯವನೆ ಬಯಸುವರು, ದೂರುವರೆಂಮನವರುಗಳಾ
ಹದನ ನೀನೇ ಬಲ್ಲೆ; ಸಾಕಿಂ
ನವರ ಮಾತೇಕರಸ! ತನ್ನಯ
ಕದನವನು ಚಿತ್ತೈಸು! ಸಾಕಿಂನೆಂದನಾಕರ್ಣ.

283. ಸಹಜವೀಸುದಿ! ಕರ್ಣನಾಡಿದ
Shakuni's speech, he tries to convince Kauravaraya, ದಹುದು, ಪಾಂಡವರೆಂಬವರು ಕಡು
ಸಾಹಸಿಗಳು; ಗೆಲಲರಿದು, ಕುಹಕೋಪಾಯಮಾರ್ಗದಲೀ
ಅಹಿತರನು ಗೆಲಬಹುದು, ಪರಿಕರ
ಸಹಿತ[1]ವರುಗಳ; ನಿಂಮ ಚಿತ್ತಕೆ
ಬಹರೆ, ತನ್ನಭಿಮತವ[2]ನವಧರಿಸೆಂದನಾಶಕುನೀ.

1. ಈ ಮಾತನ್ನು ಅಹಿತರನು ಎಂಬದಕ್ಕೆ ಕೂಡಿಸಿ ಅನ್ವಯಿಸಬೇಕು. 2. ಬಹರೆ= ಬಂದರೆ.

284. ಅರಸ! ಕೇಳ್ಬಲುವಿದ್ಯದಲಿ ಮೂ
ವರು, ಕಣಾ? ಸಾಮರ್ಥ್ಯಪುರುಷರು;
ಧರೆಯೊಳೊಬ್ಬರಿಗೊಂದುಗುಣ ಪಾರ್ಥಂಗೆ ಮೂರುಗುಣಾ
ಭರಿತವಾಗಿಹುದಾತನೊಬ್ಬನ
ಸರಿಸದಲಿ ಪಾರಾಂತು ಜೀವಿಸಿ
ಮರಳ ಬಲ್ಲವನಾವನೈ? ಹೇಳೆಂದನಾಶಕುನೀ.

that the Pándavas must be destroyed by artifice,

285. ಶತ್ರುಗಳ ಸಂಹರಿಸಿ ರಾಜ್ಯವ
ನೊತ್ತಿ ಯಾಳುವೆನೆಂಬ ಸಾಹಸ
ಸತ್ವಗುಣ ನಿನಗಿಲ್ಲ? ಪಾಂಡವರತುಲಭುಜಬಲರೂ;
ಕೃತ್ರಿಮದ ಮುಖದಿಂದ ರಿಪುಗಳ
ಕಿತ್ತು ಹಾಯಿಕಿ ನೆಲನನೇಕ
ಚ್ಛತ್ರದಲಿ ಸಲಹುವದು ಮತ ಕೇಳೆಂದನಾಶಕುನೀ.

as they are too strong, to be overcome in open battle.

286. ಸೋದರರುಗಳು ನೀವು, ನಿಮ್ಮೊಳು
ಭೇದಮಂತ್ರವ ಮಾಡುವುದು ಮ
ರ್ಯಾದೆಯೇ? ನಾವ್ನಿಂಮಡಿಯಲರಮನೆಯ ಸೇವಕರೂ
ವಾದಿಸುವರಿತ್ತಂಡ ಸರಿ ನಮ
ಗಾದರೆ[2]ಯು ಕಂಡುದ ನುಡಿಯು ಬೇ
ಕಾದರಿಸು! ಮೇಣ್ಮಾಣಿ ಬಿಂನಹವೆಂದನಾಶಕುನೀ.

1. ವಾದಿಸುವರೆ=ವಾದಿಸುವಡೆ. ವ್ಯಾ. ಸೂ. 2. ಆದರೂ

287. ಪಕ್ಷವೆರಡೇ ಲೋಕದೊಳ್ಪಿತೃ
ಪಕ್ಷ, ಮೇಣಾಮಾತೃಪಕ್ಷ, ವಿ
ಪಕ್ಷ ತಂದೆಯ ದೆಸೆ, ಸಪಕ್ಷವು ತಾಯ ದೆಸೆಯವರೂ,

ತಕ್ಷಕನ ತೆರದಂತೆ, ನಿನ್ನನು
ಶಿಕ್ಷಿಸುವರಾಪಂಗದಲಿ ನಿ
ರೀಕ್ಷಿಸುವದೈ ಪಾಂಡುಪುತ್ರರನೆಂದನಾಶಕುನಿ

288. ಮೊಳೆಯಲೇ, ಮುರಿಡಿಸಲು ಬೇಹುದು[1] ;
ಬಲಿದ ಬಳಿಕದು ನಿನ್ನ ಹವಣೇ ?
ಯಿಳೆಯೊಳರ್ಧವನಿತ್ತು ರಿಪುಗಳ ಹೆಚ್ಚಿಸಿದ ಬಳಿಕಾ
ಗೆಲುವನಾವನು ? ದೇವದಾನವ[2]
ರೊಳಗೆ ? ಭೀಮಾರ್ಜುನರ ಕೈಮನ
ದಳವನರಿಯಾ ? ಭಾರವೈ ! ಮೇಲೆಂದನಾಶಕುನಿ.

1. ಬಹದು. 2. ದನುಎಂಬ ರಾಕ್ಷಸನ ವಂಶದವರು.

289. ಧಾರುಣಿಯೊಳು ಪಿಪೀಲಿಕೆಯು ವಿ
ಸ್ತಾರದಲಿ ಮಾಡಿದ ಮನೆಯು ಕಾ
ಳೋರಗನು ಹೊಗುವಂತೆ, ರಿಪುಕುಂತೀಕುಮಾರಕರೂ
ವೈರದಲಿ ಸಪ್ತಾಂಗವನು[1] ಕೈ
ಸೂರೆಗೊಂಬರು ; ತಪ್ಪದಿದಕೆ ವಿ
ಚಾರವನು ಕಾಲದಲಿ ಮಾಡುವದೆಂದನಾಶಕುನಿ.

1. ಧನ, ಧಾನ್ಯ, ಗೃಹ, ಕ್ಷೇತ್ರ, ವಸ್ತ್ರ, ಆಭರಣ, ವಾಹನ.

290. ಹಿಂದೆ ನೀನವರುಗಳ ನಾನಾ
ಚಂದದಲಿ ನೋಯಿಸಿದೆ ; ಮನದಲಿ
ಕಂದು ಕುಂದುದು ; ಕಷ್ಟವೃತ್ತಿಯನಾಚರಿಸುತಿಹರೂ ;
ಯಿಂದು ನೀನಾಪಾಂಡುಪುತ್ರರ
ಸಂದಗೆಡಿಸದೆ ಬಿಟ್ಟೆಯಾದೊಡೆ,
ಮುಂದೆ ಬೆಟ್ಟಿತು ರಾಜಕಾರಿಯವೆಂದನಾಶಕುನಿ.

291. ಇರುಬಿನಲಿ ಸಿಕ್ಕಿರ್ದ ಹುಲಿಯನು
ಮುರಿದು ಕಳೆಯದೆ ಕಳಪಟಕೆ ಬಿ
ಟ್ಟರಿಯು ಬಹುದೇ ? ಕೊಂದು ಕೂಗದೆ ಬಿಡುವುದೇ ? ಬಳಿಕಾ
ಕರುಬರಹ ಪಾಂಡವರಿಗೀಗಲೆ
ಪರುವ ನೆನೆ ! ಹೊರಬಿದ್ದರಾದೊಡೆ
ತರಿದು ಬಿಸುಡದೆ ಮಾಣ್ಬರೇ ? ಹೇಳೆಂದನಾಶಕುನೀ.

292. ಅಡವಿಯಲಿ ಜನಿಸಿದರು ; ಬೆಳುವಿಗೆ
ಯಡವಿಯೊಳಗಿಂಸವರ ಬಾಳಿಕೆ
ಗಡವಿಯೇ ನೆಲೆ ಮನೆಯದಲ್ಲದೆ ಪಾಂಡುಪುತ್ರರಿಗೇ
ಪ್ರೊಡವಿಯೊಡೆತನ ಸಲ್ಲದವರನು
ನಡೆಸುವದು ಕಾಲದಲಿ ! ರಾಜ್ಯವ
ಕೊಡುವುದಾವಂಗದಲಿ ಮತವಲ್ಲೆಂದನಾ ಶಕುನೀ,

1. ಪಾಂಡುಚಕ್ರನು ತಪಸ್ಸು ಮಾಡಲಿಕ್ಕೆ ಅದಿವಿಗೆ ಹೋದನಂತರ ಇವರು ಅಲ್ಲಿ ಹುಟ್ಟಿದರು

293. ಶಿಶಿರವಡಗಿದ ಲೋಕ, ಶಿಕ್ಷಾ
ಕ್ರಮಣವಡಗಿದ ದಂತಿ, ಕರ್ಮ
ಭ್ರಮೆಗಳಡಗಿದ ಯೋಗಿ, ರುಜೆ ಯಡಗಿದ ನರೋತ್ತಮನೂ,
ಹಿಮವಡಗಿದ ಸರೋಜದಂತಿಹ
ದಮಲಮತಿ, ಕೇಳ್ವಗೆಗಳಡಗಿದ
ಜಮರಪದಪನಿಸುವದು ; ಚಿತ್ತ್ಯಸೆಂದನಾಶಕುನೀ.

294. ಬಿಡದೆ ಸುಖದುಃಖಗಳೊಳೊಂದನು
ಹಿಡಿದು ಸದ್ವ್ಯವಹಾರಮುಖದಲಿ
ನಡೆಯಲೊಂದರ ತುಷ್ಟಿ, ಯೊಂದರ ನಷ್ಟ, ತನಗಹುದೂ ;

ಹಿಡಿವುದಿಹಪರವೆರಡರೊಳಗಳ
ವಡಿಕೆ ತನಗಹುದೊಂದನೊಂದನು
ಬಿಡುವುದಲ್ಲದೆ ಬೇರೆ ಮತವಿಲ್ಲೆಂದನಾಶಕುನಿ.

295. ಭಾವಮೈದುನನಣ್ಣತಂಮನು,
ಮಾವನಳಿಯನು, ಪುತ್ರಮಿತ್ರರು,
ಸೇವಕರು ಸಜ್ಜನರು ಸುಜನರು, ಸತ್ಯಯುತರೆಂದೂ
ಭಾವಿಸದಿರಾರುವನು ! ನಿನ್ನಯ
ಜೀವವುಳ್ಳನ್ನಬರ, ನಿನ್ನಯ
ದೈವವೇ ಗತಿ, ಯೆಂದು ನಂಬಿಹುದೆಂದನಾಶಕುನಿ.

296. ಶತ್ರುಶೇಷವಿದಲ್ಪವೆಂದುಳು
ಹುತ್ತ ಬರಲಾಗದು, ಕಣಾ ! ಭೂ
ಪೋತ್ತಮರುಗಳು ವೈರಿರಾಯರ ವಂಶಬೀಜವನೂ
ಬಿತ್ತುವರೆ ? ನೇತ್ರಾವಳಿಯ ಮಿ
ಟತ್ತಿ ಕಾರಾಗಾರದೊಳಗೆ ಕ
ಳತ್ರಸಹಿತನಶನದಲಧಿಕವ್ರತರ ಮಾಡೆಂದಾ

297. ವಿಷವನಣುವೆಂದಳುಕದುಪಭೋ
ಗಿಸಲು, ಕೊಲ್ಲದೆ ಬಿಡುವುದೇ ? ಕರ
ಗಸದ ನಡು ಬಡವಾದರೆಯು, ಕೊಯ್ದಿಕ್ಕದೇ ತರುವಾ ?
ಶಿಶುವಿವನು, ಸಾಮರ್ಥ್ಯಪುರುಷನೆ ?
ಪುಸಿ, ಕಣಾ ! ಯೆಂದುಳುಹಿದೊಡೆ, ರ
ಕ್ಕಸನಹನು ಮುಂದಕ್ಕೆ ತನಗವನೆಂದನಾಶಕುನಿ.

298 ಹಿಡಿವ ಫಣೆಯನು, ಹೊಡೆವ ಸಿಡಿಲನು,
ಜಡಿವ ಮಾರಿ[1]ಯನಲಿವ ರುಜೆಯನು,
ಮಡಿವ ದಿನವನು, ಹಾನಿವೃದ್ಧಿಯ ಹೆಚ್ಚುಕುಂದುಗಳಾ,
ಕಡಿವ ಹಗೆಯನು, ಕಾಲಕರ್ಮದ
ಗಡಣವನು, ಸುಖದುಃಖದುದಯದ
ಕಡೆಮೊದಲ ಕಾಣಿಸುವನಾವವನೆಂದನಾಶಕುನೀ.

1. ಮೃತ್ಯು ; ಇದನ್ನು ದೇವತೆಯನ್ನಾಗಿ ಮಾಡಿಕೊಂಡಿದ್ದಾರೆ.

299. ಇನಿತು ಚಿಂತಿಸಲೇಕೆ ? ಕೌರವ
ಜನಪ ! ನಿಂಮಡಿಗಳಿಗೆ ತಾನೊಂ
ದನುವ ಬಿಂನಹ ಮಾಡುವೆನು ; ಪಾಂಡವರ ನೆಳಲಿರಲೂ,
ನಿನಗೆ ರಾಜ್ಯವನಾಳ್ವ ಫಲ ಸಂ
ಜನಿಸಲರಿಯದು ; ಕಾಲದಲಿ ನೀ
ನೆನೆ ಯುಪಾಯವನೊಂದನೆಂದು ಕಳಿಂಗ[1] ಕೈಮುಗಿದಾ.

1. ಅಲ್ಲಿದ್ದ ಕಳಿಂಗದೇಶದ ಅರಸನು=ಇವನು ಶಕುನಿ ಹೇಳಿದ ಮಾತಿಗೆ ಅನುಸಾರವಾಗಿ ಮಾತಾಡಿದನು.

300. ಮೃತ್ಯುವಿನ ತಾಳಿಗೆಯೊಳಗ್ಗದ
ಶತ್ರುಗಳ ಸಾಮೀಪ್ಯದಲಿ, ದು
ರ್ವೃತ್ತರೋಲಗದೊಳಗೆ, ಸಿಂಹದ ಗುಹೆಯೊಳಹಿಪತಿಯಾ
ಹುತ್ತಿನೊಳಗಿಹ ಪೋಲು ಸಲೆ ಬಾ
ಳುತ್ತಲಂತಃಪುರದೊಳಿರಿಸಿರು
ತತ್ಯಧಿಕದೆಚ್ಚರಿಕೆ ಯಿರ ಬೇಕೆಂದನಾಶಕುನೀ

301. ಹಗೆಯ ಹೆಂಗಳನರಮನೆಗಳೊಳು
ಪೊಗಿಸಲಾಗದು ; ತನಗವರು, ಹೇ
ಳಗೆಯ ಹಾವಿನ ಪೋಲು, ಸುಖತರವಲ್ಲವರಿನೃಪರಾ

ಮಗಳ ಮಕ್ಕಳ ದೆಸೆಯುವರನೋ
ಲಗಿಸುವರ ಬಾಹತ್ತರನಿಯೋ
ಗಿಗಳ ನಂಬುವುದುಚಿತವೇ? ಹೇಳೆಂದನಾಶಕುನೀ

302. ಮಣಿದು ಕೂಪದ ಜೀವನವ ಕಡೆ
ಗಣಿಸದೇ ಘಟ ಯಂತ್ರ; ಮೃಗರಿಪು
ಹಣಿಗಿದರೆ, ಹರಿಣಂಗೆ ಗೆಲವೇ? ಕಾರ್ಯಗತಿ ಯರಿದೂ
ಮಣಿವುದಳುಕುವುದಾವಪರಿಯಿಂ
ದೇಶಿಸಿ ಮನದಲಿ ವೈರಿರಾಯರ
ಹಣಿದವಾಡುವುಪಾಯಮಿದು ಕೇಳೆಂದನಾಶಕುನೀ

303. ದನಿಗೆ ನಡದೊಳಪೊಕ್ಕು ಮರಗೂ
ಡಿನಲಿ ಸಿಲುಕಿದ ಹುಲಿಯು ಪೋಲ್ಕಾ
ಜನದಿ ಬೀಸಿದ ಬಲೆಯೊಳಗೆ, ಗಾನಕ್ಕೆ ಮನ ಸೋಲ್ದು,
ಹನನವರಿಯದ ಮೃಗದ ಪೋಲಿರು
ಬಿನಲಿ ಕೆಡಹಿದ ಕರಿಯ ಪೋಲ್ರಿಪು
ಜನವರಭ್ಯುದಯದ ವಿನಾಶವನೆಸಗ ಬೇಕೆಂದಾ.

304. ಎಂದು ದುರ್ಯೋಧನಿಗಳ ನಾನಾ
Kauraraya's assent to Shakuni's counsel.
ಚಂದದಲಿ ಬೋಧಿಸಿ ಸುನೀತಿಯ
ನಂದಗೆಡಿಸಿ ತದೀಯುವಂಶಚ್ಛೇದಮಾರ್ಗವನೂ
ಒಂದುಗೂಡಿ ಸುಯೋಧನಂಗಾ
ನಂದವೆನಿಸಿ ಕಳಿಂಗ ಲೋಕವ
ಕೊಂದನೈ! ಜನಮೇಜಯ! ಕ್ಷಿತಿಪಾಲ! ಕೇಳೆಂದಾ.

305. ಎಂಮ ಬಹುಮಾನಾಪಮಾನವು

Kauraraya resolves on burning the Pándavas;

ನಿಂಮದಲ್ಲದೆ, ಬೇರೆ! ನಂಮಯ
ಸೊಂಮುಸಂಮಂಧದಲಿ ಹಿತವರ ಕಾಣೆನಾನಿಂನೂ
ಸಂಮತದಿ ಪಾಂಡವರಿಗಗ್ನಿಯ
ಲೊಂಮೆ ಹರಿವನು ನೆನವೆನೊದವಿದ
ಡೆಂಮ ಸುಕೃತೋದಯದ ಫಲವೆಂದನು ಸುಯೋಧನನೂ.

306. ಎನೆ, ಕಳಿಂಗಾದಿಗಳು ತಂತಂ

he has a conversation with his father Dhrutaráshtra in the night:

ಮನುಮತವ ಹೇಳಿದರು ಕೌರವ
ಜನಪನವರಿಗೆ ಕೇಡ ನಿಶ್ಚೈಸಿದನು ಮನದೊಳಗೆ ;
ಜನಕನಲ್ಲಿಗೆ ನಡುವಿರುಳು ಬಂ
ದನು ; ನಯದೊಳೀಮಾತ ತೆಗದೆಂ
ದನು ವೃಕೋದರನೊಳಗವನರ್ಜುನನ ಸಾಹಸವಾ.

307. ಅರಿಗಳುದ್ಭವವಿನ್ನು ಗಂಟಲ

Let the Pándavas remain, send us away.

ನರಿವುದೆಂಮನು ನೂರುಮಕ್ಕಳ
ನರಸ! ಬರಿದೇ ಹಡದು ಕೆಡಸಿದೆ ಕಾಯ ಜವ್ವನವಾ!
ಇರಲಿ ಭಿಮಾರ್ಜುನರು ಹಸ್ತಿನ
ಪುರದೊಳೆಮ್ಮನಿಬರನು ದೇಶಾಂ
ತರಕೆ ನೇಮಿಸು! ಜೀಯ! ನೂಕದು ಭೀಮನೊಡನೆಂದಾ.

308. ಅಕಟ! ಮಗನೇ! ಧರ್ಮಸುತ ಬಾ

Reply of the father "Do not say so."

ಧಕನೆ? ಭೀಮಾರ್ಜುನರ ಮತಿ ಕಂ
ಟಕದೊಳೆರಗದು ; ಮೀರಿ ನಡೆಯರು ಧರ್ಮನಂದನನಾ;

ಸಕಲರಾಜ್ಯಕೆ ಪಾಂಡುವೇ ಪಾ
ಲಕನು ತಂನೊಳು ತಪ್ಪಿದನೆ? ಬಿಡು!
ವಿಕಳಮತಿಗಳ ಮಾತನೆಂದನು ಮಗಗೆ ಧೃತರಾಷ್ಟ್ರ!

309. ಬೊಪ್ಪ! ಬಿನ್ನಹವವರ ಜನಕನು
ತಪ್ಪಿ ನಡೆಯನು ನಿಮಗೆ; ನೀವಿಂ
ನೊಪ್ಪಿಸುವುದಾಪಾಂಡುಸುತರಿಗೆ ರಾಜ್ಯವೈಭವವಾ!
ಅಪ್ಪುದಿಳೆ ಧರ್ಮಜನ; ತರುವಾ
ಯಪ್ಪುದಾವಿಧಿಯಲ್ಲಿ ಸಂತತ
ತಪ್ಪದವರಿಗೆ ಸಲಲಿ! ನೆಲವಿದು ಹೊಲ್ಲಹೇನೆಂದಾ

Kauraraya's answer: The Pándavas will become masters, therefore let us go.

310. ಜನಪ! ಸುಖದಲಿ ನಿಂಮ ತಂಮನ
ತನುಜರೊಡನೆಯು ರಾಜ್ಯಮಾಡೂ
ದನುನಯವಲಾ! ಬೀಳು ಕೊಡುವುದು ನಂಮನೂರ್ವರನೂ!
ಜನಪರುಂಟೋಲೈಸಿಕೊಂಬರೆ,
ತನಗಿರದೆ ಖಂಡೆಯದ ಸಿರಿ! ಕರೆ
ಜನನಿಯನು! ಬೀಳ್ಕೊಂಬೆವಿನ್ನೇನೆಂದು ನಿಂದಿರ್ದಾ.

311. ಎಲೆ ಮಗನೆ! ಯೆನ್ನಾಣೆ! ಬಾ! ಕುರು
ಕುಲತಿಲಕ! ನೀ ಹೋಗಲೆನ್ನೊಡ
ಲುಳವುದೇ? ಮರಿಯಾನೆ! ಬಾರೈ! ಕಂದ! ಬಾ! ಯೆಂದೂ
ಸೆಳದು ಬಿಗಿಯಪ್ಪಿದನು, ಕಂಬನಿ
ದುಳುಕಿದನು; ಹೇಳಿನ್ನು ಮೇಲಣ
ಬಳಕೆಯನು! ರಿಪುರಾಜಕಾರ್ಯಕೆ ಬುದ್ಧಿಯೇನೆಂದಾ.

The father retains him, and asks his son what he wishes.

312. ನೀರವಿಷವಿಕ್ಕಿದೆವು[1]; ಕಿಚ್ಚಿನ

Kauraraya asks his father, to let him use fire, to destroy the Pándavas

ಭಾರಣೆಯು ಯೇನಹುದೊ? ಪುಣ್ಯವ
ಹೋರಿಸುವ! ವ್ರೊವಗಿದರೆ, ಹೋಗಲಿ ನಮ್ಮ ಹಗೆ ಹರಿದೂ!
ವಾರಣೆಸಿತ್ತೈ, ವೈರಿಗಳ ವಿ
ಸ್ತಾರ ಮೊರೆಯಲಿ! ಜೀಯ! ಜೂಜಿನ
ಬಾರುಗುತ್ತಿದು! ನಿಮ್ಮ ಚಿತ್ತಕೆ ಬಹಡೆ, ಮಾಡುವೆವೊ!

1. ಭೀಮನು ಸಾಯಲೆಂದು ಕೌರವರು ಅವನನ್ನು ಇನ್ನು ಹುಡಗನಾಗಿರುವಾಗ್ಯೆ ಭಾಗೀರಥಿಯ ಒಂದು ಮಡುವಿನಲ್ಲಿ ಹಾಕಿದ್ದರು. ಆದರೆ ಅವನು ಈಸಿ ಬಂದು ಬದುಕಿದನು. ಆಮೇಲೆ ಉಣ್ಣುವ ಅನ್ನದಲ್ಲಿ ವಿಷ ಹಾಕಿದರು. ಅದರೂ ಅದು ಹತ್ತಲಿಲ್ಲ.

313. ಆವತೆರದಲಿ ವೈರಿಘಟಕುಲ

Dhrutaráshtra assents to those plans of his son.

ದಾವಗೆಯ ನಿಡಿಸುವಿರಿ! ನಿಮ್ಮೊಳೆ
ಗಾವು ಹೊರಗೇ? ಮಗನೆ! ಸೊಗಸೆನೆ ನಿಮ್ಮ ವೈಭವಕೇ?
ಸಾವದಾವಂಗದಲಿ ಮಿಗೆ ಸಂ
ಭಾವಿಸುವುದಾತೆರನ ನೀ ಹೇ
ಳಾವು ಸೊಗಸುವೆವೆಂದು ನುಡಿದನು ಮಗಗೆ ಧೃತರಾಷ್ಟ್ರ.

314. ಕರೆಸಿ ಪಾಂಡುಕುಮಾರಕರನೀ

Kauraraya requests his father, to give the Pándavas their share, and send them to Varanávati.

ಧರೆಯ ಹಸುಗೆಯ ಮಾಡಿ ಕೊಡು! ಕರಿ
ತುರಗಭಂಡಾರವನು ಸಹ ದಾಯಾದ ವಿಷಯದಲೀ
ಇರವನವರಿಗೆ ವಾರಣಾವತಿ
ಪುರದೊಳಗೆ ಪರುಟವಿಸಿ ಕೊಡು! ತಾ
ನುರುಹಿ ಸುಡುವೆನು ಬಳಿಕ ಲಾಕ್ಷಾಭವನರಚನೆಯಲೀ.

315\. ಅಹುದು, ಮಗನೇ! ಮಂತ್ರವಿದು, ಮತ

Dhrutaráshtra complies.

ವಹುದು ; ಸಮಗೀಭೀಷ್ಮವಿದುರರು
ಕುಹಕಿಗಳು ; ಕೃತಭಿಂನವಾದರೆ, ಭಾರವದು ; ಮೇಲೇ
ಗಹನಗತಿಯಲಿ ಗೂಢತರಸ
ನ್ನಿಹಿತಕರ್ಮಕಲಾಪದಲಿ ರಿಪು
ದಹನಸಿದ್ಧಿಯು ನಿನವುದೆಂದನು ಮಗಗೆ ಧೃತರಾಷ್ಟ್ರ.

316\. ಜನಕನನು ಬೀಳ್ಕೊಂಡು ಕೌರವ

Kauraraya sends his minister Purochana to Varanavati.

ಜನಪ ತನ್ನರಮನೆಯ ಸಚಿವರೊ
ಳನುಪಮಿತವಿಶ್ವಾಸಸೂಚಕನನು ಪುರೋಚನನಾ
ನೆನದ ಕೌರವರಾಜಕಾರ್ಯದ
ಘನವನರುಹಿ ಸಮಗ್ರಧನಸಾ
ಧನವ ಜೋಡಿಸಿ ಕೊಟ್ಟು ಕಳುಹಿದನವನ ಗುಪ್ತದಲೀ.

317\. ಆಪುರೋಚನನೆಂಬವನು ಬಲು

This Purochana prepares there a house of shell-lac for the Pándavas.

ಪಾಪಕರ್ಮನು; ಕುರುಪತಿಗೆ; ಬಳಿ
ಕಾಪುರಾಂತರದಿಂದ ಬಂದನು ವಾರಣಾವತಿಗೇ;
ಆಪುರದ ಜನವರಿಯದಂತಿರೆ,
ಕಾಪುರುಷನಳವಡಿಸಿದನು, ನಸು
ದೀಪ ತಾಗಿದೊಡೇಕರೂಪಹ ರಾಜಭವನವನೂ.

318\. ಅರಗಿನಲಿ ಭಿತ್ತಿಗಳ ನವಸ

Description of the house.

ಜ್ಜರಸಗುಡಮಿಶ್ರದಲಿ ನೆಲೆಯು
ಪ್ಪರಿಗೆಗಳನವರಲಿ ಕವಾಟಸ್ತಂಭವೇದಿಗಳಾ

ವಿರಚಿಸಿದ ನವಸೌಧಭದ್ರಾ
ಸ್ತರಣಸಂದ್ಯಾವರ್ತದಲಿ ಪರಿ
ಪರಿಯ ಬಿನ್ನಾಣದೊಳಗರಗಿನ ಮನೆಯ ಮಾಡಿಸಿದಾ.

319. ಹಿರಿಯಃಭವನದ ಸುತ್ತವಳಯದ
He marks the place where to set fire to the house. ಮುರುಹಿನಲಿ ಮನೆಮನೆಗಳಾಮಂ
ದಿರನಿಕಾಯಕೆ ಬಾಗಲೊಂದಾದ್ವಾರದೇಶದಲೀ
ಇರವು ತನ್ನದು ; ಬಾಗಿಲಿಕ್ಕಿದು
ಹೊರಗೆ ಮುದ್ರಿಸಿ ಕಿಚ್ಚು ಚುಚ್ಚುವ
ಪರುಠವಣೆಯಲಿ ಖಳಪುರೋಚನನಂದು ನಿರ್ಮಿಸಿದಾ

320. ಧರಣಿಪತಿ ! ಕೇಳತ್ತ ಹಸ್ತಿನ
Dhrutaráshtra is going to send the Pándavas to Váranávati. ಪುರದೊಳಗೆ ಕುಂತೀಕುಮಾರರ
ಕರೆಸಿ ಕಟ್ಟೇಕಾಂತದಲಿ ಧೃತರಾಷ್ಟ್ರಭೂಪಾಲಾ
ಬೆರಗುಬಿನ್ನಾಣದಲಿ ಮಕ್ಕಳ
ಮರುಳು ಮಾಡಿದನೇನ ಪೇಳುವೆ
ಸುರಿವನೆಯ ಬೀಡಾರದಲಿ ಬಿಡಿಸಲ್ಕೆ ಮನದಂದಾ[1]

1. ಮನಸು ಮಾಡಿದನು (ಮನತಂದನು)

321. ದುರುಳರೀ ಕೌರವರು, ನೀವಲೆ
His speech to them: ಗರುವರವದಿರು ಪಾಪಕರ್ಮರು ;
ಪರಮಪುಣ್ಯರು ನೀವು ತನ್ನವದಿರು ಕುಮಂತ್ರಿಗಳೂ
ಯರಳಿತೋಳನ ಸಾದುಸುಣ್ಣದ
ನೆರನಿಗದುಪಾವಗೆಯ ಸೇರುವೆ,
ಯರಸ ! ನಿನ್ನೊಡನೆನ್ನ ಕುನ್ನಿಗಳೆನುತ ಬಿಸುಸೂಯ್ದಾ

322. ತಂದೆಯಿಲ್ಲದ ನಿಮಗೆ ಹಿತರಾ
ರೆಂದು ಮರುಗುವೆನೆನ್ನ ಮಕ್ಕಳು
ಕೊಂದು ತಿಂದೆಯ ಕೂಳನುಂಬರೆ, ಹೇಸುವವರಲ್ಲಾ ;
ಇಂದು ನಿಮಗವರಿಂದಲುಪಹತಿ
ಬಂದುದಾದರೆ, ತನ್ನ ತಲೆಯಲಿ
ನಿಂದು ಹೊರವುದಕೀರ್ತಿಕಿಲ್ಬಿಷ ! ಮಗನೆ ! ಕೇಳೆಂದಾ.

323. ತಾತ ! ಕೆಡುವಿರಿ ನೀವು ; ತನಗ
ಖ್ಯಾತಿ ; ಕೌರವರೆಂಬವರು ದು
ರ್ನೀತಿ ಕಾರರು, ಭೀಷ್ಮವಿದುರರು ಭೀತರವದಿರಿಗೇ
ನೀತಿಸಮ್ಮತವಾಗಿ ಚಿತ್ತದೊ
ಳಾತ ಮತವನು ಹೇಳ ನಮ್ಮೊಳು
ಭೀತಿ ಬೇಡಂದರಸ ಹಿಡಿದನು ಧರ್ಮಜನ ಕರವಾ.

He takes the hand of Dharmaráya and tells him, not to be afraid.

1. ಆಂತ (ಅತ ಎಂಬ ಧಾತು.)

324. ಬೇರೆ ಮತವೆಮಗೇನು ! ಬೊಪ್ಪನ
ಜಾರಿ ನಿಮ್ಮದು ; ನೀವು ಬೊಪ್ಪನ
ನೂರು ಮಡಿ ಯೆಮಗೊಳ್ಳಿದರು ; ಬೇರಿನ್ನು ಹಿತರುಂಟೇ ?
ಬೇರಿರಿಸಿ ಕೂಡಿರಿಸಿ ನಿಮಗೆಯು
ತೋರಿದುದೆ ಮತ ! ನಿಮ್ಮ ನೇಮವ
ವಿಾರ ಬಲ್ಲೆನೆ ? ಯೆಂದು ಧರ್ಮಜ ನುಡಿದನರಸಂಗೇ.

Dharmaráya : "we are ready to do what seems proper to you."

325. ಕಂದ ! ಮನಮುನಿಸಿಲ್ಲಲೇ ! ನಾ
ವೆಂದ ನುಡಿಗೊಡಬಡುವಿರಾದೊಡೆ,
ಮುಂದೆ ಪುರವಿದೆ ವಾರಣಾವತವಲ್ಲಿಗರುವತ್ತೂ

Dhrutaráshtra, "Váranávati shall be your royal city."

ಸೆಂದ ನಾಡು, ಸಮಸ್ತವಸ್ತುಗ
ಳಿಂದ ಪೂರಿತಹಸ್ತಿನಾಪುರ
ದಿಂದ ಮಿಗಿಲದು ರಾಜಧಾನಿಸ್ಥಾನ ನಿಮಗೆಂದಾ.

326. ಹೈಹಸಾದ ! ಭವತ್ಕೃಪಾಸಂ
ನಾಹನೇ ಸಾಮ್ರಾಜ್ಯವಾವುದ
ನೂಹಿಸಿದೊಡಾಸ್ಥಿತಿಯೊಳಡಗಿಹೆನೆಂದು ವಿನಯದಲೀ
ಗಾಹುಗತಕವನರಿಯದಿವರು
ತ್ಸಾಹದಲಿ ಕೈಕೊಂಡು ಭೀಷ್ಮಗೆ
ಬೇಹವಿದುರದ್ರೋಣಮುಖ್ಯರಿಗರುಹಿದರು ಹದನಾ

Pándavas : "Very well ; your favour is enough."

1. ನಿಮ್ಮ (ಸಂಸ್ಕೃತ.

327. ಧಾರುಣೀಪತಿ ಛತ್ರಮಯಭಂ
ಡಾರಸಹಿತ ಗಜಾಶ್ವರಥವರಿ
ವಾರವನು ಮಾಡಿದನು ಹಸಿಗೆಯನೆರಡು ಭಾಗವನೂ,
ಕೌರವರಿಗೊಂದಿವರಿಗೊಂದೆನ
ಲೋರಣದಲಳವಡಿಸಿ ಬಹುವಿ
ಸ್ತಾರದಲಿ ಭೀಷ್ಮಾದ್ಯರಹುದೆನಲಿವರ ಮನ್ನಿಸಿದಾ.

Kauravas and Pándavas receive each party their equal shares.

328. ಇವರು ಶುಭದಿನ ಶುಭಮುಹೂರ್ತ
ಪ್ರವರದಲಿಪೊರವಂಟರಾಜನ
ನಿವಹ ಮರುಗಿತರಣ್ಯವೇ ಗತಿ ! ಯರಸ ! ನಿಮಗೆಂದೂ,
ಅವರ ಕಳುಹುತ ಬಂದರಾಕೌ
ರವರು ನಿಂದರು , ಭೀಷ್ಮಕಲಶೋ
ದ್ಭವರು ಸುತರಿಗೆ ಬುದ್ಧಿ ಹೇಳಿದು ಮರಳಿದರು ಪುರಕೇ.

The departure of the Pándavas from Hastinávati.

1. ಕಲಶದಲ್ಲಿ ಹುಟ್ಟಿದವನು= ದ್ರೋಣಾಚಾರ್ಯನು.

329. ವಿದುರನೊಡನೈತರುತ ಸಂಕೇ

Vidura tells them by signs, that the Kauravas intend to destroy them.

ತದಲಿ ಸೂಚಿಸಿ ಮರಳಿದನು ; ನೃಪ
ಸುದತಿ ವರಗಾಂಧಾರಿ[1] ಮೊದಲಾದಖಿಳರಾಣಿಯರೂ
ಮುದದ ಮುರುವಿನಲಿವರತೆಗದ
ಪ್ಪಿದರು, ಭೂಪತಿಸಹಿತ ಕಡು ಶೋ
ಕದಲಿ ಕಳುಹಿಸಿಕೊಂಡು ಬಂದರು ಹಸ್ತಿನಾಪುರಕೇ.

1. ಧೃತರಾಷ್ಟ್ರನ ಹೆಂಡತಿ.

330. ಅರಸ ! ಕೇಳ್ಳೈ ! ಹಸ್ತಿನಾಪುರ

The Pándavas had been 16 years in the forest and then 13 years in Hastinávati.

ವರವ ಹೊರವಡುವಾಮುಹೂರ್ತಕೆ
ವರುಷವಿಪ್ಪತ್ತೊಂಭತಾದದು ಧರ್ಮನಂದನಗೇ !
ವರುಷಹದಿಮೂರರಲಿ ಹಸ್ತಿನ
ಪುರದೊಳಿದ್ದರು ಹಿಂದೆ ಷೋಡಶ
ವರುಷ ವನದೊಳಗಿಂತು ಲೆಕ್ಕವ ನೋಡಿಕೋ ! ಯೆಂದಾ.

331. ಬಂದರೈವರು ಕುಂತಿಸಹಿತಾ

Arrival at Varanavati and good reception.

ನಂದದಲಿ ವರವಾರಣಾವತ
ಕಂದು ಪುರಜನಕೂಡಿಕನ್ನಡಿ ಕಲಶವಿಭವದಲೀ
ಬಂದು ತಾವಿದಿರಾಗಿ ಕುಂತೀ
ನಂದನರ ಹೊಗಿಸಿದರು, ಪಟ್ಟಣ
ವಂದು ಮೆರದುದು ಕೂಡೆ ಗುಡಿತೋರಣದ ರಚನೆಯಲೀ.

332. ಬೀಡು ಕಾಣಿಕೆ ಯಿತ್ತು ಕಂಡುದು,

Purochana shows them into the shell-lac house. Their remarks:

ನಾಡ ಕಾಣಿಸಿದನು ಪುರೋಚನ,
ಕೂಡೆ ಸಂದನು ಹಾಸುಹೊಕ್ಕಾಗಿವರ ಮನೆವರಿದೂ !

ನೋಡಿದನು ಯಮನಂದನನು ಮನೆ
ಮಾಡಿದಂಪವನರಗಿನರಮನೆ
ಗೊಡುರಿವ ಬೇಳುವೆಯು ನೆನವರೆ ಬೊಪ್ಪನವರೆಂದಾ.

333. ಸಮಿಧೆಗಳು ಸಾವ್ರಾಜ್ಯವರಯ್ಯನ
ರಮಣಿ ಯಾಹುತಿ, ಭೀಮನೇ ಪಶು,
ಕುಮತಿ ಕಟ್ಟಿಸಿದರಗಿನರಮನೆ ಯಗ್ನಿಕುಂಡವಿದೂ
ಎಮಗೆ ಸಂಶಯವಿಲ್ಲ ರಾಜೋ
ತ್ತಮನೊ ! ದುರಿಯೋಧನನೊ ! ದೀಕ್ಷಾ
ಕ್ರಮವ ಧರಿಸಿವನಾತನೆಂದನು ನಗುತ ಯಮಸೂನೂ

"This house is the place, where we are to be sacrificed."

334. ಜನಪ ! ಕೇಳೈ ! ವಿದುರನಟ್ಟಿದ
ಕನಕ ಬಂದನು, ಯಿವರ ಸಜ್ಜೆಯ
ಮನೆಯಲತಿಗುಪ್ತದಲಿ ನೆಲದೊಳು ಸವಸಿದನು ಪಥವಾ
ಅನುದಿನದೊಳಾಬಾಹಿರನು ! ಕಿ
ಚ್ಚಿನಲಿ ಚುಚ್ಚುವ ಸಂದುಗಟ್ಟಿನು
ನೆನವುತಿರ್ದನು ಖಳಪುರೋಚನನೊಡೆಯನಾಜ್ಞೆಯಲೀ

Kanaka, sent by Vidura, secretly makes a hole in their dormitory.

335. ಒಂದು ದಿನ ಹಬ್ಬದಲಿ ಭೂಸುರ
ವೃಂದವುಂಡುದು ; ಪಂಚಪುತ್ರಿಕೆ
ಯೊಂದು ಬೇಡತಿ ಯೊಬ್ಬಳಿದ್ದಳು ಸುತರು ಸಹಿತಲ್ಲೀ ;
ಅಂದಿನಿರುಳು ಪುರೋಚನನು ತಾ
ನೊಂದ ನೆನದರೆ, ದೈವಗತಿ ಬೇ
ರೊಂದನೆನದುದು ; ಕೇಳು ! ಜನಮೇಜಯಮಹೀಪಾಲಾ !

The Pándavas one day entertain Brahmans; and during the night Purochana intends to set fire to their house.

336. ಅವನು ನಿದ್ರೆಯೊಳಿರಿಯದಿರಲಾ
ಭವನ ಮುಖದಲಿ ಕಿಚ್ಚನೊಟ್ಟಿಸಿ
ಪವನಸುತಸಹಿತಿವರು ಹಾಯ್ದರು ಬಿಲದ ಮಾರ್ಗದಲೀ ;
ಅವನು ಬೆಂದನು ಮುನ್ನ, ಬಳಿಕಾ
ಭವನಪಙ್ಕ್ತಿಗಳುರಿದು ಕರಗಿದ
ವವನಿಯಲಿ ಹೊಸಲಾಯ್ತು, ಪುರಜನವೈದೆ ಬೆರಗಾಗೇ.

But, when he was asleep, they set fire to their house, and left it through the hole.

337. ಅಕಟ ! ಪಾಂಡವರಳಿದರೇ ಕೌ
ಳಿಕದಿ ? ಕೌರವರಿರಿದರೇ ? ಮತಿ
ವಿಕಳರವದಿರು ಬೆಂದು ಹೋದರು ಧರ್ಮದಲಿ ನಡೆದೂ ;
ಪ್ರಕಟಪಾಪರಿಗಹುದು ಸಾಮ್ರಾ
ಜ್ಯಕವು, ಧರ್ಮಾತ್ಮಕರಿಗೀಪರಿ
ವಿಕಟತೆಯು ಸುರರಾಜ್ಯವೆಂದುದು ಪೌರಜನ ಮರುಗೀ.

The lamentations of the people of Varanavati,

338. ಮುಂನ ಬೆಂದನಲಾ ಪುರೋಚನ
ಕುಂನಿ ! ಯಿದು ಲೇಸಾಯ್ತು ! ದಹನಾ
ಪಂನರಾದರೆ ಯಿವ್ವೆಯರು ಸಹಿತಕಟ ! ಪಾಂಡವರೂ, !
ಇಂನು ಸುಡು ! ಸುಡು ಧರ್ಮಸಂಪ್ರತಿ
ಪಂನಗುಣದಾಚಾರಗಳ ಸಂ
ಪಂನತೆಯನೆಂದೊರಲಿ ಮರುಗಿತು ನಿಖಿಳಪರಿವಾರಾ.

and of their followers.

339. ಒಗೆದುದೀಬೀಳೆಂಬ ಹಸ್ತಿನ
ನಗರದಲಿ ; ತತ್ಪೌರಜನ ಮನ
ಮ್ರುಗಿದು ಬಿದ್ದುದು ಶೋಕಮಯಸಾಗರದ ಮಧ್ಯದಲೀ ;

and of the people of Hastinávati ; grief of Vidura ; secret joy of the Kauravas.

ಹೊಗೆದುದಾನನ ವಿದುರ ಭೀಷ್ಮಾ
ದಿಗಳಿಗಾಧೃತರಾಷ್ಟ್ರಸುತರಿಗೆ
ದುಗುಡದಡ್ಡಿಯ ಹರುಷಸಿರಿ ಹೊಕ್ಕಳು ಮುಖಾಂಬುಜವಾ

On the banks of the Ganges the Kauravas perform the funeral obsequies.

340. ಬಂದುದಾಸುರನದಿಗೆ ಕೌರವ
ವೃಂದಪರಿಜನವೈದೆ ಶೋಕಿಸಿ
ಯಿಂದುಗಂಗಾತೀರದಲಿ ಬಳಿಕೂರ್ಧ್ವ[1]ದೇಹಿಕವಾ
ಸಂದ ವಿಧಿಯಲಿ ಮಾಡಿ ಸದವಾ
ನಂದ ಮಿಗಲವರಿರ್ದರಿತ್ತಲು
ಯಿಂದುಕುಲಸಂಭವರವಿಧಿಯನು ಮತ್ತೆ ಕೇಳೆಂದಾ.

1. ಸತ್ತವರಿಗೆ ಮಾಡತಕ್ಕ ಸಂಸ್ಕಾರ.

The Pándavas wandering about,

341. ಬಿಲಮುಖದೊಳುತ್ತರಿಸಿ ಬಲುಗ
ತ್ತಲೆಯೊಳಡವಿಯ ಮಾರ್ಗದಲಿ ಕಲು
ಮುಳುಗಳೊಳು ಕಾಪಥಕೆ ಕೋಮಲಚರಣಗಳ ಕೊಡುತಾ
ತೊಳಲಿದರು ; ಬೆಳಗಾಗೆ, ಹಳ್ಳಿಯ
ಬಳಿಯ ಹೊದ್ದದೆ, ಹಾಯ್ದು ಹೊಕ್ಕರು
ಹಳುವವನು ; ಬಲಗಡೆಗೆ, ನಡೆದರು ಹಲವು ಯೋಜನವಾ.

[ac]ross the Ganges, [e]nter a great [f]orest,

342. ದಾಟಿದರು ಗಂಗೆಯನು ; ರಾಯನ
ಮಾಟದಲಿ ಹಲುಮುರಿದುದೇ ನಂ
ಮಾಟಕಿದು ಹಿರಿದಲ್ಲಲಾ ! ಯೆನುತೈವರಡಿಗಡಿಗೇ
ಕೋಟಲೆಯ ಕೊಲ್ಲಣಿಗೆಯಲಿ ಮೈ
ನೋಟಕಲಸದೆ ಬಿಸಿಲಲಿವರು ಮ
ಹಾಟವಿಯ ಮಧ್ಯವನು ಹೊಕ್ಕರು ; ನೃಪತಿ ! ಕೇಳೆಂದಾ.

343. ಕೇಳು ! ಜನಮೇಜಯಮಹೀಪತಿ !
are hospitably received by a saint, and advised by Vyasa, who is there,
ಶಾಲಿಹೋತ್ರಾಶ್ರಮವನನಿಬರು[1]
ಬೀಳುಕೊಂಡರು ! ಮತ್ತೆ ಕಂಡರು ಬಾದರಾಯಣನಾ !
ಹೇಳಿದನು ನಿಮಗೇಕಚಕ್ರವಿ
ಶಾಲಪುರದೊಳಗಾರುತಿಂಗಳು
ಕಾಲ ಸವೆಯಲಿ ! ಬಳಿಕ ಬಳಸುವಿರುತ್ತರೋತ್ತರವಾ.

1. ಈ ಋಷಿ ಅವರನ್ನು ತನ್ನ ಆಶ್ರಮಕ್ಕೆ ಕರಕೊಂಡು ಸತ್ಕರಿಸಿದನು.

344. ಎಂದು ಮುನಿ ತಿರುಗಿದನು ; ಕುಂತೀ
to go to Yékachakra. In the disguise of mendicant brahmans they go there,
ನಂದನರು ಸುಕ್ಷಾತ್ರತೇಜೋ
ವೃಂದವನು ಮುಸುಕಿದರು ವಿಮಲಬ್ರಹ್ಮರಶ್ಮಿಯಲೀ
ಅಂದವೇರಿದ ಗಡ್ಡ ದರ್ಭೆಗ
ಳಿಂದ, ನೆರಿಯುಡಿಗೆಗಳ ನಾಟಕ
ದಿಂದ, ಮಟ್ಟಿಯ ಘಟ್ಟು ನೊಸಲಲಿ ದೇಶಿಪರಿ ಮೆರೆಯೇ,

345. ಅವನಿಪತಿ ! ಕೇಳೇಕಚಕ್ರವ
put up in the house of a brahman, and are living upon alms.
ನಿವರು ಹೊಕ್ಕರು ! ವಿಪ್ರನೊಬ್ಬನ
ಭವನದಲಿ ಮಾಡಿದರು ಬೀಡಾರವನು ವಿನಯದಲೀ
ಇವರು ಯಾಚಕವಿಷಯದಾತಿ
ಥ್ಯವನು ಕೈಕೊಂಡಲ್ಲಿ ಕತಿಪಯ
ದಿವಸವನು ನೂಕಿದರು ಭಿಕ್ಷಾವಿಹಿತವೃತ್ತಿಯಲೀ.

346. ತಂದ ಭಿಕ್ಷಾಶನವನೈವರು
Their mother divides the food.
ನಂದನರು ತಾಯಿಗೆ ನಿವೇದಿಸ
ಲಿಂದುಮುಖಿ ಭಾಗದ್ವಯವ ಸಾನಂದದಲಿ ಮಾಡೀ

ಒಂದು ಭಾಗ ವೃಕೋದರಂಗುಳಿ
ದೊಂದು ಭಾಗವ ತಾನು ನಾಲ್ವರು
ನಂದನರು ವಿನಿಯೋಗಿಸುವರವನೀಶ ! ಕೇಳೆಂದಾ.

347. ಸಿರಿಯು ಪೋಳ್ವರೆ, ಹಸ್ತಿನಾಪುರ
ದರಸುಗಳ ಸಂತಾನಶೌರ್ಯದ
ಪಿರಿಯ ದೋಳ್ವರೆ, ಚಂದ್ರಸೂರ್ಯರ ತೇಜಕುರೆ ಮಿಗುಲೂ
ತಿರಿದ ಕೂಳನು ತಾಯಿ ಪಸುಗೆಯು
ಲೆರೆಡು ಭಾಗವ ಮಾಡಿ ಮಕ್ಕಳ
ಹೊರದಳಿನ್ನುಳಿದವರ ಪಾಡೇನರಸ ! ಕೇಳೆಂದಾ.

The royal house of Hastinapati surpassed in wealth and splendour Indra and the sun, yet these were beggars.

348. ಇರಲಿರಲು ಮಾಸಾಂತರಗಳಾ
ನೆರೆಮನೆಯು ಶೋಕಾರ್ತರವದ
ಬ್ಬರವ ಕೇಳಿದು ಕುಂತಿ ಸಾಯಂಕಾಲಸಮಯದಲೀ
ಭರದೊಳೈತಂದಕಟ ! ಭೂಸುರ
ವರ ! ವಿರೋಧವಿದೇನು ದುಃಖೋ
ತ್ಕರುಷವಾಕಸ್ಮಿಕವಿದೇನು ಕುಂತಿ ವಿನಯದಲೀ.

Kunti hears a loud cry in her neighbour's house;

349. ನಾಳೆ ವೈವಾಹೋತ್ಸವದ ದಿ
ಕ್ಕಾಳವಿದು ಮೊದಲೀವಸಂತದ
ಬಾಲಕಿಯರೋಕುಳಿಯ ಮಳೆಯಲಿ ಸಿಡಿಲು ಸುಳದುದೆನೇ,
ಹೇಳಿರೇ ! ನಿಮಗಾದವಸ್ಥೆಯ
ಕೇಳಲಾಗದೆ ! ಯೆನಲು ದ್ವಿಜನಿದ
ಕೇಳಿ ಫಲವೇನವ್ವ ! ಯೆಂದನು ಸುಯು ಮುಗುಡದಲೀ.

On enquiry she learns from the brahman,

350. ಹೇಳ ಬೇಹುದು ತನ್ನನಿಷ್ಟವ
ನಾಳಗೊಳ್ವದ ಸುಜನನಿಕರಕೆ ;
ಕೇಳ ಬೇಹುದು ದೀನರೆಹ ವಿಪ್ರೇಂದ್ರರುಪಹತಿಯಾ ;
ಕೇಳು ದೀನನೆ ! ವಿಪ್ರ ! ತಾನಿದ
ಕೇಳಿ ದುಃಖಿತೆ ಯಾಗಲಾಗದೆ ?
ಹೇಳ್ವದುಃಖಂಪಂಚಭಿಸ್ಸಹವೆನ್ನದೇ ವಚನಾ.

1. ಐವರಿಂದಾದರೂ ದುಃಖವಿಲ್ಲ. ಅಳುವವರು ನಾಲ್ವರು ಐದನೆಯುವನ ಮುಂದೆ ಹೇಳಿದರೂ ದುಃಖ ಹೆಚ್ಚಾಗುವದಿಲ್ಲ

that a bad giant is devouring a man, two buffaloes and a quantity of rice daily;

351. ತಾಯೆ ! ಕೇಳೀವಿಪ್ರಪುರದೊಳ್
ಗಾಯವುಂಟೆನಗೆಂದು ರಕ್ಕಸ
ನಾಯಿ ನೆಲಸಿಹನೂರ ಹೊರಗಣ ಶೈಲಶಿಖರದಲೀ ;
ಆಯಿದೊಬ್ಬನ ಮನೆಮನೆಗೆ ಮೀ
ಲಾಯಿ ಮಹಿಷದ್ವಯಸಹಿತ ನಿ
ರ್ದಾಯದಲಿ ಹನ್ನೆರಡು ಕಂಡುಗದಕ್ಕಿಯೋಗರವಾ,

that it is now his turn, to supply the giant,

352. ಇನಿತವನು ಮನೆಮನೆಗೆ ಬಾರಿಯು
ದಿನಕೆ ತೆತ್ತಹೆ, ತುಪ್ಪನಿಲ್ಲದ
ದಿನಕೆ ನುಂಗುವನೂರನೀಪರಿ ಹಲವು ಕಾಲದಲೀ ;
ಎನಗೆ ಬಂದದು ತಾಯೆ ! ನಾಳಿನ
ದಿನದ ಬಾರಿ ! ಯಿದಕ್ಕೆ ತನ್ನಯ
ತನುಜ ತಾನುಳಿದಂತೆ, ಮಾಸಿಸರಿಲ್ಲ ತನಗೆಂದಾ

and that he intends to offer himself, to save his son.

353. ಮಗನನೀವೆನೆ, ಪಾರಲೌಕಿಕ[1]
ವಗಡಹುದಪಖ್ಯಾತಿ ತನ್ನನು
ತಗಹುದೈಹಿಕ[2]ದಲ್ಲಿ ! ಬಳಿಕೀಸಂತತಿಚ್ಛೇದಾ

1. ಪರಕ್ಕೆ ಸಂಬಂಧ 2. ಇಹಕ್ಕೆ ಸಂಬಂಧ.

ಬಗೆಯದೆನ್ನೊಡಲಸುರಘಾತಿಗೆ
ಮಿಗೆ ವಿಭಾಡಿಸಿ ಕೊಡುವೆನೆಂದೆನೆ,
ನಗುತ ಕುಂತೀದೇವಿ ನುಡಿದಳು ವಿಪ್ರ ! ಕೇಳೆಂದೂ.

354. ಐಸಲೇ ! ನಿಮಗಾದ ಘಸಣಿ ಯಿ
ದೇಸರಾಪತ್ತೆಂಜ ಬೇಡ ! ಮ
ಹಾಸುರನ ಬಾಣಸದ ಬೀಯಕೆ ರಪಣವುಂಟೆಮಗೇ !
ಯೇಸು ಕಂಡುಗದಕ್ಕಿಯೋಗರ
ವೈಸ ನೀನಳವಡಿಸು ಮೇಲುಂ
ಟೇಸು ಸಾಧನವನಿತುವನು ತೆಗೆಸೆಂದಳಾಕುಂತೀ.

Kunti replies: "make every thing ready,

355. ತಿರುಗಿ ನಿಮ್ಮೂರೊಳಗೆ ಕೂಳನು
ತಿರಿದು ಸಲಹುವೆನೆನ್ನ ಮಕ್ಕಳ !
ಧರೆಯನಾಳುವ ಸತ್ವಸಹಿಸಿಗಳಿದ್ದು ಫಲವೇನೊ !
ಹೊರೆಯಲರಿಯೆನು, ದುರುಳನೆರಡೆಂ
ಟರಿಯನವರೊಳಗೊಬ್ಬನುದರಕೆ
ನೆರಹಲಾರೆನು ಕೂಳನೆಂದಳು ಕುಂತಿ ನಸುನಗುತಾ.

I shall send one of my sons, whom I cannot support."

356. ಸಾಕಲಾರೆನು ಮಗನನಾತನ
ನೂಕುವೆನು ನಿಂಮಸುರನೂಟಕೆ !
ಸಾಕು ತನಗುಳಿದವರೆನಲ್ದ್ವಿಜನದಕೆ ಬೆರಗಾಗೀ
ಸಾಕಲಾರದೆ ಮಗನಸುರಿಯಲಿ
ನೂಕಿದವರುಂಟೇ ! ಮಹಾಸತಿ !
ಯಾಕೆವಾಳತನಕ್ಕೆ ನಮಿಸಿದೆನೆನುತ ಕೈಮುಗಿದಾ.

The brahman hesitates.

357. ಮರುಳಲಾ ! ಬ್ರಾಹ್ಮಣ ! ವೃಥಾವಿ
ಸ್ತರಣವಾಕ್ಯವೆ ತನ್ನ ನುಡಿ ! ಸಂ
ವರಿಸು ! ಬಂಡಿಯ ! ನಡೆಸು ! ಭಕ್ಷ್ಯವಸೂಪದಂಶಕವಾ !
ತರಿಸು ! ತುಪ್ಪದ ಕೊಡನನೊದವಿಸು !
ಹರವಿಗಳ ಪಾಲ್ಮೊಸರನೆನೆ, ಭೂ
ಸುರನು ಕುಂತಿಗೆ ಕೈಯ ಮುಗಿದನು ! ತಾಯೆ ! ಬೇಡೆನುತಾ.

But Kunti encourages him, to follow her advice.

358. ಎರವು ಮುಯಿಮುಟ್ಟುಂಟು ವಸ್ತ್ರಾ
ತ್ಕರದೊಳಗೆ ; ಭಾವಿಸಲು, ಮಕ್ಕಳ
ನೆರವ ಕೊಟ್ಟಿವರುಂಟೆ ? ವಾರಿಯ ನಾಲಿಗೆಯ ಸವಿಗೇ ?
ನೆರವಿ ನಗದೇ ನಮ್ಮನಿಹಪರ
ವೆರಡರಲಿ ಕೇಡಹುದು ಕಷ್ಟವು ;
ಗರುವೆ ! ಯಿಹುದಾ ! ತಾಯಿ ! ನೀಧಿಟವನುಜೆಯಲ್ಲೆಂದಾ.

The brahman's objections.

359. ಬಲುಹಿನಲಿ ಭೂಸುರನ ಚಿತ್ತವ
ತಿಳುಹಿ ಬಂದಳು ಮನೆಗೆ ; ಭೀಮನ
ಕೆಲಕೆ ಕರೆದಳು ; ಹೇಳಿದಳು ಪೇರಾಳದಾತಣವಾ ;
ಉಲಿದು ಮುದದಲಿ ಭೀಮ ಬಾಹ
ಪ್ಫಳಿಸಿದನು ; ಯಮನಂದನಾದಿಗ
ಳಳಲಿ ನುಡಿದರು ದೈತ್ಯಜಯಸಂಶಯದ ಭೇದದಲೀ.

He informs Bhíma of the great meal, his joy ; doubts of his brothers.

360. ಮರುಳುಗಳು ನೀವೆಂದವರ ಚ
ಪ್ಪರಿಸಿದನು ಕಲಿಭೀಮನಾನಡು
ವಿರುಳು ತೊಡಗಿತು ವಿಪ್ರಭವನದ ಪಾಕಮಯುರಭಸಾ ;

He reproaches them

ಹೊರದಳೆಂದನು ತಾಯಿ ಕುಂತಿಯು
ಹರಸುವೆನು ಪಾರಣೆಯ ಹೊತ್ತಿನೊ
ಳರಸು ! ನಾಳಿನೊಳಾನೆನುತ ಹಿಗ್ಗಿದನು ಕಲಿಭೀಮಾ.

361. ಪರಿಪರಿಯ ಬಹುಭಕ್ಷ್ಯಪಾಕದ
ಪರಿಮಳದ ಶಾಕಾದಿಗಳ ಪ್ರೊ
ಗ್ಗರಣೆಗಳ ಸಾರಭಕೆ ತಿಳಿದುದು ನಿದ್ರೆಯವನಜನಾ ;
ತರಣಿ ಸುಳಿದನು ಪೂರ್ವಶೈಲದ
ಶಿರದ ಬಳಿಯಲಿ ; ಭೀಮ ಕುಂತಿಯ
ಕರೆದು ಕಳುಹಿದನಾಮಹೀಸುರಗೃಹಕೆ ವಹಿಲದಲಿ.

The meal for the giant is prepared: Bhíma awakes and sends his mother to the brahman's house.

362. ಯೇನಿ ! ಬಂದಿರಿ ! ತಾಯಿ ! ಚಾಪಳ
ವೇನೆನಲು, ತೆಗೆ ! ಹೂಡು ಬಂಡಿಯ
ನೇನು ಜಂಜಡ ಬೇಡ ! ಭಕ್ಷ್ಯವ ಹಿಡಿಸು ತುನಿಕಿಲಲಿ !
ಭಾನು ವುದಿಸಿದನೆನಲು ಘನಸಂ
ಮಾನದಲಿ ಸಾಧನ ಸಮಗ್ರವ
ಸೂನುಸಹಿತಡಕಿದನು ಭಾರಿಯ ಬಂಡಿ ಜವ ಜಡಿಯೇ,

The food is put on a cart.

363. ನಳನಳಿಪ ಬಹುವಿಧದ ಭಕ್ಷ್ಯಾ
ವಳಿಯ ಹೆಡಿಗೆಗಳೋರಣಿಸಿ ಮುಂ
ಡಳಿಸಿ ಕೂಡಿದ ಹಾಲುತುಪ್ಪದ ಹಲವು ಹರವಿಗಳಾ
ಬಳಸಿ ಮುಚ್ಚಿದ ವಿವಿಧ ಶಾಕಾ
ವಳಿಯ ಬೋನವ ಬಿಗಿದ ಕುನಿಕಿಲ
ಕಳವೆಯಕ್ಕಿಯ ಕೂಳ ರಾಶಿಯ ಬಂಡಿ ಜೋಡಿಸಿತೂ

Description of the cart laden with food.

364. ಮರಳಿ ಬಂದಳು ಕುಂತಿ ! ಭೀಮನ
ಕರೆದಳೇಳೈ ಪಾರಣೆಗೆ ! ಕಾ
ತರಿಸದಿರು । ಖಳನೊಡನೆ ಸದೆವುದು ಸತ್ವದಸುವರಿದೂ !
ಬರವ ಬರಿದೇ ಬೀಯ ಮಾಡದಿ
ರುರವಣಿಸಿ[illegible] । ಸಂ
ಹರಿಸು ದೈತ್ಯನನೆಂದು ತಾಯ್ಹರಸಿದಳು ನಂದನನಾ.

His mother exhorts him, and gives her blessing.

365. ಬೆರಳ ದರ್ಭೆಯ ಹರಿದು ಧೌತಾಂ
ಬರವನುಟ್ಟನು ಬಿಗಿದು, ಕುಂತಿಯ
ಚರಣರಜವನು ಕೊಂಡು ಧರ್ಮಜನಂಘ್ರಿಗಭಿನಮಿಸೀ
ಹರುಷ ಮಿಗೆ ಹರಿತಂದು ಬಂಡಿಯು
ಶಿರದ ಹತ್ತಿಗೆಯನಡರಿದನು, ಬಲು
ಹುರಿಯ ಹಗ್ಗವ ಹಿಡಿದು ಜಡಿದನು ಹೂಡಿದೆತ್ತುಗಳಾ.

He ascends the cart and drives the bullocks.

366. ಪುರದೊಳಗೆ ಭಿಕ್ಷಾಂನದಿಂದೈ
ವರು ಮಹಾ ಪಂಡಿತರು, ನಿರ್ಧನ
ಪುರುಷರವರೊಳಗೊಬ್ಬನನು ನಮ್ಮೂರ ದಾನವನಾ
ಪರಿವಿಡಿಯ ಭೋಜನಕೆ ತದ್ಭೂ
ಸುರನ ತಾಯ್ಕೊಟ್ಟಳು, ಜಡೀನ
ಚ್ಚರಿ ! ಯೆನುತ ಪವನಜನ ಮುತ್ತಿತು ನೋಟಕರ ನೆರವೀ,

Remarks of the crowd of spectators.

367. ಪಾರಜನವೈತರಲು, ಬಂಡಿಯು
ನೂರ ಹೊರವಂಡಿಸಿದನೆಲ್ಲರು
ದೂರದಲ್ಲಿರಿ ! ಸಾವವನೆ ತಾ ? ಸಾಕು ! ದೈತ್ಯನಲೀ,

He leaves the village, calls to the people to remain behind, and drives with great speed to the

place of the giant.

ಸಾರಿ ನೀವೆಂದೆನುತ ಹೂಡಿದ
ಹೋರಿಗಳ ಹೊಯ್ದುಬ್ಬರಿಸಿ ರಣ
ಧೀರಮಾರುತಿ ಬಿಕ್ಕ ಹರಿಸಿದನಸುರನಿದ್ದೆಡೆಗೇ,

1. ಯುದ್ಧದಲ್ಲಿ ವೀರನಾದಂಥಾ ಮಾರುತನ ಮಗನು=ಭೀಮ.

368. ಎಡೆಯಲೇ ಭಕ್ಷ್ಯಾದಿಗಳ ಬರಿ

On the road half of the meal is consumed by him.

ಜಡಿಗ ಯುಳಿದವು; ಕೂಳೊಳರ್ಧವ
ಕೊಡಿನು ಸುರಿದನು ಹಾಲು ತುಪ್ಪದ ಹರವಿಯೋಜೆಯಲೀ
ಉಂಡನು ಪಕ್ವತೆಸೀರನೊಯ್ಯನೆ
ನಡೆಸಿ ತಂದನು, ಕಂಡು ದನುಜನ
ನುಡಿದನೆಲವೋ ಕುನ್ನಿ ! ಕೊಳದೆ ! ತಿನ್ನು ! ಬಾರೆನುತಾ.

369. ಕಂಡು ಖಳ ಬೆರಗಾದನಿವನು

The giant wonders at his violence.

ದ್ದಂಡತನವಚ್ಚರಿಯುಲಾ ! ಹರಿ
ಖಂಡಪರಶುಗಳಳುಕುವರು, ತನ್ನೊಡನೆ ತೊಡಕುವರೇ ?
ಬಂಡಿ ತುಂಬಿದ ಕೂಳನಿವನಂ
ದುಂಡು ಕದುಕಲಿ ! ವೂರ ಪಾರ್ವರ
ಹಿಂಡುವೆನು ಯಿವ ಸಹಿತೆನುತ ಹಲು ಮೊರದನಮರಾರೀ

1. ದೇವತೆಗಳಿಗೆ ವೈರಿ=ರಾಕ್ಷಸ.

370. ಮತ್ತೆ ಶೇಷಾನ್ನದಲಿ ತೋರುತ

Bhíma makes sport of the giant, whose hunger is increasing.

ತುತ್ತುಗಳ ತೂಗುತ್ತ ಮಾರುತಿ
ಮೆತ್ತಿಕೊಂಡನು ಬಾಯೊಳವನನು ಬೆರಳಲೇಡಿಸುತಾ
ಇತ್ತಲೆಂನಯ ಹಸಿವು ಹೆಚ್ಚಿದೆ
ತುತ್ತು ಹೊಗದೊಳಗಿವನ ತೊಡಗಲ
ಚಿತ್ತಲಕಟಾ ! ವಿಧಿ ! ಯೆನುತ ಮುರಿದೆದ್ದನಮರಾರೀ.

371. ಎರಡು ಕೈಯ್ಯನು ಬಲಿದು ಮುಷ್ಟಿಯೊ

The attack of the giant. Bhíma asks for a little time,

ಳೆರಗಿದನು ಖಳ ಜಿಂಸನೀನೆಂ
ದರಿಯುನಿತ್ತಲು ಭೀಮ ಬಲುದುತ್ತುಗಳ ತೋಟಿಯುಲೀ
ಮರನ ಮುರಿದೆರಗಿದರೆ, ಪ್ರನರಪಿ
ಮರಿದು ನೋಡಿದು ಬಜಿಸು, ನಿಲ್ಲೆನು
ತರೆಗೆಲಸ ಪೂರೈಸಲೆಂದನು ನಗುತ ಕಲಿಭೀಮಾ.

372. ಅರಸ ! ಕೇಳ್ಳೈ ! ನಿಂಮ ಭೀಮನ

devours the re-maining food, and rises to at-tack the giant,

ಪರಿಯುನಾಪರಿ ಬಂಡಿ ತುಂಬಿದ
ಸರಕನೆಲ್ಲವ ಸಂತಪಿಟ್ಟನು ತನ್ನ ಜಠರದಲೀ !
ವರಸಮಾಧಾನದಲಿ ಕೈದೊಳ
ದುರಸಣಿಪ ತೇಗಿನ ತರಂಗದ
ಪರಬಲಾಂತಕ[1]ನೆದ್ದು ನಿಂದನು ಸಿಂಹನಾದದಲೀ.

1. ವೈರಿಗಳ ಬಲ ನಾಶ ಮಾಡುವವನು=ಭೀಮ.

373. ಉಂಡೆನ್ಯೈ ! ಸಮಚಿತ್ತದಲಿ ! ನೀ

Bhíma's pride increases.

ವ್ಕೊಂಡಿರ್ಕೈ ಘಾಯುಗಳನೆಡೆಯುಲಿ
ಹಿಂಡುವಿರಲ್ಕೈ ನಾವು ಸಹಿತೀಯೂರ ಹಾರವರಾ !
ಉಂಡೆನ್ಯೈ ! ಹಲಕಾಲಕಿಂದಿನ
ಲುಂಡಮೂಟ ! ಕಣಾ ! ನಿಧಾನವು !
ಖಂಡಪರುಶುವಿನಾಣೆನುತ ಮದವೇರಿದನು ಭೀಮಾ.

374. ಖಾತಿಗೊಳ್ಳದ ಮುನ್ನ, ಪವನಜ
ನೋತುಕೊಟ್ಟನು ತನ್ನ ಹೊಯ್ಗಳೆ
ನಾತನೀತನು ಮುಳಿದ ಬಳಿಕಿವನೇನಮಾಡುವನೋ !

They fight. ಈತನೆದ್ದನು ಗಜರಿ ಬೞಿಕಿನೊ
ಘಾತನಿದಿರಾದನು ಸುರಾರಿಯು
ವಾತಜನ ಹೋರಟೆಗೆ ಕೊರಳೞುಕಿಜಿದು ವಾಸುಕಿಯಸಾ.

1. ಷಷ್ಠಿ ಚತುರ್ಥಿಯರ್ಥವಾಗಿ ಬಂದದೆ.

375. ಹಿಡಿವರೊಬ್ಬರನೊಬ್ಬರುರದಲಿ
ಹೊಡೆದು ಹಿಂಗಿದರುಲಿದು ಪೆಮ್ಮರ
ನುಡಿಯೆ, ಹೊಯ್ದಾಡಿದರು, ತಿವಿದರು ತೋಳ್ಬಲುಹಿನಲೀ !
ಕೊಡಹಿದನು ಕಲಿಭೀಮನವನು
ಗ್ಗಡದ ಸತ್ವದಿ ಯುಂಡ ಕೂೞಿನ
ಕಡುಹ ತೋರೆಂದೊರಲಿ ತುಡುಕಿದನನಿಲನಂದನನಾ.

376. ಸಿಕ್ಕಿದನು ಕಲಿಭೀಮನೆಸೆ ಕೈ
The giant is killed. ಯಿಕ್ಕಿ ಕೊಟ್ಟನು ಮೈಯ್ಯನಸುರನ
ಹೊಕ್ಕು ತಿವಿದನು ತಿರುಗಿ ಬದಿಯೆಲು ನುಗ್ಗುನುಸಿಯಾಗೇ !
ಬಿಕ್ಕುಳಿಯ ತಾೞಗೆಯ[1] ಮುಳುಗಿನೊ
ಳೊಕ್ಕ ರುಧಿರದ ಧಾರೆ[2], ಬಿಗಿದುರೆ
ಜೊಕ್ಕರಿಸಲಸು ನೀಗಿತಸುರನ ತನುವ ನಿಮಿಷದಲೀ.

1. ಷಷ್ಠಿ ಪ್ರಥಮಾರ್ಥದಲ್ಲಿ ವರ್ತಿಸುತ್ತದೆ. ವ್ಯಾ. ಸೂ. 2. ತಾೞಗೆ ಮತ್ತು ರಕ್ತದ ಧಾರೆ ಕಾಣುತಿತ್ತು ಎಂಬ ಹಾಗೆ ಅಧ್ಯಾಹಾರ ಮಾಡಬೇಕು.

377. ಕೊಂದು ದನುಜನ ಪೆಣನ ಬಂಡಿಯ
ಹಿಂದೆ ಬಂಧಿಸಿ ಪುರದ ಬಾಹೆಗೆ
ತಂದು ಬಿಟ್ಟನು ; ತನತನಗೆ ಜನಜಾಲ ಜೋಡಿನೆಲೀ.

The people, seeing the corpse of the giant, praise the good fortune of the brahmans.

ಬಂದು ಕಂಡುದು ಹೆಣನ ; ಭೂಸುರ
ರಿಂದು ಧನ್ಯರು, ವಿಪ್ರಜಾತಿಗೆ
ಸಂದುದಿಂಸಗ್ಗಳಿಕೆ ! ಯೆಂದುದು ನೆರದ ಪೌರಜನಾ.

RAMAYANA.

3. ರಾಮಾಯಣ. (ಭಾಮಿನಿ ಷಟ್ಪದಿ.)

ಪೀಠಿಕೆ.

ವಿಷ್ಣು ಸೂರ್ಯವಂಶದ ರಾಜನಾದ ದಶರಥರಾಯನ ಹೊಟ್ಟೆಯಲ್ಲಿ ಮನುಷ್ಯಾವತಾರ ತಕ್ಕೊಂಡು ರಾಮಚಂದ್ರನೆಂಬ ಹೆಸರಿನಿಂದ ಆಚರಣೆ ಮಾಡಿದ ಕಥೆಯೇ ಇದೇ ರಾಮಾಯಣ.

ವಿಷ್ಣುವಿನ ದರ್ಶನಾರ್ಥವಾಗಿ ಸನಕಸನಂದ, ಸನತ್ಕುಮಾರ ಈ ಮೂರು ಮಂದಿ ಋಷಿಗಳು ವೈಕುಂಠಕ್ಕೆ ಹೋಗಲಾಗಿ, ಅಲ್ಲಿದ್ದ ದ್ವಾರಪಾಲಕರಾದ ಜಯ ವಿಜಯರು ಇವರನ್ನು ತರಬಿದರು. ಇವರಿಗೆ ಸಿಟ್ಟು ಬಂದು ಜಯ ವಿಜಯರಿಗೆ ರಾಕ್ಷಸ ವಂಶದಲ್ಲಿ ಹುಟ್ಟಿರಿ ಎಂದು ಶಾಪ ಕೊಟ್ಟರು. ಆಗ ಜಯ ವಿಜಯರು ವಿಷ್ಣುವಿನಲ್ಲಿ ಬಂದು ನಿರ್ನಿಮಿತ್ತ ನಮಗೆ ಶಾಪವಾಯಿತು ಎಂದು ಹೇಳಿಕೊಂಡದ್ದಕ್ಕೆ, ವಿಷ್ಣು ಅವರಿಗೆ ಅಂದದ್ದು: ಋಷಿಗಳ ಶಾಪ ತಪ್ಪದು, ಅನುಭವಿಸಬೇಕು, ಆದರೆ ಏಳು ಜನ್ಮದಲ್ಲಿ ನನ್ನ ಸಂಗಡ ಸ್ನೇಹದಿಂದ ಇದ್ದು ಬರುತ್ತೀರಾ, ಅಥವಾ ಮೂರು ಜನ್ಮದಲ್ಲಿ ನನ್ನ ಸಂಗಡ ವೈರ ಬಳಸಿ ಬರುತ್ತೀರಾ ಅನ್ನೋಣ, ಅವರು ಯೇಳು ಜನ್ಮ ಅಂದರೆ ಬಹಳಾವರ್ತಿ ಹುಟ್ಟಲಾರೆವು ; ಮೂರು ಜನ್ಮದಲ್ಲಿ ನಿನ್ನ ಸಂಗಡ ವೈರ ಬಳಸಿ ಬರುತ್ತೇವೆಂದು ಒಡಂಬಟ್ಟು ದಿತಿಯಲ್ಲಿ ಅಸುರರಾಗಿ ಮೊದಲು ಜನ್ಮ ತಕ್ಕೊಂಡು, ಹಿರಣ್ಯಾಕ್ಷ ಹಿರಣ್ಯಕಸ್ಯಪ ಎಂಬ ನಾಮ ಧರಿಸಿ, ವಿಷ್ಣು ದ್ವೇಷ ಮಾಡಿದರು. ಇದರಿಂದ ಅವನು ವರಹ ನಾರಸಿಂಹ ರೂಪವಾಗಿ ಅವರನ್ನು ಸಂಹಾರ ಮಾಡಿದ ನಂತರ, ಎರಡನೇ ಜನ್ಮದಲ್ಲಿ ಆ ಜಯ ವಿಜಯರು ರಾವಣ ಕುಂಭಕರ್ಣರೆಂಬ ಹೆಸರಿನಿಂದ ರಾಕ್ಷಸರಾಗಿ ಹುಟ್ಟಿ ಲಂಕಾಪಟ್ಣವನ್ನು ರಾಜಧಾನಿ ಮಾಡಿಕೊಂಡು ಸಕಲ ಭೂಮಂಡಲದ ಅರಸರನ್ನೂ ಅಷ್ಟದಿಕ್ಪಾಲಕರು ಮೊದಲಾದ ದೇವತೆಗಳನ್ನೂ ಗೆದ್ದು ಸೆರೆಹಾಕಿ ಲೋಕಕಂಟಕರಾಗಿ ಉಪದ್ರ ಮಾಡ ಪ್ರಾರಂಭಿಸಿದರು. ಅದನ್ನ ತಾಳಲಾರದೆ ಬ್ರಹ್ಮ ಮೊದಲಾದ ದೇವತೆಗಳು ವಿಷ್ಣುವಿನಲ್ಲಿ ಹೋಗಿ ದೂರು ಹೇಳಿದಾಗ, ನೀವು ಎಲ್ಲರು ಕಪಿಗಳಾಗಿ ಹುಟ್ಟಿರಿ, ನಾನು ಮನುಷ್ಯನಾಗಿ ಹುಟ್ಟಿ ನಿಂಮನ್ನು ಕೂಡಿಕೊಂಡು ರಾ

ಣನು ಕುಂಭಕರ್ನರನ್ನು ಸಂಹಾರ ಮಾಡುತ್ತೇನೆಂದು ನಿರೂಪ ಕೊಟ್ಟನು. ಇದರ ಪ್ರಕಾರ ಅವತಾರ ಮಾಡಿ, ಸುಗ್ರೀವ ಹನುಮಂತ ನಳ ನೀಲಾಂಗದಾದಿ ನಾಮದಿ ಜನಿಸಿ ರಾಮನಿಗೆ ಪ್ರಸಿದ್ಧರಾಗಿದ್ದರು. ವಿಷ್ಣುಪತ್ನಿಯಾದ ಲಕ್ಷ್ಮಿ ಸೀತಾ ನಾಮದಿಂದ ಜನಕರಾಯನಿಗೆ ಮಗಳಾದಳು ; ಆ ತದನಂತರ ತಂದೆ ರಾಮಚಂದ್ರನಿಗೆ ರಾಜ್ಯ ಪಟ್ಟ ಕಟ್ಟಬೇಕೆಂದು ಅಪೇಕ್ಷಿಸಿದನು. ಆದರೆ ದಶರಥರಾಯನ ಎರಡನೇ ಹೆಂಡತಿ ಕೈಕಾದೇವಿಯು ತನ್ನ ಮಗ ಭರತಗೆ ರಾಜ್ಯವಾಗಬೇಕು, ರಾಮ ೧೪ ವರುಷ ವನವಾಸ ಮಾಡಬೇಕು ಎಂಬುವ ಹಾಗೆ, ತನ್ನ ಗಂಡನಿಂದ ವಚನ ತಕ್ಕೊಂಡಳಾದ ಕಾರಣ, ತನ್ನ ತಂದೆಯ ಆಜ್ಞೆ ಮೀರಬಾರದೆಂದು ರಾಮಚಂದ್ರನು ತನ್ನ ಪತ್ನಿ ಸೀತಾದೇವಿ, ತಮ್ಮ ಲಕ್ಷ್ಮಣ ಸಹಿತವಾಗಿ ವನವಾಸಕ್ಕೆ ಹೋಗಿ, ದಂಡಕಾರಣ್ಯದಲ್ಲಿ ಪಂಚವಟಿ (ಗೋದಾವರಿ) ಎಂಬ ನದಿ ತೀರದಲ್ಲಿ ಪರ್ನಶಾಲೆ ಮಾಡಿಕೊಂಡು ಇರುತ್ತಿದ್ದರು. ಆಗ್ಯೆ ರಾವಣನ ತಂಗಿ ಶೂರ್ಪನಖಿ ಎಂಬ ರಾಕ್ಷಸಿ ನರಮಾಂಸ ಹುಡಿಕಿಕೊಳ್ಳುತ್ತಾ ಇವರು ಯಿದ್ದಲ್ಲಿಗೆ ಬಂದು ಯಿವರನ್ನು ಕಂಡು ರಾಮಚಂದ್ರನು ತನಗೆ ಮದುವೆ ಯಾಗ ಬೇಕೆಂದು ಬಯಸಿದಳು. ಆದರೆ ಅವನು ಹಾಗೆ ಒಡಂಬಡುವ ಹಾಗಿದ್ದಿಲ್ಲ. ಇದಕ್ಕೆ ಆಕೆ ತನ್ನ ರಾಕ್ಷಸಿ ರೂಪ ಅಡಗಿಸಿ ಮಾಯೆಯಿಂದ ಮನುಷ್ಯಾಕೃತಿಯಾಗಿ ರಾಮಚಂದ್ರನ ಬಳಿಯಲ್ಲಿ ಬಂದು ತನಗೆ ಮದಿವೆ ಯಾಗು ಎಂದು ಹೇಳಿದಳು. ಇವನು ವಲ್ಲೆನೆಂದು ಹೇಳುತ್ತಿರಲಿಕ್ಕೆ ಸಿಟ್ಟಗೆ ಬಂದು ತನ್ನ ನಿಜಾಕಾರವ ತೋರಿಸಿ ರಾಮಚಂದ್ರನ ಮೈಮೇಲೆ ಬರುತ್ತಲೆ, ಲಕ್ಷ್ಮಣ ಕಂಡು ಅಣ್ಣನ ಆಜ್ಞೆಯಂತೆ ಆಕೆಯ ಕಿವಿ ಮೂಗನ್ನು ಕೊಯಿದನು. ಈ ಅಪಮಾನ ಈಕೆ ತನ್ನ ಅಣ್ಣ ರಾವಣನ ಮುಂದೆ ತಿಳಿಸುವಾಗ್ಯೆ ಅವನು ಕೋಪ ಮಾಡಿ ರಾಮಚಂದ್ರನ ಹೆಂಡತಿಯಾದ ಸೀತೆಯನ್ನು ವೈದು ಇಟ್ಟುಕೊಳ್ಳ ಬೇಕೆಂಬ ಕುಯುಕ್ತಿ ನಿಶ್ಚೈಸಿ ಕೊಂಡನು. ಇದನ್ನು ನಡಿಸಲಿಕ್ಕೆ ತಾನು ರಾಮಚಂದ್ರನು ಇದ್ದ ಅರಣ್ಯಕ್ಕೆ ಕರಕೊಂಡು ಬಂದಿದ್ದ ಸೋದರ ಮಾವನಾದ ಮಾರೀಚನು ಮಾಯಾ ಹರಿಣವಾಗಿ ಸೀತೆಯ ಮುಂದೆ ಸುಳಿದು ಅದು ತನಗೆ ಬೇಕೆಂಬುವ ಬಯಕೆ ಈಕೆಯಲ್ಲಿ ಹುಟ್ಟಿಸಿದನು. ಅದನ್ನು ತಂದು ಕೊಡಬೇಕೆಂದು ಸೀತೆ ಬೇಡಿದಕ್ಕೆ ರಾಮಚಂದ್ರನು ಅದರ ಬೆನ್ನು ಹತ್ತಿ ಹೋಗಿರಲಾಗಿ, ರಾಮನೇ ಬಿದ್ದನೆಂಬ ಭಯದಿಂದ ಆಕೆ ನೀನು ಹೋಗೆಂದು ಲಕ್ಷ್ಮಣನನ್ನು ಸಹ ಕಳುಹಿಸಿದ ಮೇಲೆ, ಒಬ್ಬಳೆ ಉಳಿದಳು. ಆಗ ರಾವಣನು ಬಂದು ಸೀತೆಯನ್ನು ಕದ್ದುಕೊಂಡು ಲಂಕಾಪಟ್ನಕ್ಕೆ ಹೈದನು. ಅಷ್ಟರೊಳಗೆ ಇವರು ಆ ಮಾಯಾ ಹರಿಣವನ್ನು ಹೊಡೆದು ತಿರಿಗಿ ಬಂದರು, ಸೀತೆ ಸಿಕ್ಕದೆ ಇದ್ದ ಕಾರಣ, ಹುಡುಕಲಿಕ್ಕೆ ಹೋದರು. ಸೀತೆಯನ್ನು ವೈಯುತ್ತಿದ್ದ ರಾವಣನನ್ನು ಇದು ತಕ್ಕದ್ದಲ್ಲವೆಂದು ತಡಭಿ ಯುದ್ಧ ಮಾಡಿ ಸೋತು ಬಿದ್ದಿದ್ದ ಜಟಾಯು ಆಕೆ ಹೋದ ವರ್ತಮಾನ ತಿಳಿಸಿದನು ಅವರು ಕೇಳಿಕೊಂಡು ಕಪಿಗಳ ಸಂಸ್ಥಾನವಾದ ಕಿಷ್ಕಿಂಧೆಗೆ (ಹಂಪಿ) ಬಂದರು. ಅಲ್ಲಿದ್ದ ಸುಗ್ರೀವ ಹನುಮಂತ ಮೊದಲಾದ ಕಪಿನಾಯಕರನ್ನು ಕೂಡಿಕೊಂಡು ದಕ್ಷಿಣ ಸಮುದ್ರಕ್ಕೆ ಹೋಗಿ ಸೇತು ಕಟ್ಟಿ ದಾಟಿ ಲಂಕಾಪಟ್ಣಕ್ಕೆ ಮುತ್ತಿಕೊಂಡು ರಾವಣ ಕುಂಭಕರ್ನ ಮೊದಲಾದ ರಾಕ್ಷಸರನ್ನು ಸಂಹರಿಸಿ ಸೆರೆ ಬಿದ್ದವರನ್ನೆಲ್ಲಾ ಬಿಡಿಸಿ

ಸೀತೆಯನ್ನು ತಿರಿಗಿ ತಮ್ಮ ಸಂಸ್ಥಾನವಾದ ಅಯೋಧ್ಯಾಪುರಕ್ಕೆ ಕರಕೊಂಡು ಬಂದು ಸಕಲ ರಾಜ್ಯ ಪರಿಪಾಲನೆ ಮಾಡಿದರು.—ಅಲ್ಲಿ ಕೆಲವು ಕಾಲ ಇದ್ದ ಮೇಲೆ, ರಾಮಚಂದ್ರನು ತನ್ನ ಆಚರಣೆಗೆ ಜನರು ಏನು ಅನ್ನುತ್ತಾರೆಂದು ಪಾಳತಿ ಇಟ್ಟಿರಲಾಗಿ, ರಾವಣನು ಕಾಮಾತುರದಿಂದ ವೈದಂಥ ಸೀತೆಯನ್ನು ಬಿಡಲಾರದೆ ತಿರಿಗಿ ಆಕೆಯನ್ನು ಕೂಡಿಕೊಂಡನು ಎಂದು ಅಗಸ ಅಂದದ್ದನ್ನು ಕೇಳಿ, ಸಂಶಯ ಹಿಡಿದು, ಸೀತೆಯನ್ನು ಅಡವಿಗೆ ಬಿಟ್ಟನು. ಆಗ ಸೀತೆ ಗರ್ಭವತಿ ಯಾಗಿದ್ದಳು. ಅರಣ್ಯದಲ್ಲಿ ತಿರುಗುತ್ತಿರುವಾಗ್ಯೆ ವಾಲ್ಮೀಕ ಋಷಿ ಆಕೆಯನ್ನು ಕಂಡು, ತನ್ನ ಆಶ್ರಮಕ್ಕೆ ಕರದು ಕೊಂಡು ಹೋದನು. ಅಲ್ಲಿ ಆಕೆ ಅವಳಿ ಜವಳಿ ಗಂಡು ಕೂಸುಗಳನ್ನು ಹಡೆದಳು. ಅವರಿಗೆ ಕುಶ ಎಂಬ ಲವ ಎಂಬ ಹೆಸರಿಟ್ಟಳು. ವಾಲ್ಮೀಕ ಋಷಿ ಅವರನ್ನು ಸಲಹಿ, ವಿದ್ಯಾಭ್ಯಾಸ ಮಾಡಿಸಿ ತಾನು ರಚಿಸಿದ ರಾಮಾಯಣವನ್ನು ಓದಿಸಿದನು. ಹೀಗೆ ತಮ್ಮ ತಂದೆಯಾರೆಂದು ಅವರಿಗೆ ತಿಳಿಯ ಬಂತು.

ಸೋಲಾಪುರದ ಪ್ರಾಂತ್ಯದಲ್ಲಿ ತೊರವೆ ಎಂಬುವ ಗ್ರಾಮದಲ್ಲಿ ವಾಸ ಮಾಡಿದ ಒಬ್ಬ ಬ್ರಾಹ್ಮಣನು ಸಂಸ್ಕೃತದಲ್ಲಿ ರಚನೆಯಾಗಿದ್ದ ಈ ರಾಮಾಯಣ ಕಾವ್ಯವನ್ನು ಕನ್ನಡಿಸಿದನು. ಅವನು ಕುಮಾರ ವಾಲ್ಮೀಕನೆಂಬ ಹೆಸರನ್ನು ತನಗೆ ಇಟ್ಟು ಕೊಂಡನು.

ಈ ಕುಶಲವರು ಕೇಳುದರು, ವಾಲ್ಮೀಕಋಷಿ ಈ ರಾಮಾಯಣವನ್ನು ಹೇಳುವವನು.

(RAVANA CARRIES OFF SÍTE.)

ರಾವಣ ಸೀತೆಯನ್ನು ವೈದದ್ದು. ಸಂಧಿ. (28—34.)

378. ಕುಶನೆ ! ಕೇಳ್ಳೈ ! ಶೂರ್ಪನಖಿ ಯುಂ
ಬಸುರೆ ಬಂದಳು ವನವಿಹಾರ
ವ್ಯಸನದತಿ ನರಮಾಂಸಭೋಜನದುಜ್ಜುಗಾರ್ಥವಲೀ ;
ಅಸುವಳಿದ ಶಂಬುಕನ[1] ಬಳಿಕವ
ನುಸುರದೆಗಹನು ಕಂಡು ಹಲುಗಳ
ಮುಸವೃತ್ಯೆದಿದಳಿನಕುಲೇಂದ್ರನ ಪರ್ಣಮಂದಿರವಾ

Súrpanakhi, the sister of Rávana, enters the hut of Ráma,

1. ಲಕ್ಷ್ಮಣನು ಬೇಟೆಯಾಡುವಾಗ್ಯೆ, ತನ್ನ ಪದವಿ ಬಯಸಿ ತಪಸ್ಸು ಮಾಡುತ್ತಿದ್ದಂಥಾ ಶಂಬುಕಾಸುರನನ್ನು ಕೊಲ್ಲಿಸ ಬೇಕೆಂದು ಇಂದ್ರನು ಬಂದು ಕಾಡ ಹಂದಿಯ ರೂಪಾಗಿ ಲಕ್ಷ್ಮಣನ ಮುಂದೆ ಹಾದು ಹೋಗುವ ಸಮಯದಲ್ಲಿ, ಇವನು ಬೆನ್ನು ಹತ್ತಿದನು. ಆಗ ಶಂಬುಕನು ಇದ್ದಲ್ಲಿಗೆ ಆ ಕಪಟ ಸೂಕರ ಹೋಗಿ ಅವನಿಗೆ ಅಡ್ಡಾಗಿ ನಿಂತ ಮೇಲೆ, ಲಕ್ಷ್ಮಣನು ಬಾಣ ಬಿಟ್ಟನು. ಆಕ್ಷಣಕ್ಕೆ ಅದು ತಪ್ಪಿಸಿ ಕೊಂಡದ್ದರಿಂದ ಶಂಬುಕಾಸುರನು ಬಾಣತಾಗಿ ಸತ್ತನು. ನಮ್ಮವರನ್ನು ಕೊಂದಿದ್ದಾರೆಂದು ಶೂರ್ಪನಖಿ ದ್ವೇಷ ಮಾಡಿ ಇವರನ್ನು ತಿನ್ನ ಬೇಕೆಂದು ಬಂ[illegible]

379\. ಅರಘುಕ್ಷಿತಿನಾಥನಾನಿಜ
sees him, and is captivated by his beauty.
ನಾರಿಸಹಿತ ದ್ಯೂತಕೇಳೀ
ಭಾರದಿಂದಿರೆ, ಕಂಡಳವಳೀ ರಾಮಚಂದ್ರಮನಾ
ದೂರದಲಿ; ಧುಮ್ಮಿಕ್ಕಿದುದು ದೃಢ
ವೈರ ದರುಶನಮಾತ್ರದಲಿ; ಕಣು
ಕೋರಯಿಸಿದವು ಕೋಮಲಾಂಗನ ಕಾಯಕಾಂತಿಯಲೀ;

380\. ನೋಡನೋಡಲಿಕಂಗಜನ[1] ಹೂ
Wounded by the arrow of love she takes off her giant form,
ಮೂಡಿಗಿಯ ಸರಳಂಗದೊಳಗೊ
ಕ್ಕಾಡಿದವು[2] ಮೈಮುರದಳೊಂದೆರಡೆಂಬವಸ್ಥೆಯಲೀ
ಜೋಡಣೆಯ ಜೋಕೆಗಳ ಝಡತಿಯ
ಝಾಡಣೆಯ ಝೋಂಪಿನಲಿ ಬಳಿಕೀ
ಡಾಡಿದಳು ವಿಕೃತಾತಿಶಯದ ನಿಶಾಟರೂಪಕವಾ

1\. ಕಾಮವೆಂಬ ವ್ಯಸನವನ್ನು ಒಬ್ಬ ದೇವತೆಯಂತೆ ಮಾಡಿಕೊಂಡರು. ಅಂಗದಲ್ಲಿ ಅದು ಹುಟ್ಟುವದರಿಂದ ಅಂಗಜ, ಮನಸಿನಲ್ಲಿ ಹುಟ್ಟುವದರಿಂದ ಮನಸಿಜ, ಮನಸನ್ನು ಸೋಲಿಸುವದರಿಂದ ಮನ್ಮಥ ಮುಂತಾದ ಹೆಸರುಗಳು ಅದಕ್ಕೆ ಬಂದವು. 2. ಹೊಕ್ಕಾಡಿದವು.

381\. ಹೊಳಹೊಳವ ನಿಡುಗಂಗಳಿನ, ಕೋ
and assumes a beautiful human form.
ಮಲದ ಕದಪಿನ, ಪೆರೆನೊಸಲ, ಪ್ರ
ಜ್ವಲಿಪ ದಂತಾವಳಿಯ, ಮಿರುಗುವ ಪಲ್ಲವಾಧರದಾ,
ಕಳೆನಡುವಿನುತ್ತುಂಗಕುಚಮಂ
ಡಲದ, ನಳಿತೋಳುಗಳ, ಮಾನವ
ವಿಲಸಿತಾಂಗದ ರೂಪ ಕೈಕೊಂಡೆಸದಳಿದಿರಿನಲೀ.

1\. ಬಹು ವಚನದ ಷಷ್ಠಿಯಲ್ಲಿ ಗಳು ಎಂಬ ಪ್ರತ್ಯಯದ ಮೇಲೆ ಇನ ಎಂಬ ಪ್ರತ್ಯಯ ಸಹ ಹತ್ತುವದು.

382. ಬಿದ್ದುದರಸನ ದೃಷ್ಟಿ ಮೋಹನ
ಗದ್ದುಗೆಯು ಮಾನಿನಿಯ ಮೇಲಿರು
ತಿದ್ದುದೈ ನೃಪಗೇಕಪತ್ನಿವ್ರತಪರಿಜ್ಞಾನಾ !
ಹೊದ್ದದಾದುದು ಚಿತ್ತ ; ಚಿತ್ತಜ
ನುದ್ದಟತನಕೇನು ದೃಢತರ
ವಿದ್ದುದೋ ನಿಂಮಯ್ಯಗೆಲೆ ! ಕುಶ ! ಕೇಳ್ದೈ ! ಯೆಂದಾ.

But she makes no impression upon Ráma.

383. ಗಮನವೆಲ್ಲಿಗೆ ? ಮನುಜೆಯೋ ? ನೀ
ನಮರವಧುವೋ ? ವಹಿಸಿ ಕೊಂಡಿಹ
ರಮಣರಾರೀಕಾನನಕೆ ಬರವೇನು ? ನಿನಗೆಂದೂ
ಅಮಿತಬಲನಾಕಪಟರಾಕ್ಷಸ
ರಮಣಿಯನು ಮಾಧುರ್ಯವಚನದ
ನಮತೆಯಲಿ ಕೇಳಿದನು ಮೆಲ್ಲನೆ ಮಂದಹಾಸದಲೀ.

Ráma putting questions to her,

384. ರಮಣರಿಲ್ಲೆನಗಾರು ; ಸ್ವೇಛ್ಛಾ[1]
ರಮಣಿ ತಾನು ; ಪುಲಸ್ತ್ಯವಂಶದ
ರಮಣರಿಂದೆನಗಾಯ್ತು ಜನನವು ; ಜಲಧಿಪರಿವೃತದಾ
ಕ್ಷಮೆಯ ವಲ್ಲಭರೆಲ್ಲರಲಿ ನಿ
ರ್ಮಮತೆ ಯಾಯಿತೀಮನಕೆ ; ನಿನ್ನಲಿ
ರಮಿಸುವೀಯನುರಾಗ ಯೆನಗಾಯ್ತೆಂದಳಂದುಮಾಣೀ.

she answers, that she has no husband, and that she has fallen in love with him.

1. ಸ್ವೇಚ್ಛೆಯಿಂದ ತಿರುಗುವಾಕೆ.

385. ಏಕಪತ್ನೀವ್ರತಸುಭಾಷಿತ
ಸೋಕಿಹುದು ನಂಮುವನು ನಿನ್ನವಿ
ವೇಕದನುರಾಗತೆಗೆ ; ನಮ್ಮಯ ರೂಪುಯವ್ವನಕೆ

Ráma's answer: "thy love to me is incompatible with my vow of

fidelity to my wife;

ನಾಕುಮಡಿಯುಹ ಪುರುಷನಾದೊಡೆ,
ಸಾಕು ! ಹೋಗಾನಿಳಯದಲಿ ಲೋ
ಕೈಕವೀರನುದಾರವಿಕ್ರಮನಹನು ಹೋಗೆಂದಾ.

386. ಒಲಿಸಿಕೋ ನೀನಾತನನು ! ಕ

but go to my brother Lakshmana."

ಟ್ಟೊಲುಮೆಯವನಹನಾತ ನೀಬರ
ಲೊಲಿಯದಿರನತಿಶಯದ ನಿನ್ನಯ ವಿಭ್ರಮಾನ್ವಿತಕೇ ;
ಲಲನೆ ! ಹೋಗೆನುತವಳನಸಿತೋ

She goes to his hut.

ತ್ಪಲನಿಭಾಂಗನು ಕಳುಹೆ, ಲಕ್ಷ್ಮಣ
ನೆಲೆವನೆಗೆ ಬಂದಳು ನಿತಂಬಿನಿ ನಡೆಯ ಮುರುಕದಲೀ.

387. ರೂಪಿನಲಿ ಸೊಬಗಿನಲಿ ಶೌರ್ಯಾ

She finds him a fit object of her love;

ಟೋಪದಲಿ ಕುಂದಿಲ್ಲ; ಮನ್ಮಥ
ತಾಪವನು ತಗ್ಗಿಸಲು ತಕ್ಕವನಹುದು ! ನೋಡಲಿಕೇ,
ಈ ಪ್ರಮದನೀತನನು ಮಧುರಾ
ಳಾಪದಲಿ ಮಾತಾಡಿಸುವೆನೆಂ
ದಾಪರಂತಪನನುಜನನು ನುಡಿಸಿದಳು ಶೂರ್ಪನಖೀ.

388. ನೇಮಮಾಪ್ತ್ಮನಗಸಿತಕುಮುದ

and asks him, to satisfy her desires.

ಶ್ಯಾಮನಿಂ ಕಗ್ಗೊಲೆಯ ಕಾಮನ
ಕೈಮೆಯನು ಕಳಲಿಸು ಕಟಾಕ್ಷದ ಕರುಣಭಾವದಲೀ !
ಕಾಮಿಸಿದೆ ನಾ ನಿನಗೆ; ಸುರತಕ
ಳಾಮನೋಜವಿಲಾಸನಾಗೆಂ
ದಾಮಗಧನಂದನೆಯ ನಂದನನಗೆಂದಳಿಂದುಮುಖೀ

1. ಮಗಧ ರಾಜನ ಮಗಳು ಲಕ್ಷ್ಮಣನಿಗೆ ತಾಯಿ ಆಗ ಬೇಕು.

Lakshmana refuses to listen to her,

389. ಕೃತಕವಲ್ಲ ಮದೀಯ[1] ವಚನ
ಸ್ಥಿತಿಗೆ ! ನಾನೇ ಬ್ರಹ್ಮಚರ್ಯದ
ವ್ರತಸುನಿಷ್ಟಿತರೀಮಹಾವನವಾಸಪರಿಯಂತಾ
ಸತಿಯ ಸೊಬಗಿಗೆ ಸೋಲದೆಂಮಯ
ಮತಿ ; ಮನೋಭವನಸ್ತ್ರಧಾರಾ
ಹತಿಗೆ ತೀಕುವನಲ್ಲ ತೆರಳೆಂದನು ನಿತಂ[2]ಬಿನಿಯಾ.

1. ನನ್ನ (ಸಂಸ್ಕೃತ) 2. ಆಕೆಗೆ ಹೇಳಿದನು.

and sends her back to Ráma,

390. ಕಾತರಿಸಿ ವಿಷಯಾತುರರು ನೆರೆ
ಭೂತುಗೆಡದರೆ, ಗರುವರಾದವ
ರಾತು ಮಾರುತ್ತರವ ಕೊಡುವರೆ ! ಕೇಲಕೆ ಸಾರೆನುತಾ
ಆತಮಿ[1]ಸ್ರಾಚರಿಯ ನಸುದಾ
ರಾ[2]ತಿಯನುಜನು ಜರಿಯೆ, ಘನರೋ
ಷಾತಿಶಯದಲಿ ಮತ್ತೆ ಬಂದಳು ರಾಮನಿದ್ದೆಡೆಗೇ.

1. ಕತ್ತಲೆಯಲ್ಲಿ ಅಲ್ಲಾಡುವವರು=ರಾಕ್ಷಸರು. 2. ರಾಕ್ಷಸರಿಗೆ ಪ್ರೀತಿ ಮಾಡದವನು=ರಾಮಚಂದ್ರನು.

who understands now, that she is a giantess,

391. ಕಳುಹಿದನು ತಾಬ್ರಹ್ಮಚರ್ಯದ
ಬಳಿಕೆ ತನಗೆಂದಾತ ನಿಶ್ಚಯು
ಬಳಿಗೆ ; ನಿನ್ನಭಿಮತವದಾವುದು ? ಹೇಳು ತನಗೆನಲೂ
ಲಲನೆ ಯಿವಳಾಸುರವಿಕರ್ಮದ
ಲಲನೆ, ಯಹುದೆಂದರಿದು ಮೆಲ್ಲನೆ
ತೊಲಗ ನುಡಿದೊಲಿದವರನಂಗೀಕರಿಸು ಹೋಗೆಂದಾ.

and tells her, to be gone. Her disappointment and anger.

392. ಮನದ ಮದವಕ್ಕರಿನ ವಿಷಯದ
ನೆನಹು ನೆಗ್ಗಿತು ; ಸುರತರಸವಾ
ಹಿನಿಯ ಹರಿ ಬತ್ತಿದುದು ; ಬಿಟ್ಟುದು ಕೋಮಲತೆ ಮುಖದಾ ;

ಘನಮನೋರಥ ಶಶಿರಕಾಲದ
ವನಜದಂತಾಯ್ತುದಿಸಿತವಳಾ
ಸನವಲಧಿಕಕ್ರೋಧಸಿಖಿ ಸಿಡಿದೊಗುವ ಕಿಡಿಗಳಲೀ.

392\. ತಿಂಬೆನಿವದಿರಸೀಮನುಷ್ಯನಿ
ತಂಬಿಸಿಯ ಕೊಂಡ್ಯೊದು ಸುರನಿಕು
ರುಂಬದ[1]ಲ್ಲಣಗೀವೆನೆಂದನುಮಾನಮಾರ್ಗದಲೀ
ಅಂಬುಜಾಕ್ಷನ ಮುಡಿಯು ಸರಿಸಕೆ
ಜೂಂಬಿಸಲು, ಝುಪತಿಯುಲಿ ಬಳಿಕು
ಗ್ರ್ಯಂಬಕನ ಹೊಳಹಿನಲಿ ಹೊರಕ್ಕೈಯಿಂದ ಝೂಡಿಸಿದಾ.

With the intention to eat up Ráma and to carry off Síte, she approaches Ráma; he shakes her off.

1\. ದೇವತೆಗಳಿಗೆ ಉಪದ್ರ ಮಾಡುವವನು=ರಾವಣನು.

393\. ಕಳಕಳವಿದೇನಂಣದೇವನ
ನಿಳಯದೊಳಗೆಂದೂರ್ಮಿ[1]ಳಾಪತಿ
ಚಳಕದಿಂದೈತಂದು ಕಂಡನು ಕಪಟ ರಕ್ಕಸಿಯಾ ;
ಸೆಳದನಾಯುಧವವಳ ಗಂಟಲ
ಬಳಿಗೆ ಚಾಚಲು, ಕಂಡು ರಘುಪತಿ
ಸಿಲಿಸಿದನು, ಕೈತಪ್ಪ ಮಾಡದಿರೆಂದು ಲಕ್ಷ್ಮಣನಾ.

Hearing the noise, Lakshmana comes, sees the giantess, and is going to kill her.

1\. ಲಕ್ಷ್ಮಣನ ಹೆಂಡತಿ

394\. ಚಲುವತನವನು ತೋರಿ ನಿನ್ನುವ
ನೊಲಿಸಿ ಬಂದವಳಿವಳು ! ಲೋಕಕೆ
ಚಲುವೆಯುನುತಾ ಮಾಡಿ ಬಿಡು ! ಸಾಕೀಸಿಶಾಚರಿಯಾ
ಕೊಲುವುದನುಚಿತವೆಂಬ ನುಡಿಯಿಂ
ದೊಳಗವಳ ನಾಸಿಕವನೂರ್ಧ್ವಕರ್ಣ
ಬಳಚಿದನು, ಕಳಚಿದನು ಕರ್ಣದ್ವಯದ ಬೆಸುಗೆಗಳಾ.

Ráma stops him. According to his advice he cuts off her nose and ears.

395. ನಗುತ ಲಕ್ಷ್ಮಣದೇವನಾಕೆಯ
ಹೆಗಲಹೆದಱಿನಲವುಕೆ ನಿನ್ನಯ
ಸೊಗಸಿಗನುವಾದವರ ನೀ ವರಿಸೆಂದು ಹೊರವಡಿಸೇ
ವ್ರೊಗುವ ಕಿವಿಮೂಗುಗಳ ರಕುತದ
ಹಗರಣದ ಹೊಸನಾಟಕದ ಹಲು
ದೆಗದ ರಕ್ಕಸಿ ಬಂದಳೊದರುತ ಖರನ[1] ಪಟ್ಟಣಕೇ.

She goes to Kharna, her brother,

1. ರಾವಣನ ತಮ್ಮ. ಇವನ ಹತ್ತರ ಹೋಪಲು ಬಂದವಳು. ದೂಷಣ ತ್ರಿಶಿರರು ಅವನ ತಂಮ್ಮಂದಿರು.

396. ತುಂಗಬಲಸೌಮಿತ್ರಿ[1]ಯಿಂದುರೆ
ಭಂಗಬಟ್ಟ ಮಹೋಗ್ರರಜನಿಚ
ರಾಂಗನೆಯು ದೂರಿನಲಿ ಖರನೈತಂದನಾಹವಕೇ.
ಸಂಗರದೊಳಂದಹಿತಮದವಾ
ತಂಗ ಕಂಠೀರವನು ರಾಮ ರ
ಣಾಂಗಣದಿ ಖರದೂಷಣತ್ರಿಶಿರರನು ಮರ್ದಿಸಿದಾ.

and excites him to make war upon Ráma, who kills him with his two brothers.

1. ಲಕ್ಷ್ಮಣನ ತಾಯಿ ಹೆಸರು ಸುಮಿತ್ರೆ ಯಾದಪರಿಂದ ಇವನಿಗೆ ಈ ನಾಮ ಬಂತು.

397. ಕೇಳಿದ್ಯೆ ! ಕುಶ ! ನಿಮ್ಮ ರಘುಭೂ
ಪಾಲಕನು ರಿಪುವಿಜಯವಿಭವವ
ಲೀಲೆಯಲಿ ನಿಜಪರ್ಣಭವನಕೆ ಬರಲು ಬಳಿಕಿತ್ತಾ
ಕಾಲ[1]ಗಂಡಗ್ರಜರ ಕಾಯದ
ಮೇಲೆ ಹೊರಳಿದು ಹುದಿದ ಶೋಕದ
ಸೂಳಿನಲಿ ಸಾರಿದಳು ಲಂಕಾಪುರವ ಶೂರ್ಪನಖೀ.

Full of grief she goes to Ceylon,

1. ಕಾಲನನ್ನು ಕಂಡನು= ಸತ್ತನು.

398. ಲವನೆ । ಕೇಳ್ಸುರನರಭುಜಂಗಮ

the capital of Rávana, her brother.

ಭುವನದಲ್ಲಣದಶವದನನು[1]

ತ್ರವದಿನೊ[2]ಡ್ಡೋಲಗದೊಳಿದ್ದನು ಬಹಳವಿಭವದಲೀ ;

ಪವನಶಿಖಿಯಮನಿರುತಿಹರವೈ

ಶ್ರವಣವರುಣಾದಿಗಳು ಬೆಸಸೇ

ನೆವಗೆ ತಮಗೆನುತಿರ್ದರೆಡೆಬಲದಲಿ ದಶಾನನನಾ !

1. ಹತ್ತು ತಲೆಯುವನು=ರಾವಣ. 2. ದಿಕ್ಪಾಲಕರು ರಾವಣನಿಗೆ ಕೈಸೆರೆ ಶಿಕ್ಕಿದ್ದರು.

399. ಅಣುಗ ! ಕೇಳಾಸಮಯದಲಿ ನೆರೆ

Her appearance at the court of Rávana awful.

ಹಳಿದ ಮೂಗಿನ, ಹರಿದ ತುಟಿಗಳ,

ಜುಣುಗುಗಿವಿಗಳ, ಜುರಿತ ಹುಣ್ಣಿನ, ಕೊರದ ಕದಪುಗಳಾ,

ವ್ರಣದ ದುರ್ಗಂಧವ, ಮಹಾಭೀ

ಷಣದ ರಕ್ಕಸಿ ಬಂದಳಾರಾ

ವಣನ ರಚಿತಸಭಾಂತರಾಳಕೆ ಮೃತ್ಯುರೂಪಿನಲೀ.

400. ಇದುವೆ ಕಡುವೆರಗೆ ನುತಲಾದಶ

Rávana's grief; his follower's secret joy, and Rávana's anger.

ವದನ ಕದಪಿನ[1] ಕೈಯ್ಯಲಾಕೆಯ

ವದನವನು ನೋಡಿದನು ; ನೋಡಿದುದಖಿಳಪರಿವಾರಾ

ಸದುಳ ನಗೆಗಳ ಮೊಗದ ಮುರುಹಿನ

ವದನದರೆಮುಸುಕುಗಳಲಿರ್ದುದು ;

ಹೃದಯದಲಿ ಹೊಗರೆದ್ದುದುರಿ ಬಳಿಕಾದಶಾನನಗೇ.

1. ಗಲ್ಲಕ್ಕೆ ಕೈ ಹಚ್ಚುವದು ಚಿಂತೆಯ ಲಕ್ಷಣ.

401. ಝಳಪಿಸುತ ಹಿಮಕಿರಣಹಾಸವ

He retires with his sister and asks her,

ನಿಳಿದನಾಸನದಿಂದ ಮೌಳಿಗ

ಳೊಲಹಿನಲಿ ಬೀಳ್ಕೊಟ್ಟನಸುರಾಮರಕದಂಬಕವಾ

ಹೊಳಕುಸಂತಸಸ್ತ್ರಾಪದಲಿ ಮೂ
ಗಳಿದ ಮಾನಿನಿ ಸಹಿತ ತನ್ನೊಳ
ನಿಳಯವನು ಹೊಕ್ಕನುಜೆಯನು ಬೆಸಗೊಂಡನಾಹವನಾ .

1. ಚಂದ್ರಹಾಸ=ರಾವಣನ ಕತ್ತಿಯ ಹೆಸರು.

402. ಏನಿದೇನೀಮಾನಭಂಗವಿ
"Who has thus dishonoured you."
ಧಾನವಾರಿಂದಾಯ್ತು ? ಹೇಳಭಿ
ಮಾನಗತವಿದು ತನ್ನದೈಸಲೆ ! ಹೇಳು ಬೇಗೆನಲೂ,
ಹಾನಿ ತನ್ನಿಂ ತನಗೆ ಬಂದುದ
ನೇನುವನು ಪಸರಿಸದೆ, ತನ್ನನು
ಮಾನಮಾರ್ಗದ ಮತವನೇ ಬಲಿದೆಂದಳೀಹದನಾ

I. ದ್ರವ್ಯ (SUBSTANCE;) ಒಂಭತ್ತು ದ್ರವ್ಯಗಳು ಅವೆ. ಅವು ೨೪ ಗುಣಗಳಿಗೆ ವಾಹನಗಳಾಗಿವೆ.

a. ಪೃಥುವಿ; ಗಂಧ ವುಳ್ಳದ್ದು. ಇದು ದ್ವಿವಿಧ:

a a. ನಿತ್ಯವಾದ ಪರಮಾಣುರೂಪ (eternal, as atoms.)

b b. ಅನಿತ್ಯವಾದ ಕಾರ್ಯರೂಪ (uneternal, as products)

ಅ—ಶರೀರ; ಮನುಷ್ಯರ ಶರೀರ; ಸತ್ತರೆ ಅದು ಇಲ್ಲದೇ ಹೋಗುವದು. ಆದರೂ ಅದು ಹುಟ್ಟಿದ ಮಣ್ಣು ಇನ್ನೂ ಅದೆ.

ಬ—ಇಂದ್ರಿಯ; ಗಂಧ ಗ್ರಹಿಸುವ ಘ್ರಾಣೇಂದ್ರಿಯವು. (ಅದು ಪೃಥ್ವಿ ಸಂಬಂಧ) ಮೂಗಿನೊಳಗೆ ಅದೆ.

ಚ—ವಿಷಯ, ಹೆಂಟೆ, ಕಲ್ಲು ಮುಂತಾದವು.

b. ಅಪ; ಶೀತಸ್ಪರ್ಶ ವುಳ್ಳದ್ದು. ಇದು ದ್ವಿವಿಧ.

a a. ನಿತ್ಯವಾದ ಪರಮಾಣು ರೂಪ.

b b ಅನಿತ್ಯವಾದ ಕಾರ್ಯ ರೂಪ ; ಇದು ತ್ರಿವಿಧ :

ಅ—ಶರೀರ (organisms) ವರುಣ ಲೋಕದಲ್ಲಿ ಅದೆ.

ಬ—ಇಂದ್ರಿಯ.: ರಸ ಗ್ರಹಿಸುವ ರಸನ; ಇದು ಜಿಂಹ್ವಾಗ್ರದಲ್ಲಿದೆ

ಚ—ವಿಷಯ ; ಹೊಳೆ, ಸಮುದ್ರ ಮುಂತಾದದ್ದು.

c. ತೇಜ. ಉಷ್ಣ ಸ್ಪರ್ಶ ವುಳ್ಳದ್ದು. ಇದು ದ್ವಿವಿಧ:

a a. ನಿತ್ಯವಾದ ಪರಮಾಣು ರೂಪ ;

b b. ಅನಿತ್ಯವಾದ ಕಾರ್ಯರೂಪ ; ಇದು ತ್ರಿವಿಧ :

ಅ—ಶರೀರ, ಆದಿತ್ಯಲೋಕದಲ್ಲಿ ಅದೆ. (organisms ;)

ಬ—ಇಂದ್ರಿಯ: (organ ;) ರೂಪಗ್ರಹಿಸುವ ಚಕ್ಷು, ಇದು ಕೃಷ್ಣ ತಾರಾಗ್ರದಲ್ಲಿ ಅದೆ.

ಚ—ವಿಷಯ ; (inorganic objects) ಇದು ಚತುರ್ವಿಧ ;

ಅಅ—ಭೌಮ ; ಭೂಮಿಯಲ್ಲಿರುವಂತಾದ್ದು. ಬೆಂಕಿ ಮುಂತಾದ್ದು.

ಬಬ—ದಿವ್ಯ ; ಆಕಾಶದಲ್ಲಿಯದು ಮಿಂಚು ಮುಂತಾದ್ದು.

ಚಚ—ಔದರ್ಯ ; ತಿಂದದ್ದನು ಹೊಟ್ಟೆಯಲ್ಲಿ ಜೀರ್ಣ ಮಾಡುವಂಥಾದ್ದು

ದದ—ಆಕರಜ ; ಆಕರಗಳಲ್ಲಿ ಹುಟ್ಟುವ ಸುವರ್ಣಾದಿ.

d. ವಾಯು : ರೂಪರಹಿತ, ಸ್ಪರ್ಶವುಳ್ಳದ್ದು ; ಇದು ದ್ವಿವಿಧ :

a a. ನಿತ್ಯವಾದ ಪರಮಾಣು ರೂಪ.

b b. ಅನಿತ್ಯವಾದ ಕಾರ್ಯರೂಪ ; ಇದು ತ್ರಿವಿಧ :

ಅ—ಶರೀರ ; ಅದು ವಾಯುಲೋಕದಲ್ಲಿ ಅದೆ.

ಭ—ಇಂದ್ರಿಯ ; ಸ್ಪರ್ಶಗ್ರಹಿಸುವ ತ್ವಕ್. (ಚರ್ಮ) ಸರ್ವಶರೀರದಲ್ಲಿ ಅದೆ.

ಚ—ವಿಷಯ ; ವೃಕ್ಷಮುಂತಾದ್ದನ್ನು ಅಲ್ಲಾಡಿಸುವಂಥಾದ್ದು.

e. ಆಕಾಶ. ಶಬ್ದ ಗುಣಕವಾದದ್ದು. ಇದುಏಕ, ನಿತ್ಯ.

f. ಕಾಲ; ಇದು ಭೂತಕಾಲ ಮುಂತಾದದ್ದು, ನಿತ್ಯ ಎಲ್ಲಾ ವ್ಯಾಪಿಸುವಂಥಾದ್ದು.

g. ದಿಗ್: ಇದು ಪೂರ್ವ ಮುಂತಾದದ್ದು, ಏಕ ನಿತ್ಯ ಎಲ್ಲಾ ವ್ಯಾಪಿಸುವಂಥಾದ್ದು

h. ಆತ್ಮ: ಜ್ಞಾನಾಧಿಕರಣ; ಇದು ದ್ವಿವಿಧ;

aa. ಜೀವಾತ್ಮ; ಇದು ಬೇರೆ ಬೇರೆ ಶರೀರಗಳಲ್ಲಿ ಹಂಚಿರುವಂಥಾದ್ದು; ನಿತ್ಯ ಸರ್ವವ್ಯಾಪಕ ವಾಗಿದೆ.

bb. ಪರಮಾತ್ಮ, ಎಲ್ಲವನ್ನು ತಿಳುಕೊಳ್ಳುವ ದೇವರು.

I. ಮನಸ್ಸು: ಸುಖಾದಿ ಉಪಲಬ್ಧಿ ಸಾಧಿಸುವಂಥಾದ್ದು.

aa. ಇದು ಪ್ರತಿಯಾತ್ಮದಲ್ಲಿರುವದರಿಂದ ಅನಂತವಾಗಿದೆ.

bb. ಪರಮಾಣು ರೂಪವಾಗಿ ನಿತ್ಯವಾಗಿದೆ.

II. ೨೪ ಗುಣಗಳು: (Quality;)

1. ರೂಪ (colour): ಕಣ್ಣು ಮಾತ್ರ ಗ್ರಹಿಸುವಂಥಾದ್ದು. ಪೃಥ್ವಿ ಜಲ ತೇಜಗಳಲ್ಲಿ ಅದೆ.
2. ರಸ (savour); ರಸನ ಗ್ರಹಿಸುವಂಥಾದ್ದು; ಪೃಥಿವಿ ಜಲಗಳಲ್ಲಿ ಅದೆ.
3. ಗಂಧ (odour); ಘ್ರಾಣಗ್ರಹಿಸುವಂಥಾದ್ದು; ಪೃಥಿವಿಯಲ್ಲಿಮಾತ್ರವದೆ
4. ಸ್ಪರ್ಶ (tangibility;) ತ್ವಕ್ ಮಾತ್ರ ಗ್ರಹಿಸುವಂಥಾದ್ದು; ಪೃಥಿವಿ, ನೀರು, ತೇಜ, ವಾಯುಗಳಲ್ಲಿ ಅದೆ. ಈ ನಾಲ್ಕು ಗುಣಗಳು ಪರಮಾಣು ರೂಪವಾದವುಗಳಲ್ಲಿ ಇದ್ದರೆ, ನಿತ್ಯವಾಗಿವೆ. ಕಾರ್ಯ ರೂಪವಾದವುಗಳಲ್ಲಿ ಇದ್ದರೆ ಅನಿತ್ಯವಾಗಿವೆ.
5. ಸಂಖ್ಯಾ (number); ಏಕತ್ವಾದಿ ವ್ಯವಹಾರಕ್ಕೆ ಕಾರಣ; ನವದ್ರವ್ಯಗಳಲ್ಲಿ ಅದೆ. ಏಕತ್ವ ಆ ಮೊದಲು ೪ ಗುಣಗಳಂತೆ ನಿತ್ಯ ಅಥವಾ ಅನಿತ್ಯ. ಆದರೆ ದ್ವಿತ್ವ ಮುಂತಾದ್ದು ಯಾವಾಗಲೂ

ಅನಿತ್ಯ. ಉದ: ಎರಡು ತಟಕುಗಳು ಕೂಡಿ ಬಂದಾಗ ಬಹುದು.

6. ಪರಿಪೂರ್ಣ (measure;) ಸರ್ವದ್ರವ್ಯಗಳಲ್ಲಿ ಅದೆ. ಅದು ಅಣು ಮಹತ್ ದೀರ್ಘ ಹ್ರಸ್ವ ಎಂದು ಚತುರ್ವಿಧ.

7. ಪೃಥಕ್ತ್ವ (severalty;) ಸರ್ವದ್ರವ್ಯಗಳೊಳಗೂದು; ಬೇರೆ ಬೇರೆ ಇರುವಂಥಾದ್ದು.

8. ಸಂಯೋಗ (conjunction;) ಸರ್ವದ್ರವ್ಯಗಳಲ್ಲಿ ಅದೆ.

9. ವಿಭಾಗ (disjunction:) ಸರ್ವದ್ರವ್ಯಗಳಲ್ಲಿ ಅದೆ; ಅಗಲಿರುವಂಥಾದ್ದು.

10. ಪರತ್ವ (priority;)
11. ಅಪರತ್ವ (posteriority;) } ಆ ನಾಲ್ಕು ಮೊದಲಿನ ಗುಣಗಳಲ್ಲಿಯೂ ಮನಸಿನಲ್ಲಿಯೂ ಅದೆ.

12. ಗುರುತ್ವ (weight;) ಬೀಳೋದಕ್ಕೆ ಅಸಮುವಾಯಿ ಕಾರಣವಾಗಿದೆ. ಪೃಥಿವಿ ಜಲಗಳಲ್ಲಿ ಅದೆ.

13. ದ್ರವತ್ವ (fluidity;) ಪೃಥಿವಿ ನೀರು ತೇಜಗಳಲ್ಲಿ ಅದೆ; ಅದು ದ್ವಿವಿಧ:

a. ಸಾಂಸಿದ್ಧಿಕ (ನೀರಿನಲ್ಲಿ) (natural;)

b. ನೈಮಿತ್ತಿಕ (adscititious;) ಮಣ್ಣು ಬೆಣ್ಣೆ ಮುಂತಾದ್ದಕ್ಕೆ ಅಗ್ನಿ ಸಂಯೋಗದಿಂದ ದ್ರವತ್ವ ಬರುತ್ತದೆ.

14. ಸ್ನೇಹ (viscidity:) ಚೂರ್ಣಾದಿ ಪಿಂಡವಾಗುವಂಥಾದ್ದು; ನೀರಿನಲ್ಲಿದೆ.

15. ಶಬ್ದ (sound;) ಶ್ರೋತ್ರಗ್ರಹಿಸುವಂಥಾದ್ದು; ಆಕಾಶದಲ್ಲಿ ಮಾತ್ರವದೆ ಅದು ದ್ವಿವಿಧ:

a. ಧ್ವನ್ಯಾತ್ಮಕ inarticulate:) ಭೇರಿಯ ಧ್ವನಿ ಮೊದಲಾದದ್ದು.

b. ವರ್ಣಾತ್ಮಕ (articulate ;) ಭಾಷಾರೂಪವಾದದ್ದು.

16. ಬುದ್ಧಿ (understanding) ಸರ್ವವ್ಯವಹಾರಕ್ಕೆ ಕಾರಣವಾದ ಜ್ಞಾನ; ದೇವರಲ್ಲಿ ನಿತ್ಯ, ಜೀವದಲ್ಲಿ ಅನಿತ್ಯ. ಇದು ದ್ವಿವಿಧ:

a. ಅನುಭವ (notion ;) ಇದು ದ್ವಿವಿಧ:

a a. ಯಥಾರ್ಥ ಅನುಭವ (right notion ;) (ಬೆಳ್ಳಿಗೆ ಬೆಳ್ಳಿ ಯೆಂಬವರೆ.)

ಅ—ಕಾರಣ ನಿರ್ಣಯ.

ಅ ಅ—ಕಾರ್ಯ. (effect ;) (ಮುಂಚೆ ಇಲ್ಲದ್ದು ಆದರೆ)

ಬ ಬ—ಕರಣ (instrumental cause) ಅಸಾಧಾರಣ ಕಾರಣ.

ಚ ಚ—ಕಾರಣ (cause ;) ಇದು ತ್ರಿವಿಧ:

1. ಸಮವಾಯಿಕಾರಣ (material, substantial cause ;) ಎಳೆಗಳು ಅರಿವೆಯು ಸಮವಾಯಿ ಕಾರಣ.

2. ಅಸಮವಾಯಿಕಾರಣ : (efficient, non substantial cause) ಎಳೆಗಳನ್ನು ಕೂಡಿಸಿ ನೇಯುವದು.

3. ನಿಮಿತ್ತಕಾರಣ : (instrumental cause) ಮಗ್ಗ ಅರಿವೆಯ ನಿಮಿತ್ತ ಕಾರಣ.

ಈ ಮೂರು ಕಾರಣಗಳು ಅಸಾಧಾರಣವಾದರೆ ಕರಣಸಹಾಪೆಂದನ್ನ ಬಹುದು. ಆದರೆ ದೇವರು ಕಾಲ ಮುಂತಾದದ್ದು ಕರಣವಲ್ಲ ಸಾಧಾರಣ ಕಾರಣಗಳೇ.

ಬ—ಯಥಾರ್ಥ ಅನುಭವ ಚತುರ್ವಿಧ:

ಅ ಅ—ಪ್ರತ್ಯಕ್ಷ: (perception) ಪ್ರತ್ಯಕ್ಷವೆಂಬ ಕರಣದಿಂದ ತಿಳಿಯುವಂಥಾದ್ದು ಇದು ದ್ವಿವಿಧ :

1. ನಿರ್ವಿಕಲ್ಪಕ (knowledge of a generic character, logical individual) ಉದ್ದ: ಇದು ಏನಾದರೂ ಒಂದು ಗುಣಹೇಳಲಿಕ್ಕೆ ಆಗದು,

2. ಸವಿಕಲ್ಪಕ (special knowledge;) ಉದ: ಇವನು ಬ್ರಾಹ್ಮಣ; ಇದು ಮರ್ತ್ಯರಿಗೆ ಸಂಬಂಧವಾದ ಜ್ಞಾನ.

೨ ಬ—ಅನುಮಿತಿ: (inference) ಇದರ ಕರಣ ಅನುಮಾನ, (induction)

ಅನುಮಿತಿಗೆ ೫ ಅವಯವಗಳು:

1. ಪ್ರತಿಜ್ಞೆ: (proposition) ಗುಡ್ಡ ಸುಡುತ್ತದೆ.
2. ಹೇತು: (reason) ಯಾಕಂದರೆ ಅದರಿಂದ ಹೊಗೆ ಬರುತ್ತದೆ.
3. ಉದಾಹರಣ: (example) ಒಲೆಯಲ್ಲಿರುವಂತೆ ಹೊಗೆ ಇರುವಲ್ಲಿ ಬೆಂಕಿ ಅದೆ.
4. ಉಪನಯ: (application) ಗುಡ್ಡದಿಂದ ಹೊಗೆ ಬರುತ್ತದೆ.
5. ನಿಗಮನ: (conclusion) ಅದರಿಂದ ಗುಡ್ಡ ಸುಡುತ್ತದೆ.

ಒಲೆಯಲ್ಲಿರುವಂತೆ ಹೊಗೆ ಇರುವಲ್ಲಿ ಬೆಂಕಿ ಅದೆ ಎಂಬಂತೆ ಉದಾಹರಣ ಮಾಡಿದರೆ, ಸುಡುವ ಗುಡ್ಡ ಎಂಬ ಪಕ್ಷ ಹಿಡಿದಿರುವದರಿಂದ, ಉದಾಹರಣ ಸಪಕ್ಷವೆಂದೆನಿಸುವದು, ಕೆರೆಯಲ್ಲಿರುವಂತೆ, ಬೆಂಕಿ ಇಲ್ಲದಲ್ಲಿ ಹೊಗೆ ಇಲ್ಲ ಎಂಬಂತೆ ಉದಾಹರಣ ಮಾಡಿದರೆ, ಸುಡುವ ಗುಡ್ಡ ಎಂಬ ಪಕ್ಷಕ್ಕೆ ವಿರುದ್ಧವಾಗಿರುವದರಿಂದ, ಅದು ವಿಪಕ್ಷವೆಂದೆನಿಸುವದು ಬಂದು ಲಿಂಗ ಪರಾಮರ್ಶಿಸುವದೆ ಅನುಮಾನ.

ಅನುಮಿತಿಯಲ್ಲಿಯ ಎರಡನೆ ಅವಯವವಾದ ಹೇತು ನೆಟ್ಟಗೆ ಇಲ್ಲದಿದ್ದರೆ ಅದು ಹೇತ್ವಾಭಾಸವೆಂದೆನಿಸುವದು. (semblance of a reason) ಇದು ಪಂಚವಿಧ:

1. ತಪ್ಪಿ ಹೋಗುವಂಥಾ ಹೇತು: ಸವ್ಯಭಿಚಾರ (which goes astray) ಗುಡ್ಡ ಸುಡುತ್ತದೆ ಯಾಕಂದರೆ ಗುಡ್ಡ ತೋರಬರುತ್ತದೆ—ಕೆರೆ ಸಹಾ ತೋರ ಬರುತ್ತದೆ.
2. ವಿರುದ್ಧವಾದ ಹೇತು (the reverse) ಶಬ್ದ ನಿರ್ಮಾಣವಾದ ಕಾರಣ ಅದು ನಿತ್ಯ ನಿರ್ಮಾಣವಾದದ್ದೇ ಅನಿತ್ಯ.
3. ಸತ್ಪ್ರತಿಪಕ್ಷವಾದ ಹೇತು (counter balanced reason:) ಶಬ್ದ ನಿತ್ಯ, ಯಾಕಂದರೆ ಅದು ಕೇಳಿಸುತ್ತದೆ. ಈ ಹೇತು ಶಬ್ದ ಅನಿತ್ಯ

ವೆಂದು ಸಹಾ ತೋರಿಸುವದು: ಯಾಕಂದರೆ ಅದು ಕೇಳಿಸುವವರಿಂದ, ಒಂದು ಕಾರ್ಯವಾಗಿರುವದು.

4. ಅಸಿದ್ಧ ಹೇತು (unreal reason) ಗಗನಾರವಿಂದ ಸುರಭಿಯುಳ್ಳದ್ದು ಯಾಕಂದರೆ ಅದು ಸರೋವರದ ಅರವಿಂದದಂತೆ ಅದೆ—ಆದರೆ ಗಗನದಲ್ಲಿ ಅರವಿಂದ ಇಲ್ಲವೆ ಇಲ್ಲ.

5. ಬಾಧಿತಹೇತ್ವಾಭಾಸ (futile) ದ್ರವ್ಯವಾಗಿರುವದರಿಂದ ಬೆಂಕಿ ಅನುಷ್ಣ—ಆದರೆ ಸ್ಪರ್ಶದಿಂದ ಬೆಂಕಿ ಉಷ್ಣವೆಂದು ತೋರುತ್ತದೆ.

೩ ರ—ಉಪಮಿತಿ (inference from similarity;) ಇದರ ಕರಣ ಉಪಮಾನ. ಕಾಡ ಕೋಣನನ್ನು ಕಾಣದ ಒಬ್ಬನು ಅದು ಕೋಣನಂತೆ ಅದೆ ಎಂದು ಕೇಳಿದ ಮೇಲೆ, ಅಡವಿಯಲ್ಲಿ ಸಂಚರಿಸುತ್ತಿರುವಾಗ್ಯೆ ಕೋಣಸಂಥಾ ಮೃಗವನ್ನು ನೋಡಿ, ಮುಂಚೆ ಕೇಳಿದ್ದನ್ನು ನೆನಪಿಗೆ ತಂದು, ಇದು ಕಾಡಕೋಣನೆಂದು ನಿರ್ಣಯಿಸುತ್ತಾನೆ.

೪ ದ—ಶಾಬ್ದ: (authoritative assertion, testimony;) ಉದ; ದೇವರು ಲೋಕ ನಿರ್ಮಿಸಿದನು: ಇದಕ್ಕೆ ಶಬ್ದ ಕರಣ; ವಾಕ್ಯಾರ್ಥ ತಿಳಿಯ ಬೇಕಾದರೆ, ಮೂರು ಇರಬೇಕು.

1. ಆಕಾಂಕ್ಷೆ (expectancy) ಉದ! ಆಕಳ ಕುದುರೆ ಮನುಷ್ಯರು ಆನೆ ಎಂಬ ವಾಕ್ಯ ತಿಳಿಯಲಾಗದು: ಯಾಕಂದರೆ ಪದಗಳು ಒಂದಕ್ಕೊಂದು ಅನುಸಾರವಾಗಿರುವದಿಲ್ಲ.

   ಉದ: ದೇವದತ್ತ ಗ್ರಾಮಕ್ಕೆ ಹೋಗುತ್ತಾನೆಂಬ ವಾಕ್ಯಕ್ಕೆ ಆಕಾಂಕ್ಷೆ ಉಂಟು.

2. ಯೋಗ್ಯತೆ: (compatibility) ಬೆಂಕೆಯಿಂದ ತಳ್ಳಿ ಹಾಕು ಎಂಬ ವಾಕ್ಯಕ್ಕೆ ಆಕಾಂಕ್ಷೆ ಇದ್ದರೂ, ಯೋಗ್ಯತೆ ಇಲ್ಲದ ಕಾರಣ, ಪ್ರಮಾಣ ವಾಕ್ಯವಲ್ಲ. (ನೀರಿನಿಂದ ತಳ್ಳಿ ಹಾಕು.)

3. ಸನ್ನಿಧಿ: (juxtaposition) ತಡವಿಲ್ಲದೆ ಪದಗಳನ್ನು ಉಚ್ಚರಿಸುವದು: ವಾಕ್ಯ ಎರಡು ಪ್ರಕಾರ ವಾಗೆದೆ.

1. ವೈದಿಕ: ದೇವರು ನುಡಿದದ್ದು.

2. ಲೌಕಿಕ: ಆಪ್ತೋಕ್ತನಾದರೆ, ಪ್ರಮಾಣ.

b b. ಅಯಥಾರ್ಥಾನುಭವ: (incorrect notions) ಇದು ತ್ರಿವಿಧ:

ಅ—ಸಂಶಯ: ಕಂಬವ್ರೋ ಪುರುಷನೋ? (doubt)

ಬ—ವಿಪರ್ಯಯ: ಶುಕ್ತಿಯಲ್ಲಿ ಬೆಳ್ಳಿ ಎಂಬುವದು? (mistake)

ಕ—ತರ್ಕ: (reductio ad absurdum) ಗುಡ್ಡ ಸುಡುತ್ತದೆಂಬದಕ್ಕೆ ಅಲ್ಲ ಅನ್ನುವವನಿಗೆ ಬೆಂಕಿಇಲ್ಲದಿದ್ದರೆ,ಹೊಗೆ ಅಲ್ಲವೆಂದು ಹೇಳುವದು

b. ಸ್ಮೃತಿ: (memory)

17. ಸುಖ: (pleasure)

18. ದುಃಖ: (pain)

19. ಇಚ್ಛೆ, ದೇವರಲ್ಲಿ ನಿತ್ಯ, ಜೀವದಲ್ಲಿ ಅನಿತ್ಯ. (desire)

20. ದ್ವೇಷ. (aversion)

21. ಪ್ರಯತ್ನ: (effort) ದೇವರಲ್ಲಿ ನಿತ್ಯ, ಜೀವದಲ್ಲಿ ಅನಿತ್ಯ.

22. ಧರ್ಮ: (merit)

23. ಅಧರ್ಮ (demerit)

ಬುದ್ಧಿ ವೊದಲಾದ ಈ ೮ ಗುಣಗಳು ಆತ್ಮಮಾತ್ರದ ವಿಶೇಷ ಗುಣಗಳು;

24. ಸಂಸ್ಕಾರ: (self-reproductive quality) ಇದು ತ್ರಿವಿಧ:

a. ವೇಗ: (momentum) ಪೃಥುವ್ಯಾದಿ ಚತುಷ್ಟಯದಲ್ಲಿಯೂ ಮನದಲ್ಲಿಯೂ ಅದೆ.

b. ಭಾವನೆ: (imagination) ಆತ್ಮಮಾತ್ರದಲ್ಲಿ ಅದೆ.

c. ಸ್ಥಿತಿಸ್ಥಾಪಕ: (elasticity)

III. ಕರ್ಮ: (action) ಪೃಥಿವ್ಯಾದಿ ಚತುಷ್ಟಯದಲ್ಲಿಯೂ ಮನಸಿನಲ್ಲಿಯೂ ಅದೆ.

1. ಉತ್ಕ್ಷೇಪಣ : (casting upward)
2. ಅಪಕ್ಷೇಪಣ : (casting downward)
3. ಆಕುಂಚನ : (contraction)
4. ಪ್ರಸಾರಣ : (dilatation)
5. ಗಮನ : (going)

IV. ಸಾಮಾನ್ಯ : (community, genus) ದ್ರವ್ಯಗುಣಕರ್ಮಗಳಲ್ಲಿ ಅದೆ. ಇದು ದ್ವಿವಿಧ

1. ಪರ : (higher, genus) ಇರುವಿಕೆ ಇದು ಪರ
2. ಅಪರ (lower, species) ಜಾತಿ ದ್ರವ್ಯತ್ವಾದಿ

V. ವಿಶೇಷ : (difference) ನಿತ್ಯದ್ರವ್ಯಗಳಲ್ಲಿ (ಮನಸು ಕಾಲ ಸ್ಥಾನಾದಿಗಳಲ್ಲಿ) ವಿಶೇಷಿಸುತ್ತದೆ.

VI. ಸಮಯ : (intimate relation, co-inherence) ನಿತ್ಯಸಂಬಂಧ. ನೂಲಿಗೂ ಅದರಿಂದ ಹುಟ್ಟಿದ ಅರಿವಿಗೂ ದೇಹಕ್ಕೂ ಅದರ ಅವಯವಗಳಿಗೂ ಸಮವಾಯ ಉಂಟು.

VII. ಅಭಾವ : (non-existence) ಇದು ಚತುರ್ವಿಧ :

1. ಪ್ರಾಗಭಾವ : (antecedent non-existence) ಉದ: ಕೊಡ ಹುಟ್ಟದೆ ಇದ್ದದ್ದು.
2. ಪ್ರಧ್ವಂಸ : (destruction) ಉದ: ಕೊಡ ಹುಟ್ಟಿ ಕೆಟ್ಟದ್ದು.
3. ಅತ್ಯಂತಾಭಾವ: (absolute non-existence ಉದ: ಕೊಡನೆಲದಲ್ಲಿಲ್ಲ.
4. ಅನ್ಯೋನ್ಯಭಾವ: (mutual non-existence) ಉದ: ಕೊಡ ಅರಿವಿ ಆಗುವದಿಲ್ಲ. ಘಟಕ್ಕೂ ಪಟಕ್ಕೂ ಅನ್ಯೋನ್ಯಭಾವ: (difference)


ಕಣಾದಮುನಿ ವಿಶೇಷವನ್ನು ಒಂದು ಪದಾರ್ಥ ಮಾಡಿದದರಿಂದ, ಅವನು ರಚಿಸಿದ ದರ್ಶನಕ್ಕೆ "ವೈಶೇಷಿಕ: ಎಂಬ ಹೆಸರು ಬಂತು.

ಈಗ ಇರುವಂಥಾ ವಿಶ್ವ ಹುಟ್ಟುವ ಮುಂಚೆ, ನವದ್ರವ್ಯಗಳ ಪರಮಾಣುಗಳು ಮಾತ್ರ ಇದ್ದವು. ಜೀವಾತ್ಮಗಳು ತಮ್ಮನ್ನು ತಾವೆ ಅರಿಯದೆ ಇದ್ದವು. ಪರಮಾತ್ಮ ನಿತ್ಯವಾದ ಪರಮಾಣುಗಳನ್ನು, ಈಗಿನ ವಿಶ್ವ ಹುಟ್ಟುವಂತೆ, ರೂಪಿಸಿದನು. ಪರಮಾಣು ರೂಪದಿಂದಿದ್ದ ಮನವನ್ನು ಜೀವಾತ್ಮಗಳಿಗೆ ಕೂಡಿಸಿ, ಈಗ ಇರುವಂತೆ, ಮಾಡಿದನು. ಕುಂಬಾರ ಮಣ್ಣಿನಿಂದ ಗಡಿಗೆ ಮಾಡುವ ಪ್ರಕಾರ, ಪರಮಾತ್ಮ ಈ ವಿಶ್ವ ಪರಮಾಣುಗಳ ಸಾಹಿತ್ಯದಿಂದ ನಿರ್ಮಿಸಿದನು. ಈ ದರ್ಶನದಲ್ಲಿ ವಿವರಿಸಿದ್ದನ್ನು ವಿಚಾರಿಸುತ್ತಿದ್ದರೆ, ಅಪ್ರವೃತ್ತಿ ಹೋಗಿ ಅಪವರ್ಗವಾಗುವದು.

C. ವೇದಾಂತ ಲಕ್ಷಣ.

1. ಈ ದರ್ಶನದ ಬೋಧನೆ ಮೊದಲು ವೇದಗಳ ಬ್ರಾಹ್ಮಣಗಳಲ್ಲಿಯೂ ಉಪನಿಷದಗಳಲ್ಲಿಯೂ ಇಲ್ಲಿ ಅಲ್ಲಿ ಸ್ವಲ್ಪ ಅದೆ. ಆದರೆ ವೇದವ್ಯಾಸ ತಾನು ಬರೆದ ಸೂತ್ರಗಳಲ್ಲಿ ಅದನ್ನು ವಿಸ್ತಾರವಾಗಿ ಕ್ರಮದಿಂದ ವಿವರಿಸಿದನು. ಕಡೆಗೆ ೧೧೦೦ ವರುಷಗಳ ಹಿಂದೆ ಇದ್ದ ಶಂಕರಾಚಾರ್ಯನು ಬೇರೆ ಬೇರೆ ವ್ಯಾಖ್ಯಾನಗಳನ್ನು ಬರೆದು ಅದನ್ನು ಸಂಪೂರ್ಣ ಮಾಡಿದನು.

2. ದೇವರು ಮಾತ್ರ ಇದ್ದಾನೆ; ಉಳಿದದ್ದೆಲ್ಲಾ ಮಾಯಾಕೃತ; ಆತನು ಜ್ಞಾನ ಸ್ವರೂಪ, ಅಥವಾ ಆನಂದ ಸ್ವರೂಪ, ಅಥವಾ ಬರೆ ತೇಜ. ತಾನು ಬೇರೆ ಇರುತ್ತಾನೆಂಬ ಮಾಯಾಭಾವ ಅವನಲ್ಲಿ ಹುಟ್ಟಿದದರಿಂದ, ಈ ವಿಶ್ವ ಉತ್ಪತ್ತಿಯಾಯಿತು. ಹೀಗೆ ತಾನು ಬೇರೆ, ಲೋಕ ಬೇರೆ ಎಂಬಂತೆ, ದ್ವೈತಭಾವವಾದದ್ದೇ ಪಾಪ. ದೇವರೆ ಮಾತ್ರ ವಸ್ತು ಉಳಿದದ್ದೆಲ್ಲಾ ಅವಸ್ತು ಎಂಬುವಂತೆ ಈ ದರ್ಶನ ಹೇಳುವದರಿಂದ, ಅದಕ್ಕೆ ಅದ್ವೈತ ಮತ ಎಂಬ ಹೆಸರು ಸಹಾ ಬಂತು. ವೇದಾಂತ ಬೋಧನೆಯ ಸಂಕ್ಷೇಪವನ್ನು ಮುಂದೆ ಬರೆದಿರುವ ಚಿತ್ರದಲ್ಲಿ ತೋರಿಸಿದ್ದೇವೆ



1. ಸ್ಥೂಲ ಶರೀರ ; ದೇವರು ಅವನ್ನು ಹೊತ್ತು ಕೊಂಡವದರಿಂದ, ಹೀಗೆ ಅನ್ನಿಸುತ್ತದೆ. ಇದು ದೇವರನ್ನು ಕೋಶದ ಹಾಗೆ ಮರೆ ಮಾಡುವದರಿಂದ ಕೋಶವೆಂದೆನ್ನಿಸುತ್ತದೆ. ಈ ಸ್ಥೂಲ ಶರೀರ (ದೃಶ್ಯವಾದಲೋಕ) ಅನ್ನದಿಂದ ಪೋಷಣೆ ಆಗುವ ಕಾರಣ, ಅನ್ನಮಯಕೋಶವೆಂದೆನಿಸುವದು.

ಅ—ಇದಕ್ಕೆ ಜಾಗ್ರದವಸ್ಥೆ.

ಬ—ಇದರಲ್ಲಿ ಪ್ರಜ್ವಲಿಸಿರುವ ನಿತ್ಯತೇಜ ಸ್ವರೂಪವಾದ ಆತ್ಮ.

ಅಅ—ಸಮಷ್ಟಿಯಲ್ಲಿ ವಿಶ್ವನರನೆಂದು (ವಿಶ್ವದಲ್ಲಿ ವ್ಯಾಪಕನಾಗಿರುವ ಮನುಷ್ಯ)

ಬಬ—ವ್ಯಷ್ಟಿಯಲ್ಲಿ ವಿಶ್ವವೆಂದು ತೋರುತ್ತಾನೆ. ವಿಶ್ವದಲ್ಲಿಯ ಸ್ಥೂಲಶರೀರಗಳು ನಾಲ್ಕು ಪ್ರಕಾರವಾಗಿವೆ.

ಅಅಅ—ಪಿಂಡಜ, ಮನುಷ್ಯ ಪಶು ಮುಂತಾದವು.

ಬಬಬ—ಅಂಡಜ, ಪಕ್ಷಿಗಳು ಮುಂತಾದ್ದು.

ಚಚಚ—ಸ್ವೇದಜ, ಹೇನುಗಳು ಮುಂತಾದವು.

ದದದ—ಉದ್ಭಿಜ, ಮೊಳಕೆಯಿಂದ ಹುಟ್ಟುವ ಸಸಿಯಾದಿಗಳು.

ಸತ್ವರಜ ತಮ ಎಂಬ ತ್ರಿಗುಣವುಳ್ಳಂಥಾ ಭಾವರೂಪವಾದಂಥಾ ಅಜ್ಞಾನ ಎರಡು ಪ್ರಕಾರವಾಗಿದೆ : ಹ್ಯಾಗೆಂದರೆ : 1. ಸಮಷ್ಟಿ=ಅಜ್ಞಾನದ ಒಟ್ಟು 2. ವ್ಯಷ್ಟಿ=ಅಜ್ಞಾನದ ಪ್ರತ್ಯೇಕತ್ವ. ಗಿಡಗಳು ಎಂಬ ಬಹುವಚನಕ್ಕೆ (ವ್ಯಷ್ಟಿಗೆ) ವನವೆಂಬ ಏಕ ವಚನ ಬಂದರೆ ಸಮಷ್ಟಿಯಾಯಿತು. ವನಕ್ಕೂ ಅದರಲ್ಲಿಯ ಗಿಡಗಳಿಗೂ ಹೆಚ್ಚು ಕಡಮೆ ಇಲ್ಲ. ವನದಲ್ಲಿ ಸುಳಿಯುವ ಗಾಳಿಗೂ (ಪರಮಾತ್ಮನಿಗೂ) ಗಿಡಗಳಲ್ಲಿ ಸುಳಿಯುವ ಗಾಳಿಗೂ (ಮನುಷ್ಯರಲ್ಲಿರುವ ಆತ್ಮಕ್ಕೂ) ಹೆಚ್ಚು ಕಡಮೆ ಇಲ್ಲ. ವನದಲ್ಲಿ ಮಾತ್ರವಲ್ಲ, ಎಲ್ಲಾ ವ್ಯಾಪಿಸುವಂಥಾ ಎಲ್ಲೆಲ್ಲಿರುವಂಥಾ ಗಾಳಿ =ಆಧಾರ ಭೂತವಾದಂಥಾ ಅನುಪಹಿತವಾದಂಥಾ ಚೈತನ್ಯ. ಈ ಅಜ್ಞಾನಕ್ಕೆ ಎರಡು ಶಕ್ತಿಗಳುಂಟು : 1. ಆವರಣ ಶಕ್ತಿ ; ಇನ್ನು ಒಂದು ಹಗ್ಗ, ಹಗ್ಗವೆಂದು ತಿಳಿಯದಂತೆ. ಮರೆ ಮಾಡುವಂಥಾದ್ದು ; 2. ವಿಕ್ಷೇಪಶಕ್ತಿ; ಇದು ಹಗ್ಗವೆಂದು ತಿಳಿಯಗೊಡದೆ, ಹಗ್ಗಕ್ಕೆ ಸರ್ಪ ಎಂಬ ಸಂಭಾವನವ ಹುಟ್ಟಿಸುವಂಥಾದ್ದು.

2. ದೇವರ ಸೂಕ್ಷ್ಮ ಶರೀರ ಇದು ಮುಂದೆ ಬರೆದಿರುವ ಮೂರು ಕೋಶಗಳು ಕೂಡಿ ವ್ಯವಹರಿಸುವಂಥಾದ್ದು.

ಅ—ಪ್ರಾಣಮಯ ಕೋಶ; ಇದು ಕ್ರಿಯಾಶಕ್ತಿಯುಳ್ಳದ್ದು ಅಥವಾ ಕ್ರಿಯಾತ್ಮಕ ; ಕಾರ್ಯರೂಪವಾಗಿರುತ್ತದೆ.

ಅಅ—ಪಂಚವಾಯುಗಳು (vital airs)

ಅಅಅ—ಪ್ರಾಣವಾಯು, ಉಸುರು ಬಿಡುವದು. (respiration)

ಬಬಬ—ಅಪಾನವಾಯು, ಉಸುರು ತಕ್ಕೊಳ್ಳುವದು. (inspiration, flatulence)

ಚಚಚ—ಸಮಾನವಾಯು, ಜೀರ್ಣ ಮಾಡುವಂಥಾದ್ದು. (digestion)

ದದದ—ಉದಾನವಾಯು, ಧ್ವನಿ ಉತ್ಪನ್ನ ಮಾಡುವಂಥಾದ್ದು. (pulsation)

ಎಎಎ—ವ್ಯಾನವಾಯು, ದೇಹದಲ್ಲಿ ರಕ್ತ ತಿರಿಗಿಸುವಂಥಾದ್ದು. (circulation of the blood)

ಬಬ—ಪಂಚಕರ್ಮೇಂದ್ರಿಯಗಳು. (ನೋಡು ಸಾಂಖ್ಯಲಕ್ಷಣ.) ಈ ಹತ್ತು ಕೂಡಿ ಪ್ರಾಣಮಯಕೋಶವಾಯಿತು.

ಬ—ಮನೋಮಯಕೋಶ ಸಂಕಲ್ಪ ವಿಕಲ್ಪ ಮಾಡುವಂಥಾ ಅಂತಃಕರಣವೃತ್ತಿಯಾಗಿರುವ ಮನಸೂ ಪಂಚ ಕರ್ಮೇಂದ್ರಿಯಗಳೂ ಕೂಡಿಸುವದೇ. ಇದು ಇಚ್ಛಾಶಕ್ತಿಯುಳ್ಳದ್ದು ; ಕರಣರೂಪವಾಗಿರುತ್ತದೆ.

ಚ—ವಿಜ್ಞಾನಮಯಕೋಶ ನಿಶ್ಚಯಮಾಡುವಂಥಾ ಅಂತಃಕರಣ ವೃತ್ತಿಯಾಗಿರುವ ಬುದ್ಧಿಯೂ ಪಂಚಜ್ಞಾನೇದ್ರಿಯಗಳೂ ಕೂಡಿ ವ್ಯವಹರಿಸುವದೆ. ಇದು ಜ್ಞಾನಶಕ್ತಿಯುಳ್ಳದು; ಕರ್ತೃರೂಪವಾಗಿರುತ್ತದೆ.

ಜ್ಞಾನೇಂದ್ರಿಯಗಳು ತಮ ತಮಗೆ ಸಂಬಂಧವಾದ ವಿಷಯಗಳನ್ನು ಗ್ರಹಿಸಿ ಇಛ್ಛಾದ್ವೇಷಗಳನ್ನು ಮನಸಿನಲ್ಲಿ ಹುಟ್ಟಿಸುವವು. ಇದು ವಿಜ್ಞಾನಮಯ ಕೋಶಕ್ಕೆ ಸಂಬಂಧವಾದ ವ್ಯವಹಾರ. ಆ ಮೇಲೆ ಮನಸಿನಲ್ಲಿ ಬೇಕು ಅಥವಾ ಬೇಡ ಎಂಬ ಹಾಗೆ ನಿರ್ಣಯವಾಗಿ ಕರ್ಮೇಂದ್ರಿಯಗಳಿಂದ ನಡಿಸುವದು, ಮನೋಮಯ ಕೋಶಕ್ಕೆ ಅನುಸಾರವಾದ ವ್ಯವಹಾರ. ಪ್ರಾಣಮಯ ಕೋಶಕ್ಕೆ ಸಂಬಂಧವಾದ ವ್ಯವಹಾರಗಳು ಮನಸಿನ ನಿರ್ಣಯದಿಂದಲ್ಲ, ತಮ್ಮಿಷ್ಟಕ್ಕೆ ಆಗುವಂಥಾವು.

ದ—ಈ ಮೂರು ಕೋಶಗಳಿಂದ ಪ್ರಜ್ವಲಿಸಿರುವ ಆತ್ಮ.

ಅಅ—ಸಮಷ್ಟಿಯಲ್ಲಿ ಸೂತ್ರಾತ್ಮವೆಂದು ಪ್ರಾಣವೆಂದು.

ಬಬ—ವ್ಯಷ್ಟಿಯಲ್ಲಿ ತೇಜಸ್ಸೆಂದು ತೋರುವದು.

ಎ—ಈ ಸೂಕ್ಷ್ಮದೇಹಕ್ಕೆ ಸ್ವಪ್ನಾವಸ್ಥೆ.

3. ಕಾರಣ ಶರೀರ ; ಇದರಲ್ಲಿ ದೇವರು ಆನಂದ ಅನುಭವಿಸುವದರಿಂದ, ಇದು ಆನಂದಮಯ ಕೋಶವೆಂದೆನ್ನಿಸುವದು.

ಅ—ಇದಕ್ಕೆ ಸುಷ್ಪ್ತ್ಯವಸ್ಥೆ.

ಬ—ಇದರಲ್ಲಿ ಪ್ರಜ್ವಲಿಸಿರುವ ಆತ್ಮ :

ಅಅ—ಸಮಷ್ಟಿಯಲ್ಲಿ ಈಶ್ವರನೆಂದು

ಬಬ—ವ್ಯಷ್ಟಿಯಲ್ಲಿ ಪ್ರಾಜ್ಞನೆಂದು ತೋರುವದು.

4. ನಿಜತೇಜಸ್ಸ್ವರೂಪವಾದ ಆತ್ಮ ; ಅದು ತುರ್ಯಾವಸ್ಥೆಯಲ್ಲಿ ಅಂದರೆ ಎಚ್ಚರಿಕೆ ಅರವು ಏನಿಲ್ಲದಂಥಾ ಸುಷುಪ್ತಿಯಲ್ಲಿರುವಂಥಾದ್ದು.

ಹೀಗಾದ ಮೇಲೆ ತತ್ವಂ ಅಸಿ (ಅದೇ ನೀನು) ಎಂಬ ಮಹಾ ವಾಕ್ಯವನ್ನು ತಿಳಿಯ ಬೇಕು. ತತ್ಪದದ (ಅಭಿಪ್ರಾಯವು=ಎಲ್ಲಾದರ ಸಮಷ್ಟಿ. ಇದರ ಲಕ್ಷ್ಯಾರ್ಥ ಯಾವದಂದರೆ : ಅಜ್ಞಾನದಲ್ಲಿ ಮುಳುಗಿದ ಚೈತನ್ಯಕ್ಕೆ ಆಧಾರ ಭೂತವಾದ ಅನುಪಹಿತವಾದ ಚೈತನ್ಯವೇ. ತ್ವಂಪದದ ಅಭಿಪ್ರಾಯವು=ಎಲ್ಲಾದರ ವ್ಯಷ್ಟಿ, ಇದರ ಲಕ್ಷ್ಯಾರ್ಥ ಯಾವದಂದರೆ : ಅಜ್ಞಾನದ ವ್ಯಷ್ಟಿಯಲ್ಲಿ ಮುಳುಗಿದ ಚೈತನ್ಯಕ್ಕೆ ಆಧಾರಭೂತವಾದ ಅನುಪಹಿತವಾದ ಚೈತನ್ಯವೇ. ಕಣ್ಣಿಗೆ ಕಾಣುವಂಥಾದ್ದನ್ನು ವಿಚಾರಿಸಿ ನೋಡುವಾಗ, ಇದು ನಿತ್ಯವಲ್ಲ, ದೇವರನ್ನು ಮರೆಮಾಡುವ ಮುಸುಕಲ್ಲದೆ ಆತನ ನಿಜ ಸ್ವರೂಪವೇನಿಲ್ಲ ಎಂಬಂತೆ ತೋರುವದು. ಆದರೆ ಆ ಸ್ಥೂಲ ಶರೀರದ ವ್ಯವಹಾರಗಳಿಗಿಂತ ಸೂಕ್ಷ್ಮಶರೀರದ ವ್ಯವಹಾರಗಳು ಸೂಕ್ಷ್ಮವಾಗಿವೆ. ಆದಕಾರಣ ಇದೆ ವಸ್ತುವಾಗಿದ್ದೀತು ಎಂದು ನೆನಿಸಿ ವಿಚಾರ ಮಾ

ಹುತ್ತಾರೆ. ಮೊದಲಾಗಿ ಇದೂ ನಿತ್ಯವಲ್ಲ, ಇದೂ ದೇವರನ್ನು ಮರೆಮಾಡುವ ಮುಸುಕು ಎಂಬ ಹಾಗೆ ಕಾಣುವದು. ಆಮೇಲೆ ಇಷ್ಟಕ್ಕೆ ಕಾರಣವಾಗಿರುವಂಥಾದ್ದು ವಸ್ತುವಾಗಿದ್ದೀತು ಎಂಬ ಆಲೋಚನೆ ಹುಟ್ಟುವದು. ಇದನ್ನು ವಿಚಾರಿಸಲಿಕ್ಕೆ ಹೋದರೆ, ಇದು ಒಂದು ಮುಸುಕಂತೆ ತೋರುತ್ತದಲ್ಲದೆ, ನಿತ್ಯವೇನು ತೋರುವದಿಲ್ಲ. ಯಾಕಂದರೆ ವಸ್ತುವಿನ ವಿಷಯ ಏನೇನು ಹೇಳಲಿಕ್ಕೆ ಬಾರದು. ಕಾರಣವಾದಲ್ಲಿ ದ್ವೈತ ಬಂದ ಹಾಗಾಯಿತು, ಗುಣ ಬಂದ ಹಾಗಾಯಿತು. ಹೀಗಿರಲಾಗಿ ನಿರ್ಗುಣವಾದ ನಿಜ ತೇಜ ಸ್ವರೂಪವೆ ಮಾತ್ರ ವಸ್ತುವೆಂದು ತೋರುವದು. ಪರಬ್ರಹ್ಮ, ಚಿತ್ತವೃತ್ತಿ ಎಂಬ ಕನ್ನಡಿಯಲ್ಲಿ ನೋಡಿ ತನ್ನ ಮುಖದ ಪ್ರತಿ ಬಿಂಬವನ್ನು ಕಂಡು, ಇದು ತಾನು ಎಂದು ನೆನಸಿ ಪಂಚಕೋಶಗಳೆ ಮುಸುಕನ್ನು ಹಾಕಿಕೊಂಡ ಹಾಗಾಯಿತು. ಚಿತ್ತವೃತ್ತಿ ಎಂಬ ಕನ್ನಡಿ ತೆಗೆದರೆ, ಆ ಪ್ರತಿ ಬಿಂಬಕ್ಕೆ ಕಾರಣವಾದ ಪರಬ್ರಹ್ಮನ ಮುಖ ಮಾತ್ರ ಉಳಿಯುವದು.

ಈ ದರ್ಶನಗಳಲ್ಲಿ ತೋರುವ ದೋಷಗಳು.

1. ಸಾಧಾರಣವಾದ ದೋಷಗಳು.

ಅ—ಹದಿನಾಲ್ಕು ಲೋಕಗಳುಂಟು; ಸೂರ್ಯ ಪೃಥಿವಿಗೆ ಚಂದ್ರನಿಗಿಂತ ಸಮೀಪ; ಮಳೆ ಚಂದ್ರನಿಂದ ಬರುವದು, ಬಿದ್ದಮೇಲೆ ಅದು ತಿರಿಗಿ ಮಂಜಾಗಿ ಚಂದ್ರನ ಕಡೆಗೆ ಯೇರಿ ಹೋಗುವದು.

ಬ—ಮರಣದಲ್ಲಿ ಆತ್ಮ ಬ್ರಹ್ಮರಂಧ್ರದಿಂದ ಹೊರಟು ಹೋಗುವದು.

ಚ—ನಿದ್ರೆಯಲ್ಲಿ ಮನುಷ್ಯರ ಆತ್ಮ ಪರಬ್ರಹ್ಮವ ಕೂಡದು.

2. ದೊಡ್ಡ ದೋಷಗಳು.

ಅ—ದೇವರಿಲ್ಲವೆಂದು ಸಾಂಖ್ಯ ಬೋಧಿಸುವದು.

ಬ—ದೇವರೂ ವಿಶ್ವವೂ ಒಂದೇ ಎಂದು ವೇದಾಂತ ಬೋಧಿಸುವದು.

ಚ—ದೇವರೂ ಮನುಷ್ಯರ ಆತ್ಮವೂ ಒಂದೇ ಎಂದು ವೇದಾಂತ ಬೋಧಿಸುವದು.

ದ—ಮೂಲಪ್ರಕೃತಿ ನಿತ್ಯವೆಂದು ಸಾಂಖ್ಯ ಬೋಧಿಸುವದು.

ಎ—ದ್ರವ್ಯಪರಮಾಣು ರೂಪವಾಗಿ ನಿತ್ಯವೆಂದು ನ್ಯಾಯ ವೈಶೇಷಿಕ ಬೋಧಿಸುವದು.

ಪ—ಆತ್ಮ ಮನುಷ್ಯರದು ನಿತ್ಯವೆಂದು ನ್ಯಾಯಸಾಂಖ್ಯ ವೇದಾಂತ ಬೋಧಿಸುವದು.

ಗ—ಮೂರು ದರ್ಶನಗಳು ಬೋಧಿಸುವ ಜನ್ಮಾಂತರವು.

ಪ—ವೇದಾಂತ ಸಾಂಖ್ಯ ಬೋಧಿಸುವ ವಿಧಿ. ತಾವು ತಮಿಗೆ ಕಲ್ಪಿಸಿ ಕೊಂಡ ದೇವರುಗಳಾದರೂ ಬಂದು ಹೆಚ್ಚಿನ ಅಧಿಕಾರಕ್ಕೆ ಬಳ ಗಾಗಿದ್ಧಾರೆಂದು ನೋಡಿ ಆ ಅಧಿಕಾರ ನಿತ್ಯವಾದ ನಿಜವಾದ ದೇವ ರೇ ಎಂದು ತಿಳಿಯದೆ ಆತ್ಮನಿಗೆ ವಿಧಿ ಅಂದರು.

ಯು—ಮೂರು ದರ್ಶನಗಳಲ್ಲಿಯು ಪಾಪ ಪುಣ್ಯದ ವಿವರವು. ಈ ಸೂ ಕ್ಷ್ಮಸ್ಥೂಲ ದೇಹಗಳನ್ನು ಧರಿಸಿಕೊಂಡು ಹುಟ್ಟಿದ್ದೇ ಪಾಪ ದೇ ವರು ಮೊದಲು ಪಾಪದಲ್ಲಿ ಬಿದ್ದ ಹಾಗಾಯಿತು (ವೇದಾಂತ)

ಕ—ಅವು ವಿವರಿಸುವ ಪುರುಷಾರ್ಥ.

ಈ ದರ್ಶನಗಳನ್ನು ಮಾಡಿದವರು ಒಂದು ತರದ ರೋಗದಲ್ಲಿ ಬಿದ್ದಿದ್ದರು ಎಂದು ತೋ ರುತ್ತದೆ. ಆ ರೋಗಕ್ಕೆ ಒಳಗಾದವರು ಅಕಸ್ಮಾತ್ತಾಗಿ ಕರ್ಮೇಂದ್ರಿಯ ಜ್ಞಾನೇಂದ್ರಿಯ ಗಳ ವ್ಯವಹಾರಗಳು ನಿಂತ ಸ್ಥಿತಿಯಲ್ಲಿ ಸೇರುತ್ತಾರೆ. ಅವರನ್ನು ಹೊಡೆದರೂ, ಘಾಯ ಮಾಡಿದರೂ, ನೋವೇ ಇಲ್ಲ. ನಾಭಿ ಸ್ಥಾನದ ಮೇಲೆ ಒಂದು ಪುಸ್ತಕ ಇಟ್ಟರೆ, ಅದನ್ನು ಓದಿ ಹೇಳುವರು. ಯಾವದೊಂದರ ಗ್ರಹಿಕೆ ಅವರಿಂದ ಆಗ ಬೇಕಾದರೆ, ಅದನ್ನು ನಾಭಿ ಸ್ಥಾನದ ಮೇಲೆ ಇಡಬೇಕು. ಅವರು ತಮ್ಮಲ್ಲಿರುವ ಆತ್ಮದ ವಿಷಯಕ್ಕೆ ಹೇಳುವದೇನಂ ದರೆ; ಅದು ಹೆಬ್ಬೆರಳಿನಷ್ಟು ದೊಡ್ಡದು, ಹೃದಯದ ಒಂದು ಗವಿಯೊಳಗೆ ಒಂದು ಕಮಲ ದ ಮಧ್ಯದಲ್ಲಿರುತ್ತದೆ. ಅಲ್ಲಿಂದ ತಮ್ಮ ಪರವಶ ಸ್ಥಿತಿಯಲ್ಲಿರುವಾಗ, ಮೇಲಕ್ಕೆ ಏರಿ ಹೋಗಿ, ಬ್ರಹ್ಮರಂಧ್ರದಿಂದ ಹೊರಟು, ಬೇಕಾದಲ್ಲಿ ಸಂಚಾರ ಮಾಡುವದು. ಸೂರ್ಯ ಚಂದ್ರಾದಿಗಳ ಕಡೆಗೆ ಹೋಗಿ, ಅಲ್ಲಿ ಇದ್ದದ್ದು ನೋಡಿ ಹೋದ ದಾರಿಯಲ್ಲಿ ತಿರಿಗಿ ಬರುವ ದು. ಅಂಥಾ ರೋಗದಲ್ಲಿ ಬಿದ್ದವರು ಹೇಳಿದ ಮಾತಿನ ಮೇಲೆ ಭರವಸೆ ಇಡಲಾಗದು. ಚೆಂದಾಗಿ ಶೋಧಿಸಿ ನೋಡತಕ್ಕದ್ದು. ಬಹಳವಾಗಿ ಅವರ ಮಾತು ವಿದ್ಯೆಕ್ಕೂ ಸರ್ವಾನು ಭವಕ್ಕೂ ವಿರೋಧವಾಗುವದು. ಯೋಗಾಭ್ಯಾಸದಿಂದ ಆ ರೋಗ ಎಬ್ಬಿಸ ಬಹುದು. ಕಪಿಲ ಮುಂತಾದ ಮುನಿಗಳು ತಮ್ಮ ಪರವಶದಲ್ಲಿ ಕಂಡದ್ದನ್ನು ಹೇಳಿದ ಕಾರಣ, ಸಾಂ ಖ್ಯ ಮೊದಲಾದ ಬೋಧನೆಗಳಿಗೆ ದರ್ಶನ (ಕಂಡದ್ದು) ಎಂಬ ಹೆಸರಾಯಿರು.

INTRODUCTION.

ಪೀಠಿಕಾ ಪದಗಳು.

516. ಘನತರದ ಸಹವಾಸಿ ವಂಶದ[1]
ಲನುಪಮನು ಮಹಲಿಂಗದೇವನ
ತನಯನಹ ಶ್ರೀರಂಗ ಸಹಜಾನಂದಗುರುಪದವಾ
ನೆನೆದು ಸಮ್ಯಜ್ಞಾನವನು ಬ
ಲ್ಲನುಭವಿಗಳಹುದೆನಲು, ಪೇಳಿದ,
ವಿನುತರಾಸ್ವಾದಿಸುವು ದೊಲಿದೀ ಯನುಭವಾಮೃತವಾ

Name and tribe of the author.

3. ಒಬ್ಬ ಬ್ರಾಹ್ಮಣನು ಪೂರ್ವದಲ್ಲಿ ಒಬ್ಬ ಅಂತಿಜೆಯ ಸಹವಾಸ ಮಾಡಿ ತನ್ನ ಕುಲಕ್ಕೆ ಹೊರಗೆ ಆದನು. ಅವನ ವಂಶಕ್ಕೆ ಸಹವಾಸಿ ವಂಶವೆಂಬ ಹೆಸರಾಯಿತು. ಈ ವಂಶದಲ್ಲಿ ಮಹಲಿಂಗ ನೆಂಬವನಿಗೆ ಹುಟ್ಟಿದ ಮಗ ರಂಗನಾಥನು ಸಹಜಾನಂದ ನೆಂಬ ಗುರುವಿನ ಸಹಾಯದಿಂದ ಸುಮಾರು ೨೦೦ ವರುಷಗಳ ಹಿಂದೆ ಈ ಕೃತಿಯನ್ನು ರಚಿಸಿದನು.

517. ಕನ್ನಡದ ನುಡಿ ಯೆಂದುಪೇಕ್ಷಿಸ
ಲಿನ್ನು ಹಿರಿಯರಿಗುಚಿತವಲ್ಲಿದು ;
ಕನ್ನಡಿಯೆ ದರ್ಪಣವದಲ್ಲದೆ ಭೇದವೇನಿದಕೇ ?
ಮುನ್ನಲುಪನಿಷದರ್ಥವನು ಸಂ
ಪನ್ನಮತಿಗಳು ಪೇಳ್ದುರದ ನಾ
ನಿರ್ಣಯಿಸಿಹೆನು ; ಕೊರತೆ ಯಿದ್ದರೆ, ಮನ್ನಿಸುವದೊಲಿದೂ ;

It is not right to despise this book because it is written in Canarese.

518. ಸುಲಿದ ಬಾಳಯ ಹಣ್ಣಿನಂದದಿ
ಕಳಿದ ಸಿಬರಿನ ಕಬ್ಬಿನಂದದಿ
ಯುಳಿದ ವೃಷ್ಣದಹಾಲಿನಂದದಿ ಸುಲಭವಾಗಿರ್ದಾ
ಲಲಿತವಹ ಕನ್ನಡದನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಫಳಿಸಿಕೊಂಡರೆ, ಸಾಲದೇ ? ಸಂಸ್ಕೃತದಲಿನ್ನೇನೂ ;

If one gets saving knowledge from a book, written in the beautiful Canarese language, is it not enough?

519. ಒಂದು ದಿನ ಶುಕಯೋಗಿ ವಿನಯದಿ
ತಂದೆಯಡಿಗಳಿಗೆರಗಿ ಚಿತ್ತೈ
ಸೊಂದು ಬಿಂನಹ ! ಬ್ರಹ್ಮ ವೆಂಬೊಡೆ, ಯೆಂತಿಹುದು ? ತಿಳಿವಾ
ಛಂದವಾವುದು ? ತಿಳಿಯೆ, ಫಲವೇ
ನೆಂದು ? ಕೇಳಲು, ವ್ಯಾಸಮುನಿಪತಿ
ಮಂದಹಾಸದಲಂದು ನುಡಿದನು ಕಂದಗುತ್ತರವಾ.

Shuka, the son of Vyasa, asks his father, to explain the Védánta to him.

2. ಅಧಿಕಾರಿ ಲಕ್ಷಣ.

520. ಮಗನೆ ! ಬ್ರಹ್ಮವ ತಿಳಿವಡಧಿಕಾ
ರಿಗಳನರಿಯಲಿ[1] ಬೇಕು ಮೊದಲಲಿ ;
ಬಗೆದು ಸುಕ್ಷೇತ್ರದಲಿ ಬೀಜವ ಬಿತ್ತೆ, ಫಲವಹುದೂ ;
ನಗದಸಾರದ ಭೂಮಿಯಲಿ ತಾ
ನೊಗೆದು ಫಲವಹುದೇ ? ನಿರರ್ಥಕ !
ನೊಗಸದಿದು ! ಕೇಳನಧಿಕಾರಿಗೆ ಯೋಗ್ಯವಲ್ಲೆಂದಾ.

His reply. Description of those, who are able to comprehend this doctrine,

1- ಅರಿಯ ಎಂಬ ರೂಪಕ್ಕೆ ಬದಲಾಗಿ ಈ ರೂಪ ಅವಧಾರಣಾರ್ಥವಾಗಿ ಬರುತ್ತದೆ.

521. ಮನವಚನಕಾಯದಲಿ ಪಾಪವ
ನೆನೆಯು, ನುಡಿಯುನು, ಮಾಡನನ್ಯರು
ತನಗೆ ಯುಪಕಾರವನು ಮಾಡಲು, ಪೂರ್ವಕೃತವೆಂಬಾ ;
ತನುಜರನುಜರುತಾಯಿತಂದೆಗ
ಳೆನಿತು ತನ್ನನು ದೂಷಿಸಲು, ಭೂ
ಷಣವ ಮಾಡಲು, ಹಿಗ್ಗಿ ತಗ್ಗನು ಮೋಕ್ಷಕಾಂಕ್ಷಿತನು !

They do not commit sin in thought, word, or action.
They are indifferent to the abuse and to the praise of others.

522. ಒಂಧು ಸುಖದುಃಖಗಳು ತನ್ನನು
ಝುಂದುಗೆಡಿಸಲು, ನೋಯುದುಬ್ಬದೆ,
ಬಂಧುದೆಲ್ಲವು ಈಶ್ವರಾಜ್ಞೆಯನುತ್ತ ಧೈರ್ಯವನೂ

He is not depressed by grief nor elated with joy,

ತಂದುಮನದಲಿ ದೃಢವಿರಕ್ತಿಯ
ಲೊಂದಿ ಭೋಗಭ್ರಾಂತಿ ತನಗಳಿ
ದಂಮ ಮೋಕ್ಷಾಪೇಕ್ಷೆಯಾಗೆ, ಮುಮುಕ್ಷುವೆನಿಸುವನು.

523. *Like a blind, deaf, maimed man, he does not see women, nor hear abuse, nor touch the property of others.*

ತರುಣಿಯರು ತನ್ನಿದಿರಿಲೆಸದಿರೆ
ಕುರುಡನಂತಿಹ ; ಪರರನಿಂದೆಯ
ನೊರೆಯಲನ್ಯರು ಬಧಿರನಂದದಿ ಕೇಳನದನೊಲಿದೂ
ಕರವಿಕಳನಂದದಲಿ ಹಿರಿದಹ
ಪರರ ಧನವನು ಹಿಡಿಯ ; ದುಷ್ಟರು
ಜರಿಯೆ ತನ್ನನು, ಮರಳಿ ಜರಿಯ, ಮುಮುಕ್ಷುನೋಡೆಂದಾ.

524. *In poverty and wealth his mind is not disturbed.*

ಎಡರಿನಲಿ ಮದಿ ಗುಂದಮುಬ್ಬದೆ
ಪ್ರೌಢವಿಯಧಿಪತಿ ಯಾಗೆ, ಬಡತನ
ವಡಸಿದರೆ, ಕಂಗೆಡದೆ, ವಿತ್ತವಘಳಿಸಿ ಗರ್ವಿಸದೇ,
ಮಡದಿಮನೆಮನವಾರ್ತಿಮಕ್ಕಳ
ಗಡಣದಲಿ ಕಡುಮಮತೆ ಇಲ್ಲದೆ
ದೃಢವಿರಕ್ತಿಯಲಿರಲು, ಮೋಕ್ಷವ ಪಡೆವನವನೆಂದಾ.

525. *Description of those, who are unable to understand this system.*

ಕಾಯಸುಖವನು ಬಯಸಿ ಧನವನು
ಸಾಯಸದಲಾರ್ಜಿಸಿ ಮದಾಂಧರು
ಗಾಯಕರ ಪಾತಕರ ಭಂಡರ ಬಯಕೆಗಳ ಬಯಸೀ
ಬಾಯಬಡಿಕರು ಬೊಗಳುವರು ನಿ
ಶ್ರೇಯಸಾಭ್ಯಾಸಿಗಳ ನಿಂದಿಪ
ನಾಯಿಗೇತಕೆ ನವರಸಾನ್ನವು ? ಮಗನೆ ! ಕೇಳೆಂದಾ.

526. ಕಾಲಸಂಕಲೆ ಯಿರಲು, ಕೊರಳಿಗೆ

He is fettered by family ties.

ಕೋಳವನು ಬಲುಹಾಗಿ ತೊಡಿಸುವ
ಪೋಲು, ಬಹುವಿಧವಾದ ಸಂಸ್ಕೃತಿಬಂಧ ಬಿಗಿದಿರಲೂ,
ಮೇಲೆ ವಿಷಯಾಸಕ್ತನಾದಗೆ
ಹೇಳಲೇನದ ? ಮೋಕ್ಷಶಾಸ್ತ್ರದ
ಗಾಳಿ ಯೆಂಬುದು ಸೋಂಕಿದರೆ, ಸೈರಿಸನು ಕೇಳೆಂದಾ !

527. ಮೊದಲೆ ಮರ್ಕಟ, ಮೇಲೆ ಮದ್ಯದ

He is like a monkey, which, intoxicated and then bitten by a scorpion, is dancing.

ಮದವು ತಲೆ ಹಿಡಿದಿರಲು, ವೃಶ್ಚಿಕ
ತುದಿಯು ಕಾಲಿಗೆ ಕಚ್ಚಿದರೆ, ಕುಣಿದಾಡುವಂದದಲೀ,
ಅಧಿಕಧನಸಂಪತ್ತು ಯವ್ವನ
ಪೊದಗಿರಲು, ವನಿತಾದಿವಿಷಯಾ
ಸ್ಪದವೆನಿಸಿ ಪೊಡಲರಿಯುದವಗಧ್ಯಾತ್ಮವೇಕೆಂದಾ.

528. ಮರುಳು ಹಿಡಿದವ ಮದ್ದುಗುಣಿಕೆಯ

He is forgetful of himself.

ನರದು ಕುಡಿವಂದದಲಿ, ಮಾಯಾ
ವರಣದಲಿ ಮರದಿರ್ದು, ತನ್ನನು ಮೂಢಭಾವದಲೀ
ಪರಿಪರಿಯ ಸಂಸಾರ ಪಾಶದಿ
ಹಿರಿದು ಬಿಗಿವಡದಿರ್ದ ಮನುಜಗೆ
ದೊರಕುವದೆ ಪರತತ್ವ ? ತಿರುಳಿಯುಹುಳುವಿನಂದದಲೀ

1. ಈ ಹುಳ ಯಾವಾಗಲೂ ನೀರಿನ ಮೇಲೆ ಚಕ್ರಾಕಾರವಾಗಿ ಹರಿದಾಡುತ್ತದೆ.

529. ವರಳೊಳಗೆ ತಲೆ ಯಿಟ್ಟು ವನಕೆಯ

Who knows how to avoid being wounded, after having put his head into a mortar?

ಭರದ ಘಾಯುವ ತಪ್ಪಿಸಲಕಾ
ರರಿವರ್ಯೈ ? ಬಹುದುಃಖಸಂಗ್ರಹವಾದ ಸಂಸೃತಿಯಾ

ಶರಧಿಯೊಳು ಬಿದ್ದವಗದೆಂತೋ
ಪರಿಹರಿಸುವದು ? ಜನ್ಮಜರೆಗ [illegible]
ಮರಣವೊದಲಪವೆಲ್ಲ ತತ್ವವನರಿಯುವವಗೆಂದಾ.

530. ಕೊರಳು ಸುತ್ತಿದ ಹಾವು ಕಚ್ಚದೆ
The ignorant wander from birth to birth. ಮರಳುವದೆ ? ಮಾಯಾಪ್ರಬಂಧದಿ
ನೊರಳುತಿಪ ಜೀವರಿಗೆ ಪರಿಹರಿಸುವದೆ ಭವಬಂಧಾ?

ಕುರುಡ ಕಾಣದೆ ಘಾತಕೂಪದೊ
ಳುರುಳುವಂತೆ, ವಿವೇಕಶೂನ್ಯರು
ತಿರುಗುವರು ಭವಮಾಲೆಯಲಿ ಮೋಕ್ಷವನಪೇಕ್ಷಿಸದೇ.

531. ಕಾಣದಗೆ ಕನ್ನಡಿ ಯದೇತಕೆ ?
Why to a blind man a mirror? why to a sensual man redemption? ಗಾಣದೆತ್ತಿಗೆ ಗೆಜ್ಜೆ ಯೇತಕೆ ?
ಗೋಣಿಗೇತಕೆ ಗವಸಣಿಗೆ ? ನರಿಗೇಕೆ ಸುರಲೋಕಾ ?

ರಾಣಿ ಯಾಕೆ ನಪುಂಸಕಗೆ ? ಗೀ
ರ್ವಾಣಭಾಷೆಗಳೇಕೆ ಗೊರವಗೆ ?
ಕೇಣವಿಲ್ಲದ ವಿಷಯಲಂಪಟಗೇಕೆ ವೈರಾಗ್ಯಾ ?

532. ಎತ್ತು ತೆಂಗಿನಕಾಯಿ ಬಲ್ಲುದೆ ?
Does a bullock know a cocoa-nut? etc. why to men, addicted to women, knowledge? ಕತ್ತೆ ಯರಿವುದೆ ಕತ್ತುರಿಯು ? ಬಲು
ಬುತ್ತಿಗಳ್ಳರಿಗೇಕೆ ಸತ್ಯವ್ರತಸದಾಚಾರಾ ?

ದತ್ತಪುತ್ರರಿಗೇತಕ್ಕೆ ಪಿತೃ
ಭಕ್ತಿ ? ಮಾಲ್ಯಸುಗಂಧವನಿತಾ
ಸತ್ತರಿಗೆ ಪರತತ್ವಚಿಂತೆ ಯದೇಕೆ ? ಹೇಳೆಂದಾ !

533. ನರಿಗಳೂರನು ಸೇರುವವೆ ? ನೇ
ಸರನ ಬೆಳಗಿಗೆ ಗ ಗಳು ಸಂ
ಚರಿಸುವವ ? ಜೇ ಂಗಳಪ್ಪವೆ ಜಾರಚೋರರಿಗೇ ?
ಸರಸಕವಿತಾಪ್ರೌಢಿ ಯಲ್ಲರಿ
ಗರಿಯಲಹುದೇ ? ದುರ್ವ್ಯಸನದಿಂ
ದಿರುವ ಪಾತಕಿಗೇತಕ್ಕೆ ನಿಶ್ರೇಯ ಸಾಭ್ಯಾಸಾ ?

Do the owls fly about in the light of the sun? why anxiety about heaven to a sinner?

534. ಎತ್ತಿಗುತ್ತಮಲಿಂಗಮುದ್ರೆಯ
ನೊತ್ತಿದರೆ, ಯದು ಬಸವನೆಂಬರು
ಕತ್ತೆಯನು ಹಿಡಿತಂದು ಮುದ್ರೆಯನೊತ್ತಲಾಕತ್ತೆ
ಕತ್ತೆಯಲ್ಲದೆ ಬಸವನಪ್ಪುಡ ?
ಸತ್ಯಸಂಧನೆ ಯೋಗ್ಯನಲ್ಲದೆ
ತೊತ್ತುಬಡಿಕಗದೇಕೆ ತತ್ವವಿಚಾರ ? ಹೇಳೆಂದಾ !

Does an ass become Basava by getting the impression of a linga? why inquiry to a bad man?

535. ಚರ್ಮಖಂಡವ ಕಡಿವ ಶುನಕಗೆ
ಕಮ್ಮಗಿಹ ತುಪ್ಪದಲರೋಚಕ ;
ಕರ್ಮಕಿಂಕರರಾದ ಕಾಮ್ಯಫಲಾಭಿಲಾಷರಿಗೆ
ಬ್ರಹ್ಮವಿದ್ಯಾಭ್ಯಾಸದಲಿ ಮನ
ನೆಮ್ಮದದರಿಂದಾತ್ಮಸುಖವದು
ದುರ್ಮತಿಗಳಿಗೆ ದೂರವಾಗಿಹುದರಸಿ ನೋಡಿದರೇ

To a dog clarified butter is insipid; it prefers meat. Far from ignorant men is spiritual joy.

536. ಮೀನ ನೀರೊಳಗಿರ್ದಡೇನೈ ?
ಧ್ಯಾನವನು ಬಕ ಮಾಡಲೇನೈ ?
ಕಾನನವನಾಶ್ರೈಸಿ ಮರ್ಕಟವಿರ್ದಡೇನಲ್ಲೀ

What, if a fish is in the water? what, if a man, without know-

edge, performs ablutions? &c.

ಮೌನದಲಿ ಕೋಗಿಲೆ ಯಿರಲ್ಕದ
ಕೇನು ಫಲ? ಸುಜ್ಞಾನವಿಲ್ಲದೆ,
ಮೌನವೊದಲಾಗಿರ್ದರೇನೆಲೆ ಮಗನೆ! ಕೇಳೆಂದಾ!

537. ಹುತ್ತ ಬಡಿದರೆ, ಹಾವು ಸಾವುದೆ?

Is the serpent killed by men beating on its hole? is salvation obtained by castigating the body?

ವ್ಯರ್ಥವಾದುಪವಾಸವೊದಲಾ
ಗುತ್ತಲಿಹ ವ್ರತಗಳಲಿ ದೇಹವ ದಂಡಿಸಲು, ಬರಿದೇ,
ಮುಕ್ತಿ ದೊರಕುವದೇ? ವಿವೇಕ ವಿ
ರಕ್ತಿ ಶಮೆ ದಮೆ ಗುರುಪದಾಂಬುಜ
ಭಕ್ತಿ ಯಿಲ್ಲದ ಕಾಮ್ಯಕರ್ಮಾಸಕ್ತರಿಂಗೆಂದಾ.

538. ವಿಷಯಲಂಪಟರಾಗಿ ಸಂಸೃತಿ

The ignorant just like cattle, or like a dancer, dancing as he is directed by his master.

ವ್ಯಸನದಲ್ಲಿಹ ಜೀವ ಕೋಟಲೆ
ಪಶುಗಳೆನಿಸುವರೀಶ್ವರಾಜ್ಞಾಪಾಶಪರಿಯುತರೂ
ಉಸುರಲೇನವನೊಡೆಯನೇ ಪ್ರೇ
ರಿಸೆ, ಕುಣಿವ ನಟನೋಲು, ನರಕವ
ನೆಸೆವ ಸ್ವರ್ಗವನೆರಡಕೆಡೆಯಾಡುತ್ತಲಿಹರೆಂದಾ.

THIS LIFE DISGUSTING. 3. ಸಂಸಾರಹೇಯ.

539. ಕೇಳು! ಶುಕಯೋಗೀಂದ್ರ! ಸಂಸೃತಿ

This life a vain talk! The things of this life a lamp exposed to the wind.

ಹಾಳುವಾದವಲಾ ವಿಚಾರಿಸೆ!
ಹೇಳಲೇನದು ಬಯಲ ಬಳಲಿಕೆಯಾದ ಸಾರಂಭಾ;
ಕಾಳುಸತಿಸುತಧನಗೃಹಂಗಳು
ಗಾಳಿಗೊಡ್ಡಿದ ಸೊಡರಿನಂದದಿ
ಕಾಲವಶದಲಿ ಕೆಟ್ಟು ಹೋಹದು ನಿತ್ಯವಲ್ಲೆಂದಾ.

540. ಆರು ಮೀರಲಿಕರಿದು ಕಾರಾ
ಗಾರದಂದದಿ ತೋರ್ಪ ಘೋರಾ
ಕಾರಸಂಸಾರವನು ಸಚರಾಚರವ ಜೀವರಲೀ

ಹಾರಿ ಸ್ವರ್ಗವನೂರಿ ನರಕವ
ಸೇರಿ ಧರಣಿಯ ಸುಕೃತದುಷ್ಕೃತ
ಕಾರಿಯುವ ಸುಖದುಃಖದೊಳು ಲೋಲಾಡುತಿಹರೆಂದಾ.

This life like a dungeon. Men moving from pleasure to pain and *vice versa.*

541. ಕೆಲರು ಮನೆಮನವಾರ್ತೆಮಕ್ಕಳ
ಗೊಲಿದು ಮಮತೆಯ ಮಾಡಿ ಧನವನು
ಘಳಿಸಿ ಸಂಸೃತಿಸಂಭ್ರಮದೊಳಾಸಕ್ತರಾಗಿಹರೂ ;

ಫಲವ ಕಂಡರದೇನನಕಟಾ !
ಘಳಲನೆಲ್ಲವು ಬಟ್ಟಬಯಲಾ
ಗಳವವರಿಂ ದುಃಖವಲ್ಲದೆ ಸುಖವದೆಲ್ಲಿಯದೂ ?

Those, who love this world, have nothing but grief from it.

542. ತನ್ನ ಹಿತವರು ತಿಳಿಯಲರಿಯುವ
ಕುನ್ನಿ ಬರಿದೇ ಬಯಸಿ ಬಯಲಿಗೆ
ಹೊನ್ನು ಹೆಂಣೆಂಬ ಗಂಟಲಗಾಣದೊಳು ಸಿಲುಕೀ

ಬನ್ನಬಡುವನು ಭವಭವದಿ ಬಹು
ಜನ್ಮಜರೆಮರಣಾದಿದುಃಖದಿ
ಹಣ್ಣೆನುತ ಕಿಚ್ಚಿನಲಿ ಬೀಳುವ ಶಲಭನಂದದಲೀ

Money, women, the bait, with which men are caught, the fire, that appears like a ripe fruit and attracts grass-hoppers.

543. ಸಾವವರ ನೋಡುತ್ತ ದುಃಖದಿ
ಬೇಸವರ ಕಾಣುತ್ತ ಮನದಲಿ
ಸೇವರಿಸಿ ಸುಡಲೆಂದು ಬಿಡನವ ಮರವನಾಕ್ಷಣಕೇ

Though men see suffering and death, they will not forsake ignorance.

ಭಾವೆ ಯಳಿಯಲಿ ! ವಿತ್ತ ಹೋಗಲಿ !
ಸಾವು ತಪ್ಪಲಿ ! ದುರುಳನೆಲ್ಲವ
ನಾವಪರಿಯುಲಿ ಕಷ್ಟಬಟ್ಟವ ಘಳಿಸಲನುಗೆಯ್ವಾ.

544. ಹೆಂಡರೇತಕೆ ? ಮಕ್ಕಳೇತಕೆ ?
ಭಂಡಿ ತುಂಬಿದ ಧನವದೇತಕೆ ?
ಮುಂಡೆ ತುಂಬಿದ ಬಳಗವಿದ್ದೇನಕಟ ! ಯಮನವರೂ
ಚಂಡಪಾಶದಿ ಕಟ್ಟಿ ಕಳ್ಳನ
ಕೊಂಡು ಹೋಹಂದಲಿ ವೈವರು
ಕಂಡು ಬಿಡಿಸುವರುಂಟೆ ? ಯಾರಿದ್ದೇನು ಫಲವೆಂದಾ ?

Why wife and children and wealth? The angels of death carry one away like thieves. There is no liberator.

545. ಯಾಕೆ ಮನೆ ಮನವಾರ್ತೆ ? ಮಕ್ಕಳ
ದೇಕೆ ? ಮಡದಿಯು ಗೊಡವೆ ಯೇತಕೆ ?
ಸಾಕಲಾ ಸಂಸಾರವನ್ನಧ್ರುವದಾರು ನಂಬುವರೂ !
ಸಾಕು ! ಸಾಕದು ಬೇಡ ! ಬರಿದೇ
ಶೋಕಮೋಹಾಸ್ಪದವು ಯೆಂದದ
ನೋಕರಿಸಿ ಬಿಟ್ಟವನೆ ಧನ್ಯನು ಲೋಕದೊಳಗೆಂದಾ.

Why house and family? Enough! They are causes only of grief. He, who has given them up; is fortunate.

546. ಕಡು ನರಕವಥ ಜನ್ಮವೆಂದದ
ಬಿಡುವುಪಾಯದ ಬಟ್ಟೆಯನು ತಾ
ಪಡೆಯಲರಿಯದ ಮನುಜನೊಡಲನು ಪಡೆದ ಫಲವೇನೂ ?
ಸುಡಲವನ ಜನ್ಮವನು ! ದುಃಖದ
ಕಡಲೊಳಗೆ ಬಿದ್ದಾಳುತೇಳುತ
ತಡಿಯ ಕಾಣದೆ ಬಳಲುತಿಪನವಗವಧಿ ಯಿಲ್ಲೆಂದಾ.

Man, not knowing the way of liberation, burns his birth; struggling in the ocean of grief.

547. ಹುಟ್ಟುತಲಿ ತಾನೊಬ್ಬ ; ಕಡೆಯಲಿ

Man comes alone and goes alone, between this he gets entangled in the cares of this world.

ಕೆಟ್ಟಳಿದು ಹೋಹಾಗಲೊಬ್ಬನೆ ;
ನಟ್ಟನಡುವೀಬಂಧುಬಳಗಗಳೆಂಬ ಬಹುತೊಡಕೂ
ಕಷ್ಟವಹ ದುಃಖವನು ಮಾಳ್ಪುದು
ನೆಟ್ಟನೆ ವಿವೇಕದಲಿ ತಿಳಿದವ
ನುಟ್ಟು ಸುಖವಹ ಪದವ ಪಡೆವನೆ ಶಿಷ್ಟನೆನಿಸುವನೂ.

548. ಊರ ದಾರಿಯ ನಡೆವ ಮನುಜರು

This life a cool shed, in which travellers are resting during the heat of the day, and then part.

ನೀರಡಸಿ ಯರವಟ್ಟಿಗೆಯ ನೆರೆ
ಸಾರಿ ತೃಷೆಯನು ಕಳೆದು ಸುಖದಿಂದೆಲ್ಲರೊಡಗೂಡೀ
ಬೇರವನು ತಮತಮ್ಮ ದಾರಿಯ
ಸಾರಿ ಹೋಹಂದದಲಿ ಸತಿಸುತ
ರಾರಿಗಾರು ? ಋಣಾನುಬಂಧವು ತೀರಲವರಿರರೂ.

549. ಒಂದು ವೃಕ್ಷದ ಮೇಲೆ ಪಕ್ಷಿಗ

Men in this world like birds sitting on a tree only for a short time.

ಳೊಂದು ನಿಮಿಷವು ಗಜಬಜಿಸುತಲಿ
ಪೊಂದಿಕೊಂಡವ ಮಗುಳೆ ಕಂಡೆಡೆಗೈದತೆರನಂತೇ,
ತಂದೆ ತಾಯ್ಗಳು ಬಂಧುಬಳಗಗ
ಳೊಂದು ನಿಮಿಷಕೆ ತಾವೆ ತಮತ
ಮ್ಮಂದದಲಿ ತೊಲಗುವರು, ಋಣಸಂಬಂಧ ತೀರಿದರೇ.

550. ಬುದ್ಧಿವಂತನು ಘಳಿಸಿದರ್ಥವು

Riches like water turned off into a rice-field.

ಬಿದ್ದು ಹೋಹುದು ಕಂಡ ಕಡೆಯಲೀ,
ಗದ್ದೆಗಿಕ್ಕಿದ ನೀರ ತೆರದಲಿ ; ಮಡದಿಮಕ್ಕಳನೂ

ಉದ್ಧರಿಸಿ ಸಲಹಿದರೆ, ಬಾಯನು
ವೊದ್ದು ವೊಯ್ವರು ಯಮನವರು ; ತನು
ಹದ್ದುಕಾಗಿಯ ಪಾಲು, ದಾರಿಗೆ ನಿತ್ಯವಲ್ಲೆಂದಾ.

551. ವಿದ್ಯವನು ಕಲಿತೇನು ಫಲ ? ಬಹ
ಳುದ್ಯಮಗಳನು ಮಾಡಿ ಧನವನು
ಬುದ್ಧಿಯಿಂದಾರ್ಜಿಸಿದೊಡಪರಿಂದೇನು ಫಲ? ತನಗೇ
ಮುಗ್ಧೆಯನು ವರಿಸಿದ್ದೊಡೇನೆಲೆ !
ವೃದ್ಧರುಳುವನಿತರೊಳು ತನುವಿದು
ಬಿದ್ದು ಹೋಹುದು ; ವಿದ್ಯವೊದಲಹವಾರ ಹೊದ್ದುವವೂ ?

What is the use of learning sciences, of acquiring wealth by trade?

552. ಕಂದ ! ಕೇಳ್ಳೈ ! ಬಾಲ್ಯದಲಿ ತಾ
ಯ್ತಂದೆಗಳು ರಕ್ಷಿಪರು ; ಯವ್ವನ
ಬಂದಡಾಗ ಸ್ವತಂತ್ರನಾಗಿಹ ಸರ್ವಕೃತ್ಯದಲೀ ;
ಮುಂದೆ ವಾರ್ಧಿಕ್ಯದಲಿ ಮಕ್ಕಳು
ಬಂಧುಗಳು ಸಲಹುವರು ; ಕಡೆಯಲಿ
ಬೆಂದು ಹೋಹದು ಕಿಚ್ಚಿನಲಿ ಹೇಳಾರದೀದೇಹಾ?

Infancy, youth, old age and death

553. ನೀರ ಮೇಲಣ ಗುಳ್ಳೆ ಲಿಂಗಾ
ಕಾರದಂದದಿ ಹೊಳವುತಿರಲವಿ
ಚಾರಿಯಾದವ ಲೋಹದಲಿ ಬಂಧಿಸಿದ ತೆರನಂತೇ,
ತೋರಿಯಡಗುವ ಮಿಂಚಿನಂತೆ, ಶ
ರೀರಧರ್ಮಗಳಿವನು ಹಿರದಾ
ಗಾರು ಸಲಹುವರವರೆ ಮರುಳರು; ಮಗನೆ! ಕೇಳೆಂದಾ!

This life a water-bottle bound with iron by the foolish, like lightning appearing only for a moment.

554. ಮಗನ ಮುದ್ದಾಡಿದರೆ, ಗಂಡಗೆ
ಸುಗುವ ಜಾರೆಯ ತೆರದಿ, ದೇಹವ
ಬಗೆದು ತನ್ನದೆನುತ್ತ ಮಮತೆಯ ಮಾಡಿ ರಕ್ಷಿಸಲು,
ಮುಗುಳುನಗೆಯಲಿ ಮೃತ್ಯುದೇವತೆ
ನಗುವಳಾತನ ಮುಗ್ಧನೆಂದೇ
ತೆಗುವಳಸುವನು; ನಿತ್ಯವಾರಿಗೆ? ತನುಜ! ಕೇಳೆಂದಾ!

Death laughs at men's cares for their bodies.

555. ಹರಕೆಗೆಂದೇ ತಂದ ಕುರಿ ತಾ
ನರಿಯದಕಟಾ! ಕೊಲುವರೆಂಬುದ,
ಹಿರಿದು ಹಸಿವಿಗೆ ತಳಿರುಗಳ ಮೆಲುತಿಹುದದಾಯ್ದಾಯ್ದು;
ನರಗುರಿಗಳದರಂತೆ ತಮಗಹ
ಮರಣವನು ತಾವರಿಯರೀಸಂ
ಸರಣದುಃಖದಿ ಮಗ್ನರಾಗಿಯೆ ಮೃತ್ಯುವಶವಹರೂ.

The sheep, not knowing, that it will be slaughtered, eats the green leaves with which it is decorated: so men.

556. ಬ್ರಹ್ಮ ತೊಡಗೆ ಪಿಪೀಲಿಕಾಂತ್ಯವು
ಸುಮ್ಮನೇ ಹಮ್ಮಿನಲಿ ಕೆಡುವ್ರುದು;
ತಮ್ಮ ಬದುಕಿದನಿತ್ಯವೆಂಬುದನೊಮ್ಮೆ ಚಿಂತಿಸದೇ,
ಹೆಮ್ಮೆಯಲಿ ಹಿರಿದಾಗಿ ಸಂಸೃತಿ
ಧರ್ಮದಲಿ ಮರದಿರಲು, ಶ್ರಮ್ಮನು
ಗಮ್ಮನಾಗಳೆ ಮೃತ್ಯು ವೈವುದು ಕಾಣರವರೆಂದಾ.

All from Brahma down to the ant is perishing from conceit.

557. ಸರ್ಪವದನಗ್ರಾಸವಾಗಿಹ
ಕಪ್ಪೆ ಮಕ್ಷಿಕಭಕ್ಷಣವ ಬಯ
ಸಿಪ್ಪ ತೆರದಲಿ, ಕಾಲವಶವಾಗಿರ್ದ ಮಾನವನೂ

The fly, the poor man, is eaten by the frog, the mighty man and the frog by

the serpent death.

ದರ್ಪದಿಂದಲಿ ಕೇಡ ಬಗೆವನು
ತಪ್ಪ ಸಾಧಿಸಿ ಸಕಲರಿಗೆ ; ಯಮ
ತಪ್ಪುವದೆ ತನಗಕಟ ! ನಗುವಳು ಪಿಡತಲೆಯ ಮೃತ್ಯು.

558. ಒಡವೆಯುಳ್ಳರೆ, ಮಡದಿಮಕ್ಕಳು
ಕಡು ಮಮತೆಯನು ಮಾಳ್ಪರಾತಗೆ ;
ಬಡತನಗಳಡಸಿದರೆ, ಮೆಲ್ಲನೆ ಸಡಲಿ ತೊಲಗುವರೂ;
ಬಿಡದು ಕರು, ಹಾಲಿರಲು, ತಾಯನು ;
ಕಡೆಗೆ ಪೋಪುದು, ಬತ್ತಿದರೆ ; ತಾ
ಕೆಡುವ ಕಾಲಕ್ಕಾರಿಗಾರೆಲೆ ಮಗನೆ ! ಕೇಳೆಂದಾ !

The calf follows the cow only as long as it gets milk: so it is with the love of men.

559. ಒಂದರಲಿ ಕೊರತಿಲ್ಲದಂದದಿ,
ತಂದು ತಂದೀಡೇರಿಸಲು, ಸಲೆ
ಕುಂದು ಕೊರತೆಯ ಹಿಡಿದು ಹೆಂಡರು ಮಕ್ಕಳಾವಾಗಾ
ಇಂದು ತಮಗಿದು ಕೊರತೆ ಯಾಯಿ
ತ್ತೆಂದು ಪೋರುವರವರು ; ತನಗವ
ರಿಂದ ಸುಖವನು ಕಾಣ ; ಬರಿದೇ ಭ್ರಮೆಯು ಬಳಲಿಕೆಯೂ.

560. ತಂದೆತಾಯಿಗಳಿಟ್ಟ ಧನವನು
ನಂದನರು ತಮ್ಮೊಳಗೆ ಪಾಲಿಗೆ
ಕೊಂದು ಕೂಗ್ಯಾಡುತ್ತಲರಮನೆಗರಿಕೆಯನು ಮಾಡೇ,
ಹಿಂದು ಮುಂದನು ನೋಡದವರನು
ಬಂಧಿಸೆಲ್ಲವ ಸೆಳೆದುಕೊಂಬರು ;
ಮುಂದೆ ಭಿಕ್ಷಾಪಾತ್ರೆಗಧಿಕಾರಿಗಳು ನೋಡೆಂದಾ.

The sons love the property, which they inherited from their parents, by quarrelling.

561. ತಾಯಿತಂದೆಯ ಬಿಟ್ಟು, ಹೆಂಡರ

The fate of the miser.

ಮಾಯೆಗಳಿಗೊಳಗಾಗಿ, ಸರ್ವರ
ಬಾಯಿ ಹೊಡೆದೆಲ್ಲವನು ಮಕ್ಕಳಿಗಿತ್ತು ಮಮತೆಯಲೀ
ನೋಯ ನುಡಿವರೆ, ಯೇನನೆಂದರೆ
ನ್ಯಾಯನಗರಕೆ ನಡೆವ ಲುಬ್ಧಗೆ
ನಾಯಕಮಹಾನರಕವಲ್ಲದೆ ಮುಕ್ತಿಯಿಲ್ಲೆಂದಾ.

562. ದುಃಖವೆಕ್ಕಸವಾಗಿ ಸರ್ವರು

In sorrow men despair, in joy they become proud.

ಸೊಕ್ಕಿ ಮನದಲಿ ಮರಗುವರು ; ತಮ
ಗಕ್ಕಜದ ಸುಖವಾಗೆ, ಸೊಕ್ಕುವರೆಲ್ಲರನು ಮರೆದೂ
ಅಕ್ಕಟಕಟಾ ! ಸುರನರೋರಗ
ಪಕ್ಕಿಹುಳಮೊದಲಾಗಿ ಮಾಯಿಗೆ
ಸಿಕ್ಕಿ ಸುಖದುಃಖದಲಿ ಹೊರಳುತ ನರಳುತಿಹರೆಂದಾ.

563. ದುಃಖ ಬೆರಸದೆ ಸುಖವು ದಾರಿಗೆ

No joy without grief: honey on the edge of a sword.

ಸಿಕ್ಕುವದು ? ಶುಕಯೋಗಿ ! ಮರ್ಕಟ
ಸೊಕ್ಕಿ ಕೀಲನು ಕಿತ್ತು ಬಿಸುಟಂದದಲಿ, ಮಧುರಸವಾ
ಇಕ್ಕಿ ನೆಕ್ಕಲು, ಖಡ್ಗಧಾರೆಗೆ
ಸಿಕ್ಕಿ ನಾಲಿಗೆ ಸೀಳುವಂದದ .
ಲುಕ್ಕಿ ವಿಷಯಸುಖಕ್ಕೆಳಸಿ ಕಡು ದುಃಖ ಬಡುತಿಹರೂ ;

564. ಕಾಯಸಿದ್ಧಿಯ ಪಡೆದ ಹಿರಿಯರು,

No men, however great and holy, exempt from death.

ಮಾಯೆ ಯಳಿದ ಮಹಾನುಭಾವರು,
ಸಾಯಸದಲಷ್ಟಾಂಗಯೋಗಾಭ್ಯಾಸವನು ಮಾಡೀ

ನೋಯುವಸುವನು ಬಿಡುವ ಯೋಗಿಗ
ಳಾಯತಿಗಳಾವ್ರತಿಗಳೆಲ್ಲರು
ಸಾಯದುಳಿದವರಿಲ್ಲ, ಕಾಲಾಧೀನವಾಗಿಹರೂ.

565. ಬೇಸಗೆಯ ಬಿಸಿಲಲ್ಲಿ, ಬೆಟ್ಟದಿ
ಬೀಸುತಿಹ ಬಿರುಗಾಳಿಯಲಿ! ಮಳೆ
ಸೂಸುತಿಹ ಸೋನೆಯಲಿ, ಮಂಜನು ಸುರಿವ ಮಬ್ಬಿನಲೀ,
ಘಾಸಿಯಾಗುತ ಘೋರದುಃಖಾ
ವಾಸದಲಿ ಪ್ರಕೃತಿಯನು ನೋಡುವ
ನೃಸೆ! ಸುಖವೇನಿಲ್ಲ; ಕಾಲಾಧೀನವಾಗಿಹುದೂ.

566. ಗರ್ಭದೊಳಗಿನ ದುಃಖವಾವೋ
The sorrow of infancy, youth, and old age.
ಅರ್ಭಕತ್ವದ ದುಃಖ; ಯವ್ವನ
ದುಬ್ಬು, ಕೊಬ್ಬಿನಲುಕ್ಕಿ ವನಿತಾವಿಷಯವಹ ದುಃಖಾ;
ಉಬ್ಬಸದ ರೋಗಗಳು ಮೊದಲಹ
ನಿಬ್ಬರದ ವಾರ್ಧಿಕ್ಯದುಃಖವು,
ಹಬ್ಬಿಕೊಂಡಿರೆ, ಸುಖವ ಕಾಣರು ಕಾಲವಶವಾಗೀ.

567. ಕಣ್ಣುಗಳು ಕೆಂಪಾಗಿ ಮೋರೆಯು
Description of an angry man.
ಬಣ್ಣವತಿರೌದ್ರವನು ತಳೆದಿರ
ಅನ್ನಪಾನವಲಿಚ್ಛೆಗೆಟ್ಟಿರೆ, ಕೋಪತಾಪದಲೀ
ಉಣ್ಣದರಿವು ತಗುರುಹಿರಿಯರನು
ಕಣ್ಣುಗಾಣದೆ, ಬಱಿದೆ ಬೊಗಳುವ,
ಸನ್ನಿ ಹಿಡಿದವನಂತೆ, ನಡುಗುವ, ಕುಣಿವ, ಕೂಗುವನೂ.

568. ಮೂರುಕಾಲದಿ ಮುಳುಗಿ ನೀರೊಳು
ನಾರಸೀರೆಯನುಟ್ಟು ಪರ್ಣಾ
ಹಾರವನು ಮಾಡುತ್ತ ಮಳೆ ಚಳೆ ಬಿಸಿಲ ಲೆಕ್ಕಿಸದೇ,
ಘೋರತಪವನು ಚರಿಸಿ ಯಡವಿಯ
ಸೇರಿಕೊಂಡಿಹ ಮುನಿಗಳೆಲ್ಲರು
ನಾರಿಯರ ವಶವಾಗಿ ಹೋದರು ಮಾರಗಿದಿರಾರೂ.

No man able, not even an ascetic, to overcome sensual temptations.

569. ಆರು ಇಲ್ಲದ ವಿಪಿನದಲಿ ಹಾ
ಳೂರ ಕೋಳಕೆ ಜಾಲ ಸೇರಿಸಿ
ದಾರಿಕಾರಿಗೆ ಹಲ್ಲಗಿಸುವಂದದಲಿ ಸಂಸೃತಿಯು
ಘೋರತರದುಃಖಾಟವಿಗಳಲಿ
ಮಾರನೆಂಬ ಕಿರಾತನೊಡ್ಡಿದ
ನಾರಿ ಯೆಂಬಾಬಲೆಯು ಬಿದ್ದವಗಾರು ಗತಿ ಎಂದಾ.

This world a forest, Cupid the hunter, women the net, in which he catches men.

570. ಬಡಿಶಗತವಹ ಮತ್ಸ್ಯದಂದದಿ,
ಕೆಡದು ಬಡಿಗಲ್ಲಿನಲಿ ಹೆಗ್ಗಣ
ಮಿಡುಕುವಂದದಿ, ಮದನಶರಮಾಯಾಪ್ರಬಂಧದಲೀ
ತೊಡರಿ ಮನುಜರು ನೋಟವೆಂಬೀ
ತಡಿಕೆಬಲೆಯಲಿ ಸಿಕ್ಕಿ ರೆಕ್ಕೆಯು
ಕಡಿದ ಪಕ್ಷಿಯ ತೆರದಿ, ಯಡಿಯಿಡಲಾರನವನೆಂದಾ.

Man a fish caught with the hook, a bird allured into a cage he cannot move.

571. ಮಚ್ಛ ಜಿಂಹ್ವಾಲಂಪಟದಿ, ಗಜ
ಕಚ್ಛೆಯಲಿ ನೇತ್ರದಲಿ ಶಲಭ, ಶೃ
ತ್ರೇಚ್ಛೆಯಲಿ ದರ್ವೀಕರನು, ಘ್ರಾಣದಲಿಷಟ್ಪದವು,

Each animal is caught by a peculiar object of sense, no wonder man also.

ಹೆಚ್ಚುಗೊಂಡೊಂದೊಂದು ವಿಷಯಕೆ
ಮೆಚ್ಚಿ ಕೆಟ್ಟವು ಪಂಚವಿಷಯದ
ಯಿಚ್ಛೆಯಲಿ, ತಗುಲಿರ್ದ ಮನುಜನು ಕೆಡುವುದೇನರಿದೂ !

572. ಅನ್ನಪಾನವ ಬಿಟ್ಟು ವನದಲಿ
ಪರ್ಣಶಾಲೆಯಲಿರ್ದು ಜಲದಲಿ
ತನ್ನದೇಹವ ತೊಳೆದು ಮಳೆಚಳಿಗಳಿಗೆ ಕಂಗೆಡದೇ
ಪುಣ್ಯಗಳನಾರ್ಜಿಸಿದ ಮನುಜನು
ಪುಣ್ಯಲೋಕವನೈದಿ ತೀರಲು,
ಕಣ್ಣನೀರಲಿ ಕೈಯ್ಯ ತೊಳೆವುತ ಕೆಡವ ಭೂಮಿಯಲೀ.

Even the blessedness of heaven only for a time.

Good works not sufficient to save

573. ಆಸನವ ಬಲಿದಾಸುಷುಮ್ನಾ
ನಾಸದಲಿ ನೆರೆ ನಡಸಿ ಮೆಲ್ಲನೆ
ಲೇಸೆಸಿಪ ನಿಜಬ್ರಹ್ಮರಂಧ್ರವನೊಡೆದು ಸುರಪದವಾ
ಭಾಸಮಾನದಿ ಸತ್ಯಲೋಕಾ
ವಾಸಿಯಾಗಿಹ ಯೋಗಿ ಪುಣ್ಯದ
ರಾಸಿ ತೀರಲು, ಮರಳಿ ಭೂಮಿಯಲುರುಳಿ ಬೀಳುವನೂ.

from the transmigration of the soul

A COLLECTION OF 100 MORAL VERSES COMPOSED BY THE POET SOMESHVARA.

ಸೋಮೇಶ್ವರ ಶತಕ.

ಮತ್ತೇಭವಿಕ್ರೀಡಿತವೃತ್ತ.

574. ಕೆಲವಂ ಬಲ್ಲವರಿಂದ ಕಲ್ತು
ಕೆಲವಂ ಶಾಸ್ತ್ರಂಗಳಂ ಕೇಳುತಾ,
ಕೆಲವಂ ಮಾಳ್ಪವರಿಂದ ಕಂಡು,
ಕೆಲವಂ ಸುಜ್ಞಾನದಿಂ ನೋಡುತಾ,

Sources from which the Author derived his knowledge of the world.

ಕೆಲವಂ ಸಜ್ಜನಸಂಗದಿಂದ

ಲರಿಯಲ್ಸರ್ವಜ್ಞನಪ್ಪಂತೆ, ಕೇ

ಳ್ಪಲವಂ ಪಳ್ಳ ಸಮುದ್ರವೈ.

ಹರಹರಾ ! ಶ್ರೀಚನ್ನಸೋಮೇಶ್ವರಾ !

ಈ ವೃತ್ತಗಳನ್ನು ಮಾಡಿದವನು ಯಾರಂದರೆ ಪಾಲ್ಕುರಿಕೆ ಎಂಬ ಗ್ರಾಮದಲ್ಲಿಯು ಆ· ರಾಧ್ಯಬ್ರಾಹ್ಮಣನಾಗಿದ್ದ ಸೋಮಯ್ಯನು.

575. ಮುಕುರಂ ಕೈಯೊಳಿರಲ್ಕೆ,

Nothing above good friends.

ನೀರ ನೆಳಲ್ಯಾಕೈ ? ಕಾಮಧೇನಿರ್ದರೂ

ಟಕೆ ಗೊಡ್ಡಾಕಳನಾಳ್ವರೇ?

ಗುಣಯುತರ್ಪ್ಪಾಲುಂಡು ಮೇಲುಂಬರೇ ?

ಶುಕನೋದಿಂಗತಿಚಲ್ವ

ಕಾಕರವ ? ರಂಭಾನೃತ್ಯರೇಡ್ಡೊಂಬರೇ ?

ಸಖರಿಂದುನ್ನತವಸ್ತುವೇ ?

ಹರಹರಾ ! ಶ್ರೀಚನ್ನಸೋಮೇಶ್ವರಾ !

576. ಪಣವಿರ್ದೇನುಣಿಸಾಗದಾಗ

A blade of grass obtained in the right time, a mountain.

ಸತಿಯಿರ್ದೇನ್ಯವ್ವನಂ ಪೋದ ಮೇ

ಲೊಣಗಲ್ಪೈರಿಗೆ ಬಾರದಿಪ್ಪ

ಮಳೆ ತಾ ಬಂದೇನದಾಪತ್ತಿನೋ

ಳ್ಮಣಿದುಂನೋಡದ ಬಂಧು

ವೇತಕೆಣಿಸಲ್ಕಾಲೋಚಿತಕ್ಕೈದಿದಾ

ತೃಣವೇ ಪರ್ವತವಲ್ಲವೇ ?

ಹರಹರಾ ! ಶ್ರೀಚನ್ನಸೋಮೇಶ್ವರಾ !

577. ಫಲವತ್ತಿಲ್ಲದ ರಾಜ್ಯದಲ್ಲಿ,

The wise must not remain at dangerous places.

ಪ್ರಭು ದಂಡಕ್ಕಾಸೆ ಗೈವಲ್ಲಿ, ಬ
ಲ್ಪುಲಿಗಳ್ಸಿಂಗಗಳಿಕ್ಕೆಯಲ್ಲಿ,
ಪರವೆಂಣಿರ್ದಲ್ಲಿ, ಕುಗ್ರಾಮದೊ
ಳ್ಗೆಲವಂ ತೋರದೆ ದುಃಖವಪ್ಪ
ಯಡೆಯೊಳ್ಭೂತಂಗಳಾವಾಸದೊ
ಳ್ನಿಲೆ ಬಲ್ಲನಿರ್ಲ ಬಾರದೈ !
ಹರಹರಾ ! ಶ್ರೀಚನ್ನಸೋಮೇಶ್ವರಾ !

1. ಫಲಪುಷ್ಪದ್ವ.

578. ಚರಿಪಾರಣ್ಯದ ಪಕ್ಷಿಗೊಂದು

One bad man among many good men of no consequence.

ತರು ಗೊಡ್ಡಾಗಲ್ಫಲಂ ತೀವಿದಾ
ಮರಗಳ್ಪುಟ್ಟವೆ ? ಪುಷ್ಪ
ವಂದು ಬಳಲ್ಭೃಂಗಕ್ಕೆ ಪೂವಿಲ್ಲವೇ ?
ನಿರುತಂ ಸತ್ಕುಲವರ್ಗದಲ್ಲಿ
ಮುನಿದೋರ್ವಂ ಲೋಭಿಯಾಗಿರ್ದಡಂ,
ಧರೆಯೊಳ್ದಾತರು ಪುಟ್ಟರೇ ?
ಹರಹರಾ ! ಶ್ರೀಚನ್ನಸೋಮೇಶ್ವರಾ !

579. ತೆರನಂ ಕಾಣದ ಬಾಳ್ಕೆ,

These things like pouring out of an empty hand.

ಸ್ವಲ್ಪಮತಿ, ಕ್ಷುದ್ರಾರಂಭಮಲ್ಪಾಶ್ರಯಂ,
ಕಿರಿದೋಟಂ, ಕಡೆವಳ್ಳಿ,
ಬೇದಿಮನೆ ಮುಂಗೈಯಾರ್ಭಟಂ, ಸಾಲದಾ

ಧೋರೆಗಾರ್ಯರ್ಗಂ, ಘೃತವಿಲ್ಲದೂಟದ
ಸುಖಂ, ಮುಗ್ಧಾಂಗನಾಸಂಗಮಂ,
ಬರಿಗೈಯುಂ ಸವಿದಂದವೈ !
ಹರಹರಾ ! ಶ್ರೀಚನ್ನಸೋಮೇಶ್ವರಾ !

580. ಅರೆಯುಂ ಶೀಳುವಡಾನೆ
ಮೆಟ್ಟಲಹುದೆ ? ಜಾನಂಗಳಿಂದಲ್ಲದೇ ?
ಕಿರಿದಾಗಿರ್ದಡದೇನುಪಾಯ
ಪರನೋರ್ವರ್ಗಂ ಕೋಟಿಗೀಡಕ್ಕು ; ಪೆಂ
ಮರನಿರ್ದೇನದರಿಂಪಲೆತ್ತಲಹುದೆ
ಬಲ್ಭಾರಮಂ ? ಸಂನೆ ಸಾ
ಸಿರಕಾಲಾಳಿನ ಸತ್ವವೈ
ಹರಹರಾ ! ಶ್ರೀಚನ್ನಸೋಮೇಶ್ವರಾ !

Contrivance superior to physical power.

581. ಕ್ಷಿತಿಯುಂ ಶೋಧಿಸಲಕ್ಕು ;
ತಾರೆಗಳ ಲೆಖ್ಖಂ ಮಾಡಲಕ್ಕಾಗಸೋಂ
ನತಿಯುಂ ಕಾಣಲು ಬಕ್ಕು ;
ಸಾಗರಗಳೇಳುಂ ದಾಂಟಲಕ್ಕುಂ;
ನಭೋಗತಿಯುಂ ಸಾಧಿಸಲಕ್ಕು;
ಬೆಟ್ಟಗಳ ಚೂರ್ಣಂ ಮಾಡಲಕ್ಕೀಕ್ಷಿಸ
ಲ್ಸತಿಯರ್ಚಿತ್ತವಭೇದ್ಯವೈ !
ಹರಹರಾ ಶ್ರೀಚನ್ನಸೋಮೇಶ್ವರಾ !

The minds of women impenetrable.

582. ಇರಿಯುಲ್ಬಲ್ಲರೆ, ವೀರನಾಗು
ಧರೆಯೊಳ್ಕಾನಾ ಚಮತ್ಕಾರಮಂ

A man must do only that for

which he has abilities.

ಮರಿಯಲ್ಬಲ್ಲರೆ, ಮಂತ್ರಿಯಾಗು !
ಪ್ರಭುವಾಗಾರಂಪಡಂ, ಕೋಪಮಂ
ತೊರೆಯಲ್ಬಲ್ಲರೆ; ಯೋಗಿಯಾಗು
ಮರಿಷಡ್ವರ್ಗಂಗಳಂ ಬಾಧಿಸ
ತ್ತಿರಬಲ್ಲರೊಪ್ಪಣೆ ಯಪ್ಪುಳ್ಳೆ !
ಹರಹರಾ ! ಶ್ರೀಚನ್ನಸೋಮೇಶ್ವರಾ !

583. ರವಿ ಯಾಕಾಶಕೆ ಭೂಷಣಂ ;

The sun is to the sky an ornament, &c.

ರಜನಿಗಾಚಂದ್ರಂ ಮಹಾಭೂಷಣಂ ;
ಕುವರರ್ವಂಶಕೆ ಭೂಷಣಂ ;
ಸರಸಿಗಂಭೋಜಾತಗಳ್ಭೂಷಣಂ ;
ಹವಿ ಯಜ್ಞಾಗೆ ಭೂಷಣಂ ;
ಸತಿಗೆ ಪಾತಿವ್ರತ್ಯವೇ ಭೂಷಣಂ;
ಕವಿ ಯಾಸ್ಥನಕೆ ಭೂಷಣಂ;
ಹರಹರಾ ! ಶ್ರೀಚನ್ನಸೋಮೇಶ್ವರಾ !

584. ಧರೆಯೋ ಬೀಜವ ನುಂಗೆ, ಬೇಲಿ

Protection impossible, if the protectors injure.

ಹೊಲನೆಲ್ಲಂ ಮೆದ್ದಡಂ, ಗಂಡನೆಂ
ಡರನತ್ಯುಗ್ರದಿ ಶಿಕ್ಷಿಸ
ಲ್ಪ್ರಜೆಗಳಂ ಭೂಪಾಲನೇ ಬಾಧಿಸ
ಲ್ತರುವೇ ಪಣ್ಗಳ ಮೆಲ್ಲೆ,
ಮಾತೆ ವಿಷಮಂ ಪೆತ್ತರ್ಭಕಗೂಡಲಾ
ಧೊರೆ ಕೊಲ್ಲಲ್ಪರ ಕಾಯ್ವನೇ ?
ಹರಹರಾ! ಶ್ರೀಚನ್ನಸೋಮೇಶ್ವರಾ !

585. ಕುಲದೋಟಕ್ಕಂಜರು, ಕೂಸನೀಯರು

With a man of bad luck even the ground on which he treads will be angry.

ನೃಪನಿಷ್ಕಾರಣಂ ದಂಡಿಪ

ಪೊೞಲೊಳ್ನೆರರು ;

ಪೊಱಗ್ಗೈದು ಸತಿ ತಾಂ ಪೊಱಗಟ್ಟುವಳ್ಳಾಳಿಗ

ಕೆಱಲುಗುಂಡಂ ಮಿಗೆ

ಪೇರುವತೊಱಲಗಿರಲ್ಲಕ್ಷ್ಮಿ ಕ್ರೂರಕಟಾಕ್ಷೇಕ್ಷಣಂ

ನೆಲ ಮುಟ್ಟಲ್ಕುಸಿದಿಪ್ಪುದೈ !

ಹರಹರಾ ! ಶ್ರೀಚನ್ನಸೋಮೇಶ್ವರಾ !

586. ಕೊಳನಂ, ತಾವರೆಯುಂ,

Good dreams enumerated.

ತಳಿರ್ತ ವನಮಂ, ಪ್ರಾದೋಟಮಂ, ವಾಜಿಯುಂ,

ಗಿಳಿಯುಂ, ಬಾಲಮರಾಳನಂ,

ಬಸವನಂ, ಜೇಳ್ಕಿಯುಂ, ಛತ್ರಮಂ,

ತಿಳಿನೀರ್ಪೂರ್ಣತಟಾಕಮಂ,

ಕುಮುದಮಂ, ದೇವರ್ಕಳಂ, ತುಂಬಿಯುಂ,

ತಿಳಿಯಲ್ಸ್ವಪ್ನದಿ ಲೇಸಲ್ತೈ !

ಹರಹರಾ ! ಶ್ರೀಚನ್ನಸೋಮೇಶ್ವರಾ !

587. ಹಣಮಂ, ನೆತ್ತರ, ನೆಳ್ಳು,

Bad dreams enumerated.

ಕೋಣ, ಕುರಿಯುಂ, ಹಾರಾಯುಧಂ, ಬೀಳ್ಪುದಂ,

ಕುಣಪಂ, ಕೊಲ್ಲುದನಂಗಹೀನ

ಪೊಸತಂ, ಮಿಂದಿರ್ಪುದಂ, ಯೇರುವಂ,

ದಣಿಮಂ, ಕೆಂಪಿನಸ್ತ್ರೀಯನೆಣ್ಣೆದಲೆ,

ನೂತ್ನಾಗಾರ, ರಾಕ್ಷಸರಂ,

ಕನಸಂ ಕಾಣಲಿ ಬಾರದೈ !

ಹರಹರಾ ! ಶ್ರೀಚನ್ನಸೋಮೇಶ್ವರಾ !

588. ಕೊಡ ಬೇಕುತ್ತಮನಾದವಂಗೆ ಮಗಳಂ

Proper conduct in different circumstances.

ಸತ್ಪಾತ್ರಗಂ ದಾನಮಂ;

ಯಿಡ ಬೇಕೀಶ್ವರನಲ್ಲಿ ಭಕ್ತಿರಸಮಂ,

ವಿಶ್ವಾಸಮಂ ಸ್ವಾಮಿಯೋ

ಬಿಡ ಬೇಕ್ಕೈ ಧನಲೋಭ,

ಬಂಧುಜನರೊಳ್ದುಷ್ಟಾತ್ಮರೊಳ್ಗೋಷ್ಟಿಯಂ ;

ಯಿಡ ಬೇಕಿದ್ದುಣ ಬೇಕಲ್ಲೈ !

ಹರಹರಾ ! ಶ್ರೀಚನ್ನಸೋಮೇಶ್ವರಾ !

589. ಪೊರ ಬೇಡಂಗಡಿಸಾಲ,

Do not contract debts, &c.

ದೂರ ಪೋಣೆಯಂ, ನಿಂದ್ಯಂಗಳಂ, ಪಾಪಮಂ

ಮರೆ ಬೇಡಾತ್ಮಜಮಿತ್ರನಂ,

ಸತಿಯುಳಂ, ನ್ಯಾಯಂಗಳೊಳ್ಸತ್ಯಮಂ !

ತೆರೆ ಬೇಡಂಗನೆಪಕ್ಷಿಸ್ಪೃಷ್ಟತರಳ್

ಗರ್ವಿಪದಾರಿದ್ರರಂ !

ತೆರ ಬೇಡೊತ್ತೆಗೆ ಬಟ್ಟಿಯಂ !

ಹರಹರಾ ! ಶ್ರೀಚನ್ನಸೋಮೇಶ್ವರಾ !

590. ಸುರೆಯಂ ಸೇವಿಸಿದಾತ ಬಲ್ಲನೆ

A drunkard and a proud man

ಮಹಾಯೋಗೀಂದ್ರರೆಂದೆಂಬುದಂ ?

pay no regard to good men. ಧೊರೆಯೋಲ್ತೇಜವನಾಂತವಂ

ಬಡವರಂ ತಾ ನೋಳ್ಪನೇ ಕಂಗಳಿಂ ?

ಪಿರಿಯವರ್ಮಾನ್ಯರು ಯೆಂದು

ಕಾಂಬನೆ ಮಹಾದುರ್ಮಾರ್ಗಿ ? ಯೆಂತಾದಡಂ.

ದುರುಳಂ ಬಲ್ಲನೆ ಬಾಳ್ವರಂ ?

ಹರಹರಾ ! ಶ್ರೀಚನ್ನಸೋಮೇಶ್ವರಾ !

591. ಶುಕ, ಶಂಖಂ, ಗಜ, ವಾಜಿ, ವೇಣು,

Good omens. ಪಶು, ತಾಳಂ, ಭೇರಿ, ಶೋಭಾನ ಪಾ

ಠಕ, ನೃತ್ಯಂ, ಗಣಿಕಾಂಗನಾದಿ,

ತಳಿರಂ, ಪೂವಂಣು, ವಿಪ್ರದ್ವಯಂ,

ಮುಕರಂ, ಮಾಂಸವು, ಮದ್ಯ

ತುಂಬಿದ ಕೊಡಂ, ಪೇರ್ಗಿಜ್ಜನಾರ್ಕಂಡಡಂ,

ಶಕುನಂ ಶೋಭನಕಾಸ್ಪದಂ ;

ಹರಹರಾ ! ಶ್ರೀಚನ್ನಸೋಮೇಶ್ವರಾ !

592. ಕಪಿಯುಂ, ಗಾಣಿಗ, ಪಾವು,

Bad omens ಕಾಷ್ಟ ಜಿನ, ತಕ್ರಂ, ತಾವಿರಕ್ತಂ, ವಿರೋ

ಧಿಪನೋರ್ವಂ ದ್ವಿಜ, ಮುಕ್ತಕೇಶಿ,

ಜಟಿ, ರಕ್ತಂ, ರಿಕ್ತಕುಂಭಂ, ವಿರಾ

ಜಿಪ ಭಿನ್ನಾಂಗನ, ಕುಷ್ಟನಂ,

ವಿಧವೆಯುಂ, ಕೊಂಡಾಟವುಂ, ಧೂಮಮುಂ,

ಚಪಳರ್ಕಂಡರೆ, ಪೋಪರೇ?

ಹರಹರಾ! ಶ್ರೀಚನ್ನಸೋಮೇಶ್ವರಾ!

593. ಚಿಗುರೆಂಮುಂ ಮಲೆ, ಬೇವು

An enemy not to be despised on account of his youth.

ಸ್ವಾದಮುಮುದೇ? ಚೋಳುಂ ಮಹಾಸಣ್ಣದೆಂ

ದಗೆಯಲ್ಕಕ್ಚದೇ? ಪಾಲನೂಡಿ

ಪುಲಿಯಂ ಸಾಕಲ್ಕೆ, ವಿಶ್ವಾಸಿಯೇ?

ಖಗ ಸಾಕಲ್ಬಹುದೆಂದು

ಗೂಗೆಮರಿಯಾ ಶಬ್ದಕ್ಕೆ ತಂದಿಪ್ಪರೇ?

ಪಗೆಯುಂ ಬಾಲಕನೆಂಬರೇ?

ಹರಹರಾ! ಶ್ರೀಚನ್ನಸೋಮೇಶ್ವರಾ!

594. ಗಿಡವೃಕ್ಷಂಗಳಿಗಾರು

God the preserver of the world.

ನೀರನೆರವರ್ನಿತ್ಯಂ ಮಹಾಬೆಟ್ಟಗ

ಳ್ಕಡು ಕಾರ್ಪಣ್ಯದಿ ಕೇಳ್ವವೇ?

ನೆಲಜಲಾಗ್ನಿರ್ವಾಯುವಾಕಾಶಮುಂ

ಪಡವಂಡಂಗಳನಾವ ಸಾಕುವ!

ಜಗತ್ತುಪ್ರೇರಕಂ ನೀನಿರ

ಲ್ಕಾಡುವರ್ಕೊಂಬರು ಮರ್ತ್ಯರೇ;

ಹರಹರಾ! ಶ್ರೀಚನ್ನಸೋಮೇಶ್ವರಾ!

1. ಬ್ರಹ್ಮಾಂಡಗಳನ್ನು 2. ಮರ್ತ್ಯರನ್ನ ಸಹಾಯ ಮಾಡಬೇಕೆಂದು ಕೇಳುತ್ತಾವೆ?

595. ಉಡುರಾಜಂ ಕಳೆ ಗುಂದಿ

By the favor of God, a poor

ಪೆಚ್ಚದಿಹನೇ? ನ್ಯಗ್ರೋಧಬೀಜಂ ಕೆಲಂ

man may become rich.

ಶಿಡಿದುಂ ಪೇರ್ಮರನಾಗದೇ ?
    ಯಳಿಗರಂ ತಾ ದೊಡ್ಡಯತ್ತಾಗದೇ ?
ಮಿಡಿ ಪಂಣಾಗದೆ ? ದೈವದೊಲ್ಮೆ
    ಯಿರಲುಂ, ಕಾಲಾನುಕಾಲಕ್ಕೆ ತಾ
ಬಡವಂ ಬಲ್ಲಿದನಾಗನೇ ?
    ಹರಹರಾ ! ಶ್ರೀಚನ್ನಸೋಮೆಶ್ವರಾ !

596. ಮಡೆಯಂಗುತ್ತಮವಿದ್ಯ ಬಿಟ್ಟ ;

An atom a mountain to the miser.

    ಕುರುಡಂಗಂ ಮಾರ್ಗವೇ ಬಿಟ್ಟ ; ಕೇ
ಳ್ಬಡವಂಗೆಲ್ಲರ ದ್ವೇಷ ಬಿಟ್ಟ ;
    ಜಡದೇಹಿಂಗಂ ಜರಾ ಬಿಟ್ಟ ; ಮು
ಪ್ಪಡಿಸಿರ್ದಾತಗೆ ಪೆಣ್ಣು ಬಿಟ್ಟ ;
    ರುಣವೇ ಪೇರ್ಬೆಟ್ಟ ಮೂಲೋಕದೊ
ಳ್ಕಡು ಲೋಭಿಂಗಣು ಬೆಟ್ಟವೈ !
    ಹರಹರಾ ! ಶ್ರೀಚನ್ನಸೋಮೇಶ್ವರಾ !

597. ಪ್ರಜೆಗಳ್ಪಾಲಿಸ ಬಲ್ಲಡಾತನರಸಂ ;

The king who knows how to protect his subjects, &c.

    ಕೈಯ್ಯಾಸೆಯಂ ಮಾಡದಾ
ನಿಜಮಂತ್ರೀಶ್ವರ ; ತಂದೆತಾಯಿ
    ಸಲಹಲ್ಬಲ್ಲಾತನೇ ಧಾರ್ಮಿಕಂ ;
ಭಜಕಂ ತ್ರಿಪದಿ ಭಕ್ತಿಯುಳ್ಳತಿ,
    ಭಟಂ ಸಿಡಿಗೇತ್ರೆ ತಾನಾವನಂ ;

ದ್ವಿಜನಾಚಾರತಿಯುಳ್ಳವಂ
ಹರಹರಾ ! ಶ್ರೀಚನ್ನಸೋಮೇಶ್ವರಾ !

598. ಪುರದುರ್ಗಂಗಳ ಬಲ್ಮೆ ಮಾಡದೆ,
ಪ್ರಜಾಕ್ಷೋಭಂಗಳಂ ನೋಡದೆ
ಲ್ಲರು ವಿಶ್ವಾಸಿಗಳೆಂದು ನಂಬಿ
ಬಹುದುಂಟಾದಪ್ಪುದಂ ಕಾಣದಾ
ತುರದಿಂದುಂಡತಿನಿದ್ರೆಗೈದು
ಮದನಂಗಾಳಾಗಿಪಂ ಲೋಕದೋ
ಳ್ಧೊರೆಯೇ ? ಸೊಕ್ಕಿದ ಕೋಣನೈ !
ಹರಹರಾ ! ಶ್ರೀಚನ್ನಸೋಮೇಶ್ವರಾ !

A bad king a male buffalo.

599. ಸರಿಯೇ ಸೂರ್ಯಗೆ ಕೋಟಿ
ಮಿಂಚುಬುಳಗಳ್ನಕ್ಷತ್ರಮೊಪ್ಪಿರ್ದಡೇ
ನೊರೆಯೇ ಚಂದ್ರಗೆ ? ಜೀವರತ್ನ
ಕಣಿಯೇ ಮಿಕ್ಕಾದ ಪಾಷಾಣವೆ?
ಮೃಗೇಂದ್ರಂಗೆ ಸಮಾನ ಸೀಳ್ನಾಯ್ ?
ಸುಪರ್ಣಂಗೀಡೆ ಕಾಕಾಳಿ ? ಸ
ಕ್ಕರೆಗುಪ್ಪಂ ಸರಿ ಮಾಳ್ಪರೇ ?
ಹರಹರಾ ! ಶ್ರೀಚನ್ನಸೋಮೇಶ್ವರಾ !

Millions of glow-worms not equal to the sun, &c.

1. ಮಳೆ ಹುಳ.

600 ಪಿಡಿಯೊಳ್ತುಂಬಿರೆ ಪಂಕ, ಮೇಲು
ದೊಂಳೆಯಲ್ಕಾ ಶುದ್ಧಮೇ ? ಮಾಡುತ

Outward cleanliness not inward purity.

ಕಡು ಪಾಪಂಗಳ, ಮೀಯಲಾತ
ಶುಚಿಯೇ ? ಕಾಕಾದಿಗಳ್ಮೀಯವೇ ?
ಗುಡ ಪಾನಂಗಳ ಮೈಗೆ
ಪೂಸಲದು ತಾ ಸ್ವಾದಪ್ಪುದೆ ? ಬಾಹ್ಯದೋ
ಳ್ಮಡಿಯೇ ನಿರ್ಮಲಚಿತ್ತಮೈ ?
ಹರಹರಾ ! ಶ್ರೀಚನ್ನಸೋಶ್ವರಾ !

601\. ಕಡು ಮುಪ್ಪಾಗಿರೆ ; ಕುಂಟನಾಗೆ ;
ಕುರುಡಂ ತಾನಾಗೆ ; ಯೆತ್ತೇರಿದಾ
ಮುಡುಬಾ, ಮೂಕೊರೆ,
ಮೂಢ, ಮೂಕ, ಕಿವುಡಂ, ಚಂಡಾಲ ತಾನಾದಡಂ ;
ಸುಡುಮೈ, ಕುಷ್ಟಶರೀರ
ಯಾಗಲೋಲಿವ ಪೊರ್ನ್ನಿತ್ತರಾಪೆಂಣ್ಗಳುಂ ;
ಕೊಡುಗೈ ಸ್ತ್ರೀಜನವಶ್ಯಮೈ !
ಹರಹರಾ ! ಶ್ರೀಚನ್ನಸೋಮೇಶ್ವರಾ !

Money all powerful with women.

602\. ಸುರಚಾಪಾಯುಧಮಿಂದ್ರಜಾಲದ ಬಲಂ
ಮೇಘಂಗಳಾಕಾರ, ಬಾ
ಲರು ಕಟ್ಟ್ಯಾಡುವ ಕಟ್ಟೆ
ಸ್ವಪ್ನದ ಧನಂ, ನೀರ್ಗುಳ್ಳಿ, ಘಾಳೀಸೊಡ
ರ್ಪರಿಯುತ್ತಿಪ್ಪ ಮರೀಚಿಕಾಜಲ,
ಜಲಾವರ್ತಾಕ್ಷರಂ, ಯಿಂತಿವಂ

Fortune uncertain; a drop of water on a blade of grass.

ಸಿರಿ ಪುಲ್ಲಾಗ್ರದ ತುಂತುರ್ಕೈ !

ಹರಹರಾ ! ಶ್ರೀಚನ್ನಸೋಮೇಶ್ವರಾ !

603. ಧನಕಂ, ಧಾನ್ಯಕೆ, ಭೂಷಣಾಂಬರ

There are no men, who are not desirous of wealth, &c.

ಸುಪುಷ್ಪಂಗಳ್ಗೆ, ಯಿಷ್ಟಾದಿಭೋ

ಜನಕಂ, ಪಂಣ್ಗಾಲ ಚಂದನಾದಿ

ಯನುಲೇಪಂಗಳ್ಗೆ, ಕಂಣ್ಗೊಂಪವಾ

ದೊನಿತಾಸಂಗಕೆ, ರಾಜ್ಯಭೋಗಕೆ

ಸುವಿದ್ಯಂಗಳ್ಗೆ, ಯಾರಾಪಡಂ,

ಮನದೊಳ್ಕಾಮಿಸಿ ನೋಡರೇ ?

ಹರಹರಾ ಶ್ರೀಚನ್ನಸೋಮೇಶ್ವರಾ !

604. ಹೊಳೆಯುಳ್ಳಿಕ್ಕಿದ ಜೇನು,

Honey put in the river, the miser's wealth.

ಶೂದ್ರ ಬೆಳದಾಕಾರಂಗಳಂ ಮಾಡಿದಾ

ಬಲುಸಂಣಾಗ್ರದ ಛತ್ತ್ರ

ಸರ್ಪ ಧನವಂ ಕಾದಿರ್ಪ್ಪದಾದೀನರಾ

ಪೊಲೆಪಾಟಿಂದಲಿ ಕೂಡಲಿಕ್ಕಿ

ಪರರಿಂಗೀಡಾಗಿ ತಾ ಮಾಳ್ಪರ್ಕೈ ;

ಫಳಸೇನುಂಣದೆ ಪೋಪರ್ಕೈ !

ಹರಹರಾ ! ಶ್ರೀಚನ್ನಸೋಮೇಶ್ವರಾ !

605. ಸತಿಯುಮೂರ್ತಿಗೆ ಸೋಲ್ವ ಜೂಜಿಗೆ

The wise are not infatuated with doubtful things.

ಖಳಕೊರ್ಂಡಾಡುತಿರ್ಪಲ್ಲಿಗಂ,

ಮತಿಪಾಪಂ ಬಹ ಕಾರ್ಯಕಲ್ಪ
ವಿಷಯಕ್ಕಂ, ಡಾಸೆಯರ್ಗೋಷ್ಟಿಗಂ
ಪ್ರತಿ ತಾನಿಲ್ಲದ ಮದ್ದುಮಂತ್ರ
ಮಣಿಗಂ, ಸಂದೇಹಗೊಂಡಲ್ಲಿಗಂ,
ಮತಿವಂತರ್ಮರಳಪ್ಪರೇ ?
ಹರಹರಾ ! ಶ್ರೀಚನ್ನ ಸೋಮೇಶ್ವರಾ !

606. ಹಿಡಿಯಲ್ಪಿಂಗುಗೆ ಮತ್ಸರಂ

A mean man will not give up his meanness.

ಕವಿಯದೇ? ದುರ್ಗಂಧಮಂ ಘೂಳಿಯೋ
ಳ್ತಡಯಲ್ನಾರದೆ? ನಾಯಿಬಾಲ
ಕಡೆಯಂ ಕಟ್ಟಲ್ಕೆ, ಚನ್ನಪ್ಪುದೇ ?
ಸುಡು ! ಚೇಳಂ ತೆಗೆಯಲ್ಕೆ,
ಸುಮ್ಮನಿಹುದೇ ? ಯೇನಂದಡೆಷ್ಟಾದಡಂ,
ಬಿಡ ತನ್ನಂಗವ ನೀಚ ತಾಂ
ಹರಹರಾ ! ಶ್ರೀಚನ್ನ ಸೋಮೇಶ್ವರಾ !

607. ಘನದೈನ್ಯಂ ಬಡುವರ್ಗುರುತ್ವ

Though in reduced circumstances men are still arrogant.

ಗೆಡುವರ್ಗಾಸಕ್ಕೆ ; ಕುಗ್ರಾಮವಾ
ಗನು ಗೆಟ್ಟಿರ್ಪರು ; ಯಾಕ್ಷಣಕ್ಕೆ
ಕೆಲವರ್ಮಾತಾಡರುಂ, ಬೀಗಿಬಿ
ಕ್ರನೆ ಬಾಗರ್ತಲೆಗೇರಿ ಸೊಕ್ಕು
ತೊನೆವರ್ತಾವೆಲ್ಲರಂ ನಿಂದಿಪಾ
ಮನುಜರ್ಗೆತ್ತಣನೀತಿಯ್ಯೊ ?
ಹರಹರಾ ! ಶ್ರೀ ಚನ್ನ ಸೋಮೇಶ್ವರಾ !

608. ಸುಡು ಸೂಪಂಘೃತವಿಲ್ಲದೂಟವ !

Burn a meal without ghee, &c. Better nothing!

ಪರಾನ್ನಾಪೇಕ್ಷಿಪಾಜೀವ್ಯೆಯುಂ !
ಸುಡು ದಾರಿದ್ರ್ಯದ ಬಾಳ್ಕೆಯುಂ,
ಕಪಟಕೋಪಂಬಾಳ್ವಸಂಗಾತಿಯುಂ !
ಸುಡು ತಾಂಬೂಲವಿಹೀನವಕ್ತ್ರ,
ಪರವೆಂಣಂ ನೋಡುವಾಕಂಗಳಂ,
ಸುಡಿವಂ ತಪ್ಪುವರಾಜನಂ !
ಹರಹರಾ ! ಶ್ರೀಚನ್ನಸೋಮೇಶ್ವರಾ !

609. ಬಡಿಗೋಲಂ ಸಮ ಮಾಡಲ

A fool is past improvement.

ಕ್ಕರೆಯೊಳುಂ ಕೂಪಂಗಳಂ ತೋಡಲ
ಕ್ಕಿಡಿಮುಕ್ಕಂ ಮೃದು ಮಾಡಲಕ್ಕು ;
ಮಳಲೊಳ್ತೈಲಂಗಳಂ, ತೋರಲ
ಕ್ಕಡವೀಸಿಂಗನ ತಿದ್ದಲಕ್ಕು ;
ಕರೆಯಲ್ಬಕ್ಕುಗ್ರಸರ್ಪಂಗಳಂ ;
ಕಡು ಮೂರ್ಖಂ ಮತಿ ಗೇಳನೈ !
ಹರಹರಾ ! ಶ್ರೀಚನ್ನಸೋಮೇಶ್ವರಾ !

610. ಅಣು ಮಾತ್ರಂ ಸಚರಿಕ್ಷಿದಾಣ್ಮ

An accountant who takes bribes, a rat.

ನಿಹೆಗಂ ಲಂಚಕೊಳ್ಳುಡಂಬಟ್ಟುವಾ
ಪಣಮಂ ಕೊಂಡತಿದ್ರವ್ಯಮಂ
ಕೆಡಿಸಿ ಘಾಡಂ ಗೇಳಿ ದ್ರೋಹಂಗಳಾ
ಯೆಣಿಸುತ್ತೆಲ್ಲರ ಬಾಳ್ಗೆ ನೀರನೆರದುಂ
ತಾ ಮಾಣದೇ ಭಕ್ಷಿಪಾ

ಗಣಿಕಂ ಹೆಗ್ಗಣಕಂ ಸಮಂ ;
ಹರಹರಾ ! ಶ್ರೀಚನ್ನಸೋಮೇಶ್ವರಾ !

611\. ಇಳೆಯಾಣ್ಮಂ ತನಗಿಂದ ವೆಗ್ಗಳ
ನೆನುತ್ತಂ ಪಾರುಪತ್ಯಂಗಳಂ
ಖಳಗೀಯಲ್ಲು ಲಿತಿಂದು
ರಾಜ್ಯವನಿತಂ ನೀವ್ಯಾಕೆ ತಾವ್ಯಾತಕೆಂ
ದುಳಿದರ್ಗೀಯದೆ ಜೀತಮಂ,
ಕಪಿಯು ಮುಷ್ಟಿಂ ಮಾಡಿ ಕೂಗುತ್ತಿಹಾ
ದಳವಾಯೀ ತಳವಾರನೈ !
ಹರಹರಾ ! ಶ್ರೀಚನ್ನಸೋಮೇಶ್ವರಾ !

A bad general only a beadle.

612\. ವಡೆಯಂಗುತ್ಸಹಮಾಗೆ,
ಸರ್ವಜನಮಾನಂದಂ ಬಡಲ್ರಾಜ್ಯಜೇಂ
ಗೊಡದೋಲ್ತುಂಬಿ ತುಳುಂಕಿ
ಸಿಜ್ಜ್ವಫಲಪೈರಿಂದೂರ್ವಿಯುಂ ಬಿತ್ತಿ ಬ
ಳ್ಗಿದುರ್ಗಂಗಳ್ ಭದ್ರಮಾಡಿ
ಧನಧಾನ್ಯಂ ತೀವಿ ಭಂಡಾರದೊ
ಳ್ನಡೆವಂ ಭಾಗ್ಯದ ಕರ್ತನೈ !
ಹರಹರಾ ! ಶ್ರೀಚನ್ನಸೋಮೇಶ್ವರಾ !

A happy king, whose subjects are happy.

613\. ಕಳವಂಪ್ರೋದುದ ಪೋಗಿ
ಹೆಜ್ಜೆವಿಡಿದಾಮರ್ಮಂಗಳಂ ಕಾಣದೇ,
ಪೊಳಲೊಳ್ಪೊಕ್ಕರ, ಪೋದರಂ,
ನುಡಿದರಂ, ಮತ್ತಾರನಂ ನೋಡದೇ,

A beadle, who cannot find out thieves, only a bird.

ಅಳಿವ ನ್ಯಾಯುವ ನೋಡಿ ಯುಲ್ಲ
    ರಹರೆಂದುಂಮನ್ಯಥಾ ಬಾಧಿಪಾ
ತಳವಾರಂ ಬೇಳವಾರನ್ನೈ !
    ಹರಹರಾ ! ಶ್ರೀಚನ್ನಸೋಮೇಶ್ವರಾ !

614. ಹಣವುಳ್ಳಂ, ಹೆಣನಾದಡಂ ವ್ರೊಲಿದ
    ವ್ರೋಲಾರೆಂದಡಂ, ಬಿಟ್ಟರ
ರ್ಕ್ಷಣಮಾತ್ರಂ ; ಬಹು ಕೂಟಬ್ಯಾಟಗಳಲಿಂ
    ಸೋತಂವದಿಂ ಹಾಲಮುಂ

Love of harlots lasts only as long as one has money.

ದಣ ಬೆಕ್ಕಾಡುವ್ರೋಲಾಡಿ
    ಸರ್ವಧನ ತಾ ಪ್ರೋಗಲ್ಕೆ, ಮಾತಾಡರ್ರೈ !
ಗಣಿಕಾಸ್ತ್ರೀಗುಣ ಯಾತಕ್ಕೈ ?
    ಹರಹರಾ ! ಶ್ರೀಚನ್ನ ಸೋಮೇಶ್ವರಾ !

615. ತೆರನಂ ಕಾಣದ ತಾಣ ತಾಟಕಿತನಂ
    ತಾ ಮಾಳ್ಪರಿಪ್ಪಲ್ಲಿ ನಿ
ಷ್ಠುರಭಾಷಾನೃಪನಲ್ಲಿ
    ನಿಂದೆ ವರಿದೇ ಬಪ್ಪಲ್ಲಿ, ಯುಸ್ನೋದಕಂ

Avoid bad society!

ಕಿರಿದಾಪಲ್ಲಿ ರಿಪುವ್ರಜಂಗಳೆಡೆಯೋ
    ಳ್ದುಸ್ಸಂಗಮುಗೋಷ್ಠಿಯೋ
ಳಿರಸಲ್ಲಿರ್ದಡೆ, ಹಾನಿ ಯ್ಯೈ !
    ಹರಹರಾ ! ಶ್ರೀಚನ್ನಸೋಮೇಶ್ವರಾ !

616. ಕುರುಡಂ ಕನ್ನಡಿಯಂ,

The dog unequal to the lion.

ಕವೀಂದ್ರರ ಮಹಾಮಾರ್ಗಿಗಳ್ತ್ಯಾಗಿಯಂ
ಬರಡಂ, ಬಾಲರ ಮುಗ್ಧಬಂಜೆ,
ಕುಲಟಾ ಪೂರ್ಣೇಂದುವಂ, ಕಾವ್ಯದಾ
ಪರಿಯಂ ಗಾಂಪರು ಪಾಪಿಗಳ್ಸುಜನರಂ
ಮಾಣಿಕ್ಯಮಂ ಮರ್ಕಟಂ,
ಜರಿಯಲ್ಸಿಂಗಕೆ ಗ್ರಾಮಸಿಂಹ ಯೆಣೆಯೇ !
ಶ್ರೀಚನ್ನಸೋಮೇಶ್ವರಾ !

617. ಮರಗಳ್ಪುಟ್ಟವೆ ತಾಣ ಮೊಂದೆ ಖಗಕಂ ?

God, the creator, also the preserver of man.

ರಾಜ್ಯಂಗಳೇಂ ಪಾಳೆ? ಭೂ
ವರರೊಳ್ತ್ಯಾಗಿಗಳಿಲ್ಲವೆ ? ಕವಿಗೆ
ವಿದ್ಯಾಮಾತ್ರಮುಂ ಬಂಜೆಯೇ ?
ಪುರ ಮಂದೇನುಣಲಿಕ್ಕದೆ ?
ಸಿಜನನಿ ಗಂಡೆಂದೆನ್ನಳೇ ? ಲೋಕದೊ
ಳ್ಪರನಂ ಪುಟ್ಟಿಸಿ ಹುಲ್ಲ ಮೆಯ್ಯಿಸುವನೇ ?
ಶ್ರೀಚನ್ನಸೋಮೇಶ್ವರಾ ?

ದಾಸರ ಪದಗಳು.

THE VERSES OF KANAKADASA.

a ಕನಕದಾಸನಿಂದಾವದ್ದು.

ಪೀಠಿಕೆ.

ಧಾರವಾಡಜಿಲ್ಲೆಯ ಕೋಡ ತಾಲ್ಲೂಕಿನಲ್ಲಿ ಈಗ ಬಾಡ ಎಂಬುವ ಒಂದು ಸಣ್ಣ ಗ್ರಾಮವುಂಟು, ಅದರಲ್ಲಿ ಈಗ ಸುಮಾರು ೩೦೦ ವರುಷದ ಕೆಳಗೆ ಒಬ್ಬ ಬೇಡರ ಹುಡುಗನು ಕನಕ ಯೆಂಬ ಹೆಸರಿನಿಂದ ಬೆಳೆದು ಬೇಟೆ ಆಡುವಲ್ಲಿ ಯುದ್ಧ ಮಾಡುವಲ್ಲಿ ಶೂರನಾಗಿದ್ದನು. ವೇಳೆ ವೇಳೆಗೆ ಸ್ವಪ್ನದಲ್ಲಿ ಕೃಷ್ಣ ಬಂದು ಅವನಿಗೆ ನೀನು ಹೀಗೆ ಕಾಟಕ ತನದಿಂದ ಇರಬೇಡ, ನನ್ನ ದಾಸನಾಗಿ ಭಿಕ್ಷೆ ಬೇಡಿಕೊಂಡು ಇರು ಅಂತ ಹೇಳುತ್ತಿದ್ದನು. ಅವನು ವಲ್ಲೆನು ಅನ್ನುತ್ತಾ ಬಂದನು. ಹೀಗೆ ಕೆಲವು ಕಾಲ ಹೋದ ಮೇಲೆ, ಒಂದು ದಿವಸ ಆ ಬಾಡ ಎಂಬ ಗ್ರಾಮದವರಿಗೂ ನೆರೆ ಹಳ್ಳಿಯವರಿಗೂ ಸೀಮಾಂತರನ್ಯಾಯ ಬಿದ್ದು ಯುದ್ಧವಾಯಿತು. ಆಗ ಕೃಷ್ಣ ನೆರೆಹಳ್ಳಿಯವರ ಕಡೆಯವನಂತೆ ಒಬ್ಬ ರಾವುತನಾಗಿ ಬಂದು ಈ ಕನಕ ಎಂಬುವ ಕಾಟಕನನ್ನು ಬಹಳ ಹೊಡೆದು ಮೈಯೆಲ್ಲಾ ಘಾಯ ಮಾಡಿದನು. ಆ ಮೇಲೆ ಅವನು ಘಾಯ ಕಟ್ಟಿಸಿಕೊಂಡು ಮನೆಯಲ್ಲಿ ಮಲಗಿದ್ದಾಗ, ಮತ್ತೂ ಸ್ವಪ್ನದಲ್ಲಿ ಬಂದು, ನಾನೇ ರಾವುತನ ರೂಪವಾಗಿ ಬಂದು ನಿನ್ನ ಹೊಡೆದೆ ಇನ್ನಾದರೂ ನನ್ನ ಮಾತು ಕೇಳಿ ನನ್ನ ದಾಸನಾಗಿ ದಂಡಿಗೆ ಹಿಡಕೊಂಡು ನನ್ನ ನಾಮಸ್ಮರಣೆ ಮಾಡಲಿಕ್ಕೆ ಒಡಂಬಟ್ಟರೆ, ನಿನ್ನ ಘಾಯ ಈಗಲೇ ಮಾಯಿಸುತ್ತೇನೆ ಅನ್ನೋಣ, ಈ ಕನಕ ಒಡಂಬಟ್ಟನು. ಆಗ ಸ್ವಪ್ನ ತಿಳಿದು ನೋಡೋದರಲ್ಲಿ ಎಲ್ಲಾ ಘಾಯ ಆಗಲೇ ಮಾದಿದ್ದವು. ಮೂಗಿನ ಮೇಲೆ ಒಂದು ದೊಡ್ಡ ಘಾಯವಾಗಿತ್ತು. ಅದು ಮಾಯಿತೋ ಇಲ್ಲೋ ಅಂತ ಎಡಗೈ ಮೂಗಿನ ಮೇಲೆ ಇಟ್ಟುಕೊಂಡು ನೋಡೋಣ ಆ ಕೈ ಬೊಟ್ಟು ಅಲ್ಲೇ ಹತ್ತಿಕೊಂಡು ಬಿಡದ ಹಾಗಾಯಿತು. ಆಗ ಕೃಷ್ಣನ ಸ್ತೋತ್ರ ಮಾಡಲಿಕ್ಕೆ ಹತ್ತಿದ ಸಮಯದಲ್ಲಿ ಅವನು ಪ್ರತ್ಯಕ್ಷವಾಗಿ ನನ್ನ ದಾಸನಾದ ನೆಂಬುವ ಗುರುತಿನ ದೆಶೆಯಿಂದ ಈ ಕೈ ಹೀಗೆ ಯಿರಲಿ, ಇದರಲ್ಲಿ ದಂಡಿಗೆ ಹಿಡಕೊಂಡು ನನ್ನ ನಾಮಸ್ಮರಣೆ ಮಾಡುತ್ತಾ ಇರು. ನಿನಗೆ ಯಾವಾಗ್ಯಾದರು ಆ ಕೈಯಿಂದ ಕೆಲಸ ಮಾಡೋದು ಬಿದ್ದಾಗ, ಬಿಡುತ್ತದೆ. ಆ ಕೆಲಸ ತೀರುತ್ತಲೇ, ಮತ್ತು ಇಲ್ಲೆ ಇಟ್ಟುಕೊಳ್ಳ ಬೇಕೆಂತ ಅಪ್ಪಣೆ ಕೊಟ್ಟ ಪ್ರಕಾರಕ್ಕೆ ಮಾಡಿ, ಪದಗಳನ್ನು ಹಾಡಿ ಕೊಳ್ಳುತ್ತಾ ತಿರುಗಿದನು. ಕಡೆಗೆ ಧಾರವಾಡ ಜಿಲ್ಲೆಯಲ್ಲಿರುವ ಕಾಗಿನೆಲೆಯಾದಿಕೇಶವನ ಗುಡಿಯಲ್ಲಿ ಸತ್ತನು.

ಈ ದಾಸರ ಪದಗಳಲ್ಲಿ ಪ್ರಾಸನಿಬಂಧನೆ ಮಾತ್ರಾ ಸಂಖ್ಯೆ ಈ ಎರಡಲ್ಲದೆ ಉಳಿದ ನೇಮ ಏನು ಇಲ್ಲ. ತಮ್ಮ ಇಚ್ಛೆಗೆ ಬಂದರಾಗಕ್ಕೂ ತಾಳಕ್ಕೂ ಸಮ ವಾಗುವ ಹಾಗೆ ನೋಡಿ ಮಾಡುತ್ತಾರೆ.

1. ರಾಗ ಕಲ್ಯಾಣಿ.

618. ತಲ್ಲಣಿಸದಿರು ಕಂಡ್ಯ ತಾಳು ಮನವೆ !
Cares unnecessary. ಕೊಳ್ಳು ಶಾಂತಿಯ ! ಸ್ವಾಮಿ ರಕ್ಷಿಸುವ ನಿನ್ನ. (ಪಲ್ಲ)

619. ಅಡವಿಯೊಳಗಾಡುವ ಮೃಗಜಾತಿ ಪಕ್ಷಿಗೆ
God cares for you. ಯುಡಿಗಳಿಗೆ ಯಾಹಾರವನು ಯಿತ್ತವರು ದಾರೋ ?
ಪಡೆದ ಜನನಿಯು ದೇವ ಸ್ವಾಮಿ ಹೊಣೆಕಾರಾಗಿ
ಬಿಡದೆ ರಕ್ಷಿಸನಿದಕೆ ಸಂದೇಹ ಬೇಡಾ !

620. ಬೆಟ್ಟದ ತುದಿಯಲ್ಲಿ ಬೆಳದಿರ್ಪ ಮರಗಳಿಗೆ
God is security for all creatures. ಕಟ್ಟೆಯನು ಕಟ್ಟಿ ನೀರೆರೆದವರುಂಟೇ ?
ಪುಟ್ಟಿಸಿದ ಸ್ವಾಮಿ ತಾ ಹೊಣೆಕಾರನಾಗಿರಲು,
ಕೊಟ್ಟು ರಕ್ಷಿಪನಿದಕೆ ಸಂದೇಹ ಬೇಡಾ !

621. ಕಲ್ಲೊಳಗೆ ಪುಟ್ಟಿ ಕೂಗುವ ಮಂಡುಕಾದಿಗೆ
ಅಲ್ಲಿಲ್ಲಿಗಾಹಾಹಾರನಿತ್ತವರದಾರೋ ?
ಬಲ್ಲಿದನು ಕಾಗಿನೆಲೆಯಾದಿಕೇಶವರಾಯ
ನಿಲ್ಲದೇ[1] ರಕ್ಷಿಪನು ; ಸಂದೇಹ ಬೇಡಾ !

1. ಒಂದನ್ನೂ ಬಿಡದ ಹಾಗೆ.

2. ರಾಗ ಸೌರಾಷ್ಟ್ರ. ಅಷ್ಟತಾಳ.

622. ವರಕವಿಗಳ[1] ಮುಂದೆ ನರಕವಿಗಳ[2] ವಿದ್ಯ ಮಾಡ ಬಾರದು, ಈ
Do not worship stones. ಧರಣಿಯ ಕಲ್ಲಿಗೆ ಶರಣೆಂದು ಪೂಜೆಯ ಮಾಡ ಬಾರದು. (ಪಲ್ಲ)

1. ವಿದ್ಯಾಭ್ಯಾಸ ಮಾಡದಲೆ ವರ ಪಡಕೊಂಡು (ಕನಕದಾಸನಂತೆ) ಕಾವ್ಯ ಮಾಡುವವರು. 2. ಶಾಸ್ತ್ರ ಕಲಿತುಕೊಂಡು ಕವಿಗಳಾದವರು.

Different rules of life.

623. ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವ ತೋರ ಬಾರದು; ಬಹು
ಕೋಪಿಗಳಿದ್ದಲ್ಲಿ ಯನುಭವಗೋಷ್ಟಿಯ ಮಾಡ ಬಾರದು.

624. ಅಡಿ ಸತ್ತ ಮಡಿಕೆಗೆ ಜೋಡಿಸಿ ಯೊಲೆಗುಂಡ ಹೂಡ ಬಾರದು ;
ಬಡತನ ಬಂದಾಗ ನೆಂಟರ ಬಾಗಿಲ ಸೇರ ಬಾರದು.

625. ಹರಿಯು ಕಿರಿದು ಹರ ಘನನೆಂದು ನರಕಕ್ಕೆ ಸೇರ ಬಾರದು;
ಪರರನ್ನು ಬೈದು ಪಾತಕಕ್ಕೆ ಮುನ್ನೊಳಗಾಗ ಸೇರ ಬಾರದು.

626. ಮಡದಿ ನುಡಿಯ ಕೇಳಿ ಜಗಳಕ್ಕೊಬ್ಬರ ಕೂಡೆ ಹೋಗ ಬಾರದು ;
ಬಿಡಾರವಸ್ತಿಯ, ಬಾಯ್ಬಡಿಕರು ಯಿದ್ದಲ್ಲಿ ಮಾಡ ಬಾರದು.

627. ಮುಂದೆ ಭಲಾ ! ಯೆಂದು, ಹಿಂದೆ ನಿಂದಿಪರನು ಕೂಡ ಬಾರದು ;
ತಂದೆ ಬಡಪಾದಿ ಕೇಶವನ ಸ್ಮರಣೆಯ ಮರೆಯ ಬಾರದು.

THE VERSES OF PURANDARADASA.

b. ಪುರಂದರ ದಾಸನಿಂದಾದದ್ದು.

ಪೀಠಿಕೆ.

ಪುರಂದರಗಡ ಎಂಬ ಒಂದು ಊರು ಉತ್ತರ ದೇಶದಲ್ಲಿ ಉಂಟು. ಅದು ಈಗ ಅಹಂಮದನಗರದ ಜಿಲ್ಲೆಯಲ್ಲಿ ಒಂದು ತಾಲ್ಲೂಕಾಗಿರುತ್ತದೆ. ಈ ಗ್ರಾಮದಲ್ಲಿ ಸುಮಾರು ಕೆಲವು ನೂರು ವರುಷದ ಹಿಂದೆ ಒಬ್ಬ ಸ್ಮಾರ್ತಬ್ರಾಹ್ಮಣನು ಸಾವಕಾರಿಕೆ ಮಾಡಿಕೊಂಡು ಬಹಳ ಕೃಪಣ ವೃತ್ತಿಯಿಂದ ಇರುತ್ತಿದ್ದನು. ಕಿಂಚಿತ್ತಾದರೂ ದಾನಧರ್ಮ ಮಾಡುತ್ತಿದ್ದಿಲ್ಲ. ಇವನ ಕೃಪಣತ ಬಿಡಿಸಬೇಕೆಂತ, ಕೃಷ್ಣನು ಒಬ್ಬ ಬಡ ಬ್ರಾಹ್ಮಣನ ವೇಷ ತಕ್ಕೊಂಡು ಆ ಸಾವಕಾರನಲ್ಲಿ ಬಂದು ಯಾಚನೆ ಮಾಡಲಿಕ್ಕೆ ಹತ್ತಿದನು. ದಿನಪ್ರತಿ ಬೆಳಿಗ್ಗೆ ಬರುತ್ತಿರಲಿಕ್ಕೆ, ಸಾವಕಾರ, ನಾಳೆ ಬಾ! ಈ ಹೊತ್ತು ಕೆಲಸದಲ್ಲಿದ್ದೇನೆ ಎಂದು ಹೇಳುತ್ತಾ ಬಂದನು. ಇದೇ ಪ್ರಕಾರ ಸಮಗ್ರ ಒಂದು ವರುಷ ಆ ಬ್ರಾಹ್ಮಣನು ಮನೆಗೆ ಬಂದು ಹೋಗುತ್ತಿದ್ದ ಸಾವಮೇಲೆ, ಸಾವಕಾರನಿಗೆ ಬಹಳ ಬೇಸರ ಬಂದು, ತನ್ನ ಮನೆಯಲ್ಲಿ ಇದ್ದ ಖೊಟ್ಟಿದುಗ್ಗಾಣಿ ಒಂದು ವರುಷ ಆ ಬ್ರಾಹ್ಮಣನ ಮುಂದೆ ಸುರುವಿ, ಇದರಲ್ಲಿ ಬೇಕಾದ್ದು ಒಂದು ಆರಿಸಿ ಕೊಂಡು ಹೋಗು ಅಂತ ಹೇಳಿದರಿಂದ, ಆ ಕಪಟಬ್ರಾಹ್ಮಣನು ವಲ್ಲೆನೆಂದು ಬಿಟ್ಟು, ಹೋಗಿ ಹಿತ್ತಲಬಾಗಲಿಂದ ಆ ಸಾವಕಾರನ ಹೆಂಡತಿಯ ಕಡೆಗೆ ಬಂದು ಮಗನ ಮುಂಜಿ ಮಾಡುತ್ತೇನೆ, ಏನಾದರೂ ದ್ರವ್ಯದಾನ ಕೊಡು! ಅಂತ ಕೇಳಿದ್ದಕ್ಕೆ, ಆ

ಕೆ. ನಾನು ಹೆಂಗಸು, ನನ್ನ ಸ್ವತಂತ್ರದಲ್ಲಿ ಏನಿಲ್ಲ ಅಂಬೋಣ, ನಿನ್ನ ಮೂಗಿನಲ್ಲಿರುವ ನತ್ತು ಕೊಡು! ಪುಣ್ಯ ಬರುತ್ತದೆ ಎಂದು ಹೇಳಿ ಆ ಬ್ರಾಹ್ಮಣ ಬಹಳ ಪೀಡಾಕಾರ ಮಾಡಿದ್ದರಿಂದ, ನನ್ನ ಗಂಡ ದೊಡ್ಡ ಸಾವಕಾರನಾದಾಗ್ಯೂ, ದಾನಧರ್ಮ ಮಾಡುವದಿಲ್ಲ, ಏನಾದರೂ ಚಿಂತೆ ಇಲ್ಲ, ನಾನಾದರೂ ದಾನ ಮಾಡೋಣ ಅಂತ ತಿಳುಕೊಂಡು, ತನಗೆ ಹೇಳಿಕೊಂಡ ಪ್ರಕಾರ, ಆ ಬ್ರಾಹ್ಮಣನಿಗೆ ತನ್ನ ಮೂಗಿನೊಳಗಿದ್ದ ನತ್ತನ್ನು ಕೊಟ್ಟು ಬಿಟ್ಟಳು. ಅವನು ಆಗಲೆ ಅದನ್ನ ತಕ್ಕೊಂಡು ಬಂದು ಅದೇ ಸಾವಕಾರನ ಬಳಿಯು ಈ ನತ್ತು ಒತ್ತೆ ಇಟ್ಟುಕೊಂಡು ಹಣ ಕೊಡು ಎಂದು ಕೇಳಿದಾಗ, ತನ್ನ ಹೆಂಡತಿಯದು ಅಂತ ಗುರ್ತು ತಿಳಿಯಿತು. ಪರಂತು ತನ್ನ ಮನೆಯಲ್ಲಿ ಮೊದಲು ವಿಚಾರ ಮಾಡಿ ನೋಡಿದ ಮೇಲೆ, ಈ ಬ್ರಾಹ್ಮಣನನ್ನ ವಿಚಾರಿಸಬೇಕೆಂದು ನೆನಸಿ ಈ ನತ್ತು ನನ್ನ ಬಳಿಯಲ್ಲಿರಲಿ! ನೀನು ಸಂಜೆಯ ಕಡೆಗೆ ಬಾ! ಹಣ ಕೊಡುತ್ತೇನೆಂದು ಬ್ರಾಹ್ಮಣನಿಗೆ ಹೇಳಿ ಕಳುಹಿಸಿ ನತ್ತನ್ನು ತನ್ನ ಅಂಗಡಿಯಲ್ಲಿ ಇಟ್ಟುಕೊಂಡು ಮನೆಗೆ ಹೋಗಿ ಹೆಂಡತಿಯ ನೋಡಲಾಗಿ, ಮೂಗತಿ ಇದ್ದಿಲ್ಲ. ಏನಾಯಿತು ಅಂತ ಕೇಳೋಣ, ತೆಗದಿಟ್ಟಿದ್ಧೇನೆ, ಮನೆಯಲ್ಲಿ ಅದೆ ಅಂದಳು. ಈಗಲೆ ತಂದು ತೋರಿಸು! ಎಂದು ಬಹಳ ಸಿಟ್ಟು ಮಾಡೋಣ, ತರುತ್ತೇನೆಂದು ಆಕೆ ಕೋಣೆಯೊಳಗೆ ಹೋಗಿ, ಇನ್ನು ಮೇಲೆ ನನ್ನ ಮರಿಯಾದಿ ಉಳಿಯುವದಿಲ್ಲ, ಗಂಡನಿಂದ ಶಿಕ್ಷೆ ಹೊಂದುವದಕ್ಕಿಂತ ಸಾಯುವದು ಚೆಲ್ಲೋದು ಅಂತ ತಿಳಿದು ವಿಷ ವರದು ಬಟ್ಟಲೊಳಗೆ ಹಾಕಿ ಕುಡಿಯೋದಕ್ಕೆ ಸಿದ್ಧವಾಗಿ ಮುಖದ ಸಮೀಪಕ್ಕೆ ಆ ಬಟ್ಟಲನ್ನು ಎತ್ತಿದಾಗ್ಯೆ, ಆ ವಿಷದಲ್ಲಿ ಆ ನತ್ತು ತೇಲುತ್ತಿತ್ತು. ಆಗ ಅದು ತಕ್ಕೊಂಡು ವಿಷ ಚೆಲ್ಲಿ ಗಂಡನ ಬಳಿಗೆ ಬಂದು ನತ್ತು ತೋರಿಸೋಣ, ಅವನು ಅನುಮಾನಕ್ಕೆ ಬಿದ್ದು ಬ್ರಾಹ್ಮಣ ಕೊಟ್ಟು ಹೋದ ನತ್ತು ಅಂಗಡಿ ಪೇಟಿಯಲ್ಲಿ ಇಟ್ಟದ್ದನ್ನು ನೋಡಲಾಗಿ, ಅಲ್ಲಿ ಇದ್ದಿಲ್ಲ. ಆಗ ಬಹಳ ಆಶ್ಚರ್ಯವಂತನಾಗಿ ಹೆಂಡತಿಯ ಕರೆದು ಏನು ಪೂರ್ವೋತ್ತರ ನಡಿಯಿತು? ನತ್ತು ದಾರಿಗಾದರೂ ಕೊಟ್ಟಿದ್ದೀಯಾ, ಇಲ್ಲ? ಕೊಟ್ಟಿದ್ದರೆ, ತಿರಿಗಿ ಹ್ಯಾಗೆ ಬಂತು? ಇದೆಲ್ಲ ನಿಶ್ಚಯ ಹೇಳು! ಹೆದರ ಬೇಡ. ಅಂದಲ್ಲಿ, ಆಕೆ ನಡೆದ ಪೂರ್ವೋತ್ತರ ಎಲ್ಲಾ ಹೇಳಿದಳೂ. ಆಗ ಸಾವಕಾರಗೆ ಪಶ್ಚಾತ್ತಾಪ ಹುಟ್ಟಿತು. ನನ್ನ ಕೃಪಣತ್ವಕ್ಕೆ ಕೃಷ್ಣ ಪರೀಕ್ಷೆ ಮಾಡಿದನು ಈ ದ್ರವ್ಯವಿದ್ದರೆ, ಇಷ್ಟು ಕೃಪಣತ್ವ ಮಾಡಬೇಕಾಗುತ್ತದೆ, ಇದೆಲ್ಲ ದಾನ ಮಾಡಿ ದೇವರ ಧ್ಯಾನದಿಂದ ಕಾಲಕ್ಷೇಪ ಮಾಡಿ ಮುಕ್ತನಾಗಬೇಕೆಂತ, ವೈರಾಗ್ಯ ಮನಸು ಹಿಡಿದು ತನ್ನ ದ್ರವ್ಯ ಮನೆ ಮೊದಲಾಗಿ ಎಲ್ಲಾ ದಾನ ಮಾಡಿ ತನ್ನ ಹೆಂಡರು ಮಕ್ಕಳು ಸಹಿತ ದೇವರ ದಾಸನಾಗಿ ಬೇರೆ ಬೇರೆ ಪದಗಳನ್ನು ಹಾಡಿಕೊಳ್ಳುತ್ತಾ ತಿರುಗುತ್ತಿದ್ದನು. ವಿಶೇಷವಾಗಿ ಪಂಢರಪುರದಲ್ಲಿ ಭಿಕ್ಷ ಬೇಡಿಕೊಂಡು ಉಂಡುಕೊಂಡು ಕಾಲಕಳೆದನು. ಹೀಗೆ ಅವನ ಇತಿಹಾಸ ಉಂಟು ಈ ದಾಸರಪದಗಳಲ್ಲಿ ಬಣ್ಣಿಸಿರುವ ವೈಷ್ಣವ ಮತ ಸುಮಾರು ೭೦೦ ವರುಷದ ಕೆಳಗೆ ಮಂಗಳೂರು ಜಿಲ್ಲೆಯಲ್ಲಿಯ ಉಡುಪಿಯೊಳಗೆ ಹುಟ್ಟಿದ ಮಧ್ವಾಚಾರ್ಯನಿಂದ ಸ್ಥಾಪನೆಯಾಯಿತು. ಅಂದಿನಿಂದ ಸ್ಮಾರ್ತರಾದ ಬ್ರಾಹ್ಮಣರು ಈ ಮತದಲ್ಲಿ ಸೇರೇ ಸೇರುತ್ತಾರೆ. ಆದರೆ ಸ್ಮಾರ್ತರಿಗೂ ಈ ವೈಷ್ಣವರಿಗೂ ಮತ ಭೇದವಲ್ಲದೆ ಕುಲಭೇದವೇನಿಲ್ಲ.

1. ರಾಗ ಶಂಕರಾಭರಣ. ಅದ್ವೈತಮತ ಖಂಡನೆ.

628. ಬೇಡವೋ ! ಕುವಾದಿ ! ನೀ ಬೇಡವೋ !

The Vedánta is a very improper doctrine.

ಬೇಡೆಲೋ ! ಕೇಳು ! ನೀ
ನಾಡುವದುಚಿತಲ್ಲೀವಾದಿ
ಮೂಢನೇ ! ನಿನಗಾವಖೋಡಿ ಬೋಧಿಸಿದನು ?
ನಾಡಿಗೊಡೆಯರಂಗಗೀಡು ಯೆಂಬುವ ಮಾತು ಬೇಡವೋ! (ಪಲ್ಲ.)

629. ಎಲ್ಲ ಜೀವನು ದೇವ ವೊಂದೇ, ಭೇದ

God and animal life all one.

ವಿಲ್ಲೆಂದಾಡುವದಿದು ಛಂದೆ ? ಯಮ
ಕೊಲ್ಲದೆ ಬಿಡುವನೆ ? ಮುಂದೆ ನಿನ್ನ
ಹಲ್ಲುದುರಿಸುವನಿದೊಂದೆ ? ಅಹಾ !
ವುಳ್ಳಿಗಡ್ಡಿಯನುದ್ದಿ ಬೆಳ್ಳಗೆ ತೊಳದಿನ್ನು
ಅಲ್ಲಕ್ಕೆ ಸರಿ ಯೆನೆ, ಬಲ್ಲರೊಪ್ಪುವರೇ ?

630. ಒಬ್ಬ ಬ್ರಹ್ಮವೆಲ್ಲ ಮಯವು ; ನಿನ

All is illusion except Brahma; then he must be in hell and heaven at the same time.

ಗೊಬ್ಬಗಿಂನೆಲ್ಲಿ ನಿರ್ಣಯವು ? ನಿನ್ನ
ಶಬ್ದಶಾಸ್ತ್ರಗಳೆಲ್ಲ ನಿಜವು ಯೆಂ
ದುಬ್ಬಿ ಯಾಡುವದೆ ನಿರ್ಣಯವು ; ಅಹಾ !
ವೊಬ್ಬ ಬ್ರಹ್ಮಗೆ ಮುಕ್ತಿ, ವೊಬ್ಬ ಬ್ರಹ್ಮಗೆ ನರಕ ;
ಇಬ್ಬರಿಗಾಯಿತು; ನಿನ್ನೊಬ್ಬಗೆ ಈ ಮಾತು.

1. ಇನ್ನೊಬ್ಬರ ಮನಸಿಗೆ ಬಾರದು ಈ ಮಾತು.

631. ಭೇದವಿಲ್ಲೆಂತೆಂಬೆ ? ನೀನು ಹೊಲೆ

No difference, all one: then you must not observe the rules of caste.

ಮಾದಿಗರೆಲ್ಲ ವೊಂದೇನು ? ಸರಿ
ಹೋದರಲ್ಲಿ ವುಂಣು ನೀನು ! ಸವಿ

ಸ್ವಾದವು ನಿನಗಿಲ್ಲವೇನು ? ಅಹಾ !
ವೋದನಾದರೂ ವೊಂದವೋಧವಾದರೊಂದೆ ?
ಭೇದವಿಲ್ಲವಲ್ಲೆಂದು ಸೋದಿಯೋ ನರಕಕ್ಕೇ ?

632. ನಾಶವಿಲ್ಲೆಂಬುದಾ ಸತ್ಯ ; ದೋಷ
ಕ್ಲೇಶವಿಲ್ಲೆಂಬುದು ಮಿಥ್ಯ ; ಜಗ
ದೀಶಗೆ ಜೀವನು ಭೃತ್ಯ , ಬಿಡದೆ
ವಾಸವಾಗಿಪ ಹೃದಯ ನಿತ್ಯ ; ಅಹಾ !
ವಾಸುಪರ್ಣವೆಂಬುದೀಸ್ಮೃತಿಯರ್ಥವು
ಲೇಸಾಗಿ ತಿಳಿಯದೆ ಘಾಸಿ ಬಡುವಿ ! ವ್ಯರ್ಥ !

God and man different. The latter the servant to the former.

633. ಒಂದೆಯಾದರೆ ನಿನಗೆಲ್ಲ, ನಿನ್ನ
ತಂದೆಯಿಂ ನೀ ಪುಟ್ಟಿದಲ್ಲ ! ನಿನ್ನ
ತಂದೆ ನೀನು ವೊಂದೆ ಯಲ್ಲ ? ನೀನು
ಚೆಂದಾಗಿ ತಿಳಿ ಈಸೊಲ್ಲ ! ಅಹಾ !
ತಂದೆಸತಿಯು ನಿನಗೇನಾದಳು ? ಮತಿ
ಮಂದ ! ತಾಯಿಗಂಡ ಇಂದು ನೀನಾದೆಲೋ !

If all is one, then you and your father are one : you are an incestuous person.

634. ಗುರುವಿಲ್ಲ, ದೈವವಿಲ್ಲ, ನಿನಗೆ ವೊಬ್ಬ
ಸರಿಯಿಲ್ಲವೀಧರೆಯೊಳಗೆ ; ವುಂಟು,
ಹಿರಿಕಿರಿಯರುಸಾಕರಿಗೆ ; ನೀನು
ಖರದ ಬಾಲದಕಿಂತ ಹೊರಗೆ, ಅಹಾ !
ಯರಡಿಲ್ಲವೆಂಬಗೆ ಇರಲಿಲ್ಲ, ನಿನಗಿನ್ನು
ಬರ ಸಿರಿಯು ವೊಂದೆ ? ಯರಿಯದೆಮುಳುಗುವೀ !

To him, who says, all is one, famine and plenty are alike.

1. ಚಾಕರ.

635. ವಂದನೆನಿಂದೆಗಳೊಂದೆ ನಿನಗೆ ?

Is abuse and praise all one?

ಗಂಧ ದುರ್ಗಂಧವು ಒಂದೆ ? ಇನ್ನು
ಹಂದಿ ನೀನು ಯಲ್ಲ ಪ್ರೊಂದೆ ? ನಿನ್ನ
ಕೊಂದರೆ, ದೋಷವಿಲ್ಲೆಂದೆ ? ಅಹಾ !
ಎಂದಿಗೂ ಈಮಾತು ? ನಿಂದೆಯು[1] ನಿನಗಿನ್ನು
ಮುಂದಕ್ಕೆ ಬರಲಾರಿ, ಮಂದಮತಿಯು, ಬೋಧೀ !

1. ಹೀಗೆ ಅನ್ನುವದು ನಿನಗೆ ನಿಂದೆ ಯುಲ್ಲದ ಮಾನವಲ್ಲ.

636. ಈಶನು ನೀನಾದರೆ, ಸಕಲ

If you are god, you must support the whole world.

ದೇಶ ಪೋಷಿಸದಿರ್ಪರೆ, ಪರರ
ದಾಸತ್ವವ ವಹಿಸುವರೆ ? ಹೊಟ್ಟೆ
ಯಾಸೆಯಿಂ ನೀ ತಿರುಗುವರೇ ?ಅಹಾ !
ಗ್ರಾಸಕಿಲ್ಲದೆ ವೃಪವಾಸದಿ ಸತಿಸುತ
ಕ್ಲೇಶ ಬಡುವದು ವಿನಾಶ ಮಾಡಲಾರೀ !

637. ಎಲ್ಲ ಬ್ರಹ್ಮಸ್ವರೂಪವು ; ಬೇರೆ

If all is Brahma, are there not different forms, &c?

ಯಿಲ್ಲೆಂದು ನಿನಗೆ ರೂಪವು ಯಾಕು ?
ಸಲ್ಲದು ನಿಂನಾರೋಪವು; ಭೇದ
ವಿಲ್ಲೆಂದಾಡುವದು ಲೋಪವು ; ಅಹಾ !
ಬಲ್ಲಿದ ಪುರುಷನೆ ಮೆಲ್ಲನೆ ನಿನ್ನ ಸತಿ
ಯಲ್ಲಿ ಮಲಗಿದರಲ್ಲಿ ನಿಲ್ಲದಾವರಿಸುವ್ಯಾ !

633. ಅಂನವೆ ಪರಬ್ರಹ್ಮವೆಂಬೀ : ನೀನು

If you and rice are one thing, why do you not eat it when you are sick?

ಅಂನ ಚೆಲ್ಲಲು, ದೋಷವೆಂಬೀ, ಮತ್ತೆ
ಲಂಘನಾಗಿ ಪರಿಪೂರ್ಣ ಗೊಂಬೀ ; ಈ

ಯಂನ ನಾನು ನ್ವೊಂದೆ ಯಂಬೀ; ಅಹಾ!
ನಿಂನ ದೇಹಕೆ ರೋಗ ಮುನ್ನ ತಾ ಬರಲಾಗಿ,
ಅಂನವ ಬಿಟ್ಟು ನೀ ಚನ್ನಾಗಿ ಮಲಗುವೀ!

639. ಜಗದವ್ರೊಳಗೆ ನೀ ನಿಂತು ಈ
ಜಗವಿಲ್ಲೆಂತೆಂಬುವದಕಿಂತು ನೋಡಿ
ನಗುವರು; ಶುದ್ಧದ ಜಂತು! ಜೆಂಪ್ವ
ಬಿಗಿದು ಕೊಲ್ಲುವ ಯಮನಿಂತು ಅಹಾ!
ಹಗಲೆ ಇರುಳೆ ಯೊಂದೆ? ನಗುತ ನಗುತ ಕಂಡು
ತೊಗಲ ದೇಹಕೆ ಯಾಕೆ ಬಗದು ಮಾಡುವದಿಮೂ

You teach this doctrine only, to get food, (knowing that it is a lie.)

1. ನಿನ್ನ ಮಾತು ಬಾಯಿ ಮಾತು ಅಲ್ಲದೆ ಸತ್ಯವಿಲ್ಲ. ನೀನು ಉದರ ಪೋಷಣ ನಿಮಿತ್ತ ಹೀಗೆ ಅಂದಿ. 2. ಕೊಲ್ಲುವನು.

640. ಇದ್ದು ನೀನಲ್ಲೆಂದುಕೊಂಬೀ, ಯಿಲ್ಲಿ
ಇದ್ದವರೆಲ್ಲ ಬ್ರಹ್ಮರೆಂಬಿ; ಕಾಲಿ
ಲೊದ್ದರೆ, ನೀ ನೊಂದು ಕೊಂಬಿ; ಅವರು
ಬುದ್ಧಿಲಿ ಶುದ್ಧವಲ್ಲೆಂಬಿ; ಅಹಾ!
ಬಿದ್ದು ಹೋಯಿತು ನಿನ್ನ ಸಿದ್ಧಾಂತವೆಲ್ಲವು!
ನದ್ದು ಯನ್ನ ಕಡೆ ಗೆದ್ದು ಹೋಗಲಾರೀ

If all are one, why do you make distinctions? call some bad, other good?

1. ಅಂದು ಕೊಳ್ಳುತ್ತಿ

641. ಕಾಣುತ ಬೊಗಳ್ವುದು ನಾಯಿ; ಯಿನ್ನು
ಕಾಣದೆ ಬೊಗಳ್ವುದು ಮಾಯಿ; ಆ
ಶ್ವಾನವು ನಿನಗಿನ್ನು ತಾಯಿ! ಮತ್ತೆ

The Vedantist may learn from a dog, which barks only when seeing something.

1. ನಾಯಿ ಏನೇನೂ ಕಾಣದೆ ಬೊಗಳುವದಿಲ್ಲ—ಆದರೆ ಮಾಯಿ (ಅದ್ವೈತ ಮತ ಹಿಡಿದವನು) ಜ್ವೈಲಿಗೆ ಗದ್ದಲ ಮಾಡುತ್ತಾನೆ. ಆದ್ದರಿಂದ ಆ ನಾಯಿ ನಿನಗೆ ಇನ್ನು ಬುದ್ಧಿ ಕಲಿಸುವ ತಾಯಿ ಆಗಬೇಕು. 2. ದ್ವೈತ ಮತದವರು ಈ ಅಬದ್ಧ ಅದ್ವೈತ ಮತಕ್ಕೆ ಅಡುವ ಗೋಳು ನಿನಗೆ ಹತ್ತುವಿ.

ನೀನು ಯಾಗೋಳ್ಗತ್ತಿ ಸಾಯಿ ! ಅಹಾ !
ಅನ್ಯಾಯ ಮರಿವೆ ನಿಂಸನ್ಯಾಯದಿಂದಲಿ ! ವಾಯು
ಅನನ ಸೀಳದು ತಾನು ಖಂಡಿಸುವನೂ.

642. ಎಷ್ಟು ಹೇಳವರೆ, ನೀ ಕೇಳೆ[1] ; ಬಹಳ
The obstinacy of the Vedantist blamed.
ನಿಷ್ಟುರಾಡುವಿ ; ನೀನು ಬಾಳ ; ನಿನ್ನ,
ಕಟ್ಟಿಗಿ ಮುರದಂತೆ, ಸೀಳ ಬಾಯ
ಕುಟ್ಟಿ ತುಂಬುವರೀಗ ಧೂಳಿ ; ಅಹಾ !
ಶ್ರೆಷ್ಠ ಪುರಂದರವಿಠಲಮೂರ್ತಿಗೆ
ನಷ್ಟಮನುಜ ನೀನಷ್ಟು ವಂದೆಂಬುದು ಬೇಡವ್ರೋ !

1- ನಿಷೇಧ ರೂಪ.

2. ರಾಗ ಮುಖಾರಿ. ಝಂಪೆತಾಳ.

643. ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ ;
Men always unprepared to die.
ಚಿಂತೆಯನು ಬಿಟ್ಟು ಸಿರಿಪರಿಯ ನೆನೆ ಮನವೆ ! (ಪಲ್ಲ)

644. ದಿವರಾತ್ರಿಯನ್ನದೆ, ವಿಷಯ ಲಂಪಟನಾಗಿ
ಸವಿಯೂಟಗಳನುಂಡು ಜಿಮಿಸ ಬೇಡ !
ಅವನ ಕೊಂದಿವನ ಕೊಂದರ್ಥವನು ಘಳಿಸುವದೆ,
ಜವನ ದೂತರು ಬರುವ ಹೊತ್ತು ನೀನರಿಯ.

645. ನೊಂನೆ ಮದಿವಾದೆನ್ನೈ ! ಕರವದೊಂದೆರಡೆಂವೆ !
ನಿನ್ನೆ ಕೊಂಡೆನುಕ್ಷೇತ್ರ ಫಲವು ಬಹುದು
ಹೊನ್ನು ಹಣವುಂಟೆನಗೆ, ಸಾಯಲಾರೆನು ಯನಲು,
ಬೆನ್ನು ಬಿಡುವಳೆ ಮೃತ್ಯು ? ವ್ಯರ್ಥಜೀವಾತ್ಮಾ !

646. ಹೊಸಮನೆಯ ಕಟ್ಟಿಸಿದೆನು; ಗೃಹಶಾಂತಿ[1]; ಮನೆಯೊಳಗೆ
ಬಸುರು ಹೆಂಡತಿ; ಮಗನ ಮದುವೆ ನಾಳೆ;
ಹಸನಾಗಿ ಯಿದೆ ಬದುಕು; ಸಾಯಲಾರೆನು ಯೆನಲು,
ಕುಸುರಿದರಿಯದೆ ಬಿಡರು ಯಮನವರು ಬೇಗ.

1. ಹೊಸಮನೆ ಕಟ್ಟಿದ ಮೇಲೆ ವಾಸ್ತುಪ್ರತಿಷ್ಠೆ ನಡಿಸಿ ಶಾಂತಿ ಮಾಡುವ ತನಕ ಅದರಲ್ಲಿ ಶೇರಬಾರದು. ಹ್ಯಾಗಂದರೆ ಹಿಟ್ಟಿನಿಂದ ಒಂದು ಬೊಂಬೆ ಮಾಡಿ ಅದಕ್ಕೆ ವಾಸ್ತುಪುರುಷನೆಂಬ ಹೆಸರಿಟ್ಟು ಅದಕ್ಕೆ ಪೂಜೆ ಮಾಡಿ ಮಂತ್ರೋಚ್ಚಾರಣ ಪೂರ್ವಕ ಬಲಿ ಅರ್ಪಿಸಿ ಆ ಮೇಲೆ ಅದೆಲ್ಲ ಆ ಮನೆಯ ಮುಖ್ಯಸ್ಥಲದಲ್ಲಿ ಹುಗಿದು ಬಿಡುತ್ತಾರೆ. ಶೂದ್ರರು ಅದಕ್ಕೆ ಕವಡಕಂಟಕ ಅನ್ನುತ್ತಾರೆ. ಈ ವಾಸ್ತು ಪುರುಷ ಆಕಾಶದಲ್ಲಿರುವ ಒಂದು ನಕ್ಷತ್ರ ರಾಶಿಯಲ್ಲದೆ ದೇವರಲ್ಲ ದೈವವಲ್ಲ.

647. ಪುತ್ರ ಹುಟ್ಟಿದ ದಿವಸ; ಹಾಲು ಊಟದ ಹಬ್ಬ;
ಮತ್ತೊಬ್ಬ ಮಗನ ಉಪನಯನ ನಾಳೆ;
ಅರ್ತಿಯಾಗಿದೆ ಬದುಕು; ಸಾಯಲಾರೆನುಯೆನಲು,
ಮೃತ್ಯು ಹೆಡತಲೆಯಲ್ಲಿ ನಗುತಿರ್ಪಳೈಯ

648. ಅಟ್ಟಡಿಗೆ ಯುಣಲಿಲ್ಲ; ಇಷ್ಟದರುಶನವಿಲ್ಲ[1];
ಕೊಟ್ಟ ಸಾಲವ ಕೇಳ ಹೊತ್ತನರಿಯೆ;
ಕಟ್ಲೆ ತುಂಬಿದ ಮೇಲೆ, ಕ್ಷಣಮಾತ್ರ ಇರವಿಲ್ಲ;
ಅಷ್ಟರೊಳು ಪುರಂದರವಿಠಲನ್ನು ಮನವೆ!

1. ತನ್ನ ಗೆಣೆಯನನ್ನು ನೋಡಲಿಲ್ಲ

3. ರಾಗ ಪಂತುವರಾಳಿ. ಮಟ್ಟತಾಳ.

649 ಧರ್ಮವೆಂಬ ಸಂಬಳವ ಘಳಿಸಿಕೊಳ್ಳಿರೋ!
Death inexorable. ಪ್ರೇಮದಿಂದ ಈ ದೇಹವ ನಂಬ ಬೇಡಿ ಕಾಣಿರೋ! (ಪಲ್ಲ)

650 ಅಟ್ಟ ಅನ್ನ ಉಣ ಬಿಡನು
ಕೊಟ್ಟ ಸಾಲ ಕೇಳ ಬಿಡನು

ಪೆಟ್ಟಿಗೆಯೊಳಿದ್ದ ಚಿನ್ನವ
ತೊಟ್ಟೇನೆಂದರೆ, ಯಮನು ಬಿಡನು

651. ಅಕ್ಕನಿಲ್ಲಿಕರೆಯಲಿಲ್ಲ,
ಮಕ್ಕಳನ್ನು ಪಡೆಯಲಿಲ್ಲ ;
ದುಃಖ ಗೊಂಡು ಕಣ್ಣೀರನ್ನು
ಉಕ್ಕಿಸುವದಕ್ಕೆಯಮನುಬಿಡನು

652. ಹೇಳೇನೆಂ[1]ಬರಿಷ್ಟರಿಂಗೆ,
ಬೇಳೆ ಬೆಲ್ಲ ಹೊನ್ನು ತಂದು
ನಾಳೆ ಮಗನ ಮದುವೆ ಯನಲು,
ಕಾಲನು ಬೆನ್ನನು ಬಿಡನು ಇದಕೊ !

1- ಮನುಷ್ಯರು ತಾವು ಮುಂದೆ ಮಾಡ ಬೇಕೆಂದಿರುವ ಕೆಲಸ ತಮ್ಮ ಇಷ್ಟರಿಗೆ ಹೇಳಿ ಹೋದೆವು ಆದರೆ ಯಮನು ಸಾವಕಾಶ ಕೊಡುವದಿಲ್ಲ.

653. ಮಾಳಿಗೆಯ ಮನೆಯೂ ಇರಲಿ !
ಜಾಳಿಗೆ ತುಂಬ ಹೊನ್ನಿರಲಿ !
ಆಳು ಮಂದಿ ಯಾನೆ ಇರಲಿ !
ಕಾಲನು ಬೆನ್ನನು ಬಿಡನು ಇದಕೊ !

654. ಅರ್ಥಿಯಿಂದ ಸಂಸಾರವ
ವ್ಯರ್ಥವಾಗಿ ನೆಚ್ಚ ಬೇಡ !
ಕರ್ತೃಪುರಂದರವಿಠಲನ
ಪೂರ್ತಿಭಕ್ತಿಯಿಂದಲೆ ಭಜಿಸಿರೊ !

4. ರಾಗ ಮುಖಾರಿ. ಜಂಪೆತಾಳ.

655. ಆರು ಹಿತವರು ನಿನಗೆ ಮೂರು ಮಂದಿಗಳೊಳಗೆ ?
Women land, ನಾರಿಯೋ ? ಧಾರುಣಿಯೊ ? ಬಲುಧನದ ಸಿರಿಯೊ ?

656. ಅನ್ಯರಲಿ ಜನಿಸಿರ್ದ ಅಂಗನೆಯು ಕರತಂದು
ತನ್ನ ಮನೆಗವಳ ಯಜಮಾನಿ ಯೆನಿಸಿ
ಭಿನ್ನವಿಲ್ಲದೆ ಯರ್ಥದೇಹವೆನಿಸುವ ಸತಿಯು
ಕಣ್ಣಿನಲಿ ನೋಡಲಮ್ಮಳು ಕಾಲವಶದಿ

money: these three not to be trusted.

657. ಮುನ್ನ ಶತಕೋಟಿರಾಯರುವಾಳಿದನೆಲನ[1]
ತನ್ನದೆಂದೆನುತ ಶಾಸನವ ಬರೆಸಿ
ಬಿನ್ನಣವ ಮನೆ ಗಟ್ಟ ಕೋಟೆ ಕೊತ್ತಳವಿಕ್ಕಿ
ಬಿನ್ನಿಗನು ಅಸುವಳಿಯೆ, ಹೊರಗೆ ಹಾಕುವರು.

1. ಕರ್ಮವಿಭಕ್ತಿ; ನೆಲಕ್ಕೆ ತನ್ನದೆಂದನುತ್ತಾರೆ.

658. ಉದ್ಯೋಗ ವ್ಯವಹಾರ ನೃಪಸೇವೆ ಕುಶಲಗತಿ
ಚತುರತನ ಕಳವು ಪರತಾಪದಿಂದ
ಬುದ್ಧಿಯಿಂದಲಿ ಘಳಿಸಿ ಸಿಕ್ಕಿರ್ದ ಅರ್ಥವನು
ಸದ್ಯದಲಿ ಆರುಂಬುವರು ? ಹೇಳು ! ಮನುಜ !

659. ಶೋಕವನು ಗೈಯ್ಯುವರುಸತಿಸುತರು ಬಾಂಧವರು ;
ಜೋಕೆ ತಪ್ಪಿದ ಬಳಿಕ, ಅರ್ಥವ್ಯರ್ಥ;
ಲೋಕದೊಳು ಘಳಿಸಿರ್ದ ಪುಣ್ಯಪಾಪಗಳೆರಡು
ಸಾಕಾರವಾಗಿ ಸಂಗಡ ಬಪ್ಪುದಲ್ಲದೆ

660. ಅಸ್ಥಿರದ ದೇಹವನು ನಚ್ಚಿ ನಂಬಿರ ಬೇಡ !
ಸೊಸ್ಥದಲಿ ನೆನೆ ಕಂಡ್ಯ ಪರಮಾತ್ಮನ
ಚಿತ್ತದೊಳು ! ಶುದ್ಧಿಯಿಂದಾಪುರಂದರವಿಠಲ
ಸತ್ಯೋತ್ತಮನೆಂದು ಸುಖಿಯಾಗು ಮನುಜ !

II. LITERATURE OF THE LINGAITES.

BASAVA—PURÁNA.

ಬಸವ ಪುರಾಣ. (ಭಾಮಿನಿಷಟ್ಪದಿ)

INTRODUCTION.

ಪೀಠಿಕೆ.

ತೆಳಗಡೆ ದೇಶದಲ್ಲಿ ಇಂದೂ ಆರಾಧ್ಯ ಬ್ರಾಹ್ಮಣರು ಇರುತ್ತಾರೆ, ಅವರು ಶೈವರು. ಆವರಲ್ಲಿ ಬಂದೊಂದು ಮನೆಯ ಹಿರಿಯನು ಮೊದಲು ಹಾಕಿ ಕೊಂಡ ಜನಿವಾರ ಇರಲಿಕ್ಕೆ ಮೇಲೆ ಇಷ್ಟಲಿಂಗ ಕಟ್ಟಿಕೊಂಡು ದೀಕ್ಷಾಬದ್ಧನೆಂದು ಅನ್ನಿಸಿಕೊಂಡು ಶಿವನಿಗಲ್ಲದೆ ಇಂನ್ನೊಂದು ದೈವಕ್ಕೆ ಪೂಜೆ ಮಾಡುವದಿಲ್ಲ. ತನ್ನ ಇಷ್ಟಲಿಂಗ ಕೈಯ್ಯ ಮೇಲೆ ಇಟ್ಟುಕೊಂಡು ತಾನುಂಬ ಅನ್ನ ಅದಕ್ಕೆ ಅರ್ಪಿಸಿ ಪ್ರಸಾದವೆಂದು ತಿಳಿದು ಅದು ಕಿಂಚಿತ್ತಾದರು ಚೆಲ್ಲದ ಹಾಗೆ, ಎಲ್ಲಾ ಉಂಡ ಪಾತ್ರೆ ಸಹಾ ತೊಳೆದು ಆ ನೀರು ಕುಡಿಯುವನು, ಅದಕ್ಕೆ ಎಲೆಯ ಮೇಲೆ ಉಣ್ಣಲಾಗದು. ಅವನು ಸತ್ತ ತರುವಾಯ ಮನೆಯಲ್ಲಿ ಹಿರಿಯನು ಯಾವನೋ ಅವನಿಗೆ ಅವರಲ್ಲಿಯ ಇದೆ ದೀಕ್ಷೆ ಹೊಂದಿದ ಗುರುಗಳು ಇಷ್ಟಲಿಂಗದೀಕ್ಷೆ ಕೊಡುವರು. ಈ ಆರಾಧ್ಯ ಬ್ರಾಹ್ಮಣರಲ್ಲಿ ಬಸವ ಹುಟ್ಟಿದನೆಂಬಂತೆ ಬಸವ ಪುರಾಣಸಾರದ ಮೇಲಿಂದ ತಿಳಿಯ ಬರುತ್ತದೆ. ಅವನು ಉಪನಯನ ಮಾಡಿಸಿ ಕೊಳ್ಳದೆ ಇಷ್ಟಲಿಂಗ ದೀಕ್ಷೆ ಆದರೆ ಸಾಕೆಂದು ತನ್ನ ಕುಲಾಚಾರ ಬಿಟ್ಟನು. ಬಿಜ್ಜಳಂಕ ಅರಸನ ಪ್ರಧಾನಿಯಾದ ಮೇಲೆ, ಯಾವ ಕುಲದವರಾದರೂ, ಇಷ್ಟಲಿಂಗ ಕಟ್ಟಿಸಿಕೊಳ್ಳುವವರು ಯಾರೋ, ಅವರೆಲ್ಲ ಒಂದೆ ಬಳಿಕೆಯಿಂದ ನಡೆಯ ತಕ್ಕದ್ದು ಎಂಬೀ ವೀರಶೈವ ಮತವನ್ನು ಸ್ಥಾಪನೆ ಮಾಡಲಿಕ್ಕೆ ತನ್ನ ಅಧಿಕಾರ ಪ್ರಯೋಗಿಸಿ ಹೆಣ್ಣು ಹೊನ್ನು ಮಣ್ಣು ಕೊಟ್ಟು ಅವರ ಚಿತ್ತ ಸಂಪಾದಿಸಿ ತನ್ನ ಮತಕ್ಕೆ ಬರುವ ಹಾಗೆ ಭ್ರಮೆಗೊಳಿಸಿ ಅನೇಕರನ್ನು ಕೂಡಿಸಿಕೊಂಡನು. ಧೈರ್ಯ ಸಾಲದಕ್ಕೆ ಈ ಪದ್ಧತಿ ಈಗ ಕೆಟ್ಟದೆ. ಲಿಂಗವಂತರಾದರೂ ತಮ್ಮೊಳಗೆ ಕುಲಭೇದ ನಡೆಸುತ್ತಾರೆ. ಹೀಗೆ ಕೆಲವು ಕಾಲ ನಡಿಸಿದ ಮೇಲೆ, ತಮ್ಮಗೂ ಜೈನರಿಗೂ ವಿರುದ್ಧ ಹುಟ್ಟಿತು. ಬಿಜ್ಜಳಂಕನು ತನ್ನ ಮತಕ್ಕೆ ಬಾರದೆ ತನ್ನ ಭಕ್ತರನ್ನು ಹಿಂಸಿಸಿದರಿಂದ, ಅವನನ್ನು ಕೊಲ್ಲಿಸಿ ಕೂಡಲ ಸಂಗಮ ಎಂಬ ಗ್ರಾಮಕ್ಕೆ ಹೋಗಿ ಅಲ್ಲಿಯ ಸಂಗಮೇಶ್ವರನ ಕಲ್ಲಿನ ವಿಗ್ರಹದಲ್ಲಿ ಐಕ್ಯವಾದನಂತೆ.

PREFACE.

ಪೀಠಿಕಾಪದಗಳು.

661. ಇನಿತು ಬಿಡಮತಿಯಿಂ ಬಸವರಾ
ಜನ ಕೃತಿಯ ನಾನೆನಿತು ರಚಿಸುವೆ
ನೆನುತಲಿಸಿ ಶಿವಯೋಗನಿದ್ರಾಮುದ್ರಿತದೊಳಿರಲು,

The Poet Somésha of Pálkurike appears in a dream to Bhímakavi, who was

in some perplexity, how to write this work,

ಅನುನಯದಿ ಪಾಲ್ಕು[1]ರಿಕೆಸೋಮ
ತನುಮನಧನದೇವಾರ್ಯನುಂ ಕನ
ಸಿನೊಳೊಸೆದು ಬಂದು ಪ್ರಸಾದವನಿತ್ತು ನುಡಿಸಿದರು.

1. ಗೋದಾವರಿಯು ಸಪ್ತಬಾಹುಗಳ ಮಧ್ಯದಲ್ಲಿಯ ಒಂದು ಊರು. ಅಲ್ಲಿ ಪೂರ್ವದಲ್ಲಿ ಸೋಮೇಶನೆಂಬ ಒಬ್ಬ ಪ್ರಸಿದ್ಧಕವಿ ಇದ್ದನು. ಸಂಸ್ಕೃತದಲ್ಲಿ ಆಗಲಿ ತೆಲಗಿನಲ್ಲಿ ಆಗಲಿ ಅವನಿಂದ ಬಸವ ಪುರಾಣ ರಚನೆ ಆಗಿತ್ತು. ಇವನು ಭೀಮ ಕವಿಗೆ ಕನಸಿನಲ್ಲಿ ಪ್ರತ್ಯಕ್ಷವಾಗಿ ಅದನ್ನು ಕನ್ನಡಿಸ ಬೇಕೆಂದು ಹೇಳಿದನು.

and speaks thus: "I shall be with you and teach you, to compose the history of Basava."

662. ಅವುದಕ್ಕನುಮಾನಿಸದಿರೊಲಿ
ದಾವಶಬ್ದಾರ್ಥಮುಮನಾದೊಡೆ,
ಭಾವಿಸಲ್ಕಿನಗರುಪಿ ನಿನ್ನಾತ್ಮದೊಳಗಲದಿರ್ದು
ನಾವುರಚಿಸುವೆವೆಸವಬಸವಕ
ಥಾವಿಸರಮಂ, ಬರದುಕೋ ! ಯೆಂ
ದೋವಿದವರಾಜ್ಞೆಯನು ಶಿರದೊಳು ಧರಿಸಿ ಮತಿವೆತ್ತು

Thereby the task of Bhímakavi became easy.

663. ಅಸಮಲಿಂಗೈಕ್ಯಾನುಭಾವ
ಪ್ರ[1]ಸರಮತಿಕವಿಸೋಮನಾಥಂ
ರಸವೊಸರೆ, ಮುನ್ನುಸುರ್ದವನೆ ಕನ್ನಡಿಸಿ ಪೇಳೆಂದು
ಎಸವ ಬಸವಪುರಾಣಮಂ ಪಸ
ರಿಸುವ ನಿರ್ಮಳಬೋಧೆಯಂ ಕರು
ಣಿಸಿದ ಕಾರಣವೆನಗೆ ಪಿರಿದಾಯಾಸವಿನ್ನಿಲ್ಲ.

1, ಅಸಮ=ಮತಿ ಎಂಬ ಪದಗಳು ಸೋಮನಾಥನನ್ನು ವಿಶೇಷಿಸುತ್ತವೆ

Bhímakavi, the son of the poet Shivakavi, who was the moon to the sea of the

664. ವಿಮಳ ಸದ್ಗುರುಸೇವೆಯುಲಿ ಜಂ
ಗಮಭಜನೆಯುಲಿ ಲಿಂಗನಿಷ್ಠಾ
ಸಮತೆಯುಲಿ ತನುಮನಧನಂಗಳನಿತ್ತ ಭವಭಕ್ತಿ

worshippers of Shiva.

ಸಮಯವಾರ್ಧಿವಿವರ್ಧನೋಜ್ವಳ
ಹಿಮಗುಶಿವಕವೀದೇವನಾತ್ಮಜ
ಸುಮತಿಭೀಮನುಭಯಕವಿತ್ವಸಮರ್ಥನುಸುರುವಡೆ.

1. ಭೀಮಕವಿಯ ತಂದೆ ವಿಮಳ – ಇತ್ತ ಎಂಬುವಂಥಾದ್ದು, ಭವ—ಹಿಮಗು (ಈಶ್ವರನ ಮೇಲೆ ಭಕ್ತಿಯಿಂದ ನಡೆಯುವ ಮತ ಸಮುದ್ರವನ್ನು ಉಕ್ಕಿಸುವ ಪ್ರಕಾಶವುಳ್ಳ ಚಂದ್ರ) ಎಂಬುವಂಥಾದ್ದು: ಈ ಎರಡು ವಿಶೇಷಗಳಿಂದ ಅವನನ್ನು ವರ್ಣಿಸುತ್ತಾನೆ. 2. ಸಂಸ್ಕೃತ ಮತ್ತು ಕನ್ನಡ.

665. ಪಾಲೊಳೊಪ್ಪಿಸ ವಿವರವರಿವ ಮ
ರಾಳವಂ ಕಂಡುಬ್ಬಿ ಲೋಕಂ
ಲಾಲಿಸುವ ವ್ರೋಲ್ಬುನಕ ಮೊಗೆವಾಲಂ ಕಡಿದು ಪೋಗೆ,
ಆಳಿಗೊಳುತಂ ಬಡಿವರಲ್ಲದೆ,
ಲಾಲಿಸುವರೇ? ಸುಕವಿಯಂದರೆ,
ಮೇಲಪುದು ಕೃತಿ, ಕುಕವಿ ಯಂದಡದೇನಹುದು ತನಗೆ?

The swan knows to discern milk in water and drinks it; for which he is praised; the dog is beaten for drinking milk: a good and bad poet.

666. ಧರೆಯೊಳೂರಡಿಯಾದ ಕೊಳಗದ
ಸರಿಯು ಸೊಲ್ಲಿಗೆ ಸಲ್ಲದಿಪ್ಪದೆ?
ಪರಿಮಿತಾಕ್ಷರತಲೆಯೊಳಪರಮಿತಾರ್ಥರಚನೆಯಲಿ
ವಿರಚಿಸುವವದು ಕವಿಯ ಚತುರತೆ;
ಗುರುಬಸವನಂ ನೆನೆವ ಬಲ್ಪಿಂ
ಸರಸಮೃದುಮಧುರೋಕ್ತಿಗಳು ಮಿಗೆ, ರಚಿಸುವೆಂ ಕೃತಿಯು!

The measure of grain, the words, the meaning the grains of corn.

1. ಅಕ್ಷರಗಳೇ ಮತ್ತು ಶಬ್ದಗಳೇ ಪೂರೊಳಗೆ ನಡೆಯುವ ಕೊಳಗ, ಧಾನ್ಯದ ಕಾಳುಗಳೇ ಕವಿರಚಿಸುವ ಅಪರಿಮಿತಾರ್ಥಗಳು. ಒಂದು ಕೊಳಗದಿಂದ ಎಷ್ಟೊ ಅಳೆಯ ಬಹುದು! ಹಾಗೆ ೫೦ ಅಕ್ಷರಗಳಿಂದ ಎಷ್ಟೋ ಚಮತ್ಕಾರವನ್ನು ರಚಿಸ ಬಹುದು. 2. ಷಷ್ಟಿ ಪ್ರಥಮಾರ್ಥದಲ್ಲಿ ಬಂದದೆ (ಸರಿಯು)

667. ಕೋವಿದರು ಕೇಳೊಳ್ಳಿತೆನಲುಡು
Time of the composition of this work.
ದೇವನಿಧಿನಯನೇಂದುಸಂಖೆಗ
ಳೋವಿ ಶಕವರುಷಂಗಳಾಗಲು ಸಾರ್ವ್ವವಸ್ಸರದ
ಶ್ರಾವಣಬಹುಳಪಕ್ಷದಶಮಿಾ
ಜೀವವಾರದೊಳಾದಿವೃಷಭೇಂ
ದ್ರಾವತಾರದ ಬಸವಚರಿತೆ ಸಮಾಪ್ತಿಯಾಯಿತ್ತು.

ಇಂದು=ಚಂದ್ರ=ಒಂದರ ಸಂಜ್ಞೆ; ನಯನ=ಕಣ್ಣು=ಎರಡರ ಸಂಜ್ಞೆ; ನಿಧಿ=ಕುಬೇರನಲ್ಲಿರುವ ಒಂಬತ್ತು ನಿಕ್ಷೇಪಗಳು=ಒಂಬತ್ತರ ಸಂಜ್ಞೆ; ಉಡುದೇವ=ಚಂದ್ರ=ಒಂದರ ಸಂಜ್ಞೆ; ಹಾಗಾದರೆ ೧೨೯೧ ಎಂಬ ಸಂಖ್ಯೆ ಹೊರಡುತ್ತದೆ. ಇದು ಶಾಲಿವಾಹನಶಕ; ಈಗ ಈ ಶಕದ ಪ್ರಕಾರ ೧೭೮೪ ಆಗಿದೆ. ಇದರಲ್ಲಿ ೧೨೯೧ ಕಳೆದರೆ ೪೯೩ ಉಳಿಯುತ್ತದೆ. ಇಷ್ಟು ವರುಷದ ಕೆಳಗೆ ಈ ಕೃತಿ ಹುಟ್ಟಿತು. ಹಾಗಾದರೆ ಬಸವ ಇದ್ದು ೮೦೦ ವರುಷ, ಜನರು ಹೇಳುವಂತೆ, ಆಗಿದ್ದರೆ, ಅವನು ಹೋಗಿ ಮುನ್ನೂರು ವರುಷದ ಮೇಲೆ ಈ ಕೃತಿ ರಚನೆ ಆಯಿತು ಎಂದು ತಿಳಿಯ ಬರುತ್ತದೆ.

THE BIRTH, YOUTH OF BASAVA AND HIS EMPLOYMENT AS MINISTER IN THE TOWN OF KALYANA.

2 ಬಸವ ಹುಟ್ಟಿ ಬೆಳದು ಕಲ್ಯಾಣದಲ್ಲಿ ಪ್ರಧಾನಿಯಾದದ್ದು. (ಸಂಧಿ. ೧—೬.)

668. ಆರಜತಗಿರಿ[1]ಶಿಖರದೊಳ್ಮದ
When Shiva with Párvati on Kailasa held a public levy,
ನಾರಿಯುಂ ಗೌರಿ[2]ಯುಮುಚಿತಲೀ
ಲಾರಚಿತಸುಖಸತ್ಕಥಾಪ್ರಿಯಕೌತುಕದೊಳಿರಲೂ,
ವೀರವೀರಕನಂದಿರೇಣುಕ
ದಾರುಕರುಮುಪಮನ್ಯುಭೃಂಗಿಯು
ವೀರಭದ್ರಾದಿಪ್ರಮಥ[3]ರೋಲಗಿಪ ಸಮಯದಲೀ

1. ಕೈಲಾಸ. 2. ರಕ್ತದಂತೆ ಕೆಂಪಾಗಿದ್ದದರಿಂದ ಈ ಹೆಸರು (ಕೆಂಪಿನ; ಗೌರ=ಕೆಂಪು) ಪಾರ್ವತಿಗೆ ಬಂತು. 3. ಕಾಡುವವರು; ಈಶ್ವರನ ಬಂಟರು.

669. ಪರಿಮಿತದ ಸಮಯೋಚಿತವನರಿ
ದುರುವಣೆಯನುಳಿದೊಯ್ಯನೊಯ್ಯನೆ
ಹರನ ಪೊರೆಗೈತಂದು ನಾರದನೆಂಬ ಮುನಿರಾಯಾ
ಧರಣಿಯೊಳು ಸಾಷ್ಟಾಂಗವೆರಗಿಯೆ
ಕರಯುಗಳಮುಕುಳಿತದೊಳೊಂದಿಸಿ
ಪರಮಗುರು! ಚಿತ್ತೈಸು ಲೋಕಾಲೋಕಚರಿತ್ರೆಗಳಾ !

Nárada-Muni appeared, and gave an account of the general decline of

670. ಪರಮಶೈವಾಚಾರತತ್ಪರ
ಪರಿ[1]ಹರ್ಪರರೊಡನೆ ನುಡಿಯದೆ ;
ಶರಣರಿರ್ಪರ್ಕೆಲರ್ಕೆಲಬರುಂ ಲೋಕಲೌಕಿಕದೀ
ಬೆರಸಿಯುಂ ; ತಲ್ಲೋಕಬಾಧೆಗೆ
ಬೆರಸದಿರ್ಪರ್ಕೆಲಬರತಿಸುಖ
ಪರವಶದಿ ಮರದಿರ್ಪರೀಲೋಕಕ್ಕೆ ಮರೆಗೊಂಡೂ.

the Shaiva-sect on earth,

1. ಶೈವಾಚಾರಕ್ಕೆ ಮಾಡುವ ಆಸಕ್ತಿಯಲ್ಲಿ ವಿಶೇಷವಾದವರು.

671. ಸಂಮುದಿತಸದ್ಭಕ್ತಿಯುಕ್ತರು
ಹಂಮಿನಿಂದಿರುತಿಪರು ಕೆಲಬರು
ತಂಮತಂಮೊಡಲುಗಳನಂತುಮಡಂಗಿ ಕೊಂಡಿಹರೂ
ನಿಂಮ ಭಕ್ತಿಯು ತುದಿಮೊದಲಿದೆಂ
ದೊಂಮೆಯುಂ ಸತಿದೋರದಾರಿಗೆ
ಸಂಮತಿಸಲರಿದಲ್ಲಿ ದುಷ್ಟಪ್ರತ್ಯಯಂಗಳಲೀ.

672. ನೀವೆ ಬಿಜಯಂಗೈದು ಕರುಣಾ
ಭಾವಗುಣದಿಂ ನೋಡಿ ಮರ್ತ್ಯವ
ನೋವಿ ಮನುಜರನೆಲ್ಲರಂ ನಿಜಭಕ್ತಿಯುಕ್ತಿಯಲೀ.

He entreats Shiva to go himself there and restore his worship.

ಪಾವನತ್ವಮನಿತ್ತು ಪಾಲಿಸಿ
ಕಾವುದೆಂನಯ ಬಿಂನಪವನೆನೆ,
ದೇವದೇವಂ ಸಂತಸದೊಳಿಂತೆಂದನಾಮುನಿಗೇ:

673. ನಂದಿನಾಥಾಗ್ರೇಶ್ವರಂಗೆಮ
Shiva's answer: "I shall send Nandi." ಗೊಂದಿನಿತು ಸಂದಿಲ್ಲ ದಿರ್ಪುದು
ಸಂದೆಗವೆ? ನಾವೀತನಂ ಮರ್ತ್ಯಕ್ಕೆ ಕಳುಪ್ರವೆವ್ರಾ;
ಮುಂದಕೀಯುರಡನೆಯು ಶಂಕರ
ನಿಂದೆ ಪರಮಪವಿತ್ರಮುನ್ನತಿ
ಯೊಂದಿ ನೆಗಳುದು ಲೋಕವೆಲ್ಲಂ ಬೋಧಿಸಲ್ಪಡೆಗೂ.

674. ಎಂಮುಕೌತುಕಮಾಗಿ ಮರ್ತ್ಯವ
Instructions to Nandi. ನಿಂಮಡಿಸಿ ಪಾವನಮನೈದಿಸು
ವ್ರೊಂಮೆಯುಂ ನೀಬಸವನೆಂಬಭಿಧಾನದಿಂದೆನಲೂ,
ಸಂಮುದಂ ಮಿಗೆ, ನಂದಿ ತನ್ನ ಕ
His readiness, to undertake this task. ರಂ ಮುಗಿದು ತಾ ಬಿಂನೈಸಿದಂ.
ನಿಂಮಸುಜ್ಞೆಯನೆನ್ನ ಮಂಡೆಯೊಳಾಂತು ಮಾಡುವೆನೂ!

1. ಹೀಗಂದ ಮೇಲೆ ಹುಟ್ಟುವದಕ್ಕೆ ಅನೇಕ ಗಣಗಳ ಸಹಿತ ಭೂಲೋಕಕ್ಕೆ ಇಳಿದು ಹೋದನು.

675. ಗುರುತರೋಂನತಮಾಗೆಸವ ಸಿರಿ
In the village of Bágavádi, which is in the Karnataka, west of the sacred ಗೆರಿಯು ಪಡುವಣ ಕಡೆಯು ಧರೆಯೊಳು
ನರವರಾಸ್ಪದ[1]ವೆನಿಸಿದಾಕರ್ನಾಟದೇಶದೊಳೂ

1. ಹೊಲ ಮನೆ ವ್ಯಾಪಾರ ಮೊಂತಾದ್ದಕ್ಕೆ ಅನುಕೂಲವಾಗಿರುವಂಥಾದ್ದು.

hill of Tirupati, near Chittoor, ಕರಮೆಸೆದುದಲ್ಲಿ ಪ್ರಸಿದ್ಧಿದೆ
ಪಿರಿದೆನಿಪ ಶಿವಭಕ್ತಿ ಬೀಜ
ಕ್ಕಿರವೆನಿಸಿದೊಂದಿಂಗಳೇಶ್ವರಬಾಗವಾಡಿಪುರ

2. ವ್ಯಾ. ಸೂ. 42.

676. ಆಮಹಾಬಹುಳಾಗ್ರಹಾರದಿ
lived Mandige Mádirája, the father of Basava, ಗ್ರಾಮಣೀಮಣಿ, ವಿತರಣದ ಕಣಿ,
ಭೂಮಿದೇವಾಗ್ರಣಿ, ಪರಮಸೌಖ್ಯಾನುಭವಪರನೇ,
ನೇಮಿಸುವ ಷಟ್ಕರ್ಮಮಾರ್ಗ
ಪ್ರೇಮಿ ಸಂತತ ಪರತನೂಭವ
ಕಾಮಿ, ಮಂಡಿಗೆಮಾದಿರಾಜನೆನಿಪ್ಪನೆಸೆದಿರ್ದ.

1. ಯಜನ (ಯಜ್ಞ ಮಾಡುವದು) ಯಾಜನ (ಯಜ್ಞ ಮಾಡಿಸುವದು) ಅಧ್ಯಯನ (ವೇದ ತಾನೆ ಓದುವದು) ಅಧ್ಯಾಪಕ (ವೇದ ಓದಿಸಿ ಕಲಿಸುವದು) ದಾನ (ತಾನೆ ಕೊಡುವದು) ಪ್ರತಿಗ್ರಹ (ದಾನ ತಾನೆ ತಕ್ಕೊಳ್ಳುವದು) ಈ ಆರು ಕರ್ಮಗಳನ್ನು ಬ್ರಾಹ್ಮಣರು ಮಾಡ ತಕ್ಕದ್ದು.

677. ಆತನುತ್ತಮಸತಿ ವಿಶೇಷವು
and his mother Mádámbike. ನೀತೆ, ಮಾದಾಂಬಿಕೆ, ಸುವಿನಯಾ
ನ್ವೀತೆ, ಸತ್ಕುಲಜಾತೆ, ಸಜ್ಜನಭಕ್ತಿನಿರ್ನೀತೇ,
ಪಾತಕಕ್ಕತಿ ಭೀತೆ, ಧರ್ಮ
ಶ್ರೋ[1]ತೆ, ಪುಣ್ಯಸಮೇತೆ, ಸತ್ಯವಿ
ನೀತೆ, ಸುಗುಣವ್ರಾತೆ, ವಿಮಳಾಚಾರವಿಖ್ಯಾತೇ.

ಧರ್ಮಕ್ಕೆ ಕಿವಿಗೊಡುವಂಥಾದ್ದಕೆ

678. ಕಾಂತೆ ತಾಂ ಸುತರಿಲ್ಲದಿರ್ದಡ
They performed different vows to Párvati, to get children, but in vain. ಸಂತಚಿಂತಾಕ್ರಾಂತೆ ಯಾಗುತೆ,
ಕುಂತಿನೋಂಪಿಗಳಂ ಪಲವನುರೆ ನೋಂತು ಬೇಸತ್ತು

ಸಂತತಿ ಯದೆಂತಪ್ಪುದೆಮಗಿಂ
ನೆಂತೆನುತೆ, ಸತಿಪತಿಗಳುಂ ಮತಿ
ವಂತರಿಂದಂ ಪೊತ್ತಿಗೆಗಳಂ ತೆಗಸಿ ನೋಡಿಸುತೇ;

679. ಸಂದ ನೋಂಪಿಗಳೊಳ್ವಿಚಾರಿಸಿ
At the advice of the learned, she goes to perform a vow to Nandinátha.
ನಂದಿನಾಥನ ನೋಂಪಿ ಯದು ಪಲ
ವಂದದಿಂ ಕಾಮ್ಯಾರ್ಥಸಿದ್ಧಿಗೆ ನಿತ್ಯಕಾರಣವೂ
ಎಂದು ಸುವ್ರತನಿಯತಮಂ ಬುಧ
ರಿಂದುಮುಖಿಗರುಹಿದೊಡೆ, ಪರಮಾ
ನಂದದಿಂ ಮಾಡಾಯಿ ಶಿವಮಂದಿರಕೆ ನಡೆತಂದೂ,

680. ಅಪ್ರತಿಮನಂ ಕಾಣುತವೆ,[1] ದಂ
She prays him in the temple.
ಡಪ್ರಣಾಮವನಿಕ್ಕಿ[2] ಸರ್ವ
ಜ್ಞ! ಪ್ರಮಥವರ! ನಂದಿನಾಥನೆ! ಯನಿಮಿಷರಯೋಥಾ[3]!
ಸುಪ್ರಸನ್ನ! ಯನುತ್ತ ಭಯಭ
ಕ್ತಿಪ್ರಿಯೋಕ್ತಿಗಳಿಂದೆ ಕೀರ್ತಿಸು
ತೀಪ್ರಕಾರದಿ ಯಂಚಿತವ್ರತಚರ್ಯಮಂ ಮಾಡೀ

1. ಕಾಣುತ್ತಲೆ. 2. ಕೋಲಿನಾಕಾರವಾಗಿ ಅಡ್ಡ ಬೀಳುವದು. 3. ದೇವತೆಗಳ ಸಸಮೂಹ ವುಳ್ಳವನು; ಅವನ ಸಂಗಡ ಬಹಳ ಮಂದಿ ಇರುತ್ತಾರೆ.

681. ನಂದಿಕೇಶ್ವರ! ಹರಶರಣ! ನವ
Her prayer.
ನಂದಿನಾಥಾನಾಥಬಂಧುವೆ!
ತಂದೆ! ನಿನ್ನ ವೊಲೀಶಭಕ್ತಿಯಕಂದನೆನಿಸಿದರ್ಗ
ಕಂದನಂ ನೀನಿತ್ತೊಡಾನೊಲ
ವಿಂದೆ ನಿಮ್ಮಯ ಪೆಸರನಿಕ್ಕುವೆ
ನೆಂದೆನಲು ಮಾದಾಂಬಿಕೆಯು, ಜನರಾಗ ನೋಡಲ್ಕೆ,

682. ಇಂಡೆಯುಂ ಕರುಣಿಸಲದಂ ಕೈ
He has mercy on her and gives his blessing. Man and wife return home.
ಕೊಂಡುರದೊಳಾನನದೊಳೊತ್ತುತೆ,
ಮುಂಡೆಯೊಳ್ಸೂಡಿದಳು ಮಾನಿನಿ ತತ್ಪ್ರಸಾದವನೂ ;
ಗಂಡಪೆಂಡರು ನಂದಿಯುಂ ಬಲ
ಗೊಂಡುವಂದಿಸಿ ಪಿರಿಯಶುಭವಿದಿ
ಗೊಂಡವೋಲ್ನಿಜಮಂದಿರಕೆ ನಡೆತಂದರಕ್ಕ್ರಿಯುಲೀ.

683. ಎಂದಿನಂತೆ ವಿಶೇಷಸಂತಸ
with great joy.
ದಿಂದ ಸತಿಯುಂ ಪತಿಯುಮತ್ಯಾ
ನಂದಸುಖದೊಳು ವರ್ತಿಸುತ್ತಿರೆ, ಮುನ್ನೆ ಮರ್ತ್ಯಕ್ಕೇ
ಇಂದುಮೌಳಿಯ ಬೆಸನದಿಂ ತಾಂ
ಬಂದು ನಂದಿಯು ಹೃದಯದೊಳು ಸಾ
ನಂದರಾಗಂ ಬೆತ್ತು ತಾನ್ನೈಯುತ್ತರ್ಪ ಭರವಿಂಗೇ

684. ಅನುಗುಣಕೆಪಡಿಯೆನಿಸಿತನ್ನಂ
Nandinatha enters her womb.
ತನಯನಾಗಲ್ಕೊಂತಳಬುಜಾ
ನನೆಯ ಸುಕೃತವನೇನನೆಂಬೆನು ? ನೆನೆದ ಕಾರ್ಯವದೂ
ತನಗೆ ನೆರೆ ಸಿದ್ಧಿಸಿತೆನಲ್ಕಾ
ವನಿತೆಬಸುರೊಳ್ತಾಂ ಪ್ರವೇಶಿಸ
ಲನಿತರೊಳ್ತದ್ಗರ್ಭಚಿನ್ಹೆಗಳಂಕುರಿತವಾಯ್ತು

685. ಸತತವುಂ ಹಿಮಕಿರಣಕಾಂತಾ
After she had been pregnant three years,
ಪ್ರತಿಮೆ ಯುದರದೊಳುಜ್ವಲಿಸುವ
ಪ್ರತಿಮದೀಪದ ವೋಲ್ಸಿತಾಂಗದ ಸತಿಯ ಜಠರದೊಳೂ

ಅತುಲಿತಪ್ರಭೆ ವೆತ್ತು ಸುತನೀ
ನತಿಯೊಳೀಶಧ್ಯಾನತತ್ಪರ
ಮತಿಯೊಳಿರ್ದನು ತಾಯುಬಸುರೊಳು ವತ್ಸರತ್ರಯವು.

686. ಬಳಗಣುಪತಾಪೋಪಶಮನಕೆ
ಮಲಯರುಹಕರ್ಪೂರಸೀತಳ
ಸಲಿಲದಿಂ ನೆನೆದಿದರ ನೆವದಿರುಳನಿತು ಕಣ್ಮುಚ್ಚೇ,
ವೊಲಿದು ವೃಷಭಾಧಿಪನು ದರ್ಶನ
ದೊಳಗೆ ಜಂಗಮಲಿಂಗರೂಪಂ
ತಳೆದು ಸತಿಗಾಯವಸರದೊಳಿಂತೆಂದು ಬೆಸಸಿದನೂ.

she felt much pain. Vrishabha appears to her, and tells her

687. ನಿಂನುದರದುಪತಾಪಮುರಿಯುಂ
ನಿಂನ ಚಿಂತಾಕ್ರಾಂತಮೆಲ್ಲವ,
ನಿಂನು ಪರಿಹರಿಸಲ್ಕೆ ಬಂದೆಂ ಕಮಲದಳನಯನೇ ?
ನಿಂನಬಸುರೊಳ್ಬೆಳೆವ ಸುಕುಮಾ
ರಂ ನಿಖಿಳಪಾವನನೆನಿಪ್ಪ ಜ
ಗಂನುತೋಂನತಮೂರ್ತಿಯಲ್ಲದೆ ಜಾವಳನೆ ? ಕೇಳೂ ?

who is to be her son,

688 ಆದಿಗಾದಿಯನಾದಿನಂದಿ ಶಿ
ಲಾದನಣುಗಂ ಶಿವನ ಬೆಸನದಿ
ವೇದಿತಾಮಳಭಕ್ತಿವರ್ಧನಕಾರಣದಿ ಬಂದೂ
ಮೇದಿನಿಯೊಳೊಗೆದಂ ನಿನಗೆ ; ಸಂ
ಮೋದದಿಂ ಪೇಳ್ದಪೆವು ಸೂನೃತ
ವಾದ ನುಡಿಯುಂ ನಂಬಿ ಪದುಳಿರು ? ಚಿಂತಿಸದಿರಿನ್ನು ?

689. ಪುಟ್ಟಿದಪನುತ್ತಮಕುಮಾರಂ
ಪುಟ್ಟಿದಾಗಳೆ, ಬಸವನಾಮವ
ನಿಟ್ಟು ಕರೆ ನೀನೆನಲನಿತರೊಳ್ನಿದ್ರೆ ತಿಳಿದೆದ್ದು
ದಿಟ್ಟಿಸಾರುವನಲ್ಲಿ ಕಾಣದೆ
ನೆಟ್ಟನೀತನೆ ವೃಷಭಪತಿ ; ಕೃಪೆ
ಪುಟ್ಟಿ ಯೆಮ್ಮನುಸಲಹಲಿಲ್ಲಿಗೆ ಬಂದನಿದು ಧಿಟವೊ?

and commands her, to call him Basava.

690. ಏನನುಸುರುವೆನೆನ್ನ ಜನ್ಮಫ
ಲಾನುಭೋಕ್ತವ್ಯಕ್ಕೆ ಮಿಗೆ ಸಂ
ಧಾನವಾಯಿತು ; ಬದುಕಿದೆಂ ನಾನೆನುತೆಹರುಷದೊಳೂ
ಮಾನಿನಿಯರುಂ ಗೋತ್ರಬಂಧುವಿ
ತಾನವಚ್ಚರಿ ಬಟ್ಟು ಕೇಳ
ಲ್ತಾನಿರುಳು ಕಂಡಿರ್ದ ಕನಸನವರ್ಗೆ ಪೇಳಿದಳೂ.

Her joy.

691. ಪ್ರೀತಿಯಲಿ ಪುತ್ರನು ಕರಾಂಭೋ
ಜಾತಮುಕುಳಿತನಾಗಿ ಮೆಲ್ಲನೆ
ಮಾತೆಯುದರದೊಳುದಯಿಸಲು ; ಅಘೋರದಯದೊಳಾಗಾ
ಅತನಯನೊಳಗಿಹ ಶಿವಂ ವಿ
ಖ್ಯಾತ ಗುರುವಾಕಾರಮಂ ತಾ
ಳಾ ತಸಂಗದ ಮೇಲೆ ಲಿಂಗಾಸಂಗಗೈಸಿದನೂ.

Birth of Basava.

692. ಜಗದೊಳಗೆ ಸರ್ವಜ್ಞವೃಷಭನ
ಬಗೆಯೊಳೊಗೆದವನಾಗಿ ಸರ್ವಕ
ಳೆಗಳು ಸಹಜ[1]ವೆನಲ್ಕೆ, ಗರ್ಭಾಷ್ಟಕ[2]ದೊಳಾಜನಕಾ

When he was eight years of age, his father was going to invest his son with the holy thread.

1. ಎಲ್ಲಾ ವಿದ್ಯೆಗಳನ್ನು ವೇದಾದಿ ಶಾಸ್ತ್ರಗಳನ್ನು ಬಲ್ಲವನಾದನು. 2. ಗರ್ಭದಲ್ಲಿದ್ದ ದಿವಸ ಸಹ ಹಿಡಿದು ಎಂಟು ವರುಷ ತುಂಬುವಷ್ಟರೊಳಗೆ.

ಮಗನಿಗುಪನಯನವನೊಡರ್ಚಲ್,
ಬಗೆದು ಶುಭಲಗ್ನಕ್ಕೆ ತೊಡಗಲ್,
ನಗುತ ಬಸವಂ ಭಕ್ತಿಯರಿಯದ ತಂದೆಗಿಂತೆಂದಾ.

But Basava refuses.
He states his reasons for doing so.

693. ಜನಕ! ಕೇಳ್ಶಿವದೀಕ್ಷೆ ಇಲ್ಲದ
ವನವೊಲೆನ್ನಂ ಮುಂಜಿ ಗಟ್ಟುವ
ಮನವಿದೆಂತಾಯ್ತಾಗ? ನಿನಗವಿವೇಕಿಯುಂದದಲೀ ?
ಜನಿಸಿದಾಗಳೆ, ಸಂಗಮೇಶ್ವರ
ನೆನಗೆ ಸದ್ಗುರುವಾಗಿ ಬೋಧಿಸಿ
ವಿನುತಶೈವಾಚಾರಮಾರ್ಗದೊಳಿರಿಸಿ ಸಲಹಿದನೂ.

694. ಸಾರಸಂಸಾರದ್ವಿಜತ್ವವ
ಪಾರಪತಿತವಲಾ ? ಸದಮಳಾ
ಚಾರಸದ್ಗುರುವಿನ ಕರಾಬ್ಜದಿ ಜನ್ಮನಾದಂಗೇ
ಧಾರುಣೀಸುರಜನ್ಮಕರ್ಮಂ
ಕ್ರೂರಕರ್ಮವಲಾ ? ಸುಗುರುಭಜ
ನಾರತಂಗನಲಾಹುತಿಯನಿಕ್ಕಿದೊಡೆ, ದೋಷವಲಾ ?

1. ಗುರು ಭಜನೆಯಲ್ಲಿ ಪ್ರೀತಿಯುಳ್ಳವನು.

695. ವಿರಸವೆನಗಿದು ? ಮುಂಜಿ ಯೆಂಬುದ
ನೊರೆಯದಿರು ? ಪರಿಹರಿಸಿ ಕಳೆ! ಶಂ
ಕರನನರ್ಚಿಸುತಕಟ ? ನೀ ಮರುಳಾಗಿ ಹೋದೆಯಲಾ.
ಪರಮಗುರುಪದ ವಿಡಿದು ಈದು
ನರರ ಕಾಲ್ಗಳಿಗೆರಗುವಂಗತಿ
ನರಕವಲ್ಲೆ ? ಪೂರ್ವಭವಸಂಸ್ಕಾರರಹಿತಂಗೇ.

696. ಮಲಹರಾತ್ಮಕಮಂತ್ರಮಂ[1] ನೆರೆ
ಕಲಿತು ಬಹು ಮಂತ್ರಂಗಳಂ ತಾಂ
ಕಲಿವುದುತ್ಕಟಪಾಪವಲ್ಲೈ ? ಸಹಜಭಕ್ತರಿಗೇ
ಬಲವಿನೆತ್ತುವ[2] ಕೈಗಳಂ ದು
ರ್ಮಲಿನಕರ್ಮಚರದ್ವಿಜಾತ
ರ್ಗಲಸದೆತ್ತುವುದು ಧರ್ಮಜಾತರ್ಗಧಮಜಾತವಲಾ .

1. ಪಾಪನಾಶನ ಮಾಡುವವನು=ಶಿವ. 2. ನಮಸ್ಕಾರ ಮಾಡುವದು.

697. ಕರ್ಮಪಾಶವನುರೆ ಪರಿದು ದು
ಷ್ಕರ್ಮರಜ್ಜುಗಳಂ ತೊಡವುದತಿ
ಕರ್ಮವಲ್ಲೈ ? ಭಸಿತರುದ್ರಾಕ್ಷಾದಿಮುದ್ರೆಗಳಾ
ನಿರ್ಮಲತೆಯಿಂ ಧರಿಸಿ[1] ಚರಿಸುತ
ಚರ್ಮದುರ್ಮುದ್ರೆಗಳನೇಂ ಶಿವ
ಧರ್ಮಮರ್ಮಜ್ಞರಿಗೆ ಧರಿಸುವುದುಚಿತವೇ ? ಹೇಳೂ .

1. ಆರಾಧ್ಯ ಬ್ರಾಹ್ಮಣರು ಭಸಿತರುದ್ರಾಕ್ಷಾದಿ ಹಾಕಿಕೊಂಡ ಮೇಲೆ ಅವರು ಉಳಿದ ಬ್ರಾಹ್ಮಣರಂತೆ ಚರ್ಮ ಧರಿಸ ಬಾರದು.

698. ನೀರ ನೇಣಿನ[1] ಬಾಧೆ ಇಲ್ಲದ
ವೀರಶೈವಾಚಾರದೀಕ್ಷಾ
ಧಾರಕನನತಿನಿರ್ಮಿತೋಭಯ[2]ಕರ್ಮನಿರ್ಮಲನಾ
ಘೋರಕರ್ಮಾಶ್ರಯದ ಪಾರಾ
ವಾರದೊಳು ಮುಣಿಗಿಸುವೆನೆಂಬ ವಿ
ಚಾರವಿಂತಿದು ನಿನಗೆ ಧರ್ಮವೆ ? ಬೊಪ್ಪ ? ನೀ ಕೇಳೂ .

1. ಸ್ನಾನ ಜನಿವಾರಗಳು. 2. ಇಹಪರದ ಕರ್ಮಗಳು.

699. ಖಾತಿಯೊಳು ಬೊಮ್ಮನ ಸಿರವನರಿ[1]
ದಾತ ತತ್ಪ್ರಮಥೇಂದ್ರವಂಶನ[2]
ನೇತಕೆಂನಂ ಬ್ರಹ್ಮವಂಶಜನೆಂದು ಭಾವಿಸುವೇ ?

ಜಾತಿಗೋತ್ರಾತೀತಸದ್ಗುರು
ಜಾತನಂ[3] ಬಹು ಜಾತಿಗೋತ್ರಸ
ಮೇತಮುಷ್ಕ್ರಿಯದಾಶ್ರಯನ[4] ನೀನೆಂತು ಮಾಡಿದಪೇ ?

1. ದೋಷದ ನಿಮಿತ್ತ ಶಿವನು ಅವನ ತಲೆಯು ಕಡೆದನು. 2. ವಂಶವುಳ್ಳವನು. 3. ಜಾತಿ ಗೋತ್ರ ಲಕ್ಷಿಸದ ಗುರುವಿನಿಂದ ಹುಟ್ಟಿದ ಮೇಲೆ, ಜಾತಿ ಕರ್ಮ ಹೇಳ ಬಾರದು. 4. ದ್ವಿತಿಯೆ ಆಶ್ರಯವನ್ನು.

700. ಅಕುಲದಭವನ ಭಕ್ತತತಿಗಾ
ವಕುಲವೆಂದಿನನೆಣಿಸಿ ನೀ ಪಾ
ರ್ಬಿಕೆಗೆ ಸಲಿಸುವೆ ; ಯಿಂತಿನಿತು ಮಾರ್ಗಂಗಳಿಂದೆಮಗೇ

ಪ್ರಕಟಿಸದಿರೀಮುಂಜಿ ಯೆಂಬುದ
ನಕಟ ! ಪಾತಕವೆಂಬ ಮಾತಿಗೆ[1]
ವಿಕಳನಾಗುತೆ ತಂದೆ ಯೆಂತೆಂದನು ತನೂಜಂಗೇ.

1. ಬಸವ ಇಲ್ಲಿತನಕ ಹೇಳಿದ ಮಾತಿಗೆ.

Reply of the father. He tries to persuade his son, that he may worship Shiva, and at the same time

701. ವಾದಿಸದೆ, ಬಸವಣ್ಣ ; ಕೇಳೈ
ಮೇದಿನೀಸುರಮಾರ್ಗದಿರವಂ ?
ವೇದಮತದಿಂ ಗರ್ಭಸಂಸ್ಕಾರಂ ಮೊದಲೆನಿಪ್ಪಾ

ಆದಿಕರ್ಮಂಗಳವು ಹದಿನಾ
ರಾದವವರೊಳಗೊಂದುವುಂ ಕುಂ
ದಾದಡಾತಂ ಬ್ರಾಹ್ಮಣೋತ್ತಮನಾಗಲರಿಯಕಣಾ ;

702\. ಇದರೊಳಾವವಿರುದ್ಧವುಂಟೈ ?
perform the rites prescribed to Brahmans. ಯಿದಕೆ ರುದ್ರನೆ ಗಣವಲ್ಲೈ ? ಬಳಿ
ಶಿವಕೆ ನಂದಿಯೆ ಮುಖ್ಯಮುಪನಯನಾರ್ಚನಂಗಳ್ಗೇ ;
ಇದಕೆ ಬೀಜಂ ಪ್ರಣವವಮು ತಾ
ನಿವಕೆ ದೈವಂ ಭರ್ಗನೆಂಬುದು
ವಿದಿತಮಂತ್ರವಿರಲ್ಕೆ ದೋಷವೆನಂತುಮಲ್ಲದೆಯೂ

703\. ಪಿಡಿವ ಪಾತ್ರೆ ಪಿತಾಮಹನ ತಲೆ,
ತೊಡುವ ಸೂತ್ರವೆ ಪಾವು, ಕೈಗಳ
ವಡುವ ತತ್ಪಾಲಾಶದಂಡವೆ ವಿಷ್ಣುಕಂಕಾಳಾ,
ಯಿಡುವ ಮೇಧಾವಿಯೆ ಭಸಿತವೆಡೆ
ವಿಡಿವೆಸವ ಚಂಡಿಕೆಗಳೈದುಂ
ಜಿಡೆ, ಕೊರಲಕೃಷ್ಣಾಜಿನವೆ ಕರಿಯ[1]ಜಿನವಾಗಿರಲೂ

1\. ಶಿವನು ಆನೆ ಚರ್ಮ ಹೊದ್ದುಕೊಂಡಿರುತ್ತಾನೆ. ಉಪನಯನ ಮಾಡಿಸಿಕೊಳ್ಳು ವಾಗ್ಯೆ ನೀನು ಶಿವನು ಎಂದು ತಿಳುಕೋ.

704\. ಪುರಹರಂ[1] ಭಿಕ್ಷಾಟಣವನಾ
ಚರಿಸಲೈದುವ ವೇಷವನಿತಂ
ಧರಿಸಿದಲ್ಲದೆ, ಭೂಸುರೊತ್ತಮನಾಗನೆಂಬೊಡಿದೂ
ಹರನ ಭಕ್ತರ್ಗೇಂ ವಿರುದ್ಧಮೆ ?
ವಿರಸ[illegible]ತಾಯ್ತ್ರೆ ? ತನೂಭವ ?
ಪರಮಭಕ್ತಿಗೆ ಹೀನಮಪ್ಪುದೆ, ಮುಂಜಿ ಗಟ್ಟಿದೊಡೇ ?

1\. ತ್ರಿಪುರ ನಾಶ ಮಾಡಿದವನು=ಶಿವ.

705. ಮಾತುಗಾರತನವೊಳುಲಿವ ಪಲ
ಮಾತದೇತಕೆ ? ನಾವು ಪೇಳಿದ
ಮಾತನಾಲಿಸಿ ಮಾಡ ಬೇಹುದು ; ಮಕ್ಕಳಾದವರೂ
ಜಾತಿಗುತ್ತಮಕುಲದೊಳೊಗೆದು ಪು
ನೀತನಾಗಿ ಸಮಸ್ತವರ್ಣ
ವ್ರಾತದೊಳಗಗ್ರಜಕುಲಾಗ್ರಣಿ ಯೆನಿಸಿ ಬಾಳ್ದರದೇ ?

706. ನಾವರಿಯೆವಿಂತಪ್ಪ ಚೋದ್ಯವ
ಸಂವಸಂಡೊಳು; ನಿನ್ನ ತಲೆಯುಲಿ
ಆವಗಂ ಶಿವಭಕ್ತಿ ಮೂಡಿದುದೇ ಜಗತ್ರಯಕೇ ;
ನೀವುದಯಿಸಲ್ಬದುಕಿದೆವು ; ಪೆರ
ತಾವುದಿಲ್ಲ; ಕೃತಾರ್ಥರಾದೆವು ;
ಕಾವುದೆಂಮುವನುದ್ಧರಿಸು ಕುಲಕೋಟಿಯಲ್ಲವನೂ !

707.* ಇಳೆಗೆ ಕುಲದೀಪಕನುದಯಿಸ
ಲ್ಕುಲವೊಡನೆವರ್ಧಿಸುವದಾಗಳು ;
ಬಳಿಕ ಕುಲನಾಶಕನು ಪುಟ್ಟಲ್ಕುಲವಳಿದು ಪೋಗೊರ್[1]
ಕುಲದ ಬೇರಿಗೆ ನೀನೆ ಗುದ್ದಲಿ
ಗೊಳಲದೇಕೆ ? ಸುಪುತ್ರನಾ[2]ಗಿದ
ನಲಘು[3]ವಿಪ್ರರ್ಕೇಳಿದೊಡೆ, ಪೊರಗಿಕ್ಕರೇ ನಿಂನಾ ?

1. ಹೋಗುತ್ತದೆ. 2. ವಿಧಿ. (ಆಗು) 3. ಲಘುವಿಲ್ಲದ=ಘನವುಳ್ಳ.

708. ಎಂದುವಂ ಲೋಕಕ್ಕೆ ಬಾರದ
ನಂದನಂ ನೀನಮ್ಮ ಬಸುರ್ಕೊ
ಳ್ಬಂದು ಹರುಷವನ್ನೈದಿಸದೆ ಪಿರಿದುಂಮಳವನೆಮಗೇ

ತಂದಕಟ ! ಕುಲಗೇಡಿ ಯವರೆ ?
ಕಂದ ! ನಿನ್ನಂ ಪಿಡಿದು ಸುಗತಿಯ
ನೊಂದಿ ಬದುಕುವೆವೆಂದು ನಾವ್ನಿರೆ ನಂಬಿಕೊಂಡಿಹೆವೂ.

709. ಚಾರುಕುಲವಾಕುಲಕೆ ತಕ್ಕಾ
ಚಾರವಾಚಾರಕ್ಕೆ ತಕ್ಕ ವು
ರಾರಿಭಕ್ತಿ, ಯದೊಳ್ಳಿತಲ್ಲಾ ! ಇಹಪರಂಗಳ್ಗೀ
ಕಾರಣಂ ; ಸಂಸಾರದುಃಖನಿ
ವಾರಣಂ ತಾನುಭಯಧರ್ಮಾ
ಚಾರಮಾರ್ಗದಿ ದೇವಪಿತೃಗಳ್ತೃಪ್ತರಹರೆಂದೂ

1. ಈ ಭಕ್ತಿ ಇಹಪರಕ್ಕೆ ಉಪಯೋಗ, ಸಂಸಾರ ದುಃಖವ ನಿವಾರಣ ಮಾಡುವಂಥಾದ್ದು.

710. ಯುಕ್ತಿಯಂ ಪೇಳ್ದಪೆವು ; ನಿನಗೀ
Basava's answer to his father's arguments.
ಯುಕ್ತಿಯಿಂ ಕಡೆಗೊಲ್ಲದಿರ್ದೊಡೆ,
ಭಕ್ತಿಯಿಂ ನೀನಿಂತು ಬಲ್ಲಂತಾಗುತಿರು ! ನಿನ್ನಾ
ಭಕ್ತತನಕಂಜುವೆವೆನುತ ಕಠಿ
ನೋಕ್ತಿಯಲಿ ನುಡಿಯಲ್ಕೆ, ಕೇಳ್ದು ವಿ
ರಕ್ತಕರ್ಮಂ ಬಲಿದು ಮುಳಿಸಿಂ ಬಸವನಿಂತೆಂದಾ.

711. ತೋರಪಟ್ಟಾಬ್ರಾಹ್ಮವೆಂಬುದು
ಬೇರೆ ದರ್ಶನವೀಶಭಕ್ತಿಯು
ಬೇರೆ, ಇಂತಿವನೆರಡುಮಂ ನೀಂ ಕೂಡಿ ನುಡಿಯದಿರೂ ?
ಬೇರೆ ದೈವಂ, ಬೇರೆ ಮಂತ್ರಂ,
ಬೇರೆ ಗುರುವುಂ, ಬೇರೆ ವೇಷಂ,
ಬೇರೆ ಬೇರೇ ಧ್ಯಾನಬಾಹ್ಯಕ್ರಿಯೆಗಳಾಚಾರಾ.

712. ಆದೊಡಾನನವಗ್ನಿ, ಶಿರವಜ
ನಾದಿರುದ್ರನೆ ಶಿಖೆ, ಹೃದಯುವ
ಬ್ಜೋದರಂ, ಪ್ರಾಣಾದಿವಾಯುಗಳ್ಳೆದೆಯು ತತ್ಪ್ರಾಣಾ,
ಮೇದಿನೀಸತಿ ಯೋನಿ, ಧವಳಿತ
ವಾದ ವರ್ಣಂ, ಶಂಕರನ ಪರಿ
ಯಾದುದೀಗಾಯತ್ರಿ ಸಾಂಖ್ಯಾಯನಸಗೋತ್ರವಲಾ ?

1. ಶಿವ ಸರ್ವಸ್ವರೂಪವಾದಾತ. 2. ಈ ಮಂತ್ರ ಪೊಬ್ಬಾನೊಬ್ಬ ದೇವಿ, ಸಾಂಖ್ಯಾಯನ ಗೋತ್ರದಾಕೆ. ಶಿವನು ಅಗ್ನಿ ಬ್ರಹ್ಮ ವಿಷ್ಣು ಜೀವ ಭೂಮಿ ಮುಂತಾದದ್ದು ಅಂದರೆ ಅವನು ಎಲ್ಲಾ ಆದ ಮೇಲೆ, ಒಂದು ಗೋತ್ರದಲ್ಲಿ ಹುಟ್ಟಿದ ಒಬ್ಬ ದೇವಿಯಾದ ಗಾಯತ್ರಿ ಮಂತ್ರಕ್ಕಿಂತ ದೊಡ್ಡವನಲ್ಲವೆ,

713. ಪರಿಕಿಸುವಡಿಪ್ಪತ್ತುನಾಲ್ಕ
ಕ್ಷರವದಕೆ, ಮೂರಡಿ, ಯುದರವಾ
ರ್ಶಿರಸುಗಳುವೈದೆಂಬುದಲ್ಲಾ ನಿಮ್ಮ ಯಾಜ್ಞಿಕವ್ರೊ
ನಿರುತವಲಿ ಕೇಳ್ಗೈವವದು ವಿ
ಸ್ತರಿಸೆ, ಬೇರಮದಲ್ಲವ್ರೋ ? ಯುದ
ರಿರವು ಸಾಂಖ್ಯಾಯನಮತವಲಾ ! ದೈವವೆನಲಿಲ್ಲಾ.

ಈ ಗಾಯತ್ರಿ ಎಂಬ ದೇವಿಯ ರೂಪವನ್ನು ವರ್ಣಿಸುತ್ತಾನೆ.–ಗಾಯತ್ರಿ ಎಂಬ ಮಂತ್ರ ಹ್ಯಾಗಂದರೆ:

ಓಂ ಭೂರ್ಭುವಸ್ಸ್ವಃ
ತತ್ಸವಿತುರ್ವರೇಣ್ಯಂಭರ್ಗೋದೇವಸ್ಯಧೀಮಹಿ
ಧಿಯ್ಯೋಯೋನಃ ಪ್ರಚೋದಯಾತ್

ಇದರ ಅಭಿಪ್ರಾಯ ಏನಂದರೆ : ಓಂ ಭೂವ್ಯಾಕಾಶ ಸ್ವರ್ಗಗಳೇ ; ಸನ್ಮಾನಿಸತಕ್ಕ ಪ್ರಕಾಶವುಳ್ಳ ಸೂರ್ಯನನ್ನು ಧ್ಯಾನಿಸುತ್ತೇವೆ. ನಮ್ಮ ಬುದ್ಧಿ ಪ್ರಜ್ವಲಿಸಲಿ.

714. ಪರಮ ರೂಪಮು, ತಾನವಕೆ ಗುರು,
ಬಲಿದ ಕರ್ಮ ಜಡಾತ್ಮನವಕಿಂ
ನೆಲಿವ ಮಂತ್ರಂ ತಾನಿದಕೆ ಗಾಯತ್ರಿ ಯನುದಿನಮೂ
ಇಳೆಯೊಳಾಕ್ರಿಯೆ ಕರ್ಮಬಂಧವ
ನೆಲೆ ಯಿದರ ವೇಷಂ, ವಿಚಾರಿಸಿ
ನಿಲುವಡಿತರೇತರವಲಾ! ಯಿದು ಮೋಕ್ಷಕಾರಣವೇ?

ಇದಕ್ಕೆ ರೂಪ ಗೋತ್ರ ಜಡತ್ವ ಗುರುಮುಖತ್ವ ಇತ್ಯಾದಿ ವೇಷವಿದ್ದಮೇಲೆ, ಎಲ್ಲಕ್ಕೂ ಮೀರುವ ದೇವರಿಗೆ ಸಮನಾಗಿ ಮೋಕ್ಷಕ್ಕೆ ಕಾರಣ ಹ್ಯಾಗಾದೀತು; ಆದರೆ ಓನಮಃ ಶಿವಾಯ(=ಓ ಶಿವನಿಗೆ ನಮಸ್ಕಾರ) ಎಂಬುವ ನನ್ನ ಮಂತ್ರದಿಂದ ಮೋಕ್ಷವಾಗುವದು. ಇದಕ್ಕೆ ಆರು ಅಕ್ಷರ ಇರುವದರಿಂದ ಷಡಕ್ಷರೀ ಮಂತ್ರವೆಂದನ್ನಿಸುತ್ತದೆ.

715 ಧರೆಗೆ ಭಕ್ತಂಗನ್ಯದೈವ
ಸ್ಮರಣೆಯಿಂ ಪದಿನೆಂಟು ಕೋಟಿ ವಿ
ವರನರಕವಹುದೆಂಬ ಸುತಿಯುಂ ಕೇಳ್ದರಿಯಿರಲ್ಲಾ?
ತರಣಿಯುಂ ಪಾವಕನನಜನಂ
ಹರಿಯನಿಂದ್ರಾದ್ಯರನು ಮೂರವ
ಸರದೊಳರ್ಚಿಸಿ ಬಿಡದೆ ವಂದಿಸ ಬೇಕು ಪಾರ್ವಂಗೇ.[1]

1. ಬಂದಿಸಪೇಕು ಮುಂತಾದ ಧರ್ಮ ಅವನಿಗೆ ಅದೆ.

716. ಕಡೆಗೆ ವಂದಿಸದಿರ್ದನಾದೊಡೆ,
ಕೆಡಗು ಪಾರ್ವಿಕೆ; ಮುಂದೆ ವಂದಿಸಿ
ದೊಡೆ, ಕೆಡಗು ಮೃಡಭಕ್ತಿ; ಯಿಂತಾಗಿಂತೆರಡರಿಂದಾ
ಕೆಡುವನಿಳೆಯೊಳ್ಪಾರ್ವನಾದೊಡೆ,
ಮೃಡನ ಭಕ್ತನದೆಂತಹಂ? ತಾಂ
ಮೃಡನ ಭಕ್ತಂ ಪಾರ್ವನೆಂತಹನಯ್ಯ; ಭಾವಿಸಡೇ?

717. ಇಳೆಗೆ ಮಾವಿನ ಬೀಜಮಂ ಬಿ
ತ್ತಲದು ತಾಂ ಬೇವಹುದೆ? ಬಹು ಕಥೆ
ಗೆಳನುಸುರಲೇಂ ? ಸಹಜಶಿವಲಿಂಗೈಕ್ಯಭಕ್ತಿಯುಮಾ
ಪಲವುದೇವಾಭ್ಯರ್ಚನಾಖ್ಯಾ
ಕುಲಮಹೀಸುರಕುಲವನೆಣಿಸಲು,
ಕುಲಸತಿಯ ಪೊಲು ಭಕ್ತಿ, ಬೆಲೆವೆಂಣಿನ ಪೋಲಾಬ್ರಾಹ್ಮ್ಯ.

718. ನಂದಿಮುಖ್ಯಸ್ಥಿತಿಯೊಳರ್ಚಿಸಿ
ಮುಂದೆ ದೈವಂ ಭರ್ಗನೋರ್ವನೆ
ಯೆಂದೆನಿಪ ಮಂತ್ರವನರಿದು ತಾಂ ರುದ್ರವೇಷದೊಳೂ
ಬಂದಿ ಯಂತಾಜರಿಸ ವೇಡವೆ ?
ತಂದೆ? ಮನೆದೈವಂ ನಿಮಗೆ ತರು
ಣೇಂದುಧರನಿರೆ, ಯನ್ಯದೈವದ ಸೇವೆಸನ್ಮತವೇ ?

719. ಕೇಳು ? ನೀನಂತಾಗಿನಿತುಮಂ
ಪೇಳಲೇಂ? ಸಂದೇಹಮೋ? ವ್ರತ
ಶೀಲಗೌತಮಭೃಗುದಧೀಚಿವ್ಯಾಸಮುನಿವರರಾ
ಸ್ಥೂಲಶಾಪಾನಲ[1]ದಿನುರಿದತಿ
ಖೂಳರಪ್ಪ ಮಹೀಸುರಾಳಿಗೆ
ಪೋಲುವುದೆ ಪೊಂದುವದೆ ಸಜ್ಜನಭಕ್ತಿತಾತ್ಪರ್ಯ ?

1. ಈ ಮುನಿಗಳಿಂದ ಬೇರೆ ಬೇರೆ ಬ್ರಾಹ್ಮಣರು ಯಾವದೊಂದು ದೋಷದ ನಿಮಿತ್ತ ಶಾಪಹೊಂದಿ ಬೆಂದು ಸುಮಾರಾದರು.

720. ಇದನುರವಣಿಸಿ ಯಾಡಿದುದ್ರೇ
ಕದೊಳೆ ಪರಮಾರ್ಥಮನುಳಿದು ಪೇ
ಳದನೆಸಲ್ವೇದಾಗಮಂಗಳ ಮೂಲವಲ್ಲದಿನೂ

ಪದಕವಾದವಿದೆಂದು ನೀವುಸು
ರದಿರಿ ? ಕರ್ಮಪಥಂ ದ್ವಿಜತ್ವಂ
ಸದಮಳೋತ್ತಮಭಕ್ತಿನಿಷ್ಟಿತವಪುದೆ? ಭಾವಿಸಲೂ.

721. ಈಗಳುಂ ದ್ವಿಜಮಾರ್ಗವನೆ ಧಿಟ
ವಾಗಿ ನೀ ಪಿಡಿದಾಡಿದೊಡೆ, ಯೆಮ
ಗಾಗದೀಕರ್ಮಕ್ರಿಯಾಚಾರಪ್ರವರ್ತನವೂ ;
ಕಾಗೆ[1] ಸಾಕಿದ ಕೋಗಿಲೆಯ ಮರಿ
ಕೂಗುವದು ಸುಸ್ವರದೊಳಲ್ಲದೆ,
ಕಾಗೆ ಯಂದದಿ ಕಾವುಕಾವೆಂದರಿಚುವದೆ? ಪೇಳೂ .

1. ತಂದೆ ತಾಯಿಗಳು ಕಾಗೆ, ಬಸವ ಕೋಗಿಲೆಯ ಮರಿ.

722. ಗುರುಪದಾರ್ಚನೆಗೊಲಿದು ಹಾರುವ,
ಪರಮೈಶ್ವರ್ಯೋನ್ನತಿಗೆ ಹಾರುವ,
ಶರಣಸಾನುಭವಕ್ಕೆ ಹಾರುವ, ತತ್ಪ್ರಸಾದಕ್ಕೇ
ಹರಿದು ಹಾರುವ, ವೀರಭಕ್ತಿಗೆ
ಪಿರಿದು ಹಾರುವ ನಾನದೆಂದುಂ
ಬೆರಸಿ ಹಾರುವ ಕುಲಕೆ ಹಾರುವನಲ್ಲ, ನುಡಿಯದಿರೂ !

723. ತಂದೆ ! ಕೇಳೀರೇಳು ಲೋಕದ
ತಂದೆಯುಂ ಭಜಿಸದೆ ರತೀಶನ[1]
ತಂದೆಯುಂ ವಿಧಿರವಿಶಿಖಿಗಳಂ ಭಜಿಸಿಕರ್ಮಕ್ಕೇ
ತಂದೆ[2] ನಿನ್ನೊಡಲಂ ; ಭವಾಳಿಗೆ
ತಂದೆ ! ಯಕ್ಕಟ ! ನೀನದೆಲ್ಲಿಯ
ತಂದೆ ? ಯೆನಗಿನ್ನೀಶಭಕ್ತರೇ ತಂದೆತಾಯಿಗಳೂ.

1. ಮನ್ಮಥನ ತಂದೆ=ವಿಷ್ಣು. 2. ನೀನು ನಿನ್ನ ಶರೀರವ ಕರ್ಮಕ್ಕೆ ತಂದಿ.

724. ಅಯ್ಯನಾಕಿನಗವ್ವೆ ಯಾರ್ಪಿರಿ
ಯಯ್ಯನಾರ್ನೀನೆಲ್ಲಿಯುವ ? ನಿ
ನ್ನಯ್ಯತನವೇತಕ್ಕೆ ? ಸುಡು ! ಶಿವಭಕ್ತಿಹೀನ[1]ರಿರಾ !
ಅಯ್ಯನಯ್ಯನು ಚನ್ನ[2]ಯ್ಯಂ, ಚಿ
ಕ್ಕಯ್ಯ, ಕಕ್ಕಯ್ಯನು, ತೆಲುಗುಜೊಂ
ಮಯ್ಯನಯ್ಯನು, ನಿಂಬಿ ತಾಯ್ಬಾರಮನ ಮಗ ನಾನೂ

1. ಮಧ್ಯಮ ಪುರುಷ=ಹೀನರಿರುತ್ತೀರಿ. 2. ಇವರು ಲಿಂಗವಂತರಲ್ಲಿ ಶರಣರು.

725. ಸಾರಭಕ್ತಿಸ್ಥಿತಿಯೊಳುಮಿಯೊಳ
ನಾರತಂ ಸುಖಿವೊಂದುತಿರ್ಪೆಂ ;
ವೀರಮಾಹೇಶ್ವರರೆ ಗತಿ ಯೆನಗಿದುವೆ ನಿಶ್ಚಯವೂ ;
ಸೇರದಿಂತಿಹಡೆಮಗೆ ; ನಿಮ್ಮಾ
ಚಾರದೊಳ್ನೀ ವಿಪ್ರದೆಂಮಾ ?
ಚಾರದೊಳ್ನಾ ವಿರ್ಪೆವಿಂನಾವಾರು ? ನೀವಾರೂ ?

726. ಎನುತ ಬಸವಂ ನಿಜಸಹೋದರೆ
ಯೆನಿಪ ನಾಗಾಂಬಿಕೆಯು ತಾನೂ
ಯೆನಗೆ ಇಲ್ಲಿರಲಾಗದೆನುತ್ತೈತಂದು ಮಹಮನೆಯಾ
ಮನೆಗೆ ಬರುತಿರೆ, ಭಕ್ತರೆಲ್ಲ
ರ್ಮನವೊಸೆದಿವಂ ತಮ್ಮ ಮಗನೆಂ
ದೆನುತೆ ತಮ್ಮತ್ತತ್ತಿಗದುಕೊಂಡರು ಬಳಿಕಲಿತ್ತಾ.

Basava with his younger sister goes to Mahaman.

1. ಉಳಿವಿಯು ಹತ್ತರದಲ್ಲಿರುವ ಬಂದು ಊರು, ಅದು ಶಿರಸಿಯು ಜಿಲ್ಲೆಯೊಳಗದೆ.

727. ಸುಸಿರವಾಯಿತು ಮುಂಜಿ ಯೆನುತಂ
ವಸುಮತೀಸುರರೈದೆ ಮಗುಳ್ದ
ಮುಸುಡಗಳ್ಬೆರಸೈದಿದರ್ತಮತಮ್ಮ ಮನೆಗಳಿಗೇ
ಪೊಸತು ಲೋಕಕ್ಕೆನುತ ಪುರಜನ
ಮೊಸೆದು ಕೀರ್ತಿಸಲಾಸಮಯದೊ
ಳ್ಬಸವನುಪನಯನೋತ್ಸವಕ್ಕೆಂವಂದುಬಂದಾತಾ

The Brahmans, who had come to the festivity, go home. Astonishment of the people.

728. ಮಾದಲಾಂಬಿಯ ಸೋದರಂ, ಶಿವ
ಪಾದಪಂಕಜಭಕ್ತಿಯುಕ್ತಂ,
ಮೇದಿನೀಶ್ವರಬಿಜ್ಜಳನಭಂಡಾರಿ ಬಲದೇವಾ ;
ಆದಿಶಿವಭಕ್ತಂಗೆ ಮದುವೆಯು
ನಾದರದಿ ನಾ ಮಾಳ್ಪೆನಲ್ಲದೆ
ಈದುಹಿತೆಯಂ ಭವಿಗೆ ಕೊಡೆನೆಂದೆಂಬ ಭಾಷೆಯೊಳೂ,

Baladéva, the uncle of Basava, minister at the court of Bijjala in Kalyana, who had also been there,

729. ವೀರ[1]ಮಾಕರಭಕ್ತಿಯುಕ್ತಾ
ಚಾರಿಗೀಯದೆ ಮತ್ಸುತೆಯನಿಂ
ನಾರಿಗೀವೆನೆನುತ್ತಲಾಬಲದೇವಮಂತ್ರೀಶಾ
ಭೂರಿಹರುಷದೊಳುಬ್ಬಿ ಬಸವಕು
ಮಾರನಿರ್ದೆಡೆಗೈದಿ ತನ್ನ ಕು
ಮಾರಿಯಂ ಸದ್ವಿನಯಪೂರ್ವಕಯಿತ್ತು ಪೊಡಮಟ್ಟಾ.

follows Basava, and gives him his daughter in marriage.

1. ಮಾಚ=ಂದ್ರ, ಕರ=ಕಿರಣ, ಮಾಕರ=ಚಂದ್ರ ಕಿರಣವುಳ್ಳವನು=ಈಶ್ವರ.

730. ಅತ್ತಲಾಕಲ್ಯಾಣಕಟಕದೊ
ಳುತ್ತಮಾಚಾರ್ಯೈಕಭಕ್ತಿಗೆ
ಬಿತ್ತ್ರಿನಿಪಭಂಡಾರಿಬಲದೇವಂಸಚಿವವರನೂ

Death of Baladéva.

ಇತ್ತಲೀಬಸವಂಗೆ ತನಯಳ
ನಿತ್ತೊಡೊಲಿದಾಪ್ರಮಥರತಿಮುದ
ವೆತ್ತು ಕರಸಲು ಪೋಪವೊಲು, ಶಿವಲೋಕಕ್ಕೈದಿದನೂ.

1. ಪ್ರಮಥರು ತನ್ನ ಮಗಳನ್ನು ಬಸವನಿಗೆ ಕೊಟ್ಟನೆಂದು ಸಂತೋಷವಾಗಿ ಕರಸುವಾಗ, ಬಲದೇವನು ಹೋದನೇನೋ ಎಂಬಂತೆ ಸತ್ತನು.

731. ಬಳಿಕಲಾಬಲದೇವಮಂತ್ರಿಯ
ಬಳಗವುಂ ಬಂಧುಗಳನಾಪ್ತರು
ಗಳನಿಳಾಧೀಶನು ಕರಸಿ ತಾನವರಿಗಿಂತೆಂದಾ :
ನಲಿವ ಹಿತವರು ಸೋದರರು ಮ
ಕ್ಕಳುಗಳಾರಾಯ್ತಾದೊಡೀತನ
ಬಲುನಿಯೋಗವನೆಲ್ಲವಂ ಪ್ರತಿಪಾಲಿಸುವರುಳರೇ ?

Bijjala calls his relations and asks them, who would take the place among

732. ಎನೆ, ಮಹಾರಾಜೇಂದ್ರ ! ವೃಂಟಾ
ತನ ತನಯಳ ಪ್ರಾಣನಾಥನು ;
ವಿನಯವಾಕ್ಯಂ[1] ; ನಿಮ್ಮ ರಾಜ್ಯವನುದ್ಧರಿಸಲಾರ್ಪಾ ;
ಅನಘನತಿಬಳನಖಿಳಪಾವನ
ವನಧಿ, ಯಾತನದೆಂತೆನಲು, ಭೂ
ವಿನುತಸಂಗಮದೇವನಿಂ ಪಡೆದನು ಪ್ರಸಂನತೆಯಾ.

them of Baladéva. They advice the king, to appoint Basava, the son in law of his deceased minister.

1. ವಾಕ್ಯವುಳ್ಳವನು. ಇವಂ ಪಾಪವಿಲ್ಲದವನು. 2. ಆಗುವವನು. ವ್ಯಾ. ಸೂ

733. ಜನವರಿಯಲಂತಾಗಿ ಯಾತನು
ನಿನಗೆ ಮಂತ್ರಿತನಕ್ಕೆ ತಕ್ಕವ
ನೆನಲಿದೆಲ್ಲವ ಕೇಳ್ದು ಮುದದಿಂದುಬ್ಬಿ ಬಿಜ್ಜಳನೂ

The king assents to this, and sends ministers to call him.

ಘನದ ಭದ್ರೇಭವನಮಾತ್ಯರ
ನನಿಬರಂ ಬೆಸನಿತ್ತು ಬಸವನ
ನನುನಯದೊಳೊಡಗೊಂಡು ಬರಲೆಂದಟ್ಟಲೊಡನವರೊ

1. ದೊಡ್ಡ ಆನೆ.

734. ಧಾರುಣಿಗೆ ಸಚಿವಾಗ್ರಪಟ್ಟಕ
ಪಾರಭಂಡಾರಕ್ಕೆ, ಬಹುಪರಿ
ವಾರಕಾಪ್ತಜನಕ್ಕೆ, ವಿಶ್ವಾಸಕ್ಕೆ ಬಿಜ್ಜಳನಾ
ಭೂರಿಸಾಮ್ರಾಜ್ಯಕ್ಕೆ, ಸಕಳದ
ಭಾರಮಂ ತಾಳಲ್ಕೆ, ಮತ್ತೆ ವಿ
ಚಾರಿಸಲು, ನೀವಲ್ಲದಾತಂಗಾವನಿರ್ದಪನೂ?

The ministers of Bijjala entreat Basava, to accept this appointment.

1. ಬಿಜ್ಜಳನಿಗೆ.

735. ಅರಸನೊಕ್ಕೈಯೋಗರಕೆತಾ
ನರುಹನುಳದಂತೀಧರಿತ್ರಿಗೆ
ನಿರುತವಧಿಪತಿ ನೀವೆ ಯಲ್ಲಾ! ಬಸವಮಂತ್ರೀಶಾ
ಪುರಕೆ ಬಿಜಯಂ ಗೈದು ಸಲೆ ವು
ದ್ಧರಿಸಿ ಯುಂಬರ ಬಿನ್ನಪವನವ
ಧರಿಸಿ ಭಕ್ತಹಿತಾರ್ಥಮಂ ನೆನೆವಲ್ಲಿಗೊಡಬಟ್ಟಾ.

He consents.

1. ಅರಸನಿಗೆ ಒಂದು ಸೆರೆ ಅನ್ನ ಕೊಟ್ಟರೆ, ಸಾಕು, ರಾಜ್ಯಾಧಿಕಾರವೆಲ್ಲಾ ನಿಮ್ಮದು.
2. ವಿಧಿ. ಧಾರುಣಿಗೆ—ಉದ್ಧರಿಸಿ (ರಿ) ಎಂಬ ಮಾತುಗಳನ್ನು ಹೇಳಿ ಬಸವನನ್ನು ಕರೆತರ
ಲಿಕ್ಕೆ ಬಂದ ಜನರು ಅವನನ್ನು ಒಡಂಬಡಿಸುತ್ತಾರೆ.

736. ತಂನನೆಲ್ಲರು ಯೋಲಯಿಸಿ ಬರೆ,
ಬಿಂನವಿಸಿ ಭಕ್ತಾವಳಿಗೆ ನಯ
ದಿಂ ನಮಿಸಿ ಯುವರುಗಳ ಕರುಣಾರಸದೊಳೋಲಾಡೀ

The king goes to meet him,

ಉಂನತಿಯೊಳ್ಳೈತಪ್ಪ ಬಸವಜ
ಗಂನುತನನಿದಿರ್ಗೊಂಬ ತವಕದಿ
ತಂನರೇಂದ್ರನು ಕೇಳದಡೆ, ಯಿದೆ ಬಂದೆನೆಂದನಲೂ

737. ಕೇರಿಕೇರಿಗೆ ಮನೆಮನೆಗೆ ಗುಡಿ
ತೋರಣಂಗಳನೆತ್ತಿ ಮಣಿಮಯ

orders the town, to be decorated on Basava's account,

ತೋರಣಂಗಳನಳವಡಿಸುತಂ ಕಳಶಕನ್ನಡಿಯಾ
ತೋರಣಂಗಳನಲ್ಲಿಗಲ್ಲಿಗ
ಪಾರರಚನೆಗಳಿಂದೆ ತತ್ತ
ದ್ವಾರಶಿಖರಂಗಳೊಳಮರ್ಚಿಸಿ ನಗರಿಯಗಲವಲೀ

738. ಲೋಕಪಾವನಕಾರಕನನಾ

and receives him kindly.

ಲೋಚಿಸುತ್ತಾನೆಯನಿಳದು ತಾಂ
ಲೋಕಪಾಲನು ಕಾಲ್ನಡೆಯೊಳದಿರೊಂದೊ[1]ಡೇ ಸಾದರ್ಜ
ಪ್ರಾಕಟಪ್ರಿಯವಿನಯಪೂರ್ವ
ಸ್ವೀಕರಣಸತ್ಕಾರಸಂತು
ಷ್ಟಾಕುಲನನಂ ಮಾಡಿ ಬಸವನನಿರಿಸಿದನು ಧರೆಗೇ.

1. ಇದಿರ್ವಂದು=ಇದಿರು ಬಂದು. ವ್ಯಾ. ಸೂ. ಈ ಪ್ರಧಾನಿಯೋಗದಲ್ಲಿ ಇದ್ದು ಬಹಳ ಐಶ್ವರ್ಯವನ್ನು ಸಂಪಾದಿಸಿದನು.

3. ಮುಳಿದು ಭಕ್ತದ್ರೋಹಿಯನ್ನು ಕೊಲ್ಲ ಹೇಳಿ ಜಗದೇವನನ್ನು (Basava's end) ಇರಿಸಿ ಬಸವನು ಸಂಗಮೇಶನಲ್ಲಿ ಐಕ್ಯವಾದದ್ದು. (ಸಂಧಿ. ೬೧.)

739. ಕೆಲವು ಕಾಲಕ್ಕೈಸರಲಿ ಬಿ

Bijjala, as if desirous of going to the town of Yama, despises Basava.

ಜ್ಜಳನೃಪಾಲಂ ತನಗೆ ಕಾಲನ
ಪೊಳಲಿಗೈದಲು ಬಗೆದು[1] ಬಸವನ ಬಹಳಮಹಿಮೆಯನೂ

1. ಬಿಜ್ಜಳನು ಬಸವನ ಮಹಿಮೆಯನ್ನು ತಿರಸ್ಕರಿಸಿ ಯಮನ ಊರಿಗೆ ಹೋಗುವ ಹಾಗೆ ಮಾಡಿದನು.

ಛಲದ ಭಕ್ತಿಮಹತ್ವದೊಂದ
ಗ್ಗಳಿಕೆಯಂ ತಾನರಿ[2]ದುಮರಿಯದ
ಪೊಲು ನೆರೆಯಲಜ್ಞಾನಮದದಿಂ ಕಾಣದತಿಮದಿಸೀ.

2. ಅರಿದರೂ ಮನಸಿಗೆ ತರುತ್ತಿದ್ದಿಲ್ಲ.

Bijjala not pleased with their religion, orders the eyes of Halleija and Maduveija to be cut out.

740. ಸೊಗಸದವದಿರ ಮತಕೆಹಳ್ಳ
ಯ್ಯಗಳ ಮಮವಯ್ಯಗಳನಾಗಳೆ
ಜಗತಿಪಂ ತಪ್ಪೇನುವಿಲ್ಲದೆ ನೀತಿಯಲ್ಲೆಂದೂ
ಬಗೆಯದವರಂ ಕರೆಸಿ ಕಂಣಂ
ತೆಗೆಸಿದನು; ಮಾಹೇಶ್ವರರ ಮಹಿ
ಮೆಗಳನುದ್ದಂಡತೆಗಳಂ ತಾನರಿಯನೇ ಮುನ್ನಾ ?

1. ಅವರ ಮತಕ್ಕೆ ಸೊಗಸದೆ ಮಾತ.

Uneasiness of the people.

741. ಲೋಕಪಾಲಂ ಕೇಡ ಬಗೆದನೆ ? .
ಹಾಕಟಕವಿಂನಳಿವುದಕಟ ! ಪಿ
ನಾಕಿ ಭಕ್ತರು ಮುಳಿದೊಡಂ, ಬದಕುವನೆ ? ತಾನೆನುತಾ
ವ್ಯಾಕುಳತೆಯುತಹೃದಯರಾಗುತ
ನೇಕರುಂ ಗುಜುಗುಜಿಸುತಿರಲು
ದ್ರೇಕಿಸುತ ಬಸವಂ ಸಹಿತ ಹರಭಕ್ತಸಂದೋಹಾ

Basava convenes the Lingaites, restores to those sufferers their eyes, and announces that he will leave the city.

742. ಅಸಮಕೋಪೋದ್ದೀಪಿತಾಂಗೋ
ಲ್ಲಸನರಾಗುತ ಕೂಡಿ ವಿಕ್ರಮ
ವೆಸೆಯೆ, ಹಳ್ಳಯ್ಯನ ಮಧುವಯನಕಂಗಳಂ ಪಡೆದೂ·
ಬೆಸನವಾಯಿತು ಶಿವನೊಳುಂ ವ
ರ್ಜಿಸಿದೆವಿಂನೀಪೂರನೆನುತುಂ
ಬಸವನುಂ ಭಕ್ತಾಳಿಯುಂ ಜಗದೇವನಂ ಕರೆದೂ,

743. ನಿನ್ನ ಯುಂದಿನ ಭಾಷೆಯಂ ಸಲಿ
ಸಿನ್ನ ತದ್ರೋಹಿಯನಪಹರಿಸಿ
ನನ್ನಿಯಿಂ ಮೆರೆ ಯೆನುತ ಜಗದೇವಂಗೆ ಬೆಸನಿತ್ತೂ
ತನ್ನರೇಂದ್ರನ ನೊಸಲ ಬರಹವ
ಮುಂನೊರಸಿ ಬಿಜ್ಜಳನ ಸಾಮ್ರಾ
ಜ್ಯೋಂನತಿಯನೀಶನ ಕವಳಿಗೆಯೊಳಂತು ತೊಡಯಿಸುತಾ,

He commands Fágadeva to kill the king, and thus makes over his kingdom to the drinking vessel of Shiva, i. e. to destruction.

744. ಇಲ್ಲಿ ಇವರವರೆನ್ನದೇ ನೀ
ವೆಲ್ಲರುಂ ಕೇಳೀಕ್ಷಣದೊಳೇ
ಬಲ್ಲಹನ ಸಾಮ್ರಾಜ್ಯಮುಂ ಕಲ್ಯಾಣಪಟ್ಟಣವೂ
ಎಲ್ಲವುಂ ಹಾಳಹುದು ಧಿಟವನೆ
ಸೊಲ್ಲಿದೆವು ನಾವೆನುತ ಶಪಿಸುತ
ಬಲ್ಲಿದರು ಮಾಚಯ್ಯನವರುಂ ಮುಸುಟಿಬಾಡಯ್ಯಾ

He foretells, that the city will be laid waste.

745. ಲಿಂಗವಂತರು ತಂಡತಂಡದ
ಜಂಗಮಾವಳಿ ತಂನೊಡನೆ ಬರೆ,
ಸಂಗಮೇಶ್ವರಪುರಕೆ ಬಸವಂ ನಡವುತಿರಲಾ
ಇಂಗಿತಾಬಿಜ್ಞಳನ ಸಂಪ
ತ್ಸಂಗತಾಂಬುಧಿ; ಯಾಗ ಶಿವನ ಗ
ಣಂಗಳೆಲ್ಲರು ಪೋಗೆ, ಕಟಕದ ಭಾಗ್ಯವಳಿಯಿತ್ತೂ.

With a great many followers he goes to Sangamséshvara.

(೭೪೧—೭೪೫.) ಈ ಐದು ಪದಗಳಲ್ಲಿ ವೊಂದು ವಾಕ್ಯವದೆ.—ಉದ್ರೇಕಿಸುತ ಬಸವಂ—ನಡೆಯುತ್ತಿರಲಾಗಿ ಯಿಂಗಿತು ಎಂದು ಅನ್ವಯಿಸಬೇಕು. 1. ಕೊಲ್ಲುತ್ತೇನೆಂಬ ಭಾಷೆ ಮುಂಚೆಮಾಡಿದ್ದನು. 2. ಸಾಯುವ ಹಾಗೆ ಮಾಡಿದರು. 3. ಈಶನು ಸುಡುಗಾಡಿನಲ್ಲಿ ತಿರುಗುವವನು ಆದ್ದರಿಂದ ಅಡವಿಪಾಲು ಮಾಡಿದರೆಂಬಂತೆ ಅಭಿಪ್ರಾಯ.

746. ಧರಣಿ ಕಂಪಿತವಾಯ್ತು ; ಕಾಗೆಗ

Bad omens at the exodus of Basava.

ಳಿರುಳುಡುಗದರಿಚಿದವು ; ಹಗಲುಂ

ನರಿಗಳೂಳಿದವುಲ್ಕ ಬಿದ್ದವು ; ಕಲ್ಲುಮಳೆ ಮೇಲೇ

ಸುರಿಯಿತಾದಿತ್ಯೇಂದುಗಳನಾ

ವರಿಸಿತಾಪರಿವೇಷವತಿಸಿ

ಝರ್ಝರದೊಳನಿಲಂ ಬೀಸಿದನು ; ಕೆಂಧೂಳಿ ಮಸಗಿತ್ತು ;

747. ಹಗಲೆ ಮುಸುಕಿತು ಮಂಜುಗತ್ತಲೆ

ಗಗನದೊಳು ; ಭೀಕರಕೃತಾಂತನು

ವಿಗಡರೂಪಂ ತೋರಿದನು ಪಟ್ಟಣಸಮೀಪದಲೀ ;

ಜಗತಿ ಯೊಡೆಯನು ಶಿರಸುವಿಲ್ಲದ

ಬಗಿದ ಪೆಣನಂ ಕಂಡನುದಯಾ

ದ್ರಿಗೆ ತರಣಿ ಬರ ಸಮಯದಲಿ ಪ್ರತಿಯಿನನುದಯಿಸಿದನೂ.

1. ಕೆಲಸ ತೀರಿಸುವವನು=ಯಮ. ಇವೆಲ್ಲಾ ಕೆಟ್ಟ ಶಕುನಗಳು ಅಂತ ನೆನಿಸುತ್ತಾರೆ.

748. ಇದರ ಮೇಲೇನಾಗಲಾಗಿ

ದುರ್ಗದೊ ? ಯೆನುತ ಸಂತಾಪಿಸುತ್ತಂ

ಹೆದರುತಿರೆ ಜನವಿತ್ತಲಾಜಗದೇವನುಂ ತನ್ನಾ

ಸದನಕೈತರೆ, ತಜ್ಜನನಿ ಕಂ

The mother of Fagadeva exhorts him to kill the king; and reproves him for his backwardness.

ಡೊದರುತಾತನ ಮುಸುಡನೀಕ್ಷಿಸು

ತಿದು ಸದಾಚಾರ್ಯೈಕಭಕ್ತಿಗೆ ಪಥವೇ ? ಕೇಳ್ಮಗನೇ !

749. ಹಿಂದೆ ಭಕ್ತದ್ರೋಹಿಯುಂ ನೀ

ಕೊಂದು ಬಂದೈ ! ಯಿತ್ತಲೂಟಕೆ

ಬಂದೆ ; ಯೀಹಲುವ್ರಾಟವಿಂತೆ[1]ಪೆಗಿಂಪಮದು ? ಹೇಳೂ !

1. ಹ್ಯಾಗೆ ಅರಸನನ್ನು ಕೊಲ್ಲದಲೆ ಇಷ್ಟು ಎಷ್ಟು ಸರ್ತಿ ಊಟಕ್ಕೆ ಬರಬೇಕು.

ನಿಂದಿರಾ ! ಚೀಃಕುಂನಿ ! ಕೈಕೈ
ಯಿಂದೆ ಶಿವಲಿಂಗಪ್ರಸಾದವ
ನಿಂದು, ನಾಚಿಕೆ ಯಿಲ್ಲದೊಡೆ, ನಾಯ್ಬದುಕು ! ನೀ ತಿಂದೂ !

750. ಎನುತಮಿಂತುಚ್ಚುಚ್ಚೆರೇ ಯೆಂ
ದೆನುತ ಚಿಟುಕಿಕ್ಕುತವೆ, ತನ್ನಯ
ಮನೆಯ ಹಿತ್ತಿಲ ಬಾಗಿಲಲಿ ಲಿಂಗಪ್ರಸಾದವನೂ
ಜನನಿ ತಂದವನಿಯಲಿ ಸುರಿಯಲು,
ಶುನಕನಂದದೊಳುಚಿತವಹುದಹು
ದೆನುತ ಜಗದೇವಂ ಪ್ರಸಾದವನುಂಬ ಸಮಯದಲೀ,

1. ನಾಯಿ ಕರೆಯುವ ಅನುಕರಣ.

751. ಲಿಂಗವಂತರು ಮೊಲ್ಲಬೊಂಮ
ಯ್ಯಂಗಳೆನಲತಿವೀರಭಕ್ತಿಸು
ರಂಗದಿಂ ವರ್ತಿಸುತಿಳೆಯೊಳೀವಾರ್ತೆಯಂ ಕೇಳ್ದು
ಹಿಂಗದಾಜಗದೇವನೆಡೆಗೆ ಕ
ಡಂಗಿ ಬಂದೊಂದಾಗಿ ತಾವುಂ
ತುಂಗವಿಕ್ರಮರಾಪ್ರಸಾದವನಾಗಳನುಭವಿಸೀ,

Fagadéva is joined by Malleija and Bommeija.

752. ದೇವವಸ್ತ್ರವನುಟ್ಟು, ಭಸ್ಮಾಂ
ಗಾವಿಭೂಷಣರಾಗಿ ತಾ ವೀ
ರಾವತಾರರು ವೀರಭದ್ರಾದಿಪ್ರಮಥವರರಾ
ಭಾವದಲಿ ನೆನೆದುಗ್ರಕೈದುಗ
ಳೋವಿ ಮೂವರು ತಮತಮಗೆ ಪರಿ
ದಾವನಿತೆಗೊಲಿದೆರಗಿ ಪರಕೆಯ ಶಾಸೆಗಳ ಧರಿಸೀ

These three set out, to kill Bijjala.

753. ನಿಳಯಮಂ ಪೊರಮಟ್ಟು ಬರಲತಿ

A bull on the road makes way for them. This is considered a good omen by them.

ಬಳವೃಷಭ ಕೆಲವುತ್ತ ಮಂದಿಯು
ತೊಲಗಿಸುತ ಮುಂದೆಸೆಗೆ ದಾರಿಯ ತೋರಿ ನಡವುತಿರೇ,
ಕೆಲಸ ತಳುವಿದೊಡೆಂಮ ಮೇಲಣ
ಪೊಲುಮೆಯಿಂ ಬಸವೇಶ ಬಂಪನು
ನಲವಿನಿಂ ನೆರೆವಾಗಿ ಕರೆಯಲ್ಕಿದುವಲಾ ! ಯೆನುತಾ,

754. ಬರಬರಲು, ಸಂದಣಿಪ ನಾನಾ
ಕರಿಘಟಾವಳಿಮಾವತಿಗರುಂ
ತುರುಗಜಯದೇರಾಟದಾರಾಹುತರ ಸಂದೋಹಾ
ನೆರೆದು ಬರುತಿಹವರ್ಗಳೆಲ್ಲಂ
ತರಿಸಿ ದಾರಿಯನೀಯೆ, ಧೀರರು
ಪುರವಣಿಸಿ ವೀರಾವತಾರರುಮೂವರೈತರಲೂ ;

755. ಅಂದಣದ ಸಂದಣಿಯು ದೊಂದಣ

They enter the palace.

ಮಂದಿ ಯಿಬ್ಬಗಿಯಾಗಿ ಪೆಬ್ಬೆರ
ಗಿಂದ ವೊಂದುಂ ತೊಳತೊಳಗುತುಜ್ಜ್ವಳಿಸಿ ನಡೆತರುತಾ,
ಮುಂದೆ ತೊಲಗದೆ ಬಪ್ಪವರ ಮುಡು
ಹಿಂದಣದು ಹೊಯ್ಯುತ್ತ ಕೈದುಗ
ಳಂದ ಚಿಂಮುತ ಬಂದು ಹೊಕ್ಕರು ರಾಜಮಂದಿರವಾ.

747—754, ಈ ಪದಗಳಲ್ಲಿ ಬಂದೇ ವಾಕ್ಯ, ಆ ಮೂವರು ಬಂದು ಅರಮನೆಯ ಹೊಕ್ಕರು ಎಂಬ ಮುಖ್ಯಾಭಿಪ್ರಾಯ.

756. ಅಯಿರುಳಿ ನೋಲಗಕೆ ಗಮನಿಸಿ

Bijjala killed.

ರಾಯನಂ ಕಾಣುತ್ತವೈಸರೊ
ಳಾಯುಧಂಗಳನುರ್ಚಿ, ಸಭೆ ಝಲ್ಲೆನಲು, ಬಿಜ್ಜಳನಾ

ಕಾಯದಲಿ ವೊಂದೆರಡು ಮೂರ್ಪ್ರ್ಗ
ರಾಯಘಾಯದೊಳರಿವು ಕೆಡಹಿ ಯ
ಜೀಯರರಸವರು ಮೂವರುಗ್ರೋದಗ್ರವೃತ್ತಿಯಲೀ,

757\. ಅತ್ತಲರಮನೆಯಿಂದ ಪೊರಮ
ಟ್ಟಿತ್ತ ತಂನಯ ಮನೆಗೆ ವೀರಂ
ಬೆತ್ತು ಮೊಲ್ಲೆಯಬೊಂಮಯಂಗಳು ತಾನುವೈತಂದೂ
ಸೆತ್ತ ತಾಯಿಗೆ ವಂದಿಸುತ ನಾಂ
ಪೊತ್ತ ಹಿಂದಣ ಕೆಲಸವಿಂದಾ
ಯಿತ್ತೆ ಯೆಂದುತ್ತಮೆಯ ಕೃಪೆಯಂ ಪಡೆದು ಜಗದೇವಾ

The three murderers return home.

758\. ಇಹಪರೇತರನರನರಕವಿ[1]
ಗ್ರಹನ ನೀಶ್ವರಭಕ್ತಜನನಿ
ಗ್ರಹನಪಹರಿಸಿದೊಡನಿತರೊಳ್ ಹೋಗದಾಖಳನಾ
ಅಹಗೆ ಕೊಲ್ಲದೆ ಬಂದ ತಪ್ಪಿಗೆ
ವಿಹಿತವಿಂನೊಂದುಂಟು, ದಂಡನೆ
ಯಿಹ[2]ಗೆಸುತ್ತಪೆ ತನ್ನ ಶಿರವಂ ತಾ ತರಿದುಕೊಂಡಾ

Fagadéva, not having stayed to see the death of Bijjala from his wounds, is dissatisfied with himself, and commits suicide.

1\. ಬಿಜ್ಜಳನು ಇಹಪರಕ್ಕೆ ಹೊರಗಾದ ನರನು, ನರಕಕ್ಕೆ ತಕ್ಕ ಶರೀರ ವುಳ್ಳವನು, ಭಕ್ತ ಜನರನ್ನು ಕಷ್ಟಪಡಿಸುವವನು ಎಂದು ಅವನನ್ನು ವರ್ಣಿಸುತ್ತಾನೆ. 2. ಹಾಗೆ, ಹೀಗೆ.

759\. ಹೊದ್ದದೊಬ್ಬೊರ್ಬರ ಕಲಹವಾ
ಗೆದ್ದು ತಾವಿರಿದಾಡಿದರು ; ಪುರಿ
ದೊದ್ದೆಯಾದುದು ; ಹುಟ್ಟಿದುದು ವಿಪರೀತವವರೊಳಗೇ ;

After the death of Bijjala a civil war begins in the city of Kalyána.

ಇದ್ದ ಭಕ್ತರು ವಾರ್ತೆಯಂ ಕೇ
ಳಿದ್ದ ಭಕ್ತರು ಕೂಡಿ ನೋಡು
ತ್ತಿದ್ದ ಭಕ್ತರು ಹೋದರೊಂದೊಂದೆಡೆಗೆಯ್ಯೆಸರಲೀ.

760. ಮಾನವೇಂದ್ರನು ಮಡಿದೊಡಾತನ
ಮಾನ ಲಕ್ಷ್ಮಿ ಯಲಕ್ಷ್ಮಿ ಯಾಯಿ
ತ್ತಾನಗರಿ ಯಮನಗರಿಯೋಲಾಯಿತ್ತದೇವೇಳ್ವೇ ?
ಅನರಾಧಿಪಬಿಜ್ಜಳನ ಸಂ
ತಾನವೆಲ್ಲವು ಕಡೆಗೆ ನಿಸ್ಸಂ
ತಾನವಾಯಿತು ; ಕುದುರೆಗಳು ಶಾಲೆಗಳೊಳಿರ್ದಪರಿ,

Desolation of the city and country.

761. ಉರಿದು ಬಿಕ್ಕನೆ ಬಿರಿದು ಬಿದ್ದವು ;
ಸುರಿಯೆ ಬಾಲಂಗಳಲಿ ಕೆಂಡವು ;
ಕರಿಗಳುಂ ಕರಿಗಳು ಕನಲ್ದಿದಿರಾಗಿ ಮಿಗೆ ತಾಗೀ
ಧರಣಿತಳದೊಳು ಕೆಡದು ಮಡಿದವು ;
ನೆರದ ಸಾಮಂತಾದಿಭಟಪರಿ
ಕರನಿಕರವುದ್ಭ್ರಮಿಸಿ ಸವೆದರು ಕಾದಿ ತಮ್ಮೊಳಗೇ.

762. ಬಸವರಾಜನ ಸತ್ಯಶಾಪವು
ಮುಸೆದೊರಸಿ ಹಾಳಾಯ್ತು ಕಟಕದ
ಪಸರವನಿತರೊಳನಿತುಮಂ ಕೇಳಿದನು, ಕೂಡಲಿಗೇ.
ಸಸಿಗೆ ತಾನೈದಿದನು; ಕಂಡನು
ಅಸಮಸದ್ಗುರುಸಂಗಮೇಶನ
ನೊಸೆದು ತನುಪುಳುಕಂಗಳಿಗೆ ಸಾಷ್ಟಾಂಗವೆರಗಿದನೂ.

Basava absorbed into Sangaméshvara.

763. ಇತ್ತಲಿರ್ದಾಭಕ್ತರುಗಳು ಮ
ಹತ್ತು ಸಹಿತಂ ಮಾಚಿದೇವಗ
ಣೋತ್ತಮಂ ಬಸವಣ್ಣನಂ ಮಿಗೆ ಕೂರ್ತುಕೀರ್ತಿಸುತಾ
ಚಿತ್ತಕಮಲವನಲರಿಸುತ ಮುದ
ವೆತ್ತು ತಾನುಂ ಚನ್ನಬಸವಂ
ಪತ್ತೆಬರೆ, ನಡೆತಂದರಾಪ್ರುಳವೆಯ ಮಹಾಮನೆಗೇ.

Máchidéva and Channabasava, with many Lingaites, go to Mahamane.

CHANNABASAVA PURANA.

ಚನ್ನಬಸವ ಪುರಾಣ. (ವಾರ್ಧಿಕಷಟ್ಪದಿ.)

CHANNABASAVA'S BIRTH

ಚನ್ನಬಸವ ಜನಿಸಿದ್ದು. (ಸಂಧಿ. ೪.)

764. ಇರ[1]ರಿತ್ತ ನಾಗ[2]ಲಾಂಬಿಕೆ ಮಹಾಭಕ್ತಿಯಿಂ
ಗುರುಲಿಂಗಜಂಗಮಾರ್ಚನೆಯನೊಲವಿನ್ಮಾಡಿ
ಪರಮಪ್ರಸಾದಮಂ ಸವಿಮಶೈಯೊಳಂದು ಪರಶಿವಧ್ಯಾನದಿಂದಾ
ವರುಷದಿಂ ಯೋಗನಿದ್ರಾಮುದ್ರಿತಾಕ್ಷಿ ತ
ತ್ಪರವಶದೊಳಿರಲೀಶ್ವರಂ ಕರುಣದಿಂದ ಪರ
ಚರಮೂರ್ತಿಯಾಗಿ ತತ್ಸ್ತ್ರೀಯನೀಳೆಂದೊಡನೆ ಕರದೆಚ್ಚರಿಸಿ ನುಡಿ
[ದನೂ.

Shiva in the disguise of a Jangam appears to Nágalámbike and speaks to her:

ಕವಿಸಿದ್ಧವಿರೇಶನ ಶಿಷ್ಯನಾದ ವಿರೂಪಾಕ್ಷ ಪಂಡಿತಾರಾಧ್ಯನು ಹಂಪಿಯಲ್ಲಿ ಇದ್ದನು. ಮೊದಲು ಆರಾಧ್ಯ ಬ್ರಾಹ್ಮಣನಾಗಿದ್ದನು. ಆಮೇಲೆ ಇಷ್ಟಲಿಂಗದೀಕ್ಷೆ ಮಾಡಿಸಿ ಕೊಂಡನು. ಅವನ ಹತ್ತರ ಲಿಂಗವಂತರು ಬಂದು ಶರಣರ ಕಥೆಗಳನ್ನ ಕವೀಶ್ವರರು ಹೇಳಿದರು ; ಈ ಚನ್ನಬಸವೇಶ್ವರನ ಚರಿತೆಯನ್ನು ಇನ್ನು ಯಾರು ಹೇಳಲಿಲ್ಲ ; ಅದನ್ನು ನಮಗೆ ಹೇಳಬೇಕು ಎಂದು ಬೇಡಿದ್ದಕ್ಕೆ ಅವನು ಈ ಕೃತಿಯನ್ನು ಮಾಡಿ ಶಾಲಿವಾಹನಶಕದ ೧೪೮೬ನೆ ವರುಷದಲ್ಲಿ ಅದನ್ನು ಮುಗಿಸಿದನು. ಹಾಗಾದರೆ ಈ ಕೃತಿಯಾಗಿ ೩೬೬ ವರುಷವಾಯಿತು.

1. ಕೈಲಾಸದಲ್ಲಿ ಶಿವನು ತನ್ನ ಮಗ ಷಣ್ಮುಖನನ್ನು ಮರ್ತ್ಯಲೋಕದಲಿ ಹುಟ್ಟಿದ ನಂದಿಕೇಶ್ವರನಿಗೆ ಉಪದೇಶ ಮಾಡುವದಕ್ಕೆ ಕಳುಹಿಸಬೇಕೆಂದು ನಿರ್ಣಯಿಸಿದನು. 2. ಬಸವನ ಸಹೋದರಿ ಅವನ ಸಂಗಡ ಕಲ್ಯಾಣಕ್ಕೆ ಬಂದಿದ್ದಳು, ಬಹಳ ಚೆಲ್ವೆಯಾದಕಾರಣ, ಬಿಜ್ಜಳ ಆಕೆಯನ್ನು ಉಪಪತ್ನಿ ಮಾಡಿಕೊಂಡಿದ್ದನಂತೆ ಜೈನರು ಹೇಳುತ್ತಾರೆ.

765. ಎಲೆ ತರುಣಿ ! ಕೊಳ್ಳೌ ! ಮಹಾಪ್ರಸಾದವನೆನ
ಲ್ಲಲಿದು ಕೈಕೊಂಡು ಲಿಂಗಕೆ ಕೊಟ್ಟು ತಾಂ ಕೊಂಡ
ಬಳಿಕ, ಚರರೂಪನಡಗಿಸಿ ಪಂಚವದನದಶಭುಜತ್ರಿಪಂಚಾಕ್ಷಿಯಿಂ [ದೇ
ಪ್ಪೊಳೆವ ಫಣಿಕಟಕ[1]ತ್ರಿಶೂಲಡಮರುಗದಿಂದೆ
ಪ್ಪಲಿ ದೊವಲಿನುಡಿಗೆಯಿಂ ಪಾರ್ವತಿ ಸಮೇತದಿಂ
ದೊಲಿದು ಪ್ರಸನ್ನಭಾವದೊಳ್ ಪರಶಿವನಾಗಳಾ ತರುಣಿಗಿಂತೆಂದನೂ.

"Take this blessing!" He takes off his disguise, and appears in his true form.

1. ಹಾವನ್ನು ಆಭರಣ ಮಾಡಿಕೊಂಡನು.

766. ಲಲಿತಾಂಗಿ ! ಸಂಕಲ್ಪಮುಮ್ಮಾಡ ಬೇಡ ! ನಾಂ
ತಿಳುಪೆವೆಂ ಪೊಸತಪ್ಪ ಚೋದ್ಯಮಂ; ನೀಂ ಕೇಳ್ವು
ದೊಲಿದು ! ಸವಿಸ್ಮಾಚಿತ್ಕಳಾಮೃತಪ್ರಸಾದಮಿದರಿಂ ನಿನ್ನ ಗರ್ಭ [ದೊಳಗೇ
ತೊಳಗುವೆಂಮಿಾಷಣ್ಮುಖಸ್ಥಿತಪ್ರಣವನಿ
ರ್ಮಳರೂಪನಾಷಟ್ಸ್ಥಲ[1]ಬ್ರಹ್ಮ, ಸಕಳಭೂ
ತಳವಂದ್ಯನಗಣಿತಪವಾಡಪುರುಷಂ ಜನಿಪನೆಂದೀಶ್ವರಂ ನುಡಿದನೂ.

"My son Shanmukha shall be born from thee!"

1. ಭಕ್ತಸ್ಥಲ, ಮಹೇಶ್ವರಸ್ಥಲ, ಪ್ರಸಾದಿಸ್ಥಲ, ಪ್ರಾಣಲಿಂಗಸ್ಥಲ, ಶರಣಸ್ಥಲ, ಐಕ್ಯಸ್ಥಲ, ನೋಡು ಚನ್ನಬಸವ ೬೧ ಸಂಧಿ. ಚನ್ನಬಸವ ವೇದಾಂತ ಬೋಧಿಸಿದನಾದಕಾರಣ, ಅವನ ಬೋಧನೆ ಹೊಸತಲ್ಲ. ಆ ಮಹಾ ವಾಕ್ಯದಲ್ಲಿ ಅಸಿ ಎಂಬುದು ಭಾವಲಿಂಗ, ತ್ವಂ ಎಂಬುದು ಪ್ರಾಣಲಿಂಗ ತತ್ ಎಂಬುದು ಇಷ್ಟಲಿಂಗ ಎಂದು ಹೇಳಿದ ಮೇಲೆ, ಅವನ ಬೋಧನೆ ವೇದಾಂತದೊಳಗೆ ಕೂಡಿ ಹೋದ ಹಾಗಾಯಿತು. ಬೇರೆ ಬೇರೆ ಹೆಸರಿಟ್ಟು ಮುಚ್ಚು ಮರೆ ಯಾಕೆ ಮಾಡ ಬೇಕು.

767. ಪೊಸತಪ್ಪ ವೀರಶೈವಾಚಾರಮಂ ಪ್ರತಿ
ಷ್ಠಿಸಿ ಜಯಿನಬೌದ್ಧಚಾರ್ವಾಕರ ಮತವನಳಿದು
ಬಸವಾದಿಪ್ರಮುಖರ್ಗೆ ಷಟ್ಸ್ಥಲಬ್ರಹ್ಮೋಪದೇಶದಿಂ ನಿಜಪದವನೂ

Shiva after directing Nágalámbike, to make known this to the Lingaites, disappears.

ಬಸದೀವನೌ ನಿನ್ನ ಗರ್ಭದರ್ಭಕನುದಯ
ದೊಸೆಗೆಯಂ ಸಕಳಗಣಕರುಪ್ರ ! ಶೀಘ್ರದೊಳಿನು
ತ್ರಸಮಾಸ್ತ್ರಶೀಕ್ಷ್ಣಂ ವಿರೂಪಾಕ್ಷನಾನಿರಾಕಾರರೂಪಂ ತಳೆದನೂ.

1. ಅಸಮವಾದ ಅಸ್ತ್ರವುಳ್ಳವನು=ಮನ್ಮಥ, ಅವನನ್ನು ಶಿಕ್ಷಿಸಿದವನು=ಶಿವನು.

768. ಅನಿತರೋಳ್ಕಂದೆರದು ನಾಗಲಾಂಬಿಕೆ ತನ್ನ
Her astonishment when awaking. ಮನೆಯೊಳೀಶ್ವರ ಮೂರ್ತಿಯಂ ಕಾಣದಿಂತಿದೇಂ ?
ಕನಸಾಗಿಯುಂ ಕನಸಿನಂದಮಲ್ಲಿದು ! ನೋಡೆ, ಪ್ರತ್ಯಕ್ಷಮೆಂಬಂ [ತಿರೆ,
ಮನದೊಳಗೆ ವಿಸ್ಮಯರಸಂ ತುಳುಕುತಿದೆ; ಯೆನ್ನ
ನೆನಹಿನೊಳು ಶಿವರೂಪ ಹೊಳವುತದೆ, ಚೋದ್ಯಮಂ
ದೆನುತ ಜಾನಿಪಸಮಯದೊಳ್ಬೆಳಗುಜಾವಗೋಳಗಳುಲಿದವೇನೆಂ [ಬೆನೂ.

769. ಇಂದರನ ದೆಸೆ ಕೆಂಪು ಮೂಡೆ, ಕತ್ತಲೆ ಯೋಡೆ,
Sun-rise. ಮಂದಾನಿಲಂ ತಂಪು ತೀಡೆ, ಭ್ರಮರಂ ಪಾಡೆ,
ಬಂದುಚಕ್ರಂ ಕೂಡೆ, ಕೈರವಂ ಬಾಡೆ, ಕಮಲಂ ಬಿರಿದು ನಗೆ [ಯೊಳಾಡೇ
ಮುಂದೋರ್ವವೀರಶೈವಾಚಾರ್ಯನೀಧರೆಗೆ
ಬಂದಿವಕೆ ನೂರು ಮಡಿಯಾಗಿ ಬೆಳಗಂ ತೋರ್ಪ
ನೆಂದು ಸೂಚಿಸುವಂದದಿಂದುದಯಶೈಲಾಗ್ರದೋಳ್ದಿನಪನುದಯಿಸಿ [ದನೂ.

770. ಆಕಾಲದೊಳು ಭಕ್ತಿಯಿಂ ನಾಗಲಾಂಬಿಕೆ ಯು
She relates what had happened to her, to Basava. ಮಾಕಾಂತಪೂಜೆಯಂ ತೀರ್ಚಿಯಾಬಸವಾದ್ಯ
ನೇಕರೊಡನೀವಾರ್ತೆಯಾದ್ಯಂತಮಂ ಹಿಂಚು ಮುಂಚೆನಿಸದಾಂಪೇ [ಳಲೂ

ಬೇಕೆಂದು ಬೇಗಮನುಭವಮಂಟಪಕ್ಕೆ ಬಂ
ದಾಕಾರ್ಯಮಮ್ಮಹಾಗಣಕುಲಂ ಕೇಳ್ವಂತೆ,
ಜೋಕೆ ಇಂಪಾಗೆ, ದಂಡಾಧೀಶನೊಳು ಸವಿಸ್ತರವಾಗಿ ವಿರಚಿಸಿ [ದಳೂ.

771\. ಕೇಳ್ದು ಮುದಮಂ ತಾಳ್ದನಾಬಸವನುತ್ಸವಂ
ದಾಳ್ದುದು ಗಣಪ್ರತತಿ, ನಾಗಲಾಂಬಿಕೆಯ ಮೊಗ
ಮಾಳ್ದುದು ವಿಕಾಸಮಂ ಗರ್ಭಚಿನ್ಹಂ ದಿನದಿನಕ್ಕೆ ತಲೆದೋರ [ಲೊಡನೇ

General rejoicing at this news on the part of the Lingaites.

ನೀಳ್ದುದೆಲ್ಲರ ಮನೋಹರುಷಲತೆ ; ಧಾರುಣಿಯೊ
ಳೀಳ್ದು ಶೈವಾಚಾರಮಂದನಾಚಾರಮಂ
ತೋಳ್ದುದು ಸುಗರ್ಭದೊಳಗಿರ್ದ ಪರಶಿವನ ಚಿತ್ಕಳೆ ಯದೇಂ ಸಾ [ಮಾನ್ಯವೇ !

1\. ಧರಿಸಿತು. 2. ಕ್ರಿಯಾಸಮಾಸವಾಗಿರುವದರಿಂದ ದ್ವಿಕೆಯನ್ನಿಕ್ಕಡಲಿಲ್ಲ ವ್ಯಾ. ಸೂ.

772\. ಕ್ಷೀರಾಬ್ಧಿಮಧ್ಯಚಿಂತಾರತ್ನದಂತೆ, ನವ
ಶಾರದಾಭ್ರದಮರೆಯಶಶಿಯಂತೆ, ಸತ್ಪುಣ್ಯ
ಧಾರುಣಿಯೊಳಿರ್ಪ ನವನಿಧಿಯಂತೆ, ಗುರುಬೋಧೆಯೊಳಗಿಪ್ಪ ಮು [ಕ್ತಿಯಂತೇ

That treasure of knowledge was hidden in the womb as the wonderful gem in the milk-sea, &c.

ಅರವಿಗ್ರಾವಗುಪ್ತಜ್ಯೋತಿಯಂತೆ, ಮಂ
ದಾರಮುಕುಳದೊಳಿರ್ಪ ಸುರಭಿಯಂತಧಿಕಗಂ
ಭೀರಾಬ್ಧಿನಾಗಲಾಂಬಿಕೆಯುಬಸುರೊಳುತತ್ವನಿಧಿ ಗೋಪ್ಯದಿಂದಿ [ರ್ದನೂ.

773. ಪಲತೆರದ ಗರ್ಭಚಿಹ್ನಂಗಳಂದಿಂಗಿಂತು ತ

Wonder of the people of Kalyana at this.

ಲ್ಲಲನೆ ಕೆಲಕೆಲವು ದಿವಸಂಗಳಂ ಕಳೆಯೆ, ಪುರ
ದೊಳಗೆ ಗುಜುಗುಜು ಪುಸಗಿ, ನಾಗಲಾಂಬಿಕೆ ಗಡ ವಿರಕ್ತೆ ಗಡರಾ
[ಯಗುರುವಾ
ಬಲದನಾಯಕಬಸವನಕ್ಕ ಗಡ ಗರ್ಭಮಂ
ತಳೆದಳ್ಗಡಂ ! ಚಿತ್ರಮೆಂದು ಮನೆಮನೆ ನೀರ
ಹೊಳೆಬೀದಿಬೀದಿಯೊಳಗೀವಾರ್ತೆ ಪುರಜನದ ಕರ್ಣಂಗಳೊಳಗಿಡಿ
[ದುವೂ

774. ಅಕೆ ದ್ವಿಜನ್ಮೆ ! ಯೆಂಬರ್ಕೆಲಬರುತ್ತಮ

Remarks of the people, some wonder, some scoff. Bijjala is informed of this occurrence.

ಜೀರ್ಣೆಕೆ ಮಿಗೆ ಮದ್ಯಮರ್ದಿಸ್ಮಯಂ ಬಡುವರವಿ
ವೇಕಿನೀಚರು ಹಾಸ್ಯ ಮಾಡುವರದಂ ಕೇಳ್ದು ಮತ್ತೋರ್ವಪಿಸು
[ಣರರಸಂ
ಭೂಕಾಂತಬಿಜ್ಜಳಂಗರುಪ ಬೇಕೆಂದು ಬಂ
ದೇಕಾಂತದೋಲಗದೊಳೀವಾರ್ತೆಯಂ ಪೇಳೆ,
ಪೋಕನಿವನಿವನ ನುಡಿ ಪುಸಿ ಯೆನಲ್ಭಾಷೆಯಂ[1] ಬರಸಿ ಮತ್ತಿಂತೆಂ
[ದನೂ

1. ತಾನು ಹೇಳಿದ್ದು ಖರೆ ಎಂದು ಬರಿಸಿ ಕೊಟ್ಟನು.

775. ಕರದ ಕಂಕಣಕೆ ಕನ್ನಡಿ ಯುಂಟೆ ? ಜೀಯ್ಯ ! ಬಹು

The king, who was unwilling to believe it, is told, to go and see for himself.

ಪರಿಯೊಳಾಂ ಬಿನ್ನೈಸಲಂಜುವೆಂ ನಿಮಗೆ ; ತವ
ಚರಣಪಂಕಜದಾಣೆ ! ಪುಸಿ ದಿಟಂ ನೋಳ್ಪಡಿಮ ಮೇಳೆ ! ಯಾಬಸ
[ವಣ್ಣನಾ
ವರಗೃಹಾಂತರಸ್ಥದನುಭವಮಂಟಪದೊಳೀಗ
ಪರಭಕ್ತರುಂ ನೀಲಲೋಚನೆಯುಮಾಗರ್ಭ
ದರಸಿಯುಂ ಸಹ ಬಸವನಿರ್ದಪಂ ; ದೇವರ್ಬೈತರೆ, ಕಾಣ ಬಹು
[ದೆಂದನೂ.

776. ಎನೆ, ಬಿಜ್ಜಳಂ ವಿಸ್ಮಯಂ ಬಟ್ಟು ನೋಡ ಜೀ

The king with his ministers in Basava's house.

ಕೆನುತ ಸಕಲಪ್ರಧಾನವೀರರು ಕೆಲವು ಪರಿ
ಜನಸಹಿತಲರಮನೆಯನೊಳಪೊಕ್ಕು ಬರಲಸಂಖ್ಯಾತಗಣದೊಡನೆ
[ಬಸವಂ
ಘನಹರುಷದಿಂ ಕಾಣುತಿದಿರೆದ್ದು ಬಂದು ಸ
ದ್ವಿನಯಮಂ ನುಡಿದು ಕರತಂಪವಮಳರತ್ನರಂ
ಜನಸಿಂಹಪೀಠದೊಳ್ಕುಳ್ಳಿರಿಸಿದಶನದೀಧಿತಿ ಪೊಳೆಯುತಿಂತೆಂದನೂ:

777. ಎಲೆ ರಾಯ ! ಕೇಳ್ನಿಂನ ಭಲ್ಲೆಯದ ಮೊನೆಗೆ ಮಾ

Basava asks the king to tell him the reason of this unexpected visit.

ರ್ಮಲೆವ ಪರನೃಪರಿಲ್ಲವಾಣೆಗಪಜಯವಿಲ್ಲ
ಮಿಳೆಯ ಸಿರಿಗೇಂ ಬಾಧೆಯಿಲ್ಲವನುಜಾಗ್ರಜಸುತರ್ಕಳೊಳ್ಭೇದ
[ಮಿಲ್ಲಾ;
ಪಲವು ಕೋಶಕೆ ಕಡಿಮೆಯಿಲ್ಲಮೀಚತುರಂಗ
ಬಲದೊಳೆರಡಿಲ್ಲಮಿಂದೆನ್ನೆಡೆಗೆ ನೀಂ ಬಪ್ಪ
ಬಲು ಗಜ್ಜಮಾವುದುಂಟೆನೆ, ಕೇಳ ನಸುನಗುತಮವನೀಶನಿಂತೆಂ
[ದನೂ:

778. ಮಾನಸಿಧಿ ಬಸವದಂಡೇಶ ! ನೀನೆನ್ನ ಪ್ರ

The king assures him of his confidence in him, and seeing Nágalámbike asks her.

ಧಾನಿಯಾಗಿಪ್ಪನ್ನಮೆಂನ ಸೌಭಾಗ್ಯಕ್ಕೆ
ಹಾನಿ ಯೆಲ್ಲಿಯದೆಂದು ಮಾರುತ್ತರಂ ಗೊಟ್ಟು ಕೆಲಬಲವ ನೋಡು
[ತಿರಲೂ,
ಆನಾಗಲಾಂಬಿಕೆಯ ಗರ್ಭಸೌಂದರ್ಯಮಂ
ತಾನರಿದು ತತ್ಸತಿಯ ಪೇರ್ವಿಡುವುತಂ ವಿರತೆ
ನೀನಾರಿದೇಂ ಕಾರಣಂ ? ವೃಥಾ ಗರ್ಭಮಾಯ್ತೆನಲಾಕೆ ಯಿಂತೆಂ
[ದಳೂ:

779. ಪೊಡವೀಶ ! ನೀಂ ಕೇಳ ತಕ್ಕದೀಗರ್ಭವಾ

Conversation with her about this subject.

ಮೃಡಚಿತ್ಕಳಾಮೃತಪ್ರಸಾದಿಂದಾದುದೆಂ
ದೊಡೆ, ಸಕಲಶಿವಭಕ್ತರೆಲ್ಲರುಂ ತತ್ಪ್ರಸಾದಿಗಳವರಿಗೀಗರ್ಭದಾ
ಗೊಡವೆಯಂ ಕಂಡು ಕೇಳಿದುದಿಲ್ಲಮೆನೆ, ಪುಸಿಯು
ನುಡಿವಳಲ್ಲೀಶ್ವರಂ ಕರುಣದಿಂ ತನ್ನ ಮುಖ
ದೆಡೆಯ ಸುಜ್ಞಾನಪುತ್ರಂ ಜನಿಪನೆಂದಿತ್ತನೆನಲರಸನಿಂತೆಂದನೂ :

780. ಆಶಿವಜ್ಞಾನಭರಿತಂ ನಿನ್ನ ಗರ್ಭದೊಳ

The child in the womb speaks

ಗೀಶಕೃಪೆಯಿಂ ಬಂದನಾದೊಡದು ಲೇಸು ! ಮ
ತ್ತಾ ಶಿಸುವೆ ತಾನೆಮ್ಮೊಳೀವಾರ್ತೆಯಂ ಪೇಳ್ಗೆ, ನಿಜವೆಂಬಕಟಕಿ
[ನೃಪನಾ[1]
ಆಶಯವನರಿದಾಕೆಯುದರಮಧ್ಯಥಲೆ, ನಿಖಿ
ಳಾಶೆಯಂ ತೀವಲೆಲ್ಲಾಜನರ್ಕೇಳೆ, ಬಸ
ವೇಶಮುಖ್ಯರ್ನಲಿಯೆ, ಪೊಣ್ಮಿತೊಂದಾನೊಂದು ನುಡಿ ; ಯದೇಂ
[ಬಂಣಿಸುವೆನೂ.

1. ಹೀಗೆಹೇಳಿದ ಅರಸಿನ ಅಭಿಪ್ರಾಯವನ್ನು ತಿಳಿದಾಕೆಯ ಉದರ ಮಧ್ಯದಲ್ಲಿ ಮುಂತಾದ.

781. ಕಳಕಳವಿದೇಕೆ? ಹೋ ಹೋ ! ನಿಲ್ಲು! ನಿಲ್ಲು! ಬಿ

"I am not of blood, but I am the splendour of knowledge, that is in Shanmukha the son of Shiva."

ಜ್ಜಳನೃಪತಿ! ಯಾಗಸಂ ನೆಲಕಿಳಿದೊಡಂ, ಧರಾ
ತಳಮಿರದೆ, ಪಾತಾಳಕದ್ದೊಡಂ ಶಿವಶರಣರಿಂದೆ ಪುಸಿನುಡಿ ಬಪ್ಪು
[ದೇ ?
ವಿಲಸಿತವಿರೂಪಾಕ್ಷ ಷಣ್ಮುಖಸ್ಥಿತಸುಚಿ
ತ್ಕಳೆಯಿಲ್ಲದಾಂ ರಕ್ತರೇತಃಪ್ರಯುತಪಿಂಡ
ದೊಳಗಲ್ಲವೆಂಬಗಂಭೀರಸ್ವರಂ ಪೊಣ್ಮೆ, ಬಿಜ್ಜಳಂ ಬೆರಗಾದನೂ.

782. ಪ್ರತ್ಯಕ್ಷಮಂ ಪ್ರಮಾಣಿಸಿ ನೋಡ ಬೇಕೆಂಬು

Bijjala cannot yet believe, that the immortal god can be in the body of mortals.

ದತ್ಯಧಿಕನೀತಿಶಾಸ್ತ್ರಮದುಂಟುವದರಿಂದ
ನಿತ್ಯವಪ ಮಾನವಶರೀರದಿಂ ಮಲಮೂತ್ರರಕ್ತಮಾಸಂಗಳೊಳಗೇ

ನಿತ್ಯವಪ ಶಿವನ ಚಿತ್ಕಳೆ ಯಿಪ್ಪುದೆಂಬುದಿದು
ಸತ್ಯಮೋ ? ಯೆಂದೆನಲ್ಕಜ್ಞರನೊಡಂಬಡಿಪ
ಕೃತ್ಯಮಂ ತಿಳಿದು ತನ್ನೋಳ್ವಿಚಾರಿಸೆ, ನಾಗಲಾಂಬೆ ಯೆಂದಿಂತೆಂ
[ದಳೂ.

783. ಅಕ್ಕೆಕ್ಕು[1], ಮೂತ್ರಮಲಮಾಂಸರಕ್ತಂಗಳೊಳ
ಗಿಕ್ಕುಮೋ[2] ಶಿವಮೂರ್ತಿ ಯುನ್ನುದರದೊಳಗವರ
ತೊಕ್ಕಿಲ್ಲವೆನೆ, ಬಿಜ್ಜಳಂ ಕೇಳ್ದು ದೃಷ್ಟಮಿಲ್ಲದೆ ನನಗೆ ಬರಿಯ
[ಮಾತೂ
ತಕ್ಕುದೇ? ಯೆನೆ, ದೃಷ್ಟಮಂ ತೋರ್ಪುದೀಶಿವಗ
ಣಕ್ಕನರಿದರಿದು? ನೋಡುತ್ತಾಗ ಬೇಗನಸು
ನಕ್ಕು ತನ್ನುದರವನುಗುರ್ಗೊನೆಗಳಿಂ ಬಗೆದಳೇನೆಂಬೆನಚ್ಚರಿ
[ಯಾ ?

1. ಅಗುವದು. (ಆಗುಗು.) ಎಂಬ ರೂಪದಿಂದಾಯಿತು. ವ್ಯಾ. ಸೂ. 2. ಶಿರುಗು =ಶಿರುತ್ತದೆ. ವ್ಯಾ. ಸೂ.

784. ಮೇಲುಗುರ್ಗೊನೆ ಸೋಂಕಲುದರದೊಳು ಹೊಳಹೊಳವ

The tears open her womb and the child is born.

ಬಾಲಾರ್ಕಕೋಟಿಪ್ರಕಾಶದಿಂ ಮೆರೆವ ಭಸಿ
ತಾಲೇಪನದ, ಥಳಥಳಿಪ ನಗೆಮೊಗದ, ಕರ್ಣಕುಂಡಲಯುಗಂಗಳಂ
[ದಾ

ಆಲೋಲವಾದ ಕಿರುಜಡೆಗಳಿಂ ಸುರಕುಸುಮ
ಮಾಲಿಕಾಮಧ್ಯದೊಳು ಶಿವಲಿಂಗಧರನಾಗಿ
ಬಾಲಕಂ ನೋಳ್ಪ ಸಭೆಯಂ ವಿಸ್ಮಯಾರ್ಣವದೊಳದ್ದಿದನದೇಂ [ಪೊಗಳ್ವೆನೊ ?

785. ದೇವದುಂದುಭಿ ಮೊಳಗಿದವು; ಸುರರ್ನಲಿದು ಕುಸು
Astonishment of all present. ಮಾವಳಿಯ ವೃಷ್ಟಿಯಂ ಕರೆದರಾಸ್ಥಾನಿಕರ
ನಾವರಿಸಿದುದು ಬಕ್ತಿರಸಜಲಧಿ; ಬಸವನಾನಂದದಿಂ ಮೈಮರೆದ [ನೊ;
ಕಾವುದೆನ್ನಪರಾಧ ಶತವನೆಂದಾಬಿಜ್ಜ
ಳಾವನೀಶಂ ಮಹಾಭಯಭರಿತಭಕ್ತಿಯಿಂ
ಕೇವಲಜ್ಞಾನಯುತನಾಗಿ ಧರೆಯೊಳ್ಮೈಯ್ಯನಿಕ್ಕಿಬಳಿಕಿಂತೆಂದನೊ;

786. ಚಿದ್ರೂಪ[1] ! ನಿಂನಿರವನರಿಯದಾಂ ಪಳಿದೆ[2]ನಿಂ
The king prays to Shiva, to forgive him his five trespasses. ದಾದ್ರೋಹವೊಂದು, ಶಿವಶರಣೆಯಂ ಜರೆದ ಭ
ಕ್ತದ್ರೋಹವೆರಡು; ಶಿವವಚನವಮಲ್ಲೆಂದ ದೈವದ್ರೋಹದಿಂದೆ [ಮೂರೂ,
ಉದ್ರೇಕದಿಂದೀಕೆಯುದರವಂ ಬಗಿಸಿದ ಸ
ತಿದ್ರೋಹನಾಲ್ಕಿನಿತನಾನರಿಯದರಿಯದಾ
ತ್ಮದ್ರೋಹದಿಂ ಪಂಚಮದ್ರೋಹಿಯಂ ರಕ್ಷಿಸೆನುತವಂ ಪೊಗಳ್ದ [ನಂದೂ.

1. ಅರುವು ಸ್ವರೂಪವುಳ್ಳವನು=ಚನ್ನಬಸವ. 2. ಹಳಿದವನಿಂದ ಆದ ದ್ರೋಹ.

787. ಬಂದು ಕಡೆಯೊಳು ಬಿಜ್ಜಳಂ ಪೊಗಳಲಿತ್ತ ಮ
All praise. ತ್ತೊಂದು ಕಡೆಯೊಳ್ಬಸವದಂಡೇಶ್ವರಂ ನುತಿಸ
ಲೊಂದು ದಿಕ್ಕಿನೊಳಸಂಖ್ಯಾತಗಣವೈದೆ ಜಯಜಯವೆಂದು ನು [ತಿಸುತಿರಲೂ

ಹಿಂದೆ ಮುಂದೆಡಬಲದೊಳೊಡೆಯರುಂ ಭಕ್ತರುಂ
ನಿಂದು ಕೊಂಡಾಡುತಿರೆ, ನೀಲಾಂಬೆಸಹಿತ ಸತೀ
ವೃಂದಮೊಡಗೂಡಿ ನಡೆಯಲ್ಕೆ, ಮೊದಲೊಳ್ಪವಾಡಂ ವಿಭವದಿಂ
[ಮೆರೆದುದು.

788. ಕಡಿದೊಣಗಿದಖಿಳವೃಕ್ಷಂಗಳ್ಕೊನರ್ತವೆ
ಲ್ಲೆಡೆಯೊಳುಂ, ಬರಡುಗಳ್ಕೊಡವಾಲ್ಗಳಂ ಕರೆಯ
ತೊಡಗಿದವು ; ಕಗ್ಗಲ್ಗಳೊಸರಿತಾಕೊಯ್ದು ಫಲತತಿ ಮುಗುಳ್ ಫ
[ಲವಾದವು ;
ಸಡಗರದೊಳಂ ಶಿವಾಲಯದ ಕಲ್ಬೊಂಬೆಗ
ಳ್ನಡೆದು ನರ್ತಿಸುತಿರ್ದವಾಕ್ಷಣಂ ಜೈನರೆದೆ
ಯೊಡೆವುತಿರ್ದುದು, ಷಟ್ಸ್ಥಲ[1]ಬ್ರಹ್ಮ ಭೂತಳದೊಳವತರಿಸಲೇ
[ನೆಂಬೆನೂ.

Wonders and signs at the birth of Channabasava.

1. ಚನ್ನಬಸವ ತಾನು ಷಟಸ್ಥಲ ಆಚರಿಸಿ ಬೋಧಿಸಿದನು.

789. ಕಳವಳಿಸಿದಂ ಕಾಲನಡುಗಿದಂ ಪ್ರಾಗೋಲ
ನಳವಳಿದುದಜ್ಞಾನವಿಳಿದುದಂ ಮದಮಾನ
ಮೊಳಗೊಳಗೆಕಂದಿದವಳ್ಮಾಯೆ ; ಪೋದುದಸೂಯೆ ; ಷಡ್ವರ್ಗಮೋ
[ನಾಯಿತೋ ;
ಸಲೆ ಕೆಟ್ಟುದಪಮೃತ್ಯು ; ಚಲಿಸಿದುದು ಭಯ ಬಿತ್ತು ;
ನೆಲೆಗುಂ[1]ದಿದಳ್ಮಾರಿ ; ತೊಲಗಿತಘಚಯಭೂರಿ ;
ಲಲಿತಮುಕ್ತಿಸ್ವರೂಪಂ ಸತ್ಕಲಾಪನವತರಿಸಿದಾಕ್ಷಣಮಿಳೆಯೊ
[ಳೂ.

1. ಅಸ್ಥಿರವಾಯಿತು. 2. ಚನ್ನಬಸವನನ್ನು ವರ್ಣಿಸುತ್ತಾನೆ. ಅವನು ಮುಕ್ತಿ ಸ್ವರೂಪ, ವೈರಿಗಳ ಸಂಗಡ ಬಳ್ಳಿ ತರ್ಕ ಮಾಡುವನು.

SARVAGNA.

ಸರ್ವಜ್ಞಾ (ತ್ರಿಪದಿ.)

ಪೀಠಿಕೆ.

ಧಾರವಾಡದ ಜಿಲ್ಲೆಯ ಮಾಸೂರು ಎಂಬ ಗ್ರಾಮದಲ್ಲಿ ಮುಂಚೆ ಆರಾಧ್ಯ ಬ್ರಾಹ್ಮಣರಾದ ಬಸವರಸ ಮಲ್ಲಮ್ಮ ಎಂಬುವ ಗಂಡಹೆಂಡರು ಇದ್ದರು. ಮಕ್ಕಳಿಲ್ಲದ ದುಃಖ ಕಳೆಯಲಿಕ್ಕೆ, ಈ ಮಾಸೂರ ಬಸವರಸನು ಕಾಶಿಗೆ ಹೋಗಿ ಗಂಡು ಕೂಸನ್ನು ಈಶನನ್ನು ಬೇಡಿ ಪ್ರಸಾದ ಪಡೆದು ನುಂಗಿದನು. ತಿರಿಗಿ ಬರುವಾಗ್ಯೆ, ದಾರಿಯಲ್ಲಿ ಮಳೆ ಮೋಡ ಹತ್ತಿದದರಿಂದ, ಅವನು ಅಂಬಲೂರೊಳಗೆ ಬಂದು ಕುಂಬಾರ ಸಾಲೆಯಲ್ಲಿ ಇಳಕೊಂಡನು. ಅಲ್ಲಿ ಇದ್ದ ಮಾಳೆ ಎಂಬ ಒಬ್ಬ ವಿಧವೆಗೆ ಬಸವರಸ ಮೋಹಿಸಿ ಆಕೆಯು ಸಹವಾಸ ಮಾಡಿದದರಿಂದ, ಆಕೆ ಗರ್ಭವತಿಯಾಗಿ ಒಬ್ಬ ಮಗನನ್ನು ಹಡೆದಳು. ಅವನು ಬೆಳೆದು ಬಹಳ ಬುದ್ಧಿವಂತನಾಗಿ ಲೋಕಹಿತಾರ್ಥವಾದ ನೀತಿ ಮಾತುಗಳನ್ನು ತ್ರಿಪದಿರೂಪವಾಗಿ ರಚಿಸಿದನು. ತನ್ನ ಹೆಸರು ಸರ್ವಜ್ಞ ಅಂತ ಹೇಳಿಕೊಂಡು ತಾನು ಮಾಡಿದಂಥಾವು ಅಂಬುವದಕ್ಕೆ ಸರ್ವಜ್ಞ ಸಾಕ್ಷಿಯನ್ನ ಈ ತ್ರಿಪದಿಗಳ ಒಂದೊಂದಕ್ಕ ಕೊಟ್ಟಿರುತ್ತಾನೆ. ಅವನ ಕೃತಿ ಹಳೆಗನ್ನಡ ಮಾತಾಗಿರುವದರಿಂದ ಅದು ರಚಿತವಾಗಿ ಕೆಲವು ನೂರು ವರುಷವಾಗಿದ್ದೀತು ಎಂಬಂತೆ ತೋರುತ್ತದೆ ಅವನು ಲಿಂಗದೀಕ್ಷೆ ಮಾಡಿಸಿಕೊಂಡು ಲಿಂಗವಂತರೊಳಗೆ ಕೂಡಿದ ಹಾಗೆ ಕಾಣುತ್ತದೆ

POLITICS AND CONDUCT BECOMING KINGS AND THEIR COURTIERS.

1. ರಾಜನೀತಿಪದ್ಧತಿ.

790. ನಚ್ಚಿರ್ದಂತರಸಿನ ಇಚ್ಛೆಯಂತಿರುವವನು
ಮಚ್ಚೊತ್ತು[1] ತಪ್ಪಿ ನಡೆವರೆ, ಹೊತ್ತೇರಿ
ಬಿಚ್ಚುಕಾದಂತೆ ಸರ್ವಜ್ಞ.

The king's favour, if abused, is as a burning sun.

1. ಅಪಮರಿಯಾದೆಯು ದೋಷ ತನ್ನ ಮೇಲೆ ಹೊತ್ತು=ಮರಿಯಾದೆಯನ್ನ ಕಾಯದೆ ದೋಷಕ್ಕೆ ಒಳಗಾಗಿ.

791. ಚಿತ್ತವೃತ್ತಿಯನರಿದು ಹತ್ತೆ ನಿಡಿದೋಲೈಸು !
ಚಿತ್ತವ ಪಡೆದು ಮದವಾಗೆ, ಮೊಲ ನಾಯಿ
ಹತ್ತಿದಂತಕ್ಕು, ಸರ್ವಜ್ಞ.

The king to a proud favourite is as a dog catching a hare.

792 ಬಲ್ಲವರು ಹಾಂಸೆಯು ಕಲ್ಲು ತಾ ಮೆಟ್ಟುವರೆ ?
ಬಲ್ಲಿದರೊಡನೇ ಚಣಿಸಿ ಮಾತಾಡಿವ
ರಲ್ಲಿಯೆ ಕೇಡು, ಸರ್ವಜ್ಞ.

Treading on slippery stones, quarrelling with the mighty.

793. ಅರಸನೋಲಗದೊಳಗೆ ಸರಸವಾಡಲಿ ಬೇಡ !
ಸರಸ[1]ನಿಂದ್ಯವಲಿರ ಬೇಡ ! ಪ್ರೋರ್ವರಾ
ಭರವಸ ಬೇಡ ! ಸರ್ವಜ್ಞ.

Do not make fun before kings.

1. ಸರಸವಾಡಿ ನಿಂದೆಗೆ ಹೊಳಗಾಗುವದು.

794. ಎದ್ದು ಮಾತಾಡದಿರು ! ಯೆದ್ದಿದ್ದು ನಿಲ್ಲದಿರು !
ಯಿದ್ದ ಮನುಜರ ಜರಿಯದಿರು ! ವಾಲಗದೊ
ಳಿದ್ದಾಗ, ನೀನು ! ಸರ್ವಜ್ಞ.

After rising, do not remain in a public levy.

795. ಅರಸೊಲಿದು ನಡಿಸಿದರೆ, ಶಿರಿಯಕ್ಕು, ದೆಶೆ ಯಕ್ಕು,
ಕರಿತುರಗಬಲವು ಪಿರಿದಕ್ಕು; ಮುನಿದರೆ,
ಕರನಾಶವಕ್ಕು ಸರ್ವಜ್ಞ.

Kings' favour a great fortune; his displeasure bad luck.

796. ಹರಿವ ನೀರೆಳೆ[1]ವಳ್ಳಿ, ತುರಗ, ಚೈತ್ರವು, ಭಂಡಿ,
ಅರಸಿನ ಮನವು, ಬೆಲೆವೆಂಣು, ಯಿವು ಯೇಳು
ತಿರುಹುವರಿಚ್ಛೆ, ಸರ್ವಜ್ಞ.

Seven things in the power of those who know how to turn them.

1. ಎಳೆ ಬಳ್ಳಿ.

797. ಜಾತಿ[1]ವೀರರು ಸಾವ ಭೀತಿಗಂಜುಳವರೇ ?
ಜಾತಸ್ಯ [2]ಮರಣಂಧ್ರುವವೆಂಬುದಿರಲು
ಯಾತಕಂಜುವದು ? ಸರ್ವಜ್ಞ.

Death common to all; why should heroes be afraid of it?

1. ಬಳ್ಳಿವೀರರು, ವೀರರಾಗಿರವದು ಅವರ ಜಾತಿಯೋ. 2. ಹುಟ್ಟಿದವನ ಮರಣ ನಿಶ್ಚಯುವೇ ಸರಿ (ಸಂಸ್ಕೃತ.)

798. ಅಡಿಯ ಮುಂದಿಡೆ, ಸ್ವರ್ಗವಡಿಯ ಹಿಂದಿಡೆ, ನರಕ ;
Remain in the king's sevice and die in it. ಅಡಿಗಶ್ವಮೇಧಫಲ ; ಸ್ವಾಮಿಕಾರ್ಯಕ್ಕೆ
ಮಡಿಯಲೇ ಬೇಕು. ಸರ್ವಜ್ಞ.

1. ಅರಸನ ಸೇವೆ ಮಾಡ ಆರಂಭಿಸಿದ ಮೇಲೆ, ಹಿಂಜರಿಯ ಬಾರದು. 2. ಅರಸನ ಸೇವೆಯಲ್ಲಿ ಒಂದು ಅಡಿ ಇಟ್ಟರೆ, ಅಶ್ವಮೇಧಫಲ ಬರುತ್ತದೆ.

799. ಅರಸನೋಲೈಸುವರೆ, ಕರಭೀತಿ ಬೈಕೈಯ !
Great caution necessary in the king's service. ಅರಸುಕರಿಯುರಗನೊಳೆಚ್ಚರಿಲ್ಲದೊಡೆ,
ತ್ವರಿತದಿಂ ತೊಲಗು ! ಸರ್ವಜ್ಞ.

800. ಅನವರತವಗಲದಲೆ, ಜನಪತಿಯನೋಲೈಸು !
Royal service very profitable. ಧನಮಕ್ಕು, ತೇಜ ಹಿರಿದಕ್ಕು, ವೈರಿಯು
ತನಗೆ ಸಖನಕ್ಕು. ಸರ್ವಜ್ಞ.

801. ಯಂತಪ್ಪ[1]ನಾದರೂ, ಮಂತ್ರಿಯ ಹಗೆ ಹೊಲ್ಲಾ ;
The enmity of a royal minister very ruinous. ಯಂತಕ್ಕೆ[2]ಮರಸು ಮುನಿದರೆ, ಯಾಮಂತ್ರಿ
ಅಂತಕನಕ್ಕು. ಸರ್ವಜ್ಞ

1. ಯಂಥವನಾದರೂ. 2. ಹ್ಯಾಗಾಗುವದು ? ಮುಂದೆ ಹೇಳುತ್ತಾನೆ.

802. ಮಂತ್ರಿಯಾ ಹಗೆ, ನೃಪನ ಕಾಂತಿಯಾ ಸಮಗೋಷ್ಟಿ,
The minister's enmity, familiarity with the queen your ruin. ಮಂತ್ರವಿಲ್ಲದ[1]ನೊಡನಾಟವಿವು ತನ್ನ
ಅಂತಕಾಲ[2]ಕ್ಕೆ. ಸರ್ವಜ್ಞ.

1. ಇಲ್ಲದವನ, 2. ಬರುತ್ತವೆ.

803. ಅರಗು ಕಲ್ಲೂ ಕೂಡಿ ನೆರೆ ಯಕ್ಕು ಗೆಲುವಂದ,
Shell-lac and stone, good and base courtiers. ಅರಮನೆಯು ಕಂಡ ಯಧಮರು ವುತ್ತಮರ
ನೆರೆಗೆಲುವತ್ತೈಯು ! ಸರ್ವಜ್ಞ.

ಅರಗು ಹೆಚ್ಚಿನದು ಆದರೂ ಕಲ್ಲು ಅದಕ್ಕೆ ತಾಗಿದರೆ ಅದು ಒಡೆಯುವದು ಹಾಗೆ ಅಧಮರಾದರೂ ಅರಮನೆಯ ಸಂಗತಿ ಬಲದಿಂದ ತಮಗಿಂತ ಬಳ್ಳೆಯವರನ್ನು ಗೆಲ್ಲುತ್ತಾರೆ. 1. ಗೆಲ್ಲುವ ರೀತಿಯಾಗುವದು.

804. ಪರನಾರಿಸೋದರನು ವರಶತ್ರುದಲ್ಲಣನು
Properties of a good king. ಖರಪಾಪಭಯ ಹೊರೆವ ಗುಣಿ ಯಪ ನೃಪನಿಗೆ
ಸ್ಥಿರವಿಹೆಳು ಲಕ್ಷ್ಮಿ ಸರ್ವಜ್ಞ.

1. ತಾಳುವ=ಕಾಯುವ. 2. ನಾನಾ ಸಾಭಾಗ್ಯವನ್ನು ದೇವಿಯನ್ನು ಮಾಡಿಕೊಂಡಿರುತ್ತಾರೆ.

805. ಹೊನ್ನು ಮುನ್ನಿತವಿಲ್ಲ, ಮನ್ನಣೆಯು ಪಿರಿದಿಲ್ಲ,
A hermitage better than the court of a king without honour. ಬಿನ್ನಪ ಕೇಳದರಸಿನೋಲಗಕ್ಕಿಂತ
ಸನ್ಯಾಸ ಲೇಸು ಸರ್ವಜ್ಞ.

1. ಮುಂಚೆ ಇಲ್ಲ.

806. ಬಂದವರನ್ನರಿಯನು; ನಿಂದವನ್ನುಡಿಸನು;
Away with kings, who do not know how to discern men. ಹಂದಿಯು ಗಜವ ಸರಿ ಯಂಬನೋಲಗವು
ಯೆಂದಿಗೂ ಬೇಡ ! ಸರ್ವಜ್ಞ.

1. ಷಷ್ಟಿ. ಹೀಗೆ ಅನ್ನುವ ಅರಸನ ಮುಂತ.

807. ನುಡಿಯಪಾಲಿಸಿ ನುಡಿಯೆ ನುಡಿಯುವದು ಜಗವೆಲ್ಲ;
Nobody will speak to a king who gives no answer. ನುಡಿದರೇ, ಕೆರಳಿ ಕಿಡಿ ಯಹ ನೃಪನ ತಾ
ನುಡಿಸುವರೆ ಇಲ್ಲ; ಸರ್ವಜ್ಞ.

1. ಮಾತಾಡಿಸಿದರೆ ಮಾತಾಡುತ್ತಾರೆ. 2. ಮಾತಾಡಿಸುವದಿಲ್ಲ. 3. ತಾವು.

808. ಅಪಮಾನದೂಟವೆಂದುಪವಾಸವೇ ಲೇಸು
ನೃಪನೈದೆ ಬಡಿವ ಪೊಳ್ಳೋಲಗಕ್ಕಿಂತ
ತಪವೆ ಲೇಸೆಂದ ಸರ್ವಜ್ಞ.

Better to live an ascetic, than at the court of an insolent king.

809. ನಾಡೆಂಬ ದೇಹಕ್ಕೆ ರೂಢಿಪತಿಯೇ ಪ್ರಾಣ;
ನಾಡಳಿಯೆ, ರೂಢಿಪತಿ ಕೆಡಗು, ಅರಸಳಿಯೆ,
ನಾಡೆಲ್ಲ ಕೆಡಗು; ಸರ್ವಜ್ಞ.

The king the life, the country the body.

810. ಬಡವನೊಳ್ಳೆಯಮಾತ ನುಡಿವರಲ್ಲೆಂಬುವರು ;
ಪೊಡವೀಶ ಜೊಲ್ಲೊಡನೆ[1] ತಾ ಕೂಗಿದರೆ,
ಕಡು ಮೆಚ್ಚುತಿಹರು ; ಸರ್ವಜ್ಞ.

All are pleased with what kings say.

1. ಜೊಲ್ಲು ಸೋರಿಕೊಳ್ಳುತ=ವು.

811. ಕುದರೆಯನ್ನೇರದೇ, ಕದನವನ ಜೈಸದೇ,
ಸುದತಿ ರೊಲುವೆ ಯರಿಯದಿಹಯರಸು ತಾ
ಶಿದಿಗಿಹೆಣದಂತೆ ಸರ್ವಜ್ಞ.

An unwarlike king a corpse on a bier.

ON BENEFICENCE AND GIVING ALMS.

2. ದಾ ನ ಪ ದ್ಧ ತಿ .

812. ಅಂನವನು ಯಿಕ್ಕುವದು ; ನಂನಿಯನು ನುಡಿಯುವದು,
ತಂನಂತೆ ಪರರ ಬಗೆದಡೆ, ಕೈಲಾಸ
ಬಿಂನಣವಕ್ಕು ; ಸರ್ವಜ್ಞ.

To him, who thinks of others as of himself, Heaven sure.

813. ಕೊಟ್ಟದ್ದು ತನಗೆ ಬೈಚಿಟ್ಟದ್ದು ; ಪರರಿಂಗೆ
ಕೊಟ್ಟದ್ದು ಕೆಟ್ಟಿತೆನ ಬೇಡದು ಮುಂದೆ
ಕಟ್ಟಿಹುದು ಬುತ್ತಿ; ಸರ್ವಜ್ಞ.

Alms given, food prepared for a journey.

814. ಹೆಂಡರು ಮಕ್ಕ[1]ಳಿಗೆಂದ್ದಂಡಿಸದಿರು ದೇಹವ !
ಕಂಡೆ[2] ವಸ್ತುವನುಕೊಡದುಣದೆ ಬೈಚಿಡಲು
ಕಂಡರಿಗಹದು ; ಸರ್ವಜ್ಞ.

if you do not give and enjoy your wealth, others will get it.

1. ಅವರಿಗಾಗಲೆಂದು ನೀನು ಕಷ್ಟಪಟ್ಟು ಘಳಿಸ ಬೇಡ. 2. ಶಿಕ್ಕದ

815. ಈವಂಗೆ ದೇವಂಗೆ ದಾವದಂತರವೈಯ್ಯ ?
ದೇವನು ಜಗದಿ ಕೊಡುವವನೆ, ಕೈಯಾರೆ
ಈವನೆ ದೈವ ; ಸರ್ವಜ್ಞ.

No difference between a giver and God.

1. ಕೊಡುವವಗೆ.

816. ಮರಣವೆಂಬುದು ಸತ್ಯ, ಹರನಾಣೆ ! ಹುಸಿಯಲ್ಲ;
ತರುಣಿಯರಿಗಿರಿಸೆ, ಪರರುಂಬರದರಿಂ
ವರದಾನವ ಗೈ ! ಸರ್ವಜ್ಞ.

Death certain: give alms!

817. ಆನೆಯನ್ನೇರುವರೆ, ದಾನವಂ ಮಾಡುವದು ;
ಭಾನುಮಂಡ[1]ಲವಡರುವರೆ ; ಹಸಿದರಿಗೆ
ನೀನೊಲಿದಿಕ್ಕು ! ಸರ್ವಜ್ಞ.

Will you be happy in this an! the other world? give to the hungry!

1. ಅದನ್ನು ತಟ್ಟಿ ಸ್ವರ್ಗಕ್ಕೆ ಹೊಗುತ್ತಾರೆ.

818. ಉತ್ತಮದ ದೇವಾಂಗವಸ್ತ್ರವನ್ನುವುಡುವರೆ,
ಮುತ್ತು ಮಾಣಿಕವನಿಡುವಡೆ, ಮಾಡು ನೀ
ನಿತ್ಯ[1]ದಾನವನು ! ಸರ್ವಜ್ಞ.

If you want good raiment, &c., give always!

1. ತಾವು ಉಂಡುವ ಎಲ್ಲಾ ಪದಾರ್ಥಗಳಲ್ಲಿ (ಅಕ್ಕಿ ಹಿಟ್ಟು ಮುಂತ.) ಒಂದು ಭಾಗ ತೆಗದಿಟ್ಟು ಒಂದು ತಿಂಗಳು ಆದಮೇಲೆ, ಅದನ್ನೂ ತನ್ನ ಯೋಗ್ಯತಾನುಸಾರವಾದ ದಕ್ಷಣೆಯನ್ನು ಕೊಡಬೇಕು.

819. ಶಿರಿ ಬಂದ ಕಾಲಕ್ಕೆ ಕರೆದು ದಾನವ ಮಾಡು !
ಪರಿಣಾಮವಕ್ಕು, ಪದವಕ್ಕು ಸ್ವರ್ಗ
ನೆರೆಮನೆ ಯಕ್ಕು ; ಸರ್ವಜ್ಞ.

Give when you have and heaven will be near.

820. ಭಿಕ್ಷವೆಂದವರಿಗೇ ಭಿಕ್ಷವನ್ನು *ನೀಡಲು,

Give to beggars! Else you yourself will become a beggar.

ಅಕ್ಷಯಪದವು ತನಗಕ್ಕು ಯಿಲ್ಲವೆನೆ,
ಭಿಕ್ಷವನೆ ಯಕ್ಕು ; ಸರ್ವಜ್ಞ.

821. ಆಗ ಬಾ ! ಈಗ ಬಾ ! ಹೋಗಿ ಬಾ ! ಯನ್ನದೇ,

Give without delay!

ಆಗಲೇ ಕರೆದು ಕೊಡುವನಾಧರ್ಮ ಗೊಂ
ನಾಗದೆ ಬಿಡದು; ಸರ್ವಜ್ಞ.

ILLIBERALITY.

1. ದಾನಹೀನ ಪದ್ಧತಿ.

822. ಉಳ್ಳಲ್ಲಿ ಮಣಲಿಲ್ಲ ; ಮಳ್ಳಲ್ಲಿ ಮಡಲಿಲ್ಲ;

The wealth of the illiberal will go to thieves, to the king.

ಮಳ್ಳಲ್ಲಿ ದಾನ ಗೊಡದವನ ಸಡವೆಯು
ಕಳ್ಳಗೆ ನೃಪಗೆ ; ಸರ್ವಜ್ಞ.

823. ಉಂಣಿಕೆಚ್ಚಲೊಳಿರ್ದು ಮುಂಣದದು ನೊರೆಹಾಲ ;

An illiberal man is worse off than a tick.

ಪುಣ್ಯವ ಮಾಡಿ ಮಣಲೊಲ್ಲದವನಿರವು
ಮುಂಣಿಗು ಕಷ್ಟ ಸರ್ವಜ್ಞ.

824. ಯಿಲ್ಲವೆಂದರೆ, ಯತ್ತ ಬಲ್ಲ ಠಾವಿಗೆ ಹೋಹ ;

A sinner, who will not say "no!" and will not give.

ಯಿಲ್ಲವೆನಲೊಲ್ಲ ಕೊಡಲೊಲ್ಲದ ಪಾಪಿ
ಕೊಲ್ಲದೆ ಕೊಂದ ; ಸರ್ವಜ್ಞ.

825. ಕಟ್ಟಿದಂತಾಯುಧವು ಯಟ್ಟಿ ಬಂದಿರಿಯುವದೆ ?

The word: "I gave," with slliberal men, a word that pursues and stabs.

ಕೊಟ್ಟೆಹೆನೆಂದು ಕೊಡಲೊಲ್ಲದನ ಮಾತು
ಅಟ್ಟಿ ಯಿರಿದಂತೆ ; ಸರ್ವಜ್ಞ.

826. ಹೊತ್ತಾರೆ ಬೈಗಿಂಗೆ ಮತ್ತೆ ಬಾರೆಂದೆನುತಾ
ಹೊತ್ತನ್ನೆ ಕೊಂದು ಹುಸಿಯುವನಿಗಿಂದಲು
ಸತ್ತಾತ ಲೇಸು; ಸರ್ವಜ್ಞ.

A dead man is to be preferred to a man who delays giving.

827. ಕೊಡುವರೇ, ಕೈಹಾಳೆ! ಯೆಡೆ ಯೇನು ದೂರವೇ ?
ಯಡಿಯಾಡಿಸಿ ತಾ ಕೊಡದ ಲೋಭಿಮಾತು
ಕೊಡಲಿಯ ಘಾಯ ; ಸರ್ವಜ್ಞ.

The refusal of a miser to give, is a wound made with an axe.

1. ಕೈ ಹಾಳಾಯಿತೇ=ಬಿದ್ದು ಹೋದ ಹಾಗಾಯಿತೇ. 2. ದ್ರವ್ಯ ಯಿಟ್ಟ ಜಾಗ ದೂರವೇ ? ತರಲು ಸಲ್ಲದೇ ?

828. ಆಡದೇ ಮಾಡುವನು ರೂಢಿಯೊಳಗುತ್ತಮನು ;
ಆಡಿ ಮಾಡುವನು ಮಧ್ಯಮನಧಮ ತಾ
ನಾಡಿ ಮಾಡದವ ; ಸರ್ವಜ್ಞ.

He, who gives without speaking of it and without being

829. ಬೇಡದೇ ಮುನ್ನೀವ ರೂಢಿಯೊಳಗುತ್ತಮನು ;
ಬೇಡಿದಡೀವ ಮಧ್ಯನು ; ಯಧಮ ತಾ
ಬೇಡಿದಡೀಯ ; ಸರ್ವಜ್ಞ.

asked for, is the best man.

830. ಇಚ್ಛೆ ಯರಿದಿತ್ತಂಥ ನುಚ್ಚೊಂದು ಮಾಣಿಕವು;
ಯಿಚ್ಛೆಯು ತೀರ್ದ ಬಳಿಕಿತ್ತ ಮಾಣಿಕವು
ನುಚ್ಚಿಗು ಕಷ್ಟ ; ಸರ್ವಜ್ಞ.

Broken rice in its time, a ruby; a ruby out of time less than rice.

831. ಧರ್ಮದಾ ಕರ್ಮದಾ ಮರ್ಮವನು ನೋಡುವರೆ,
ಧರ್ಮಿ ಯುಂದಳದಿ ಬರುತಿಹನದ ಹೊತ್ತು
ಕರ್ಮಿ ಬರುತಿರ್ಪ ; ಸರ್ವಜ್ಞ.

The pious in the palanquin, the sinner carrying it.

832. ಕೊಟ್ಟು ಬಹ ಕಾಲದಲಿ ಕೊಟ್ಟು ವುಣ್ಣಲರಿಯದೆ
Wealth not enjoyed and used, honey in the comb. ಹುಟ್ಟಿಯುವಳಗೆ ಜೇನಿಟ್ಟು ಪರರಿಂಗೆ
ಕೊಟ್ಟು ಹೋದಂತೆ ; ಸರ್ವಜ್ಞ.

833. ಮಾನವರ ದುರ್ಗುಣವ ನೇನೆಂದು ಬಣ್ಣಿಸುವೆ ?
Men will not give alms, but readily pay fines. ದಾನವ ಗೈ ! ಯನೆ ಕನಲುವರು ; ದಂಡವ
ಮೌನದಿ ಈವರು ; ಸರ್ವಜ್ಞ.

834. ಬೇವು[1] ಫಲವಾಗಲದು ಸೇವಿಸಲಿಕ್ಕ್ಯೋಗ್ಯವೇ ?
The fruit of the neem tree and the wealth of the stupid miser are both useless. ಗಾವಿಲನ ಧನ ಘನವಾಗಿ ಬೈಚಿಟ್ಟ
ಠಾವಿಲೀ ಹೊಕ್ಕು ; ಸರ್ವಜ್ಞ.

1. ಬೇವಿನ ಫಲ ಕೆಲಸಕ್ಕೆ ಬಾರದೆ ತಾನು ಉದರಿದ ಸ್ಥಲದಲ್ಲಿ ಬಿದ್ದಿರುವಂತೆ ಅವನು ದಾನ ಧರ್ಮ ಕೊಡದಿರುವದರಿಂದ, ಅದು ತಾನಿಟ್ಟ ಸ್ಥಲದಲ್ಲಿ ಅನರ್ಥ ಇರುತ್ತದೆ.

ON FATE.

4. ವಿಧಿವಾಸ ಪದ್ಧತಿ.

835. ಹರಿಯು ಹಂದ್ಯಾದಂದು ಹರನು ತಿರಿದುಂಡಂದು
When Shiva beheaded Brahma, who wrote then the decrees of fate? ಹರನಜನ ಶಿರವರಿದಂದು ಲಿಖಿತವನು
ಬರೆದವರಾರು ? ಸರ್ವಜ್ಞ.

836. ಮೂರಕ್ಕೆ ಆರಕ್ಕು ; ಆರು ಹನ್ನೆರಡಕ್ಕು ;
Three will become six, &c., when sin is going. ಹೇರುವ ಗೊಡ್ಡು ಹೈನಕ್ಕು ; ಪಾಪ ತಾ
ಹಾರು ಕಾಲಕ್ಕೆ ; ಸರ್ವಜ್ಞ.

837. ಕೇಡು ಬಹ ಕಾಲಕ್ಕೆ ಕೂಡುವವೆ ಬುದ್ಧಿಗಳು ?
When one is to be ruined, he will become stupid. ಕೋಡಗನು ಲಂಕೆ ಸುಡವಾಗ, ರಾವಣ
ನಾಡ ಕಾದಿರ್ದ[1] ? ಸರ್ವಜ್ಞ.

1. ಪ್ರಶ್ನೆ ಅಂತ ಭಾವಿಸ ಬೇಕು.

838. ಶೀತೆ ವೈದದು ಭಂಗ; ಶೀತು ಕಟ್ಟಿದ ಭಂಗ;
ಮಾತಿನ ಭಂಗ ರಾಮಂಗೆ; ರಾವಣಗೆ
ಯಾತರ ಭಂಗ? ಸರ್ವಜ್ಞ.

No defeat to those who are ruined.

839. ಯಲ್ಲ ತೀರ್ಥದೊಳಿರಲು, ಬಲ್ಲಿದರ ಮರೆ ಹೊಗಲು,
ಕಲ್ಲುಮಾಳಗೆಯೊಳಗಿರಲು, ವಿಧಿ ಬಂದು
ಕೊಲ್ಲುವದು, ಬಿಡದು; ಸರ್ವಜ್ಞ.

However pious and mighty one may be, no escape from fate.

ON CASTE.

5. ಕುಲ ಪದ್ಧತಿ.

840. ಜಾತಿಹೀನರ ಮನೆಯ ಜೋತಿ ತಾ ಹೀನವೇ?
ಜಾತಿ ವಿಜಾತಿ ಯನ ಬೇಡ! ದೇವ ಪರಿ
ದಾತನೇ ಜಾ[1]ತ ಸರ್ವಜ್ಞ.

Does a light in the house of low caste people burn less?

1. ಅವನೇ ಉತ್ತಮ ಕುಲದವನು.

841. ಹೊಲಿಯುಮಾದಿಗರುಂಡು ತೊಗಲಿಟ್ಟ ತೊಗಲೊಳು
ಕುಲಜರೆಂಬರಿಗೆ ಪುಣಲಾಯಿತು; ಹೊಲಿಯನ
ಕುಲವಾವುದೈಯು? ಸರ್ವಜ್ಞ.

The shoemaker of the highest caste.

1. ಖಂಡ ತಿಂದ ಮೇಲೆ, ತೊಗಲನ್ನು ಕೆಲಸಕ್ಕೆ [illegible] ತೆ[illegible]ತ್ತಾರೆ. ಅದು ಅವರಿಗೆ ಎಂಜಲನ್ನಿಸುತ್ತದೆ. ಜನಿವಾರ ಹಾಕಿ ಕೊಂಡವರು ಬಿಗ[illegible]ರೆ ಕೃಷ್ಣಾಜಿನ ವೆಂದು ಅದನ್ನು ತಂದು ಅದರ ಮೇಲೆ ಕೂತು ಉಣ್ಣುತ್ತಾರೆ. ಅವರ ಎಂಜಲ [illegible] ಸಿದ ಹಾಗಾಯಿತು.

842. ಧಾತು ಯೇಳನು ಕಲಿತು ಭೂತಪಂಚಕವಾಗಿ
ವ್ರೋತು ದೇಹವನು ಧರಿಸಿರ್ದ ಮನುಜಗೆ
ಜಾತಿ ಯತ್ತಣದು? ಸರ್ವಜ್ಞ.

The body of all men alike composed of the five elements;

843\. ನಡೆಯೊದೊಂದೇ ಭೂಮಿ ; ಕುಡಿಯೊದೊಂದೇ ನೀರು ;
ಸುಡುವಗ್ನಿ ವಂದೆ ಇರುತಿರೆ; ಕುಲಗೋತ್ರ
ನಡುವೆ ಯುತ್ತಣದು ? ಸರ್ವಜ್ಞ.

All walk on one ground, drink one water, are burnt with one fire;

844\. ಹಸಿವು ತೃಷೆ ನಿದ್ರೆಗಳು ವಿಷಯ ಮೈಥುನ ಬಯಕೆ
ಪಶು ಪಕ್ಷಿ ನರಗೆ ಸಮವಿರಲು, ಕುಲವೆಂಬ
ಘಸಣೆ ಯುತ್ತಣದು ? ಸರ್ವಜ್ಞ.

All feel hunger thirst; &c., whence caste?

845\. ಎಲು ತೊಗಲು ನರಮಾಂಸ ಬಲಿದ ಚರ್ಮದ ಹೊದಿಕೆ
ಹೊಲೆರಕ್ತ ಶುಕ್ಲ ದಿಂದಾದ ದೇಹಕೆ
ಕುಲವಾವುದೈಯ್ಯ ? ಸರ್ವಜ್ಞ.

What caste has this unclean body?

846\. ಅವಯವಗಳೆಲ್ಲರಿಗೆ ಸವನಾಗಿ ಇರುತಿರಲು,
ಭವಿಭಕ್ತ ಶ್ವಪಚಶೂದ್ರರು ಯೆಂತೆಂಬ
ಕವನ ಯುತ್ತಣದು ? ಸರ್ವಜ್ಞ.

As all have the same body, whence these distinctions of high and low caste?

847\. ಹೊಲಸುಮಾಂಸದ ಹುತ್ತ, ಯುಲುವಿನ ಹಂದರವು,
ಹೊಲಹದ ತನುವಿನೊಳಗಿರ್ದುಮದರಲ್ಲಿ
ಕುಲವನರಸುವರು ; ಸರ್ವಜ್ಞ.

This body a shed made of bones, a hillock of flesh: why caste?

848\. ಎಲುವಿನೀಕಾಯಕ್ಕೆ ಸಲೆ ಚರ್ಮವನು ಹೊದಿಸಿ
ಮಲ ಮೂತ್ರ ಕ್ರಿಮಿಗಳೊಳಗಿರ್ದ ದೇಹಕೆ
ಕುಲವಾವುದೈಯ್ಯ ? ಸರ್ವಜ್ಞ.

What caste has this body filled with worms and filth.

849\. ಬಂದು ಆವಿಗೆಯ ಭಾಂಡೊಂದೊಂದು ಭೋಗವನು
ಅಂದದಿ ಸಂದು[1]ವಡದು ಹಂಚಾದಂತೆ,
ಬಿಂದುವಿನ ದೇಹ ; ಸರ್ವಜ್ಞ.

This body an earthen pot, which, used for a while, is broken into potsherds.

1\. ಭೋಗವನ್ನು ಪಡೆದು (ಪಟ್ಟು).

850. ಕುಲಗೆಟ್ಟು ಪರಚಿಂತೆಯೊಳಗಿರ್ಪರಂತಲ್ಲ ;
ಕುಲಗೆಟ್ಟು ಶಿವನ ಮರೆಹೊಕ್ಕ ಋಷಿಗಳು
ಕುಲವಾವದೈಯ್ಯ ! ಸರ್ವಜ್ಞ.

The greatest saints have not observed caste rules.

851. ಯಾತರ ಹೂವಾದರು, ನಾತರೆ, ಅದು ಸಾಲದೆ ?
ಜಾತಿವಿಜಾತಿ ಯನ ಬೇಡ ! ದೇವನೊಲಿ
ದಾತನೇ ಜಾತ ; ಸರ್ವಜ್ಞ.

Any flower, if it has a good smell only, is acceptable.

ON PRIESTS.

6. ಗುರು ಪದ್ಧತಿ.

852. ಬಳ್ಳಿ ಗುರುಡರು[1] ಕೂಡಿ ಹಳ್ಳವನ್ನು[2] ಬಿದ್ದಂತೆ,
ವಳ್ಳಿಯಗುರುವಿನುಪದೇಶವಿಲ್ಲದಿರೆ,
ಯಲ್ಲಿಯ ಮುಕ್ತಿ ? ಸರ್ವಜ್ಞ.

Blind men, though many, will fall : men without a priest.

1. ಒಬ್ಬರನ್ನೊಬ್ಬರು ಹಿಡಕೊಂಡು ಹೋಗುತ್ತಾರೆ. 2. ಹಳ್ಳದಲ್ಲಿ.

853. ಶ್ವಾನ ತೆಂಗಿನ ರುಚಿಯ ತಾನೇನೂ ಬಲ್ಲದು ?
ಹೀನಮನದವಗುಪದೇಶವಿತ್ತರ್ಗೆ
ಹಾನಿ ತಪ್ಪುವದೆ ? ಸರ್ವಜ್ಞ.

A dog cannot relish the cocoa-nut ; the bad cannot learn.

854. ಸುರತರುವು ಮರನಲ್ಲ; ಸುರಭಿ ಯೊಂದಾವಲ್ಲ ;
ಪರುಸೆ[1] ಪಾಷಾಣದೊಳಲ್ಲ ಗುರುರಾಯ
ನರರೊಳಗಲ್ಲ ; ಸರ್ವಜ್ಞ.

A true priest not from among men.

1. ಈ ಕಲ್ಲು ಲೋಹಕ್ಕೆ ಮುಟ್ಟಿಸಿದರೆ, ಅದು ಭಂಗಾರವಾಗುವದಂತೆ. ಮೋಕ್ಷದ ಹಾದಿ ತೋರಿಸುವ ಗುರು ಮನುಷ್ಯರೊಳಗಲ್ಲ ಹೌದು, ದೇವರು ತಾನೇ ಆ ಗುರು.

855. ಮಂಡೆ ಬೋಳಾದಡಂ, ದಂಡಕೋಲ್ಪಿಡಿದಡಂ,
ಹೆಂಡತಿಯ ಬಿಟ್ಟು ನಡೆದಡಂ, ಗುರುಮುಖ
ಕಂಡಲ್ಲದಿಲ್ಲ ; ಸರ್ವಜ್ಞ.

An ascetic life not sufficient, a priest is necessary.

1. ಸನ್ಯಾಸಿಯಾದವರೂ ಗುರುವಿನಿಂದಲ್ಲದೆ ಮೋಕ್ಷವಿಲ್ಲ.

856. ಊರಿಗೆ ದಾರಿಯನ್ನು ಯಾರು ತೋರಿದಡೇನು ?
ಸಾರಾಯದಾ ನಿಜವ ತೋರುವ ಗುರುವು
ಯಾರಾದಡೇನು ! ಸರ್ವಜ್ಞ.

If a man shows you only the road, whatever he may be, no matter: so with priests.

857. ಮೊಸರು ಕಡೆಯಲು, ಬೆಣ್ಣೆ ಒಸೆದು ತೋರುವ ತೆರದಿ,
ಹಸನುಳ್ಳ ಗುರೋಪದೇಶದಿಂ ಮುಕ್ತಿ
ವಶವಾಗದಿಹುದೆ ? ಸರ್ವಜ್ಞ.

By churning butter is produced; by the instruction of priests salvation.

858. ತಾಪದಲಿ ಸಂಸಾರಕೂಪದಲಿ ಬಿದ್ದವರ
ಕೂಪದಿಂ ಪಾರುಮಾಡುವ ಗುರುಕರುಣ
ಸೋಪಾನ, ಕಂಡ್ಯಾ ! ಸರ್ವಜ್ಞ.

The mercy of priests a flight of steps leading up from the pit of this life.

859. ಬೆಟ್ಟಕರ್ಪೂರವುರಿದು, ಬೊಟ್ಟಿಡಲು ಬೂದಿಲ್ಲ,
ನೆಟ್ಟನೆ ಗುರುವಿನುಪದೇಶದಿಂ ಕರ್ಮ
ಮುಟ್ಟವು ; ನೋಡ ! ಸರ್ವಜ್ಞ.

Sin, a mass of camphor: the instruction of priests, a fire to burn it.

860. ಗುರುರಾಯನುಪದೇಶ ದೊರಕೊಂಡಿತಾದಡೇ,
ಹರಿವುದು ಪಾಪವೆಂತೆನಲು, ವಜ್ರದಿಂ
ಗಿರಿಯು ಹೊಯಿದಂತೆ, ಸರ್ವಜ್ಞ.

Sin a mountain: the instruction of priests a diamond to cut it.

861. ಪೊಲಬನರಿಯದ ಗುರುವು, ತಿಳಿಯಲರಿಯದ ಶಿಷ್ಯ,
ನೆಲೆಯನಾರಯ್ವುದುಪದೇಶವಂಧಕನು
ಕೊಳನು ಹೊಕ್ಕಂತೆ ; ಸರ್ವಜ್ಞ.

An ignorant priest and a stupid disciple, a blind man going into a lake;

862. ಭಕ್ತಿಯಿಲ್ಲದ ಶಿಷ್ಯ, ಗೊತ್ತು ಗೆಟ್ಟುಪದೇಶ
ಬತ್ತಿದ ಕೆರೆಯು ಬೈಲಲ್ಲಿ ರಾಜಾನ್ನ
ಬಿತ್ತಿ ಬೆಳದಂತೆ; ಸರ್ವಜ್ಞ.

sowing rice in a field, which is dried up.

863. ಹಸಿಯು ಸಮಿಧೆಯು ತಂದು ಹೊಸದರುಂಟೇ ಕಿಚ್ಚು?
ವಿಷಯಗಳುಳ್ಳ ಮನುಜಂಗೆ ಗುರುಕರುಣ
ವಶವರ್ತಿಯಹುದೇ? ಸರ್ವಜ್ಞ.

No fire from green wood; no use from instruction to a sensual man.

ON GOD.

7. ದೈವ ಪದ್ಧತಿ.

864. ಆದೇವ ಈದೇವ ಮಾದೇವನೆನ ಬೇಡ!
ಆದೇವರ ದೇವ, ಭುವನಪ್ರಾಣಿಗಳ
ಗಾದಪನೆ ದೇವ; ಸರ್ವಜ್ಞ.

There is only one God, who preserves all creatures.

865. ಹತ್ತು ಭವವನು ಯೆತ್ತಿ ಯೆತ್ತು ಯುಮ್ಮಿಯು ಕಾದು
ಮತ್ತೆ ಪಾಂಡವರಿಗಾಳಾದ ಹರಿಯು ತಾ
ನೆತ್ತಣ ದೈವ! ಸರ್ವಜ್ಞ.

Vishnoo, no god.

866. ಹೆತ್ತಾತನರ್ಜುನನು; ಮುತ್ತೈಯ್ಯ ದೇವೇಂದ್ರ,
ಮತ್ತೆ ಮಾತುಳನು ಹರಿ ಯಿರೆ, ಯಭಿಮನ್ಯು
ಸತ್ತ[1]ನೇಕೈಯ್ಯ? ಸರ್ವಜ್ಞ.

Arjuna, Indra, Vishnu: destitute of divine power.

1. ಅವನಿಗೆ ಆಶ್ರಯ ಕೊಟ್ಟವರು ದೇವರಲ್ಲ.

867. ಹಾದರದ ಕಥೆಯನ್ನು, ಸೋದರರ ವಧೆಯನ್ನು
ಆದರಿಸಿ ಪುಣ್ಯಕಥೆ ಯೆಂದು ಕೇಳುವ
ಮಾದಿಗರ ನೋಡು! ಸರ್ವಜ್ಞ.

The Ramayana, a story of fornication; the Bharata, a story of murder.

868. ಒಬ್ಬನಲ್ಲದೆ ಜಗಕೆ ಇಬ್ಬರುಂಟೆ ? ಮತ್ತೆ
ವೊಬ್ಬ ಸರ್ವಜ್ಞಕರ್ತನು ಜಗಕೆಲ್ಲ
ವೊಬ್ಬನೆ ದೈವ; ಸರ್ವಜ್ಞ.

There is only one omniscient God.

869. ಹುಟ್ಟಿಸುವನಜನೆಂಬ ಕಷ್ಟದ ನುಡಿ ಬೇಡಾ !
ಹುಟ್ಟಿಪನ ಶಿರ ತಾನೆರಿಯೆ[1], ಮತ್ತೊಂದು
ಹುಟ್ಟಿಸನೇಕೆ ? ಸರ್ವಜ್ಞ.

Why did Brahma, the creator, not restore that head which he had lost?

1. ಅಹಂಕಾರ ತೋರಿಸಿದರಿಂದ, ಶಿವನು ಕಡಿದನು.

870. ಬೊಮ್ಮ ನಿರ್ಮಿಪನೆಂಬ ದುರ್ಮತಿಯೆ, ನೀ ಕೇಳು !
ಬೊಮ್ಮನ ಸತಿಗೆ ಮೂಗಿಲ್ಲ[1]ವಾ ಮೂಗ
ನಿರ್ಮಿಸನೇಕೆ ? ಸರ್ವಜ್ಞ.

Why did he not give his wife a nose?

1. ದಕ್ಷ ಒಂದಾನೊಂದು ದಿವಸ ಬ್ರಹ್ಮನ ಸಭಾಂತರಕ್ಕೆ ಬಂದನು. ಅಲ್ಲಿ ಈಶ್ವರ ಕುಳಿತಿದ್ದನು. ದಕ್ಷನನ್ನು ಕಂಡು ಎಲ್ಲರು ಪ್ರತ್ಯುತ್ಥಾನ ಮಾಡಿದರು. ಈಶ್ವರ ಮಾಡಲಿಲ್ಲ. ಅದಕ್ಕೆ ದಕ್ಷ ಸಿಟ್ಟು ಮಾಡಿಕೊಂಡು ಹೋದನು. ಇತ್ತ ಕೆಲವು ದಿವಸದ ಮೇಲೆ ಯಜ್ಞ ಮಾಡಿದಾಗ, ತನ್ನ ಎಲ್ಲ ಹೆಣ್ಣು ಮಕ್ಕಳನ್ನು ಕರಿಸಿ ಕೊಂಡನು. ಈಶ್ವರನ ಸತಿಯಾದ ತನ್ನ ಹಿರೇಮಗಳನ್ನು ಕರಿಸಲಿಲ್ಲ. ಆಕೆ ತಾನಾಗಿ ಹೋದಳು. ಆಗ್ಯೆ ದಕ್ಷ ಆಕೆಯನ್ನು ಸತ್ಕರಿಸದೆ ಆಕೆಯ ಗಂಡನಾದ ಈಶ್ವರನನ್ನು ನಿಂದಿಸಿದನು. ಅದನ್ನು ಕೇಳಲಾರದೆ ಆಕೆ ಆ ಯಜ್ಞದ ಕೊಂಡದಲ್ಲಿ ಬಿದ್ದು ಸತ್ತಳು. ಈ ಸುದ್ದಿ ಈಶ್ವರ ಕೇಳಿ ಸಿಟ್ಟು ಬಂದು ತನ್ನ ತಲೆಯ ಜಡೆ ಕಿತ್ತಿ ನೆಲಕ್ಕೆ ಅಪ್ಪಳಿಸಿದನು. ಅದರಿಂದ ವೀರಭದ್ರನು ಹುಟ್ಟಿದನು. ಅವನಿಗೆ ದಕ್ಷನನ್ನು ಸಂಹಾರ ಮಾಡ ಬೇಕೆಂಬ ಅಪ್ಪಣೆ ಆಯಿತು. ಆದಕಾರಣ ವೀರಭದ್ರನು ಅಲ್ಲಿಗೆ ಹೋಗಿ ಅಲ್ಲಿ ನೆರದಂಥ ದೇವತೆಗಳನ್ನ ಅವಮಾನ ಭಂಗ ಮಾಡಿದನು. ಆಗ ಸರಸ್ವತಿಯ ಮೂಗು ಹೋಯಿತು.

871. ಗುಡಿಯ ಬೋದಿಗೆ[1] ಕಲ್ಲು; ನಡುರಂಗ ತಾ ಕಲ್ಲು;
ಕಡೆಮೂಲೆ ಶರಗು ತಾ ಕಲ್ಲು; ವರವನು
ಕೊಡುವಾತ ಬೇರೆ; ಸರ್ವಜ್ಞ.

The giver of blessings not a stone.

1. ಕಲ್ಲು ದೇವರಾದರೆ ಬೋದಿಗೆ ಮುಂತಾದದ್ದು ಸಹ ದೇವರಾಗಿರಬೇಕು.

872. ಅಕ್ಕರವು ಲೆಕ್ಕಕ್ಕೆ ; ತರ್ಕ ತಾ ವಾದಕ್ಕೆ ;
ಮಿಕ್ಕ ವೋದುಗಳು ತಿರುಪೆಗೆ[1] ; ಮೋಕ್ಷಕೆರ
ಡಕ್ಕರ[2]ವೆ ಸಾಕು ; ಸರ್ವಜ್ಞ.

Only two letters required for salvation, namely (God.)

1. ತಿರುಪೆ ದೊರಕಿಸಿ ಕೊಳ್ಳುವದಕ್ಕೆ ಓದುವ ಚಮತ್ಕಾರವಿರಬೇಕು. 2. ದೇವಕಿ.

873. ಭ್ರಷ್ಟದೈವಕೆ ಬಾಯಬಿಟ್ಟಲ್ಲಿ ಫಲವಿಲ್ಲ,
ಸೃಷ್ಟಿಗೀಶ್ವರನ ಭಜಿಸಿದರೆ, ಮುಂದಕ್ಕೆ
ಇಷ್ಟಾರ್ಥವೀವ ; ಸರ್ವಜ್ಞ.

The worship of false gods is vain.

874. ಕರ್ಮದಿಂದಲೆ ಹರನು ಚರ್ಮ[1]ವ ತಾನುಟ್ಟನು ;
ಹೊಮ್ಮ[2]ರಾಳನಜನಾದನು ; ಗೋವಿಂದ
ಯಮ್ಮೆ[3]ಯ ಕಾದಂ ; ಸರ್ವಜ್ಞ.

Brahma, Vishnoo, Shiva, not free from sin.

1. ಗಜಾಸುರನನ್ನು ಕೊಲ್ಲುವಾಗ ಅವನು ತನ್ನ ಗುರುತು ನೀನು ಧರಿಸು ಎಂದು ಈಶ್ವರನನ್ನು ಬೇಡಿಕೊಂಡದ್ದಕ್ಕೆ ಇವನು ಒಪ್ಪಿಕೊಂಡು ಅವನ ದೇಹದ ಚರ್ಮ ಸುಲಿದು ಉಟ್ಟು ಕೊಂಡನು. 2. ಈಶ್ವರನ ಲಿಂಗದ ಮೇಲ್ಭಾಗವ ನೋಡಲಿಕ್ಕೆ ಹೋಗುವಾಗ್ಯೆ. 3. ನೋಡು ಭಾಗವತ.

875. ನರಸಿಂಹನವತಾರ ಹಿರಿದಾದದ್ಭುತವು ; ಪು
ಗರಿಂದ[1] ಶರಭ ಕೊಲ್ಲುವಾಗ, ಹರಿಯೂರ
ನರಿ[2]ಯುಂಡವಾದ ; ಸರ್ವಜ್ಞ.

Narasinha killed by Sharabha.

1. ತನ್ನ ಕೆಲಸವಾದ ಮೇಲೆ ನರಸಿಂಹ್ಮನು ತನ್ನ ಉಗ್ರವೇಷ ಬಿಡದೆ ಲೋಕಕ್ಕೆ ಉಪದ್ರಮಾಡಲಾಗಿ, ಶಿವನು ಈ ಅವತಾರ ತಕ್ಕೊಂಡು ಅವನನ್ನು ಶೀಳಿ ಹಾಕಿದನು. 2. ಬಲವಿಲ್ಲದ್ದು.

876. ಹಿರಿಯಬೊಮ್ಮನು ಕೆಂಚ ; ಕಿರಿಯಹರಿ ತಾ ಕರಿಗ ;
ಪುರಹರನು ಶುದ್ಧಧವಳಕನಿವರುಗಳು
ಸರಿಯೆ ದೈವಕ್ಕೆ ? ಸರ್ವಜ್ಞ.

Brahma of a red, Vishnu of a dark, Shiva of a white colour.

ON THE WORSHIP OF GOD AND ON PIETY.

8. ಭಕ್ತಿ ಪದ್ಧತಿ.

877. ಕಾಜು ವೀಳೆಯಕಿಂಬು ; ಲೋಚನಾಂಕಿತಕಿಂಬು,
ಕೂಚುಗಳಿಂಬು ಮಾಳಿಗೆಗೆ ಭಕ್ತಗೈ
ದಾಚಾರವಿಂಬು ; ಸರ್ವಜ್ಞ.

As these three: so is pious practice to a worshipper.

1. ಐದೆ=ಚಂದಾಗಿ.

878. ಎಣಿಸುತಿರ್ಪುದು ಬಾಯಿ ; ಪೋಣರುತಿರ್ಪುದು ಬೆರಳು ;
ಕ್ಷೋಣಿಕೊಂಮೆ ಮೊಂದನೆಣಿಸುವ ಜಪಕೊಂದು
ಕುಣಿಕೆಯುಂಟೆಂದ ; ಸರ್ವಜ್ಞ.

He knows only by the noose in the rosary, that his prayer is finished.

879. ಕಡುಭಕ್ತನಾಗಲೀ, ಜಡಧಾರಿಯಾಗಲೀ,
ನಡೆವ ವೃತ್ತಿಯಲಿ ನಡೆಯದೊಡಾಭಕ್ತಿ
ಹುಡಿಸಂಘವೆಂಬ ; ಸರ್ವಜ್ಞ.

A piety only in words and ceremonies is like dust.

880. ಎಣಿಸುತಿರ್ಪುದು ಬೆರಳು ; ಗುಣಿಸುತಿರ್ಪುದು ಜಿಂಹ್ವೆ
ಮನ ಹೋಗಿ ಪಲವೆಣಿಸಿದರೆ, ಹಾಳೂರ
ಶುನಕನಂತಕ್ಕು ; ಸರ್ವಜ್ಞ.

A man, who, while praying, thinks of other things—a dog.

881. ವಸಿದೆಂಟು ದಿಕ್ಕಿನಲಿ ಮಿಸುನಿಗಿಣಿಲುಗಿಂಡಿ
ಹುಸಿದು ಮಾಡುವವನ ಪೂಜೆ ಭೋಗಾರ
ಪಸರವಿಟ್ಟಂತೆ ; ಸರ್ವಜ್ಞ.

Vain worship like putting up a shop.

882. ಬಟ್ಟೆಯಾ ಕಲ್ಲಿಂಗೆ ಮೊಟ್ಟೆ ಪತ್ರಿಯನಿಟ್ಟು
ಕಟ್ಟಿದ ಲಿಂಗವಡಿಯಾಗಿ ಶರಣೆಂಬ
ಭ್ರಷ್ಟರಾ ನೋಡು ! ಸರ್ವಜ್ಞ.

Perverse practices of the Lingaites.

883. ಆದಿದೈವವನು ತಾ ಭೇದಿಸಲರಿಯದಲೇ,

See these low men, making offerings to a stone.

ಪಾದಿಯಾ ಕಲ್ಲಿಗೆಡೆ ಮಾಡಿ ನಮಿಸುವ
ಮಾದಿಗರ ನೋಡು ! ಸರ್ವಜ್ಞ.

884. ಬತ್ತಿ ಹೆತ್ತುಪ್ಪವನು ಹತ್ತಿಸಿದ ಫಲವೇನು ?

Lighting a wick before an idol, a waste of cotton and oil.

ನಿತ್ಯ ನೆಲೆಗೊಳದೆ ಭಜಿಸುತಿರಲಾಪ್ಪೂಜೆ
ಹತ್ತಿಗೇಡೆಂದ ; ಸರ್ವಜ್ಞ.

885. ಕಟ್ಟಲೂ ಬಿಡಲು ಶಿವಬಟ್ಟಲವ, ಕಳ್ಳನೇ[1] ?

Is he a thief, that Lingaites tie their god to their necks ?

ಕಟ್ಟಲೂ ಬೇಡ ! ಬಿಡ ಬೇಡ ! ಕಣ್ಮನವ
ಕಟ್ಟಿದರೆ, ಸಾಕು ! ಸರ್ವಜ್ಞ.

1. ಲಿಂಗ ಕಟ್ಟಿಕೊಂಡರೆ ಶಿವನನ್ನು ಕಳ್ಳನಂತೆ ಕಟ್ಟಿದ ಹಾಗಾಯಿತು.

886. ಇಂದುವಿನೊಳುರಿ ಯುಂಟೆ ? ಸಿಂಧುವಿನೊಳರಬುಂಟೆ ?

Is fire in the moon? is doubt in the pious?

ಸಂದ[1] ವೀರನೊಳು ಭಯವುಂಟೆ ? ಭಕ್ತಗೆ
ಸಂದೇಹವುಂಟೆ ? ಸರ್ವಜ್ಞ.

1. ಹೊಂದಾದ.

887. ಕೊಲುವ ಕೈಯೊಳು ಪೂಜೆ ; ಮೊಲುವ ಬಾಯೊಳು ಮಂತ್ರ ;

A man, whose thoughts, words, and actions are contrary to his worship.

ಸಲೆ ಪಾಪವಿರದ ಮನದೊಳು ಪೂಜಿಪನು
ಹೊಲೆಯುಗು ಕಷ್ಟ ; ಸರ್ವಜ್ಞ.

888. ಅಳುತೇಳುತ, ಬೆರಳು ಜಾಳ, ಮಿಡಕುವ ಬಾಯಿ,

The prayer of one, who lives in fornication, a desolated house.

ಮೋಳದಳ ತೊಡಕ ಬಿಡದವನ ಜಪವದು
ಹಾಳುಮನೆಯಂತೆ ; ಸರ್ವಜ್ಞ.

889. ಸತಿಯರಾವಡದೇನು ? ಸುತರಾಗಿ ಫಲವೇನು ?
ಶತಕೋಟಿ ಧನವ ಘಳಿಸೇನು ? ಭಕ್ತಿಯು!
ಸ್ಥಿತಿ ಯಿಲ್ಲದನಕ ಸರ್ವಜ್ಞ.

Wife, children, wealth—all in vain without piety.

ON KNOWLEDGE.

9. ಜ್ಞಾನ ಪದ್ಧತಿ.

890. ಜ್ಞಾನವುಳ್ಳವನೊಡಲು ಭಾನುವಿನ ತೆರನಿಹುದು ;
ಜ್ಞಾನಿಲ್ಲದವನ ಕಾಯವು ಹಾಳೂರ
ಸ್ಥಾನದಿಂ ಕಡೆ ; ಸರ್ವಜ್ಞ.

The body of the wise like the sun; that of the unwise, a waste place.

891. ಬಲ್ಲೆನೆಂಬುವ ಮಾತು ಯಲ್ಲವು ಹುಸಿ ; ಕಾಣ
ಬಲ್ಲರೆ, ಬಲ್ಲೆನೆನ ಬೇಡ ! ಸುಮ್ಮನಿರ
ಬಲ್ಲವನೆ ಬಲ್ಲ ! ಸರ್ವಜ್ಞ.

He who knows to be silent, is a wise man.

892. ಚಂದನವ ಕರಗಿಸಲು ಚೆಂದು ಪರಿಮಳವಕ್ಕು ;
ಸಂದರಿವನರಿದ ಸತ್ಪುರುಷರು ತಾವು
ನೊಂದು ಸೈರಿಪರು ; ಸರ್ವಜ್ಞ.

Sandal-wood burnt, gives perfume; the wise suffering.

893. ಸಾವಿಂಗೆ ಸಂಮತಿಗೆ ಯಾವುದಂತರವೈಯ ;
ಸಾವು ತಾ ಸಮತಿಯೊಳಗಲ್ಲ ಕೋಪವ
ತಾವುದೆ ಸಂಮತಿ ; ಸರ್ವಜ್ಞ.

Compliance keeps down anger.

894. ಕೋಪವೆಂಬದು ಕೇಳಿ[1] ! ಪಾಪದ ನೆಲೆಗಟ್ಟು ;
ಕೂಪದೊಳು ನೇಣು ಹರಿದಂತೆ ನರಕಕೆ
ಕೋಪಿ ತಾನಿಳಿವ ಸರ್ವಜ್ಞ.

An angry man, as if, the rope breaking, falling into a well, (goes to hell.)

1. ವಿಧಿ.

895\. ಕಪ್ಪೆಗಳು ಮೀನುಗಳು ಯಿಪ್ಪುದದು ತೀರ್ಥವೇ ?
ತುಪ್ಪ ವಾಗರಕೆ ಸಲುವದು ; ಸತ್ಪುರುಷ
ನಿಪ್ಪುದೆ ತೀರ್ಥ ; ಸರ್ವಜ್ಞ.

Frogs and fishes are in the water: is that holy? The place of a good man is holy.

896\. ಕಂಣಿನಿಂದಲೆ ಪುಣ್ಯ ; ಕಂಣಿನಿಂದಲೆ ಪಾಪ;
ಕಂಣಿನಿಂದ ಯಿಹಪರವಕ್ಕು ; ಲೋಕಕ್ಕೆ
ಕಂಣು ಕಾರಣ ; ಸರ್ವಜ್ಞ.

The eye, the cause of sin and virtue, and of the whole world.

897\. ಸತ್ತು ಹೋದರೆ, ನಿನಗದೆತ್ತಣದು ಮೋಕ್ಷವೈ ;
ಸತ್ತು ಹೋಗದತಿ ಜೀವಿರಲು, ಮೋಕ್ಷದ
ಗೊತ್ತು ತಿಳಿ ! ಯೆಂದ ; ಸರ್ವಜ್ಞ.

Seek salvation before you die!

898\. ಜೊಳ್ಳು ಮನುಜರು ತಾವು ಸುಳ್ಳುಸಂಸಾರದೊಳು
ಮುಳ್ಗಿದು ಮಾಯೆ ಯೆಂಬವಳ ಬಲೆಯೊಳು
ಹೊಳ್ಳಾಡುತಿಹರು ; ಸರ್ವಜ್ಞ.

Men caught in the net of illusion.

899\. ಯೆಂಣೆ ಬೆಂಣೆಯ ರಿಣವು, ಅನ್ನವಸ್ತ್ರದ ರಿಣವು,
ಹೊಂನ್ಗಂಣಿನ ರಿಣವು ತೀರಿದಾಕ್ಷಣದಿ
ಮಂಣುಪಾಲೆಂದ ; ಸರ್ವಜ್ಞ.

Men, after enjoying what is due to them, return to the dust.

900\. ಸತ್ಯಸದ್ಗುಣ ತೀರ್ಥ, ಪುತ್ತಮರ ನಡೆತೀರ್ಥ ;
ಸತ್ಯರ ಸಂಗವದು ತೀರ್ಥ ; ಹರಿವ ನೀ
ರೆತ್ತಣ ತೀರ್ಥ ! ಸರ್ವಜ್ಞ.

Truth, conversation with the good, is holy water, not flowing water.

901\. ಆನೆ ನೀರಾಟದಲಿ ಮೀನ ಕಂಡಂಜುವದೆ ?
ಹೀನಮಾನವರ ಬಿರಿನುಡಿಗೆ ಸತ್ಯದ
ಜ್ಞಾನಿ ಯಂಜುವನೆ ? ಸರ್ವಜ್ಞ.

An elephant not afraid of the fishes, nor the wise of the bad.

902. ಆನೆ ತಾ ತುಡಗಾಗೆ, ಜ್ಞಾನಿ ಮೂರ್ಖನುಮಾಗೆ ;
ಭೂನಾಥ ಜಾರನಾದರೆ, ಮಾಣಿಪುದು
ಮಾನವರಿಗಳವೆ ! ಸರ್ವಜ್ಞ.

If the wise become foolish who can stop them?

903. ಆನೆ ಬೀದಿಯಲಿ ಬರೆ, ಶ್ವಾನ ತಾ ಬೊಗಳುವದು ;
ಶ್ವಾನನಂತಾನೆ ಬೊಗಳೆ, ಯಾನೆಯ ಯಭಿ
ಮಾನವೇ ಹಾನಿ ; ಸರ್ವಜ್ಞ.

If the elephant barks like the dog, his reputation is gone.

904. ಆನಿಗಂಜಿಕೆ ಯಾರೆ ? ಶ್ವಾನಗೆ ಸೊಬಗ್ಯಾಕೆ ?
ದಾನಿಗೆ ದೀನತನವ್ಯಾಕೆ ? ಜ್ಞಾನಿಗೆ
ಹೀನತನ ಯಾಕೆ ? ಸರ್ವಜ್ಞ.

Why fear to the elephant? why deficiency to the wise?

905. ಕಾವಿ ಕಂಚಡಿ ಯಾಕೆ ? ಭಾಸುರದ ಜಡಿ ಯಾಕೆ ?
ಕೇಶ ಕಿತ್ತಿಕೊಳ್ಳಲ್ಯಾಕೆ ? ತ್ರೈಮಲದ[1]
ಆಶೆ ಬಿಡದನಕ ? ಸರ್ವಜ್ಞ.

All austerities in vain as long as there are worldly desires.

1. ವಿತ್ತೇಷಣ, ದಾರೇಷಣ, ಪುತ್ರೇಷಣ.

906. ಸಂನ್ಯಾಸ ತನಗೆಂಬುವನ್ಯಾಯನುಡಿ ಯಾಕೆ ?
ವುಂಸತದೇವರಿರವರಿಯು[1] ; ತನ್ನೊಡಲ
ದನ್ಯಾಯದಿರವು ; ಸರ್ವಜ್ಞ.

Why an ascetic life, whilst one's own body is the very seat of sin.

1. ಸಂನ್ಯಾಸಿ ಕರ್ತ್ವವಾಗಿದೆ.

907. ಅಟ್ಟಡಿಗೆಯ ರುಚಿಯನು ಹುಟ್ಟು, ತಾ ಬಲ್ಲದೇ?
ಶ್ರೇಷ್ಟರು ಯೆಂದು ಯೆನ ಬೇಡ ! ಯರುಹಿನಾ
ಬಟ್ಟೆ ಬೇರೆಂದ ; ಸರ್ವಜ್ಞ.

The ladle cannot relish the meal: so ignorant men.

908. ಕುರಿ ಕಬ್ಬಿನೊಳು ಹೊಕ್ಕುವರಿವದೇ ತನಿರಸ ?
ಸೊರಗಣ ಸೋಗೆ ಯುಗಿವಂತೆ, ಜ್ಞಾನದಾ
ಕುರುಹು ಜೇರೆಂದ; ಸರ್ವಜ್ಞ.

The sheep, which eats only the sugarcane flag: the ignorant.

909. ತನ್ನ ನೋಡಲಿ ! ಯೆಂದು ಕನ್ನಡಿಯು ಕರೆವುದೇ ?
ತನ್ನಲ್ಲಿ ಗ್ಞಾನವುದಿಸಿದ ಮಹಾತ್ಮನು
ಕನ್ನಡಿಯಂತೆ; ಸರ್ವಜ್ಞ.

The wise, a mirror, which does not call "see me."

910. ತನ್ನ ತಾನರಿವವನ ಮುನ್ನ ಹೊದ್ದದು ಮಾಯೆ ;
ವುನ್ನತವಪ್ಪ ಗಜವೇರಿ ಬಪ್ಪವನು
ಕುನ್ನಿಗಂಜುವನೆ ? ಸರ್ವಜ್ಞ.

A wise man, like one riding on an elephant, is not afraid.

911. ಸತ್ಯವನ್ನರಿವರೇ ಸತ್ತ ಹಾಗಿರಬೇಕು ;
ಸತ್ಯವನರಿದುವುಸುರಿದರೆ, ಸತ್ತವರಿ
ಗತ್ತ ಹಾಗಕ್ಕು ; ಸರ್ವಜ್ಞ.

The wise are like the dead: if they talk it is as if weeping over the dead.

912. ಸತ್ತು ಹುಟ್ಟುವರೆಂಬ ಮಿಥ್ಯದಾ ನುಡಿ ಯಾಕೆ ?
ಬಿತ್ತಿದರೆ ಬೀಜ ಬೆಳವಂತೆ ಗಿಡ ತಾ
ಸತ್ತು ಹುಟ್ಟುವದೆ ? ಸರ್ವಜ್ಞ.

Does a tree, being decayed, spring up again? The dead not born again.

913. ಮುತ್ತು ನೀರಲಿ ಹುಟ್ಟಿ ಮತ್ತೆ ನೀರಪ್ಪುದೇ ?
ಸತ್ಯವನರಿದ ಗ್ಞಾನಿ ಸಂಸಾರವನು
ಮತ್ತೆ ಹೊದ್ದುವನೆ ? ಸರ್ವಜ್ಞ.

A pearl, though originating in the water, does not become water again; so the wise.

914. ಯುಂಜಲು ಹೊಲೆಯಿಲ್ಲ ! ಸಂಜೆಗತ್ತಲೆ ಯಿಲ್ಲ ;
ಅಂಜಿಕೆಂಬ ಭಯವಿಲ್ಲ ಜ್ಞಾನವೆಂಬ
ಅಂಜನವಿರಲು, ಸರ್ವಜ್ಞ.

By the magic of knowledge, fear, &c, disappears.

915. ಬಲ್ಲೆನೆಂಬುವರು ಯಲ್ಲವರು ಹಿರಿಯರೇ ?
ಸೊಲ್ಲಿಸಿ ಪೇಳುವವನರಿದೊಡೆ, ಕಿರಿಯು ತಾ
ಯಲ್ಲರಿಗೆ ಹಿರಿಯು ; ಸರ್ವಜ್ಞ.

Those who know to speak with discretion, elders.

916. ಜಾತಿ ಜಾತಿಗೆ ವೈರ ; ನೀತಿ ಮೂರ್ಖಗೆ ವೈರ ;
ಪಾತಕ ವೈರ ಸುಜನರಿಗರಿದವನಿಗೆ
ಯಾತರ[1] ವೈರ ? ಸರ್ವಜ್ಞ.

The wise have no enemy.

1. ಎಲ್ಲಾ ಗೆದ್ದಿರುತ್ತಾನೆ.

917. ಅರ್ತಿಗೆ ಬೆಲೆಯಿಲ್ಲಾ ; ಚಿತ್ತಕ್ಕೆ ಹೊಲೆಯಿಲ್ಲ ;
ಬತ್ತಲಿರ್ದವಗೆ ಭಯವಿಲ್ಲ ; ಜ್ಞಾನಿಗೆ
ಕತ್ತಲೆ ಯಿಲ್ಲವು ; ಸರ್ವಜ್ಞ.

No darkness to the wise.

918. ಬಂಧನ ಮಾಡಿವರೂ, ಸಂದ ಜ್ಞಾನಿಯೆ ಲೇಸು !
ಹೊಂದಿ ಸಾಸಿರವ ಕೊಡುತಿರಲು, ಕರ್ಮಿಯು
ದಂದುಗವೆ ಬೇಡ ! ಸರ್ವಜ್ಞ.

Better associate with the wise, though they put you in fetters, than with sinners though they give you presents.

919. ವ್ಯಾಪಾರವಳಿದಲ್ಲದಾಪರವು ಕಾಣೆಸದು,
ಪಾಪಕರ್ಮಗಳಳಿಳದು ನಿಂದವಗೆ
ಕೋಪವೆಲ್ಲಿಹದು ! ಸರ್ವಜ್ಞ.

No heaven without giving up intercourse with this world.

920. ಸತ್ಯವೆಂಬುದು ತಾನು ಹಿತ್ತಲಗಿಡ, ನೋಡಾ !
ಮತ್ತೆಲ್ಲಿ ನೋಡಿ ಯರಸದೆ ತಾನಿರ್ದ
ಹತ್ತಿಲೇ ನೋಡ ! ಸರ್ವಜ್ಞ.

Truth, a tree in the backyard: not far from you.

921. ಯಿಲ್ಲಿಲ್ಲ ವೆಂಬುದನು ಯಿಲ್ಲಿಯೇ ಅರಸಿವಡೆ ;
ಯಿಲ್ಲದೇ ಯಿಲ್ಲವೆಂದುವರಿದಡೆ, ಜಗ
ವೆಲ್ಲದೊ[1]ಳಗಿಕ್ಕು ; ಸರ್ವಜ್ಞ.

What people deny to be, is everywhere in the world : truth, &c.

1. ಜ್ಞಾನ, ದೇವರು, ಆತನು ಕೊಡುವ ಮೋಕ್ಷ.

922. ದೊರದದನು ವುಂಡುಂಡು ದೊರಕಿದನು ವುಟ್ಟುಟ್ಟು
ದೊರಕಿದಲಿ ಶಯನ ಪಡೆವವ ಲೋಕಕ್ಕೆ
ನಿರುತನಾಗಿಕ್ಕು ; ಸರ್ವಜ್ಞ.

A true man, who is content with what he gets.

923. ವಲ್ಲೆನೆಂಬುವ ಮಾತು ಬಲ್ಲಿತಾಗಿಯೆ ಇರಲು,
ತಲ್ಲಣ ನಿಲ್ಲೆ, ದೇವಿತ್ತ ಪಡಿ ತಾನಿ
ದ್ದಲ್ಲಿಗೇ ಬಕ್ಕು ; ಸರ್ವಜ್ಞ.

What God has allowed him, will come of itself to a man without desires.

924. ಮಂಡೆ ಬೋಳಾದವರ ಕಂಡಿನ್ನು ನಂಬದಿರು !
ಖಂಡಿತವಪ್ಪ ಪರಜ್ಞಾನವಿಷಯವನು
ಕಂಡು ನಂಬುವದು ! ಸರ್ವಜ್ಞ.

Do not trust bald heads (ascetics.)

925. ಮಾತಿನಾಜ್ಞಾನವೇ ತೂತಾದ ಮಡಿಕೆಯೇ ;
ಪಾತಕನ ಹೆಸರೇ ಮೂರು ಲೋಕದೊ
ಳ್ಯಾತಕ್ಕು ಬೇಡ ! ಸರ್ವಜ್ಞ.

Knowledge consisting only in words, an earthen vessel with holes.

926. ತೆಂಗಿಗೂ ದೇವಗೂ ಹಂಗ ಮಾಡಲಿ ಬೇಕು ;
ತೆಂಗಿನ ಮೊ[1]ದಲಿಗೆ ನೀರೆರೆಯೆ, ಕಡಿಯಲಿ
ಹಿಂಗದೀವಂತೆ ; ಸರ್ವಜ್ಞ.

God like a cocoa-nut tree : give them and they will give you.

1. ಬುಡ ಅಥವ ಬೇರಿಗೆ.

927. ಪೊಡಲ ಹೋಗಾಡಿದರು, ನುಡಿ ನೀಗಾಡಿದರು,
Heaven to be obtained only by a good life.
ನಡೆಯೊಳು ಯೆಚ್ಚರನು ಬಿಡದಿರಲು, ಪರವಶ !
ದೃಢಮನವಿಡಿದು ; ಸರ್ವಜ್ಞ.

1. ಪರಲೋಕ ವಶವಾಗುವದು. 2. ಅನ್ವಯ ; ಧೃಡ—ಬಿಡದಿರಲು.

928. ನೀರ ಬೊಬ್ಬುಳ ನೆಚ್ಚಿ ಸಾರಿ ಕೆಡದಿರು ! ಮರುಳೆ !
Do not put confidence in a bubble of water
ಸಾರಗುಣಿ ಯಾಗು ! ಸರ್ವರೊಳು ನಿಜ ತಿಳಿ !
ಕಾರಣಿಕನಾಗು ! ಸರ್ವಜ್ಞ.

ON SOCIETY.

10. ಸಭಾಸಭೆ ಪದ್ಧತಿ.

929. ಆರಾರ ನಂಬುವಡೆ, ಆರೈದು ನಂಬುವದು !
Be cautious in trusting people !
ನಾರಾಯಣಗೆ ಬಲಿ ಕೆಟ್ಟ ಮಿಕ್ಕವರ
ನಾರನಂಬುವದು ? ಸರ್ವಜ್ಞ.

1. ಅವನನ್ನು ನಂಬಿ. ನೋಡು ಭಾಗವತ.

930. ಎಲ್ಲರಾಸೆಯು ಬಿಟ್ಟಡಿಲ್ಲಿಯೇ ಕೈಲಾಸ !
Even here, where no desires, there is heaven; where desires, there is hell.
ಯೆಲ್ಲವ ಬಯಿಸಿ ಭ್ರಮಿಸಿದೊಡೆ, ನರಕ ತಾ
ನಿಲ್ಲಿಯೇ, ನೋಡ ! ಸರ್ವಜ್ಞ.

931. ಸತ್ಯರೂ ಪುಸಿದೊಡೇ, ಪೊತ್ತಿಹರಿವಡೆ ಶರಧಿ,
If the ocean overflows its bounds, the good sin : ruin certain.
ವೃತ್ತಮುರು ತಪ್ಪಿ ನಡೆವರೆ, ಲೋಕವಿಂ
ನೆತ್ತ ಶೇರುವದು ! ಸರ್ವಜ್ಞ.

932. ಅರಿಯುದವರೊಡನಾಡಿ ಸರಿರಾಜ್ಯವಾಳುವದು,

Prison with the wise, better than empire with the ignorant.

ಅರಿಕೆಯುಳ್ಳವರೊಡನಾಡಿ ಯಾವಾಗ
ಸೆರೆ ಯಿಹು[1]ದೆ ಲೇಸು ! ಸರ್ವಜ್ಞ.

1. ಅದರಕ್ಕಿಂತ ಇನ್ನು ಬುದ್ಧಿವಂತರ ಸಂಗತಿ ಮಾಡಿ ಸೆರೆಯಲ್ಲಿರುವದು ಲೇಸು.

933. ತ್ರಿ[1]ಕರಣಶುದ್ಧರೊಳೂ ಪ್ರಕೃ[2]ತಿವಿರಹಿತರೊಳೂ

Friendship with the pious, good.

ಮುಕುತಿಗೆಳಸುವ ಜನರೊಳಗೆ ಯಾವಾಗ
ಸಖಿತನವೆ ಲೇಸು ! ಸರ್ವಜ್ಞ.

1. ಮನೋವಾಕ್ಕಾಯಗಳು. 2. ಲೋಕ, ಭವ.

934. ಮೇರುವಿಂಗೆಣೆ ಇಲ್ಲ ; ಧಾರುಣಿಗೆ ಪಡಿ ಇಲ್ಲ ;

Nothing like the earth ; nothing like union with wise elders.

ಕಾರಣಿಕರಪ್ಪ ಹಿರಿಯರ ಸಂಸರ್ಗ
ವಾರಿಂದಲಧಿಕ ? ಸರ್ವಜ್ಞ.

935. ತೆರೆದ ಕೆಂ[1]ಡವ ಮೆಟ್ಟಿ ಮರಗುವ ತೆರನಂತೇ

Treading on burning coals associating with the ignorant.

ಅರಿಯದರ ಕೂಟ ಬರೆಕೂಟ ತನ್ನನೆ
ಇರಿದು ಕೊಂಡಂತೆ ಸರ್ವಜ್ಞ.

1. ತರೆಗಿಡದ ಕೆಂಡಕ್ಕೆ ಬಹಳ ಕಿಚ್ಚು ಅದೆ.

936. ಕುದಿಯುದಿಪ ಕೂಳಿಂಗೆ ಹಮುಳವಂಬುಲಿ ಲೇಸು !

Strife with the wise preferable to love with the heartless.

ಹೃದಯಶೂನ್ಯರುಗಳೊಲವಿಂದೆ ಬಲ್ಲರ
ಕದನವೇ ಲೇಸು ! ಸರ್ವಜ್ಞ.

937. ಬರೆ ಕಂಡು ಕರೆಯು[1]ದನ ಬರೆ ಕುಳ್ಳಿರೆನ್ನದನ

Have no intercourse with the uncivil !

ಸರಸಸಜ್ಜನಿಕೆ ಇಲ್ಲದನ ಸಖ್ಯವ
ಬೆರಸಲೇ ಬೇಡ ಸರ್ವಜ್ಞ.

1. ಕರೆಯುದವನ—ಮು. ವ್ಯಾ. ಸೂ. ೨೪.

938. ಬಳ್ಳಿದರ[1] ವೊಡನಿರ್ದ ಕಳ್ಳ ವಳ್ಳಿದನಕ್ಕು
ವೊಳ್ಳಿದ ಕಳ್ಳನೊಡನಾಡೆ, ಯವ ಶುದ್ಧ
ಕಳ್ಳನೇ ಯಕ್ಕು ; ಸರ್ವಜ್ಞ.

A thief in the company of the good will become a good man and *vice versa*.

1. ಬಳ್ಳಿದನು=ಬಳ್ಳೆಯವನು. ನೋಡು ಗುಣ ವಾಚಕ.

939. ಈಶತ್ವವಿಲ್ಲದೆ ನೀನೀಶನೆಂತಾದಿ? ನೀ
ನೀಶನೀಶನೆನ ಬೇಡ ! ಲೋಕಕೆ ಮಾ
ನೇಶನೇ ಈಶ ! ಸರ್ವಜ್ಞ.

An honoured man only a lord in this world.

1. ಮಾನಸ್ಥನೇ ಲೋಕದಲ್ಲಿ ಯಜಮಾನ; ಕಂಡವರಿಗೆ ಈಶ=ಯಜಮಾನವೆನ್ನಬೇಡ ಮಾನ ಧನಕ್ಕಿಂತ ಹೆಚ್ಚು.

940. ಅಕ್ಕಿಯಿಂದಲಿ ತೆಂಗು, ಮೊಕ್ಕೆಯಿಂ ಕಣಕ, ಜಾ
ನಕ್ಕಿ[1]ಯಿಂ ಲಂಕೆ ಕೆಡುವಂತೆ, ದುರ್ಬುದಿ
ಹೊಕ್ಕಲ್ಲಿ ಕೇಡು ; ಸರ್ವಜ್ಞ.

From bad company great mischief results.

1. ಸೀತೆ. ನೋಡು ರಾಮಾಯಣ.

941. ಸಿದ್ಧರಿಗೆ ಯೋಗವನು, ಬುದ್ಧಿವಂತಗೆ ಮತಿಯು,
ಬಿದ್ದಿದ್ದಡವಿಗೆ ಕಿಚ್ಚನು, ಮುಳ್ಳುಮೊನೆ
ತಿದ್ದಿದವರಾರು ? ಸರ್ವಜ್ಞ.

These cannot be improved.

942. ಮಾತು ಬಲ್ಲಂಣ ತಾ ಸೋತು ಹೋಹದು ಲೇಸು ;
ಮಾತಿಗೆ ಮಾತು ಮಥಿಸಲ್ಕೆ, ವಿಧಿ ಬಂದು
ಆತುಕೊಂಡಿಹುದು ; ಸರ್ವಜ್ಞ.

Better to lose, than to quarrel.

1. ತನ್ನ ಮಾತು ಹಿಡಿದು ವಾದಿಸ ಬಾರದು, ಇಲ್ಲವೆ ಜಗಳ ಹುಟ್ಟುವದು.

943. ಮಾನಹೀನರ ಸಂಗ, ಯೇನು ಕೊಟ್ಟರು, ಬೇಡ !
ಗ್ನಾನವುಳ್ಳವರ ಸಂಗ ತಾ ಸಕ್ಕರೆ
ಜೇನು ಸವಿದಂತೆ; ಸರ್ವಜ್ಞ.

Union with the wise, sweet as honey and sugar.

944. ಬಲ್ಲವರ ವಡನಾಟ ಬೆಲ್ಲವನು ಮೆದ್ದಂತೆ;
ಅಲ್ಲದಹುದೆಂಬ ಅಗ್ನಾನಿ ವಡನಾಟ
ಕಲ್ಲು ಹಾದಂತೆ; ಸರ್ವಜ್ಞ.

Good company—eating sugar: bad company—dashing against stones.

945. ಸಜ್ಜನರ ಸಂಗವೂ ಹೆಜ್ಜೇನು ಸವಿದಂತೆ,
ದುರ್ಜನರ ಕೂಡ ವಡನಾಟ ಬಚ್ಚಲದ
ರೊಜ್ಜಿನಂತಿಹುದು ; ಸರ್ವಜ್ಞ.

Good society is honey, bad society is mire.

946. ಸಜ್ಜನನು ಸತ್ತರೆ ನಿರ್ಜರರು ಮರಗುವರು
ದೌರ್ಜನ್ಯಕಾರಿ ಸತ್ತರೇದೇಹದಾ
ಖಜ್ಜಿ ಹರಿದಂತೆ ಸರ್ವಜ್ಞ.

The death of the good mournful; that of the wicked, getting rid of the itch.

947. ಬಳ್ಳೆನಿಲ್ಲದ ವೂರು ಕಳ್ಳನೊಡನಾಟವೂ
ಸುಳ್ಳನ ಮಾತೂ ಯಿವ್ರು ಮೂರು ಕೆಸರೊಳಗೆ
ಮುಳ್ಳು ತುಳದಂತೆ ಸರ್ವಜ್ಞ.

These three like treading in a mire filled with thorns.

948. ತಪ್ಪ ಸಾಧಿಸುವನಲ್ಲಿಪ್ಪವನೆ ಕಡು ಹೆಡ್ಡ
ಸರ್ಪನುರೆ ಹೆಡೆಯ ನೆರಳಲ್ಲಿ ಸೇರಿದಾ
ಕಪ್ಪೆಯಂತಕ್ಕು ಸರ್ವಜ್ಞ.

Union with people, who seek faults: a frog remaining in the shade of the hood of a serpent.

949. ವುದ್ದುರುಟು ಮಾತಾಡಿ ಯಿದ್ದದನು ಹೋಗಾಡಿ
ವೃದ್ಧಮರದ ತುದಿಯು ಯೇರಿ ಕೈ ತಪ್ಪಿ
ಬಿದು ಸತ್ತಂತೆ; ಸರ್ವಜ್ಞ.

The proud, like one ascending a high tree, the hand giving way, falls down.

950. ಕಂಬಳಿ ಹೊದ್ದರೆ ತನ್ನಿಂಬಿನೊಳಗಿರ ಬೇಕು
The proud will be in hell. ಕಂಬಳಿ[1] ಬೆನ್ನ ಬಿಡದಿರಲು ನರಕದಾ
ಕುಂಭದೊಳಿಹನು; ಸರ್ವಜ್ಞ.

1. ಬಿರಿದಿನ ಬಳಿ.—ಸೊಕ್ಕು ಬಿಡದೆ ಇದ್ದರೆ ಎಂಬರ್ಥ.

ON ASCETICS AND DEVOTION.

11. ಯೋಗಿ ಪದ್ಧತಿ.

951. ಆಯುಹಲಿ ನಿಜನಿಂದ ದಾಯುವಾನರಿಯದೇ
A useless devotee. ಆಯಾಸಜಪವ ಜಪಿಸುವ ಯೋಗಿಯಾ
ಬಾಯ ನೋಡೆಂದ! ಸರ್ವಜ್ಞ.

952. ವಡಲು ತಾನಳಿವಲ್ಲಿ, ಮಡದಿಯರು ಮಡಿವಲ್ಲಿ
He who does not lose his temper when abused, &c. a true devotee. ಯಡರು ನಿಂದೆಗಳು ಬರುವಲ್ಲಿ ಸಮತೆಯ
ಬಿಡದಿರೆ, ಯೋಗಿ! ಸರ್ವಜ್ಞ.

953. ಜಡೆಯ ಕಟ್ಟಲಿ ಬಹುದು; ಕಡವಸಬೆನುಡ ಬಹುದು;
Easy to become an ascetic; difficult to restrain the mind. ಬಿಡದೆ ದೇಗುಲದಲಿರ ಬಹುದು; ಕರಣವ
ತಡೆಯುವದರಿದು; ಸರ್ವಜ್ಞ.

954. ಜಡಿಯ ಕಟ್ಟದ ಮುನ್ನ ವಡನೆ ಬಂದದು ಮಾರಿ[1]
The gain of a devotee letting his hair grow: the trouble of lice. ಘುಡಿಘುಡಿಸಿ ಹೇನು ಹರಿಯಲು, ಬೋಳಯ್ಯ
ಕಡು ನಗುವನಯ್ಯ[2]! ಸರ್ವಜ್ಞ.

1. ಯಾವದು ವಂದು ಉಪದ್ರ. 2. ಯೋಗಿಯಾಗಿ ನಡೆಯಲಾರದ್ದಕ್ಕೆ ಅವನಿಗೆ ನಗುತ್ತಾರೆ.

955\. ಬೆಂಣೆ ಬೆಂಕಿಯು ಸೆಖೆಗೆ ತಂಣಗಿರ ಬಲ್ಲದೇ ?
ಹೆಣ್ಣಿದ್ದ ಮನೆಗೆ ಯಡತಾಕಿ ಶಿವಯೋಗಿ
ಮಣ್ಣುಮುಶಿಯಾವ ; ಸರ್ವಜ್ಞ.

Butter before the fire a devottee before women.

956\. ದಂಡಕೋಲಿನ ತುದಿಗೆ ಹಿಂಡಿ ಕೈಪವ ಕಟ್ಟಿ
ಮುಂಡಿಯರ ಕಂಡು ಭ್ರಮಿಸುವ ಯೋಗಿಗೆ
ಮುಂಡೆ ಬೋಳೇಕೆ ? ಸರ್ವಜ್ಞ.

Why a bald head, if one cannot live continently?

957\. ಆಲಘೆ[1]ಮ್ಮರನಂತೆ ಜೋಲುಜೆಡೆಗಳ ಬಿಟ್ಟು
ಸಾಲಿಗೆ ಕೈಪ ಶುದ್ಧಿಲ್ಲ ಮರಿನಾಯ
ಬಾಲದಂತಕ್ಕು ; ಸರ್ವಜ್ಞ.

The tuft of hair of an incontinent ascetic, the tail of a dog.

1. ಆಲದ ದೊಡ್ಡ ಗಿಡ.

958\. ಓದಿ ಬೂದಿಯು ಪೂಸಿ ತೇದು ಕಾವಿಯು ಹೊದಿದು
ಹೋದಾತ ಯೋಗಿ ಮನ ಬೇಡವಿಂದ್ರಿಯವ
ಕಾದಾತ ಯೋಗಿ ; ಸರ್ವಜ್ಞ.

A devotee one who restrains his senses.

1. ಶಾಸ್ತ್ರ ಓದಿಕೊಂಡು.

959\. ಕತ್ತಲೆಯ ಠಾವಿಂ[1]ಗೆ ವೃತ್ತಮಾದ ಜೋತಿ
ಮತ್ತು ಪ್ರಜ್ವಲಿ[2]ಸಾತಾವು ಬೆಳಗಾಗೆ,
ವೃತ್ತಮವೆ ಯಕ್ಕು ; ಸರ್ವಜ್ಞ.

A dark place illuminated, an ignorant man enlightened.

1. ಠಾವು ಬೆಳಗಾದರೆ ; ಸಾಕು=ತಿಳುವಳಿಕೆ ಬಬ್ಬನಲ್ಲಿ ಇದ್ದರೆ ಯೋಗಿ ಯಾಕಾಗಬೇಕು. 2. ಪ್ರಜ್ವಲಿಸೆ.

960\. ಮನವ ಘನದಲಿ ಕಟ್ಟಿ ಘನವ ಮನದಲಿ ಕಟ್ಟಿ
ಮನವನ್ನು ಪಾನಕೆಳಸದಾಯೋಗಿಗೆ
ವನವಾಸ ಯಾಕೆ ? ಸರ್ವಜ್ಞ.

Men, restraining their desires, need not go to the forest.

961. ಹಾಲುಂಬ ಹಂಸವನು ಸೋಲ ಬಲ್ಲನೆ ? ಯೋಗಿ ;
ಮೇಲಣ ಪಥವನರಿಯದೊಡೆ, ಗಿಣಿ ಪೋದಿ
ಕಾಳುಗೆಡಿವಂದ ; ಸರ್ವಜ್ಞ.

A devotee not knowing the way to heaven a parrot.

962. ಜಡೆಯುಳ್ಳ ಹಿರಿಯರಿಗೆ; ಹೆಡೆಯುಳ್ಳ ಸರ್ಪನಿಗೆ,
ನಡಗುತ್ತ ನಮಿಸಿ ನಯದಿಂ ಯಚ್ಚರನು
ಬಿಡದೆ ಕೊಡೆ, ಭಕ್ತ ; ಸರ್ವಜ್ಞ.

Beware of devotees and of serpents!

1. ಯೋಗಿ ಅವರು ಸರ್ಪಗಳ ಹಾಗೆ ; ಅಪಕ್ತ ಅವರಿಗೆ ಸರ್ಪದ ಹಾಗೆ ಅಂಜ ಬೇಕು.
2. ಕೊಡಲಾಗಿ,

963. ಕಪ್ಪರವಲುಂಬರು, ವೊಪ್ಪರದಿ ನಡೆವರು ;
ತಪ್ಪಿದರೆ, ಹಲ್ಲ ಕಳೆವರು, ಮಹಾತ್ಮರ
ವೊಪ್ಪವಂ ನೋಡು ! ಸರ್ವಜ್ಞ.

See these saints! they lose their teeth for their faults!

964. ತಪವ ಮಾಡುವೆನೆಂದು ಗುಹೆಯ ಹೊಕ್ಕಿರ ಬೇಡ !
ತಪವಲ್ಲಿ ಕುಪಿತ ಬಿಡದಿರಲು, ಯಾತಪಾ
ತಪತಾಪ ಕಂಡ್ಯ ! ಸರ್ವಜ್ಞ.

If you do not cease from anger, your penance a burning fire.

965. ತೋರುವ ಕುಲಗಿರಿಯನ್ನೇರಿ ತಪದೊಳಗಿರ್ದು
ಬೇರೊಂದು ಪದವೆಣಿಸಿದರೆ, ಬೆಳೆದ ಹೊಲ
ಸೂರೆ ಹೋಹಂತೆ ; ಸರ್ವಜ್ಞ.

Performing penances with the body and thinking of the world, a crop destroyed.

966. ಯತಿಗೇಕೆ ಕೋಪ ? ಮರ್ಮತಿಗೇಕೆ ಪರಜ್ಞಾನ ?
ಪತಿವ್ರತಿಗೇಕೆ ಪರನೋಟ ? ಯೋಗಿಗೆ
ಸ್ತುತಿನಿಂದೆ ಯಾಕೆ ? ಸರ್ವಜ್ಞ.

Why praise or blame to a devotee?

967. ಬಂದದನೆ ತಾ ಹಾಸಿ, ನಿಂದದನೆ ತಾ ಪೊತ್ತು,
ಬಂದದನೆ ಮೆಟ್ಟಿ ನಡೆವಾತನಿಗೆ ವಿಧಿ
ಮುಂದೆ ವೋಡುವದು ; ಸರ್ವಜ್ಞ.

From a man, who is content, even fate is flying.

1. ತನಗೆ ಶಿಕ್ಕಿದ್ದೆ ಸಾಕಾದರೆ ವಿಧಿಯಿಂದಲಾದರೂ ಮನಸು ನೊಂದು ಕೊಳ್ಳಲಿಕ್ಕಿಲ್ಲ,

FOOLS.

12. ಮೂರ್ಖನ ಪದ್ಧತಿ.

968. ಮೂರ್ಖಂಗೆ ಬುದ್ಧಿಯನು ನೂರ್ಕಾಲ ಪೇಳಿದರೆ,
ಘೋರ್ಕಲ್ಲ ಮೇಲೆ ಮಳೆ ಗರೆದರಾಕಲ್ಲು
ನೀರ್ಕುಡಿಯಲಹುದೆ ? ಸರ್ವಜ್ಞ.

Teaching a fool—pouring water on a stone.

969. ಅಳ ಹೊಲ್ಲ ಯಾಡಿನ ; ಕಳೆ ಹೊಲ್ಲ ಕೋಡಗನ ;
ಮಳುಕೋಪ ಪೋಪರೊಳೆ ಹೊಲ್ಲ ; ಮೂರ್ಖನ
ಗೆಳೆತನ ಹೊಲ್ಲ ! ಸರ್ವಜ್ಞ.

Friendship with a fool improper.

970. ಆರು ಬೆಟ್ಟವನೊಬ್ಬ ಹಾರ ಬಹುದೆಂದರೇ,
ಹಾರ ಬಹುದೆಂದು ಯನ ಬೇಕು ; ಮೂರ್ಖನಾ
ಹೋರ್ಯಾಟ ಸಲ್ಲ ; ಸರ್ವಜ್ಞ.

Do not quarrel with a fool : say "yes" to whatever he says, though it is nonsense!

971. ಒಲೆಗುಂಡನೊಬ್ಬನೇ ಮೇಲ ಬಹುದು ಯಂದರೇ,
ಮೆಲ ಬಹುದೆಂದು ಯನ ಬೇಕು ; ಮೂರ್ಖನನ
ಗೆಲ ಬಾರದೈಯು ! ಸರ್ವಜ್ಞ.

972. ಹೊಳೆಯ ನೀರೊಬ್ಬನೇ ಯಳೆಯ ಬಹುದೆಂದರೇ,
ಅಳೆಯ ಬಹುದೆಂದು ಯನ ಬೇಕು ಮೂರ್ಖನ
ಕಳೆಯಲಳವಲ್ಲ ; ಸರ್ವಜ್ಞ.

ON WOMEN.

13. ಸ್ತ್ರೀಯರ ಪದ್ಧತಿ.

973. ಯಾತಗಣಿ ಯದು ಚಿಗತು ಚಾತು ಫಲವಾದಂದು,
When a dry pole buds, then trust a woman, i. e. never! ಹೋತು ಹೆಬ್ಬುಲಿಯನಿರಿದಂದು ಹೆಂಣಿನ
ಮಾತ ನೆಚ್ಚೆಂದ! ಸರ್ವಜ್ಞ.

974. ಗಂಡಗಂಬಲಿ ಯಿಕ್ಕಿ ಗಂಡುಗರಣಿಯ ನುಂಗಿ
A junketing housewife. ಗಂಡ ಬಂದಾಗ, ನರಳುವ ಹೆಂಣಿಂಗೆ
ಗುಂಡಿಗಿಕ್ಕೆಂದ! ಸರ್ವಜ್ಞ.

975. ಅತ್ತಿಗಿಡಕ್ಕು ವ್ವಿಲ್ಲ ;ಕತ್ತೆಗೇ ಕೋಡಿಲ್ಲ ;
No truth, ಹತ್ತಿಯ ಹೊಲಕೆ ಗಿಳಿಯಿಲ್ಲ ; ಸೂಳಿಗೆ
ಸತ್ಯವಿಲ್ಲೆಂದ ; ಸರ್ವಜ್ಞ.

976. ಆಲಕ್ಕೆ ಹೂವಿಲ್ಲ ; ಸಾಲಕ್ಕೆ ಕೊನೆಯಿಲ್ಲ ;
and no fear of God in a harlot. ಜಾಲಿಯಗಿಡಕ್ಕೆ ಗಂಧಿಲ್ಲ ; ದೇವರು
ಸೂಳಿಗಿಲ್ಲೆಂದ ; ಸರ್ವಜ್ಞ.

977. ಆಕೆಯನು ಕಂಡು ಮನೆಯಾಕೆಯನು ಮರವರೆ,
A good wife will become bad, when the husband lives in sin. ಹಾಕಿದ ಪುಂಕಿ ಹರಿದಂತೆ, ಮನೆಯೊಳ
ದ್ದಾಕೆ ತಾ ಕೆಡಗು; ಸರ್ವಜ್ಞ.

978. ಕೊಂಕುಗುರುಳಿನ ರಂಭೆ ; ಕಂಕಣವು ಕಟಸೂತ್ರ,
Regard not beauty! An affectionate wife, though dull, a jewel. ಪಂಕಜಾಗಂಧಿ ಯನ ಬೇಡ! ತಾನೊಲಿದ
ಮಂಕು ಮಾಣಿಕವು ; ಸರ್ವಜ್ಞ.

979. ಸತ್ತವರ ಬಾಯೊಳಗೆ ಬತ್ತಿನೀರೆರದಂತೆ,
ಚಿತ್ತವಿಲ್ಲದಳ ವಡನಾಟ ಶುನಿ ಹೆಣನ
ಪತ್ತಿ ತಿಂದಂತೆ ; ಸರ್ವಜ್ಞ.

Living with a wife, who does not love, a dog eating a corpse.

980. ನಂಬಿದಂತಿರ ಬೇಕು ; ನಂಬದೇ ಯಿರ ಬೇಕು,
ಯಿಂಬರಿದು ಯುಕ್ತರಿರ ಬೇಕು ; ಹೆಣ್ಣನು
ನಂಬಿದವ ಕೆಡುವ ; ಸರ್ವಜ್ಞ.

Mischief from indiscreetly trusting woman.

981. ಹಂಚು ಮಣ್ಣಿಂದ್ಹುಟ್ಟಿ ವಂಚನೆಯುಲಿರುವಂತೆ,
ಸಂಚು ಬೇರವಳ ಮನ ಬೇರೆ ಹೆಣ್ಣೆಂಬ
ಹಂಚ ನೆಚ್ಚುವರೆ ? ಸರ್ವಜ್ಞ.

Woman a tile, easily broken; do not trust.

982. ಮೊಗೆನೀರಿನೊಳಗೊಂದು ನೆಗಳಾಡಿದಂದಿಗೆ
ತಗುಣಿ ಹೆಬ್ಬುಲಿಯು ಹಿಡಿದಂದು ಹೆಣ್ಣಿನ
ಬಗೆಯು ನಂಬುವದು ; ಸರ್ವಜ್ಞ.

When a crocodile swims in a small vessel of water;

983. ಹೆಂಡರಾ ಕೌತುಕವ ಗಂಡರೂ ಬಲ್ಲರೇ ?
ಗಿಂಡಿನೀರೊಳಗೆ ಕಿರಿಮೀನ ಹೆಜ್ಜೆಯನು
ಕಂಡಾತನಾರು ? ಸರ್ವಜ್ಞ.

When one can see the track of the fishes in the water;

984. ಜಲದವಳಗಿನ ಕಲ್ಲು ಸಲೆ ಜೆವರ ಬಲ್ಲದೇ ?
ಲಲನೆಯರ ವಲುಮೆ ತನಗೆಂಬ ಮರುಳಂಗೆ
ಮಲರೋಗದಂತೆ; ಸರ್ವಜ್ಞ.

When the stone in the water perspires;

985. ಅಡವಿಯೊಳು ಮಳೆ ಹೊಡೆದು ಗಿಡ ಶೇಡುಗೊಂಡಂದು
ಹುಡಿಯೊಳಗೆ ಕಮಲ ಬೆಳದಂದು ಹೆಣ್ಣಿನ
ನುಡಿಯು ನೆಚ್ಚೆಂದ ಸರ್ವಜ್ಞ.

When the lotus grows in the dust then trust women!

986. ದಾಸಿಯನು ಸೋಗುವಗೆ ವೀಸ ಹತ್ತದು ಕೈಗೆ;
ಹೇಸಿ ತೊಲಗುವಳು ಜಯಲಕ್ಷ್ಮಿ; ಆಯುಷ್ಯ
ನಾಶವಾಗುವದು; ಸರ್ವಜ್ಞ.

Wealth and health will leave him, who loves women.

987. ಜಾರತ್ವವೆಂಬುವದು ಕ್ಷೀರ ಸಕ್ಕರೆಯಂತೆ;
ಪೂರಲ್ಲಿ ಯೊಬ್ಬರರಿತರೇ ಬೇವಿನ
ಸಾರದಂತಕ್ಕು; ಸರ್ವಜ್ಞ.

Fornication at first like sugar, then bitter as the juice of the neem-tree.

988. ಪುರುಷ ಕಂಡರೆ, ಕೊಲ್ವ, ಅರಸು ದಂಡವ ಕೊಂಬ;
ನರಸುರರು ಯಲ್ಲ ಮುನಿಸಕ್ಕು; ಯಂತ್ಯಕ್ಕೆ
ನರಕ ಪರಸತಿಯು ಸರ್ವಜ್ಞ.

The strange woman is hell.

989. ಕುದುರೆಯಾ ಚದುರೆಯಾ ಹದಿರೆರಡು ವಂದೈಯ್ಯ!
ಚದುರನೇರಿದರೆ, ಕುಣಿವದು; ಬೆಳ್ಳಾಳ[1]
ಬಿದಿರಿ ಹಾಕುವದು; ಸರ್ವಜ್ಞ.

A horse—a wife.

1. ಕರ್ಮವಿಭಕ್ತಿ ಅವನನ್ನು ಕುದರೆ ಕೆಡವಿ ಹಾಕುವದು.

990. ಚಿಕ್ಕಾಡಿ, ತಗಣೆಯೂ, ರಕ್ಕಸರು, ಜಾರೆಯರು,
ವಕ್ಕಲಿಕ್ಕುವರು ಯಿರುಳೆಲ್ಲ; ಬೆಳಗಾಗೆ,
ಸುಕ್ಕಿದಂತಿಹರು ಸರ್ವಜ್ಞ.

These four give trouble in the night only.

991. ಯಡವಿ ಬೊಟ್ಟೊಡದರೇ, ಕೆಡ ಬೀಳ ವಿರಿದರೇ,
ನಡುಬೆಂನಿಲಲಗು ಮುರಿದರೆಯು, ಹಾದರದ
ಕಡುಹು ಬಿಡದೆಂದ; ಸರ್ವಜ್ಞ.

Though one is dishonoured, is the ardour of fornication not less.

992\. ತುಡುತಿಂಬಿ ಗಂಡನಾ ಬಡತನವ ಬಲ್ಲಳೇ ?
ಕಡನ ತಂದಿಕ್ಕಿ ಕುದಿಸಿ ತುಪ್ಪವ ಬೆರಸಿ
ಹೊಡದು ಕುಳ್ಳಿಪಳೊ ; ಸರ್ವಜ್ಞ.

A junketing house wife knows nothing of the poverty of her husband.

993\. ಮಿಂಡಿಯಾ ಗಂಡ ತಾ ಪಂಡಿಂಗೆ ಹೋದರೇ,
ಹಿಂಡಿಯು ಹೆಡಿಗೆಗೆ ಕೋಣನ ತಂದು ಕಣು
ಗಂಡು ಸೊಡದಂತೆ ; ಸರ್ವಜ್ಞ.

Husbands leaving their wives, putting boiled rice

994\. ನಾರಿಯುಳ ಗಂಡ ತಾ ಬೇಲೂರಿಗ್ಹೋದರೇ,
ಅರಿದೋಗರಕೆ ಮೊಸರಿಕ್ಕಿ ಕಾಗಿಗೆ
ತೋರಿ ಕೊಟ್ಟಂತೆ ; ಸರ್ವಜ್ಞ.

and curds to the crows, i. e. exposing them to temptation.

995\. ತಾಳದೋಲೆಯನಿಟ್ಟು[1] ಬೇಳಮಣಿಯನೆ ಕಟ್ಟಿ
ವೇಳ್ಯಪನ್ನರಿತು ನಡವಳು ದೊರವದು
ಶೂಲಿಯು ಕರುಣ ಸರ್ವಜ್ಞ.

To find a virtuous parsimonious housewife is the mercy of God.

1\. ಭಂಗಾರದ ವಸ್ತುಗಳಿಲ್ಲದಿದ್ದರೂ ಆಸಿ ಕಾಡುವಾಕೆಯಲ್ಲ.

996\. ಉಲಿಯದೇ ಕೆಲಿಯದೇ ತಲೆ ಯೆತ್ತಿ ನೋಡದಲೆ,
ಬಲುಬಲ್ಲತನದಿ ಯಿರುವವಳು ದೊರವದು
ಸಲೆ ಗುರುಕರುಣ ; ಸರ್ವಜ್ಞ.

997\. ನಾರಿ ಪರವುಪಕಾರಿ ನಾರಿ ಸ್ವರ್ಗಕೆ ದಾರಿ ;
ನಾರಿ ಸಕಲರಿಗೆ ಹಿತಕಾರಿ ; ಮುನಿದರೇ,
ನಾರಿಯೇ ಮಾರಿ ; ಸರ್ವಜ್ಞ.

Wives a way to heaven ; but when angry, they are death.

998. ಕೊಟ್ಟಾತ ಬರಡಾದ ; ಬಿಟ್ಟಾತ ಹಯನಾದ ;
ಕೊಟ್ಟ[1]ವಳ ಪಡವೆನೆನುವಾತ ತಾ ಮೊದಲೆ
ಬಿಟ್ಟ ಬಯಲಾದ ಸರ್ವಜ್ಞ.

He who gives his substance to women, ruined.

1. ಸ್ತ್ರೀಯರಿಗೆ.

999. ಹಲ್ಲ ಮೇಲಿನ ಕೆಂಪು ; ಕಲ್ಲಮೇಲಿನ ಹಂಸೆ ;
ಮಲ್ಲಿಗೆಯರಳ ತನಿಗಂಪು, ಹೊಸಮೋಹ
ನಿಲ್ಲವು ; ನೋಡು ! ಸರ್ವಜ್ಞ.

New love will not last.

1000. ಬೇಲೂರ ಸ್ನೇಹಕ್ಕೆ ಹಾರಿ ಹೋಗುವ ಹೆಡ್ಡ ;
ಮೀರಿದ ಹೊಲದ ನೆಣಕೊಲಿದು ನರಿ ಬಾ
ಯಾರಿ ಸತ್ತಂತೆ; ಸರ್ವಜ್ಞ.

A fool, who seeks strange women.

1001. ಯೇರಿಮೇಲಣ ಪಂಜು ನೀರೊಳಗೆ ಪುರಿದಂತೆ;
ನಾರಿಯರೊಲುಮೆ ತನಗೆಂಬ ಮರುಳಂಗೆ
ಮಾರಿ ಹೊಡದಂತೆ ಸರ್ವಜ್ಞ.

The affection of women inconstant.

1002. ಅಳಿಯಾಸೆ ಹೆಪ್ಪಿಂಗೆ ; ಮಳೆಯಾಸೆ ಸಕಲರಿಗೆ;
ಬಲೆಯಾಸೆ ಮೀನ ಹಿಡಿವವಗೆ ; ಹಾದರಕೆ
ಸುಳಿದಾಟದಾಸೆ ; ಸರ್ವಜ್ಞ.

Fornication and roaming about;

1003. ಪಡಿಯಾಸೆ ಹರದಂಗೆ; ನುಡಿಯಾಸೆ ವೇಶಿಗೇ ;
ಜಡೆಯಾಸೆ ಬೂದಿಗೊ[1]ರವಗೆ ; ಹಾದರಕೆ
ಯುಡೆಯಾಟದಾಸೆ ; ಸರ್ವಜ್ಞ.

these two requisite to each other.

1. ಬೂದಿ ಹಚ್ಚಿಕೊಂಡಂಥಾ ತಪಸಿಗೆ.

MANNERS OF THE WORLD IN GENERAL.

14. ನೀತಿ ಪದ್ಧತಿ.

1004. ಹೆಂಣನ್ನು ಹೊನ್ನನ್ನು ಹಂಣಾದ ಮರಗಳನು
ಕಂಣಿಲಿ ಕಂಡು ಮನದಲ್ಲಿ ಬಯಸದಿಹ
ಅಂಣಗಳಾರು ? ಸರ್ವಜ್ಞ.

Who is not desirous of women and money?

1005. ಖಂಡಿಸದೆ ಕರಣವನು, ದಂಡಿಸದೆ ದೇಹವನು,
ವ್ರುಂಡುಂಡು ಸ್ವರ್ಗವೈದಲ್ಕೆ, ಯಮನೇ
ನ್ರಂಡಾ[1]ಳುತಾಳೆ? ಸರ್ವಜ್ಞ.

Does a bad woman reign in heaven, that sensual men should go there?

1. ಹಿರಿತನ ವಿಚಾರ ಇಲ್ಲವೇ ಅಲ್ಲಿ.

1006. ಕೂಳು ಕು[1]ತ್ತವೆ ಕುತ್ತ ; ಕೂಳು ಮೇ[2]ಳವೆ ಮೇಳ;
ಕೂಳೊಂದು ಘಳಿಗೆ ತಡೆದರೆ, ಪಾತರದ
ಮೇಳ ಮುರಿದಂತೆ ; ಸರ್ವಜ್ಞ.

The world would come to a stop, but for food.

1. ಅದನ್ನ ದೊರಕಿಸಿಕೊಳ್ಳುವದು. 2. ಕೂಳು ಇದ್ದರೆ ಕೆಲಸ ಮುಂತಾದ್ದು ಆಗುವದು.

1007. ಒಡಲೆಂಬ ಹುತ್ತಕ್ಕೆ ನುಡಿವ ನಾಲಿಗೆ ಸರ್ಪ ;
ಕಡು ರೋಷವೆಂಬ ವಿಷವೇರೆ, ಸಮತಿ ಗಾ
ರುಡಿಗನಂತಕ್ಕು ; ಸರ್ವಜ್ಞ.

The body a snake-hole, the tongue the snake, anger the poison, compliance the conjurer.

1. ಹಾವನ್ನಾಡಿಸುವವರು.

1008. ಬಡವನ್ಹೆಂಡತಿ ತಾ ಕಡು ಚೆಲುವೆಯಾದಡೇ,
ನಡು ಬೀದಿಯೊಳಗೆ ದವನವನು ಬಿತ್ತಲು,
ಮುಡಿಯದವರಾರು ? ಸರ್ವಜ್ಞ.

The beautiful wife of a poor man: fragrant flowers put in the street.

1009. ನಲ್ಲ ವಲ್ಲೀ ವಲ್ಲ; ನೆಲ್ಲಕ್ಕಿಬೋನೊಲ್ಲ;
ಅಲ್ಲನೆ ವಲ್ಲ; ಮೊಸರೊಲ್ಲ; ಯೂಕೊಲ್ಲ;
ಯಿಲ್ಲದಕೊಕ್ಕಲ್ಲ; ಸರ್ವಜ್ಞ.

A husband wants nothing, because he has nothing.

1010. ಅಂತಿದ್ದ, ಯಿಂತಿದ್ದ, ಯಂತಿದ್ದನೆನ ಜೇಡಿ!
ಕುಂತಿಯ ಮಕ್ಕಳು ತಿರಮುಣೆ, ಮಿಕ್ಕವರು
ಯಂತಿದ್ದರೇನು? ಸರ್ವಜ್ಞ.

Fortune unsteady.

1011. ಒಕ್ಕಲಿಗನೋದಲ್ಲ; ಬೆಕ್ಕು ಹೆಬ್ಬುಲಿಯಲ್ಲ;
ಯಕ್ಕಿಯ ಗಿಡವು ಬನವಲ್ಲ; ಯಿವು ಮೂರು
ಲೆಖ್ಖದೊಳಗಲ್ಲ; ಸರ್ವಜ್ಞ.

A cat is no tiger, and a farmer no scholar.

1012. ಭಂಡುಹೆಂಡತಿ ಯಾಗಿ, ತುಂಡೊಬ್ಬ ಸೊಸೆಯಾಗಿ,
ಕಂಡಲ್ಲಿ ತಿರಗೋ ಮಗನಾದರೆ, ಮನೆಗೆ
ದಂಡ ತಪ್ಪದು; ಸರ್ವಜ್ಞ.

A house, in which is a bad wife and a wicked daughter-in-law, will be liable to fines.

1013. ಬಂಧುಬಳಗವು ಕೂಡಿ ಹೊಂದಿ ಜೋಗಳ ಪಾಡಿ
ಹಿಂದೆ ಸತ್ತವರ ಹೆಸರಿಟ್ಟು, ಗುಗ್ಗರಿ
ತಿಂದು ತೂಗುವರು; ಸರ್ವಜ್ಞ.

The ceremony of giving a name.

1014. ಕ್ರೀಡೆಯಲಿ ಬಾಲತ್ವ, ಪ್ರಾಢಿಯಲಿ ತರುಣತ್ವ;
ಗಾಢಚಿಂತೆಯಲಿ ವೃದ್ಧತ್ವಗಳ; ಸುಡು
ಗಾಡಿಗೆಡೆಯುಹರು; ಸರ್ವಜ್ಞ.

Infancy, youth, old age, at last the cemetery.

1015. ಮೃತ್ಯುದೇವತೆ ಬೆಂನಿಲ್ಹೊತ್ತನುದಿನ ತಿರಿಗಿ
ತುತ್ತು ಯಿದ್ದಲ್ಲಿ ವೈದುಣಿಸುತಿರಲಿಕೆ,
ಹೊತ್ತು ಚೆಲ್ಲುವಳು; ಸರ್ವಜ್ಞ.

Death, carrying men about on her back, throws them off.

1. ಮೃತ್ಯು ಮನುಷ್ಯರನ್ನು ಹೊತ್ತು=ಇರಗೊಟ್ಟಹಾಗಾಯಿತು; ತನಗೆ ಬೇಕಾದಾಗ ಕೆಡಹುತ್ತದೆ.

1016. ಕಂಣು ಮನ ನಾಲಿಗೆಯು ತಂನದೆಂದೆನ ಬೇಡ!
ಅಂನ್ಯರು ಕೊಂದರೆನ ಬೇಡ! ಯಿವು ಮೂರು
ತಂನ ಕೊಲ್ಲುವವು; ಸರ್ವಜ್ಞ.

Eye, mind, tongue: these three will kill you.

1017. ಹಂಗಿನರಮನೆಗಿಂತ ಯಿಂಗಡದ ಗುಡಿ ಲೇಸು;
ಭಂಗಬಟ್ಟುಂಬ ಬಿಸಿಯಂನಕಿಂತಲು
ತಂಗಳವೆ ಲೇಸು! ಸರ್ವಜ್ಞ.

Better stale food than warm rice with dishonour.

1018. ಎಳ್ಳು ಗಾಣಿಗ ಬಲ್ಲ; ಸುಳ್ಳು ಸಿಂಪಿಗ ಬಲ್ಲ;
ಕಳ್ಳರನು ಬಲ್ಲ ತಳವಾರ; ಬಣಜಿಗ
ನೆಲ್ಲವನು ಬಲ್ಲ; ಸರ್ವಜ್ಞ.

Among these three, the merchant the most acute.

1019. ಈಚಲದ ಮರ ಹೀನ; ನೀಚರಮನೆರೆ ಹೀನ;
ಮೋಚಿದ ಹೆಂಣು ತರಹೀನ; ಮನೆಯೊಳಗೆ
ಪೇಚಾಟ ಹೀನ; ಸರ್ವಜ್ಞ.

These bad, each in its way.

1020. ಇಂದು ನಾಳಿಗೆ ಯೆಂದು ತಂದದಂನಿಡ ಬೇಡ!
ಬಂದದನುಂಡು ಸುಖಿಯಾಗಿ ಬೇನೆಯು
ಬಂದಾಗ, ನೆರಳು! ಸರ್ವಜ್ಞ.

In prosperous days be joyful! In misfortune, sorrowful.

1021. ಇತ್ತು ದಣಿಯದವಂಗೆ ಮೃತ್ಯು ವಲಿಯದೆ ಬಿಡದು;
ಪತ್ತಿರ್ದ ಶಿರಿಯು ತೊಲಗುವದು; ಯಿಂಥವನ
ತೊತ್ತಾಗ ಬೇಡ! ಸರ್ವಜ್ಞ.

Be not the servant of the insatiable!

1022. ಸಾಲವನು ತರುವಾಗ, ಹಾಲು ಬೋನುಂಡಂತೆ;
ಸಾಲಿಗನು ಬಂದು ಕೇಳಿದರೆ, ಕುಂಡೆಗೆ
ಚೇಳು ಕಡಿದಂತೆ; ಸರ್ವಜ್ಞ.

Making debts sweet as milk: the importunity of the creditor as the bite of the scorpion.

1023. ಸಾಲವನು ಕೊಂಬಾಗ, ಹಾಲೋಗರುಂಡಂತೆ;
Making debts. ಸಾಲಿಗನು ಬಂದು ಯೆಳೆವಾಗ, ಕಿಬ್ಬದಿಯ
ಕೀಲು ಮುರಿದಂತೆ ; ಸರ್ವಜ್ಞ.

1024. ಬಳ್ಳಿಯ ಮಾತಿಂಗೆ ವುಳ್ಳೊಡವೆ ಬಿಡೆನೆಂದು
Repudiating debts. ಬೊಳ್ಳಟ್ಟು ಬೊಗಳಿ ಹುಸಿದು ಸಾಲವ ನು॰ಗಿ
ಯಿಲ್ಲೆನುತಲಿಹನು ; ಸರ್ವಜ್ಞ.

1. ಪ್ರಮಾಣವಾಚಕಕ್ಕೆ ಸಂಜ್ಞೆ.

1025. ಬೆಂಡಿರದೆ ಮುಳುಗಿದರು, ಗುಂಡೆದ್ದು ತೇಲಿದರು,
Though a spongy plant sink in the water, a debtor will not pay. ಬಂಡಿಯ ನೊಗವು ಚಿಗತರು, ಸಾಲಿಗನು
ಕೊಂಡದ್ದು ಕೊಡನು ; ಸರ್ವಜ್ಞ.

1026. ನಂಬಿಗೆಯುಳ್ಳವ ತಾ ಕೊಂಬುವನು ಸಾಲವನು;
A man without credit, an useless earthen pot. ನಂಬಿಗೆ ಕೆಟ್ಟ ಬಳಿಕ, ಬೆಂದಾವಿಗೆಯ
ಕುಂಭವಂತಿಹನು ; ಸರ್ವಜ್ಞ.

1. ಯಾವಾಗಲೂ ಆವಿಗೆಯ ಬುಡಕ್ಕೆ ಹಾಕಿರುವಂಥಾವು.

1027. ಇಲ್ಲದ ಕಾಲಕ್ಕೆ ತಾ ಹೊಲ್ಲಸವ ಜನರಿಂಗೆ;
To a bad king and to a debtor, a heart of stone necessary. ಅಲ್ಲದ ಗುಣವುಳ್ಳ ಯರಸಿಂಗೆ ಸಾಲಕ್ಕೆ
ಕಲ್ಲೆದೆಯು ಬೇಕು; ಸರ್ವಜ್ಞ.

1028. ಅಕ್ಕಸಾಲಿಯನೂರಿಗೊಕ್ಕಲೆಂದೆನ ಬೇಡ !
A goldsmith, a cat catching mice. ಬೆಕ್ಕು ಬಂದಿಲಿಯ ಹಿಡಿವಂತೆ; ವೂರಿಂಗೆ
ರಕ್ಕಸನಹನು ; ಸರ್ವಜ್ಞ.

1029. ಹಣಕ್ಕೊಂದೀಸವಿಪ್ಪಣಕ್ಕೊಂದುಬೇಳೆಯು
ತ್ರಿಣಯನ ಮಕುಟವಾದರಕ್ಕಸಾಲೆಯು
ಟೊಣೆಯದೆ ಬಿಡನು ; ಸರ್ವಜ್ಞ.

Goldsmiths will cheat, even if it were the crown of Shiva.

1030. ಬೂದಿಯೊಳು ಹುದಿಗಿಸಿ ವೇದಿಸಿ ಮರೆಮಾಡಿ
ಕಾದಿರ್ದ ಚಿಂನದೊಳು ಬೆರಸಿ ಪರೆಹಚ್ಚಿ
ಮೂದುತಾಟೊಣೆವ ; ಸರ್ವಜ್ಞ.

Goldsmiths great cheats.

1. ಭಂಗಾರ ಮುಂತಾದದ್ದು ತಂದು ಕೂತವರನ್ನು ಹೋಗಿರಿ ಎಂದು ಉಪದ್ರ ಪಡಿಸಿ ಕಾದ್ಯ ಭಂಗಾರದಲ್ಲಿ ಏನಾದರೂ ಭೊಟ್ಟ ಕೂಡಿಸಿ ಚೊಕ್ಕವೆಂದು ಪರೆಹಚ್ಚಿ ಅವರಿಗೆ ತೋರಿಸಿ ಕೊಟ್ಟು ಮೋಸ ಮಾಡುತ್ತಾನೆ.

1031. ಬಿದರೆ ಯಂದಣವಕ್ಕು ; ಬಿದರೆ ಸತ್ತಿಗೆ ಯಕ್ಕು ;
ಬಿದರಿಂದ ಸಕಲಪದವಕ್ಕು ; ಲೋಕದೊಳು
ಬಿದರದವ ಕೆಟ್ಟ ; ಸರ್ವಜ್ಞ.

Different things are made of bamboo; so fear keeps men in order (if of different uses).

1. ಲೋಕ ನಡೆಯಲಿಕ್ಕೆ ಭಯ ಆಧಾರ.

1032. ಬಲ್ಲಿದನು ನುಡಿದರೆ, ಬೆಲ್ಲವನು ಮೆದ್ದಂತೆ ;
ಯಿಲ್ಲದಾಬಡವ ನುಡಿದರೇ, ಬಾಯಿಂದ
ಜೊಲ್ಲು ಬಿದ್ದಂತೆ ; ಸರ್ವಜ್ಞ.

The speech of the mighty is sweet: the speech of the poor is empty brag.

1033. ಕಂಡದ್ದನಾಡೆ, ಭೂಮಂಡಲವು ಮುನಿವುದು ;
ಕೊಂಡಾಡುತಿಪ್ಪ ನುಡಿದರೇ, ಜಗವೆಲ್ಲ
ಮುಂಡಾಡುತಿಪರು ; ಸರ್ವಜ್ಞ.

You speak what is true and all will be angry with you, you speak what is liked, and all will caress you.

1034. ಮೇಲರಿಯದಧಿಕರೊಳು ಕಾಳಗವ ತೊಡಕಿದರೆ,
ಬಾಳುವೆ ಗೆಟ್ಟು ಬಡವಕ್ಕು ಬೆಸಲಾದ
ಚೇಳ[1]ನಂತಕ್ಕು ; ಸರ್ವಜ್ಞ.

Mischief from quarrelling with those, who do not know what is good.

1. ಹಡಿಯುತ್ತಲೆ ಬೆನ್ನು ಒಡೆದು ಸಾಯುತ್ತದೆ.

1035. ಸುಂಕಿಗನು, ಹುರಿಹಲು, ಬಿಂಕಿವ ಜಲಿವೆಂಣೂ,

These six if they touch you, will not let you go.

ಕಂಕಿಯು, ಸುಂಕ, ನಸುಗುಂನಿ, ಯಿಾಯವಾರು
ಸೊಂಕಿದರೆ, ಬಿಡವು ; ಸರ್ವಜ್ಞ.

1036. ಸೊಡರು ಲಂಚವ ಕೊಂಡು ಕೊಡುವುದೊಚ್ಚ ತಬೆಳಗ

The lamp—the sun: selfish and disinterested beneficence.

ಪೊಡವಿಗೆ ಸೂರ್ಯ ಬೆಳಗೀವ್ರೊಲ್ಲಂಚವ
ಹಿಡಿಯುದವ ಧರ್ಮಿ ; ಸರ್ವಜ್ಞ.

1037. ಬಡವ ಬಟ್ಟೆಯು ಹೋಗಲೊಡನೆ, ಸಂಗಡವೇಕೆ ?

The poor want no protector on the road; a tiger, poverty with them.

ಬಡತೆನವೆಂಬ ಹುಲಿ ಗೂಡಿ ಬರುವಾಗ,
ನುಡಿಸುವರಿಲ್ಲ ; ಸರ್ವಜ್ಞ.

1038. ಪ್ರಸ್ಥಾಪಕ್ಕೊದಗಿದ ಕತ್ತೆ ಮದಕರಿಯಂತೆ

A well-timed gift, though small, of great value.

ಪ್ರಸ್ಥಾಪ ತೀರ್ದ ಮರುದಿವಸ ಮದಕರಿಯು
ಕತ್ತೆಯಂತಕ್ಕು ಸರ್ವಜ್ಞ.

1039. ಮಾತ ಬಲ್ಲಾತಂಗೆ ಮುತ್ತೊಂದು ಮಾಣಿಕವು ;

Dexterity of speech, a jewel.

ಮಾತುಗಳರಿಯದಧಮರಿಗೆ ಮಾಣಿಕವು
ತೂತು ಬಿದ್ದಂತೆ; ಸರ್ವಜ್ಞ.

1040. ಧನಕನಕವುಳ್ಳನಕ, ದಿನಕರನಂತಕ್ಕುಂ ;

When there is wealth, men are like the sun; when it is gone, like dogs.

ಧನಕನಕ ಹೋದ ಮರುದಿನ ಹಾಳೂರ
ಶುನಕನಂತಕ್ಕು ; ಸರ್ವಜ್ಞ.

1041. ಸೊಡರು, ಸುಲಿಗೆಯ ಯಾಳು, ಪಡೆದುಂಬ ಸೂಳೆಯೂ,

These know nothing of poverty.

ತುಡುಗಣಿನಾಯಿ, ಯುಳಿಯುನು, ಯರಸಾಳೂ,
ಬಡತನಯರಿಯರು ; ಸರ್ವಜ್ಞ.

1042. ಅಳಿಯೂರ ತಳವಾರ, ಕಳೆಯುಳ್ಳ ಸೂಳೆಯೂ,
ಹೊಳಲ ಸುಂಕಿಗ, ಹಳೆನಾಯಿ, ಯಾಚಕನು,
ತೊಲಗುವರೆ ಯಲ್ಲ ; ಸರ್ವಜ್ಞ.

These will not go out of the way.

1043. ಅಬ್ಬಿಗರುಷಣವ್ಯಾಕೆ ? ಕಬ್ಬ್ಯಾಕೆ ಬೋಡಂಗೆ ?
ನಿಬ್ಬಣವು ಯಾಕೆ ಕುರುಡಂಗೆ ? ವನವೊಳು
ಬೊಬ್ಬುಲಿಯು ಯಾಕೆ ? ಸರ್ವಜ್ಞ.

A man must not desire a thing, for which he is unfit.

1044. ಆಡಿ ಹುಸಿಯಲು ಹೊಲ್ಲ ; ಕೂಡಿ ತಪ್ಪಲು ಹೊಲ್ಲ ;
ಕಾಡುವ ನೆಂಟ ಬರ ಪೊಲ್ಲ ; ಮಾನಿನಿಗೆ
ನಾಡ ಮಾತ್ಹೊಲ್ಲ ; ಸರ್ವಜ್ಞ.

It is not proper to promise, and then to lie: a woman not fit for talking on politics.

1045. ಅರಿವು ಇರದಿರೆ, ಹೊಲ್ಲ ; ಕರಿಯು ಜಿವರಲು ಹೊಲ್ಲ ;
ಅರಿಯದೂರೊಳಗಿರ ಹೊಲ್ಲ ; ಧೊರೆಗಳಿಗೆ
ಸರಿಮಾತು ಹೊಲ್ಲ ; ಸರ್ವಜ್ಞ.

Familiarity with princes not proper, &c.

1046. ಕೆಟ್ಟ ಹಾಲಿಂದ ಹುಳಿ ಇಟ್ಟಿರ್ದ ತಿಳಿ ಲೇಸು !
ಕೆಟ್ಟ ಹಾರ್ವಿತೆಯು ಬದಕಿಂದ ಸೂಳೆಯು
ನೆಟ್ಟನೇ ಲೇಸು ! ಸರ್ವಜ್ಞ.

A harlot better than a bad brahman-wife.

1047. ಯಿಲ್ಲಾರು ಹಿರಿಯರೂ ; ಬಲ್ಲ ಗುರುವರುಗಳೂ ;
ನಲ್ಲಳು ಮುಂದೆ ಸುಳಿದರೆ, ಲೋಕದೊಳಗೆ
ವ್ರೊಲ್ಲದವರಾರು ? ಸರ್ವಜ್ಞ.

All are called elders, priests, but not one is able to withstand a woman.

1048. ಸುಣ್ಣವಿಲ್ಲದ ವೀಳ್ಯೆ, ಬಣ್ಣವಿಲ್ಲದ ಮದುವೆ,
ಹೆಣ್ಣಿಲ್ಲದನ ಸಂಸಾರ, ಮಳಲೊಳಗೆ
ಯೆಣ್ಣಿ ಹೊಯಿದಂದೆ ; ಸರ್ವಜ್ಞ.

These are as pouring oil on the sand, i. e., useless.

1049. ರಾಗವಿಲ್ಲದ ವಿದ್ಯೆ, ಭೋಗವಿಲ್ಲದ ನಿದ್ರೆ,
ತ್ಯಾಗವಿಲ್ಲದನ ಧೊರೆತನ, ಹಾಳೂರ
ಗೂಗೆಯಂತಕ್ಕು ; ಸರ್ವಜ್ಞ.

These are like an owl in a desolated village, i. e. nobody regards them.

1050. ಹಾಸುವಿಲ್ಲದ ನಿದ್ರೆ, ಪೂಸುವಿಲ್ಲದ ವಿಾಯು
ಭಾಷೆಯಿಲ್ಲದನ ಗೆಣೆತನ, ಮೋಟಕೈ
ಬೀಸಿ ಕರೆವಂತೆ ; ಸರ್ವಜ್ಞ.

These are like winking with a handless arm, i. e., of no eff ect.

1051. ಬೇಡನೊಳ್ಳಿದನೆಂದು ಯಾಡದಿರು ! ಸಭೆಯೊಳಗೆ
ಬೇಡ ಬೇಡಿದುವ ಕೊಡದಿರೆ, ರಾತ್ರಿಯೊಳು
ಗೋಪೆಯಾನೊಡೆವ; ಸರ್ವಜ್ಞ.

The fowler a bad man.

1052. ವೋಜನೊಕ್ಕಲು ಯಲ್ಲ, ಹೂಜೆ ಭಾಂಡದೊಳಲ್ಲ;
ಗಾಜೊಂದು ಲೋಹದೊಳಗಲ್ಲ ಯುಂಬಲಿ
ಭೋಜನವೆ ಯಲ್ಲ; ಸರ್ವಜ್ಞ.

These seem to be something, but are of no account really.

1053. ಉತ್ತರೆಯು ಬರತರೇ, ಹೆತ್ತಮ್ಮ ತೊರಿದರೇ,
ಸತ್ಯರೂ ತಪ್ಪಿನಡೆದರೆ, ಲೋಕ ತಾ
ನೆತ್ತ ಸೇರುವದು ? ಸರ್ವಜ್ಞ.

If these happen, the world will come to a stand still.

1. ಉತ್ತರೆ ನಕ್ಷತ್ರದ ಮಳೆ.

1054. ಯತಿಗಳಿಗೆ ಮತಿ ಕೆಡಗು ; ಸತಿಗೆ ಸಜ್ಜನ ಕೆಡಗು ;
ಮತಿವಂತರೂ ಭ್ರಮೆಗೊಳಗು ಹೊನ್ನೆಂಬ
ಶ್ರುತಿಯು ಕೇಳಿದರೆ ; ಸರ್ವಜ್ಞ.

At the sound of money, even wise men become infatuated.

1055. ಅಟ್ಟಲೋಡದ ತೇಜಿ, ಮುಟ್ಟ ಇರಿಯದ ಬಂಟ,
ಇಟ್ಟೆಡೆಗಿಲ್ಲದಾಳಿದ್ದ ರಾಕಾರ್ಯ
ಕೆಟ್ಟಿತೆಂದರಿಯೊ ! ಸರ್ವಜ್ಞ.

By these the king's cause is lost.

1056. ನೃಪರಿಗೆ ಧೊರೆಯು ರೂಪು; ನಾರಿಗೆ ಗುಣವು ರೂಪು;
ಚಾರುಕೋಗಿಲೆಗೆ ಸ್ವರ ರೂಪು; ಮನುಜಗೆ
ಧೀರತ್ವ ರೂಪು; ಸರ್ವಜ್ಞ.

Goodness and bravery are beauty to a king.

1057. ಪ್ರಸ್ತಾವ ನುಡಿಯಲ್ಪ್ರಶಸ್ತವಾಗಿರ ಬೇಕು;
ಪ್ರಸ್ತಾವ ತಪ್ಪಿ ನುಡಿದರೆ, ದೇವಾಂಗ[1]
ದುಸ್ತು ಬಿದ್ದಂತೆ; ಸರ್ವಜ್ಞ.

A word in season excellent: out of season it is a silk-cloth torn.

1. ಅಪ್ಪಟ ರೇಸ್ಮೆಯು ವಸ್ತ್ರ.

1058. ಹೊಲಬನರಿಯದ ಮಾತು ತಲೆ ಬಾಗಿ ಯೆದ್ದಂತೆ;
ಹೊಲಬರಿತು ವೊಂದ ನುಡಿದರೆ, ಯಾಮಾತು
ಫಲಪಕ್ವದಂತೆ; ಸರ್ವಜ್ಞ.

An unwise word as one looking to the ground, a wise one like a ripe fruit.

1059. ಶಿರಿ ಭರವುಳ್ಳಾಗಲು, ಮರೆಯದವನೇ ಜಾಣ;
ಕೊರತೆ ಯಾಗೆ, ಯಾಕೊಡವೆಸಗಿಲ್ಲೆಂದು
ಅರಸುವವ ಪೆಡ್ಡ; ಸರ್ವಜ್ಞ.

A clever man not forgetting himself in prosperity.

DESCRIPTION OF THE COUNTRY (KARNATAKA.)

15. ದೇಶ ಪದ್ಧತಿ.

1060. ಬಟ್ಟೆಬಟ್ಟೆಯೊಳಲ್ಲ ಸೊಟ್ಟೆಜಾಲಿಯ ಮುಳ್ಳು;
ಹುಟ್ಟಿದವರೆಲ್ಲ ಗಿಜೆಮಾಯಿ[1]; ಮೂಡಲ
ಬಟ್ಟೆ ಬೇಡೆಂದ! ಸರ್ವಜ್ಞ.

The country and people to the east.

1. ಮಾತು ನೆಟ್ಟಗೆ ಬಾರದವರು.

1061. ಊರು ಸನಿಹದಲಿಲ್ಲ; ನೀರೊಂದು ಗಾವುದವು;
ಸೇರಿ ನಿಲ್ಲುವರೆ, ನೆರಳಿಲ್ಲ ಬಡಗಲ
ದಾರಿ ಬೇಡೆಂದ ಸರ್ವಜ್ಞ.

The north.

1062. ಜೋಳದಾ ಬೋನಕ್ಕೆ ಬೇಳೆಯ ತೊಗಿಯಾಗಿ
The open country. ಕಾಳೆಮ್ಮೆ ಕರದ ಹೈನಾಗಿ ಬೆಳವಲು
ಮೇಳ[1] ! ನೋಡೆಂದ ! ಸರ್ವಜ್ಞ.

1. ಈ ಪದಾರ್ಥಗಳಿಗೆ ಬೆಳವಲೀವು ಚಂದ.

1063. ಕಡಲೆಯನು ಗೋಧಿಯನು ಮಡಿಕುದ್ದು ಬೆಳವರೂ
May he not be satiated, who contemns open country! ಸುಡ ಬೇಕು ನಾಡನೆಂದವನ ಬಾಯೊಳಗೆ
ಪುಡಿಗಡಬು ಬೀಳ್ಗ ! ಸರ್ವಜ್ಞ.

1064. ಕಾಡೆಲ್ಲ ಕಸುಗಾಯಿ; ನಾಡೆಲ್ಲ ಹೆಗ್ಗಡವು;
The west the woody country. ಅಡಿದ ಮಾತು ನಿಜವಿಲ್ಲ; ಮಲನಾಡ
ಕಾಡು ಸಾಕೆಂದ ಸರ್ವಜ್ಞ.

1065. ಸೀತಧಾತುಗಳುಂಟು ; ಬಾತಿಹವು ಕುಕ್ಷಿಯೂ;
It is unhealthy; ಪಾತಕರು ಮರ[1]ದಿ ತಿರಿದುಂಬ ನಾಡಿಗೆ
ಯಾತಕೆ ಬಹರು ಸರ್ವಜ್ಞ.

1. ಪಾಟು ಪಾತ್ರೆ ಮುಂತಾದ ಸಾಮಾನುಗಳು ಅಲ್ಲಿ ಮರದವು.

1066. ಅಲ್ಲ ಯರಿಷಣವುಂಟು ; ಬೆಲ್ಲ ಬಿಳೆಯಲೆ ಯುಂಟು ;
but for eatables it is unsurpassed ವಳ್ಳೆಹಲಸುಂಟು ; ಮೆಲಲ್ಕೆ ಮಲನಾಡ
ಅಲ್ಲೆಂನ ಬಹುದೆ ? ಸರ್ವಜ್ಞ,

1067. ಕಾಳಕೂಟದ ವಿಷವು, ಚೇಳು ನಂಬಿದ ಹಗೆಯು,
Tamulians, emigrants. ಹಾಳೂರ ಚುರಚೆ, ನಸು[1]ಗುನ್ನಿ, ತಿಗು[2]ಳರ
ಘಾಳಿ ಬೇಡೆಂದ ಸರ್ವಜ್ಞ.

1. ಇವಷ್ಟು ಹೇಡ; ತಿಗುಳರನ್ನು ಇವಕ್ಕೆ ಸರಿ ಮಾಡುತ್ತಾನೆ. 2. ಅಗ್ನಿ ದಿಕ್ಕಿನ ಕಡೆಯುವರು ತಂಮ ದೇಶದಲ್ಲಿ ಯಥಾಪ್ರಕಾರ ಇರುತ್ತಾರೆ, ಆದರೆ ಅದನ್ನು ಬಿಟ್ಟು ತಿರಿಗಿ ತಿರಿಗಿ ತಂಮ ಜವಾರಿ ಮರ್ಯಾದೆಯು ಕಳೆದು ಇತ್ತಕ್ಕೂ ಅತ್ತಕ್ಕೂ ಹೊಂದದೆ ಅಸಂಖ್ಯಕ್ಕೆ ಒಳಗಾಗುತ್ತಾರೆ.

1068. ತಿಗುಳಜನಗೇಹಿಗಿಂದ ಬಗಳುವ ಶುನಿ ಲೇಸು
ಮುಗುಳಿಯ ಮರದ ನೆರಳನಿಂದ ನುಂಗುವಾ
ನೆಗಳು ಲೇಸೆಂದ! ಸರ್ವಜ್ಞ.

1069. ರಾಗವೇ ಮೂಡಲೂ ಯೋಗವೇ ಬಡಗಲೂ
East, west, north, south; these four described.
ರೋಗವೇ ಶುದ್ಧ ಪಡವಲೂ ತೆಂಕಲೂ
ಭೋಗದಾ ಬೀಡು ಸರ್ವಜ್ಞ.

1070. ಮೃಡಹೀನ ಮೂಡಲೂ ನುಡಿಹೀನ ಬಡಗಲೂ
ಕಡುಕೋಪದವರು ಪಡವಲು ಟೆಂಕಲೂ
ಸಡಗರಾದವರು ಸರ್ವಜ್ಞ.

ON THE JAINS.

16. ಜೈನರ ಪದ್ಧತಿ.

1071. ಮುತ್ತು ಮುದಿಕಿಗೆ ಯಾಕೆ? ತೊತ್ತ್ಯಾಕೆ ಗುರುಗಳಿಗೆ?
Jains shall not lie.
ಬತ್ತಿದ ಕೆರೆಗೆ ತೆರಿಗ್ಯಾಕೆ? ಶ್ರವಣರಿಗೆ
ಮಿಥ್ಯತನ ಯಾಕೆ? ಸರ್ವಜ್ಞ.

1072. ಉಪ್ಪು ಸಪ್ಪಗೆ ಯಕ್ಕು! ಕರ್ಪುರವು ಕರಿದಕ್ಕು!
It is impossible with Jains, to lie.
ಸರ್ಪಗೆ ಬಾಲ ಯರಡಕ್ಕು ಶ್ರವಣರುಂ
ತಪ್ಪಾಡಿದಂದು![1] ಸರ್ವಜ್ಞ.

1. ಇದು ಹಾಸ್ಯ.

1073. ಪೆರೆ ಪೋದ ವುರುಗನಾ ಗರಳ ತಾ ತಪ್ಪುವದೆ?
The serpent throwing off its hood, their priests becoming ascetics.
ಪರಜ್ಞಾನಬೋಧೆ ಯರಿಯದಾ ಗುರುಗಳು
ಶಿರಿಯು ತೊರೆದೇನು ಸರ್ವಜ್ಞ.

1074. ಎಂತು ಪ್ರಾಣಿಯ ಕೊಲ್ಲದಂತುಟೇ ಜಿನಧರ್ಮ
ಜಂತು ಬಸುರಲ್ಲಿ ಸತ್ತರೇ, ಯಾಜೀವಿ
ಯಂತಾಪ ಶ್ರವಣ ! ಸರ್ವಜ್ಞ

Their religion is, not to kill: but how, if in their bellies, worms are killed?

BRAHMANS.

17. ದ್ವಿಜದರಶನ ಪದ್ಧತಿ

1075. ಅರಿತಂಗೆ ಆರ್ವತ್ತು ; ಮರತಂಗೆ ಮೂವತ್ತು ;
ಒರೆವಂಗೆ ರಾಜ್ಯ ಸರಿಪಾಲು ; ಬ್ರಾಹ್ಮಣ
ಬರಿಯದೆ ಕೆಟ್ಟ; ಸರ್ವಜ್ಞ.

They must live on government-employ.

1076. ಬೇಡಂಗೆ ಕೊಡೆ ಹೊಲ್ಲ ; ಆಡಿಂಗೆ ಮಳೆ ಹೊಲ್ಲ ;
ಬೇಡುಂಬವಂಗೆ ಬರ ಹೊಲ್ಲ ; ದ್ವಿಜನಿಗೆ
ನಾಡ ನುಡಿ ಸಲ್ಲ ; ಸರ್ವಜ್ಞ.

An umbrella to a hunter, government employ to a brahman priest.

1077. ಮಿಾ[1]ಪರೆ, ಪೋಪರೇ, ಪಾಪವೇನದು ಕೆಸರೇ ?
ಮಿಾಪರೆ, ಮೈಯ್ಯ ಮಲ ಪೋಪುದಾಪಾಪ
ಲೇಪಿಸಲಕ್ಕು ; ಸರ್ವಜ್ಞ.

Sin not bodily filth, not removed by ablutions.

1. ಜಳಕ ಮಾಡಿದರೆ, ಪಾಪ ಹೋಗ ಬೇಕಾದರೆ, ಅದು ಕೆಸರಾದರೆ ಹೋದೀತು.

1078. ಹಿರಿದು ಪಾಪವ ಮಾಡಿ ಹರಿವ ನೀರೊಳು ಮುಳುಗೆ,
ಕರಗೊದೆ ಪಾಪ ? ತಾ ಮುನ್ನ ಮಾಡಿದ್ದು
ಯೆರೆಯಕಲ್ ಹೆಂಟೇ ? ಸರ್ವಜ್ಞ.

Is sin an unburnt brick, that it should dissolve by bathing.

1079. ಮಟ್ಟಿಯಾ ಮಣ್ಣನ್ನು ಯಿಟ್ಟು ತಾ ನೊಸಲೊಳಗೆ
ನೆಟ್ಟನೆ ಸ್ವರ್ಗಪಡಯುವರೆ, ಸಾಣಿಕ
ಲ್ಲಿಟ್ಟ [1]ಕೇಡೇನು ? ಸರ್ವಜ್ಞ.

The sectarian mark on the forehead of no use.

1. ಅದುಯಾಕೆ ಬಡಯುತ್ತದೆ, ಯಾಕೆ ಸ್ವರ್ಗಕ್ಕೆ ಹೋಗುವದಿಲ್ಲ.

1080. ಎಂಜಲೆಂಜಲು ಯೆಂನುತಂಜುವ ವಿಪ್ರರು ತಾ
ವೆಂಜಲಿಂದಾದ ತನುವಿರಲವನರಿತು
ಅಂಜುವರೇಕೆ ? ಸರ್ವಜ್ಞ.

Why are they afraid of 'refuse' their body consisting of it ?

1081. ಮುಟ್ಟಾದ ಹೊಲೆಯೊಳು ಹುಟ್ಟಿದುದು ಜಗವೆಲ್ಲ ;
ಮುಟ್ಟ ಬೇಡೆಂದು ತೊಲಗುವ ಹಾರ್ವ ತಾ
ಹುಟ್ಟಿದನೆಲ್ಲಿ ? ಸರ್ವಜ್ಞ.

Whence was he born, that he should call others impure ?

1082. ಜೆಂನಾದ ವ್ರಾಹೆಂದು ಕೆಂನೆಯಾಡನು ತಿಂದು
ವ್ರುಂನತಸ್ವರ್ಗವಡರುವರೆ, ಹಿಂಡಾಡ
ತಿಂನುವನೇಕೆ ? ಸರ್ವಜ್ಞ.

If there is heaven by eating a sacrificed he-goat, why hell to him, who eats always ?

1. ನಿತ್ಯ ತಿನ್ನುವವನು ಯಾಕೆ ಸ್ವರ್ಗಕ್ಕೆ ಹೋಗುವದಿಲ್ಲ; ಅವನು ತಿಂದದ್ದು ಹಿಂಡಿನಷ್ಟು ಆಗುವದು.

1083. ಮುನ್ನ ಮಾಡಿದ ಪಾಪ ಹೊಂನಿಲೀ ಪೋಪುದೇ ?
ಹೊನ್ನಿನ ಪುಣ್ಯವದು ಬೇರೆ ; ಪಾಪ ತಾ
ಮುನ್ನಿನಂತಿಹದು ; ಸರ್ವಜ್ಞ.

Remission of sins not by giving goid.

1084. ಬೆಂದಿರ್ದ [illegible] ಮುಂದೆ ತೋರಣ ವ್ಯಾಕೆ ?
ಸಂದ ಶೂದ್ರತಿವಡನಿರುವ ಬ್ರಾಹ್ಮಣಗೆ
ಮಿಂದೂಟವ್ಯಾಕೆ ? ಸರ್ವಜ್ಞ.

Decorations to a house burnt down, the ablutions of brahmans living in sin

THE SIGNS OF THE ZODIAC.

18. ರಾಶಿಪದ್ಧತಿ.

1085. ಕುರಿಯ[1]ನೇರಲು ಗುರುವು[2] ಧರೆಗೆ ಹೆಂಮಳೆ ಯುಕ್ಕು ;
ಪರಿಪರಿಯ ಧಾನ್ಯ ಬೆಳೆಯುಕ್ಕು ; ಪ್ರಜೆಗೆ
ಕರೆಯಲುಕ್ಕು ಪಶು ; ಸರ್ವಜ್ಞ.

Aries.

1. ಮೇಷ. 2. ಗ್ರಹಗಳಲ್ಲಿ ಒಂದು=ಬೃಹಸ್ಪತಿ.

1086. ವೃಷಭನೇರಲು ಗುರುವು, ವಸುಧೆಯೊಳು ಮಳೆ ಯಕ್ಕು ;
Taurus. ಶಿಶುಪಶುಸ್ತ್ರೀಯರು ಜಯಕ್ಕು ; ಜನರೆಲ್ಲ
ಮಿಸುನಿಯಂತಕ್ಕು ; ಸರ್ವಜ್ಞ.

1087. ಮಿಥುನಕ್ಕೆ ಗುರು ಬರಲು ; ಮಥನ ಲೋಕದೊಳಕ್ಕು ;
Gemini. ಪೃಥುವಿಯೊಳಗೆಲ್ಲ ಬರನಕ್ಕು ; ನರಪಶು
ಹತವಾಗಲಕ್ಕು ; ಸರ್ವಜ್ಞ.

1088. ಏಡಿ[1] ಯೇರಲು ಗುರುವು ; ನೋಡೆ ಕಡೆಮಳೆ ಯಕ್ಕು ;
Cancer. ನಾಡೊಳಗೆಲ್ಲ ಬೆಳೆ ಯಕ್ಕು ; ಪ್ರಜೆಗಳೂ
ಈಡೇರಲಕ್ಕು ; ಸರ್ವಜ್ಞ.

1. ಕರ್ಕಟ, ಕರ್ಕಾಟಕ.

1089. ಸಿಂಗಕ್ಕೆ ಗುರು ಬರಲು, ಸಂಗರವು ಘನವಕ್ಕು ;
Leo. [illegible]ನೆಯುರಿಗೆ ಬಾಧೆ ಯಕ್ಕು ; ಕಡೆಮಳೆ
ಹಿಂಗಾರಿ ಯಕ್ಕು ; ಸರ್ವಜ್ಞ.

1090. ಕನ್ಯಕ್ಕೆ ಗುರು ಬರಲು, ಚನ್ನಾಗಿ ಮಳೆ ಯಕ್ಕು ;
Virgo. ಚಂನಾಗಿ ಪಶುಕರೆಯಕ್ಕು ; ಮುಂಡನದ
ಕನ್ಯಯರು ಯಕ್ಕು ; ಸರ್ವಜ್ಞ.

1091. ತುಲವನೇರಲು ಗುರುವು, ನೆಲೆಯಾಗಿ ಮಳೆ ಯಕ್ಕು ;
Libra. ಫಲವುಧಾನ್ಯಗಳು ಬೆಳೆ ಯಕ್ಕು ; ಪ್ರಜೆಗೇ
ನಿಲಕಾಲ[1]ವುಕ್ಕು ; ಸರ್ವಜ್ಞ.

1. ನಿಲ್ಲುವ ಕಾಲ.

1092. ಚೇಳನೇರಲು ಗುರುವು ; ಕಾಳಗವು ಪಿರಿದಕ್ಕು ;
Scorpio. ಘೋಳಯಿಂ ಮಳೆ ಕಿರಿದಕ್ಕು ; ಬೆಳೆ ಯುಲ್ಲ
ಕೊೞಾಗಲಕ್ಕು ; ಸರ್ವಜ್ಞ.

1. ವೃಶ್ಚಿಕ.

1093. ಬಿಲ್ಲನೇರಲು ಗುರುವು, ತಲ್ಲಣವು ಜಗಕೆಲ್ಲ;
Sagittarius. ಕಲ್ಲ ಮೇಲೆಲ್ಲ ಬೆಳೆ ಯಕ್ಕು ; ನೃಪರಿಗೆ
ತಲ್ಲಣವಕ್ಕು ; ಸರ್ವಜ್ಞ.

1. ಧನು, ಧನುಸ್ಸು.

1094. ಮಕರಕ್ಕೆ ಗುರು ಬರಲು, ಮಕರತೋರಣವಕ್ಕು ;
Capricornus. ಸಕಲಧಾನ್ಯಗಳು ಬೆಳೆ ಯಕ್ಕು ; ಪ್ರಜೆಗಳು
ಸುಖವಿರಲಕ್ಕು ; ಸರ್ವಜ್ಞ.

1095. ಕುಂಭಕ್ಕೆ ಗುರು ಬರಲು ; ತುಂಬ್ಯಾವು ಕೆರೆ ಭಾವಿ ;
Aquarius. ಸಂಭ್ರಮದಿಂದ ಬೆಳೆ ಯಕ್ಕು ; ಮರ್ತ್ಯದೊಳು
ಯುಂಬೊದಿಮು ಶಿದ್ಧ ; ಸರ್ವಜ್ಞ.

1096. ಮೀನಕ್ಕೆ ಗುರು ಬರಲು, ಮಾನ ಖಂಡಗವಕ್ಕು ;
Pisces. ಕಾನನವೆಲ್ಲ ಬೆಳೆ ಯಕ್ಕು ; ಪ್ರಜೆಗಳ್ಗೆ
ಆನಂವದಕ್ಕು ; ಸರ್ವಜ್ಞ.

ಮಂಗಳ, ಬೃಹಸ್ಪತಿ, ಶನಿ, ಶುಕ್ರ, ಬುಧ ಎಂಬೀ ಯೈದು ಮಾತ್ರ ಗ್ರಹಗಳ ಲೆಖ್ಖದಲ್ಲಿ ರತಕ್ಕದು. ರಾಹು, ಕೇತು, ಸೂರ್ಯ, ಚಂದ್ರ ಎಂಬಿವು ಗ್ರಹಗಳೊಳಗಲ್ಲ.

ASTROLOGY AND ASTRONOMY.

19. ಜ್ಯೋತಿಷ್ಯ ಪದ್ಧತಿ.

1097. ರಂಧ್ರಗತಿಯಾದಿತ್ಯರೊಂದಾಗಿ ಯರ್ಥಿಸುತ
ಅಂದಿನಾ ತಿಥಿಯನೊಡಗೂಡೆ, ನಕ್ಷತ್ರ
ಮುಂದೆ ಬಂದಕ್ಕು ; ಸರ್ವಜ್ಞ.

Computation of the 27 lunar mansions.

1. ದೇಹದಲ್ಲಿ ಒಂಭತ್ತು ರಂಧ್ರಗಳಿರುವದರಿಂದ, ಈಶಬ್ದ ಒಂಭತ್ತಕ್ಕೆ ಸಾಜ್ಞೆ. ರಂಧ್ರಗತಿ=ಸೂರ್ಯ ಹಾದು ಹೋಗುವ ೯ನೇ ಸ್ಥಾನ. (೧೨ ರಾಶಿಗಳು ೧೨ ಸ್ಥಾನಗಳಾಗಿವೆ.) ಯಾವದೊಂದು ದಿವಸದ ನಕ್ಷತ್ರ ತಿಳಿಯಬೇಕಾದರೆ, ಆದಿವಸ ಸೂರ್ಯವಿರುವ ರಾಶಿಗೆ ಧನುರಾಶಿಯಿಂದ (ಇದು ೯ನೇದು) ಎಣಿಸಿ ಬಂದಷ್ಟರಲ್ಲಿ ಆ ದಿವಸದ ತಿಥಿಯು ಕೂಡಿಸಲಾಗಿ, ಯಾವ ಸಂಖ್ಯೆ ಹೊರಡುತ್ತದೋ, ಅದರಲ್ಲಿ ಒಂದನ್ನು ಕಳೆದು ಉಳಿದ ಸಂಖ್ಯೆಯ ನಕ್ಷತ್ರವಿರುವದು. ಉದ: ೧೮೬೨ನೇ ಇಸವಿ ೧ನೇ ಜುಲೈ ; ಈ ದಿವಸದ ತಿಥಿ: ಆಷಾಡ ಶು|| ೪. ಈ ದಿವಸ ಸೂರ್ಯ ಮಿಥುನರಾಶಿಯಲ್ಲಿರುವದರಿಂದ, ಧನುರಾಶಿಯಿಂದ ಎಣಿಸಿದರೆ ೭ ಬರುತ್ತದೆ. ಇದಕ್ಕೆ ನಾಲ್ಕು ಕೂಡಿಸಿದರೆ, ೧೧ ಬರುವದು. ಇದರಲ್ಲಿ ತಿರಿಗಿ ೧ ಕಳೆದರೆ, ೧೦ ಉಳಿಯುತ್ತದೆ. ಹತ್ತನೇ ನಕ್ಷತ್ರ ಮಘ, ಈ ಪ್ರಕಾರ ನೋಡಬೇಕು. ಬಹುಳ ಪಕ್ಷವಾದರೆ, ಶುದ್ಧ ಪಕ್ಷದ ಹದಿನೈದು ತಿಥಿಗಳಲ್ಲದೆ, ಆ ಬಹುಳ ಪಕ್ಷದ ತಿಥಿಗಳನ್ನು ಸಹಾ ಕೂಡಿಸಲಾಗಿ ಇಪ್ಪತ್ತೇಳಕ್ಕಿಂತ ಹೆಚ್ಚಿನ ಸಂಖ್ಯೆ ಕೂಡಿ ಬಂದರೆ, ನಕ್ಷತ್ರ ಸಂಖ್ಯೆ ೨೭ ಕಳೆದು ಉಳಿದ ಸಂಖ್ಯೆ ವೆಷ್ಟೋ ಅಷ್ಟನೇ ನಕ್ಷತ್ರ ಸರಿ.

ಉದ: ೧೮೬೨ ಇಸವಿ ೨೫ ಜುಲೈ; ಈ ದಿವಸದ ತಿಥಿ ಆಷಾಡ ಬ|| ೧೪. ಈದಿವಸ ಸೂರ್ಯ ಕರ್ಕಾಟಕದಲ್ಲಿರುತ್ತಾನೆ. ಧನುರಾಶಿಯಿಂದ ಕರ್ಕಾಟಕ್ಕೆ ಎಣಿಸಿದರೆ ೮ ಬರುತ್ತದೆ. ತಿಥಿಗಳು ಶುದ್ಧ ಪಕ್ಷದವು ೧೫ ಬಹುಳ ಪಕ್ಷದವು ೧೪ ಅಂತು ೨೯ ಬರುವದು. ಇದಕ್ಕೆ ೮ ಕೂಡಿಸಲಾಗಿ ೩೭ ಬರುವದು. ಇದರಲ್ಲಿ ಒಂದು ಕಳದರೆ ೩೬ ಉಳಿಯುವದು ಇದರಲ್ಲಿ ನಕ್ಷತ್ರ ಸಂಖ್ಯೆ=೨೭ ಹೋಗಲಾಗಿ ೯ ಉಳಿಯುವದು ಅಂದರೆ ಈ ದಿವಸದಲ್ಲಿ ೯ನೇ ನಕ್ಷತ್ರ ವಿರುತ್ತದೆ. ಅದು ಆಶ್ಲೇಷ.

1098. ಸಂದಿದ್ದ ಮಾಸವನು ಕುಂದದಿಂಮಡಿ ಮಾಡಿ
ಅಂದಿನ ತಿಥಿಯನೊಡಗೂಡಲಾತಾರೆ
ಮುಂದೆ ಬಂದಿಹುದು ; ಸವಜ್ಞ.

Another method of that computation.

ಉದ: ೧೮೬೨ ಇಸವಿ ೧ನೇ ಜುಲೈ, ಈ ದಿವಸ ಯುಗಾದಿ ಹಿಡಿದು ಸಂದಿದ್ದ ಮಾಸ ೩.

ಇದನ್ನು ಇಮ್ಮಡಿ ಮಾಡಲಾಗಿ ೬ ಬರುತ್ತದೆ. ಈ ದಿವಸದ ತಿಥಿ ೩ ಹೀಗೆ ಇರಲಾಗಿ ೧೦ನೇ ನಕ್ಷತ್ರ ಬಂತು—ಆದರೆ ಖಂಡ ತಿಥಿಗಳು ಬಂದ ದಿವಸ ನೋಡಿದರೆ ಸ್ವಲ್ಪ ತಪ್ಪುವದು. ಉದ: ೧೮೬೦ ಇಸವಿ ೨೪ ಜೂಲೈ; ಈ ದಿವಸದ ತಿಥಿಗಳು ಕೂಡಿ ೨೯, ಸಂದಿದ್ದ ಮಾಸ ೬ ಇವನ್ನು ಕೂಡಿಸಲಾಗಿ ೩೫ ಬರುವದು. ಇದರಲ್ಲಿ ೨೭ ಕಳೆದರೆ ೮ ಉಳಿಯುವದು, ಆದರೆ ಈ ದಿವಸದ ನಕ್ಷತ್ರ ಆಶ್ಲೇಷಾ ಇದು ೯ನೇ ನಕ್ಷತ್ರ.

1099. ಮೃಗಶಿರಾದಿಯು ಮೂರು ಭಗಣದಲಿ ರವಿ ಯಿರಲು,

Signs of an abundant rainy season.

ಮಘಿಯ ರಿಕ್ಷವನು ಶಶಿ ತೊಲಗೆ, ಮಳೆಗಾಲ

ಜಗಕೆ ಯಿಬ್ಬಡಿಯು; ಸರ್ವಜ್ಞ.

1. ಆರಿದ್ರ ಪುನರ್ವಸು ನಕ್ಷತ್ರಗಳಲ್ಲಿ ಸೂರ್ಯನು ಈ ೨ ನಕ್ಷತ್ರಗಳನ್ನು ತಿಂಗಳಿಗೆ ಎರಡರಂತೆ ಕಳೆದು ಹೋಗುತ್ತಾನೆ; ಆದರೆ ಚಂದ್ರನು ದಿನಕೊಂದರ ಪ್ರಕಾರ ಅವನ್ನೆಲ್ಲ ಬಂದು ತಿಂಗಳೊಳಗೆ ದಾಟಿ ಹೋಗುತ್ತಾನೆ. ಸೂರ್ಯನು ಪುನರ್ವಸುವಿನಲ್ಲಿ ಬಂದ ದಿವಸ ಚಂದ್ರನು ಮಘ ನಕ್ಷತ್ರ ಬಿಟ್ಟಿರಬೇಕು; ಹಾಗೆ ಯೋಗವಾದರೆ ಆ ವರುಷದ ಮಳೆಗಾಲ ಹೆಚ್ಚು ಅಂತ ತಿಳಿಯಬೇಕು.

1100. ಅಗಿಯು ಹುಂಣಿವಿ ಹೋದ ಮಿಗೆ ಮೂರು ದಿವಸಕ್ಕೆ

Another sign of a good rainy season.

ಮೃಗಧರನ ಕೂಡೆ ಮೃಗವಿರಲು, ಮಳೆಗಾಲ

ಜಗ ದಣಿಯಲಕ್ಕು; ಸರ್ವಜ್ಞ.

1. ಮೃಗಶಿರ ನಕ್ಷತ್ರ.

1101. ಅಡಿಯನಿಂಮಡಿ ಮಾಡಿ ಪೊಡಗೂಡಿ ಹಂನೊಂದ

Computation of the hour of the day.

ತಡೆಯದಿಂನೂರವತ್ತಕೆ ಭಾಗಿಸಲು,

ನಡದ ಘಳಿಗೆಕ್ಕು; ಸರ್ವಜ್ಞ.

ತನ್ನ ದೇಹಛಾಯೆ ತನ್ನ ಪಾದದಿಂದ ಅಳೆದು ಎಷ್ಟು ಅಡಿಗಳಾಗುತ್ತವೋ, ಅಷ್ಟನ್ನು ಇಮ್ಮಡಿ ಮಾಡಿ ಅದಕ್ಕೆ ಹಂನೊಂದನ್ನು ಕೂಡಿಸಿ ಬಂದಷ್ಟರಿಂದ ೧೦೦ ಭಾಗಿಸಬೇಕು. ಭಾಗಾಕಾರ ಬಂದದ್ದನ್ನು ಘಳಿಗೆ ಅಂತ ತಿಳಿಯಬೇಕು. ಆರು ತಾಸಿನೊಳಗಾಗಿ ನೋಡಿದರೆ, ಭಾಗಾಕಾರ ಬಂದಷ್ಟು ಘಳಿಗೆ ಆಗಿದೆ ಅಂತ ತಿಳಿಯಬೇಕು. ಆರು ತಾಸು ಆದ ಮೇಲೆ ನೋಡಿದರೆ, ಭಾಗಾಕಾರ ಬಂದಷ್ಟು ಘಳಿಗೆಗಳು ಹೊತ್ತು ಮುಣುಗಲಿಕ್ಕೆ ಇನ್ನು ಉಳಿಯುತ್ತವೆಂತ ತಿಳಿಯಬೇಕು.

ಉದ : ದೇಶದ ಛಾಯ ೧೦ ಅಡಿ ಅದೆ. ೧೦+೧೦=೨೦. ೨೦+೧೧=೩೧ ಮೇಂ

೩೧) ೨೧೧ (೬
೧೮೬
೨೫

ಜಾನೆಯಲ್ಲಿ ಛಾಯ ಹೀಗಿದ್ದರೆ, ೬|೨೫ ಆಗೆವೆಂತ ತಿಳಿಯಬೇಕು. ಆರು ತಾಸಿನ ಮೇಲೆ ದೇಶದ ಛಾಯ ಇಷ್ಟಾದರೆ ಹೊತ್ತು ಮುಣಗಲಿಕ್ಕೆ ಇನ್ನು ೬|೨೫ ಉಳಿಯುತ್ತವೆಂತ ತಿಳಿಯಬೇಕು.

1102. ಚಂದ್ರಮಾರ್ತಾಂಡರನು ಸಂದಿಸಿಯೆ ಪರಿವೇಷ
ಕುಂದದೇ ನಿಚ್ಚ ಬರುತಿರಲು, ಜಗವೆಲ್ಲ
ಕುಂದಣಿಗೆ ಯಕ್ಕು ; ಸರ್ವಜ್ಞ.

Every day a halo round the sun and moon, a bad sign.

1103. ಹೊತ್ತಾರೆ ನೆರವುದದು ಹೊತ್ತೇರೆ, ಹರವುವದು
ಕತ್ತಲೆಯ ಬಣ್ಣಮುಗಿಲಾಗೆ, ಮಳೆಯು ತಾ
ನೆತ್ತಣದೈಯು ? ಸರ್ವಜ್ಞ.

Signs of rain not coming.

1104. ವಾಯು ವಾಯುವ ಕೂಡೆ, ವಹಿಲದಿಂ ಮಳೆ ಯಕ್ಕು ;
ವಾಯು ನೈರುತಿ ಯೊಡಗೂಡೆ, ಮಳೆಯು ತಾ
ವಾಯುವೇ ಯಕ್ಕು ; ಸರ್ವಜ್ಞ.

Signs of rain coming, and not coming.

1105. ಆಳಿವಣ್ಣ[1]ದಾಕಾಶ, ಗಿಳಿವಣ್ಣದಾ ಮುಗಿಲು,
ಅಳದಳದುಮರ್ಕನುದಯಿಸಲು ಮಳೆಯು ತಾ
ತಳುವದೇ ಬಕ್ಕು ; ಸರ್ವಜ್ಞ.

Different signs of rain.

1. ಭೃಂಗ=ಕಪ್ಪು.

1106 ಅಡರಿ ಮೂಡಲು ಮಿಂಚೆ, ಪಡವಲಕೆ ಧನು[1] ವೇಳೆ,
ಬಡಗಣದ ಘಾಳಿ ಕಡು ಬೀಸೆ, ಮಳೆಯು ತಾ
ತಡೆಯದಲೆ ಬಕ್ಕು ; ಸರ್ವಜ್ಞ.

ಇಂದ್ರ ಚಾಪ, ಮಳೆ ಬಿಲ್ಲು.

1107. ತೆಂಕಲಕೆ ಮುಗಿಲಡರೆ, ಶಂಕರನ ದೆಸೆ ಮಿಂಚೆ,
ಪಂಕಜಾರಾತಿ ಗುಡಿಗಟ್ಟೆ, ಮಳೆಯು ತಾ
ಛೋಂಕನೆ ಬಕ್ಕು ; ಸರ್ವಜ್ಞ.

1108. ತಳಗಿಗೆಯು ತಲೆ ಯಿಲ್ಲ; ಮಳೆಗೆ ಜೋಯಿಸರಿಲ್ಲ;
ಬೆಳಗಾಗಿ ಕಂನಗಳವಿಲ್ಲ ; ಲೋಕದಿ
ವುಳಗಾಲವಿಲ್ಲ; ಸರ್ವಜ್ಞ.

There is no abiding in this world.

1109. ಪಸಿವರೆ, ವ್ರುಣಲಿಲ್ಲ, ಪಸದೇಳ ಹೊತ್ತಿಲ್ಲ ;
ಬೆಸಗೊಂಬೊದಕ್ಕೆ ಗಡಿಯಿಲ್ಲ ; ಜೊಯ್ಸರ
ಫಸಣಿಯು ಸಲ್ಲ; ಸರ್ವಜ್ಞ.

The annoyance of astrologers is not proper.

1110. ಹಿಡಿಯುವದು ಹೆಬ್ಬಾವು: ಪಡೆಯುವದು ಪಡಿಭತ್ತ ;
ಹುಡಿಕಿ ನೋಡುವದು ಪರಬೊಂದು : ಜೊಯಿಸಗೆ
ಕೊಡುವದೊಂದಣಿಕೆ ; ಸರ್ವಜ್ಞ.

Catching a large serpent, the business of astrologers.

1. ಜೋಯಿಸರ ಕೆಲಸ ಬಹಳ ದೊಡ್ಡದು ತೋರುತ್ತದೆ ಆದರೆ ಪ್ರಾಪ್ತಿ ಸ್ವಲ್ಪ.

1111. ಗತವಾದ ಮಾಸವನು ಗತಿಯಿಂದ ದ್ವಿಗುಣಿಸಿ
ಪ್ರತಿಪದಾದಿಗಳನೊಡಗೂಡಲಾಕರಣ
ಪತಿಕರಿಸಿ ಬಕ್ಕು ; ಸರ್ವಜ್ಞ.

Computation of constellations.

ಬವ ಬಾಲವ ಕೌಲವ ತೈತುಲ ಗರಜ ವಣಜ ಭದ್ರ ಶಕುನಿ ಚತುಷ್ಪಾತ್ ನಾಗವಂ ಕಿಮಸ್ತುಘ್ನಂ ಎಂಬೀ ಹಂನೊಂದು ಕರಣಗಳು ಅವೆ. ದಿನ ಬಂದಕ್ಕೆ ಎರಡು ಅತೀತವಾಗುತ್ತವೆ, ಆದ್ದರಿಂದ ಐದುವರೆ ದಿನಸಕ್ಕೆ ಬಂದಾವರ್ತಿ ತೀರುತ್ತಾ ಬರುತ್ತವೆ.

1. ಉದ: ೧೮೬೨ ಇಸಿವಿ ೧ನೇ ಜೂಲೈ. ಚೈತ್ರ ವೈಶಾಖ ಜೇಷ್ಟ ಎಂಬೀ ಮೂರ ಮಾಸಗಳು ಹೋಗಿವೆ. ಹಾಗಾದರೆ ೩×೨ ದ್ವಿಗುಣಿಸಬೇಕು. ೩×೨=೬. ಪ್ರತಿಪದ= ಪಾಡ್ಯಮೊದಲಾದ ತಿಥಿಗಳು. ಈ ದಿವಸಕ್ಕೆ ನಾಲ್ಕು ಆಗಿವೆ, ಹಾಗಾದರೆ ೬+೪=೧೦. ಈ ಪ್ರಕಾರ ಈ ದಿವಸಕ್ಕೆ ಇರುವ ಚತುಷ್ಪ ಕರಣ ಹೊರಡುತ್ತದೆ.

2. ಉದ: ೧೮೬೨ ಇಸವಿ ೨೯ನೇ ಮಾರ್ಚಿ. ೧೧×೨=೨೨+೨೯ (ತಿಥಿಗಳು)=೫೧−೪೪=೭

ಈ ಉದಾಹರಣೆಯಲ್ಲಿ ೫೧ ಎಂಬ ಸಂಖ್ಯದಲ್ಲಿ ೪೪ ಕಳೆಯ ಬೇಕಾಯಿತು, ಯಾಕಂದರೆ ೧೧ ಕರಣಗಳು ಮಾತ್ರ ಅವೆ.

1112. ಆದಿಯಾ ಮಾಸವನು ವೇದ[1]ದಿಂವಲಿ ಗುಣಿಸಿ
Computation of constellations — ಆದಿನದ ತಿಥಿಯನೊಡಗೂಡಿ ಯೋ[2]ಗವು
ಆದಿಯಲಿ ಬಕ್ಕು ; ಸರ್ವಜ್ಞ.

1. ನಾಲ್ಕಕ್ಕೆ ಸಾಂಜ್ಞೆ. ೨. ಯೋಗಗಳು ೨೭ ಅವೆ. ೧೬ನೇ ಯೋಗ ಹೊರಡುತ್ತದೆ.
1. ಉದ: ೧೮೬೨ ಇಸವಿ ೧ನೇ ಜುಲೈ. ೩×೪=೧೨+೪ (ತಿಥಿ)=೧೬.
2. ಉದ: ೧೮೬೨ ಇಸವಿ ೨೯ನೇ ಮಾರ್ಚಿ. ೧೧×೪=೪೪+೨೯ (ತಿಥಿ) =೭೩−೫೪ =೧೯. ೧೯ನೇ ಯೋಗ ಹೊರಡುತ್ತದೆ.

೨೭ ಯೋಗಗಳು ಯಾವವೆಂದರೆ : ವಿಷ್ಕಂಭ ಪ್ರೀತಿ ಆಯುಷ್ಮಾನ್ ಸೌಭಾಗ್ಯ ಶೋಭನ ಅತಿಗಂಡ ಸುಕರ್ಮ ಧೃತಿ ಶೂಲ ಗಂಡ ವೃದ್ಧಿ ಧ್ರುವ ವ್ಯಾಘಾತ ಹರ್ಷಣ ವಜ್ರ ಸಿದ್ಧಿ ವ್ಯತಿಪಾತ ವರಿಯಾನ್ ಪರಿಘ ಶಿವ ಸಿದ್ಧ ಸಾಧ್ಯ ಶುಭ ಶುಕ್ಲ ಬ್ರಹ್ಮ ಐಂದ್ರ ವೈಧೃತಿ.

1113. ನಂದೆಯನು ಭದ್ರೆಯನು ಒಂದಾಗಿ ಯರ್ಥಿಸಿದು
Computation of eclipses. — ಅಂದಿನ ತಿಥಿಗೆ ಸಮನಾಗೆ. ಗ್ರಹಣ ತಾ
ಮುಂದೆ ಬಂದಿಮದು : ಸರ್ವಜ್ಞ.

ತಿಥಿಗಳಲ್ಲಿ ನಂದೆ ಭದ್ರೆ ರಿಕ್ತ ಪೂರ್ಣ ಜಯ ಎಂಬೀ ೫ ವಿಧಗಳವೆ. ಒಂದೊಂದು ವಿಧಕ್ಕೆ ಮೂರು ತಿಥಿಗಳು.

RIDDLES.

20. ಒಗಟು.

1114. ಕಲ್ಲರಳಿ ಹುವ್ವಾಗಿ ಯಲ್ಲರಿಗೆ ಬೇಕಾಗಿ
Lime. — ಮಲ್ಲಿಕಾರ್ಜುನನ ಸಿಖರಕೆ ಬೆಳಕಾಗಿ
ಬಲ್ಲವರು ಹೇಳಿ ! ಸರ್ವಜ್ಞ.

1115. ಮರನೊತ್ತಿ ಬೇಯುವದು! ಮುರಿ[1] ತಾಕಿ ಬೇಯ್ಯದದು!
Lightning and thunder. ಪುರಗಳ ನುಂಗಿ ಬೊಗಳುವದು! ಲೋಕದಲಿ
ನರನಿದೇನೆಂಬ? ಸರ್ವಜ್ಞ.

1. ಉರಿಗೆ ತಾಕಿದರೆ.

1116. ಉರಿ ಬಂದು ಬೇಲಿಯನು ಹರಿದು ಹೊಕ್ಕದ ಕಂಡೆ.
Sunshine. ಅರಿದಿದು ಬಗೆಗೆ; ಕವಿಕುಲದ ಶ್ರೇಷ್ಠರೇ!
ಅರಿತಿವನು ಪೇಳ! ಸರ್ವಜ್ಞ.

1117. ಕಾಲಿಲ್ಲವಲೆ ಹರಿಗು; ತೋಳಲ್ಲವತಿ ಹೊರುಗು;
Flowing water. ನಾಲಿಗಿಲ್ಲದಕೆ ಯುಲಿವದು; ಕವಿಕುಲದ
ಮೇಲುಗಳೆ! ಪೇಳ! ಸರ್ವಜ್ಞ.

1118. ಇರಿದರೆಯು ಯೇರಿಲ್ಲ; ಹರಿದರೆಯು ಶೀಳಿಲ್ಲ;
Fire. ತಿರಿಗೂಳ ಕೊಂಡ ರುಣವಿಲ್ಲ; ಕವಿಗಳೆ!
ಅರಿವರಿದು ಹೇಳ! ಸರ್ವಜ್ಞ.

1119. ಅಡಿದರೆ, ಅಡದದು; ಮೋಡಿ. ಮರನೇರುವದು;
Wire or string on a guitar. ಕೂಡದೆ ಕೊಂಕಿ ನಡೆಯುವದು; ಕಡವರದು
ಬಾಡದು; ಹೇಳ! ಸರ್ವಜ್ಞ.

1. ಓಡಲಾಗಿ.

1120. ಕತ್ತಿಗ್ಗರಿವುತ್ತಿಹುದು; ಸುತ್ತಿ ಬರುತ್ತೇಳುವದು;
Hair. ಕಿತ್ತು ಬಿಸಾಡಲು, ನಡೆದದು[1]; ಕವಿಜನರೆ!
ಅರ್ಥಿಯಿಂ ಹೇಳ! ಸರ್ವಜ್ಞ.

1. ಭೂಮಿಯಲ್ಲಿ ನಡಲಿಕ್ಕಿಲ್ಲ.

1121. ಕಚ್ಚಿದರೆ, ಕಚ್ಚುವದು ; ಕಿಚ್ಚಲ್ಲ, ಚೇಳಲ್ಲ,
Pepper. ಆಚ್ಚರ್ಯವಲ್ಲಅರಿದಲ್ಲ ಯೀಮಾತು
ನಿಚ್ಚಯುವಲ್ಲೆ[1] ; ಸರ್ವಜ್ಞ.

1. ಬಲ್ಲೆ.

1122. ಹತ್ತು [1]ಸಾವಿರ ಕಂಣು; ನೆತ್ತಿಲಾದರು ಬಾಲ ;
Peacock. ಪುತ್ತಿನ ಪುಳವ ಹಿಡಿದಿಹುದು ; ಕವಿಜನರ
ಮೊತ್ತವಿದೇನ್ಹೇಳಿ ! ಸರ್ವಜ್ಞ.

1. ಸಹಸ್ರಾಕ್ಷ.

1123. ತಂನ ಸುತ್ತಲು ಮಣೆಯು ; ಬೆಂಣಿ ಕುಡಿವಾಲುಗಳ
A split bamboo with ropes suspended from each end, &c., for carrying milk. ತಿಂಸದೆ ಹಿಡದು ತರುತಿಹುದು ; ಕವಿಗಳದ
ನಂನಿಯಿಂ ಹೇಳಿ ! ಸರ್ವಜ್ಞ.

1124. ಬಟ್ಟಲವ ಬಾಯ್ಯಂತೆ ಹುಟ್ಟುವದು; ಲೋಕದೊಳು
The sun. ಮುಟ್ಟದು ತನ್ನ ಹೆಂಡರನು ; ಕವಿಗಳೊಳು
ಛಿಟ್ಟರಿದನ್ಹೇಳಿ ! ಸರ್ವಜ್ಞ.

1125. ಪಲ್ಲು ನಾಲಿಗೆ ಯಿಲ್ಲ; ಸೊಲ್ಲು ಸೋಜಿಗವಲ್ಲ ;
Net. ಕೊಲ್ಲದೆ ಮೃಗವ ಹಿಡಿಯುವದು ಲೋಕದೊಳ
ಗೆಲ್ಲ ತಾವಿನೊಳು ; ಸರ್ವಜ್ಞ.

1126. ಅಸನದಲುಂಬುವದು ; ಸೂಸುವದು ಬಾಯಲ್ಲಿ ;
An artificial fountain ಬೇಸರದೆ ಹೊತ್ತು ಕೊಲುವದು ; ಕವಿಗಳೊಳು
ಸಾಸಿಗಳು ಹೇಳಿ ! ಸರ್ವಜ್ಞ.

1127. ಹಲವು ಮಕ್ಕಳ ತಂದೆ ; ತಲೆಯಲ್ಲಿ ಜುಟ್ಟವಗೆ ;
Cock and hen. ಸಲೆ ಘಳಿಗೆ ಜಾವವರಿವನ ಹೆಂಡತಿಗೆ
ಮೊಲೆಯಿಲ್ಲ, ನೋಡು ! ಸರ್ವಜ್ಞ.

1128. ಮಲ್ಲಿಗೆಗೆ ಹುಳಿಯುಕ್ಕು ; ಕಲ್ಲಿಗೇ ಗಂಟುಕ್ಕು ;
Quibble. ಹಕ್ಕಿಗೆ ನೊಣನುಸವಿ ಯುಕ್ಕು ; ಕನ್ನಡದ
ಸೊಲ್ಲುಗಳ ನೋಡು ! ಸರ್ವಜ್ಞ.

1. ಈಶಬ್ದಗಳಲ್ಲಿ ಒಂದೊಂದಕ್ಕೆ ಎರಡು ಅಭಿಪ್ರಾಯಗಳವೆ.

1129, ಮಣಿಯ ಮಾಡಿದನೊಬ್ಬ ; ಹೊಣದು ಕಟ್ಟಿದನೊಬ್ಬ ;
1. Loom; 2. warp; 3. weavers' shuttle ; 4. cloth. ಕುಣಿದಾಡಿ ಸತ್ತವನೊಬ್ಬ ; ಸಂತೆಯೊಳು
ಹೆಣನ ಮಾರಿದನು ! ಸರ್ವಜ್ಞ.

1130. ಎಂಟು ಬಳ್ಳದ ನಾವು ; ಗಂಟಲಲಿ ಮುಳ್ಳುಂಟು ;
Smith's tongs. ಬಂಟರನು ಹಿಡಿದು ಬಡಿಸುವು ; ಕವಿ ಯೆಂಬ
ತೊಂಟರಿದ ಹೇಳಿ ! ಸರ್ವಜ್ಞ.

RAJASHEKHARA (A POEM.)

ರಾಜಶೇಖರ.

ಪೀಠಿಕೆ.

ಚೋಳದೇಶದ ಅರಸನಾದ ಸತ್ಯೇಂದ್ರನಿಗೆ ರಾಜಶೇಖರ ಎಂಬುವ ಮಗನು ಜನನವಾಗಿ ಬೆಳದಮೇಲೆ, ಸಿಂಹಳದೇಶದ ರಾಜನನ್ನು ಗೆದ್ದು ಅವನ ಮಗಳನ್ನು ಮದಿವೆ ಮಾಡಿಕೊಂಡು ರಾಜ್ಯ ಮಾಡುವಾಗ್ಯೆ, ಒಂದು ದಿವಸ ಕುದುರೆ ವೈಹಾಳಿಯ ವೇಳ್ಯಕ್ಕೆ ಪ್ರಧಾನಿಯ ಮಗನ ಕುದುರೆ ಒಬ್ಬ ಹುಡಗನನ್ನು ತುಳಿದದರಿಂದ, ಅವನು ಸತ್ತನು. ಸತ್ಯೇಂದ್ರನು, ತುಳಿದ ಕುದುರೆಯುವನ ತಲೆ ಹೊಡಿಸ ತಕ್ಕದ್ದು, ಅದಾವು ? ಅಂತ ವಿಚಾರ ಮಾಡುವಾಗ್ಯೆ, ನಾನು

ಮಾಡುವ ಕೆಲಸದಲ್ಲಿ ಯಾರು ಏನು ತಪ್ಪು ಮಾಡಿದಾಗ್ಯು, ನನ್ನದದೆ, ನನ್ನ ತಲೆಯನ್ನೆ ಕೊಡುತ್ತೇನೆ ಎಂದು ರಾಜಶೇಖರ ಹೇಳಿದಕ್ಕೆ, ಸತ್ಯೇಂದ್ರನು ತನ್ನ ಮಗನ ತಲೆ ಹೊಡಿಸಿದನು. ಆಮೇಲೆ ಪ್ರಧಾನಿಯ ಮಗನು ನನ್ನ ತಪ್ಪಿಗಾಗಿ ಹೀಗಾಯಿತೆಂದು ತಾನು ಕುತ್ತಿಗೆ ಕೊಯಿಕೊಂಡನು. ಇಂಥಾ ಮಕ್ಕಳು ಇಬ್ಬರು ಸತ್ತಮೇಲೆ, ನಾವು ಯಾಕಿರಬೇಕ ಎಂದು ಆರಾಜನೂ ಪ್ರಧಾನಿಯೂ ಜೀವ ಬಿಟ್ಟರು. ಆಮೇಲೆ ಈ ನಾಲ್ವರ ಹೆಂಡರು ಕುತ್ತಿಗೆ ಕೊಯಿಕೊಳ್ಳಬೇಕೆಂದು ಕೈಯೊಳಗೆ ಕತ್ತಿ ಹಿಡಕೊಂಡು ಸಿದ್ಧವಾಗೋಣ ಈಶ್ವರ ಮೆಚ್ಚಿ ಈ ನಾಲ್ವರನ್ನು ಮೊದಲು ತುರಿಸಿಕೊಂಡು ಸತ್ತ ಹುಡುಗನು ಸಹಿತವಾಗಿ ಬದಕಿಸಿ ಅವರೆಲ್ಲರನ್ನು ಕೈಲಾಸಕ್ಕೆ ತಕ್ಕೊಂಡನು. ಈ ಕಥೆ ಸ್ಕಂದ ಪುರಾಣದಲ್ಲಿ ಇರುವಂಥಾದು. ಸಂಸ್ಕೃತದಿಂದ ಇದ್ದದನ್ನು ದ್ರವಿಳ ಕವಿಗಳು ತಮ್ಮ ಭಾಷೆಯಲ್ಲಿ ಮಾಡಿದರು. ಇದನ್ನು ಗುಬ್ಬಿ ಮಲ್ಲಣಾರ್ಯನೆಂಬ ಕವಿ ವಾರ್ಧಿಕಪದ್ಯರೂಪವಾಗಿ ಭಾವಚಿಂತಾರತ್ನ ಎಂಬ ಹೆಸರಿಟ್ಟು ಕನ್ನಡಿಸಿದನು. ಇತ್ತಕಡೆ ಶಾಲಿವಾಹನಶಕ ೧೫೬೫ನೇ ವರುಷದಲ್ಲಿ ಅಂದರೆ ೨೦೯ ವರುಷದ ಕೆಳಗೆ ಬಿದರೂರ ನಗರದಲ್ಲಿ ವಿರಕ್ತಮಠದಲ್ಲಿದ್ದ ಚಿಕ್ಕ ವೀರೈಯನ ಶಿಷ್ಯ ಷಡಕ್ಷರಿಯೈಯು ಎಂಬ ಕವಿ ಆ ನಗರದ ಅರಸಿನ ಹೇಳಿಕೆಯ ಮೇಲಿಂದ ವಸ್ತುಕರೂಪವಾಗಿ ರಾಜಶೇಖರವಿಲಾಸ ಎಂಬ ಹೆಸರಿಟ್ಟು ಅದನ್ನು ಹೊಸದಾಗಿ ರಚಿಸಿದನು.

ಈ ಕವಿ ಮೊದಲು ಬ್ರಾಹ್ಮಣನೆ; ದೊಡ್ಡ ಪಂಡಿತನಾಗಿ ಬಿದರ ನಗರದ ರಾಜನಲ್ಲಿ ದೇಶಾವಾರಕ್ಕೆ ಹೋದಾಗ್ಯೆ, ಇವನ ವಿದ್ಯಕ್ಕೆ ಅಗಾಧ ಪಟ್ಟನು. ಆರಾಜನು ಲಿಂಗವಂತನು ತಮ್ಮ ಕುಲದಲ್ಲಿ ಇಂಥಾ ಪಂಡಿತನು ಇರಬೇಕು ಅಂತ ಆಶೆ ಹಿಡಿದು ಅವನಿಗೆ ಜುಲುಮೆ ಮಾಡಿ ತನ್ನ ಅರಸತನದ ಬಲದಿಂದ ಜಂಗಮ ದೀಕ್ಷೆ ಮಾಡಿಸಿ ಷಡಕ್ಷರಿ ಎಂಬ ಹೆಸರಂನಿಡಿಸಿ ತನ್ನ ನಗರದ ವಿರಕ್ತಮಠದ ಪಟ್ಟ ಕಟ್ಟಿಸಿದನು. ಹೀಗೆ ಜನರಲ್ಲಿ ಹೇಳುವದು ಉಂಟು.

1. ಪೀಠಿಕಾಪ್ರಾಸ.

ಚಂಪಕಮಾಲಾ ವೃತ್ತ.

1131. ಬರೆಬರೆದಂತೆದಂ ತೊಡೆದು ತೊಟ್ಟನೆ ನಿಟ್ಟಿಸಿ ಮೇಲನೊಂದಮಂ[1]
ಸರಸಪದಾರ್ಥಮಂ ತಡಕಿ ಕಾಣದೆ, ಕಳ್ದು ಪರೋಕ್ತಿಯುಕ್ತಿಯಂ
ವಿರಚಿಸುತಂತುಮಿಂತುಮಳಿಗಬ್ಬಮನಾಗಿಸಿ ಕೇಳಿಸುತ್ತೆ, ಕಾ
ಲುರಿಚರ[3] ತೋರ್ಪದುಷ್ಕವಿಮಹಾಕವಿಮಧ್ಯದೊಳೊಪ್ಪಲಾರ್ಪನೆ?

A bad poet, who is a plagiarist.

ದುಷ್ಕವಿಯನ್ನು ವರ್ಣಿಸುತ್ತಾನೆ. 1. ಮೇಲೆ ನೋಡುವದು ಹ್ಯಾಗೆ ಮಾಡಲಿ ಎಂಬ ಆಲೋಚನ ಭಾವ. ಈಗ ಇದಕ್ಕೆ ಜಂತೆ ಎಣಿಸಿಕೊಳ್ಳುತ್ತಾ ಕುಳಿತಾನೆ ಅನ್ನುತ್ತಾರೆ.
3. ಷಷ್ಟಿ ಚತುರ್ಥ್ಯರ್ಥದಲ್ಲಿ ಬಂತು.

ಕಂದ.

1132. ಅಳಿಗಬ್ಬಿಗನೋರ್ವಂ ಮಂ

A bad poet a serpent having only one gem: a good poet like the sea full of gems.

ಜುಳಯುಕ್ತಿಯನೊಂದನೊಂದಿ ಸರಿ ವರ್ಪನೆ[1] ಯು

ರ್ಗಳ ಕವಿಗೆ? ರನ್ನವೊಂದಂ

ದಳೆದಹಿ ರತ್ನಾಕರಕ್ಕೆ; ಸರಿವಂದಪುದೇ ?

1. ಸರಿಬರ್ಪನೆ (ಬರುತ್ತಾನೆ.) ಸರಿಬಂದಪುದೆ ? ಬಕಾರಹೋಗಿ ವಕಾರವಾಯಿತು.— ದುಷ್ಕವಿ ಒಂದು ರತ್ನ ಹೆಡೆಯಲ್ಲಿ ಧರಿಸಿಕೊಂಡಿರುವ ಸರ್ಪನಂತೆ, ಸುಕವಿ ಬಹಳ ರತ್ನವುಳ್ಳ ಸಮುದ್ರದ ಹಾಗೆ ಇರುತ್ತಾನೆ.

1133. ಸಕಳಕಳಾ[1]ನಿಧಿ ನಿಕಟದೆ

A good poet, the moon; a good poem, the sea.

ಸುಕರರಸಪ್ರಕಟ ಕಾವ್ಯಮೆಂಬಮೃತಪಯೋ

ಧಿ ಕರಂ ಪೆರ್ಚುಗುಮಲ್ಲದೆ ;

ಕುಕವಿಬುಧಪ್ರಭೃತಿ ಯಿದಿರೆಪೇಂ ಪೆರ್ಚುಗುಮೇ ?

1. ಸಕಲ ಕಳೆಯುಳ್ಳ ಚಂದ್ರ, ಸಕಲ ಲಕ್ಷಣ ಬಲ್ಲಂಥವನು. ಇದು ಶ್ಲೇಷಾಲಂಕಾರ. 2. ಕವಿ=ಕವೀಶ್ವರ ಮತ್ತು ಶುಕ್ರ ಎಂಬ ಗ್ರಹ.–ಬುಧ=ಪಂಡಿತನು ಮತ್ತು ಒಂದು ಗ್ರಹ, ಒಳ್ಳೆ ನವರಸಗಳು ಪ್ರಕಟವಾಗಿರುವಂಥಾ ಕಾವ್ಯವೆ ಅಮೃತ ಸಮುದ್ರವು, ಚಮತ್ಕಾರವುಳ್ಳ ಕವಿ ಅದನ್ನು ಉಕ್ಕಿಸುವ ಚಂದ್ರನು ; ಕುಕವಿ, ಕುಬುಧ ಇಂಥಾವರೆ ಅದನ್ನು ಉಕ್ಕಿಸಲಾರದಂಥಾ ಶುಕ್ರ ಬುಧ ಮೊದಲಾದ ಗ್ರಹಗಳು.

1134. ಬೇರೆನಿಸಿ ಮಿಸುಗುವಲರ್ಗಳ

A good poet like a black bee.

ಬೀರುವ ನರುಗಂಪಿನೊಳ್ವಿಶೇಷಮನರಿವಂ

ತಾರಡಿ ನಾನಾ ಕೃತಿಯೊಳ್

ತೋರುವ ನವಭಾವಭೇದಮಂ ಬುಧನರಿವಂ

ಕಾವ್ಯಗಳೇ ಹೂವುಗಳು, ಕಾವ್ಯದ ಭಾವವೆ ಸುಗಂಧ, ಅದನ್ನು ಅರಿವ ಬುಧನೇ ಭೃಂಗ.

1135. ಅರಾರ್ಲೇರಶಾಸ್ತ್ರ)

The wonderful gem of good poems to be obtained only by the mercy of God.

ಶ್ರೀರೋಹಣ ಗಿರಿಯನಲ್ಲಿ ನವಕವಿತಾಚಿಂ
ತಾ ರತ್ನಂ ದೊರಗುಮೆ ? ಪಾ
ರಾರಿಯ ಕೃಪೆ ಯಿಲ್ಲದಂಗೆ ಧರಣೀತಳದೊಳ್ ?

1. ರೋಹಣಗಿರಿ ರತ್ನಮಯಮಾಗಿರುವಂಥಾದ್ದು.

1136. ನಿಂದಿಸುವರ್ದುರ್ಜನರೆಂ

A good poet is not afraid of criticism ; the sun not of giants.

ದೊಂದು ಭಯಂ ಬೆತ್ತು ನಿರ್ಮಿಸನೆ ಕವಿ ಕೃತಿಯಂ ?
ಮಂದೇಹರಭಯದಿಂದರ
ವಿಂದಸಖಂ ನಿಜಮಯೂಖಮಂ ಪಸರಿಸನೆ ?

1137. ಕಿರಿಯಕೃತಿ ಪಿರಿದೆನಿಕ್ಕು,

A small work, if not made by plagiarism, will be considered great.

ಪೆರರರ್ಥಕೆ ಕೈದುಡುಂ ಕದಿರೆ, ಸತ್ಕವಿಗಂ ?
ಕಿರಿಯಸಿರಿ ಪಿರಿದೆನಿಕ್ಕುಂ,[1]
ಪೆರರರ್ಥಕೆ ಕೈದುಡುಂಕದಿರೆ ಮನುಜಂಗಂ.

1. ಅರ್ಥ=ಅಭಿಪ್ರಾಯ ಮತ್ತು ದ್ರವ್ಯ. 2. ಎನಿಸುಗುಂ. (ವ್ಯಾ. ಸೂ.)

1138. ಮಿಸುನಿ ಯದೊಂದಾದಡದೇಂ

Poetics—gold; poems—ornaments made of it.

ಪೊಸತೊಡವೆನಿಸುತ್ತ ಬೇರೆ ಬೇರೆನಿಸುವವೊಲ್,
ರಸವತ್ಕವಿತಾಮಾರ್ಗಂ[1]
ರಸೆಯಲ್ಲಿ ವಿಚಕ್ಷಣರ್ಕಳಿಂ ಪೊಸತೆನಿಕುಂ

1. ರಸವುಳ್ಳ ಕವಿತಾಮಾರ್ಗವೇ ಭಂಗಾರ, ಕಾವ್ಯಗಳೇ ಭಂಗಾರದ ಒಡವೆಗಳು.

ಚಂಪಕಮಾಲಾವೃತ್ತ.

1139. ಮೊದಲ ಕವೀಂದ್ರರೋಲ್ದೊರೆದ ಸತ್ಕೃತಿ ಸಂಚಯಮಿಾಧರಿತ್ರಿ [ಯೋಳ್
ಪುದಿದಿರೆ, ನೋಡಿ, ತುಷ್ಟಿ ಪಡೆಲೊಲ್ಲದೆ, ಕಬ್ಬಿಗರೇಕೆ ಕಬ್ಬಮಂ
ಗದಿಪರೋ? ಬೇರೆನುತ್ತ ನುಡಿವಳ್ಕಜಕಾರನವಂಗೆ ಪುತ್ರಸಂ
ಪದಮುನದೇಕೆ? ಬೇರೆ ಪರಪುತ್ರರನೀಕ್ಷಿಪ ತುಷ್ಟಿ ಸಾಲದೇ?

Many poems have been written already, why more?

1140. ಯುರವಿನ ಪಚ್ಚಮಂ ತಳೆದಿದಕ್ಕೆಣೆ ವಾರದಿದೆಂದು ಲೋಗರಾ
ಭರಣಮನೇಳಿಪಂತೆ, ತನಗಿಲ್ಲದೆ ಸಾರಕವಿತ್ವಮನ್ಯಕಾ
ವ್ಯರುಚಿರಪದ್ಯಮಂ ಪಠಿಸಿ ಸತ್ಕವಿ ನಿರ್ಮಿತಪದ್ಯಮಿಂತಿದ
ಕ್ಕೊರೆಯೆ ಯೆನುತ್ತ ಕಾಳ್ಗೆಡವನಂ ನಗದಿರ್ಪರೆ ಬಲ್ಲ ಕಬ್ಬಿಗರ್?

A man borrowing jewels and praising them: a plagiarist extolling his work.

ಕುಕವಿ ಎರವು ತಕ್ಕೊಂಡು ಅದನ್ನು ಕೊಂಡಾಡಿ ಎರಡನೆಯವರು ಸ್ವಥಾ ಮಾಡಿದ್ದನ್ನು ತಿರಸ್ಕಾರ ಮಾಡಿದ ಹಾಗಾಯಿತು.

ಕಂದ.

1141. ಕೃತಿಕಾದಂಬಿನಿರಸಮಂ
ಕ್ಷಿತಿಪಸಭಾಕ್ಷಿತಿಗೆ ಸುರಿವ ನಮುಚುದಿ ಖಲಗ
ರ್ಜಿತಘನಗರ್ಜಿತಮೊದವಿದೊ
ಡತಿ ರಸವಿಸರಪ್ರಸಾರಕಾರಣಮುತ್ತ್ರೀ

The criticisms of men only a stimulus to a good poet to perfect his work.

ಕಾವ್ಯವೇ ಮೋಡ, ಅದರ ಸಾರವೆ ಮಳೆ, ಅರಸಿನ ಸಭೆಯು ಪೃಥಿವಿ, ನಿಂದಿಸುವ ಖಳರ ಮಾತೇ ಗುಡುಗು; ಗುಡುಗು ಹೆಚ್ಚಾದರೆ, ಮಳೆ ಹೆಚ್ಚು

1142. ಸ್ಥಿತಿಯೊಳ್ಸುಜನಂ ಸುಖದಂ,
ಪ್ರೃತಿಯೊಳ್ಕುಜನಂ; ಜಗಜ್ಜನೌಘಕ್ಕಾದ್ಯಂ[1]

Even a bad man a source of

1. ಮೊದಲಿನವನು.

pleasure to men when he dies. ಮೃತಿಯೊಳ್ದುಃಖದನಂತ್ಯಂ[2]

ಸ್ಥಿತಿಯೊಳ್ಪರರಿಪ್ಪೊಡೀರ್ವರುಂಸರಿ ಯಲ್ತೇ?

2. ಕಡೆಯುವನು. ಇರುವಾಗ ಸುಜನನು, ಸಾಯುವಾಗ ದುರ್ಜನನು ಸುಖದರಾಗುತ್ತಾರೆ; ಸಾಯುವಾಗ ಸುಜನನು, ಇರುವಾಗ ದುರ್ಜನನು ದುಖದರಾಗುತ್ತಾರೆ.

1143. ಘನಮಾರ್ಗಸುಭಗ ಸತ್ಕಾ

A good poem to bad men unpleasant as the sun is to owls. ರ್ಯನಿಯುಕ್ತಂ ವಿಗತದೋಷಮಮೃತರುಚಿ ಸ್ಪ

ರ್ಧಿನವಕವಿಕಾವ್ಯರವಿ ದು

ರ್ಜನಘೂಕವ್ರಜಕಸಹ್ಯಮಂ ಪುಟ್ಟಿಸುಗುಂ.

ಅನ್ವಯ :ಘನ ಮಾರ್ಗದಲ್ಲಿ (ಬಳ್ಳಿ ಮಾರ್ಗದಲ್ಲಿ) ಮನೋಹರವಾದ ಬಳ್ಳಿ ಕಾಂತಿ ಯುಳ್ಳಂಥಾದ್ದು, ಕತ್ತಲು (ತಪ್ಪು) ಕಳೆದಂಥಾದ್ದು, ಹಾಗಿರುವ ಚಂದ್ರನ ಕಿರಣವನ್ನು (ಅಮೃತದ ಸವಿಯನ್ನು) ಗೆಲುವಂಥಾ, ನೂತನ ಕವಿಯಿಂದ ರಚನೆಯಾದ ಕಾವ್ಯ ಎಂಬ ಸೂರ್ಯನು=ಹುಟ್ಟಿಸುತ್ತಾನೆ.

1144. ಪಳಿಯಲ್ಬಲ್ಲಂ, ನೆಗಳಲ್

A good poem the sun: critics—clouds, which can only obscure ಖಳನೇಂ ಬಲ್ಲನೆ, ನವೀನಕಾವ್ಯಮನಿಳೆಯೊಳ್ ?

ತೊಳಗುವ ರವಿಯುಂ ಮುಸುಳಪ

ಜಳಧರಮದರಂತೆ ಜಗಮನೇಂ ಬೆಳಗುಗುಮೇ ?

ಸುಕಾವ್ಯವೇ ಸೂರ್ಯ, ಹಳಿಯುವ ದುರ್ಜನರೇ ಮೊಡ.

GROVES DESCRIBED.

2. ವನವರ್ಣನಂ (ಆಶ್ವಾಸ. 2.)

(ಮತ್ತೇಭವೃತ್ತಂ)

1145. ಅಲರ್ಗಂಪಿಗೆಱಗಿರ್ದ ತುಂಬಿಗಳ ಬಂಬಲ್ಕಾರ್ಮುಗಿಲ್ಪಲ್ಲವಾ

A mango-tree in blossom described. ವಳಿ ವಿದ್ಯುತ್ಪ್ರಚಯಂ ಪಿಕಪ್ರಕರನಾದಂ ಮೇಘನಾದಂ, ನಿರಾ

1. ಅನ್ವಯ: ಮಾಮರವು—ವೃಷ್ಟಿ ವ್ರಾತವನ್ನು ಏನು ಸೂಸಿದುದೊ? ಮಾವಿನ ಮರವನ್ನು ವರ್ಣಿಸುತ್ತಾನೆ. ಹೂವು ಬಿಟ್ಟ ಮಾವಿನ ಮರದಿಂದ ಪರಾಗ ಬೀಳುವದು ಮಳೆಯು ಹಾಗೆ ಕಾಣಿಸುತ್ತಿತ್ತು.

ಕುಳವೊಂದಿರ್ಪ ಶುಕಾಳಿ ಶಕ್ರಧನುವೆಂಬಂತಾಗೆ, ಮೇಘಾಗಮಂ
ಬೊಲದೇಂ ಸೂಸಿದುದೋ ಮರಂದರಸವೃಷ್ಟಿವ್ರಾತಮಂ ಮಾ
[ಮರಂ !

ಕಂದ.

1146. ಮಲ್ಲಿಗೆ ಮಾಮರದೆಳೆವಳಿ
ರಲ್ಲಿ ಮುಗುಳ್ತಡರೆ, ಮುಗುಳ್ಗಳೆಸೆವವು ಸಂಧ್ಯಾ
ಸಲ್ಲಲಿತತಾರಕಾಳಿಯೊ
ಲಲ್ಲಿಳಿವಾರಡಿಗಳಳಿವ ತಮಮೆನಿಸಿರ್ಕುಂ

The flowers of the jasmin shut up, the stars: the black bees on them, darkness.

ಮಾವಿನ ಗಿಡಕ್ಕೆ ಅಬ್ಬಿದ ಮಲ್ಲಿಗೆ ಹುವುಗಳ ನಕ್ಷತ್ರ. ಅವಕ್ಕೆರಗುವ ಭೃಂಗಗಳೆ ಕವಿಯುವ ಕತ್ತಲೆ.

1147. ಅಮರ್ದಿನಿದನಿದರಿನಿದನೆಲೆ
ಯಮರರೆ ! ಸರಿ ನೋಳ್ಪುದೆಂದು ನಿಜರಸಮುನಿಳಾ
ರಮೆ ಮರಕತಕಳಶದೆ ತುಂ
ಬಿ ಮೇಲೆ ನೀಡಿದಪಳೆಂಬ ಪ್ರೋಲ್ತೆಂಗೆಸಗುಂ

The cocoanut-tree.

ಅನ್ವಯ : ಅಮರರೆ ಅಮೃತದ ಸವಿಯನ್ನು ಇದರ ಸವಿಯನ್ನು ಸರಿನೋಡುವದು ಎಂದು ಭೂಸ್ತ್ರೀಯಳು ಮುಂತಾದ್ದು. ತೆಂಗಿನ ಗಿಡವನ್ನು ವರ್ಣಿಸುತ್ತಾನೆ.

1148. ಬಿಡದಾಲವಾಲಜಲದೊಳ್
ಕಡು ಗೆಂಪಿಡಿದಿಡಿದ ಬೀಜ ರದನದ ಚಲ್ವಂ
ನಡೆ ನೋಳ್ಪಂತಿರೆ, ತೋರ್ಕುಂ,
ಪಡಿನೆಳಲಿಂಬಾಗೆ, ಬಾಗಿ ರಸದಾಳಿಂಬಂ

The pomegranate-tree.

ದಾಳಿಂಬದಗಿಡವ ವರ್ಣಿಸುತ್ತಾನೆ. ದಾಳಿಂಬದ ಬೀಜವು ತನ್ನ ಮಡಿಯ ನೀರಿನಲ್ಲಿ ತನ್ನ ಹಲ್ಲಿನ ಚಲ್ವವನ್ನು ನೋಡುತ್ತದೆ ಎಂಬಂತೆ ಆಗಿದ ಕಾಣಿಸುತ್ತಿತ್ತು.

1149. ಜಲದ ಜಲಕ್ಕೆ ಜಲವ

The plantain-tree.

ತ್ತಲವನಾವುದು ತೆಂಗಿವಕ್ಕೆ ಕುಡದಾಯ್ತೆನ್ನೆ[1]

ಸಲಿಪಿದಿಳೆಗೆಂದರಗಿ ನವ

ಫಲಂಗಳೀವಂತೆ, ಬಾಗಿ ಬಾಳೆಗಳೆಸಗುಂ.

ಬಾಳೆಗಿಡದ ವರ್ಣನೆ. 1. ತನಗೆ ನೀರು ಕೊಡುವ ಮೇಘದ ಹಂಗನ್ನಲ್ಲದೆ ತನ್ನನ್ನು ಸಲಹುವ ಭೂಮಿಯ ಹಂಗನ್ನು ಸಲ್ಲಿಸಲಿಲ್ಲ ತೆಂಗು; ಅದಕ್ಕೆ ನಾನು ಈ ಹಂಗನ್ನು ತೀರಿಸುತ್ತೇನೆಂಬ ಹಾಗೆ ಭೂಮಿಯ ಕಡೆಗೆ ತಮ್ಮ ಫಲ ಕೊಡುವ ಹಾಗೆ ಬಾಳೆ ಗಿಡಗಳು ಬಾಗಿ ಎಸೆದವು.

1150. ಬನಗಳ್ತಲೆಯುಂ ಕಮಳಾ

The darkness of woods, and the burning rays of the sun.

ಪ್ತನ ಕದಿರುಂ ಕಾಡಿ ಮಡಿವುತಳಿಯುಂ ಚಾಂಪೇ

ಯಸಿಕಾಯುಮಾದುದಲ್ಲದೊ

ಡೆ ನಸುಂ ತಮ್ಮಯಕೆ ಪಗೆತನಂ ಸಮನಿಪ್ಪುವೇ ?

ವನದ ಕತ್ತಲೆಯು ಸೂರ್ಯನ ಕಿರಣವು ಕಾದಿ ಸತ್ತು ಅದು ಭೃಂಗರೂಪವಾಗಿ ಇದು ಚಾಂಪೇಯ ರೂಪವಾಗಿ ತಿರಿಗಿ ಹುಟ್ಟಿ ತಮ್ಮ ಮುಂಚಿನ ವೈರತ್ವ ನೆನಸಿ ಇನ್ನು ಬಂದಕ್ಕೊಂದು ವರ್ಣ ಮಾಡುತ್ತವೆ. ಭೃಂಗ ಚಾಂಪೇಯದ ಮೇಲೆ ಕೂತರೆ ಸಾಯುವದು.

1151. ತಳಿರ್ಗಳೆ ದಳ್ಳುರಿ, ಮುಸುಕಿ

The Asóca-tree.

ರ್ದಳಿಗಳೆ ಪೊಸಮಸಿಗಳಾಗೆ, ಮದನನ ಬಾಣಾ

ವಳಿಯಂ ಕಾಸಲ್ಕೆ ಚೈತ್ರೋ

ಜ್ವಳಕಾರುಕನಿಟ್ಟ ಕರ್ಮಟಂ ಬೊಲಬಿಸಗುಂ.

ಚೈತ್ರಮಾಸವೇ ಕಮ್ಮಾರರು ಅಶೋಕವೃಕ್ಷವೇ ಕುಲಿಮೆ, ಅದರ ತಳಿರುಗಳೆ ಚಿಂತೆ ಅದರ ಮೇಲೆ ಕೂತಿದ್ದ ಭೃಂಗಗಳೇ ಇದ್ದಲಿ. ಈ ಚೈತ್ರ ಎಂಬ ಕಮ್ಮಾರ ಮನ್ಮಥನ ಬಾಣಗಳನ್ನು ಕಾಸುತ್ತಾನೆ ಎಂಬ ಹಾಗೆ ಅಶೋಕವೃಕ್ಷ ಕಾಣುತ್ತಿತ್ತು.

3. ಸಮುದ್ರವರ್ಣನ. (ಆಶ್ವಾಸ I.)

1152. ತನುಜನ ತೇಜಮನಪಹರಿ
The corals in the sea. ಸಿದನೆನುತ್ತಬ್ಧಿ ಮುಳಿದು ಸಂಧ್ಯಾರುಣಸೂ
ರ್ಯನ ಕಿರಣಮನುರೆ ಸೆರೆ ವಿಡಿ
ದನೆನೆ, ವಿರಾಜಿಪುದು ವಿದ್ರುಮಂ ಸದ್ರುಚಿಯಿಂ.

1. ಚಂದ್ರನು ಸಮುದ್ರದ ಮಗನು. ಸೂರ್ಯನು ತನ್ನ ಮಗನ ತೇಜವನ್ನು ಅವಹರಿಸುತ್ತಾನೆ ಅಂತ ಸಮುದ್ರ ಸಿಟ್ಟು ಮಾಡಿ ಅವನ ಸಂಜೆಯ ಕಿರಣವನ್ನು ಸೆರೆಹಿಡಿದ ನೆಂಬಂತೆ ಹವಳವು ಪ್ರಕಾಶದಿಂದ ಒಪ್ಪುವದು.

1153. ಜಲಕರಿನಿಕರಂ ಪುಷ್ಕರ
The sporting of the water-elephants. ಮಲರೆ, ಕರಂ ನಿಮಿರೆ, ಪೂತ್ಕರಿಸಿ ಸಿಡಿವ ಲಸ
ಜ್ಜಲ ಕಣಮನಮಳಮುಕ್ತಾ
ಫಳಮೆಂದುರೆ ಮುಗ್ಧಖಚರಿಯರ್ಕೈಯಿಡುವರ್

ನೀರಾನೆಯು ನೀರಾಟದಿಂದ ಮೇಲಕ್ಕೆ ಸಿಡಿದ ಹನಿಗಳು ಮುತ್ತುಗಳೆಂದು ನೆನಿಸಿ ಖಚರಿಯರು ಕೈಯಿಡುವರು.

1154. ಪಡೆದುದು ಗಡ! ಮೊದಲಿಂದುವ
The spouting drops of water appeared like stars obtained by the moon, the son of the sea. ಕಡಲಿದು ಮೀಙಿಂದು ಪಡೆದುದುಡುವಿತತಿಯನೆಂ
ಬೆಡಗೆಡೆಯಾದುದು ಜಡನಿಧಿ
ಸಿಡಿದೆಡೆವಿಡದಿಡಿದ ವಾರಿಕಣಗಣದಿಂದಂ

ಅನ್ವಯು: ಕಡಲು ಪಡೆದುದು. ಮೀಙ್–ಎಂಬೆಡೆಗೆ (ಎಂಬುವಪಕ್ಷಿ)–ಗಣದಿಂದ ಅನುವಾಯಿತು. ಸಿಡಿದ ಹನಿಗಳು ನಕ್ಷತ್ರಗಳಂತೆ ಕಂಡವರಿಂದ, ಚಂದ್ರನು ಅವನ್ನ ಪಡೆದ ಹಾಗೆ ಕಂಡಿತು.

1155. ಎಲೆ ಜಲಧಿ ! ಜಿಷ್ಣು ಚಕಿತಾ
ಚಲಪಾಲಕ ! ಕಾವುದೆಂಮನೆನುತಂ ಕರ್ಗ
ಳ್ತಲೆ ಖರಕರಕರಭಯದಿಂ
ಹಲವಿರ್ಪಂತರವ ತೀರದೊಳ್ಮುಗಿಲೆಸುಗುಂ.

The clouds resting on the sea shore, as if darkness from fear of the burning sun was asking its protection.

ಇಂದ್ರನಿಗೆ ಅಂಜಿ ಬಂದ ಗುಡ್ಡಗಳನ್ನು ಮರೆ ಮಾಡಿದವನೇ, ನನ್ನ ಕಾಯಬೇಕು ಅಂತ ಕಾರ್ಗತ್ತಲು ಸಮುದ್ರಕ್ಕೆ ಹೇಳಿಕೊಳ್ಳುತ್ತಾ ಸೂರ್ಯನಿಗೆ ಭಯಗೊಂಡಂತೆ ಮುಗಿಲು ಎಸೆಯುತ್ತಿತ್ತು

1156. ಜಲನಿಧಿ ಜಲಮಂ ಜಲಭೃ
ತ್ಕುಲಕ್ಕೆ ನಲಿದಿತ್ತುದತ್ತಮಿತ್ತಂ ನದಿನಿ
ರ್ಮಲ ಸಲಿಲಂ ದೊರೆದುದು[1], ಗಡ !
ನೆಲದೊಳ್ಕೊಟ್ಟಂ[2]ಗೆ ಬಡತನಂ ಬಂದಪುದೇ ?

The sea gave its water to the clouds, and got in return the sweet water of the rivers.

1. ತನ್ನಲ್ಲಿ ಕೂಡಿ ಬಂದ ನದಿಗಳಿಂದ ಚೆಲೋ ನೀರು ಸಿಕ್ಕಿತು. 2. ಕೃಲ್ಲಿಂಗ (ವ್ಯಾ. ಸೂ. ೬೩)

1157. ಘನವ ಬರವಪ್ರಯೋಜನ
ವೆನುತರಿದುಂ ಜಡಧಿ ಜಡಮು[1]—ನಿತ್ತುದವಂ ನೆ
ಟ್ಟನೆ ಪೊತ್ತುದು ಜಲದಂ ವ್ಯ
ರ್ಥನಿಯುಕ್ತಮಿದೆಂದು ಬಗೆವಡಿದು ಚಿತ್ರತರಂ

The clouds carrying off the water of the sea.

1. ಜಡ=ನೀರು, ಶಠ, ಮೇಘ ನನ್ನ ಕಡೆಗೆ ಬರುವದು ಕೆಲಸವಿಲ್ಲವೆಂದು ಶಠಮಾಡಿತು, ಮೇಘ ನೀರಿನದೆಶೆಯಿಂದ (ಅಪ್ರಯೋಜನ=ಅಪ=ನೀರು+ಪ್ರಯೋಜನ) ಬರುತ್ತದೆಂದು ತಿಳಿದು ನೀರನ್ನು ಕೊಟ್ಟಿತು ಎಂಬಂತೆ ಎರಡು ಅರ್ಥ.

1158. ಯುರಗಿವ ಗಿರಿಮುಗಿಲೊಳ್ನಿರೆ
ಮಿರಗುವ ಮಿಂಚುಗಳನುಡಿದು ಪಿಡಿವನೊ ? ಕಡುಪಿ

The red fishes in the ocean

like flashes of lightning, seized with the waves by the sea.

ತೊರೆಯರೆಯುಂ ತೆರೆಗೈಗಳಿ
ನರಿದೆಸೆ, ಕೆಂವಿನ್ಮ್ರಾನ್ಗಳೇಂ ಮನಂಗೊಳಿಸಿದವ್ರೋ !

1. ಗುಡ್ಡಗಳು ತನಗೆ ಮರೆಹೊಕ್ಕಿದ್ದವು; ಅದಮೇಲೆ, ಮುಗಿಲು ಮಿಂಚು ಮತ್ತು ಇಂದ್ರನ ಕಡೆಯಿಂದ ಬಂದು ನಾಶ ಮಾಡಿಯಾವೆಂದು ನದಿಗಳ ಯಜಮಾನ=ಸಮುದ್ರ ಸಿಟ್ಟು ಮಾಡಿ ತೆರೆ ಎಂಬ ಕೈಗಳಿಂದ ಮಿಂಚನ್ನು ಹಿಡಿದನೋ ಎಂಬ ಹಾಗೆ ವಿಮಾನುಗಳು ಎಸೆಯುತ್ತಿದ್ದವು.

ಮತ್ತೇಭ ವೃತ್ತ.

1159. ಅಳಿಯುಂ ಪ್ರಾ[1]ಗಂಣಿಸೆಂನೀಮಗಳ್ ಚಂ[2]ಚಲೆ; ಪುತ್ರಂ ಕರಂ ರಾ[3]ಜ [ಯಕ್ಷ್ಮಾ
ಕುಳನೆಂನೈಶ್ವರ್ಯಮುಂ ನಿರ್ಜರರೆ ಕವ[4]ರ್ದರೆಂನೊಳ್ಬಸಂ ಪುಟ್ಟಿ [ತೆನ್ನಂ
ಕಳಶಪ್ರೋ[5]ದ್ಭೂತನಂದೀಂಟಿದನಕಟ ! ಮಹಾಭಂ[6]ಗಮುಂ ತಾಳ್ದಿನೆಂ [ದೆಂ
ದೊಳಗಂಭೋರಾಶಿ ಚಿಂತಾಗ್ನಿಯನೆ ತಳೆದ ಪೋಲೌರ್ವನಂತಸ [ಮಿರ್ಕುಂ.

The sub-marine fire, the grief of the sea.

1. ಕಮಲಾಕ್ಷನು=ಕೃಷ್ಣ, ಹೂವು ಬಿದ್ದ ಕಂಣಿನವನು. 2. ಲಕ್ಷ್ಮಿ, ಭಾಗ್ಯಸ್ಥಿರವಿಲ್ಲ, ಬೇಕಾದಲ್ಲಿ ತಿರುಗುವಾಕೆ. 3. ಕ್ಷಯವಾಗುವವನು=ಚಂದ್ರ, ರಾಜಯಕ್ಷ್ಮರೋಗದವನು. 4. ಮಥನಮಾಡುವ ಸಮಯದಲ್ಲಿ. 5. ಅಗಸ್ತ್ಯರಿಷಿ ಅವನ ಶಿಷ್ಯನು ಸಾಮಾನುಗಳನ್ನು ಸಮುದ್ರದ ದಂಡೆಯಲ್ಲಿ ತೊಳೆಯುತ್ತಿದ್ದನು. ಆವಾಗ ತೆರೆಗಳು ಬಂದು ಅವನ್ನು ತೆಕ್ಕೊಂಡು ಹೋದವು. ಆ ಶಿಷ್ಯ ಹೋಗಿ ಋಷಿಗೆ ತಿಳಿಸಿದಕ್ಕೆ ಇವನು ಬಂದು ಕೊಡು ಅಂತ ಹೇಳಿದನು. ಅದು ಕೊಡಲಿಲ್ಲದಕ್ಕೆ ಸಿಟ್ಟು ಬಂದು ಅಗಸ್ತ್ಯನು ಅದನ್ನು ಕುಡಿದು ತನ್ನ ಸಾಮಾನ ತೆಕ್ಕೊಂಡನು. ಆ ಸಮುದ್ರದ ನೀರನ್ನು ಮೂತ್ರ ದ್ವಾರದಿಂದ ಬಿಟ್ಟನಾದ ಕಾರಣ ಲವಣವಾಯಿತು. 6. ತೆರೆ, ಅಪಮಾನ.

ಚಂಪಕಮಾಲಾ ವೃತ್ತ.

1160. ಜಲನಿಧಿ! ಜಂಭವೈರಿಗಿರಿಯಂ ಗಿರಿಯಂ ಬಿಡು ಬೇಗಮೆಂದು ಬಂ
ದುಲಿವ ಪ್ರೊಲೊಪ್ಪಿ ಸುಸ್ತನಿತಮುಚ್ಚತಟಿತ್ಕರವಾಳಸಾಂತತ
ಜ್ಜಲವಭಟಂಗದಂ ಕುಡದೆ, ತನ್ನಯ ಜೀವನವಿತ್ತುದಬ್ಧಿ; ಭೂ
ತಲದೊಳೆ ಸತ್ವಶಾಲಿ ಪಗೆಗೇಂ ಮರೆವೊಕ್ಕನನೀಯುಳಾಪನೆ ?

The warriors, the clouds, with their weapons, thunder and lightning, asking the sea.

1. ಸಂಬೋಧನ. 2. ಜಂಭ ಎಂಬ ರಾಕ್ಷಸನ ವೈರಿ=ಇಂದ್ರ. 3. ಗಿರಿ ಇಂದ್ರನಿಗೆ ವೈರಿ. ಮೇಘವೆ ಭಟನು, ಅದರೊಳಗಿಂದ ಹೊರಡುವ ಮಿಂಚೇ ಅವನ ಕತ್ತಿ, ಅದರಲ್ಲಿ ಆಗುವ ಗುಡುಗೇ ಅವನ ಮಾತು ಈ ಭಟನು ಇಂದ್ರನ ಕಡೆಯಿಂದ ಬಂದು ಗಿರಿಯನ್ನು ಕೊಡಬೇಕೆಂದು ಸಮುದ್ರವನ್ನು ಕೇಳಿದನು. ಆದರೆ ಅದು ತನಗೆ ಮರೆಹೊಕ್ಕ ಗಿರಿಯನ್ನು ಕೊಡದೆ ತನ್ನ ಜೀವ=ನೀರ ಕೊಟ್ಟಿತು.

ಶಾರ್ದೂಲ ವೃತ್ತ.

1161. ಯೆಂನೋಳ್ಪುಟ್ಟಿದ ಚಂದ್ರನಿಂದೆ ಪಡೆಗುಂ ಸಸ್ಯಾಳಿಸಂಪತ್ತನಂ
ತೆಂನೋಳ್ಪುಟ್ಟಿನ ಲಕ್ಷ್ಮಿಯಿಂದೆ ಪಡೆಗುಂ ಸೌಭಾಗ್ಯಮಂ ಧಾತ್ರಿ;
[ಮೇ
ಕೆಂನೋಳ್ಪುಟ್ಟಿದ ವಸ್ತುವಿಂದೆ ಪಡೆದಂ ಸರ್ವಾರ್ಥಮಂ ಜಿಷ್ಣು ತಾ
ನೆಂನೋಳ್ಪೇಳ್ಸರಿಯಾವನೆಂದುಲಿವ ವ್ರೋಲುದ್ಘೋಷಿಕುಂ ಸಾಗರಂ.

The roaring of the sea, as if from joy, that it has not its equal.

1. ಸಸಿಗಳು ಚಂದ್ರನಿಂದ ಬೆಳೆಯುತ್ತವೆ. ಚಂದ್ರನು ಔಷಧೇಶ್ವರ. 2. ಇಂದ್ರನು ಸಮುದ್ರದಿಂದ ಶಿಕ್ಕಿದ ವಸ್ತುಗಳನ್ನು ಹೊಂದಿ ಭಾಗ್ಯವಂತನಾಗಿರುತ್ತಾನೆ.

THE HOT SEASON.

4. ಗ್ರೀಷ್ಮಋತುವರ್ಣನ. (ಆಶ್ವಾಸ. 5.)

ಕಂದ.

1162. ದೆಸೆವೆಣ್ಗಳ್ಬಿಸಿವಿಸಿಲಿಂ
ಬಸವಳಿದುಃಪೆಂದು ಸೂಯ್ದು ಬಿಸುಸುಯ್ಯುಲರೆಂ

The hot winds the sighs of the

1. ಅಷ್ಟದಿಕ್ಕುಗಳೆಂಬ ಸ್ತ್ರೀಯರು.

goddesses of the eight points of the compass. ಜಿಸಕವನೊಡರ್ಚಿ ಬೀಸಿದು

ದಸದೃಶಶೋಷ[2] ಪ್ರಭಂಜನಂ ಬೇಸಗೆಯೊಳ್;

2. ಸ+ಉಷ್ಣ=ಸೋಷ್ಣ=ಬಹಳ ಉಷ್ಣ. ಆ ದಿಸಿ ಘಾಳಿಯೇ ಆ ಸ್ತ್ರೀಯರು ಬಿಸಲಿಂದ ಬೇಸತ್ತು ಉಸುರು ಬಿಟ್ಟನು.

1163. ಪೊಡವಿ ಯರತಖಿಳಜಲಮಂ

The cracks in the grounds, as if gaping from thirst for the water of the mirage. ಕುಡಿದುಂ, ತೃಷೆ ಯಡಗದಾಮರೀಚಿಯ ಜಲಮಂ

ತಡೆಯದೆ ಕುಡಿಯಲ್ಕ್ರಗೆ ಬಾಯಿ

ವಿಡುವಂತಿರೆ, ಬಿರಿದ ಬೀಡೆಗಳ್ಬಡದೆಸೆಗುಂ.

1164. ಪುಡಿ ತನಿಗೆಂಡದ ಬೂದಿಯ

The dust was like ashes with burning coals, &c. such was the burning heat. ಪಡಿ, ನೆಲವಟ್ಟ್ಯೊಲೆಯ ತೊಲೆ, ಯಲರ್ಬಿರಯಿಯಬಾ

ಯಡೆಯಲರ್ಗೆಣೆ, ಯುರಿಗಿದು ಸರಿ,

ಕಡು ವಿಸಿಲೆನಿಸಿರೆ, ನಿದಾಘವೀಂ ಪಸರಿಸಿತೋ!

ಹುಡಿಕೆಂಡದ ಬೂದಿಯಂತೆ, ನೆಲ ಅಟ್ಟ ಒಲೆಯಂತೆ, ಘಾಳಿ ವಿರಹಿಗಳ ಬಾಯಿಂದ ಬರುವ ಉಸರಿನಂತೆ ಬಿಸಲು ಉರಿಯಂತೆ ಇತ್ತು.

1165. ದಿನಮಣಿಮಣಿಶಾಣೊಪಲ

The burning rays, the sparks of the glittering blade of the sharp sword of the rays. ವಿನಿಹಿತಘೃಷ್ಟಾರ್ಕಕಿರಣಖುರಖಡ್ಗಲತಾ

ಜನಿತಸ್ಫುಲಿಂಗಸಂಘಮಿ

ದೆನೆ, ತದ್ವಿಸ್ಫುರಿತವಹ್ನಿಕಣ ತತಿಯುಸೆಗುಂ.

1. ದಿನಮಣಿ–ಸಂಘಂ, ಇದು ಒಂದೇಸಮಾಸ ಶಬ್ದ. ಸೂರ್ಯನೆಂಬ ಮಣಿಖಚಿತವಾದ ಶಾಣೆಕಲ್ಲಿನ ಮೇಲೆ ತಿಕ್ಕಿಸಿ ಕೊಂಡಂಥಾ ಸೂರ್ಯನ ಕಿರಣ ಎಂಬ ಹದನವಾದ ಕತ್ತಿಯ ಅಲಗಿಂದ ಹುಟ್ಟಿದ ಕಿಡಿಗಳ ಸಮೂಹ.

1166. ಬಾಯ್ವಿಡುತ್ತೈದಿದ ಮಱಿಯಂ

The elephant grieved at seeing her young one pining away with thirst.

ತಾಯ್ವಿಡು[1] ನಡೆ ನೋಡಿ ಬಾಡಿ ತಾಪಂ ಮೊದಲಿಂ
ದಯ್ವಡಿ[2] ನೆಗೞ್ದರೆ, ತೆಗದೇಂ
ಕಯ್ವಡಿ[3]ದೂದಿದುದೊ ಸೋಷ್ಣಜಲಮಂ ಬಸುಱಿಂ !

1. ತಾಯಾದ ಹೆಣ್ಣಾನೆ. 2. ಐದು ಪಾಲಷ್ಟು. 3. ಸೊಂಡಿಲ.

1167. ಅಗಶಿಖರಂ ಛಿಟಿಛಿಟಿಲೆನೆ,

The summits of the mountains cracking, all animals languishing from the heat.

ಮಿಗೆ ಸಿಡಿದುದು; ಧಗಧಗಸ್ವನಮಿರೆ, ವನಂ ಭುಗಿ
ಭುಗಿಲನುರಿದು ಖಗವ್ರಜ
ಮೃಗತತಿ ಘರಿಘರಿಲನೈದೆ ಬೆಂದುದು ಬಿಸಿಲೋೞ್.

1168. ಕೊಳದಂಬು ಬತ್ತೆ ಚುಯ್ಯೆಂ

The mirage.

ದೊಳಗಣ ನಳಿನಾಳಿ ಕರಕುವರಿಗುಮೆನುತ್ತಂ
ಜಳಜಸಖಂ ಜಳಕಿರ[1]ಣಾ
ವಳಿಯಂ ಪಿಳಿದಂತೆ ಮೊಲ್ಮರೀಚಿಕೆ ಮೆರೆಗುಂ.

1. ಮರೀಚಿಕಾಜಲ.

1169. ನಡುನೆತ್ತಿ ಬಿರಿದು ಮುತ್ತುಗ

The pea-cock burning its beak, and lamenting.

ಳೊಡಮುಚ್ಚಳಿಸುತ್ತಪಾರೆ, ಪನಿ ಗೆತ್ತುನವಿ
ಲ್ತುಡುಕೆ ನಿಜ ಚಂಚುವಂ, ಸುಡೆ,
ಮಿಡುಕಿದುದು ನಿದಾಘತಪ್ತ ಕರಿಸಂಕುಳದಾ

ಕರಿಸಂಕುಳದ ನಡುನೆತ್ತಿ ಮುಂತಾಗಿ ಅನ್ವಯಿಸಬೇಕು.

1170. ತೞಮುಂ ಸುಡೆ ನೆಲನಡಿ ಯಿಡ

The lions seeking shelter from the heat in the shadow of the elephants.

ಲೞವಲ್ಲದೆ ನಿಂದ ಸಿಂಧುರಂಗಳ ನೆೞಲೊಳ್
ಬೞಗೊಂಡು ನಿಂದು ಬಿಸಿಲುಪ
ಟಳಮುಂ ಕಳೆಗುಂ ಕ್ಷಣಂ ಮೃಗೇಂದ್ರಕದಂಬಂ.

ಬಿಸಿಲಿಂದ ಕಷ್ಟ ಪಟ್ಟು ಸಿಂಹನಾದರು ತನ್ನ ಸ್ವಭಾವವ ಬಿಟ್ಟು ಸಮಾಧಾನದಿಂದ ಆನೆಯ ನೆರಳಿನಲ್ಲಿ ನಿಂದಿತ್ತು.

1171. ಕಡುಗಾದ ಪೆಡೆವಣಿಗೆ[1] ತಲೆ

The serpent seeking shelter from the heat near the peacock.

ಗೊಡಕಪ್ರತ್ತಂ ಧುಮುಮುಸುೞಿದು ಪ್ರಗೆ ಸೋಗೆಯ ಸೋಂ
ಪಡೆದರ್ ಪೊಸಪೀಲಿಯೊಳ್ಘಣಿ
ಬಿಡಮುರಿಮುವದೆಂದೊಡದನಸದಾರ್ಬಣ್ಣಿಸುವರ್ ?

1. ಹೆಡೆಮಣೆ. ಅದು ಬಹಳ ಕಾದದರಿಂದ ತಲೆ ಮುಂತಾದ್ದು ತನ್ನನ್ನು ನುಂಗುವ ನವಿಲಿನ ಸಮೀಪಕ್ಕೆ ಹೋಯಿತು.

1172. ಪೆಡೆಯುಂ ಕೊಡೆಯಂತಿರೆ, ಪಿಡಿ

The serpent cooling her young ones.

ದಡಿಯೊಳ್ಸಿರೆ ನಿಂದ ಮರಿಯನಾನನದೆಲರಿಂ
ಬಿಡದಾಶ್ವಾಸಿಸಿ ಮರುಕಂ
ಬಡೆದೋವುತ್ತಿರ್ದುದುರಗ ಪರ್ಬಿದ ಬಿಸಿಲೊಳ್.

1173. ಅೞುರ್ವ ಬಿಸಿವಿಸಿಲ ಬೇಗೆಯ

The dust going up to the sky, as if to dive in the celestial waters.

ನಿೞೆ ಸೈರಿಸಲಾರದಭ್ರಗಂಗಾ[1] ಜಲದೊಳ್
ಮುೞುಗಲಿರದೇಳ್ದ ಪೋಲ್ಕಂ
ಗೊಳಿಸಿತು ಸಟ್ಟುರೆ ಸುರೇಣು ಪಸರಿಸೆ[2] ನಭದೊಳ್.

1. ಆಕಾಶದಲ್ಲಿ ಗಂಗಾಜಲವದೆ ಅಂತೆ. 2. ಧೂಳು ಆಕಾಶದ ಕಡೆಗೆ ಹಾರುತ್ತಿತ್ತು. ಅದು ಬಿಸಲು ತಾಳಲಾರದೆ ಆಕಾಶ ಗಂಗೆಯಲ್ಲಿ ಮುಳಗಲಿಕ್ಕೆ ಎದ್ದಹಾಗೆ ಕಾಣುತ್ತಿತ್ತು.

ಚಂಪಕಮಾಲಾ ವೃತ್ತ.

1174. ಸಿಡಿದುದು ದಂತಿದಂತಮದು ಸಂಗಡಮಾಗಿರೆ ಕುಂಭಮೌಕ್ತಿಕಂ
ಪೆಡೆವಣಿ ಪಾರೆ, ನೆತ್ತಿ ಬಿರಿದತ್ತಹಿವೃಂದದ[1] ; ಸಿಂಹಕೇಸರಂ
ಬಿಡಮುರಿದತ್ತು ; ಪಕ್ಕಿಗಳ ನುಣ್ಗರಿ ಸೀದುದರಣ್ಯದಲ್ಲಿ ಸಂ
ಗಡಿಸಿದ ಋಕ್ಷರೋಮತತಿ ಬೆಂದುದು ; ಬೇಸಗೆ ಯುಗ್ರಮೆಂತು
[ಟೋ !

Bad effects of the heat on different creatures.

1. ಅಹಿವೃಂದದನೆತ್ತಿ.

ಮತ್ತೇಭವಿಕ್ರೀಡಿತ ವೃತ್ತ.

1175. ಇಳೆ ಕಾಯ್ವೇರಿದುದಬ್ಧಿ ನೀರ್ದೆಗಮುದಾಶಾದಂತಿ ಬಾಯ್ಬಿಟ್ಟುದು
ಕರ್ಣೀವರ್ದಿಗ್ವರಂಜಿವರ್ದಿವಿಜರೂರ್ವೀಧ್ರವ್ರಜಂ ಸೀಳ್ದುದು
ಜ್ವಳಮಾದತ್ತಿನಬಿಂಬಮಂಬುಚರಮೆಲ್ಲಂ ಬೇಗೆ ಗೊಂಡತ್ತು
[ಬಾಂ
ಬೊಳೆ ಬತ್ತಿತ್ತು ; ಮರೀಚಿ ಪೋಣ್ಮಿದುದರಣ್ಯಂ ಬೆಂದುದಾಗ್ರೀ
[ಷ್ಮದೊಳ್.

The earth became heated, &c.

ಉತ್ಪಲ ವೃತ್ತ.

1176. ನೋಡಿ ಮರೀಚಿಕಾಜಲಮನಂಬುವಿದೆಂದೆಳಸುತ್ತೆ ಬಂದು ಕೈ
ನೀಡಿ ಕಲಂಕಿ ಪೊಕ್ಕು ತೆಗೆದಿಕ್ಕುತೆ ಪುಷ್ಕರಮಂ ನಿಜಾಸ್ಯದೊಳ್
ಬಾಡಿ ಬಳಲ್ದು ಬಲ್ಪಳಿದು ಘೀಳಿಡುತಂಗದೊಳೆತ್ತಲುಂ ಪ್ರಗು
ಳ್ಕಾಡಿರೆ, ಬೀಳ್ದುದರ್ಕಕರಕಲ್ಪಿತಸಂಜ್ವರನೊಂದು[1] ಕುಂಜರಂ.

Elephants dropping down from the heat.

1. ಸಂಜ್ವರವುಳ್ಳ ಆನೆ. ಸೂರ್ಯನ ಕಿರಣಗಳಿಂದ ಆದಂಥಾ ಸಂಜ್ವರನು.

THE AUTUMNAL SEASON.

5. ಶರತ್ಕಾಲವರ್ಣನ. (ಆಶ್ವಾಸ. 6.)

ಕಂದ.

1177. ಅತಿನಿರ್ಮಲತೆಯನೀವುದಿ
ನತೆ ಯಾಂತ ಪಯೋದಮಾಲೆಗಾಗಿಪ ಶರದಂ
ಪಿತತಸಿತದ್ಯುತಿತತಿರಂ
ಜಿತಚಂದ್ರಂಗೀವುದೆಂಬುದೊಂದಚ್ಚರಿಯೆ ?

No wonder, that Autumn, who makes the black clouds white, should give lustre to the moon.

ಕಪ್ಪಾದಮೋಡ ಬಿಳುಪು ಮಾಡುವ ಶರದನು ಮೊದಲೇ ಬಿಳುಪಾಗಿರುವ ಚಂದ್ರನಿಗೆ ಪ್ರಕಾಶ ಕೊಡುವದು ಅಚ್ಚರಿಯೆ ? ಈ ರುತುವಿನಲ್ಲಿ ಚಂದ್ರನು ಬಹಳ ಪ್ರಕಾಶವಂತನಾಗುತ್ತಾನೆ.

1178. ಅಡ್ಡಮಿರೆ ಕಾರಕಾರ್ಮುಗಿ
ಲೊಡ್ಡಣಮಿಳೆಗಿಳಿಯದೊತ್ತರಿಸಿ ಮುಂಪೈಸು
ತ್ತಿಡ್ಡವಣೆ ನಿಂದ ಚಂದ್ರಿಕೆ
ಯೊಡ್ಡನೆ, ಬೆಳ್ಮುಗಿಲದೇಂ ಮನಂ ಗೊಳಿಸಿದುದೊ !

The white clouds gaining the upper hand against the dark clouds.

ಕಾರ್ಮುಗಿಲೇ ವೈರಿ, ಬೆಳ್ಮುಗಿಲೇ ಬೆಳದಿಂಗಳಿನ ಸೈನ್ಯ ಅದು ಆ ಕತ್ತಲೆಯನ್ನು ಬರಗೊಡುತ್ತಿದ್ದಿಲ್ಲ.

1179. ಬಾಂಬೊಳೆಯೊಳಗಿದು ಮುಳುಗಿ
ದಂಬುದಮದು ತೊಲಗೆ, ನೆಗೆದು ನಿಂದಂಚೆಯ ಪಿಂ
ಡೆಂಬಂತಿರೆ, ಬೆಳ್ಮುಗಿಲದ
ರಿಂ ಬೀಳ್ವ ತುಷಾರಮುದರ ಗರಿವನಿ ಯಕ್ಕುಂ.

The white clouds—a herd of swans.

ಬೆಳ್ಮುಗಿಲೇ ಅಂಚೆಯ ಹಿಂಡು, ಅದರಿಂದ ಉದುರಿದ ಹನಿಯೇ ಆ ಅಂಚೆಗಳ ತೊಯಿದ ಗರಿಯಿಂದ ಬೀಳುವ ಹನಿ—ಆ ಅಂಚೆಗಳು ಮಳೆಕಾಲದ ಅಂಬುದವು ಹೋಗುವ ತನಕ ಆಕಾಶ ನದಿಯೊಳಗೆ ಅಂಜಿಕೆಯಿಂದ ಮುಳುಗಿದ್ದವು.

ಮಹಾಸ್ರಗ್ಧರವೃತ್ತ.

1180. ಮೊಳವೋದತ್ತಬ್ಜಕಂದಂ ಕೊಳದೊಳ್; ಬೆಳೆ ದಾಳ್ದತ್ತಿಳಾಮಂಡ [ಳಂ ; ಮಂ
ಡಳಿಗೊಂಡಾಗಳ್ಮರಾಳಾವಳಿ ನಗದ ಬಿಲದ್ವಾರದಿಂದೇಳ್ದುದಾಶಾ
ವಳಯಂ ತೋರ್ಪಟ್ಟುದಬ್ಜಂ ಪಳಚನಲರ್ದುದಬ್ಜಾರಿಬಿಂಬಂಕಳಂ [ಕಂ
ಕಳೆದತ್ತೆಂಬಂತೆ, ನೀಡುಂ ತೊಳಗಿತು; ತಿಳಿದತ್ತಾಪಗಾವಾರಿಪೂರಂ.

The lotus budded, the ground was covered with crops, &c.

1. ಓದತ್ತು=ಪೋದತ್ತು=ಹೋಗಿತ್ತು=ಮೊಳೆಹೊರಡಿತು. 2. ಭೂಮಂಡಲವು ಬೆಳೆಯನ್ನು ಧರಿಸಿತು. 3. ಹಂಸಗಳು ಮಳೆಗಾಲದಲ್ಲಿ ಅಡಗಿಕೊಂಡಿದ್ದ ಗುಡ್ಡಗಳ ಗವಿಗಳಿಂದ ಹೊರಗೆ ಬಂದವು. 4. ಮೋಡದಿಂದ ಮುಸಕಿಕೊಂಡಿದ್ದ ದಿಕ್ಕುಗಳು ಕಾಣಬಂದವು. 5. ಅನ್ವಯ: ಅಬ್ಜಾರಿಬಿಂಬವು–ತೊಳಗಿತು. 6. ಅನ್ವಯ: ಆಪಗಾವಾರಿ– ತಿಳಿದತ್ತು.

1181. ಘನನಾಮಂ ಲೋಕದೊಳ್ಪೇರ್ಗೆಗೆಡೆಯೆನಿಸಿತ್ತಕ್ಕಟಾಕ್ಕಮ [ನೀಮಿ
ತ್ರನ ತೇಜಕ್ಕಡ್ಡಲಾದೆಂ; ದ್ವಿಜಗತಿ ಗೆಡಿಸಿರ್ದೆಂ; ಜಗತ್ಪಂಕಮಂ [ನಿಂ
ಜನಿಸಿತ್ತಾರಾಜಹಂಸಾಹಿತನೆನಿಸಿದೆನೆಂದುಂ ಜಡಗ್ರಾಹಿ ಯಾನಾ
ದೆನೆನುತ್ತಂ ಚಿಂತೆಯಿಂ ಬೆಳ್ಪಡರ್ದುದೆನೆ, ತದಬ್ದಂ ಶರನ್ಮೇಘ [ಮಿಕ್ಕುರ್ಗಂ.

The clouds becoming white, pale from grief.

ಶರತ್ಕಾಲದ ಮೇಘ ಬಿಳುಪಾಗಿದೆ. ನನ್ನ ವಿಚಾರ ಸುಮಾರಾಯಿತು ಎಂದು ಅದು ಚಿಂತೆ ಮಾಡಿ ಬೆಳಗಾಯಿತು ಎಂಬ ಹಾಗೆ ಕಾಣುತ್ತಿತ್ತು. 1. ಮೇಘ ಎಂಬ ನಾಮ, ಅಥವಾ ದೊಡ್ಡ ನಾಮ. 2. ಸೂರ್ಯ ಹಿತವಂತನು. 3. ನಕ್ಷತ್ರ, ಬ್ರಾಹ್ಮಣ. 4. ಕೆಸರು, ಪಾಪ. 5. ರಾಜೋತ್ತಮ, ರಾಜಹಂಸ ಎಂಬ ಪಕ್ಷಿ. 6. ನೀರು ಧರಿಸಿದಂಥಾದ್ದು, ದಡ್ಡತನ ಹಿಡಿದವನು.

ಉತ್ಸಾಹ ವೃತ್ತ.

1182. ನಾಕಮತ್ತ[1]ಹಸ್ತಿ ಯಂಬರಾಪಗಾಪಯಸ್ಥಿತಾ
ನ್ತೋಕಪುಂಡರೀಕರಾ[2]ಜಿಯಂ ಕರಾಗ್ರದಿಂದೆ ಕೀ
ಳ್ತೋಕಕಾಲವಲ್ಲಿ ಚೆಲ್ಲಿದಂತೆ ಪೋಲ್ಕ್ವನಾಳನಾ
ಳೀಕತಂತುದಂಭಶುಭ್ರಮಭ್ರದೊಳ್ವಿರಾಜಿಕುಂ.

The white clouds in the sky, an elephant scattering lotus flowers.

1. ಐರಾವತ, ಈ ಶಬ್ದ ಚೆಲ್ಲಿದಂತೆ ಎಂಬ ಕ್ರಿಯಾಪದಕ್ಕೆ ಕರ್ತೃ. 2. ಯಂಬರ—ರಾಜಿಯಂ=ಒಂದೇ ಸಮಾಸಪದ. ಆಕಾಶದ ಹೊಳೆ ನೀರಿನಲ್ಲಿ ಇದ್ದ ಸಣ್ಣ ಬಿಳಿ ಕಮಲದ ಸಮೂಹವನ್ನು ಮುಂತಾದ್ದು. 3. ಕಮಲದ ಹಾಗೂ ಅದರ ನಾರಿನ ದಂಭವುಳ್ಳ=(ದೊಡ್ಡ) ಶುಭ್ರವಾಗಿರುವ ಅಭ್ರವು (ಮೇಘ) ಮುಂತಾದ್ದು.

ಚಂಪಕಮಾಲಾ ವೃತ್ತ.

1183. ತಡಿವಿಡಿದೇಕಪಾದದೊಳ್ ನಿಂದತಿಗಂಣ್ಮುಗಿದಾತ್ಮಚಂಚುವಂ
ನಿಡುಗೊರಲಿಂ ಮರಳ್ಚಿ ನಿಜಪಕ್ಷದೊಳೊಯ್ಯನೆ ಸಾರ್ಚಿ ಮೌನ [ಮಂ
ಪಿಡಿದೆಡೆಗೈದಿದಂಬುಚರಮಂ ಜವದಿಂ ತವೆ ನುಂಗಿ ಸಾರ್ದು ಸಾ
ಲ್ವಿಡಿದೆಡೆಗೊಂಡನೇಕಬಕಪಂಕ್ತಿಗಳಿಂ ಕೆರೆ ತ[1]ಳ್ತು ರಂಜಿಕುಂ.

The cranes on the banks of lakes.

ಕೆರೆ ಅನೇಕ ಬಕಪಂಕ್ತಿಗಳಿಂದ ರಂಜಿಸುತ್ತಿತ್ತು ಮುಂತಾದ್ದು. 1. ಧರಿಸಿ, ತಳ್ ಎಂಬ ಧಾತುವಿನ ಕ್ರಿಯಾನ್ಯೂನ.

ಮತ್ತೇಭವಿಕ್ರೀಡಿತ ವೃತ್ತ.

1184. ಪರಿ[1]ದೈತಂದರಸಂಚೆಯಂ ಕರೆದು ಭೃಂಗೀನಾದದಿಂದಿತ್ತು ಗಂ
ಧರಜಃಪೂರ್ಣಮರಂದಮರ್ಘ್ಯಮನಮರ್ಚುತ್ತಂಬುರುಟ್ಪೀಠಮಂ
ಮರುದಾನೀತದಳಾಂಬರಂ ಬೊದಿಸುಣಲ್ಕಿತ್ತಬ್ಜಬೀಜಗಳಂ
ಶರದಂಭೋ[2]ಜನಿ ಮಾಡಿದಳ್ ದ್ವಿಜವ[3]ರಂಗಾತಿಥ್ಯಸತ್ಕಾರಮಂ.

The autumnal lotus entertaining the swan.

1. ರಾಜಹಂಸ. 2. ಶರತ್ಕಾಲದ ಕಮಲವನ್ನು ಒಬ್ಬ ಸ್ತ್ರೀಯಳಿಗೆ ಸಮಾನ ಮಾಡುತ್ತಾರೆ. (ಕಮಲಿನಿ=ಸ್ತ್ರೀ) 3. ಅರಸಂಚೆ ಎಂಬ ಪಕ್ಷಿ. (ದ್ವಿಜ=ಎರಡುಸರ್ತಿ ಹುಟ್ಟಿದವನು=(ಬ್ರಾಹ್ಮಣ, ಪಕ್ಷಿ.)

THE RAINY SEASON.

6. ವರ್ಷರುತುವರ್ಣನ. (ಆಶ್ವಾಸ. 8.)

ಕಂದ.

1185. ಧೃತ್ಕಚಂ[1]ಚಲಮತಿಜಪೆಲ

When dark clouds (bad men) come, the swans (good men) go.

ಸ್ಥಿತಿ ಜಡಭ[3]ರಿತಂ ಕಟು[4]ಸ್ವರಂ ಬರೆ ಮೇಘಂ
ನುತ[6]ಹಂಸ ತಳರ್ದುದು ; ಮಲಿ
ನತ[5]ರಂ ಬರೆ, ಶುಚಿಸು[7]ವೃತ್ತನೇನಿರ್ದಪನೆ ?

1. ಚಂಚಲ ಬುದ್ಧಿಯುವನು, ಮಿಂಚುಳ್ಳವನು. 2. ಹೋಗುವ ಸ್ಥಿತಿಯುವನು, ಹೊಯಿದಾಡುವ ಸ್ಥಿತಿಯುವನು. 3. ಮೂರ್ಖತ್ವ ಭರಿತನು, ನೀರುಭರಿತನು. 4. ಕಠಿಣ ಮಾತಿನವನು, ದೊಡ್ಡ ಶಬ್ದವುಳ್ಳವನು. 5. ಬಹಳ ಪಾಪವುಳ್ಳವನು, ಕಪ್ಪಾದವನು. ಹೀಗೆ ಮೇಘವನ್ನು ಕೆಟ್ಟ ಮನುಷ್ಯನಿಗೆ ಸರಿಮಾಡಿ ವರ್ಣಿಸುತ್ತಾನೆ. 6. ಹಂಸಪಕ್ಷಿ ಸೂರ್ಯ. 7. ಬೆಳ್ಳಗೆ, ದುಂಡಗೆ ಆಗಿರುವವನು, ನಿರ್ಮಲ ಬಳ್ಳೆ ನಡಾವಳಿ ಯುಳ್ಳವನು. ಹೀಗೆ ಹಂಸವನ್ನು ಬಳ್ಳೆ ಮನುಷ್ಯನಿಗೆ ಜೋಡುಮಾಡಿ ವರ್ಣಿಸುತ್ತಾನೆ. ಮಳೆ ಗಾಲದಲ್ಲಿ ಹಂಸಗಳು ಸರೋವರ ಬಿಟ್ಟು ಎಲ್ಲಿಯಾದರೂ ಅಡಗಿಕೊಳ್ಳುವವು.

1186. ಗರಿ ನೆರೆಯದ ಕಿರು ಮರಿಗ[1]ಳ

The swans go to some hiding place before the rains set in.

ನಿರುಂಕಿ ಪಕ್ಷದೊಳಿ ಪಾರಲಾರದೆ ಪಿರಿಮುಂ
ಮರುಗುವ ಮರಾಳಿಗಳ ನು
ಣ್ಗರಿವೊ[2]ತ್ತೆಡೆ ವಿಡದೆ ತಳರ್ದುವಂಚೆಗಳಾಗಳ್.

1. ಮರಿಗಳನ್ನು. 2. ಗರೆಯುತ್ತ.

1187. ಗರಿ ಮೂಡಿವಂತೆ ಕೆಲದೊ

The thunder like the noise of Indra's weapons.

ಳ್ಕರುಮು[1]ಗಿಲಿರೆ, ಜಲದನೀಲಗಿರಿ ನೆಗೆಯೆ, ಕೆರೆ
ತ್ತೆರಗಿದ ವಜ್ರಿಯ ವಜ್ರದ
ಬಿರುವೊಯ್ಲರವಕ್ಕೆ ಬರಸಿಡಿಲ್ಸರಿಬ[2]ಕ್ಕುಂ.

1. ಸಣ್ಣ ಮುಗಿಲು ಎಂಬ ರೆಕ್ಕೆ ಯುಳ್ಳ ದೊಡ್ಡ ಮೇಘ ಎಂಬ ನೀಲಗಿರಿ ಹಾರಲಾಗಿ ವಜ್ರ ಇದ್ದ ಇಂದ್ರನು ಕೈಯಿತ್ತಿ ಹೊಡೆದ ಸಪ್ಪಳದಂತೆ ಸಿಡಿಲು ಆಗಿತ್ತು. 2. ಕರ; ಪ್ರಕೃತಿ ಸ್ವರ ಲೋಪ (ವ್ಯಾ. ಸೂ. 10.)

1188. ಕಡಲವಿ[1]ಷವಿಾಂಟಿದೊಡೆ, ತಂ
ನೊಡಲಂ ಬಿಡವಡರೆ ಕರ್ಪುವೆತ್ತಂಗದಿನಾ
ಗಡೆ ಜೀವನ[2]ವಂ ಬಿಟ್ಟುದು
ಜಡವಂ ಮೃಡನುಳಿವನೆಂದೊಡುಳಿವರ್ಗಳವೆ?

The clouds drink the water of the sea and pouring it down, die: Rain.

1. ನೀರು, ವಿಷ. 2. ನೀರು, ಜೀವ.—ಮೇಘ ಸಮುದ್ರದ ನೀರು ಕುಡಿದು ಕಪ್ಪು ಶರೀರವುಳ್ಳದ್ದಾಗಿ ಮಳೆಯಲ್ಲಿ ನೀರು ಬಿಟ್ಟು ಸತ್ತು ಹೋಯಿತು. ಮೇಘವನ್ನು ಅಂದು ವಿಷ ಕುಡಿದ ಮೃಡನಿಗೆ ಸಮಾನ ಮಾಡುತ್ತಾನೆ.

1189. ನೆರೆಮು ಘನಘನ[1]ಸಮೇಭೋ
ತ್ಕರವಿಾಂಟಿ ಮಹುತ್ತರಂಗಿಣೀಜಳಮಂ ಪ್ರಾ
ತ್ಕರಿಸೆ, ಸಿಡಿದಿಳಿವ ಕಣಗಣ
ದಿರವೆನಿಸಿಮುವರರೆ! ಸುರಿವ ಪೇರ್ಮಳೆ ನಭದಿಂ.

The elephants, (clouds) spouting forth from their trunks water, rain.

1. ಮೇಘವೆಂಬ ಮದಾನೆಗಳ ಸಮೂಹವು.

1190. ಸುರಚಾಪಚಂಪಕಸ್ರ[1]ಜ
ಕುರವಣಿಸುತ್ತಸಿತಜಳದಮದಮಧುಪಸಮು
ತ್ಕರಮೆರಗಿದಂತೆ, ಮೆರದುದು,
ಪರಿಕಿಸದಾತ್ಮೀಯಜೀವನವ್ಯಯಭಯಮಂ.

The black bees, the dark clouds without fearing for their life, on the (red) flowers, the rainbow.

ಮಳೆಬಿಲ್ಲೇ ಚಂಪಕಪುಷ್ಪ, ಮೇಘವೇ ಸೊಕ್ಕಿದ ಭೃಂಗ. ಇದು ಜೀವದ ಭಯ ಪರಿಕಿಸದೆ ಅದರ ಮೇಲೆ ಕೂತಿತು.

1191. ನುಂಗೆ ರವಿರುಚಿಯನಮ ತಂ
ನಂಗಳ ಸುಡಲಸಿತಜಲವಿ[1]ಧುಂತುದನುಗುಳ್ವಾ
ಪಾಂಗನನುಕರಿಸಿ ಮಿಂಚುತ
ಡಂಗುವ ಸೆಳೆಮಿಂಚಮೇಂ ಮನಂಗೊಳಿಸಿದುದೊ!

Rahu, the dark clouds, spitting out the rays of the sun, which he had devoured, lightning.

ಮೇಘವೇ ರಾಹು. ಮಿಂಚೇ ಅವನು ಮೊದಲು ನುಂಗಿ ಹಿಂದಗಡೆ ಬೆಂಕಿ ತಾಳಲಾರದೆ ಕಾರಿದ ರವಿರುಚಿ. 2. ಕರೇ ಮೋಡ ಎಂಬ ವಿಧುಂತುದನು ಕರ್ತೃ.

1192. ಮೋಲ್ಸರಿ, ಸೂೞ್ಸರಿ, ಮುಗಿಲೊೞ
ೞ್ಗಲ್ಸರಿ, ತೆೞ್ಸರಿ, ಕರಂ ಪೊಸಲ್ವರಿಯಿಪ ಬಂ
ಬಲ್ಸರಿ, ನಿಲುಪಿಲ್ಲದೆ, ಮಿಗೆ
ಕಾಲ್ಸರಿ ಸಲೆ ಸುರಿದು ಕರೆದಪಿರುಳುಂ ಪಗಲುಂ.

Different kinds of rain, poured down day and night.

ನಾನಾಪ್ರಕಾರವಾಗಿ ಮಳೆ ಆಗುತ್ತಿತ್ತು.

1193. ಘುಡುಘುಡುಘುಳಘುಟಿಲೆಂದು
ಗ್ಗಡದ ಸಿಡಿಲ್ಧನಿಯೆ ಪೊಡೆಯೆ, ಗಗನಸ್ಥಳದಿಂ
ದುಡುಗಳ್ಪಳ ಪಳಸುದುರ್ವ ವೊ
ಲೆಡೆ ವಿಡದಿಳಿವಾಲಿವರಲ ಮಳೆ ಬಗೆ ಗೊಳಕುಂ

Hail-stones, as if the stars had fallen from the sky.

1194. ಯೆಳಸಿ ನಿಜಚಂಚುಪುಟದೊ
ಳ್ತಳೆದಿನೆಯುಳ್ಗರೆದು ಮರಿಗಳಂ ತಣಿಸಿ ಮನಂ
ಗೊಳುತಳುಪಿ ಸೆಳೆದು ಜಲಕಣ
ಕುಳವಂ ಪೀರ್ದತ್ತು ಚಾತಕಂ ಚದುರಿಂದಂ.

The chátaka bird drinking the rain-drops.

ಚಾತಕಪಕ್ಷಿ ಮಳೆ ಹನಿಯನ್ನಲ್ಲದೆ ಬೇರೆ ನೀರು ಕುಡಿಯುವದಿಲ್ಲ.

1195. ಜಳಮಯಮಿಳೆ; ಜಳದಮಯಂ
ಜಳಧರಮಾರ್ಗಂ; ತಟಿನ್ಮಯಂ ದಿಗ್ವಳಯಂ;
ಕೆಳೆಗೊಳೆ, ನವಸೃಷ್ಟಿಯನೇಂ
ತಳೆದುದೊ ಭುವನಂ ಘನಾಗಮಾಂಬುಜಭವನಿಂ[1]!

What a new creation the world has put on by that creator, the rainy season!

1. ಮಳೆ ಕಾಲ ಎಂಬ ಬ್ರಹ್ಮ.

1196. ಫಣಿಯಂ ತುಂಡಿಸಿ ವಿಷಮಂ

The delight of the peacocks.

ನೊಣೆದಾನುಂ ನೀಲಕಂಠನಾದೆನೆನುತ್ತಂ
ಕುಣಿವಂತೆ, ವಿಷಧರ[1]ವ ಮುಂ
ದಣಿಯುರದಿಂ ಕೇಗಿ ಕುಣಿವ ನವಿಲೆಸೆದಿರ್ಕುಂ.

1. ಮೇಘ.

1197. ಬೆಳೆದೆಳೆವು[1]ಲ್ಕರಮೆಸೆವ

The ground wet and cold, by the shaking leaves, shivering

ತ್ತಿಳೆ ಮಳೆಯಿಂ ನಾಂದು ಸೇಡುವಡದಿರೆ, ಪೊಳೆತ
ರ್ಗಳಪುಳಕಾಂಕುರಮನೆ, ಸಂ
ಚಳದಳವನದಿಂದೆ ಕಂಪಿಪಂತಿರೆ, ತೋರ್ಕುಂ.

1. ಎಳೇ ಹುಲ್ಲು. ಭೂಮಿ ಚಳಿಯಾಗಿ ನಡುಗುವ ಹಾಗೆ ಕಂಡಿತು.

ಚಂಪಕಮಾಲಾ ವೃತ್ತ.

1198. ಅಡಿಗಡಿಗುರ್ವಿ ಮಿಂಚುವಳೆಮಿಂಚು ಮರುದ್ಭಟನೆತ್ತಿ ಬೀಗದಿಂ

The rainy season a king, to vanquish the hot season, the wind his drummer.

ಸ್ಫುರಿಪ ಸುವರ್ಣಕೋ[1]ಣಮೆನೆ, ತಳ್ತ್ತು ತಾನೊಗೆದತ್ತು ಕಾರ್ಮುಗಿ
ಲ್ಗಡಣಮೆನಿಪ್ಪ ದಂತಿತತಿಯುಗ್ರದ ಡಿಂಡಿಮನಾದವಂತೆ ಪೇ
ರ್ಗುಡು[2]ಗು ನಿದಾಘನಂ ತಗುಳಲ್ಕೈದಿದ ನೀರದಕಾಲರಾ[3]ಜನಾ.

1. ಮಿಂಚೇ ಮರುದ್ಭಟನು ಎತ್ತಿ ಹೊಡೆಯುವ ಸುವರ್ಣದ ಗುಣಕು. 2. ಗುಡುಗೇ ಮೋಡವೆಂಬ ಆನೆಯ ಸಮೂಹದ ಮೇಲೆ ಹೇರಿದ ಭೇರಿನಾದ. 3. ಮೇಘ ಕಾಲ ರಾಜನ ಗುಡುಗು ಬಗೆದತ್ತು ಎಂಬಂತೆ ಅನ್ವಯಿಸ ಬೇಕು. ಮಳೆ ಕಾಲವೇ ಬೇಸಿಗೆ ಎಂಬ ವೈರಿಯ ನೂಕಿಸುವ ರಾಜನು.

ಮತ್ತೇಭ ವೃತ್ತ.

1199. ರವಿಚಂದ್ರಪ್ರಚುರಪ್ರಭಾಪ್ರಚಯಮಂ ಮೇಘಂ ಮುಸುಂಕು [ತ್ತಿ, ಕಾ

The clouds darkening the sky (bad poets) lightning (their bad poems.)

ರ್ಷ್ಣ್ಯವಿಶಿಷ್ಟಂ ತಟಿದಂಕುರಾಲ್ಪರುಚಿಯಂ ಬೀರಿತ್ತುದಗ್ರಸ್ಫುರ

ತ್ಕವಿಕಾವ್ಯಪ್ರಕಟಪ್ರಭಾವಮನದಂ ಕೇಳ್ಕಬ್ಬಿಗಂ ಗುಪ್ತಗೈ
ದಪರಾತ್ರಿಯ ಕೃತಿಪ್ರಭಾವತೆಯನಾದಂ ತೋರ್ಪವೋಲ್ಧಾತ್ರಿ
[ಯೊಳ್.

ಮೇಘವೇ ಕಿಳ್ಕಬ್ಬಿಗನು, ರವಿಚಂದ್ರರೇ ಸುಕವಿಗಳು; ಇವರ ಪ್ರಕಾಶವೇ ಸುಕಾವ್ಯ; ಮೇಘದ ಮಿಂಚೇ ಕಿಳ್ಕಬ್ಬಿಗನ ಕೃತ್ಯ. ಅನ್ವಯ: ಮೇಘವು ಪ್ರಜೆಯುಮಂ ಮುಸುಕುತ್ತಾ ವಿಷ್ಟಂ ರುಚಿಯುಂ ಬೀರಿತ್ತು.

1200. ತರಳಕ್ಕಿಂವಡಿ ಯಿಟ್ಟು ಜಾರಿ ಜವದಿಂ ಕೈಯೂರಿ ಬೀಳ್ದೆಳ್ದು ಪಂ
ಕಿಳಮಾದಂಶುಕಮಂ ಪೊಸಲ್ವರಿವ ನೀರೊಳ್ಕರ್ಚಿ ಮೈ ಸಾರ್ಚಿ ಪ
ಲ್ಗಳ ನಾ[1]ದಂ ಪುಳಕಾಂಕುರಂ ಮೊಳೆಯೆ, ಮೋಣಾರ್ದ್ರಮ ಕಾಲಿ
[ಟ್ಟು ಕೋ
ಲ್ಗಳನಾಂತೈದುವ ಪಾಂಥರಂ ನಗುವರಾಹರ್ಮ್ಯಾಗ್ರದಬ್ಜಾಕ್ಷಿಯರ್.

Travellers on the muddy streets.

1. ಚಳಿಯಿಂದ ಹಲ್ಲುಗಳು ಗಿಟಕಿರಿಯುತ್ತವೆ.

ಉತ್ಪಲ ವೃತ್ತ.

1201. ಎನ್ನ ಸಹಾಯದಿಂ ನೆರೆದು ತಾಳ್ದ ಘನತ್ವಮನಸ್ಮದಿಯ್ಯ ಮಿ
ತ್ರೋಂ[1]ನತತೇಜಮಂ ತವಿಪನೆಂದನಿಲಂಮುಗಿಲಂ ಕನಲ್ದು ಪೊ
ಯ್ದಂ; ನೆಗಳಲ್ಘನಧ್ವನಿ, ಕಳಲ್ದುದಿರ್ದತ್ತು ಘನೋಪಲೌಘವಂ
ತಂ; ನಿಜಮಲ್ಲದಿರ್ದೊಡಿಳೆಯಲ್ಲಿದು ನೀರದನಾಮಮಾಂಪುದೇ ?

The wind beats the cloud, and its white teeth, (hail) fall out.

1. ಜೆಂಕೆ.—ನಂನಿಂದ ಅದು ದೊಡ್ಡದಾಯಿತು. ಆದರೂ ಜೆಂಕೆ ಎಂಬ ನಂನ ಮಿತ್ರನನ್ನ ಕೆಡಿಸುತ್ತದೆ ಎಂದು ಅನಿಲನು ಶಿಟ್ಟುಮಾಡಿ ಮೇಘವನ್ನು ಹೊಡೆದನು, ಗುಡುಗಾಯಿತು. ಈ ಹೊಡತದಿಂದ ಆನೆಕಲ್ಲು ಎಂಬ ಮೇಘನ ಹಲ್ಲುಗಳು ಉದರಿದವು. ಅದರಿಂದ ಮೇಘಕ್ಕೆ ನೀರದ (=ಮೋಡ ಅಥವಾ ನಿ+ರದ=ಹಲ್ಲಿಲ್ಲದವನು) ಎಂಬನಾಮ ಬಂತು.

1202. ಮಂಗಳವಾದ್ಯಮಬ್ದರವಮುಣ್ಮುವ ಮಿಂಚದು ದೀಪಮಾಲೆಮ
ತ್ತುಂಗಪಯೋದಮಿಟ್ಟ ತೆರೆ, ತೋರಣಮಿಂದಿರವಿಲ್ಲು ವೃಷ್ಟಿಯೋ
ಸಂಗತಧಾರೆ, ಯಾಲಿವರಲೊಪ್ಪುವ ಮುತ್ತಿನ ಸೇಸೆಯಾಗೆ ಕಾ
ರುಂ ಗಗನಸ್ಥಳೀವರವಧೂಯುಗವೊಂದಿದರೊಂದು ವಿವಾಹಲೀಲೆಯಂ.

The rainy season and the sky, the bride, married.

1. ಮಳೆಕಾಲವೇ ವರ, ಗಗನ ಸ್ಥಳವೇ ವಧು.

1203. ಚಾವಗೆಯಂತೆ ಮುಂಬನಿಯನೇಂ ಬರೆ ಪೀರ್ದಪುದೆ? ವಲ್ಲಿಯಂತಿದೇಂ
ತೋಱುದೆ ವಾರಿಯಿಂ? ಕಡವಿನಂತೆ[1] ಮುಗುಳ್ತುದೆ ತತ್ಸಹಾಯದಿಂ?
ಕೇದಗೆಯಂತೆ ಪೂತುದೆ? ಮುಗಿಲ್ಗಳ ಪಂಗಿನಿತುಂಟೆ? ಕೇಕಿ[2] ಯಾ
ಹ್ಲಾದದೆ ಕಂಡು ನರ್ತಿಪ್ಪುದಿವತ್ತಿ ಸಮಾನವಯಃಪ್ರವರ್ತನಂ?

The peacock has no advantage from the clouds; yet it is delighted when they come.

1. ಈಗಿಡ ಮಳೆಗಾಲದಲ್ಲಿ ಯಲ್ಲದೆ ಬೇರೆಕಾಲದಲ್ಲಿ ಚಿಗುರುವದಿಲ್ಲ. 2. ನವಿಲು ಮೇಘ ಕಂಡರೆ ಕುಣಿದಾಡುತ್ತದೆ. ಮೇಘದಿಂದ ಅದಕ್ಕೆ ಪ್ರಯೋಜನವೇನಿಲ್ಲ. ತನಗೆ ಸಖನಾಗಿರುವ ಮೇಘದ ಪ್ರವರ್ತನವನ್ನು ಕಂಡು ಸಂತೋಷ ಪಟ್ಟು ಕುಣಿಯುತ್ತದೆ.

ವಂಶಸ್ಥ ವೃತ್ತ.

1204. ಸ್ಫುರದ್ಧನು ಶ್ರೀಕರ ಚಂಚಲೇಕ್ಷಣಂ
ಶರದ್ವ್ಯುಪಾತೋರುಶರಂ ಘನಸ್ವನಂ
ಹರಿಪ್ರಭಂ ನೀರದರಾಜನಟ್ಟಿದಂ
ಧರಾತಿಸಂತಾಪದನಂ ನಿದಾಘನಂ.

The king cloud chased the hot season.

ಮೇಘರಾಜನನ್ನು ವರ್ಣಿಸುತ್ತಾನೆ: ಸಂಪತ್ತನ್ನು ಸಂಪಾದಿಸುವ ಮಳೇಬಿಲ್ಲು ಇದ್ದವನು; ಮಿಂಚೇ ಅವನ ಕಣ್ಣು, ಆಕಾಶದಿಂದ ಉದುರುವ ಹನಿಯೇ ಅವನ ದೊಡ್ಡ ಬಾಣ; ಆಕಾಶದ ಪ್ರಭೆಯುಳ್ಳವನು. ಇವನು ಭೂಮಿಗೆ ಸಂತಾಪ ಕೊಟ್ಟ ಬೇಸಿಗೆಯನ್ನು ಅಟ್ಟಿದನು.

THE COLD SEASON.

7. ಹಿಮಂತರುತುವರ್ಣನ. (ಆಶ್ವಾಸ. 9.)

ಮಾಲಿನಿ ವೃತ್ತ.

1205. ಸುರಕರಿಕರಮುಕ್ತಾಂಭಃಕಣಂ ಮಂಜಿದೆಂಬಂ

The east wind with mists, devouring the heat, set in.

ತಿರೆ ತೆಳೆದು ಶಿಖಾಪಟ್ಟವರ್ಣಮಂ ನುಗಿ ನೀಲಾಂ

ಬುರುಹಸುರಭಿ ಯೊಂದುತ್ತೈದಿದಂ, ಮಾಗೆ ಬರ್ಪಂ

ತಿರೆ, ಘೃತಘನಸಾರಾಮೋದಸಾರಂ ಸಮೀರಂ.

1. ಬೆಂಕಿಯು ಹಾಗೆ (ಸಂಸ್ಕೃತ) ಇಂದ್ರನ ಆನೇ ಸೊಂಡಿಲಿಂದ ಬಿಟ್ಟ ಹನಿಯೇ ಮಂಜು; ಘಾಳಿ ಶಿಕೆಯನ್ನು ನುಂಗಿ ನೈದಿಲಹೂವಿನ ಮೇಲೆ ಹಾದು ಕರ್ಪೂರ ಯುಕ್ತವಾದ ಗಂಧದಿಂದ ಬಂದು ಮಾಗೆಯಾದ ಹಾಗೆ ಆಯಿತು. 2. ಈ ಶಬ್ದ ಸಮೀರವೆಂಬ ಪದವನ್ನು ವಿಶೇಷಿಸುತ್ತದೆ. ಸಮೀರ ಐದಿದಂ ಎಂಬ ಕ್ರಿಯಾಪದಕ್ಕೆ ಕರ್ತೃ.

ಚಂಪಕಮಾಲಾ ವೃತ್ತ.

1206. ನೆಗೆದುಡುಜಾಲದಂತೆ ಪೊಸಮೊಲ್ಲೆಯ ಬಲ್ಮೊಗುಳೊಪ್ಪೆ, ಪದ್ಮಮಂ

The moon, the cold season, rose, at which the sea of mists swelled, the moonlight, &c.

ಮಿಗೆ ತೊರೆದಲ್ಲಿ ಲಕ್ಷ್ಮಿ ನಿತಿ ನೈದಿಲೊಳುರ್ಬಿದ ಮುರ್ಬು ಪಿಂಗಿದಂ

ತಗಲಿರೆ ಕಾರ್ಮುಗಿಲ್ಮೆಗಳೆ ಜೊನ್ನದ ಪೊಲ್ಪೊಸಮಂಜು ವಾ

[ರ್ಧಿ, ಪೆ

ರ್ಚುಗೆಯನಮರ್ಚೆ, ತಾಳ್ದನುದಿತೋದಯಮಂ ಹಿಮಕಾಲಚಂ

[ದ್ರಮಂ.

ಹಿಮಕಾಲವನ್ನು ಚಂದ್ರೋದಯಕ್ಕೆ ಸಮಾನಮಾಡಿ ವರ್ಣಿಸುತ್ತಾನೆ. ಮೊಲ್ಲೆಯ ಮುಗ್ಗಿಗಳೇ ನಕ್ಷತ್ರಗಳು; ಕಮಲ ಮುಚ್ಚಿ ನೈದಿಲೆಗಳು ಅರಳಿದವು. (ಲಕ್ಷ್ಮಿ ನೈದಿಲೊಳು ನಿಂತಳು.) ಕಾರ್ಮುಗಿಲು ಹೋಗಿತ್ತು; ಮಂಜೇ ಬೆಳೆತಿಂಗಳು ಮುಂತಾದ್ದು.

ಮತ್ತೇಭ ವೃತ್ತ.

1207. ಇಳೆಯುಂ ಮುರ್ಛೆ ಮುಸುಂಕೆ ನಿಷ್ಫಲತೆ[1] ಇತ್ತಾಶಾಧಿಪರ್ಗೊಂಟು [ಗೊಂ

The cold season humiliated; the wind and the fire its friend.

ಟೊಳಿಸಾರ್ದಂತಿರೆ, ಮಾಡಿ, ವಹ್ನಿಸಖ ನಾನೆಂಬೊಂದಹಂಕಾರಮಂ
ತಳೆದಾಮಾರುತನಂ ಕರಂ ಪಿಡಿದು ತನ್ನೈಕಿಲ್ಗಳಿಂ ನಾಂದಿ ಸಂ
ಚಳನಂ ಮಾಡಿ ತದಾಪ್ತನುರ್ಕು[2] ಮುರಿದೇಂ ಪರ್ಬಿತ್ತೊ ಹೈಮಾ [ಗಮಂ !

1. ಒಬ್ಬರು ಮಿಸಕ್ಯಾಡದ ಹಾಗೆ ಮಾಡಿದನು ಹೈಮಾಗಮ ಎಂಬವನು. 2. ಘಾಳಿ ಯು ಆಪ್ತನು=ಬೆಂಕಿಯು ಸೊಕ್ಕು.

ಮಹಾಸ್ರಗ್ಧರ ವೃತ್ತ.

1208. ನಡುಕಂ ಕೈಮೀರೆ, ದಂತಚ್ಛದ ಪೊಡೆದು ಹುಹುಧ್ವಾನಮುಂ ಪೋ [ಣ್ಮೆ, ಮೈಯ್ಯೊ

The effects of the cold on travellers.

ಳ್ಬಡಪೆತ್ತಂ ತೋರೆ ರೋಮೋದ್ಗಮಮುಮರ್ದಿರೆ ಶೀತ್ಕಾರ ಮುಂ [ಗೈ[1]ವೆರಲ್ಕಾ
ಲ್ಕಡಿ ಪೆತ್ತಂತಾಗೆ, ತಳ್ತೈಕಿಲ ಭರದೆ ಪಡಲ್ಪಟ್ಟು ಗೇಣಾಗಿ ಪಾಂಥ
ರ್ತೊಡೆ ತೋಳ್ಗಳ್ಕೂಡಿ ಜಾನುಪ್ರಹಿತಶಿರರದೇನಿರ್ದರೊಶೀತಭೀ [ತರ್ ?

1. ಬೆರಳು ಕಾಲು ತುಂಡಾದ ಹಾಗಿದ್ದವು.

ಕಂದ.

1209. ಪಗೆಯ[1] ಕಳೆ ಯುಡುಗಿದುದು, ಗಡ !

The water lily, fancying that

ಪಗೆಯುಂ ಕಳೆಗೊಂಡ ನಳಿನಿ ಕೊರಗಿದಳೆಂದೆ

1. ಸೂರ್ಯ, ಅವನು ನೈದಿಲೆಗೆ ವೈರಿ.

the cold was the moonlight, was open also in the day time.

ನಗುವುದೆನೆ, ನೈದಿಲೆ ಪಗ
ಲ್ಮುಗಿಯದು[2] ಬೆಳ್ದಿಂಗಳೆಂದು ಭಾವಿಸಿ ಹಿಮಮಂ.

2. ಹಿಮ ಬೆಳದಿಂಗಳೆಂದು ನೆನಸಿ ನೈದಿಲೆ ಹಗಲೊತ್ತಿನಲ್ಲಿ ಯಾವರೂ ಮುಚ್ಚಿ ಕೊಳ್ಳುತ್ತಿದ್ದಿಲ್ಲ.

1210. ಮಂಜಿರೆ, ನರೆ ಯೆನೆ, ಕೊರಗಿರೆ

The lady day became an old woman with gray hairs, &c.

ಕಂಜಂ, ತೆರೆವಿಡಿದು *ಸುರ್ಕಿದಾನನಮೆನೆ, ಚ
ಕ್ರಂ ಜಗುಳ್ದಿರೆ, ಮೊಲೆ ಯೆನೆ, ಹಿಮ
ದಿಂ ಜರೆ ಗೊಂಡಂತೆ, ದಿವಸರಮೆ ಕಳೆ ಗೆಟ್ಟಳ್.

ಹಿಮಕಾಲದ ದಿನ ಒಬ್ಬ ಮುದಿಕಿಗೆ ಸಮಾನ ಮಾಡುತ್ತಾನೆ. ಮಂಜೇ ನರೆಕೂದಲು, ಬಾಡಿದ ಕಮಲವೇ ಒತ್ತಿದ ಮೋರೆ, ಜೋತುಬಿದ್ದ ಚಕ್ರಪಕ್ಷಿಗಳೇ ಮೊಲೆ.

1211. ಮರದೊಳಿಸೆನೆಂದು ನೆವದಿಂ

The fire and the sun confess themselves to be vanquished.

ಮರಸಡರ್ದ ಶಿಖಿ ; ದಿವಾಕರಂ ನೀರ್ವೊಕ್ಕಂ[1]
ಪರಿಗತಬಿಂಬವ್ಯಾಜದಿ
ನರರೆ ! ಹಿಮಾಗಮಮಹೀಶನೇಂ ಕಡುಗಲಿಯೊ !

ಹಿಮ ಎಂಬ ಅರಸನು ಬೆಂಕೆಯನ್ನೂ ಸೂರ್ಯನನ್ನು ಗೆದ್ದನು. ಗಿಡ ಹತ್ತುವದು ನೀರೊಳಗೆ ಬೀಳುವದು ಸೋತವರ ಲಕ್ಷಣ. 1. ಮುಣಗಿದನು ಸಮುದ್ರದಲ್ಲಿ.

1212. ರಯದಿಂ ಮುಸುಂಕುತಿರ್ಪ ತಿ

Sun and fire unable to lessen the cold.

ಶಯಹಿಮಮಂ ಕಳೆಯಲೆಂದಿನಂ ಶಿಖಿಯು ಸಮಾ
ಶ್ರಯಮೆಸಗಿ ಕಳೆಯೆ[1]ನೆನಲಾ
ಶ್ರಯಾ[2]ಶನಾಶ್ರಯದಿನಿಷ್ಟಮೇಂ ಸಮನಿಪುದೆ ?

1. ಕಳೆಯುವದಿಲ್ಲ. 2. ಬೆಂಕೆ, ತನ್ನ ಹೊಂದಿದ್ದನ್ನು ತಿನ್ನುವಂಥಾದ್ದು, ಹಿಮಕಾಲದಲ್ಲಿ ಸೂರ್ಯನು ಅಗ್ನಿದಿಕ್ಕಿನಲ್ಲಿ ಉದಯವಾಗುತ್ತಾನೆ.

1213. ಪುದಿದ ಹಿಮಮೊಡಲದೊಳತಂ
ದುದರಾಗ್ನಿಯನ್ನೈದೆ ನಂದೆ, ವೈದುಮು ; ನಿಜಮು
ಲ್ಲದೊಡೆಂತು ತೋರ್ಪುದೋ ? ಪೇ
ಳ್ಕ್ರಿದಲಿಲ್ಲದ ಪೊಗೆ ಪೊಗಳ್ದು ಜನದಾನನದೋಳ್[1] ?

The cold has entered the body and quenched the fire in it.

1. ಜನರ ಬಾಯೊಳಗಿಂದ ಉಸರಿನ ಹೊಗೆ ಚಳಿಕಾಲದಲ್ಲಿ ಬಹಳ ಬರುತ್ತದೆ. ಇದು, ಹಿಮ ದೇಹದೊಳಗೆ ಹೊಕ್ಕು ಉದರಾಗ್ನಿಯು ನೊಂದಿಸಿದರಿಂದ, ಹೀಗೆ ಆಗುತ್ತಿತ್ತು ಎಂದು ವರ್ಣಿಸುತ್ತಾನೆ.

ಸ್ವಾಗತ ವೃತ್ತ.

1214. ಗೇರಪಂಣ[1]ನಿದು ಕೆಂಡಮೆನುತ್ತಂ
ಸಾರಿ ಮೇಲೆ ತೃಣಮಿಟ್ಟದನೂಪಲ್,
ಸೇರಿ ಬಾಯ ಪೊಗೆ ತಳ್ತಿರೆ, ಕಂಡಾ
ದಾರಿಗಂ ಮುದದಿನೂದುತಮಿ[2]ರ್ದಂ.

A traveller making fire.

1. ಕೇರುಹಂಣು ಕೆಂಡದ ಹಾಗೆ ಕೆಂಪು ತೋರುತ್ತದೆ. 2. ತನ್ನ ಬಾಯ ಉಸರಿನ ಹೊಗೆ ಬೆಂಕಿ ಹೊಗೆ ಎಂದು ದಾರಿಗನು ಊದುತ್ತಿದ್ದನು.

ಕಂದ.

1215. ಚಳಿಗಾ[1]ರದೆ ಪೇರಾಲದ
ಕೆಳಗಿರ್ಪನಿತರೊಳೆ ಚಪಳಕಪಿ ನಿಡುಗೊಂಡಂ
ಸೆಳೆದಲುಗೆ, ಸೂಸುವೆಲೆವನಿ
ಗಳಿನೋರ್ವಂ ನೆನೆಮ ನಡುಗಿ ಸಿಡಿಮಿಡಿ ಗೊಂಡಂ.

One became wet by the dew-drops, that fell from a tree.

1. ಸೈರಿಸಲಾರದೆ.

1216. ಇಡಿದಿಂಧನದೊಳೆ ಫಣಿ ಯೊಳ
ಗಡಂಗೆ, ಮಣಿ ಗಂಡು ಕೆಂಡಮೆಂದೊರ್ವಂ ಕೈ
ದುಡುಕೆ, ಮೊರೆದೇಳೆ, ಭಯದಿಂ
ಕಡು ಚಳಿಯಿಂದೋರ್ವ ನೆಡೆಮ ನಡುಗುತ್ತಿರ್ದಂ.

One mistakes the hood of a serpent concealed in wood, for fire, &c.

1217. ಹಾದಿಯೊಳೂದಿದನೋರ್ವಂ,

The crane seeks burning coals in the ashes.

ಬೂದಿ ಕರಂ ಪಾರೆ, ಕೆಂಡಮಂ ಕಂಡವಿಬೆಂ

ದಾದರಿಸಿ ಕುಕ್ಕಿಕೊಕ್ಕಂ

ಪೋದುದದಂ ಕಾಗೆ; ಮಾಗೆ ಯೇನತಿಶಯಮೋ!

1218. ಪುಲ್ಲಿಕ್ಕಿ ಪೋಗೆ ಪಥಿಕ

The fire burns only slowly from fear of the king "Cold"

ರ್ಪೊಲ್ಲನೆ ಸುಡಲಾರದಗ್ನಿ ಹಿಮಸಮಯಮಹೀ

ವಲ್ಲಭನತ್ತ್ರಣಿಸಗಿಪೇಂ

ಪುಲ್ಲಂ ಕರ್ಚಿಪುದೊ[1]? ಪೇಳೆನಲ್ತುಳ್ಳಿಸಿಗುಂ.

1. ಸೋತವರು ಹುಲ್ಲು ಕಚ್ಚುತ್ತಾರೆ. ಬೆಂಕೆ ಹಿಮಸಮಯ ಎಂಬ ಮಹೀವಲ್ಲಭನಿಗೆ ಅಂಜಿ ಸೋತ ಹಾಗಾಯಿತು.

1219. ಗರಿ ಗೆದರಿ ಬಿದಿರ್ದು ಕೊಕ್ಕಂ

The birds in the cold.

ಬಿರಿದಿರಿದೆಳೆ ಪಿಸಿಲನೆಳಸಿ ಸೇಡುಂ ಗೊಂಡೇಂ

ತುರುಗಿರ್ದಪ್ಪೊ ತುದಿಗೋಡೊಳ್?

ಮರಿ ಚಿರತಿರೆ, ನೋಡಿ ಬಾಡುತಂ ವಿಹಗಂಗಳ್.

ಸ್ರಗ್ಧರ ವೃತ್ತ.

1220. ಯೇಳುತ್ತಂ ಪೊಲ್ಲನಲ್ಲಿಂ ಮರಿ ಯಮರ್ದಿರೆ ಕೀಳ್ಪೊಟ್ಟೆಯೊಳ್ಸ [ರ್ಕಿನೆತ್ತಾ

The monkey angry with the cold dew.

ಬಾಳಂ ಪೊಣ್ಮಿಕ್ಕೆ, ನೋಡುತ್ತ ಸಪಸಪಿ ಬಿಸಿಲ್ಗೆತ್ತು ಜೀರ್ಣಾಘ [ವಂಗಳ್

ಮೋಳಂ ಗೊಂಡೊಪ್ಪಿ ಶಾಖಾಗ್ರದೊಳಡರ್ದಲುಗಲ್ಪೂಸಿಮೇಲ್ಬೈಕಿ
[ಲಿತ್ತಂ

ತೊಳ್ದುಂಪುಂಗಂಕರಂ ಪಲ್ಲೆರದು ನಡುಗಿ ಹರ್ದೆಂದು ಪುರ್ಬಿಕ್ಕಿತಾ
[ಗಳ್.

ಮಂಗ ಹೊಟ್ಟೆಯು ಕೆಳಗೆ ತನ್ನ ಮರಿ ಇಟ್ಟುಕೊಂಡು ಸುತ್ತಿದ ಬಾಲವನ್ನು ಮೇಲೆ ಬಳಕೆ ಕೆಂಪಗಾದ ಹಳೆ ಎಲೆಗಳು ಬಿಸಿಲೆಂದು ತಿಳಿದು ಗಿಡದ ಕೊಂಬೆಗಳನ್ನು ಹತ್ತಿ ಅಗಲಾಡಿಸುವಾಗ್ಯೆ, ಈಕಿಲು ತನ್ನ ಮೇಲೆ ಬಿತ್ತು. ಇದಕ್ಕೆ ಓಡಿ ಹೋಗಿ ಶಿಟ್ಟು ಮಾಡಿತು.

ಕಂದ.

1221. ಮೂಡಣೆಲರೂಡೆ, ಜವದಿಂ

The sun, a ship, driven on in the misty atmosphere, the sea.

ದೋಡುಗುವಿನಾಹಿಮಸುಧಾಬ್ಧಿಯಗ್ರದೊಳೆಸಿಪ್ಪೊಂ

ದಾಡಂಬರಮಂ ಜನದೊ

ಳ್ಮಾಡಿ ಕರಂ ತರಣಿ ತಳೆದಿರ್ದದಂಬರತಳದೊಳ್.

1. ತರಣಿ—ಸೂರ್ಯ, ಹಡಗ—ಸೂರ್ಯನೆಂಬ ಹಡಗ ಹಿಮ ಎಂಬ ಸುಧೆ ತುಂಬಿದ ಸಮುದ್ರದ ಮೇಲೆ ಮೂಡಣ ಘಾಳಿಯಿಂದ ಓಡಿಸಿ ಕೊಂಡು ಹೊರಟಿತು.

THE SEASON OF SPRING.

8. ವಸಂತರುತುವರ್ಣನ. (ಅಶ್ವಾಸ 9.)

ಮತ್ತೇಭವಿಕ್ರೀಡಿತ ವೃತ್ತ.

1222. ಕಳಕಂಠೀಕಳನಾದಕಾಹಳೆ, ಮಿಳದ್ಭೃಂಗಾವಳೀರಾವಮಂ

King spring with his Queen grove came.

ಜುಳಗೀತಂ, ಶುಕವಂದಿವೃಂದನಿನದಂ ಮಂದಾನಿಲಾಂದೋಳಿತೋ

ಜ್ವಳವಲ್ಲೀಮೃದುಲಾಸ್ಯಮೊಪ್ಪಿರೆ, ವನಶ್ರೀವಲ್ಲಭಂ ಸಮ್ಮದಂ

ದಳದೇಳ್ತಂದನಮಂದವೈಭವಯುತಂ ಚೈತ್ರಕ್ಷಮಾಧೀಶ್ವರಂ.

ಕೋಗಿಲೆ ಸ್ವರವೇ ಕಾಹಳೆ, ಭೃಂಗರಾವವೇ ಗೀತ, ಗಿಳಿಗಳೇ ಹೊಗಳುವವರು, ಗಾಳಿಯಿಂದ ಬಳ್ಳಿ ಅಲ್ಲಾಡುವದೇ ನರ್ತನ. ಇಂಥಾ ವೈಭವದಿಂದ ವನ ಎಂಬ ಸ್ತ್ರೀಗೆ ಪತಿಯಾದಂಥಾ ವಸಂತ ಎಂಬ ಅರಸನು ಬಂದನು. ವಸಂತಾಗಮವನ್ನು ವರ್ಣಿಸುತ್ತಾನೆ.

ಚಂಪಕಮಾಲಾ ವೃತ್ತ.

1223. ತಳಿರ್ನೆಳೆಮಾವು ; ಪಲ್ಲವಿಪಶೋಕೆ ; ಮುಗುಳ್ತುದಿಮುರ್ಗತ್ತೆ ; ಮೊ
[ಗ್ಗೆಯಂ

The flowers appear.

ತಳೆಯಲೊಡರ್ಚಿ ನಿಂದ ಪ್ರೊಸಮಲ್ಲಿಗೆ ; ಪುಷ್ಪಮನಾಂತ ಚಂಪಕಂ
ಪಳಿಯಲೆ ಯಿಕ್ಕಿ ಸಂಣಸನೆ ಯೇರಿದ ಪಾಟಳಿ ; ಪ್ರೂವನಾಂತು ಕಂ
ಗೊಳಿಸುವ ಕರ್ನಿಕಾರಮುಲರ್ದಿ[1]ರ್ಪುವ ಮುತ್ತುಗಮೆತ್ತ ನೋ[2]ಳ್ಪ
[ಡಂ.

1. ಹೂವು ತುಂಬುವ. 2. ಎತ್ತ ನೋಡಿದರೂ ಇವೇ ಇದವು.

ಮತ್ತೇಭವಿಕ್ರೀಡಿತ ವೃತ್ತ.

1224. ಮದನಂ ಪ್ರೂಸರಲಿಂದೆ ಪ್ರೊಣ್ದೆಸೆ, ತಪಃಸಂಯುಕ್ತಕಾರ್ಕಶ್ಯಚಿ
ತ್ತದಿ ತಾಂ ನಾಂಟದಿದೆಂದು ಬಂದು ಮಧುವೆಂ ಪಂಭೋಜನಲ್ಲೊಟ್ಟಿ
[ಮು

Cupid gets new arrows made by the blacksmith spring.

ತ್ತದ ಪೂಗೆಂಡಮನಲ್ಲಿ ಬಲ್ಸರಲ ಮಾಡಲ್ಕೆಲಯಃಪಿಂಡಖಂ
ಡವ ಸಾಲಿಟ್ಟದನೂದಿದಂತೆ ಮೊರಗುಂ ಭೃಂಗಾಳಿಯಿಂ ಗಾಳಿಯಿಂ.

ವಸಂತವೇ ಕಮ್ಮಾರ, ಮುತ್ತುದ ಹೂವೇ ಕೆಂಡ, ಭೃಂಗವೇ ಉಕ್ಕಿನಗಟ್ಟಿ: ತನ್ನ ಹೂವಿನ ಬಾಣ ನಾಟುವದಿಲ್ಲವೆಂದು ಮದನನು ಹೊಸ ಬಾಣ ಮಾಡಿಸುತ್ತಾನೆ.

ಕಂದ.

1225. ಮಧು[1]ಸೇವನೆಯಿಂ ಸೊರ್ಕುರ್ತೆ,
ಮಧು[2]ಪಂ ಸುಮನ[3]ಃಪ್ರಜೆಯುಮನಲೆದೊಡೆ, ಶಿ[illegible]ಯೊಳ್
ಮಧುರಿಪುಜನ ಜೆಸದಿನದಂ
ಮಧು ದಂಡಿಪ ತೆರದೆ ಮುತ್ತ್ರದಲರೊಳದೆನೆಗುಂ.

King cupid punishes by his minister spring the black bee, a drunkard.

1. ಹೆಂಡ, ಜೇನು.—2. ಪರಾಗ ಕುಡಿಯುವನು=ಭೃಂಗ, ಹೆಂಡ ಕುಡಿಯುವವನು. 3. ಹೂವು, ಒಳ್ಳೆ ಮನಸಿನವರು.—ಭೃಂಗ ಮುತ್ತದ ಹೂವಿನಲ್ಲಿ ಕೂತದ್ದು ಹೆಂಡ ಕುಡಿದು ಸೊಕ್ಕಿಗೆ ಬಂದು ಸುಜನರಿಗೆ ಉಪದ್ರ ಮಾಡಿದ ಭೃಂಗ ಎಂಬವನನ್ನು ವಸಂತ ಎಂಬವನು ಮನ್ಮಥನ ಆಜ್ಞೆಯಿಂದ ಬೆಂಕೆಯೊಳಗೆ ಹಾಕಿ ದಂಡಿಸುವ ಹಾಗೆ ಕಂಡಿತು.

ಉತ್ಪಲ ವೃತ್ತ.

1226. ಅಂಗಜಭೂಭುಜಂ ವಿಜಯಯಾತ್ರೆಗೆ ಪೋಗಲೊಡರ್ಚೆ, ಚೈ
[ತ್ರನು

King cupid going to war, his drummer spring calling his warriors, Mango-trees.

ತ್ತುಂಗಪಿಕಧ್ವನಿಸ್ಫುಟಮಹಾಪಟಹಧ್ವನಿ ಗೆಯ್ಯೆ, ಕೇಳ್ದು ಚೂ
ತಂಗಳೆನಿಪ್ಪ ವೀರಭಟರೇಳೆ ನವಾಂಕುರರೋಮರಾಜಿ, ಸ
ರ್ವಾಂಗದೊಳಂಮ ಪಲ್ಲವ ಲಸತ್ಕವಜಾವಳಿ ದೊಟ್ಟು ತೋರಿದರ್.

ಅಂಗಜನೇ ಅರಸನು, ಚೈತ್ರನೇ ಕೋಗಿಲೇಸ್ವರ ಎಂಬ ಭೇರಿ ಹೊಡಿಸುವವನು, ಮಾವಿನ ಗಿಡಗಳೇ ಭಟರು, ಅವುಗಳ ಪಲ್ಲವಗಳೇ ಕವಚಗಳು ;—ಅವುಗಳ ಮುಗುಳುಗಳೇ ಭೇರಿನಾದ ಕೇಳಿ ಆದ ರೋಮೋದ್ಗಮ.

SUN-SET.

9. ಸೂರ್ಯಾಸ್ತವರ್ಣನ. (ಆಶ್ವಾಸ. 11)

ಮಹಾಸ್ರಗ್ಧರ ವೃತ್ತ.

1227. ಘನಸಂಧ್ಯಾರಾಗತೀವ್ರಾನಲನೊಳೊಲವಿನಿಂ ಕಾಸಿ ತಿಗ್ಮಾಂಶು
[ಮೆಂದೆಂ

The goldsmith time making an ornament from the golden sun for lady sky.

ಬ ನವೀನಸ್ವರ್ಣಸತ್ಪಿಂಡಮನಮಳನಭಶ್ರೀಗಲಂಕಾರಮಂ ಮಾ
ಳ್ಪೆನೆನುತ್ತಿಟ್ಟೈಸಿ ಪೂರ್ವೇ[1]ತರಶರನಿಧಿಯೊಳ್ಕಾಲಮೆಂಬೋಜನೆ[2]ದ್ದ
ಲ್ಜನಿಸುತ್ತುರ್ಬೆರ್ಗಳ್ದುದೋ ! ಕಾರ್ಬೊ[3]ಗೆ ಯೆನೆ, ದೆಸೆ ದೀವಿತ್ತು
[ಘೋರಾಂಧಕಾರಂ.

1. ಪೂರ್ವಕ್ಕೆ ಇತರ=ಪಶ್ಚಿಮ. 2. ಅದ್ದಲು. 3. ಕಾರ್ಹೊಗೆ ಸಂಧ್ಯಾರಾಗವೇ ಕೆಂಕೆ, ಮುಣುಗುವ ಸೂರ್ಯನೇ ಭಂಗಾರದ ಘಟ್ಟಿ, ಕಾಲವೇ ಅಕ್ಕಸಾಲಿಗನು. ರಾತ್ರಿಯು ಕತ್ತಲೇ, ಗಗನ ಎಂಬ ಸ್ತ್ರೀಗೆ ಅಲಂಕಾರ ಮಾಡಬೇಕೆಂದು ಇವನು ಆ ಭಂಗಾರದ ಘಟ್ಟಿಯುನ್ನು ಕಾಸಿ ಪಶ್ಚಿಮ ಸಮುದ್ರದಲ್ಲಿ ಅದ್ದುವಾಗ, ಏಳುತ್ತಿದ್ದ ಹೊಗೆ.

ಚಂಪಕಮಾಲಾ ವೃತ್ತ.

1228. ನಿಜಕರದಿಂದೆ[1] ರಾಜವಸುವೆಲ್ಲಮನೊಯ್ಯನೆ ಕಳ್ದು ನೀಲನೀ
Darkness, disreputation to the sun.
ರಜನಿಯ ಬಾಯ ಮುದ್ರಿಸಿ ಪಿಸುಣ್ಗೆಡೆಯಪ್ಪಳಿಸುತ್ತೆ, ಮತ್ತೆ ನೀ
ರಜನಿಯೊಳೊಲ್ದು ಪುಷ್ಪವತಿಯೊಳ್ದವದೋಳ್ಬೆರೆದಿಂತು ಸತ್ಪಥ
ತ್ಯಜನಮನಾಳ್ದು ಬೀಳ್ದಳವ ಸೂರ್ಯನ ದುರ್ಯಶಮಪ್ಪುದೀ
[ತಮಂ.

1. ಕಿರಣ, ಕೈ. 2. ರಾಜನದ್ರವ್ಯ, ಚಂದ್ರನ ಕಿರಣ. 3. ಹೂವು ಇದ್ದಾಕೆ, ಮುಟ್ಟು ಆದಾಕೆ. 4. ಆಕಾಶ, ಹಗಲು ಕತ್ತಲೆ ಸೂರ್ಯನ ದುಷ್ಕೀರ್ತಿ ಅದು ಹ್ಯಾಗಂದರೆ ಅವನು ತನ್ನ ಕೈಯಿಂದ (ಕಿರಣದಿಂದ) ರಾಜರ ಐಶ್ವರ್ಯವನ್ನು (ಚಂದ್ರನ ಕಿರಣವನ್ನು) ಕದು ನೈದಿಲೆಯ ಬಾಯಿ ಮುಚ್ಚಿ (ಚಾಡಿ ಹೇಳುತ್ತಾಳೆಂದು) ಕಮಲವನ್ನು ಹಗಲಲ್ಲಿ ಅರಳಿಸಿ (ಸ್ತ್ರೀಯನ್ನ ಅನುಭೋಗಿಸಿ) ಸನ್ಮಾರ್ಗವನ್ನು ಬಿಟ್ಟು ಕೆಟ್ಟನು.

MOON-RISE.

10. ಚಂದ್ರೋದಯವರ್ಣನ. (ಆಶ್ವಾಸ. 11.)

ದ್ರುತವಿಲಂಬಿತ ವೃತ್ತ.

1229. ಭಗಣಮೌಕ್ತಿಕಧರಾಭ್ರಕೃಷ್ಣನಂ[1]
The orb of the moon, a lump of butter taken by the sky, Krishna.
ದಗಿಯದಿಂದ್ರಹರಿದದ್ರಿಭಾಂಡದಿಂ[2]
ತೆಗದು ತಾಳ್ದ ನವನೀತ ಪಿಂಡಮಂ
ಬಗೆಯೆ, ಪೊಲ್ತುದಮೃತಾಂಶುಮಂಡಲಂ.

1. ನಕ್ಷತ್ರ ಗಳೆಂಬ ಮುತ್ತುಗಳನ್ನ ಧರಿಸಿದಂಥಾ ಆಕಾಶ ಯೆಂಬ ಕೃಷ್ಣನು. 2. ಪೂರ್ವದಿಕ್ಕಿನ ಗುಡ್ಡ ಯೆಂಬ ಗಡಿಗೆಯಿಂದ.

ರಥೋದ್ಧತ ವೃತ್ತ.

1230. ಚಂದ್ರಿಕಾಜಲಧಿ ತೀವಿ ಲೋಕಮಂ
The moonlight a sea, the moon a leaf of the fig-tree, &c.
ಸಾಂದ್ರಮಾಗಿ ನೆಗೆದುರ್ವೆ[1], ಭೀತಿಯಿಂ
ಚಂದ್ರಮಧ್ಯವಟಪತ್ರದಲ್ಲಿ ಲ
ಕ್ಷ್ಮೀಂದ್ರನಿರ್ಪನೆನೆ ಲಕ್ಷ್ಮವೊಪ್ಪುಗುಂ.

1. ಉರ್ವೆ=ಉಬ್ಬಲಾಗಿ. ಬೆಳತಿಂಗಳೇ ಸಮುದ್ರ, ಚಂದ್ರನೇ ಆಲದೆಲೆ, ಅದರೊಳಗಿನ ಚಿನ್ಹವೇ ಕೃಷ್ಣ.

ಚಂಪಕಮಾಲಾ ವೃತ್ತ.

1231. ಗಗನವೆನಿಪ್ಪ ಪಾೞ್ಪೊಲದೊಳರ್ಕಸಮುದ್ಧೃತಿ ಗೈದು ಸಂಜೆ ಯಂ
ಬಗಿನಿಯನಿಟ್ಟು ಮರ್ಚಿನಿಪ ಗೊಬ್ಬರಮಂ ತಳದಲ್ಲಿ ಚೆಲ್ಲಿ ತಾ
ರಗೆಗಳೆನಿಪ್ಪ ಬಿತ್ತುಗಳನಂತವಕ್ಕೈಂದವಬಿಂಬರೌಪ್ಯಕಂ
ಭಗತಸುಧಾಮರೀಚಿ ಜಲಮಂ ಸುರಿದಂ ಸಲೆ ಕಾಲಪಾಮರಂ

The farmer Time cultivating the waste field of the sky.

ಕಾಲವೇ ಪಾಮರನು (ಒಕ್ಕಲಿಗನು) ಗಗನವೇ ಹಾಳ ಹೊಲ, ಅದನ್ನು ಹಾದು ಹೋಗುವ ಸೂರ್ಯನಿಂದ ಬದಕು ಮಾಡಿಸಿ ಹುಲ್ಲು ತೆಗಸಿ ಸಂಜೆ ಎಂಬ ಬೆಂಕೆ ಇಟ್ಟು ಸುಟ್ಟು ಮೊಬ್ಬು ಎಂಬ ಗೊಬ್ಬರ ಹಾಕಿ ನಕ್ಷತ್ರ ಎಂಬ ಬೀಜ ಚಲ್ಲಿ ಚಂದ್ರಬಿಂಬ ಎಂಬ ಬೆಳ್ಳಿ ಕೊಡದಲ್ಲಿದ್ದ ಅಮೃತಕಿರಣ ಎಂಬ ನೀರನ್ನು ಹನಿಸಿದನು.

SUN-RISE.

11. ಸೂರ್ಯೋದಯವರ್ಣನ. (ಆಶ್ವಾಸ. 12.)

ಕಂದ.

1232. ಜವದಿನುಷಃಕಾಲವೃಷಂ
ತವೆ ಕದಡಿದುದೆನಿಸಿ ಮರ್ಬುವೆಳಗಂ ತಳೆದೊ
ಪ್ಪುವ ಬಾಂಗೆರೆಯೊಳ್ಮೀಂಗಳ್
ತವಕದೊಳೆ ಮುಳುಂಗುವಂತಡಂಗಿದವಾಗಳ್.

The dawn—a bullock in the lake of the sky, making the fishes, stars, disappear.

ಆಕಾಶವೇ ಕೆರೆ, ಉಷಃಕಾಲವೇ ಆಕೆರೆಯ ನೀರನ್ನು ಕಲಕು ಮಾಡಿದ ಎತ್ತು, ಆಕಾಶದ ನಕ್ಷತ್ರಗಳೇ ಆ ಕೆರೆಯಲ್ಲಿ ಮುಣುಗುವ ಮೀನುಗಳು.

1233. ಬೆಳ್ಪುೞಗಿನ ಬಾಳ್ಪೆಯುಂ
ತಳ್ವದೆ ಬಾಂಬೊಲದೊಳರುಣ[1]ಕರಶಿಖಿಶಿಕೆ ಪಾ
ೞೆ[2]ೞ್ವನಮುಳುರ್ದುದ ಚಿಂತೆಯ
ನಾಳ್ವಂತೆ [3]ಪ್ರೊಲೋಷಧೀಶ್ವರಂ ಕಳೆ ಗೆಟ್ಟಂ

The moon grew pale, seeing that his crop in the sky had been burnt.

1. ಸೂರ್ಯ, ಅನ್ವಯ: ಆಕಾಶ ಎಂಬ ಹೊಲದಲ್ಲಿ ಬೆಳದಿಂಗಳು ಎಂಬ ದೊಡ್ಡ ಬೆಳೆಯು ಕಡವಿಲ್ಲದೆ ಉದಯಿಸುವ ಸೂರ್ಯನ ಕಿರಣಗಳ ಬೆಂಕಿ ಶಿಕೆಯಿಂದ ಹಾಳಾಗುವದರಿಂದ, ಚಂದ್ರನು ದುಖ್ಖ ಪಟ್ಟು ಚಿಂತೆಯೊಳಗೆ ಬಿದ್ದು ಕಳೆಗೆಟ್ಟನು. 2. ಪಾೞೆ ವ್ಯಾ. ಸೂ. 3. ಪಾನುರುಕ್ತದೋಷವಿಲ್ಲ.

ಮಾಲಿನೀವೃತ್ತ,

1234. ಬಿರಿಯೆ ಮೃದುಸರೋಜಂ, ಬಿಂಕಮಂ ಬಿಟ್ಟು ರಾಜಂ
ಜರಿಯೆ, ತಿಮಿರಪೂಗಂ ಜಾರೆ, ಜಾರಾನುರಾಗಂ
ಸರಿಯೆ, ಕುಮುದಬೃಂದಂ ಸಮ್ಮದಂ ಗುಂದೆ, ಬಂದಂ,
ನೆರೆಯೆ ಪಟುರಥಾಂಗಂ, ನಿರ್ಮಳಾಂಗಂ ಪತಂಗಂ.

Rising of the sun.

ಅನ್ವಯ: ಪತಂಗಂ—ಬಂದಂ.

ಚಂಪಕಮಾಲಾ ವೃತ್ತ.

1235. ಖರಕರಸಿದ್ಧನೇಳ್ದು ದಿವಿಜೇಂದ್ರದಿಶಾದ್ರಿಗುಹಾನಿವಾಸದಿಂ
ದುರು ತಿಮಿರಾಭಿಭೂತಭುವನೋನ್ನತಲೋಹಕೆ ತನ್ನ ವಿದ್ಯೆಯಂ
ಧರೆಗರಿಪಲ್ಕೆ, ಮುಟ್ಟಿಸೆ ಕರೋತ್ಕರಸಿದ್ಧರಸಪ್ರವಾಹಮಂ,
ಪಿರಿದುದು ಚಿನ್ನಮಾದುದೆನೆ, ಪೊಂಬಿಸಲೊಂದಿರೆ, ಕಂಣ್ಗೆ ರಂಜಿಕಂ.

The magician sun made iron, darkness, gold by touching it with quicksilver—his rays.

ಸೂರ್ಯನೇ ತೀಕ್ಷ್ಣತ್ವೆಯುಳ್ಳ (ಕಿರಣ) ಸಿದ್ಧನು, ಕತ್ತಲೇ ಲೋಕದಲ್ಲಿ ಪ್ರಸಿದ್ಧವಾಗಿರುವ ಕಬ್ಬಿಣ, ಸೂರ್ಯನ ಕಿರಣ ಸಮೂಹವೇ ಅವನು ಭಂಗಾರ ಮಾಡುವ ಸಿದ್ಧರಸ; ಇದನ್ನು ಆ ಲೋಹಕ್ಕೆ ಮುಟ್ಟಿಸಲಾಗಿ, ಅದು ಬಿಸಲೆಂಬ ಭಂಗಾರವಾಯಿತು. ಅನ್ವಯ: ಸಿದ್ಧನು—ಪ್ರವಾಹಮಂ—ಲೋಹಕ್ಕೆ ಮುಟ್ಟಿಸೆ, ಅದು ಚಿನ್ನ ಮಾದುದು.

III. LITERATURE OF THE JAINS.

ಪೀಠಿಕೆ.

೨೫೦೦ ವರುಷಗಳ ಹಿಂದೆ ಬುದ್ಧನೆಂಬ ಒಬ್ಬ ರಾಜಪುತ್ರನು ಇದ್ದನು. ಅವನು ಈ ಪ್ರಪಂಚವ್ಯರ್ಥವೆಂದು ವನವಾಸಕ್ಕೆ ಹೋಗಿ ತಪಸಿಯಾಗಿ ಸರ್ವಕುಲದವರಲ್ಲಿ ಬೇರೆ ಬೇರೆ ಶಿಷ್ಯರನ್ನು ಮಾಡಿಕೊಂಡು ಕುಲಾಚಾರ ಸುಳ್ಳು ಎಲ್ಲಾ ಮನುಷ್ಯರು ಸಮವೆಂದು ಬೋಧಿಸಿ ಈ ಹಿಂದುಸ್ತಾನದ ಉತ್ತರ ಭಾಗದಲ್ಲಿ ಒಂದು ಮತವನ್ನು ಸ್ಥಾಪಿಸಿದನು. ಈ ಬೌದ್ಧಮತ ಆಮೇಲೆ ದಕ್ಷಿಣದ ಕಡೆಗೆ ಹಬ್ಬಿ ಬಹಳ ವಿಸ್ತಾರವಾಯಿತು. ಅದು ಲಂಕಾದ್ವೀಪದಲ್ಲಿಯೂ, ಹಿಂದುಸ್ತಾನದ ಪೂರ್ವದ ಕಡೆಯ ದೇಶಗಳಲ್ಲಿಯೂ, ಚೈನದೇಶದಲ್ಲಿಯೂ ಸ್ಥಾಪನೆಯಾಗಿ ಇಂದಿನ ತನಕ ಪ್ರಬಲವಾಗಿರುತ್ತದೆ, ಈ ಮತದವರು ವೇದಮುಂತಾದ ಶಾಸ್ತ್ರಗಳನ್ನು ತೆಗದು ಹಾಕಿ ಸ್ವಂತ ಶಾಸ್ತ್ರಗಳನ್ನು ಕಲ್ಪಿಸಿಕೊಂಡು ಮೊದಲು ಸಂಸ್ಕೃತದಲ್ಲಿ ಅವನ್ನು ರಚಿಸಿದರು. ಅವು ಯಾವವಂದರೆ: ಬುದ್ಧನು ನುಡಿದ ವಚನಗಳೂ, ಅವನು ತನ್ನ ಶಿಷ್ಯರ ಸಂಗಡ ಮಾಡಿದ ಸಂಭಾಷಣೆಗಳೂ ಇರುವ ಸೂತ್ರಗಳೂ, ಅವರ ಧರ್ಮಗಳನ್ನ ವಿವರಿಸುವ ವಿನಯಗಳೂ, ಅವರ ಬೋಧನೆಯನ್ನು ವಿಸ್ತರಿಸುವ ಅಭಿಧರ್ಮಗಳೂ. ಬೌದ್ಧರ ಮೂಲಶಾಸ್ತ್ರಗಳು ಸಾಂಖ್ಯದರ್ಶನವನ್ನು ಅನುಸರಿಸುತ್ತವೆ. ದೇವರನ್ನು ತಿಳಿಯಲಾಗದು, ದೃಶ್ಯವಾದ ಈ ಲೋಕವಾದರೂ ನಿಜವಲ್ಲ ಎಂಬಂತೆ ತೋರುತ್ತದೆ. ಆದ್ದರಿಂದ ಎಲ್ಲರೂ ಎಲ್ಲಾ ಬಿಟ್ಟು ವನವಾಸಕ್ಕೆ ಹೋಗಿ ದುಃಖದಲ್ಲಿ ಇರತಕ್ಕದ್ದು. ಆದರೆ ಪ್ರಪಂಚ ನಡೆಯ ಬೇಕಲ್ಲ. ಅದಕ್ಕೆ ಕೆಲವರು ಪ್ರಪಂಚವನ್ನು ಮಾಡಿ ಧರ್ಮ ಕೊಡೋಣದರಿಂದ ತಮ್ಮ ದೋಷ ಪರಿಹರಿಸ ಬೇಕು. ಬಲಿಗಳನ್ನು ಅರ್ಪಿಸುವದು ಪ್ರಯೋಜನವಿಲ್ಲ.—ಬೌದ್ಧರು ಬುದ್ಧನ ಮೂರ್ತಿಗೆ ವಿಶೇಷವಾಗಿ ಪೂಜೆ ಮಾಡುವರು. ಜೈನರು ಈ ಮತದ ಸಂಬಂಧದವರು. ಜಿನ ಎಂಬ ತಮ್ಮ ದೇವರಿಗೆ ಬುದ್ಧದೇವರು ಸಹಾ ಅನ್ನುತ್ತಾರೆ. ಆದರೆ ಮಾಂಸ ತಿನಬಾರದೆಂಬುವಂಥಾ, ಜನಿವಾರ ಹಾಕಿಕೊಳ್ಳುವಂಥಾ ಮೊದಲಾದ ಧರ್ಮಗಳು ಬೌದ್ಧರಲ್ಲಿ ಮೊದಲು ಇರಲಿಲ್ಲ. ಇಂಪಾದರೂ ಚೀನಾದೇಶದಲ್ಲಿ ಬೌದ್ಧರಲ್ಲಿ ಇರುವದಿಲ್ಲ ಯಾಕಂದರೆ ಅವರೆಲ್ಲರು ಮಾಂಸ ಭೋಜನದವರು. ಜೈನರು ಬೌದ್ಧರ ಆದಿ ಮಾರ್ಗವ ಬಿಟ್ಟು ಇತ್ತಲಾಗಿ ಬ್ರಾಹ್ಮಣರಿಗೂ ಬೌದ್ಧರಿಗೂ ಹತ್ತಿದ ನ್ಯಾಯದಲ್ಲಿ ಸೋತು ಹೋಗುತ್ತಾ ಅವರಿಗೆ ಸ್ವಲ್ಪ ಅನುಸಾರವಾಗಬೇಕೆಂದು ಮತ್ತು ಕರ್ಮಕ್ಕೆ ಬಿದ್ದು ಬೇರೆಯಾದರು. ಶಂಕರಾಚಾರ್ಯನು ವಾದದಿಂದ ಗೆದ್ದು ಮತ್ತು ಅಧಿಕಾರಸ್ಥರಿಂದ ಬಾಧೆ ಕೊಡಿಸಿ ಬೌದ್ಧರ ಮತವನ್ನು ಈ ದೇಶದಲ್ಲಿ ಬಹಳ ಅಳಿದು ಬ್ರಾಹ್ಮಣರ ಮತವನ್ನು ತಿರಿಗಿ ಸ್ಥಾಪಿಸಿದನು. ಜೈನರೊಳಗೆ ಪೂರ್ವದಲ್ಲಿ ವಿದ್ಯ ಚಮತ್ಕಾರ ಬಹಳ ಇತ್ತು. ಅವರು ಕಟ್ಟಿಸಿದ ಜೆಲ್ಲೋಗುಡಿಗಳು ಇದಕ್ಕೆ ದೃಷ್ಟಾಂತ. ಅವರಲ್ಲಿ ಪುಷ್ಕರವಾಗಿದ್ದ ಕವೀಶ್ವರರು ಬಹಳ ಕೃತಿಗಳನ್ನು ಸಂಸ್ಕೃತದಲ್ಲಿಯಾಗಲಿ ಹಳೆ ಕನ್ನಡದಲ್ಲಿಯಾಗಲಿ ರಚಿಸಿ

ದರು.—ಆದರೆ ಅದು ವಿಶೇಹವಾಗಿ ಶಂಕರಾಚಾರ್ಯನ ಅತ್ತ ಆಯಿತು. ದೂಕಂದರೆ ಶಂಕರಾಚಾರ್ಯನಿಂದಲೂ ಅವನ ಮೇಲೆ ಬಂದ ಕಲ್ಯಾಣದ ಬಸವನಿಂದಲೂ ಅವರ ಮತ ಮುರಿದ ಬಳಿಕ ಅಂಥಾ ಕೃತಿಗಳು ಅವರಲ್ಲಿ ಹುಟ್ಟಲಿಲ್ಲದ ಹಾಗೆ ತೋರುತ್ತದೆ.—

ಈ ಶಾಸ್ತ್ರಸಾರ ಎಂಬ ಕೃತಿ ಮೊದಲು ಸಂಸ್ಕೃತದಲ್ಲಿ ಇದ್ದದ್ದು; ಬಬ್ಬ ಕವಿ ಅದನ್ನು ಕನ್ನಡಿಸಿದನು.

SHASTRA SARA.

ಶಾಸ್ತ್ರಸಾರ.

DESCRIPTION OF HELL.

1. ನರಕ ವಿಸ್ತಾರ.

ಮಹಾಸ್ರಗ್ಧರ ವೃತ್ತ.

1236. ಜರದಾಹಶ್ವಾಸಕಾಸಂವ್ರಣಪಿಟಕಶಿರೋರೋಗಸರ್ವಾಂಗಶೂಲಾ
ದಿರುಜಾಸಂದೋಹಪೀಡಾಭರದಿ ಭರದೊಳುಂ ಪಾರುತಂ, ಜೀನೆ [ಇಂದಂ
ಬಿರಿಯುತ್ತಂ, ನಾರಕರ್ಕಳ್ಬಿರಿಕಿಸೆಡೆಗಳಂ ಶಸ್ತ್ರದಿಂ ಶೀಳ್ವುದುಂ [ಗೋ
ಳ್ಗರೆಯುತ್ತಂ, ಕೂಗಿಡುತ್ತಂ, ಮೊರೆ ಇಡುತಮತಿಕ್ಲೇಶದಿಂ ಬೇವ್ರ [ತಿರ್ಪರ್.

The various pains of those who are in hell.

1. ಅನ್ವಯ: (ನರಕದಲ್ಲಿ ಬಿದ್ದ ಪಾಪಿಗಳು) ಜ್ವರ, ಪೀಡಾಭರದಿ, ಪಾರುತಂ, ಜೀವುತಿರ್ಪರು. ಯಮನವರು ಬಿರುಕು ಬಿಟ್ಟ ಸ್ಥಳಗಳನ್ನ ಶೀಳುವದು ಇವರು ಗೋಳ್ಗರೆಯುತ್ತಂ ಮುಂ.

ಮತ್ತೇಭವಿಕ್ರೀಡಿತ ವೃತ್ತ.

1237. ಉರಿಯಂ ಕಾರುತಮ್ಮೆಕಿಲಿಂ ಕೆದರುತಂ, ತಮ್ಮಭ್ಬಮಿಗಳ್ಪೇಸಿಸು
ತ್ತಿರೆಯುಂ, ಕ್ರೋಧದಿನಾಗಳುಂ ಮರುಗುತಂ, ಪ್ರಾಣಂಗಳಾವರ್ತಿ [ಸು

Though afflicted in the highest degree they cannot die.

1. ಕ್ಷುಧ ತೃಷೆ=ಹಸಿವೆ ನೀರಡಿಕೆ ಹೀಗೆ ಕಷ್ಟವಾದರೂ ಜೀವದ ಆಶೆ ಬಿಡುತ್ತಿದ್ದಿಲ್ಲ

ತ್ತಿರೆಯುಂ,ನಾರಸಶಸ್ತ್ರಮುಚ್ಚುತಿರೆಯುಂ, ಕ್ಷುತ್ತೃಡ್ಮಹಾಬಾಧಿತ
ಳ್ತಿರೆಯುಂ, ಕುತ್ತಪವೊತ್ತವೊತ್ತುತಿರೆಯುಂ, ಮತ್ತಂ ಚಿರಂ
[ಜೀವಿಪರ್.

2. ಆ ನರಕದ ಭೂಮಿಗಳು ಹೇಸಿಕುತ್ತಿದ್ದವು.

ಚಂಪಕಮಾಲಾ ವೃತ್ತ.

1238. ನಲಿನಲಿದಾಡಿ ಪಾಪಮನುಪಾರ್ಜಿಸಿ ತತ್ಪರಿಪಾಕದಿಂದ ಕೋ
ಟಲೆಗೊಳಗಾಗಿ ಬಾಯ್ವಿಡುವ ಮೂಢಜನಂಗಳಕೃತ್ಯಮೂರ್ತಿಯಿಂ
ಜ್ವಲಜ್ವಲಿಪಾಗ್ನಿಯುಂ ಪಿಡಿದು ಜೆಂದ ಬಳಿಕ್ಕ, ಕನಲ್ದೊಗಲ್ದು ಮ
ಲ್ಮಲಮರಗುತ್ತ ಬಾಯುಳಿಪ ಬಾಲಕಜಾಲಕದಂದಮಲ್ಲವೇ?

The damned in hell like boys taking fire and throwing it away.

ಕಂದ.

1239. ಇವರಿಂದಿವು ಸವಿ! ಯನುತಂ
ಸವಿ ನೋಳ್ಪೈ! ಪಲವು ತೆರಪಡಗನು ನಿವಿವಾ
ವವು ಸವಿ? ಪೇಳೆನುತವನವ
ಯವಗಳ ಕೊಯ್ದಿಡುವರವರನಾನನದೊಳಗಂ.

The devils put raw meat in their mouths.

1240. ಮರೆಯೊಳವ ಮಧ್ಯಪಾನದ
ನರನೆಂದು ಮಧುವನೀಂಟಿಸಿ ತಲೆಯೊಳ್ತಳಯಿ
ಪ್ಪರಗುಲಿಗಳ, ತಲೆಯಿಂದಿಳಿ,
ಯೆರೆವರ್ತಳತಳಿಸಿ ಕುದಿವ ಲೋಹದ್ರವಮಂ.

Punishment of the drunkards.

1241. ಎಲವೆಲವೊ! ನಿಂಸನಗಲ್ದರೆ,
ನಿಲಲಾರದ ಪಾಪ್ಪೆ ಬಂದಿಳೀಗಿರ್ದಿದೆ ಬಾ!
ನಲಿದು ನೆರೆಯೆಂದು ಕಡು ಗಾ
ದ ಲೋಹಪುತ್ರಿಕೆಯನಾಗ್ರಹದಿನಪ್ಪಿಸುವರ್.

Punishment of adulterers.

1242. ಪೊಗಲೊಡನಲ್ಲಿಯ[1] ಮಕರಾ

The crocodiles in the sea of hell catching the damned.

ದಿಗಳಿಬ್ಬಗಿ ಮಾಳ್ಕುಮಾಶೆಯ ವಿಷಜಲಮಂ
ಮೊಗೆದು ಕುಡಿಯಲೊಡನೆದೆ ಕರ
ಗುಗುಮರಿದಾಯ್ತೆಂದು ನಾರಕರ್ಪೇಳರುವಿನಿಂ.

1. ನರಕದಲ್ಲಿರುವ ಸಮುದ್ರದಲ್ಲಿ. 2. ಅನ್ವಯ: ಅರಿದಾಯಿತೆಂದು ನಾರಕರು ಪೇಳರುವ ಹಾಗೆ ಎದೆಕರಗುಗುಂ.

1243. ಧಾರುಣಿಯನ್ನೈದೆ ನುಂಗುವ

Their hunger and thirst.

ವಾರಾಸಿಯನ್ನೈದೆ ಪೀರ್ವ ತವಕದ ಪಸಿಯುಂ
ನೀರಳ್ಕೆಯುಮೊಂದುಂ ಕೆಡ
ದೋರೋರ್ವರ್ಗಯುಮನ್ನಪಾನಲವಮಂ ಪಡೆಯರ್.

1244. ಪಸಿದು ಲವಲವಿಸಿ ಒಸುರಂ
ಪೊಸೆಯುತ್ತುಂ ಬಿರ್ದು ನೆಲನ ಮಣ್ಣಂ ಕವರ್ವರ್;
ಬಸವಳಿಯುತಿರ್ಪರವರಾ
ಜೀಸಿಮುತ್ಕಟಮಪ್ಪ ಪಾಪಮೇನಿನಿ ಯಿರದೊ !

1245. ಅವಿಷಮ್ಮೃತ್ತಿಕೆಯುಂ ತಂ

They are born again as trees, &c.

ದೀವಸುಧೆಯೊಳೆತ್ತಲಾನುಮಿಳಿಪಿದೊಡಿಳಿಗುಂ
ದಾಪುದರೊಳಗಿರ್ದವೆನ್ನದೆ
ಸ್ಥಾವರಯೋನಿಯೊಳನಂತಜೀವನಿಕಾಯುಂ.

ನಾರಕರು ಮೃತ್ತಿಕೆಯನ್ನು ಇಳಿಸುತ್ತಾರೆ, ಜೀವಿಗಳು ಅದರೊಳಗೆ ಇಳಿದು ವೃಕ್ಷಾದಿಯಾಗಿ ಹುಟ್ಟುತ್ತವೆ.

1246. ಉದಧಿಗೆಣೆ[1] ಯೆನಿಸಿದಾಯು

They are fighting with each other.

ಷ್ಯದ ಕಡೆ ವರಮ್ಮೈದೆ ಪಟ್ಟುಗಾಳಗದವರಂ

1. ಸಮುದ್ರ ನೆಲೆಯಿಲ್ಲದ್ದು, ತೀರಿವ ಆಯುಷ್ಯದಮುಂ.

ದದಶುಭಕರ್ಮದೊಳಾವ್ಯಸ
ನದಿನೋರ್ವರನೋರ್ವರಿರಿದು ನವೆಯುತ್ತಿರ್ಪರ್.

1247. ನರಕದ ವಿಚಿತ್ರದುಃಖದೋ

They consume each other as a wild-fire.

ತ್ಕರಮಂ ತಾವುಣ್ಣುತನುವರಿರುವರ್ ಬಾಧಿಸುವ
ಪ್ಪುರಿವ[1] ದವಾಗ್ನಿಯಿನಡವಿಯ
ಮರಗಳನುರಿಯುತ್ತವೊಂದನೊಂದುರಿಪ್ಪವ ಪೋಲ್.

1. ಹಬ್ಬಿ ಉರಿವ.

1248. ಕೊಲೆಯುಂ ಹುಸಿಯುಂ ಕಳವುಂ

No wonder they become angry, when they were told that killing, &c, was a sin.

ಕುಲಟಾರತಿಯುಂ ವಿಮೋಹವುಂ ಪಾತಕಮೆಂ
ದಲಸದೆ ತಿಳಿಸುವ ಮುನಿಸಂ
ಕುಲಕ್ಕೆ ಕಡುಮುಳಿವ ಪಾಪಿಗೇನದು ಪಿರಿದೇ !

1249. ಛಲದಿಂದನೇಕಜೀವಾ

They annoyed people in their former life.

ವಳಿಯಂ ಮುಂಬಾಳ್ವೆಯೊಳ್[1] ಘಾತಿಸುತಂ ಮ
ಲ್ಮಲ ಮರುಗಿಸಿದಘಬೀಜದ
ಫಲದಿಂ ಚಿರಕಾಲಮೇಕೆ ನವೆಯದೆ ಮಾಣ್ಬರ್?

1. ಮುಂಚಿನ ಬಾಳ್ವೆ, ಈ ದೇಹದಲ್ಲಿರುವಾಗ ಮಾಡಿದ್ದು.

1250. ನರತಿರ್ಯಗ್ಯೋನಿಯ ಜೀ

All the pain, which men and animals suffer together, not equal to a moment's pain in hell.

ವರುಗಳ್ತೀವ್ರದುಃಖಮೆನಿತುಳ್ಳುದವನಿತುಂ
ನೆರದೊಡವೇಂ ನರಕದೊಳೋ
ರ್ವರ ನಿಮಿಷದ ದುಃಖಲವನದಂ ಪೋಲ್ತಪವೇ ?

1. ಮನುಷ್ಯರು ಜ್ಞಾನವಿಲ್ಲದ ಉಳಿದ ಜೀವರಾಶಿಗಳೆಲ್ಲಾ ಅವೆಲ್ಲ ಪಡುವ ದುಃಖ ಕೂಡಿಸಿದರೂ ನರಕದಲ್ಲಿ ಬಿದ್ದ ಒಬ್ಬನು ಪಡುವ ಒಂದು ನಿಮಿಷದ ದುಃಖಕ್ಕೆ ಸರಿಯಾಗುವದಿಲ್ಲ.

ವಚನ.

1251\. ಅಂತ್ ಓರ್ವರೋರ್ವರಂ ಕರಗಸದಿಂ ಸೀಳ್ವ, ದೂದಿಗಿಚ್ಚಿನೊಳ್ ಪುೞ್ವ, ಕತ್ತಿಗೆಯಿಂ ಅಱಿವ, ಕಾವಲಿಯೊಳ್ಯಿಕ್ಕಿರಿವ, ತ್ರಿದಿಯುಗಿವ, ಬಸಿರಂ ಬಗೆವ, ಕರುಳನ್ವುಚ್ಚುವ, ಬೆರಳುಗಳೊಳು ಸೂಜಿಯಂ ಚುಚ್ಚುವ, ಪಲ್ಗಳಂ ಕಳ್ಚಿ ಗುಟ್ಟುವ, ಗಾಣದೊಳ್ ಯಿಕ್ಕಿ ಪಿೞಿವ, ಕಾಸಿ ಸಾಸಿವೆಯುಂ ಬೞಿವ, ಸತ್ತ್ವವಿರಿವ, ತತ್ತರದಲ್ ಅಱಿವ, ಪಲತೆಱದ ದಂಡನೆಗಳುಂ; ನರಕಭೂಮಿಗಳ ಸ್ವಭಾವದ್ ಅತ್ಯುತ್ಕೃಷ್ಟತಂಗಳ್ಯೆನಿಪ ಮಹಾಶೀತೋಷ್ಣಂಗಳು ಸ್ಪರ್ಶೇಂದ್ರಿಯಮ್ಅಹರ್ನಿಶಂ ಮಿಡಿಮಿಡಿಕಿಸುತ್ತಿರೆಯುಂ; ಕೋಪದಿಂ ಕಿಡಿಕಿಡಿಯಾಗುತ್ತಮ್ ಓರ್ವರ್ನ್ವೋರ್ವರ್ಪಿಡಿದು ಖಂಡಂಗೊಯ್ದು ಬಾಯೊಳ್ಇಡಿದು ನಿಗ್ರಹಿಪ ನಾರಕರ್ಆಗ್ರಹದಿಂ ಸಮನಿಸುವ ವಿಷಸದೃಶನಿಜಶರೀರಮಾಂಸಭಕ್ಷಣಮುಂ, ಲೋಹದ್ರವಕ್ಷಾರವಾರಿಪಾನಮುಂ, ರಸನಇಂದ್ರಿಯಮನ್ಆಗಳುಂ ಮಲಮಲಂ ಮರಿಗಿಸುತ್ತಿರೆಯುಂ; ದೆಸೆಗೆಲ್ಲಮುಂ ಪೊಡೆಯುಪ್ರೋಲ್ ಇಡಿದು ತುಂಬಿದಂತ್ ಇರ್ದ ನಾರಕರ ಮೈಯ್ಯ ಪೂತಿಗಂಧಂಗಳುಂ, ಕ್ಷೇತ್ರದುರ್ಗಂಧಂಗಳುಮ್, ಉಸುರ ಬೞಿವಿಡಿದ್ಬಳಪ್ರೋಗುತ ಘ್ರಾಣೇಂದ್ರಿಯಮನ್ಅಡಿಗ್ಅಡಿಗೆ ಬಿಕ್ಕನೆ ಬಿರಿಯಿಸುತ್ತಿರೆಯುಂ; ಮುಳಿದ್ ಇದಿಯರ್ಎಂದು ಬರ್ಪ ನಾರಕರ ಭೀಕರಾಕಾರಂಗಳುಂ, ಮೇಲೆ ಬೀೞ್ವ ಸಿಡಿಲಂತೆ ಬಂದ್ ಐದುವದುರ್ನಿರೀಕ್ಷಣತೀಕ್ಷ್ಣಾಯುಧಂಗಳ ಪೊಳಪುಗಳುಂ, ಚಕ್ಷುರಿಂದ್ರಿಯಮಂ ಮಾಣದೆ ಗೂಡುಗೊಳಿಸುತ್ತಿರೆಯುಂ; ಗಜರುವ ಗರ್ಜಿಸುವ, ಬೈವ, ಮೂದಲಿಸುವನಿರಯಜನಿವಹನಿಸ್ಸಾರನಿಷ್ಠುರಾಲಾಪಂಗಳುಂ, ಕಿಡಿವಿಡಿ ಪಳಂಚುವ ಕೈದುಗಳ ಖಣತ್ಕೃತಂಗಳುಂ, ಶ್ರೋತ್ರೇಂದ್ರಿಯಮನ್ ಅನವರತ ಮುಗಿಬಗಿ ಮಾೞ್ಪಂತಿರೆ

Different kinds of tortures in hell.

ಯುಂ ; ಮೇಗೆ ನೆನೆವಂತೆವಡೆನೆ ಸಂದಣಿಸಿ ಪೊಱಪೊಣ್ಮುವ ತೀ
ವ್ರರುಜಾಕೋಟಿಗಳುಂ, ಪೇಳಲುಂ ಕೇಳಲುಂ ಅಱಿಯದ್ಅಪ್ಪ ತೀ
ವ್ರಬಲಕ್ಷುತ್ಪಿಪಾಸೆಗಳುಂ, ನೆರವಾಗಿ ಸರ್ವಾಂಗಮನ್ ಬಳಗೊಳಗೆ
ಬಿಡದ್ಅಲ್ಲರಿವು ದಳ್ಳರಿಸುತ್ತಿರೆಯುಂ ; ಮತ್ತಮ್ಓರ್ವರನ್ ಓರ್ವ
ರು ಕೋಪದಿನ್ಅಟ್ಟುತ್ತಂ ಭಯದಿನ್ಓಡುತ್ತಂ ದೇಹವ್ಯಥೆಗಳಿಂದ
ಪುಯಲ್ ಯಿಡುತ್ತಂ ದೆಶೆದೆಶೆಗೆ ಬಾಯ್ವಿಡುತ್ತಂ ಬಸವಳಿಯುತ್ತಂ
ಬಿಡದೆ ನೆರಳುತ್ತಂ ಪುಡಿಯೊಳ್ ಪೊರಳುತ್ತಂ ಇರ್ವರ್ ಇಂತು.

REFUTATION OF OTHER RELIGIONS.

2. ಅನ್ಯಮತ ಖಂಡನೆ.

ಚಂಪಕಮಾಲಾ ವೃತ್ತ.

1252. ಒಯುಸಿ ನಿಧಾನಮುಂ ಸುಕೃತಮಿಲ್ಲದವಂ ಭರದಿಂ ತವಗ್ರಭೂ
ಮಿಯುನಗುಳುತ್ತಮಿರ್ದು[1] ನಿಧಿ ಗಾಣ್ಬೆಡೆಯೊಳ್ಮರುಳಾಗಿ ಪೋಪ [ಮಾ
ಳ್ಕೆಯೊಳಪವರ್ಗಮಾರ್ಗದೊಲವಿಂ ಪಲರುಂ ಪಿರಿದೋದಿ ತತ್ವನಿ
ರ್ಣಯಜನಿತೋಕ್ತಿಯಲ್ಲಿ ಜಡರಪ್ಪರಿದೇನಘಶಕ್ತಿಚಿತ್ರಮೋ !

Some, like a man digging up a treasure, but from fear running away.

1. ಆ ನಿಧಾನದ ಮೇಲಣ ಭೂಮಿಯನ್ನು ಮು.

ಕಂದ.

1253. ಹರಿಯಲ್ಲಂ ಹರನಲ್ಲಂ
ಸರಸಿಜಭವನಲ್ಲನಖಿಳಗತತನುಮಲ್ಲಂ[1]
ಪರಮಾತ್ಮಂ ಚಿಜ್ಜ್ಯೋತೀ
ಸ್ವರೂಪ ನಂನಾತ್ಮನೆಂಬ ಬಗೆ ಸಮ್ಯಕ್ತ್ವಂ.

The spirit God.

1. ಎಲ್ಲಾ ವ್ಯಾಪಿಸುವ ಶರೀರವುಳ್ಳವನು. ತನ್ನ ಆತ್ಮವೇ ದೇವರು ಅಂದಲ್ಲಿ ವೇದಾಂತ ಹಿಡಿದ ಹಾಗಾಯಿತು.

ಉತ್ಪಲಮಾಲಿಕಾ ವೃತ್ತ.

1254. ಪುಟ್ಟದ ಯೋನಿ ಮೆಟ್ಟದ ನೆಲಂ, ನೆರೆ ಕೊಳ್ಳದ ಕಾಲಮೊರ್ಬ್ಬನುಂ

Obtain salvation.

ಮುಟ್ಟದ ಭಾವಮೊಂದದ ಭವಂ, ಪೆರತಿಲ್ಲನೆ, ದುರ್ವಿಮೋಹದಿಂ

ತಿಟ್ಟನೆ ಬಂದಿ ನೀ ತಿಳಿಯದಕ್ಕಟ ! ನಿನ್ನ ನಿಜಸ್ವರೂಪಮಂ

ನೆಟ್ಟನೆ ನೋಡಿ ಕೂಡಿ ಪಡೆ ನಿತ್ಯನಿರಂಜನಮೋಕ್ಷಲಕ್ಷ್ಮಿಯಂ !

1. ನೀನು ಹುಟ್ಟದ ಯೋನಿ—ಬಂದದ ಭವಂ ಉಳಿಯುವಿಲ್ಲ—ನೀನು ನಾನಾಪ್ರಕಾರವಾಗಿ ಹುಟ್ಟಿ ಬಂದಿ.

ಕಂದ.

1255. ನದಿವಾರ್ಧಿಗಳಂ ಮಿಾವುದು

To perform ablutions is foolishness.

ಮದಿರದೆ ಶಸ್ತ್ರಾಗ್ನಿಗಿರಿಗಳಂ ಪಾಯ್ವುದುಮಿಂ

ತಿದು ಲೋಕಮೂಢಮೆಂಬುದು

ಮುದದಿಂದಂ ರಾಶಿ ಮಾಳ್ಪುಗುಂ ಕಲ್ಮಳಲಂ.

1. ಈ ಲೋಕ ಮೂಢವು ಕಲ್ಲುಮಳಲನ್ನು ರಾಶಿ ಮಾಡಿ ಅದಕ್ಕೆ ದೇವರು ಅನ್ನುತ್ತದೆ.

ವಚನ.

1256. ತೊರೆಗಳಂ ಸಮುದ್ರಂಗಳಂ ಕೊಣಂಗಳಂ ನಾಮತೀರ್ಥಂ ನಮ

To think that ablutions and such like outward performances will ensure salvation, is foolishness. Purity of heart is ablution, &c.

ಗೆ ಪುಣ್ಯಕಾರಣಮ್ ಎಂದು ಪೊಗಳದ ನಾಡಂ ಪೊಕ್ಕು ಮಿಾವುದು ನಾಮ ತೀರ್ಥಕರಮ್ ಅಲ್ಲದೆ ಭಾವತೀರ್ಥಕರಮ್ ಅಲ್ಲವು; ಸತ್ಯಮುಂ, ತಪಮುಂ, ಇಂದ್ರಿಯನಿಗ್ರಹಮುಂ, ಸರ್ವಜೀವದಯಾಪರತ್ವಮುಂ, ಯೆಂದ್ ಇವು ಭಾವತೀರ್ಥಮ್ ಎಂಬುದ್; ಇಂತೆಯಿಾ ಭಾವತೀರ್ಥಂಗಳೊಳ್ ಆತ್ಮನೊಳ್ ಏಕಭಾವಮ್ ಆಗಿರ್ದಡೆ, ಕರ್ಮಮಲ ಕಲಂಕಮಂ ಕರ್ಚಿ ಕಳದಂತೆ ಪೋಕುಗಂ; ಸ್ವರ್ಗ

ಮುಂ ಅಪವರ್ಗಮುಮ್ ಅಕ್ಕುಂ; ನಾಮತೀರ್ಥಜಲಂಗಳಿಂ ಕರ್ಚಿ ದೇವದತ್ತನ್ ಎಂಜಲಸಿಕೊಳಂ ಕರ್ಚಿದಡೆ, ಪೆಱರ್ಗೆ ಉಣಲ್ಕೆ ಯೋಗ್ಯಮ್ ಅಪ್ಪುದ್ ಅಕ್ಕುಂ. ಉಚ್ಚಿಷ್ಟದೋಷಮಂ ಕೆಡಿಸಲಾರದ ಜಲಮ್ ಎಂತ್ ಒಳಗಣ ಪಾಪಮಂ ಕಳಗುಂ? ಮತ್ತಂ ಜಲಾಶ್ರಯಂಗಳೊಳ್ ಅಲ್ಲಿಯೆ ಪುಟ್ಟಿ ಯಲ್ಲಿಯೆ ಬೆಳದ್ ಅಲ್ಲಿಯೆ ನೀರನೆ ಕುಡಿದ್ ಅಲ್ಲಿಯೆ ಸಾವ ಮತ್ಸ್ಯಾದಿ ಮಕರಾದಿಗಳ್ ಅಂತ್ ಉಭಯತಟವರ್ತಿಗಳ್ ಅಪ್ಪ ಕೊಂಕಣಿಕ ಸಿಂಹಳಿಕಬರ್ಬರಶಬರಲಾಳಪ್ರಭೃತಿಗಳುಂ ಪಾಪಕ್ಷಯಂ ಪುಣ್ಯಬಂಧಮುಂ ಆಗದ್ ಏಕೆ? ಪುಣ್ಯಬಂಧಮ್ ಅಕ್ಕುಮ್ ಎಂಬ ಸಂಕಲ್ಪಮ್ ಇಲ್ಲದ್ ಏಕ್ ಅಕ್ಕುಮ್? ಎಂಬರೆ, ಸಂಕಲ್ಪಮಾತ್ರದೊಳೆ ತೈಲಾರ್ಥಮಾಗಿ ಮಳಲಂ ಪಿಳಿದಡ್, ಎಂಣೆಯಾಗದಂತೆ, ಪುಣ್ಯಕ್ಕೆ ಕಾರಣಮ್ ಅಲ್ಲದವಂ ನೆಗಳ್ದರೆ, ನಿಷ್ಫಲಕ್ಲೇಶಂಗಳ್ ಅಕ್ಕುಂ; ಮತ್ತಂ ಶಸ್ತ್ರಾಗ್ನಿಗಿರಿನದಿಗಳಿಂ ಪಾಯ್ದು ಸತ್ತವರಿಗೆ ಪುಣ್ಯಮ್ ಎಂಬರೆ, ರಣದೊಳು ಕೈದುವಿನೊಳಂ ಸಾವುದುಂ, ಮೃಗಂಗಳ್ ಕಾಳಗಿಚ್ಚಿನೊಳು ಸಾವುದುಂ, ಗಿರಿಗಳನೇಱಿ ಬಿಗುಱ್ದು ಸಾವುದುಂ, ತೊಱೆಗಳ್ ಪೊಸಅಾವರಿ ಸಾವುದುಂ, ಶ್ರೋತಗೋಳ್ ಅರ್ದಿ ಸಾವುದುಂ, ಇಂತೀ ಕೋಯುಂಪದಿಂ ಸತ್ತ ಪ್ರಾಣಿಗಳಿಗೆ ಪುಣ್ಯಮ್ ಅಗಲ್ ವೇಳ್ಕುಮ್; ಇಲ್ ಎಂಬರೆ, ಮುಂನಿನ ನುಡಿ ಪುಸಿಯಾಗಲ್ ವೇಳ್ಕುಂ; ಮತ್ತಂ ಪಿತರನುದ್ದಿಶಿಸಿ, ಎಂಬರ್, ಅಂತಪ್ಪರೆ, ಪೆಱರೊಳು ಪುಟ್ಟಿ ಪೆಱೆಯುತಿರ್ದ ಪಿತರನ್ ಊಡುವಡೆ, ಪಾರ್ವಿಕೆಯೊಳ್ ಇರ್ದ ಪಾರ್ವಂಗೆ ಕೊಳನ್ ಬಯ್ವರೆ; ಮನೆಯೊಳ್ ಇರ್ದ್ದ ಊಡಲಾಗದೆ? ಇಂತು ಸಂನಿಪುಸಿ ಎಂಬುದನ್ ಅರಿಯದೆ ಓರ್ವರಂ ಕಂಡು ನೆಗಳ್ದದ್ ಅದು ಲೋಕಮೂಢಮ್ ಎಂಬುದಂ.

ಮಹಾಸ್ರಗ್ಧರ ವೃತ್ತ.

1257. ಪರಮಾರ್ಥಂ ಲೋಕಮೆಂಬೀಯೆರಡುಮನರಿಯಂ ; ಲೋಗರೋ
[ಳ್ಮಾನುಮೊಂದಂ

To sacrifice his life in war, to get remission of sins, foolish.

ಭರದಿಂದಂ ಮಾಡುತಂ ಮಾಡುವನಘಹರಮೆಂದೈದೆ ಸಿಂಧುಪ್ರ
[ವಾಹೋ
ತ್ಕರದೊಳ್ಮೇವಂ ; ಕೃಶಾನೋದಕಮರಣದಿ, ಮೋಕ್ಷ್ವೈರಿಯಂ
[ಬಾಯ್ದು, ಮೋಕ್ಷಂ
ಗರದೊಳ್ಸಂಹಾರಿಕುಂ ಪ್ರಾಣಮನೆನಿಪ ಜಡಂ ಲೋಕದೊಳ್ಲೋ
[ಕಮೂಢಂ.

1. ಮೋಕ್ಷವಾಗಬೇಕೆಂದು ಬೆಂಕೆಯಲ್ಲಿ ಅಥವಾ ನೀರಲ್ಲಿ ಬಿದ್ದು, ಅಥವಾ ಯುದ್ಧದಲ್ಲಿ ಕಡದಾಡಿ ಪ್ರಾಣ ಕಳಕೊಳ್ಳುತ್ತಾನೆ.

ಚಂಪಕಮಾಲಾ ವೃತ್ತ.

1258. ಒಗೆವ ದಿನೇಶನಂ, ಪರಿವ ಸಿಂಧುವನೂದುವ ಘಾಳಿಯಂ, ಧಗಂ
ಧಗಿಸುವ ಕಿಚ್ಚನುಳ್ವ ನೆಲನಂ, ಕರೆವಾಕಳನಿಪ್ಪ ಸದ್ಮಮಂ,
ಸೊಗಯಿಸಿ ನಿಂದ ಪೇರ್ಮರವನುಂಬಗಳಂ, ಬೆಸಗೈವ ತಂಮ ಮು
ಟ್ಟುಗಳನೆ ದೈವಮೆಂದೆರಗುವಾತನೆ ದೈವದ ಮೂಢನಲ್ಲವೇ ?

He who worships these things, is he not a fool?

ವಚನಂ.

1259. ನೆಲನುಂ ನೀರುಂ ಗಾಳಿಯುಂ ಕಿಚ್ಚುಂ ಮರಂಗಳ್ ಎಂಬ ಪಂಚ
ಸ್ಥಾವರಂಗಳುಂ ದೈವಮ್ ಎಂಬುದುಂ ; ತಂಮ ಗೃಹಂಗಳುಮ್,
ಆಯುಧಂಗಳುಂ, ತಂಮ ಬೆಸಗೈವ ಮುಟ್ಟುಗಳ್, ಉಂಬ ಕೂಳ
ಮ್, ಎಂದ್ ಇವು ಮೊದಲಾದ ಅಚೇತನಂಗಳುಂ ದೈವಂಗಳ್ ಎಂ
ಬುದು ; ಮತ್ತಂ ಪಶುಗಳುಂ, ಸರ್ಪಗಳುಂ, ಮೊದಲಾದ ತಿರ್ಯ

The five elements, &c., are not God.

ಗ್ರಾಹತಿಗಳುಂ, ದೈವಮ್ ಎಂಬುದುಂ; ಮತ್ತಂ ಹರಿಹರಪಿತಾಮ
ಹವಿಬುಧರ್ ಎಂಬ ಮನುಷ್ಯರ್ಕಳುಂ, ಚಂದ್ರಾದಿತ್ಯರ್ ಎಂಬ
ಜ್ಯೋತಿರ್ಗಣಂ, ಕ್ಷೇತ್ರಪಾಲ ವಣಾರಭೈರವ ಮೈಲಾರ ಜಿನಕ
ಕಾರ್ತಿಕೇಯ ಬಗವತಿ ಬಲಾರಿ ಕಾಳಿ, ಮಹಾಕಾಳಿ, ಚಂಡಿ, ಚಾ
ಮುಂಡಿ ಮಾರಿ ಮಸಣಿ ಸೊಸಣಿ ಮೊದಲಾದ ದೈತ್ಯರಂಗಳುಂ,
ವರವನ್ ಈಗುಮ್ ಎಂಬ ಆಶೆಯೊಳುಂ ಓರ್ವರಂ ಕಂಡು ಪೊರ್ವ
ರ್ ಎರಗುವಮುಂ ; ಮೂಢಜನಂಗಳು ದೈವಮ್ ಎಂದು ಕೊಂಡಾಡು
ವಮುಂ ; ದೇವತಾಮೂಢಮ್ ಎಂತ್ ಅಂದುದ್ ಎಂತ್ ಎನ್ತೆಲೌಕಿಕರು
ದೈವಮ್ ಎಂಪರೆ, ಪೂರ್ವಕಾಲದೊಳು ನಿರ್ವಾಣಕ್ಷೇತ್ರಂಗಳಂ ಭವಿ
ಜನಗಳ್ ಮುಟ್ಟಿ ನಮಸ್ಕಾರಂ ಗೈದುದಂ ಕಂಡು ಮೂರ್ಖರು ಭೂ
ಮಿ ದೈವಮ್ ಎಂಪರು ; ಕಾಮಧೇನುವ್ ಎಂಬ ವಿದ್ಯಾಧೇನುರೂ
ಪದಿಂ ಕಾಮಿಸಿದ ವಸ್ತುವಂ ಕೊಡೆ, ಸಾಧಕನ್ ಅದಂ ಪೂಜಿಸುವು
ದಂ ಕಂಡು ಪಶುಗಳುಂ ದೈವಮ್ ಎಂಪರು ; ಪಯೋದಧಿಯುಂ
ವಹ್ನಿವಾಯುವ್ ಎಂಬ ಲೋಕಪಾಲರಂ ನಾಗರ್ಕಳಂ ಪರಮಸ್ನ
ಪನಕಾಲದೊಳು ತರ್ಪಣಂ ಗೈವುದಂ ಕಂಡು ನೀರುಂ ಕಿಚ್ಚುಂ
ಗಾಳಿಯುಂ ಸರ್ಪಂಗಳುಂ ದೈವಮ್ ಎಂಬರು ; ತಮಗ್ ಅವು
ದೈವಮ್ ಅಪ್ಪಡೆ, ಅವಂ ಬಾಧೆ ಬಡಿಸುವದ್ ಏಕೆ ? ಮತ್ತಂ
ವಿಷ್ಣು ದೇವನೇ ಎಂಬರೆ, ಗೋವಂ ಕಾಯ್ದಂ ; ದೂರು ಪೊರೆದಂ;
ಸಾರಥಿ ಯಾದಂ ; ದಾಸಂ ಬೇಡಿದಂ ; ಗೋಪತೆಯೊಳ್ ಕೆಟ್ಟಂ ;

ಶ್ಲೋಕ.

1260. ಮತ್ಸ್ಯಕೂರ್ಮವರಹಶ್ಚ
ನಾರಸಿಂಹಶ್ಚವಾಮನಃ

ರಾಮೋ ರಾಮಶ್ಚ ಕೃಷ್ಣಶ್ಚ
ಬೌದ್ಧಃ ಕಲ್ಕಿ ದಶಾಕೃತಿಃ

ವಿಷ್ಣು ದಶಾವತಾರ ಮಾಡಿದನು. ಈ ದೂರು ಹೋದನು=ಹೊರಿಸಿಕೊಂಡನು.

ವಚನ.

1261. ಎಂಬ್ ಈ ದಶಾವತಾರಂ ಬಂದನ್ ಎಂಬುದೇಕೆ ? ರುದ್ರ ದೇವನ್ ಎಂಬರೆ, ತ್ರಿಪುರಮುಂ ಸುಟ್ಟಂ ; ಅಂಧಕಾಸುರನಂ ಕೊಂದಂ ; ದಾರುವನ ಕ್ರೀಡಿ ಮಾಡಿದಂ ; ತೊಗಲಂ ಪೊದೆದಂ ; ಎಲುವಂ ತೊಟ್ಟಂ ; ಕಪಾಲದೋಳ್ ಉಂಡಂ ; ಮನುರುಗಮುಂ ಪೊಡಮಾಡಿದಂ; ಜಾನ್ಹವಿಯೋಳ್ ಇರ್ದಂ; ಸಾಪಂ[1] ಚಿತ್ತಂ ಬ್ರಹ್ಮೇತಿ ಯೋದನ್ ಎಂಬುದೇಕೆ ? ಬ್ರಹ್ಮ ದೇವನ್ ಅಪ್ಪಡೆ, ವೂರ್ವಶಿಯೋಳ್ ನೆರೆವ ಆಳಂ ; ಮಹೇಶ್ವರಂಗೆ ಪ್ರಸಿದಂ; ಸಾಪಂ ಚಿತ್ತಂ; ಕರಡಿಯೋಳ್ ಜಿರಸಿದಂ; ತಪದಿಂ ಕೆಟ್ಟಂ; ತನ್ನ ಸುತೆ ಯಪ್ಪ ಪದ್ಮಜಳಿಗ್ ಅಳ್ಪಿದನ್ ಎಂಬುದೇಕೆ? ಬುಧಂ ದೇವನ್ ಅಪ್ಪಡೆ, ತನ್ನ ಜನನಿಯುಂ[2] ಕೊಂದು ಪುಟ್ಟಿದಂ; ಆತ್ಮವಧೆಯುಂ ಮಾಡಿಕೊಂಡನೆಂಬುದೇಕೆ ? ಇಂತ್ ಇವರೆಲ್ಲರು ದೇವರ್ ಅಪ್ಪಡೆ, ಲೋಕದೋಳ್ ಕೊಲುವಂ, ಪ್ರಸಿವನುಂ, ಕಳುವನುಂ, ಪರಸ್ತ್ರೀಗಮನಂ ಗೈದನುಂ, ಊರ್ಗಳ ಸುಟ್ಟನುಂ, ದನಗಾವನುಂ, ಮದ್ಯ ಮಾಂಸಂಗಳಂ ಸೇವಿಸುವನುಂ, ಇಂತ್ ಇವರ್ ಮೊದಲಾದವರು ದೇವರ್ ಆಗ ವೇಳ್ಕು ; ಮತ್ತಂ ಆದಿತ್ಯಂ ದೇವನ್ ಅಪ್ಪಡೆ, ಕಶ್ಯಪಂಗೆ ಪುಟ್ಟಿದಂ; ಅಸುರರೊಡನೆ ಕಾದಿದಂ ;

Vishnu, Shiva, Brahma, no gods, only men.

1. ಶಾಪ. 2. ಬುಧನ ತಾಯಿ.=ರೋಹಿಣಿ ನಕ್ಷತ್ರ ; ಈಕೆ ಬೃಹಸ್ಪತಿಯ ಹೆಂಡತಿ, ಯಾದಾಗ್ಯೂ ಚಂದ್ರನಿಂದ ಬಸುರಾಗಿ, ಗಂಡನು ಗದರಿಸಿದ್ದಕ್ಕೆ ಗರ್ಭಪತನವಾಗಿ ಬುಧನನ್ನು ಹಡೆದು ಆ ವೇದನೆಗೆ ಸತ್ತಳು. ಆದರೆ ಹಿಂದಗಡೆ ಮತ್ತು ಬದುಕುವವಳಾದಳು.

ಕೋಡಗ ನುಂಗಲು[3] ಬರೆ, ಪೋಡಿ ಇಂದ್ರನ ಮರೆ ಪೊಕ್ಕು ಬದುಕಿದಂ ; ಕುಂತಿಯೊಳ್ ಪೊಲ್ಲ[4]ಕ್ಕೆ ಐದಿದನೆಂಬುದೇಕೆ ? ಅಗ್ನಿ ದೇವನ್ ಎಂಬರೆ, ಪಾಂಡುರೋಗಂ ಎಂಬ ಕುತ್ತಂ ಅವರೆ, ಅರ್ಜುನನಲ್ಲಿ ದಾನಂ ಬೇಡಿಕೊಂಡು ಖಾಂಡ[5]ವನದ ಸರ್ವೌಷಧಗಳ್ ಎಂಬ್ ಈ ವೃಕ್ಷಗಳ ರಸವನ್ ಉಂಡು ಬದುಕಿದನ್ ಎಂಬುದ್ ಅದೇಕೆ ? ಅಂತು ಮತ್ತಮ್ ಅಜ್ಞಾನಿಗಳ್ ಇಟ್ಟ ಮರಗಳಂ, ಬಿಟ್ಟಿದ ಕಲ್ಗಳಂ, ದೈವಂ ಎಂದ್ ಅದಂ ಪೆಸರಂ ಇಟ್ಟು ಕೊಂಡಾಡಿ, ವರ ವರಮತಿಯೋಳ್ ಈಗುಂ ಎಂಬಾಸೆಯಿಂ ತಮ್ಮೊಳ್ ಅರ್ಥಮಂ ಬರೆಸೂರೆಗೈವರ್ ; ಆ ದೈವಂ ವರವನ್ ಈವ ಅಂದಂ ಎಂತುಂಟೆಂದರೆ, ಬಂಜೆಯ ಹೆಂಮಗ ಮೃಗತೃಷ್ಣಾಂಬುವಿಂ ಮಿಂದು, ಕಲ್ಲನಾರಸೀರೆಯನ್ ಉಟ್ಟು, ಆಕಾಶಪೂದುರುಂಬಿ, ಮೊಲದ ಕೋಡ ಬಿಲ್ವಿಡಿದು ಬರುತ್ತಿಪ್ಪುದಂ, ಪುಟ್ಟಗುರುಡಂ ಅಂಧಕಾರದ ನಟ್ಟನಡು ಇರುಳನೊಳು ಕಂಡ[6]ನೆಂಬಂತೆ ನಿಷ್ಫಲಂ ಕ್ಲೇಶಂ ದುರ್ಗತಿ ದುಃಖಮೇ ಯಕ್ಕು ; ಆ ದೈವ ಪೆರರ್ಗ್ಗೆ ಈವುದುಂ ಕಾವುದುಂ ಅಂತಿರ್ಕೆ ! ತಮಗೆಂದು ಸಂಕಲ್ಪಿಸಿದ ವಸ್ತುವಂ ಕಾಯಲಾರರ್, ಅದ್ ಎಂತೆನೆ:

3. ಹನುಮಂತನು ಹುಟ್ಟಿದಾಕ್ಷಣವೇ ತನ್ನ ತಾಯಿ ಅಂಜನಾದೇವಿಯನ್ನು ಊಟವ ಬೇಡಿದರೆ, ಆಕೆ ಕುರಡಿಯಾದ ಕಾರಣದಿಂದ ತಂದು ಕೊಡಲಾರದಕ್ಕೆ ಹಂಣು ತಿನ್ನು ಅಂದಳು. ಹಂಣು ಹ್ಯಾಗಿರುತ್ತವೆಂದು ಇವನು ಕೇಳಿದರೆ, ಕೆಂಪಗಿರುತ್ತವೆ ಅಂಬೋಣ, ಆಗಲೇ ಉದಯಿಸುತ್ತಿದ್ದ ಕೆಂಪಾದ ಸೂರ್ಯಮಂಡಲ ಕಂಡು ಹಂಣೆಂದು ನುಂಗಲಿಕ್ಕೆ ಹಾರಿದನು. 4. ಹೊಲ್ಲ ಕೆಲಸಕ್ಕೆ. 5. ಇಂದ್ರವನಂ. 6. ಅನ್ವಯ: ಬರುತ್ತಿಪ್ಪುದಂ ಪುಟ್ಟಗುರುಡನು—ಕಂಡನು.

ಕಂದ.

1262. ಜಂನಿಗಿಯಾವಂ ಪರಕಿಯ

A dog more than such a god, ಪೊಂಸಂಪರಿಯಣ[1]ಮನೊಯ್ವ ಕಳ್ಳ[2]ನನಂತಿಂ

1 ಹರಿವಾಣ. 2. ಇವನ್ನ ವೈಯುವ ಕಳ್ಳನಿಗೆ ಏನು ಅನ್ನುವದಿಲ್ಲ.

that does not stop the thief.

ತೆಂನದು ಗಡಮೆನೆ, ದೈವದ
ಸನ್ನಿಧಿಯಂ ನೋಡೆ, ಮನೆಯ ಕುನ್ನಿ ವಿಶೇಷಂ.

ಚಂಪಕಮಾಲಾ ವೃತ್ತ.

1263. ಪರಕಿಯ ದೈವವಚ್ಚುಗಳನಚ್ಚರಿಯಾಗಿರೆ, ಕಟ್ಟುವರ್ಕ್ಕಳ

Let these gods eat up the thieves, the goldsmiths and kings!

ಕ್ಕೊರ್ಜರಳೊಳದೇಕೆ ? ಕಟ್ಟದೊಡೆ, ದೈವತೆ ತಿಂಗುಮೆ ? ಕಳ್ವ ಕ [ಳ್ಳರಂ,
ಕರಗಿಸುವಕ್ಕಸಾಲೆಯುರನುರ್ಕುವಿನಿಂದೆ ಕವರ್ತೆ ಗೊಂಡು ಪೋ
ಪರಸರವಂದಿರಂ ತೆಗದು ತಿಂಪಡೆ, ಯುಳ್ತರೆ ತೋರಲಾಗದೇ ?

1. ತಿನ್ನುಗು. 2. ಕವರ್ದು (ಅವಧಾರಣಾರ್ಥವಾಗಿ ಕವರ್ತೆ ಅಂತಾಗುವದು.)

ಕಂದ.

1264. ಪಿಂಡಮನೀವ್ರದು ; ತಡೆಯದೆ

Your goddess, will give you and protect you!

ಪಿಂಡಮನಿಡುವ್ರದುವೆ ! ಕುರಿಯನಿಕ್ಕುವದೊಲವಿಂ
ಪಿಂಡನೊಳ್ಳೆದಾರಂ ; ಮೋ
ಣ್ಕೊಂಡಾಟದ ನಿಮ್ಮ ದೇವಿ ಈಗುಂ, ಕಾಗುಂ.

ನೀವು ಹಿಂಡಿನಲ್ಲಿ ಐದಾರು ಕುರಿಗಳನ್ನ ನಿಮ್ಮ ದೇವಿಗೆ ಕೊಟ್ಟ ಮೇಲೆ, ಆಕೆ ಕೊಡುತ್ತಾಳೆ ಕಾಯುತ್ತಾಳೆ.

ಚಂಪಕಮಾಲಾ ವೃತ್ತ.

1265. ಮರುಗಿದೆ ನೋವು ಸೂತಿ ಮಸಗಿತ್ತೆನಲಂತವಳೋರ್ವಳಿರ್ದು [ಕೂ

The goddess asking a sheep.

ರ್ತಿರದೆ ಕುಕಿಲ್ದು ತೇಗಿದರೆ, ದೇವತೆ ನೀಂ ಬೆಸನಾರ್ಗೆ ? ಮಾಣದೆ

1. ಸೂತಿ ಬೇನೆಯುಳ್ಳಿರುವಾಕೆ ಒಬ್ಬಾಕೆ. 2. ದೇವರು ಹೇಳುವಾಕೆ ಒಬ್ಬಾಕೆ. ಈಕೆ ತೇಗಿದರೆ,ದೇವರು ಬಂತೆಂದು ಮನೆಯಾಕೆ ಹೇಳ್ರಿ ಎಂದು ಬೇಡಿಕೊಳ್ಳುತ್ತಾಳೆ. ಆಗ ಆಕೆಯೊಳಗಣ ದೆವ್ವ ನಾನು ಅಡವಿಯಿಂದ ಮನೆಗೆ ಬಂದ ಕರುವಿನ ಸಂಗಡ ಬಂದೆ, ನನಗೆ ಒಂದು ಕುರಿ ಬೇಕು ಎಂದರೆ, ಕೊಡುತ್ತಾರೆ. 3. ಆಗಲಿ (ಅರ್ಗೆ ಎಂಬುದು ಆಗು ಎಂಬ ಧಾತುವಿನ ವಿಧಿರೂಪ.)

ಕರುವಿಗೆ ಕಾಳರಕ್ಕಸಿಯು ಸಾಂ, ಕುರಿ ವೇಡಿಬೆನೆಂದರಿಕ್ಕುವ
ಕರ್ಜರಿ ; ಕುರಿಪಟ್ಟೆಗೈದಿ ತಿನಲಾಗದೆ ? ದೇವಿಗೆ ಕುತ್ತ ಪೋಗದೇ ?

1266. ಕುರಿಗಳ ಪಿಂಡ ಪೊಕ್ಕು ತಿನಲಮ್ಮದೆ ? ಕಾಡಿಯೆ ಬೇಡುತಿಪ್ಪ ಕಾ
ಡೆರೆಯನ[1] ಕಾಳರಕ್ಕಸಿಯನಗ್ಗದ ಬೊಮ್ಮನ ದೈವಮೆಂಬರಾ[2]
ನರಿಯದ ದೈವಮೋ ? ಪರರ ಬೇಡದೆ ಕಾಡದೆ ಪಿಂಡು ಪೊಕ್ಕು ತಂ
ನುರುವುದನಾಯ್ದು ಕೊಂಡು ತಿನುತಿಪ್ಪುದು ತೋಳನು, ದೈವಮ
[ಲ್ಲವೇ ?

The wolf more of a god then those who are worshipped.

1. ಕಾಡಿನಲ್ಲಿ ದನಕರ ಮೇಯಿಸುವವರು ಒಂದು ಕಲ್ಲು ಇಟ್ಟು ಅದಕ್ಕೆ ಪೂಜೆ ಮಾಡಿ ದೇವರು ಅನ್ನುತ್ತಾರೆ. 2. ದ್ವಿತಿಯೆ. (ವ್ಯಾ. ಸೂ. 51.) ಹೀಗೆ ಅನ್ನುವವರನ್ನು ದೇವರು ಬಲ್ಲನು.

ಮತ್ತೇಭವಿಕ್ರೀಡಿತ ವೃತ್ತ.

1267. ಕುರಿಯಂ ಬೇಡಿಪಡೀಪನೊಂದು ಬಡವಂ ; ತನ್ನಿಚ್ಛೆಯಿಂ ದೈ
[ವಮಾ
ಕುರಿವಿಂಡಿರ್ದೆಡೆಗೈದಲೊಂದೆರಡು ಮೂರುಂ ನಾಲ್ಕುವೈದಾರು ಬ
ಲ್ಪುರಿಯಂ ತಿಂಪರೆ, ಕಾಪಿನರ್ಬಡಿಗುವೊ ? ನಾಯ್ತಿಂಗುವೊದೈ
[ವಮಂ ?
ಪೆಱರಂ ಬೇಡುವ ದೈವಮೇಕೆ ? ಗಡ ! ಪೇಳಾತೋಳನಿಂ ಕಷ್ಟ
[ಮೋ !

ಚಂಪಕಮಾಲಾ ವೃತ್ತ.

1268. ಕುರಿ ವೆರಸೀವುದೀವುದು[2]ಣಲೀವುದು ಪೂಜೆಗಿಪೆಂದು ಮುಂದ ತಂ
ದೆರಿಪುದು ಕಳ್ಳ[3]ನಂಮುಮನ ಚಂಡಿಕಿ ಮಾರಿ ಬಲಾರಿ ಕಾಳ ಯಂ

Let them not be worshipped,

1. ಕೊಯಿದ ಕುರಿಯು ಸಂಗತ ಬಲಿಯು ಕೊಡಬೇಕು. 2. ಈ ಮುಮಂಥಾ ಕುರಿಯು ನ್ನು ಉಣ್ಣಲಿಕ್ಕೆ ಕೊಡಬೇಕು. 3. ಆ ಬಲಿಯು ಕೂಡೆ ನರಬಲಿಯಾಗಿ ಬಳ್ಳೆ ಕಳ್ಳನನ್ನ ಪ್ರಾಚೀನದಲ್ಲಿ ಕೊಡುತ್ತಿದ್ದರು.

if they cannot keep the sheep, devoted to them, from dying!

ಬರಿಕಿ[4]ಯ ದೇವತಾನಿಕರವಂತಕನೊಯ್ಯೆ, ಮೊಗಳ್ಬ[5]ಲಾರ್ಪಡೇ
ತಿರದೊಳುಮಾವುವಲ್ಲದೊಡೆ, ಪಾಯುದು ಬಾಯೊಳು ಕಾಪ್ದು ಬೂ
[ಡಿಯಂ !

4. ಎಂಬ ಹರಿಕೆಯು ಮು.—೨. ದೇವರಿಗೆ ನೇಮಿಸಿದ ಕಳ್ಳನನ್ನು ಕುರಿಯುಂಸೂ ಸಹ ವಿನಲ್ಲಿ ಯಮನು ವೈದರೆ, ದೇವರು ಅವನ್ನು ಬಿಡಿಸುವ ಹಾಗಿದ್ದರೆ, ದೇವರು ಇಲ್ಲದಿದ್ದರೆ ಇಲ್ಲ.

ಉತ್ಪಲಮಾಲಿಕಾ ವೃತ್ತ.

By performing sacrifices people increase only their trouble.

1269. ಕರ್ಮಜಮೆಂದು ರೋಗಜಮುಮೆಂದೆರಡುಂ ತೆರದಿಂ ಶರೀರಿಯಂ
ನಿರ್ಮಿಪ ಕುತ್ತಮೊತ್ತಿದರೆ, ಗಾಳಿಗರುಂ ನೆಲಮುಕ್ಕ ಜಕ್ಕಿಯುಂ
ಬೊಮ್ಮನುಮೆಂದು ಜೀವವಧೆಗೈದರೆ, ಕುತ್ತದ ದುಃಖದಿಂದ ಸಾ
ಸಿರ್ಮಡಿದುಃಖಮಂ ಪಡೆವ ನಾರಕದುಃಖಮನೈದದಿರ್ಪರೇ ?

1. ಗಾಳಿಗರು ಮೊದಲಾದವರೇ ಜನರು ತಮಗೆ ತಾವೇ ಕಲ್ಪಿಸಿಕೊಂಡ ದೇವರುಗಳು. ಕರ್ಮದಿಂದಾಗಲಿ ರೋಗದಿಂದಾಗಲಿ ಕಷ್ಟ ಬಂದರೆ, ಇವಕ್ಕೆ ಏನಾದರೂ ಕೊಯಿದು ಅರ್ಪಿಸುವರು.

ಶಾರ್ದೂಲವಿಕ್ರೀಡಿತ ವೃತ್ತ.

Men persevere in their ignorance.

1270. ಪೊಂಗಿಲ್ಪಂಡುಗಜೋಳದಿಂದೆರವನುಂ ಚಾಮುಂಡಿಯುಂ ಬೊಂ
[ಮನುಂ
ಪೊಂಗೊಂಡೀಪರೆಕಳ್ಕ ಪೋದರು ? ಬಸುರ್ಗಿಲ್ಲಾಗಿ ಮೇಣ್ಸತ್ತರುಂ;
ಪೊಂಗಿಪ್ಪಾತನ ಕೇಳ್ಪು ಕೂಳ್ಬಡಿಕದಿಂ ಮೇಣ್ಬಂದರುಂ, ಮೂಢ
[ಲೋ
ಕಂಗಳ್ತಂಮ ಕುತತ್ವಮೆಂದರಿಯರಾರೇನೆಂದಡಂ, ನಂಬುವರ್.

ಯಾವನೊಬ್ಬನು ಸಂತೋಷದಿಂದ ಚಾಮುಂಡಿ ಬೊಂಮನು ಮೊದಲಾದ ಹಾಳೆಯ ದೇವರಿಗೆ ಖಂಡುಗ ಜೋಳ ಕೊಟ್ಟು ಸಮಸ್ಕಾರ ಮಾಡುವನಾದರೂ, ತಾನು ಹೊಟ್ಟೆಗಿಲ್ಲವಾಗಿ ಸತ್ತಾಗ್ಯೂ, ತೃಪ್ತಿಯಾಗಿ ಹೋದವರು ಹೊನ್ನು ತಕ್ಕೊಂಡು ಕೊಟ್ಟಾರೆ; ಯಾವನೊಬ್ಬನು ಕೂಳ ಬಡಿಕತನದಿಂದ ಸಂತೋಷದಿಂದ ಇರುವಾತನನ್ನು ಕೇಳೆ ಮತ್ತು ಬಂದು ದೇವರಿಗೆ ಮಾಡಿಸಿರಿ ಅಂತ ಹೇಳಿದರೂ ಲೋಕದವರು ತಂಮ ಅಜ್ಞಾನವೆಂಬ ತಿಳಿಯುವದಿಲ್ಲ ಯಾರು ಯೇನು ಹೇಳಿದರೂ ನಂಬುವರು.

EXAMINATION OF RELIGION.

2. ಧರ್ಮ ಪರೀಕ್ಷೆ.

1. ಪೀಠಿಕಾ ನ್ಯಾಸ.

ಶಾರ್ದೂಲವಿಕ್ರೀಡಿತ ವೃತ್ತ.

1271. ಪೊಂಬೆಟ್ಟಂ[1] ಪಲವಾದವೆಂಬ[2] ತೆರದಿಂ ನಾನಾಪ್ರಕಾರಂಗಳಿಂ,
ಚಂಬೊಂನಿಂ[5] ಸವೆವಂಬರಂ ಬೆಳೆದ[3] ಮಾನಸ್ತಂಭಸಂದೋಹದಿಂ
ಬಿಂಬಾವಂಬರರತ್ನಕೂಟ[4]ಜಿನಚೈತ್ಯಾವಾಸದಿಂದಲ್ಲಿ ಕಂ
ಣ್ಗಿಂಬಾಗಿಪ್ಪ ಗೃಹಂಗಳಿಂದ, ಮೆರಗುಂ ಶ್ರೀವೈಜಯಂತೀಪುರಂ.

The city of Vaijayantipura.

1. ಮೇರು ಪರ್ವತ. 2. ಅದರಿಂದ ಕೆಲವು ಹೊಂನಿನ ಪರ್ವತಗಳಾದವು ಎಂಬ. 3. ಆಕಾಶದತನಕ. 4. ಸೂರ್ಯನನ್ನು ಮುಟ್ಟುವ ತುದಿಯುಳ್ಳ. 5. ವ್ಯಾ. ಸೂ. 78 ಈ ಕೃತಿ ಮೊದಲು ಸಂಸ್ಕೃತದಲ್ಲಿ ರಚನೆಯಾಗಿತ್ತು. ಇತ್ತಲಾಗಿ ವೃತ್ತವಿಲಾಸ ಎಂಬ ಕವಿ ಅದನ್ನು ಕನ್ನಡಿಸಿದನು.

ಕಂದ.

1272. ಆಪುರದಧಿಪತಿ ಜಿತರಿಪು
ಭೂಪತಿ ; ಯುವನರಸಿ ವಾಯುವೇಗೆನಿಸಿರ್ಪಳ್ ;
ರೂಪಿಂ ರತಿಗೆಣೆ; ಯಖಿಳಕ
ಳಾಪರಿಣತೆಯಿಂದೆ ವಾಣಿಗೆಣೆಯಿಂ ಮೆರೆವಳ್.

The king and Queen of that city.

ವಚನ.

1273. ಆಕೆಗೆ ಗರ್ಭಚಿಹ್ನಂ ಪ್ರಕಟಿಸಿ ವಿರಾಜಿಸೆ ಸಪ್ತಮಾಸಕ್ಕೆ ಕಂಠಿಕೆಯುಂ ಕಟ್ಟಿಸಿ ನವಮಾಸ ತೀವಿ ಬೆಸಲೆ ಯಪ್ಪುದುಂ, ಜಾತಕರ್ಮಮುಂ ಮಾಡಿ, ತದನಂತರಂ ಮನೋವೇಗನೆಂಬ ನಾಮಕರಣಂ ಗೈದು ಅಂನಪ್ರಾಶನಂ[1] ಚೌಲೋಪನಯನಾದಿ ಕ್ರಿಯಂಗಳಂ ನಿವರ್ತಿಸಿದ ಬಳಿಕ, ಯಳೆವಾಡಿವದ ಚಂದ್ರನಂತೆ ಬೆಳೆಯೆ ಯೆಳೆಯುಂ.

A son, Manovéga, is born to them.

1. ಕೂಸಿಗೆ ಆರು ತಿಂಗಳು ತುಂಬಿದ ಮೇಲೆ, ಅನ್ನ ಉಣ್ಣಿಸಲಿಕ್ಕೆ ಪ್ರಾರಂಭ ಮಾಡುವಲ್ಲಿ ಉತ್ಸವ ಮಾಡುತ್ತಾರೆ. ಇದಕ್ಕೆ ಅನ್ನಪ್ರಾಶನ ಅನ್ನುತ್ತಾರೆ. ಹುಡುಗನಿಗೆ ಐದು ವರುಷ ಆಗುವಷ್ಟರೊಳಗೆ ಚಂಡಿಕೆ ಬಿಡಿಸುವದಕ್ಕೆ ಚೂಡಾಕರ್ಮ (ಚೌಲ) ಅನ್ನುತ್ತಾರೆ

ಕಂದ.

1274\. ವಿಜಯಪುರಾಧೀಶಂ ನೆರೆ

The king and Queen of Vijayapura.

ತ್ರಿಜಗಸ್ತುತನೆನಿಸುವ ಪ್ರಭಾಶಂಕಮಹೀ
ಭುಜನಾಥನರಸಿ ವಸರ
ಸಿಜಲೋಚನೆ, ವಿಮಳಮತಿ, ಕರಂ ಸೊಗಯಿಸುವಳ್.

1275\. ಮುರವೈರಿಗಮಿಂದಿರಿಗಂ

A son, Pavanavéga, is born to them.

ಸ್ಮರಕುವರನುದಯಿಸಿದೊಲ್ಪ್ರಭಾಶಂಕಂಗಂ
ಹರಿಣಾಕ್ಷಿವಿಮಳಮತಿಗಂ
ಸ್ಥಿರತೇಜಂ ಪವನವೇಗನುದಯಂ ಗೈದಂ.

ವಚನ.

1276\. ಅಂತ್ ಉದಯಿಸಿ ಕೆಲವಾನುದಿವಸಕ್ಕೆ ಬೆಳದಂ ; ಆ ಮನೋವೇಗಂ ಪೂರ್ವಭವದಮಿತ್ರತ್ವಕಾರಣವಾಗಿ ಪರಸ್ಪರ ಸ್ನೇಹದಿಂದಂ ಪುಷ್ಪದತ್ತರ್ ಎಂಬ್ ಉಪಾಧ್ಯರಲ್ಲಿ ಓದುತ್ತಿರಲೂ.

ಮಹಾಸ್ರಗ್ಧರ ವೃತ್ತ.

1277\. ಭರತಾರ್ಯ[1]ಖಂಡದೊಳ್ಶೋಭಿಪ ಜಿನವರರಂ ಪೂಜೆಯಂ ಮಾಡಿ [ಜೇಗಂ

These two princes great friends.

ಬರುತಿರ್ಪಾಗಳ್ವಿಮಾನಂ ನಡಿಯದಿರಲಿದೇನೆಂದು ತಾಂ ನೋಡಿ [ಯಾಖೇ
ಚರರಾ[2]ಜಂ ಚೋದ್ಯಮಾಗಲ್ಕ ಸಮವಸರಣಮಂ ಕಂಡುಮಲ್ಲಿಂದ ಬಂ [ದಾ
ದರದಿಂದಂ ಭಕ್ತಿಯಿಂದೊಂದಿಸುತ ಪರಕೆಯಿಂ ಗೊಂಡು ಕುಳ್ಳಿರ್ದ [ಮತ್ತಂ.

1\. ಜಂಬುದ್ವೀಪದ ನವಖಂಡಗಳಲ್ಲಿ ಭರತ ಖಂಡ ಎಂಬದು ಒಂದು. ಅದರಲ್ಲಿರುವ ವಿಂಧ್ಯಾದ್ರಿಗೂ ಹಿಮಾಚಲಕ್ಕು ನಡುವಿನ ದೇಶದಲ್ಲಿ ಆರ್ಯರು ಪ್ರವರ್ತಿಸಿದರಿಂದ ಅದಕ್ಕೆ ಆರ್ಯಾವರ್ತ ಎಂಬ ಹೆಸರಾಯಿತು. 2. ಮನೋವೇಗ ದೇವತಾರಾಜನು. ಅವನ ರಥ ಮುಂದಕ್ಕೆ ನಡಿಯಲಿಲ್ಲ.

ಉತ್ಪಲಮಾಲಿಕಾ ವೃತ್ತ.

1278. ಎಂಬ ಮಹಾಸಖಂ ಪವನವೇಗನು ಮಜ್ಜನಧರ್ಮವೆಂಬುದಂ
ಮುನಿಸನಾಲಿಸಂ ಪರಿವದೀಕ್ಷಿಸನಾತನ ಕರ್ಮಬಂಧ ತಾ
ಮಿಂನೆವರಂ ತೊಳಲ್ದಿ ಸುವದೀಭವಮಾಲೆಯೊಳಾವನೇನುವಂ
ಸಂನುತಮಪ್ಪಿನಿಂ ಕಳೆವುಪಾಯುವು ನೀಂ ಬೆಸಸ್ಸೈ ! ಮುನೀಶ್ವರಾ!

Manovéga asks a Jain saint: "give my friend understanding."

1. ನಂಮುಜನಧರ್ಮ. 2. ಬಂದಿಪು ಸಂನುತನಾಗುವ ಹಾಗೆ.

ವಚನ.

1279. ಎಂದು ಮನೋವೇಗಂ ಭರದಿಂದ ತನ್ನಯ ಸಖಂಗೆ ಹಿತವಂ ಪಡೆಯಲ್ಕೆ, ಅವರಧೈರ್ಯದಿಂ ಪಿರಿದ್ ಅನಂದದಿಂ ಬೆಸಗೊಳಲು, ಮುನಿ ನಿರಂತರದಿಂದ ಕರುಣಾಲೋಕನದಿಂ ಸುರುಚಿರದೀಪಮರೀಚಿ ನಿಮಿರ್ದ, ವರಭವ್ಯಜನೋತ್ಕರ ಚಿತ್ತತಿಮಿರಮಂ ಪರಿಹರಿಸುವವ್ ಎನೆ, ಮುನಿಲಲಾಮಂ ಇಂತೆಂದನು.

Reply of the saint:

1. ನೆಟ್ಟಗಿದ್ದಂಥಾ ಸಾಖ್ಯದಿಂದಿದ್ದಂಥಾ ಜನರ ಸಮೂಹದ ಚಿತ್ತದ ಕತ್ತಲೆಯನ್ನು ಆ ಮುನಿಯು ದೀಪದ ಕಿರಣ ಪರಿಹರಿಸುವದೆಂಬ ಹಾಗೆ

ರಥೋದ್ಧತ ವೃತ್ತ.

1280. ಪಾಟಲೀಪ್ರರದೊಳನ್ಯಶಾಸ್ತ್ರರೋ
ದ್ಘಾಟ ಗೈದು ಕುಮತಾಗಮಂಗಳಾ
ಸ್ಫೋಟನಾಗಿಸೆ, ಮನೋರಥಂ, ಸದಾ
ನೀಟಸಮ್ಯಕುಮುದಕ್ಕ; ಕೇಳ್ನೃಪಾ !

"Go to the city of Pátlipura and refute their false religion"!

ಕಂದ.

1281. ಎಂದು ಮುನೀಶ್ವರ ಮನದೊಲ
ವಿಂದ ವೇಳಲ್ಕೆಂ, ಕೇಳ್ದು ಧರ್ಮಕ್ಕೆ ಸಖಂ

Joy of Manovéga.

ಸಂದೇಹಿಲ್ಲದೆ ಬಂದಪೆ
ನೆಂದುತ್ಸಾಹವನು ತಾಳಿದಂ ಖಚರಸುತಂ[1].

1. ಮನೋವೇಗ (*the son of the gods*)

1282. ತಂನಯ ಸಖಂಗೆ ಸುಖ ಸಂ
ಪಂನತೆಯುಂ ಕುಮತಕುಮತಿವೃತ್ತಿಯರಿದವ
ಕ್ಕಂನತೆಯುಂ ಮಾಳ್ಪೊಂದನು
ವಂ ನೆನೆದಂ ಮುನಿಯ ಮತದಿ ವೃ[1]ತ್ತವಿಕಾಸಂ.

1. ಮನೋವೇಗ, ಮತ್ತು ಈ ಕೃತಿಯ ಮಾಡಿದ ಕವಿಯು ತನಗಿಟ್ಟುಕೊಂಡ ಪೆಸರು.

ವಚನ.

1283. ಅಂತು ಮುನೀಶಂಗೆ ಬಿನ್ನವಿಸಿ ಜವಿ ಬೀಳ್ಕೊಂಡು ನಿಜಪುರಕ್ಕೆ ಬರುತ್ತ ಆನಂದದೊಳ್ ಮನೋವೇಗಂ ಮುನ್ನ ಬರುತ್ತಿರ್ದ ತನ್ನ ಸಖನಂ ಗಂಡು ಪರಸ್ಪರಾಲಿಂಗನಂ ಗೈಯೆ, ಎಲೆ ಮಿತ್ರಾ! ನಿನ್ನನಾಂ ಕೂಡಿ ನೋಡಿ ಕಾಣದೆ ಇನ್ನೆವರಂ ಚಿಂತಿಸುತಿರ್ದೆ; ನೀನ್ ಇನ್ನೆವರಂ ಎಲ್ಲಿಗೆ ಪೋಗಿರ್ದೆ? ಪೇಳೆಂದು ಪವನವೇಗಂ ಬೆಸಗೊಳೆ, ಮನೋವೇಗಂ ಇಂತೆಂದಂ:

He returns home,

ಕಂದ.

1284. ಭರತಾರ್ಯಾಖಂಡದ ಜಿನ
ವರರಂ ನಾಂ ಪಾದಪೂಜೆಯಂ ಮಾಡಿ ಬರು
ತ್ತಿರೆ, ಮುಂದೊಂದೆಡೆಯೊಳು ಪಲ
ತೆರದ ಮಣಿಯುತನಾಟಕೂಟಪ್ರಾಸಾದದಿಂ

and tells his friend Pavanavéga of the beauty of the city of Pátlipur.

ವಚನ.

1285. ಒಪ್ಪವ ಚಿತ್ರಹಾರಿಹಿರಣ್ಯ[1]ಗರ್ಭಾಲಯಗಳಿಂದಿರೆ, ಯೇಕ[2]ದಂಡಿ ತ್ರಿ[3]ದಂಡಿ ಹಂ[4]ಸ ಪರಮ[5]ಹಂಸ ಭೂತಿ[6]ಕಾದಿಲಿಂ[7]ಗಪ್ರಕಟಬ್ರಾಹ್ಮಣ್ಯ ವೇದಘೋಷವರಘೂರ್ಣಾಯಮಾನಪಾಟಳೀಪುತ್ರಪುರಮಂ ನೋಡಿ ಸೋಲ್ತು ಪೊರಮಡಲಾರದೆ ಇರ್ದೆನ್ ಎನಲ್, ಆಗಪವನವೇಗನ್ ಇಂತ್ ಎಂದನು :

1. ಬ್ರಹ್ಮನ ಗುಡಿಗಳು. 2. ಒಂದು ದಂಡ ಹಿಡಕೊಂಡ. 3. ಮೂರು ಕೋಲು ಹಿಡಕೊಂಡ ಸನ್ಯಾಸಿಗಳು. 4. ತಪಸಿಗಳಲ್ಲಿ ಶ್ರೇಷ್ಠರು. 5. ಅವಧೂತರು ಅರಿವಿನ್ನು ತಾಡದ್ದೆಲ್ಲಾ ಬಿಟ್ಟವರು. 6. ಶಾಸ್ತ್ರ ಹೇಳುವವರು. 7. ಲಿಂಗಧರಿಸಿದಂಥಾ ಆರಾಧ್ಯ ಬ್ರಾಹ್ಮಣರು.

ಕಂದ.

1286. ಈ ಚಲ್ವಮಪ್ಪ ಪುರಮಂ
ಖೇಚರಪತಿ ! ನೋಡಲೆಂದು ಪೋಗುತ್ತನಗಂ
ಸೂಚಿಸದೆಜಗುಳ್ದೀವರ
ಲೋಚನಕಾನಂದವಾಗೆ, ತೋರೀಗಳದಂ !

Pavanavéga very anxious to see it also.

1287. ಎನೆ ಕೇಳ್ದು ಮನೋವೇಗಂ
ವಿನಯದೊಡನೆಂದನಾಗಳ್ ಮುದದಿಂ : ನೀವೇ
ಳ್ದನುನಯದಿಂ ರವಿ ಯೊಗೆವ್ರೊ
ತ್ತಿನೊಳ್ ನಾಳೆ ಯಲ್ಲಿಗೆ ನೀ ಸಹ ಪೊರಮಡುವಂ !

Manovéga takes him to that city.

ವಚನ.

1288. ಎಂದು ಪಡಂಬಡಿಸಿ ಪುರವ ಪೊಕ್ಕು ನೇಸರಿ ಮೂಡಲುಂ, ಮುನಿ ವರಂ ಪೇಳ್ದ ವೃತ್ತಾಂತಮಂ ಚಿತ್ತದೊಳ್ ನೆನದು ಪವನವೇಗನಂ ಕರೆಸಿ ಶುಭಮುಹೂರ್ತದೊಳ್ ಪಯಣಮಂ ಮಾಡಿ ಪೋಗುತ್ತಂ.

ಶಾರ್ದೂಲವಿಕ್ರೀಡಿತ ವೃತ್ತ.

1289. ಮಾರ್ತಾಂಡೋದಯಕಾಲದೊಳ್ಪವನವೇಗಂ ತಾನುಮುಂ ತೀ [ವ್ರದಿಂ
ಸಾರ್ತಂದರ್ಗಲಿ ಪಾಟಲೀಪುರವರೋದ್ಯಾನಕ್ಕೆ ತಾವಿರ್ವರುಂ
ಕೀರ್ತಿಶ್ರೀಯುತರಲ್ಲಿ ಪುಷ್ಪಕವಿಮಾನದ್ವಂದ್ವಮಂ ಬೈತು ಸಂ
ಪೂರ್ತಿಪ್ರಾಯುದಳಂ ಕೃತಿಪ್ರಕರವಸ್ತ್ರಾದ್ಯುದ್ಯಶೋಭಾನ್ವಿತರ್.

ಕಂದ.

1290. ತೃಣಕಾಷ್ಟಭಾರಮಂ ಪೊ
ತ್ತಣಿಯರುದ್ಯಾನವನದಿಂ ಪೊರಮಟ್ಟಾಪ
ಟ್ಟಣದ ಕಮನೀಯತರಮಾ
ಡಣದ ಗೋಪುರದಬ್ಜಭವನಗೃಹಮಂ ಪೊಕ್ಕರ್.

They enter, in the disguise of grass and wood-cutters, the temple of Brahma in that city.

ವಚನ.

1291. ಅಂತು ಪೊಕ್ಕು ಪುಲ್ಲ ಕಟ್ಟಿಗೆಯ ಪೊರೆಯುಂ ಇಳುಪಿ, ಭೇರಿಯಂ ಪೊಯಿದು ಕುಳ್ಳಿರಲ್ಕೆ, ಆ ಭೇರಿಯ ರವಂ ಕೇಳ್ದು ವೇದಪಾರಾಯಣರುಂ, ಶಾಸ್ತ್ರ ಚತುರ್ಮುಖರು[1], ತರ್ಕಕರ್ಕಶರುಂ ಅಪ್ಪ ತತ್ಪುರದ ವಿಪ್ರಜನಗಳೆಲ್ಲ ಬಂದು ಅವರ ತೇಜಮಂ ಕಂಡು ಇವರು ಕಾರಣಪುರುಷರೆಂದು ವಿಷ್ಣುವಿಕಲ್ಪದಿ[2] ನಮಸ್ಕಾರಂ ಗೈದು ಮತ್ತಂ ಇಂತೆ ಎಂದರ್.

Wonder of the brahmans at their appearance,

1. ಬ್ರಹ್ಮನಂತೆ ಶಾಸ್ತ್ರಬಲ್ಲವರು 2. ವಿಷ್ಣುವೇನೋ ಎಂಬ ವಿಕಲ್ಪದಿಂದ.

ವಿಭೂತಿ ವೃತ್ತ.

1292. ಆವದೇಶ ನಿಮ್ಮದಿಂ
ನಾವಶಾಸ್ತ್ರ ಬಲ್ಲಿರೈ ?
ದಾವವಿದ್ಯ ಬರ್ಕುಗುಂ ?
ನೀವು ಪೇಳಿ ಬೇಗದಿಂ !

and conversation with them.

ಕಂದ.

1293. ಎನಲವನಿತಳವೆಲ್ಲವು

Their answer. ಯೆನಿಸುಳಿಯದೆ ನೋಡುತ ಬಂದೆವೀಪುರವು ನೆ
ಟ್ಟನೆ ನೋಡಲೆಂದು ಶಾಸ್ತ್ರವು
ನನಿಶಂ ಕೇಳ್ದರಿಯೆವಾವವಿದ್ಯದೊಳನಿತುಂ.

ವಚನ.

1294. ಎಂದಡ್, ಅವರ ಇಂತ್ ಎಂದರು : ವಿದ್ವಾಂಸರಾದವರು ವಾದಾರ್ಥ

Remonstrances of the brahmans. ದಿಂ ಬಂದು ಭೇರಿಯ ರವಂ ಮಾಡಿ ವಾದಂ ಗೆಲ್ದಲ್ಲದೆ ಸಿಂಹಾಸನ ದೊಳು ಕುಳ್ಳಿರ ಬಾರದ್ ಎನೆ, ಯಾದಡೆ, ಮಾಣಲಿ ಯೆಂದು ಸಿಂ ಹಾಸನದಿಂದ್ ಇಳಿದು ಕುಳ್ಳಿರೆ, ಮತ್ತೆ ಯಾವಿಪ್ರರ್ ಇಂತ್ ಎಂದರ್.

ಶಾರ್ದೂಲವಿಕ್ರೀಡಿತ ವೃತ್ತ.

1295. ಈರೂಪೀ ಬಲಿವೀರ್ಯಕಾರ್ಯ ಕಮನೀಯಂ ತೇಜಮೆಂಬೆಲ್ಲ [ವಿಂ
ತಾರಯ್ಯೆಲ್ತ್ರಣಭಾರವಂ ತಳವು ನೀಚಾಚಾರದಿಂ ಬಾಳ್ವ ವಿ
ಸ್ತಾರಂ ಬೆರ್ಥ[1]ವಿದೇಕೆ? ಪೇಳಿ ! ಯೆನಲೇಂ ಧರ್ಮಾರ್ಥಶೀಲಯಂ [ದದಿಂ
ಯಾರುಂ ಬಾಳ್ದವರಿಲ್ಲ ನಿಂಮ ಮತದೊಳ್ನೀವೆಲ್ಲರುಂ ಪೇಳಿರೇ.

1. ಬೆರ್ಥ=ವ್ಯರ್ಥ(ತದ್ಭವ.)

ವಚನ.

1296. ಎನಲ್ ಇಂತಪ್ಪ ವಿಭವವನುಳ್ಳವರು ಯಿನಿತು ನೀಚಾಚಾರದಿಂ ಬಾಳ್ದರ್ ಎಂಮ ಮತದೊಳ್ ಉಳ್ಳಡೆ, ಪೇಳಿಂ ಎನೆ.

ಚಂಪಕಮಾಲಾ ವೃತ್ತ.

1297. ಶಿರಿಯ ಮನಃಪ್ರಿಯಂ[1] ಭುವನಪಾಲಕನುಂನತಮೂರ್ತಿ, ಕೌಂ [ಸ್ತುಭಾ

Proof, that Vishnu cannot be god, if what is written of him

ಭರಣನೆನಿಪ್ಪ ವಿಷ್ಣು ದನ ಗಾಯನೆ ? ನಂದನಕಂದನಾಗಿ ಕಿಂ

ಕರತೆಯು ಗೈಯ್ಯನೇ ? ನರನ[2] ಸಾರಥಿಯಾಗಿ ಪೃಥಾತನೂಭವ

ರ್ನಿರವಿಸೆ, ಕೌರವೇಂದ್ರನ ಸಮೀಪಕೆ ಹೋರಿಗನಾಗಿ ಹೋಗನೇ?

1. ಲಕ್ಷ್ಮಿಯ ಗಂಡ. 2. ಅರ್ಜುನ.

ಕಂದ.

1298. ಶಿರಿ ತನಗೆ ಕಾಂತೆ, ಗಡ ! ಲೋ

in the Puránas, is true.

ಗರದನವ ಕಾಯಲೇಕೆ ? ಸಕಲಜಗಮಂ ನೆರೆ

ಪರಿಪಾಲಿಸುವಾತಂ ತಾ

ನರನಾಗಿರ್ಪುದದೇತಕೆ ? ಚೋದ್ಯಮಿದೆಲ್ಲಂ !

ವಚನ.

1299. ಮತ್ತಂ ಅಲ್ಲದೆ ನಿತ್ಯದೇವಂ ಜನನಮರಣವರ್ಜಿತಂ ಚಿನ್ಮಯಂ

ಎಂಬಡೆ, ಅದು ಘಟಿಸಿದ ; ಅದ್ ಎಂತೆನೆ,

ಅನುಷ್ಟುಪ್ ಶ್ಲೋಕ.

1300. ಮತ್ಸ್ಯಃಕೂರ್ಮವರಾಹಶ್ಚ

ನಾರಸಿಂಹಶ್ಚ ವಾಮನಃ

ರಾಮೋರಾಮಶ್ಚ ಕೃಷ್ಣಶ್ಚ

ಬೌದ್ಧಃಕಲ್ಕಿ ದಶಾಕೃತಿಃ.

ವಚನ.

1301. ಎಂದ್ ಇಂತು ಸಾವುಪುಟ್ಟುಂಗಳುಳ್ಳದರಿಂದ್, ಅನಿತ್ಯನುಂ, ಜರಾಮ

ರಣಾನ್ವಿತನು ; ತಿರ್ಯಗ್ಜಾತಿಯೋಳ್ ಪುಟ್ಟಿದರಿಂದ್, ಅಜ್ಞಾನಿಯುಂ

ಸಂದೇಹಮಿಲ್ಲ ; ಮತ್ತಂ ಇವು ಜನನಮರಣಂಗಳ್ ಅಲ್ಲದಿರ್ದಡೆ, ವಿನೋದವೊ? ನಿತ್ಯಕರ್ಮಾನುಷ್ಠಾನವೊ? ಪೇಳಿರಿ ! ಬರಿದೆ ನಂಮಂ ನೀಚಾಚಾರದೊಳ್ ನಡದಿರ್ ಎಂಬಿರ್ ಎನೆ, ವಿಪ್ರರೆಲ್ಲರ್ ನಿರುತ್ತರರಾಗಿ ಜಯವಾದಿಗಳ್ ನೀವೆಂ[1]ದು ಜಯಪತ್ರಮಂ ಕೊಡೆ, ಕೊಂಡು ವಿಮಾನವ ನಿಕ್ಷಿಪ್ತಮಾಡ್ದಿ ಉದ್ಯಾನಕ್ಕೆ ಬಂದು ನೇಸರ್ ಮುಳಿಗಿ ಮೂಡುವರಿಗೆ, ನಿದ್ರಾಮುದ್ರಿತರಾಗಿ ಉದಯವಾಗಲ್ ಎದ್ದರು.

1. ಭೂತಕಾಲದ ಶಬ್ದ ನ್ಯೂನ, ಮಾಡಿದ. ವ್ಯಾ. ಸೂ.

EXAMINATION OF ALL THE GODS.

3. ಸರ್ವದೇವತಾ ಪರಿಕ್ಷೆ. (3ನೇ ಆಶ್ವಾಸ.)

ಮಾಲ್ಯವೃತ್ತ.

1302. ಭರವಸಂ ಮರುದಿನಂ ಪಿರಿದಾಗಿ ನಟ್ಟನಾಭರಣಂಗಳೆಲ್ಲಮಂ ಬೈ
[ತು ತಾಂಬೇಗದಿಂ

They enter the temple of Brahma in the disguise of hunters,

ವರಸಖಂ ಬೆರಶಿ ಖೇಚರಚಕ್ರವರ್ತಿ ಬೇಡರ ರೂಪನಾಂತು ಬಿಲ್ಲಂ
[ಬು ತಾ ಹಸ್ತದಿಂ
ಧರಿಸಿ ಯುದ್ಧದ ಸಘಾಟದಲಿಂವಲೊಂದು ಬೆಕ್ಕನು ತಾ ವಿನೋದ
[ದಿಂದಿಕ್ಕಿ ಯಾ ಪಾಟಲೀ
ಪುರದುಮಾಪತಿದಿಶಾವರಕೈದೆ ಬಂದು ಗೋಪುರದೊಳ್ವಿರಾಜಿಪ
[ಬ್ರೊಜ್ಞಭವಾವಾಸಮಂ.

ಕಳಾಭಾಷಣ ವೃತ್ತ.

1303. ಪೊಕ್ಕು ಭೇರಿಯನು ಪೊಯ್ದುರೆ ವುನ್ನತಪೀಠದೊ

through the north-eastern gate.

ಳ್ಪಿಕ್ಕಿರಲ್ಕದರ ಮಾ[1]ರವಮೋಣ್ದಿಶೆಯಲ್ಲಮಂ

1. ಮಹಾರವ.

ತೆಕ್ಕನೊತ್ತರಿಸಿ ತೀವಿರೆ, ಕೇಳ್ವ ಪುರಾಣಸಂ
ಪರ್ಕರೆಂಬ ವರವಿಪ್ರಜನ ನೆರೆದೆಲ್ಲರುಂ.

ಕಂದ.

1304. ಬಂದೊಳಗಂ ಪೊಕ್ಕೀಕ್ಷಿಸಿ
The learned brahmans come together. ಯಂದಿರದೆ ಯೆಂತೆಂದು ಭೇರಿಯಂ ಪೊಯ್ದಿರಿ ? ಯೀ
ನೆಂದುನ್ನತಾಸನದೊಳಾ
ನಂದದಿ ಕುಳ್ಳಿರ್ದಿರಿದೇನೆನಲವರೆಂದರ್ :

1305. ಕುಡುಪಿದರ್ಪೊಡೆ, ದುಂದುಭಿಯಂ
Interrogations. ಪೊಡೆದೆವು; ಜನವೆಲ್ಲಂ ಬಂದು ನಲುವಿಂ ಕುಳ್ಳಿರು
ವೆಡೆ ಯೆಂದು ಕುಳಿತೆವು; ಪೊಲ್ಲ
ದಡೆ, ಹೊಲ್ಲಮೇನೆಂದದಾದ್ವಿಜರಿಂತೆಂದರ್ :

ವಚನ.

1306. ಮತ್ತಂ ಈ ಪುರದೊಳು ವಿದ್ವಾಂಸರಾವವರು ವಾದಾರ್ಥದಿಂ ಬಂದು ಭೇರಿಯಂ ಪೊಯ್ದು ವಾದಂ ಗೆಲ್ದಲ್ಲದೆ ಸಿಂಹಾಸನದೊಳ್ ಕುಳ್ಳಿರ ಬಾರದ್ ಎನೆ, ಯಾವದ್ ಅದು ಮಾಣಲಿ ಯೆಂದು ಸಿಂಹಾಸನದಿಂದ್ ಇಳಿದು ಕುಳ್ಳಿರೆ, ನೀವು ಬಂದ ವೃತ್ತಾಂತಮಂ ಪೇಳ್ ! ಎನೆ, ಈ ಬೆಕ್ಕಂ ಮಾರಲ್ ಬಂದೆವು ಎಂದೇ ಎನಲು, ಮತ್ತಂ ಅವರ್ ಇಂತ್ ಎಂದರ್ :

ಮಹಾಸ್ರಗ್ಧರ ವೃತ್ತ.

1307. ಬೆಲೆ ಯೇನೀಬೆಕ್ಕಿಗರ್ಥಂಬಗೆವಡವರ ಸಾಮರ್ಥ್ಯವೇನೆಂದು ವಿಪ್ರ
Explanations about the cat, they had brought with them. ನ್ಗಲುವಿಂದಂ ಕೇಳಲಾಗಾಕ್ಷತಕಳಬರನೆಂದಂಮುಸಂಖ್ಯಂ ! ಸಹ

[ಸ್ರಂ

ಬೆಲೆ ! ಈರೇಳ್ಯೋಜನಂ ಮೂಷಕವಿರಲಿದರೇಣಾಸೆಯೋಳ್ಪವು [ಗುಂ; ಕೇ
ವಲಮೋ ಸಾಮರ್ಥ್ಯವೆಂಬುಂಮುಸರಲವರ ಸರ್ವಾಂಗಮಂ ನೋ [ಡುವಾಗಳ್.

ಕಂದ.

1308. ಅವರ ಕಿವಿ ಶೀಳ್ದೊಗೆವ ರ
ಕ್ತದ ಪನಿಯಂ ಕಂಡಿದೇನೆನಲ್ಮರದಿರೆ, ಕ
ಜ್ಜದುದೊಂದಾಖುವೆನಲ್ಕೇ
ಳಿದುವೆ ಯ[1]ಸಂಭಾವ್ಯವೆಂದು ವಿಪ್ರರ್ನಕ್ಕರ್.

1. ಆಗವು.

1309. ನಗುತಿರೆ, ಕಿರಾತರೆಂಬ
By one defect many good qualities not spoiled in men.
ರ್ನಗಲೇಕವಗುಣದ ಲೇಶವಿರ್ದೊಡೆ, ನಿರುತಂ
ಸುಗಣ ಬ್ರಾತಂ ಕೆಡುವುದೆ ?
ಜಗದೊಳಗಂ ನರ[1]ನದೇಕೆ ? ನೀವರಿ[2]ಯೆವರೇ ?

1. ಷಷ್ಠಿ.=ನರನ ಸುಗುಣವ್ರಾತ. 2. ಅರಿಯುವವರೇ.

ವಚನ.

1310. ಎನೆ, ನಾವರಿಯೆವು ಅಂತಪ್ಪವರಂ; ನೀವ್ ಅರಿವರ್ ಅಪ್ಪೊಡೆ, ಪೇ
Speech of Manovéga.
ಳಿ ! ಯೆನೆ, ಮನೋವೇಗಂ ಪೇಳಲ್ ನೆಗಳ್ದಂ :

ಕಂದ.

1311. ವಸುಧಾವನಿತೆಯ ನಾಭಿ ಯ
a. the unbelieving frog;
ನಿಸುವ ಸರೋವರದೊಳೊಂದು ಮಂಡೂಕಂ ವ
ರ್ತಿಸುತಿರ್ಪುದದರ ಪೊರೆಗಂ
ಅಸವಸ ಸಿತಪ[1]ಕ್ಷನೊಂದು ಬರೆ, ಕಂಡಾಗಳ್,

1. ಬಿಳಿ ರೆಕ್ಕೆಯುಳ್ಳವನು=ಹಂಸ.

ಮತ್ತೇಭವಿಕ್ರೀಡಿತ ವೃತ್ತ.

1312. ಬರವೆಲ್ಲಿಂದ? ಮರಾಳ! ವಾರಿನಿಧಿಯಿಂ; ವಿಸ್ತಾರಮೇ ವಾರ್ಧಿ? ವಿ
ಸ್ತರಮೀಕೂಪದ ಪಾಟ ಯಪ್ಪುದೆ? ಧಿಟಂ ಪೇಳೆಂದೆನ ಲ್ವಾರ್ಧಿಗಂ
ಮೆರವೀಚಾರುವಿಯತ್ತಳಿಕ್ಕೆ ಯೆಣೆ ಇಲ್ಲೆಂದೆಂಬುದಂ ಕೇಳ್ದು ದು
ರ್ಧರನಂದಾಗಳೆ ನಕ್ಕುದೆಂಬ ಕಥೆ ಯುಂಟಿಂತಪ್ಪರಿಲ್ಲಿಲ್ಲವೇ?

ವಚನ.

1313. ಅಂತ್ ಎನಲ್, ಇಂತಪ್ಪವರ್ ಎಮ್ಮ ಸಭೆಯೊಳ್ ಇಲ್ ಎನೆ, ಮ
ತ್ತಂ ಆ ದುರಾಚಾರ ಕಥೆಯವರ್ ಉಳ್ಳಡೆ, ಪೇಳೀಮ್ಮೆವ್ ಎನೆ,
ಯಾಕಥೆ ಯಂತ್ ಎನೆ, ಮನೋವೇಗಂ ಪೇಳ್ದಂ; ಸೌರಾಷ್ಟ್ರದೇಶ
ದ ಕೋಟಿಗ್ರಾಮದೊಳು ಕಡುವಂಕರ್ ಎಂಬ್ ಈರ್ವರು ಗ್ರಾಮಿ
ಗಳ್; ಆವರೋರ್ವರೋರ್ವರೊಳು ಸ್ಪರಿಸದಿರುತಿರೆ, ಆವಂಕಂ
ವ್ಯಾಧಿಯಿಂ ಕಂಠಗತ[1]ಪ್ರಾಣನಾಗಿರೆ, ಪುತ್ರ ಬಂದು ಬೊಪ್ಪಾ! ಪ
ರತ್ರಮಂ ಸಾಧಿಸಿಕೊಂಬುವದಕ್ಕೆ ದಾನಧರ್ಮಮಂ ಮಾಡುವದ್
ಎನೆ, ಕರದ್, ಎಲೆ ಮಗನೆ! ನೀನ್ ಯನಗೆ ಧರ್ಮಮಂ ಮಾಡಿ
ಕೊಡುವೆ ಯಪ್ಪಡೆ, ನಾಂಪೇಳ್ದಂತೆ ಮಾಡು! ಎನೆ, ಕರಂ ಬಳತು
ಪೇಳ! ಮಾಳ್ಪೆನ್; ಎನೆ, ನಾಂ ಸಾಯಲೊಡನೆ, ಉತ್ಸಹ ನೆಗಪಿ
ಪೆಣನ್ ವೈದು ಕುಡುನ್ ಇರ್ದ ಕೈಮಂಚಗಿಯ ಕಂಭದಲ್ಲಿರಿಸಿ ಪೊ
ದಿಸಿ ಪಿಡಿಸು ಯೆಷ್ಟಿಯ! ನೀ ಸಾರ್ದ್ ಅಡಂಗಿ ನೀನ್ ಇರಲ್, ಆಗ
ಮುಗುಳ್ದು ಕುಡುವಂ ಭರದಿಂ ಬಂದು ಪೊಯ್ಯೆ, ಶವ ವುರಳ್ದು ಬೀ
ಳ್ವುದು.

1. ಪ್ರಾಣಕಂಠದ ತನಕ ಬಂದಿತ್ತು = ಪ್ರಾಣೋತ್ಕ್ರಮಣ ಸಮೀಪವಾಗಿತ್ತು.

ಕಂದ.

1314. ಕೊಂದನಿವನೆನ್ನ ತಂದೆಯ
ನೆಂದಬ್ಬರಿಸಲ್ಕೆ, ಕೇಳ್ದು ನರಪತಿ ಯುವನಂ
ಬಂಧಿಸಿ ಧನಧಾನ್ಯವ ತಾ
ನೊಂದುಳಿಯದೆ ಕೊಂಡನಾದಡೆನಗದು ಮೋಕ್ಷಂ !

ವಚನ.

1315. ಎಂದು ಪೇಳೆ, ಪೇಳ್ದಂತೆ ಮಾಡೆ, ಸರ್ವಸ್ವಮಂ ಕವರ್ದು ಕೊಂಡರ್ ಎಂಬ ದುರ್ಜನನ ಕಥೆ ಯಂತ್ ಅಪ್ಪವರು ನಿಮ್ಮ ಸಭೆಯೊಳ್ ಇರ್ದಡೆ, ಪೇಳಲ್ ಅಮ್ಮೆವ್ ಎನೆ, ಯಂತವರ್ ಎಮ್ಮ ಸಭೆಯೊಳ್ ಇಲ್ಲ ಅಂಜದೆ ಪೇಳಿಮ್ ! ಎನೆ, ಮನೋವೇಗಂ ಪೇಳ್ದಂ:

ಮಹಾಸ್ರಗ್ಧರ ವೃತ್ತ.

b. the story of the envious man ;
c. the story of the incredulous brahman.

1316. ಸಿರುತಂ ಕಾಷ್ಠೋಷ್ಟನಾಮಂನಗರವವರೊಳುಂ ಭೂತಮಾತಾಖ್ಯ [ವಿಪ್ರಂ
ವರದಿಂದಂ ಮುಂಜಿಯಂ ಗಟ್ಟಿಸಿದ ಬಳಿಕವಂ ವೇದಮಂ ನೋಡಿ [ಮೂವ
ತ್ತೊರುಷಂ ತಾಂ ಪಾಠ ಗೈವೃತ್ತಿರದೆ ಪರರೊಳುಂ ಪೇಳ್ದನಲ್ಲಿಂಬ [ಳಿಕ್ಕಂ
ವರಯುಗ್ಮೀಕನ್ಯಯಂ ಚೆನ್ನಿಯನೆ ಮದುವೆ ಯಾದಂ ಮನೋರಾ [ಗದಿಂದಂ.

ವಚನ.

1317. ಅಂತ್ ಇಷ್ಟಭೋಗ ಸುಖಮನ್ ಅನುಭವಿಸುತ್ತಂ ಇರೆ, ಕೆಲವಾನುದಿವಸಕ್ಕೆ ಅತ್ತಲ್ ಉಪಾದಾನಪುರಾಧಿಪತಿ ಯಾಗಮವಾಡಂ

ಲೆಂದು ಯೋಗ್ಯರಂ ಬರ ವೇಳ್ಪ್ ಅಟ್ಟಿ, ಭೂತಮತಿ ಪೋಗಲ್ ಉದ್ಯುಕ್ತನಾಗಿ ಯಗ್ನನ್ ಎಂಬ ಶಿಷ್ಯಗಂ ಸತಿಯಾವ ಯಗ್ನಿಯಂ ವಳಮುಂಪಿರದಿ ಬೈತಿರಿಸಿ ಕೊಂಡಿರ್ ಎಂದ್ ಆಜ್ಞೆ ಗೊಟ್ಟು ಪೋಗೆಲೊಡನ್, ಇವಳ್ ಇತ್ತಲ್ ಎನ್ನ ವಿಳಾಸವ್, ಎನ್ನ ಸೌಭಾಗ್ಯವ್, ಎನ್ನ ವಿವೇಕತೆ, ಯನ್ನ ರೂಪಸಂಪನ್ನಯವ್ವನವತಿ, ಎನ್ ಅಂಗದ ಗಾಡಿ ವ್ಯರ್ಥವಪ್ಪವ್, ಇವು; ನೀ ಎನ್ನೊಳ್ ಅತು ಕೂಡೆ, ಸಫಲ ಸತಿ! ನೀನ್ ಎನ್ನೊಳ್ ಆಗವ್ ಎನ್ನದಿರು! ಪರತ್ರಸೌಖ್ಯವ್ ಎಮಗ್ ಅಂಪುದೆನೆ, ಯಗ್ನನ್ ಇಂತ್ ಎಂಪಂ:

ಕಂದ.

1318. ನೀನಪ್ಪಡೆ, ಗುರುವಿನ ಸತಿ
ಗೀನುಡಿ ನಿನಗುಚಿತಮಲ್ಲ; ಲೋಕಂಪಳಗುಂ;
ಭೂನಾಥಂ ದಂಡಿಪನಭಿ
ಮಾನದ ಕೇಡಪ್ಪುದೈದೆ ನರಕಕ್ಕಿಳಗುಂ.

ವಚನ.

1319. ಎನಲ್, ಆಧೂರ್ತೆ ಖದಖದಿಸಿ ನಕ್ಕು, ಪಾಪಂ ಪುಣ್ಯಂ, ಸ್ವರ್ಗನರಕವ್ ಎಂದ ಆಡಿದ ಧೂರ್ತನ ಮಾತಿಗೆ ಬೆರಗಾದ ಪರಿಯಿಂ ನೋಡಾ! ಪಾಪಪುಣ್ಯವ್ ಎಂಬ್ ಎರಡರ ಬಣ್ಣಮು ಅಪ್ಪುದ್? ಅದಂ ಬಲ್ಲವರ್ ಆರು? ಸ್ವರ್ಗನರಕವ್ ಎಂಬ್ ಅವ್ ಎಲ್ಲಿ ಇರ್ಪವ್? ಅದಂ ಕಂಡು ಬಂದವರ್ ಆರು? ಬರಿಯ ಮಾತಿಂಗೆ ಬೆರಗು ಗೊಂಡಿರ್ಪ ಮೂರ್ಖನ ಕಂದನ್ ಈಗಳ್; ಈ ಕಠಿಣವೃತ್ತಿಯಿಂ ಸಂಸಾರಸುಖಕ್ಕೆ ಇತರನಾಗಿ ಜನ್ಮವಂ ವ್ಯರ್ಥ ಮಾಡಿ ಕಡಿಸದೆ ನನೆಗೆ ಅನುಕೂಲವಾಗಿ ನಿಶ್ಚಿಂತೆಯಾಗಿರದೆ ಭ್ರಮೆ ಗೊಂಡವರಂತೆ ಮರಗುಗೆಟ್ಟು ಉಸುರದಿರ್! ಎಂದು ಮತ್ತಮ್ ಇಂತೆಂದಳು.

ಕಂದ.

1320. ಈ ಪ್ರಾಯದಲ್ಲಿ ನವಯುವ
ತೀಪ್ರೀತಿಗಳೆಲ್ಲ ಗತ ! ಬಿಚಾಕ್ಯಪರೊ ! ಹೀ
ನಪ್ರಾಯವಾಗೆ, ಸುರತವ
ದ ಪ್ರಸ್ತುತವೆಂದು ಪಿರಿದೊಡಂಬಡೆ, ನುಡಿದಳ್.

ವಚನ.

1321. ಅಂತ್ ಅನೇಕತೆರದಿಂದ ಬಡಬಡಿಸಿ ಸಂಭೋಗಕೇಳಿವಿನೋದದಿಂದ ಇತರರರಿವಾಟ[1]ವುಂ ಬಗೆಯದೆ, ಕುರಿ ಬಾಳೆಹಣ್ಣ ಮೆಚ್ಚಿದಂತೆ, ವ್ಯಸನದ್ ಎಸಕದಿಂ ಮೈ ಯರಿಯದೆ, ಮನೆಮನವಾರ್ತೆಯುಂ ಮರದು, ಲಜ್ಜೆಯುಂ ತೊರೆದು, ಯಿರುತ್ತಿರೆ, ಕೆಲವು ದಿವಸಕ್ಕೆ, ವುಪಾಧ್ಯಾಯರು ಬಪ್ಪ ದಿನವಾಯ್ತು ಎಂದು ಕೈಸ್ತ್ರೋತ್ರಂ ಬಿದ್ದ್ ಐದಿದವರಂತೆ, ಲಿಪ್ಪವುಂ ಮರಪರಂತೆ, ಮುಗಿಲ್ ಮೇಲೆ ಬಿದ್ದರಂತೆ, ಗಲ್ಲಕ್ಕೆ ಕೈಯನ್ ಇಟ್ಟು ಚಿಂತಾಕ್ರಾಂತನಾಗಿ ಯಗ್ನನು ಇರೆ, ಕಂಡು ಯಗ್ನಿ ಇಂತ್ ಎಂದಳ್.

1. ಬೇರೊಬ್ಬರು ತಿಳುಕೊಳ್ಳುವದು=ಅರಿವಾಟ.

ಕಂದ.

1322. ಬಾಯುಳಿದ ಬೆಂಕಿಯಿಂದಂ
ನೀ ಯಾಕಿರುವಿ ? ಯೆಂದಡವನಿಂತೆಂದನುಪಾ
ಧ್ಯೇಯರ ಬರವುಂ ಸಮೀಪ
ವಾಯಿತುಮೇನೇವೆನೆಂದಡವಳಿಂತೆಂದಳ್.

1323. ಇಂದಿನಿರುಳೆರಡು ಪೆಣಸಂ
ತಂದೀವುದುಮವಗಳ ನಿನಗುಪಾಧ್ಯೇಯರ್ಪೊರ್

ಪಂದು ನಿಯಮಿಸಿದ ಠಾವಿನೊ
ಳೊಂದೊಂದಂಮಿರಶಿ ಬಳಿಕ ಸುಡುವುದು ಮನೆಯಂ !

ಕಳಾಭಾಷಣಿ ವೃತ್ತ.

1324. ಅಂತು ಗೈದು ಧನವೆಲ್ಲಮು ಕೊಂಡುರೆ ತೀವ್ರನಿ
ಶ್ಚಿಂತೆಯಿಂದೆ ಪರದೇಶಕೆ ಬೇಗಪೋಳೀರ್ವರುಂ
ನಿಂತ ಠಾವಿನೊಳು ನಿಲ್ಲದೆ, ಪ್ರೋಗಿ ವಿಲಾಸದಿಂ
ಕಂತು ಕೇಳಿಸುಖದಿಂದಿರುತಿರ್ಪರವಂದಿರುಂ.

ವಚನ.

1325. ಅಂತು ಪ್ರೋಗೆ, ಪಿಂದೆ ವಿಪ್ರಂ ಬಂದು ಚಿಂದಿರ್ದ ಮನೆಯಂ ಕಂ
ಡು ಚಿಂತಾಕ್ರಾಂತನಾಗಿ ವಳಗಂ ಪ್ರೋಗಿ ನೋಡಿ, ಯಗ್ನಿಯಂ
ಪ್ರೊರಮಡಸ ಬಾರದೆಂದು ನಿಯಮಿಸಿದೆ; ಪ್ರೊರಮಡದೆ ಇಲ್ಲಿಯೆ
ಸತ್ತರ್, ಎಂದು ದುಃಖಿತನಾಗಿ ಕಿರಿದಾನುಂ ಬೇಗಂ ಅಳುತ್ ಇರ್ದು
ತಂನೊಳು ತಾನೆ ಸಂತೈಸಿಕೊಂಡು ತನ್ನ ಮನದೊಳ್ ಇಂತ್ ಎಂದ.

ಶ್ಲೋಕ.

1326. ಯಾವದಸ್ಥಿಮನುಷ್ಯಾಣಾಂ
ಗಂಗಾತೋಯೆಷುತಿಷ್ಠತಿ
ತಾವದ್ವರ್ಷಸಹಸ್ರಾಣಿ
ಪಿತಾಸ್ವರ್ಗೇಮಹೀಯತೆ

ಟೀಕು: ಮನುಷ್ಯರ ಎಲವು ಗಂಗೋದಕದಲ್ಲಿ ಯೆಷ್ಟು ಸಾವಿರ ವರುಷ ಇರುತ್ತದೋ, ಅಷ್ಟು ಸಾವಿರ ವರುಷ ಪರಿಯಂತರ ತಂದೆಯು ಸ್ವರ್ಗದಲ್ಲಿ ಪೂಜಿಸಲ್ಪಡುತ್ತಾನೆ.

ವಚನ.

1327. ಎಂಬ ನೀತಿಯಂ ನೆನದು ಇವರ್ ಎಂನ್ ಆಜ್ಞೆಯ ಮೀರದೆ ಸತ್ತರು. ಇವರ್ ಅಸ್ಥಿಯಂ ಗಂಗಾನದಿಯೊಳ್ ಇಟ್ಟೆ ಅವರ್ಗ್ಗಳಿಗೆ ಪುಣ್ಯಮಂ ಮಾಡಿ ಕೊಡುವೆನೆಂದು ಪಿರಿದು ಭರಂಗೈದು

ಚಂಪಕಮಾಲಾ ವೃತ್ತ.

1328. ಎರಡೆಡೆ ಯಸ್ಥಿಯಂ ದ್ವಿತಯ ಕುಂಭದೊಳಿಕ್ಕಿ ಕರದ್ವಯಂಗಳಿಂ
ಧರಿಯಿಸಿ ಪೋಗುತಿರ್ಪೆಡೆಯೊಳುಂ ಬರೆ ಬಟ್ಟೆಯೊಳಗ್ನಿಯುಗ್ನಿಯಿ
ಬ್ಬರು ಭರದಿಂದ ಕಂಡರಿವನೆಂದು ಪದಾನತರಾಗಿ ಭೀತಿಯಿಂ
ಚರಕಮಳಂಗಳಂ ಮುಗಿದಿರಲ್ಬಿಡದೀಕ್ಷಿಸಿ ನೀವು ದಾರೆನಲ್,

ವಚನ.

1329. ಅಂತೆ ಎನೆ, ಕೇಳ್ದು ತಾವ್ ಆಗ ಧೂರ್ತತೆಯನ್ ಎರೆಯನ್ ಅರಿವ್ ಏನೆಂಬಪನೊ! ಯಂಬ್ ಅಂಜಿ, ಯಾಂ ನಿಂಮ ಧಾತ್ರಿಯಗ್ನಿಂ ಈಕೆ ನಿಂನ ವಲ್ಲಭೆ, ಯೆಂದು ಪೇಳೆ, ಕೇಳ್ದು ವಿಪ್ರನ್ ಇಂತೆಂದ.

ಕಂದ.

1330. ನಾನವರಸ್ಥಿಯನುಂ ಗಂ
ಗಾನದಿಯೊಳಗಿಡುವ ಭರದಿ ಪೋಗುತ್ತಿರೆ, ಕಂ
ಡೇನೆಂದು ಧೂರ್ತನಾಡುವೆ ?
ನೀನೆಂನೊಡನೆಂದವ ಕೋಪಿಸುತಂ ಪೋದಂ.

ವಚನ.

1331. ಅಂತು ಪ್ರತ್ಯಕ್ಷವಾಗಿ ಕಂಡು, ತನ್ನ ಕಿವಿಯಾರೆ ಕೇಳ್ದು, ನಂಬದ ಮೂಢನಂತವರು ನಿಂಮ ಸಭೆಯಲ್ಲಿ ಇರ್ದ್ದರೆ, ಪೇಳಲಂಮೆನ್

ಎನೆ, ಇಂತಪ್ಪ ಮೂರ್ಖರ್ ಎಂದು ನಂಮ ಸಭೆಯೊಳ್ ಇಲ್; ಅಂಜ
ದೆ ಪೇಳಿಂ ! ಎನೆ, ಮನೋವೇಗಂ ಪೇಳಲ್ ನೆಗಳ್ದ :

ಸ್ವಾಗತ ವೃತ್ತ.

1332. ನೀತಿಶಾಸ್ತ್ರವಖಿಳಾಗಮತತ್ತ್ವ
(d. the story of Mándavya, the saint.) ವ್ರಾತದೊಳ್ಪರಕಳಾವಿದರಪ್ಪ
ಭೂತಿ ಕಪ್ರತತಿಗೋರ್ವಗೃಹಸ್ಥ
ಖ್ಯಾ[1]ತಿಗಾತಣಿಸೆ, ಬಂದರದೆಲ್ಲಂ.

1. ಖ್ಯಾತಿ ಬರುವಂತೆ.

ಕಂದ.

1333. ಅಲ್ಲಿಗೆ ಮಾಂಡವ್ಯಂ ಬರ
ಲೆಲ್ಲಾ ಕೋಪಿಸುತೆ ಪೋಗಲಾಯುಜಮಾನಂ
ತಲ್ಲಣಿಸಿ ಪೋಗಿ ನೀವ್ಯಾ
ರೆಲ್ಲಿಂ ಪೋಪಪ್ಪಿರೆಂದಡವರಿಂತೆಂದರ್.

ಶ್ಲೋಕ.

1334. ಅಪುತ್ರಸ್ಯ ಗತಿರ್ನಾಸ್ತಿ
ಸ್ವರ್ಗೋ ನೈವಚ ನೈವಚ
ತಸ್ಮಾತ್ಪುತ್ರಮುಖಂ ದೃಷ್ಟ್ವಾ
ಪಶ್ಚಾದ್ಭವತಿ ಭಿಕ್ಷುಕ :

ಟೀಕು : ಮಕ್ಕಳಿಲ್ಲದವನಿಗೆ ಗತಿ ಇಲ್ಲ, ಸ್ವರ್ಗ ಇಲ್ಲವೇ ಇಲ್ಲ—ಆದ್ದರಿಂದ ಪುತ್ರ ಮುಖ
ವನ್ನು ನೋಡಿ (ಮಗನನ್ನು ಕಂಡು) ಭಿಕ್ಷುಕನು ಆಗುತ್ತಾನೆ.

ವಚನ.

1335. ಎಂದ್ ಈ ಶಾಸ್ತ್ರಾರ್ಥಂ ಉಂಟ್ ಅಪ್ಪುದರಿಂ, ನಿನಗೆ ಮಕ್ಕಳಿಲ್ಲ;
(He is advised to marry.) ನೀನ್ ಎಂಮ ಪಂಥಿಗೆ ಸಲ್ಲೆ ಯೆಂದು ನುಡಿಯೆ, ಮಾಂಡವ್ಯನ್ ಎ

ನಗ್ ವಿನುಕೃತ್ಯವು? ಎನೆ, ನೀನ್ ಬಂದು ಮದುವೆಯಾಗಿ ಮಕ್ಕ
ಳಂ ಪಡೆವುದ್! ಎನೆ ಮೂಂಡವ್ಯನ್ ಇಂತ್ ಎಂದಂ:

ಚಂಪಕಮಾಲಾ ವೃತ್ತ.

1336. ನೆರೆನೆಲೆ, ಜೋಲ್ದ ಪುರ್ಬುಗ, ಕುಳಿವಕ್ಷಿಯುಗಂ, ತುಟಿಯಾರ್ದ್ರ್ಗ,
[ಬೋಡುಬಾ
ಯ್ದಿರೆಮಸಗಿರ್ಪ ಮೊಲೆ, ಯುಡಗಿರ್ದರಪಕ್ಕುಗಳಿರ್ಪ ಪೊಟ್ಟೆ,
[ಮೋ
ಲ್ಕಿರ ಮುಸಗಿರ್ಪ ಕಾಲುರಿವ ಬೆಂನುರೆ ಕಂಪಿಪ ಹಸ್ತಮಸ್ತಕಂ
ಪರಿರೆಸೆ, ತಾಪಸಂಗೆ ನೆರೆ ಪೇಸದೆ ಕನ್ಯೆಯನೀಯ ಬಲ್ಲರೇ?

ಕಂದ.

1337. ಎಂದಡೆ, ಸಮಸ್ತಭೂಭುಜ
ರುಂ ಧರ್ಮಂ ಪೇಳ್ದ ವೇದವಾಕ್ಯಕ್ರಮದಿಂ
ದಂ ಘಟಿಪ ಮದುವೆ! ನೀನಿ
ಲ್ಲೆಂದನಲಾವೇದವಾಕ್ಯ ಯೆಂತೆನೆ, ಪೇಳ್ದರ್.

ವೇದ ವಾಕ್ಯದ ಪ್ರಕಾರ ನಿನಗೆ ಮದುವೆ ಆಗ ಬಹುದು.

ಶ್ಲೋಕ.

1338. ನಷ್ಟೆ ಮೃತೆ ಪ್ರವರ್ಜಂತೆ
ಕ್ಲೀಬೇಚಪತಿತೇಪತೌ
ಪಂಚಸ್ವಾಪತ್ಸುನಾರೀಣಾಂ
ಪತಿರನ್ಯೋವಿಧೀಯತೆ.

1339. ಅಪವೀತಿರ್ವಿಪಕ್ತಸ್ಯ
ಯದಿಪೂರ್ವಂವರೋಮೃತಃ

ಸಾಚೇದಕ್ಷತಯೋನಿಶ್ಚ
ಪುನಃಸಂಸ್ಕಾರಮರ್ಹತಿ.

1340. ಅಷ್ಟವರ್ಷಾಣಿದೀಕ್ಷಾಚ
ಬ್ರಹ್ಮಾಣೀತೋಷಿತಂನರಃ
ಅಪ್ರಸೂತಾಚತತ್ವಾರಿ
ಪರತಸ್ತ್ಯೋನ್ಯಮಾಚರೇತ್.

1341. ಮಾತ್ರಾಪಿತ್ರಾಭಗಿನ್ಯಾಚ
ಪುತ್ರಾರ್ಥಂ ಪ್ರಾರ್ಥ್ಯತೇನರಃ
ಯೋಭ್ಯೋತಾನಭಜೇತ್ವಾಜ್ಯಂ
ಸಂಭವೇದ್ಬ್ರಹ್ಮಹಾನ್ನಸಃ

ಟೀಕು; ಗಂಡನು ಪುತ್ರಹೀನನಾದರೆ ಹಾಗೂ ವ್ಯಂಗನಾದರೆ ಮತ್ತು ನಪುಂಸನಾದರೆ ಹಾಗು ಪತಿತ ನಾದರೆ ಹಾಗು ಪ್ರೋಡಿಹೋಗಿ ಗೊತ್ತಿಲ್ಲದ್ದಾದರೆ ಈ ಐದು ಆಪತ್ತುಗಳು ಪ್ರಾಪ್ತವಾದರೆ ಸ್ತ್ರೀಯರಿಗೆ ಮತ್ತೊಬ್ಬ ಗಂಡನನ್ನು ಮಾಡತಕ್ಕದ್ದು.

ಬಬ್ಬಾಕೆಯ ಗಂಡನು ಕೂಡಮದಕ್ಕಿಂತ ಮುಂದಾಗಿ ಸತ್ತರೆ, ಆಕೆಗೆ ತಿರಿಗಿ ಮದಿವೆ ಮಾಡ ಯೋಗ್ಯವದೆ.

ಹೆಂಣು ಹುಡಗರಿಗೆ ಎಂಟುವರುಷ ಪರಿಯಂತರ ದೀಕ್ಷೆ ಇರುತ್ತದೆ. ಆಮೇಲೆ ಅವರು ಪುರುಷನಿಗೆ ಸಂತೋಷ ಪಡಲಿಕ್ಕೆ ಯೋಗ್ಯವೆ. ಅವರು ನಾಲ್ಕು ವರುಷದಲ್ಲಿ ಪ್ರಸೂತವಾಗದೆ ಹೋದರೆ ಮತ್ತೊಬ್ಬ ಗಂಡನು ಆಗಬೇಕು.

ತಾಯಿಯಿಂದ, ತಂದೆಯಿಂದ, ಸಹೋದರಿಯಿಂದ ಮನುಷ್ಯನು ಪುತ್ರಾರ್ಥವಾಗಿ ಬೇಡಲ್ಪಡುತ್ತಾನೆ. ಮನೋರಥವನ್ನು ತೀರಿಸಲಿಕ್ಕಾಗದೆ ಇದ್ದರೆ, ಅವರಿಗೆ ಬ್ರಹ್ಮಹತ್ಯ ದೋಷ ಹತ್ತುತ್ತದೆ.

ವಚನ.

1342. ಎಂದು ಭೂತಿಕರ್ ಪೇಳೆ, ಕೇಳ್ದು, ತನಗೆ ತಕ್ಕ ವಲ್ಲಭೆಯುಂ ಪಲವು ದೇಶದೊಳ್ ತಿರಿಗಿ ಪಡೆಯದೆ ಚಿಂತಿಸುತಿರ್ದ, ತನ್ನ ತಂಗಿಯಪ್ಪ ಡಿಂಡಿಭಿ ಯೆಂಬ ರಂಡೆಯುಂ ಕಂಡು ಪಲವು ತೆರದಿಂ ಒಡಂಬಡಿ

Mándavya in his old age married to his younger sister. A daughter, Dáye, born to them.

Consultations, as to who shall be the guardian of their girl during their absence.

ಸಿ ಮದುವೆ ಯಾಗ್, ಇಷ್ಟಭೋಗಸುಖಮಂ ಅನುಭವಿಸುತ್ತಂ ಇರೆ, ಕೆಲವು ಕಾಲಕ್ಕೆ ಯಾಡಿಂಡಿಭಿಗೆ ಗರ್ಭಂ ಪುಟ್ಟಿ ನವಮಾಸಂ ತೀವಿ ಬೆಸತಿಯಾಗೆ, ಪೆಣ್ಗೂಸಂ ದಾಯೆ ಯಂಬ ನಾಮಗ್ರಹಣಂ ಗೈಮ ಸಲಹುತ್ತಂ ಇರೆ; ಕೊಡಗೂಸಂ ಪ್ರಾಯಕ್ಕೆ ಬೆಳದು ಬರೆ; ತಾಯಿ ತಂದೆಯುಂ ತೀರ್ಥಸ್ನಾನಾರ್ಥವಾಗಿ ಪೋಗಲ್ ಉದ್ಯುಕ್ತರಾಗಿ ಜನ್ನೆಯಪ್ಪ ಕನ್ಯೆಯಂ ಇನ್ ಆರ ಸಮೀಪದೊಳ್ ಇರಿಸಿ ಪೋಪೆನ್? ಎಂದು ಚಿಂತಾಕ್ರಾಂತರಾಗಿರ್ದು ಮಾಂಡವ್ಯಂಗೆ ಡಿಂಡಿಭಿ ಇಂತ್ ಎಂದಳ್:

ಕಂದ.

1343. ಪರಮೇಶ್ವರನ ಸಮೀಪದೊ
ಳಿರಿಸುಗುಮೀಸುತೆಯನೆನಲು, ಡಿಂಡಿಭಿಗೆಂದಂ:
ಮರುಳತನಂ ಬೇಡಾತನ
ಪರಿಯಂ ಕೇಳೆಂದು ಪೇಳಲುದ್ಯುಕ್ತನಾದಂ.

a. Shiva not to be trusted in this respect.

ಲಲಿತರಗಳೆ.

1344. ಪೂರ್ವದೊಳ್ಕಾಮಿನಿಯ ರೂಪಿಲ್ಲದಿರಲೂ,
ಗೀರ್ವಾಣತತಿ ಕಾಮದಿಂ ಬೇವುತಿರಲೂ,
1345. ಬಂದುದಿನವಜ ದೇವರಬ್ಧ್ಯದೊಳ್ನಲಿದೂ
ಸಂದಾಮೃತದ ರಸಭರಿತಫಲವ ಸವಿದೂ
1346. ಸ್ಮರವಿಕಾರದಿ ಕಳೆ ಸಡಲ್ಬಿತ್ತು; ನದಿಯಾಗೀ
ಪರಿಯಲಪರೊಳಗ್ಪುಟ್ಟಿ ಸತಿಯು ಮೊದಲಾಗೀ
1347. ಮೂವತ್ತು ಮೂರ್ಕೋಟಿ ಕನ್ನಿಕೆಯರಿರಲೂ,
ದೇವತೆಯರಿಗೆ ಸತಿಯುನೀಶಂಗೆ ಕೊಡಲೂ,

1348. ಸರಸಿರುಹಭವ ಮಾಂಸದಾಸಕ್ತನಾಗೀ
ಸುರಮುನೀಶ್ವರರೆಲ್ಲರೇಕಸ್ಥರಾಗೀ

1349. ಮೊಲಲು ಮೂಷಿಕು ಜಗವಜನವೆಂದುಮರಿದೂ
ಸಕೀತ್ವರದಲದ ಪರಿಹರಿಪ ಮನವ ಬಗೆದೂ

1350. ನರಯಾಗಫಣಿಯಾಗಹಯದಗಜಯಾಗಾ
ಖರಯಾಗಗೋಯಾಗಮುಜಮೃಗಗಳ್ಯಾಗಾ

1351. ಆದಿಯಾದಖಿಳಯಾಗಗಳ ಸಾದರದೀ
ಸಾಧನಂ ಜೆರಸಿ ರಾಗದೊಳು ಸತ್ವರದೀ

1352. ಮಾಡಿಪಡಭೀಷ್ಟಾರ್ಥಮಂ ಪಡೆಗುವೆಂದೂ
ರೂಢಿಗೆಪ್ಪತ್ತು ಸೂತ್ರಗಳ ಮಾಡ್ಯಂದೂ

1353. ವಿರಚಿಸಿದನಬ್ಜಜಾತಂ ಛಂದದಿಂದಾ
ಭರದಿಂದಯಾಗ ಮಾಳ್ಪಾನಂದದಿಂದಾ.

ವಚನ.

1354. ಮತ್ತ ಪೇಳ್ದ ಸೂತ್ರಂಗಳ್ಗೆ ವೇದವಾಕ್ಯಮ್ ಎಂದು ಪೆಸರಿಟ್ಟು ಆ ಸಕಲ ಜನಂಗಳ್ಗ್ ಅವಂ ಸ್ವಯಂಭು ಯೆಂದು ಪ್ರಸಿದ್ಧಿಯಂ ಮಾಡಿದನ್; ಅದ್ ಎಂತ್ ಎನೆ :

ಶ್ಲೋಕ.

1355. ಗೋಸಾವಿತ್ರೀಂಪ್ರವಕ್ಷ್ಯಾಮಿ
ಸರ್ವಪಾಪವಿನಾಶನೀಂ ;
ದಂಡಾಗ್ರೇಷುಮರುದ್ದೇವೋ ;
ಜಿಹ್ವಾಗ್ರೇಚಸರಸ್ವತೀ ;

1356. ಕರ್ಣಯೋರಶ್ವಿನೀದೇವೌ ;
ಚಕ್ಷುಷೋಶ್ಶಶಿಭಾಸ್ಕರೌ ;
ಗವಾಂಶೃಂಗಾಗ್ರಭಾಗೇಷು
ಸುರೇಂದ್ರಾವಿಷ್ಟಭೂಸ್ಥಿತಃ ;

1357. ಮುಖೇಬ್ರಹ್ಮೋರಸಿಸ್ಕಂದೋ ;
ಲಲಾಟೇಚಮಹೇಶ್ವರಃ ;
ಕಕುದೇಚಜಗತ್ಸರ್ವಂ
ನಕ್ಷತ್ರಗ್ರಹತಾರಕಾಃ ;

1358. ಋಷಯೋರೋಮಕೂಪೇಷು ;
ಕೂರ್ಮಃ ಪಾದೇಷು ಸರ್ವದಾ ;
ಅಪಾನೇಸರ್ವತೀರ್ಥಾನಿ ;
ಪ್ರಸ್ರವಾಯಾಂಚಜಾಹ್ನವೀ ;

1359. ರೋಮಜೇತುಕ್ರಿಯಾದೇವಿ
ರಾಸ್ರೋಲಾಂಗಲಮಾಶ್ರಿತಾ
ಚತ್ವಾರಃಸಾಗರಾಃಪೂರ್ಣಾಃ ;
ಗವಾಂಗೇಷುಪಯೋಗತಃ

1360. ಖುರೇಷುಜಂಬುಕೋದೇವಃ
ಖುರಾಗ್ರೇಷುಚಪನ್ನಗಾಃ
ಜಠರೇಪೃಥುವೀಸರ್ವಾ
ಸಶೈಲವನಕಾನನಾ

ಟೀಕು: ಎಲ್ಲಾ ಪಾಪಗಳನ್ನು ನಾಶ ಮಾಡುವಂಥಾ ಗೋಸಾವಿತ್ರಿದೇವಿಯ ಲಕ್ಷಣವನ್ನು ಹೇಳುತ್ತೇನೆ: ಆ ದೇವಿಯು ದಂಡಾಗ್ರದಲ್ಲಿ ವಾಯು ದೇವನು ಇರುತ್ತಾನೆ, ನಾಲಿಗೆ ತುದಿಯಲ್ಲಿ ಸರಸ್ವತಿ ದೇವಿ ಯಿರುತ್ತಾಳೆ.

ಕಿವಿಗಳಲ್ಲಿ ಅಶ್ವಿನಿ ದೇವತಿಗಳು ಇರುವರು. ಯೆರಡು ಕಂಣುಗಳಲ್ಲಿ ಸೂರ್ಯ ಚಂದ್ರರು ಯಿರುತ್ತಾರೆ. ಕೋಡುಗಳಲ್ಲಿ ದೇವೇಂದ್ರನು ಇರುತ್ತಾನೆ.

ಮುಖದಲ್ಲಿ ಬ್ರಹ್ಮನು ಯಿರುತ್ತಾನೆ. ಎದೆಯಲ್ಲಿ ಕುಮಾರಸ್ವಾಮಿಯು ಯಿರುತ್ತಾನೆ. ಹಣೆಯಲ್ಲಿ ಈಶ್ವರನು ಇರುತ್ತಾನೆ, ಇಣೆಯಲ್ಲಿ ಎಲ್ಲಾ ಜಗತ್ತು ಹಾಂಗು ನಕ್ಷತ್ರ ಗ್ರಹಗಳು ಇರುತ್ತವೆ.

ಕೂದಲಗಳ ಮೂಲದಲ್ಲಿ ಋಷಿಗಳು ಇರುತ್ತಾರೆ, ಕಾಲುಗಳಲ್ಲಿ ಪಾದಾಭಿಮಾನಿ ದೇವತೆ ಇರುವದು, ಅಪಾನದ್ವಾರದಲ್ಲಿ ಎಲ್ಲಾ ತೀರ್ಥಗಳು ಇರುತ್ತವೆ, ಮೂತ್ರದ್ವಾರದಲ್ಲಿ ಗಂಗಾದೇವತೆ ಇರುವದು.

ಗಂಗದೊಗಲದಲ್ಲಿ ಕ್ರಿಯಾದೇವಿಯು ಇರುತ್ತಾಳೆ, ಬಾಲದಲ್ಲಿ ಜಲದೇವತೆ ಇರುವದು, ಮೊಲೆಗಳಲ್ಲಿ ಸಮುದ್ರದೇವತೆ ಇರುವದು.

ಖುರಗಳಲ್ಲಿ ಜಂಬುಕದೇವನು ಇರುತ್ತಾನೆ, ಖುರಗಳ ತುದಿಯಲ್ಲಿ ಸರ್ಪ ದೇವತೆ ಇರುವದು, ಹೊಟ್ಟೆಯಲ್ಲಿ ಗುಡ್ಡಗಳಿಂದ ಹಾಗುವನಗಳಿಂದ ಯುಕ್ತವಾದ ಪೃಥ್ವಿ ಇರುವದು.

ವಚನ.

1361. ಇಂತು ಗೋಶರೀರದೊಳಗೆ ಇವಗಳ ಸ್ಥಾಪಿಸಿ ಕೊಲ್ಲುವದಕ್ಕೆ ಮಾಡಿದ ಸೂತ್ರವು ಎಂತ್ ಎನೆ.

ಶ್ಲೋಕ.

1362. ಶತ್ರುಯಜ್ಞೆ ಸುರಾಪಾನೆ
ಗೋಸವೆಸವ್ಯಸಂಗಃ
ಗಮಾಂಮುಪೆಪಉಂಪನ್ಯ
ದ್ರಾಜಸೂಯಶ್ಚ ಭೂಭುಜಃ.

1363. ಬ್ರಹ್ಮಾಣಂಜುಹುಯಾದ್ವೈಶ್ಯಂ
ಜಿತವಂಚವಿಜಾಹುಹುಃ

ಶೂದ್ರಾಣಾಂಚಜಪಂಮಂತ್ರಂ
ತತ್ತನ್ಮಂತ್ರಕ್ರಮಂವಿದುಃ.

1364. ಅನ್ಯಣೆಮೃಗಶಾಬೆಚ
ಪ್ರತ್ಯಕ್ಷಮೃತವರ್ಶನಂ
ತತ್ಕ್ಷಣಂಖಾತ್ತುಪುಣ್ಯಂಚ
ತತ್ತ್ಯಾಜ್ಯಂನರಕಂವ್ರಜೇತ್.

ಅರ್ಥ 1. ರಾಜರಾದವರು: ಶತ್ರುಯಜ್ಞದಲ್ಲಿ ಸುರಾಪಾನಯಜ್ಞದಲ್ಲಿ ಗೋಮೇಧರಾಜಸೂಯದಲ್ಲಿ ಪಶುಗಳನ್ನು ಹೊಡೆಯುತಕ್ಕದ್ದು. 2. ವೈಶ್ಯಜಾತಿಯುವರು ಶತ್ರುಗಳನ್ನು ಜೈಸುವದಕ್ಕೆ ಉದ್ಯುಕ್ತರಾದರೆ ಬ್ರಾಹ್ಮಣರಿಗೆ ಆಹುತಿ ಕೊಟ್ಟು ಅಂದರೆ ಅವರ ಪರಿಮುಖದಿಂದ ಯಜ್ಞಗಳ ಮಾಡಿದರೆ, ಸಫಲವಾಗುತ್ತದೆ. ಮತ್ತು ಶೂದ್ರರಿಗೆ ಜಪಮಂತ್ರಗಳೆ ಯಜ್ಞ. 3. ಹುಣ್ಣಾಗದೆ ಇದ್ದ ಅವಯವಗಳುಳ್ಳ ಮೃಗವು ಪ್ರತ್ಯಕ್ಷ ಮರಣವನ್ನು ಹೊಂದುತ್ತಿರಲಾಗಿ, ಅದನ್ನು ಅದೇಕ್ಷಣಕ್ಕೆ ತಿನ್ನುವದೆ ಪುಣ್ಯ, ಬಿಡುವದೆ ನರಕ.

ವಚನ.

1365. ಎಂದ್ ಇಂತ್ ಅನೇಕ ತೆರದ ಸೂತ್ರಂಗಳಂ ಮಾಡಿ ಯಾಗೋದ್ಯೋಗಮಂ ಪ್ರಕಟಿಸಿ ಸಕಲಸುರಸಮುದಯಮಂ ಕರೆಯಲ್ ಅಟ್ಟಿದರ್; ಎಲ್ಲರುಂ ತಂಮ ತಂಮ ಕಾಂತೆಯರು ಬೆರಸ್ ಎಲ್ಲರುಂ ಅನೇಕವಿಭವಂಗಳಿಂ ಬಂದು ಸರೋಜಸಂಭವನಂ ಕಂಡು ಯಾಗಮಂಟಪದೊಳಗಂ ಬೆರಸು ವಡ್ಡೋಲಗಂ ಗೊಟ್ಟು ಕುಳ್ಳಿರಲ್, ಅಲ್ಲಿಗೆ ಸತಿ ಸಮೇತಂ ಈಶ್ವರಂ ಸಕಲ ಶೃಂಗಾರಸುನೃತ್ಯಮಂ ಆಡುತ್ತುತ್ಸಹದಿಂ ಗಗನಮಾರ್ಗದಿಂ ಬರುತಿರ್ದಾಗಳ್;

ಚಂಪಕಮಾಲಾ ವೃತ್ತ.

1366. ಸತಿಯ ಲಲಾಟದೊಳ್ಕದಪಿನೊಳ್ಕೊರಳೊಳ್ಭುಜಯುಗ್ಮದೊಳ್ನ
[ಖ

ಕ್ಷತಮಿರೆ, ದೇವಕೋಟಿಗಳ್ಪೇಕ್ಷಿಸಿ ನಕ್ಕತಿ, ಧಾತೃ ಕಂಡು ಲ

ಜ್ಜಿತಮನನಾಗಿ ಅಂತವರನೀರ್ವರಮಂತೆಗುಳ್ಳೊಂದುಪಾಯಮಂ,
ಶತದಳಸಂಭವಂ ನೆನೆದು ಮಾಡಿದನಲ್ಲಿಗೆ ತಕ್ಕ ಸೂತ್ರಮಂ.

ಶ್ಲೋಕ.

1367. ವಿದ್ಯಾವಿತ್ತವಿಹೀನಾಢ್ಯಾ
ಕ್ಷುದ್ರಕರ್ಮೋಪಜೀವಿನಃ
ತೇಸಂತಿದೂಷಕಾಶ್ರದ್ಧಾ
ಸಂಗಹೀನಗುಣಾನ್ವಿತಾಃ

ಅರ್ಥ: ವಿದ್ಯದ್ರವ್ಯವಿಲದವರು, ಕ್ಷುದ್ರಕರ್ಮದಿಂದ ಉಪಜೀವನ ಮಾಡುವವರು ಇವರು ಗುಣವಂತರಾದರೂ ದೂಷಕರು ಅಶ್ರದ್ಧರು.

ವಚನ.

1368. ಪೋದ್ ಅಳಿಯನ ಮಗಳನಮ್ ಅವಗ್ನೆ ಗೈದು ಪೋಗಲ್ವೀಳೆ, ಕೇಳ್ದು, ರೋಷಮಂತಾಳ್ದು ಸಭೆಯಂ ಪೊಕ್ಕು ತನ್ನ ತಂದೆಯುಪ್ಪ ಅರವಿಂದಸಂಭವನ ಮೇಲೆ ನಾಲಿಗೆಯಂ ಕೀಳ್ತಿಕ್ಕಿ ಹೋಮಕುಂಡದೊಳ್ ಬಿಷ್ದ ಉರಿದು ಭಸ್ಮವಾಗೆ, ಪ್ರಾಣವಲ್ಲಭೆಯ ಸಾವಂ ಶೂಲಿ ಕಂಡೂ.

ಉತ್ಪಲಮಾಲಿಕಾ ವೃತ್ತ.

1369. ಕೋಪಿಸಿ ಹೋಮಕುಂಡಶಿಖಿಯಂ ನೆರೆ ನಂದಿಸಿ ತನ್ನ ದೇಹದೊಳ್
ಲೇಪಿಸಿಕೊಂಡು ತದ್ಭಸಿತಮೆಲ್ಲಮನಾಗಳೆ ಯಲ್ಲಮೆಲ್ಲವಂ
ಗೋಪತಿವಾಹನಂ[1] ಶಿರಕರಾಂಘ್ರಿಸುಕಂಠದೊಳಾಂತು ಕೊಂಡು ವೈ
ರೂಪನುಮಾಗಿ ಹಾಸತಿ ! ಮಹಾಸತಿ ! ಯೆಂದೆನುತಂ ವಿಯೋಗ

[ದಿಂ

1. ಎತ್ತು ಎಂಬ ವಾಹನ ಇದ್ದವನು=ಶಿವ.

ಕಂದ.

1370. ಅಳಲುತ್ತುಂ ಬಳಲುತ್ತುಂ
ಕಳವಳಿಸುತ್ತುಳುತಾಯಾಸದೊಳುರೆ ವಿರಹಾ
ನಳದಿಂ ಬೇವುತ್ತಲ್ಲಿಂ
ತಳರ್ದನತನು[1]ಪ್ರತಾಪವೋಂ ಕೇವಳವೋ !

Shiva, after losing his wife, behaves shamefully.

1. ಶರೀರವಿಲ್ಲದವನು=ಮನ್ಮಥ.

ವಚನ.

1371. ಅಂತು ತಳರ್ದು ತನುವಂ ತಾ ಮರೆದು ಸರ್ವಸುಖಮುಂ ತೊರೆದು ಪೆರರಂ ನೋಡದೆ ದೆಸೆಯುಂ ಕಾಣದೆ ಕಂಗೆಟ್ಟು ಬಾಯುಂ ಬಿಟ್ಟು ವಿಕಳನಾಗಿ ದೇವಾರಣ್ಯಮುಂ ಪೊಕ್ಕು ಮುಂತೆ ಪೋಗೆ, ಕೆಲಂಬರ್ ತಾಪಸರ್ ಕಂಡ್ ಈತಂ ದಾರ್? ಎನೆ, ಕೆಲಂಬರ್ ಈತನ್ ಅಪೂರ್ವದರ್ಶಿನಿ, ಎನೆ, ಕೆಲಂಬರ್ ಈತ ಪಿಶಾಚನ್, ಎನೆ, ಕೆಲಂಬರ್ ಈತಂ ಮುಕ್ತಿಯ ಪಡೆಯಲ್ ಎಂದ್ ಉಗ್ರೋಗ್ರತಪಮುಂ ತಾಳಿರ್ದನ್, ಎನೆ, ಮತ್ತೆ ಕೆಲಂಬರ್ ಎಂತ್ ಎಂದರ್.

ಕಂದ.

1372. ಈಯಾಕಾರವಿಕಾರದೆ
ಸಾಯೋಜ್ಯಮನೈದಲಾರ್ಪಡೆ, ನ್ಯಾಯಮೋ ? ತಾ
ನ್ಯಾಯಮದಪ್ಪಡೆ, ಸುತಪ
ನ್ಯಾಯಮದಿಂ ನಡೆವುದೆಂದು ಕೆಲಬರ್ನುಡಿದರ್.

ವಚನ.

1373. ಮತ್ತಂ ಇಂತ್ ಅಪ್ಪ ದುರಾಚಾರರುಂ ದುಶ್ಚರಿತರುಂ ಪಿಶಾಚರುಂ ಕೋಪಿಗಳುಂ ಕಾಮಿಗಳುಂ ಕಳವಳಿಗರುಂ ಕಷ್ಟರುಂ ಸರ್ಗಾಪವರ್ಗಮುಂ ಪಡೆವಡೆ, ಪೂರ್ವೋಕ್ತಂ ಇಂತ್ ಎಂದುವತ್ತಿ ?

ಸ್ರಗ್ಧರ ವೃತ್ತ.

1374. ರಜ್ಜ್ವಾಬಧ್ನಾತಿವಾಯುಂಮೃಗಯತಿಸಜಳೆಮತ್ಸ್ಯಕಾನಾಂವಿಮಾ
[ರ್ಗಂ,
ವಂಧ್ಯಾಸ್ತ್ರೀಷಂಡಕಾನಾಮಭಿಲಷಿತಸುತಂವಾಳುಕಾಭ್ಯಶ್ಚತೈಲಂ
ದೋರ್ಭ್ಯಾಂಗಂತುಂಪಯೋಧಿಂಝುಷಕುಲಕಲಿತಂಗೋವಿಷಾಣೇನ
[ದುಗ್ಧಂ
ಸರ್ವಾರಂಭೆಪ್ರಮತ್ತೋನರಪಶುರಿಹಯೊಮೋಕ್ಷಮಿಚ್ಛೆತ್ಸುಖಾನೀ

ಅರ್ಥ : ಇಹದಲ್ಲಿ ಮೋಕ್ಷವನ್ನು ಸುಖವನ್ನು ಹುಡುಕುವವನು ಹಗ್ಗದಿಂದ ಘಾಳಿಯನ್ನು ಕಟ್ಟುತ್ತಾನೆ, ನೀರಲ್ಲಿ ಮೀನುಗಳ ಮಾರ್ಗವನ್ನು ಹುಡುಕುತ್ತಾನೆ, ಬಂಜೆ ನಪುಂಸಕನು ಇವರ ಶೋಕವುಳ್ಳ ಮಗನು ; ಉಸುಗಿನಿಂದ ಎಣ್ಣೆ, ತೋಳುಗಳಿಂದ ಮೀನ ಬಪ್ಪವ ಸಮುದ್ರವನ್ನು ದಾಟುವದು; ಆಕಳ ಕೋಡಿನಿಂದ ಹಾಲು ಇವನ್ನು ಹುಡಿಕಿದ ಹಾಗಾಯಿತು.

ವಚನ.

1375. ಇಂತ್ ಅಪ್ಪವರ್ಗೆ ಸರ್ಗಾಪವರ್ಗಂ ಅಪ್ಪಡೆ, ನರಪಶುಗಳೆಲ್ಲ ಸರಿಯೆನೆ, ಮತ್ತೆ ಕೆಲಂಬರ್ ಈತಂ ಕೃತಾರ್ಥಶಿವನ್, ಎನೆ ಕೆಲಂಬರ್ ಈತ ಶಿವನ್ ಆವಡೆ, ಶೈವಸಿದ್ಧಾಂತಕ್ಕೆ ವಿರೋಧಿ ಯಪ್ಪುದ್, ಎನೆ ಯಾಸಿದ್ಧಾಂತಂ ಎಂತ್ ಎನೆ :

ಸ್ರಗ್ಧರ ವೃತ್ತಂ.

1376. ಪಾತಾಳೇಚಾಂತರಿಕ್ಷೆ, ದಶದಿಶಭುವನೆ, ಸರ್ವಶೈಲೆ, ಸಮುದ್ರೇ,
ಕಾಷ್ಟೇ, ಲೋಷ್ಟೇಷ್ಟಕಾಭಸ್ಮಸುಜಲಪವನೇ, ಸ್ಥಾವರೇ, ಜಂ
[ಗಮೇವಾ,
ಬೀಜಂ ಸರ್ವೌಷಧೀನಾಮಸುರಸುರನರೇ, ಪತ್ರಪುಷ್ಪೆ, ತೃಣಾ
[ಗ್ರೇ,
ಸರ್ವ ವ್ಯಾಪಿಶಿವೋಯಂ ತ್ರಿಭುವನಭವನೇ, ನಾಸ್ತಿತೋಯನ್ಯ
[ದೇವಃ.

ಅರ್ಥ : ಪಾತಾಳದಲ್ಲಿ, ಅಂತರಿಕ್ಷದಲ್ಲಿ, ದಶದಿಕ್ಕಿನ ಲೋಕದಲ್ಲಿ, ಸರ್ವಗುಡ್ಡಗಳಲ್ಲಿ, ಸಮುದ್ರದಲ್ಲಿ, ಕಟ್ಟಿಗೆಯಲ್ಲಿ, ಮಣ್ಣಿನಲ್ಲಿ, ಹೆಂಟೆಯಲ್ಲಿ, ಭಸ್ಮದಲ್ಲಿ, ಜಲದಲ್ಲಿ, ಧೂಳಿಯಲ್ಲಿ, ಸ್ಥಾವರಜಂಗಮಗಳಲ್ಲಿ, ದೇವದೈತ್ಯನರರಲ್ಲಿ, ಪತ್ರಪುಷ್ಪದಲ್ಲಿ, ತೃಣಾಗ್ರದಲ್ಲಿ, ಸರ್ವಗಿಡಗಳ ಬೀಜವು, ಶಿವನು ಸರ್ವವ್ಯಾಪಿಯಾಗಿದ್ದಾನೆ—ಮೂರುಲೋಕದಲ್ಲಿ ಅನ್ಯದೇವರು ಇಲ್ಲ.

ವಚನ.

1377. ಇಂತು ಸರ್ವಂ ವ್ಯಾಪಿಯಪ್ಪ ಶಿವಂಗೆ ಗಮನಾಗಮನಂ ಅಸಂಭಾವ್ಯಂ, ಎಂದ್ ಅನೇಕವಿಕಲ್ಪಮಂ ನುಡಿವುತ್ತಮಿರೆ, ಯಲ್ಲಿಂ ತಳರ್ದು ಹಿಮವದ್ಗಿರಿಯ ಸಮೀಪಕ್ಕೆ ಪೋಗೆ; ಪಿಂತೆ ಸರ್ವಪರ್ವತಂಗಳ್ಗೆ ರೆಕ್ಕೆಯುಳ್ಳದರಿಂದ್, ಅಖಿಳಧಾತ್ರಿಯುಂ ತೊಳಲ್ದು ಲೇಸಂ ಪಡಿಯದೆ ಖೇಚರತ್ವದಿಂ ತ್ರಿದಶಲೋಕಕ್ಕೆ ಪೋಗಿ.

ಕಂದ.

1378. ಅನಿತುಂ ಗಿರಿಗಳುಖಾಂಡವ
ವನಮಂ ಮೇಯುತ್ತಿರಲ್ಕೆ ಪವಿಯಿಂ ಸುರನಾ
ಥನುರೆಂಕೆಯ ಪೊಯ್ಯೆ, ಬಿದ್ದು
ದನುಪಮಮೈನಾಕಮೆಂಬಪರ್ವತಮಾಗಳ್

1379. ಪುರುಷಮಹೀಧರಂ ಕೆಡಿಯೆ,
ಗಿರಿಯುಗ್ಮದ ಸಂಗದಿಂದಲ್ಲಿಯೆ ಶಂಕರನ
ವರವಧೂಟಿ ಸತ್ತವಳುಂ
ಮಿರದದ್ರಿತನೂಭವೆಯಾಗಿ ತಾ ಪುಟ್ಟಿದಳ್.

ವಚನ.

1380. ಅಂತು ಪರ್ವತದ್ ಎರಡರ ಸಂಗದಿಂ ವಿಸ್ಫುಲಿಂಗಂ ಬೆರಸು ಪುಟ್ಟಿದುದರಿಂ, ಕಾಮಾಗ್ನಿಪ್ರಬಲೆ[1]ಯುಂ ಮಹೀಂದ್ರರೂಪಿಯುಂ ಅಗಿ ತ

1. ಪ್ರಬಲಪುಳ್ಳಾಕೆ.

ಕ್ಷಣದೊಳ್ ನವಯುವ್ವನಪ್ರಾಪ್ತಿಯಾಗಿ ತದ್ಗಿರಿನಿಕಟದೊಳು ವರ್ತಿ
ಸುತ್ತಿರೆ, ಯಲ್ಲಿಗೆ ಪರಮೇಶ್ವರಂ ಬಂದ್ ಆಕೆಯಂ ಕಂಡು ಕರಂ
ಸೋಲ್ತು ಸಮೀಪಕ್ಕೆ ಸಾರ್ತಂದ್ ಇಂತ್ ಎಂದಂ:

ಕಂದ.

1381. ನೀನಾರ ತನೂಭವೆಯುಂ ?
ಯೇನಿಲ್ಲಿರವೆಂದು ಬೆಸಗೊಳಲ್ಕಿಂತೆಂದ
ಳ್ನಾಸುಮೆ, ಯದ್ರಿತನೂಭವೆ,
ಭೂಸುತ ಮಪ್ಪೀರ್ವಪತಿಯ ದೀಕ್ಷೆ[1]ಯೊಳಿರ್ದೆಂ.

1. ಒಬ್ಬ ಒಳ್ಳೆ ಗಂಡನು ದೊರೆಯಬೇಕೆಂದು ದೀಕ್ಷೆಯೊಳಗೆ ಇರುತ್ತೇನೆ.

ವಚನ.

1382. ಎನೆ, ನಾನ್ ಈಶ್ವರ, ನೀನ್ ಎನಗೆ ವಲ್ಲಭೆ ಯಾದಡೆ, ಜಗದ್ ವಂದ್ಯೆ[1]
ಯಪ್ಪೆ, ಯೆಂದು ಪಲವು ತೆರದ ವಚನರಚನೆಯಂ ನುಡಿದಡ್, ಆಕ
ನ್ಯೆ ನಾ ಒಪ್ಪೆ ಪಿತನ್ ಉಳ್ಳ ಶಿಶುವ್ ಅಪ್ಪುದರಿಂ, ನೀನ್ ಎಮ್ಮ ತಂದೆ
ಯಂ ಬೇಡ್ ! ಆತಂ ಕೊಟ್ಟಡೆ, ನಿನ್ನ ವಲ್ಲಭೆ ಯಪ್ಪೆನ್, ಎಂದು
ನುಡಿಯೆ, ಯಂತೇ ಗೈವೆನ್ ಎಂದು ಈಶ ಗಿರೀಶನಲ್ಲಿಗೆ ಬಂದೂ.

1. ಲೋಕದಿಂದ ಸ್ತೋತ್ರ ಮಾಡಿಸಿಕೊಳ್ಳುವಾಕೆ.

ಕಂದ.

1383. ಎಂನ ಸತಿ ಯಾಗ ತಕ್ಕಳು
Shiva married to Párvati.
ನಿಂನ ಸುತೆ, ಯೆಂದು ಪಿರಿದು ವಚನೋಕ್ತಿಗಳಿಂ
ಪಂನಗಭೂಷಣ[1] ಬೇಡಲು,
ಕಂನೆಯನೊಲಿದಿತ್ತನಾತಗಾಗಿರಿರಾಜಂ.

1. ಸರ್ಪಗಳನ್ನು ಆಭರಣ ಮಾಡಿಕೊಂಡವನು=ಶಿವ

ವಚನ.

1384. ಅಂತು ಶುಭದಿನಮೂಹೂರ್ತದೊಳ್ ಮದುವೆಯಾಗಿ ಗಿರಿರಾಜನಿಂ ಕಳುಹಿಸಿಕೊಂಡು ಗಿರಿಜೆ ಸಮೇತ ಪೋಗಿ ಕೈಲಾಸಗಿರಿಯೊಳ್ ಇಷ್ಟಭೋಗ ಸುಖಮಂ ಅನುಭವಿಸುತ್ತ ಸಾನಂದದಿಂ ಪಿರಿದಿರುತ್ತಿರೆ ಪಲವು ದಿವಸಂ ಪೋದ ಬಳಿಕ, ಮತ್ತೊಂದು ದಿನಂ ಸ್ನಾನಾರ್ಥಂಗಂಗೆಗೆ ಗಿರಿಜಾನಾಥಂ ಪೋಗುತ್ತಿರ್ದಂ ; ಕಟ್ಟೆದಿರೊಳು ಗಂಗಾನದಿ ಕನ್ಯರೂಪಿನಿಂ ನಾನಾಲಂಕೃತಸಮೇತನಾಗಿರೆ, ಕಂಡು ನೀನ್ ಆರ್ ಎಂದು ಬೆಸಗೊಳೆ, ನಾ ಗಂಗೆ ಯೆನೆ, ನಿನಗೆ ವಲ್ಲಭರ್ ಆರ್? ಎನೆ, ನನಗೆ ತಕ್ಕ ವಲ್ಲಭರ್ ಇಲ್ಲದೆ, ನಾ ನೋಡುತ್ತ ಬರುತ್ತಿರ್ದೆನ್ ಎನೆ, ಯಾವದ್ ಅನ್ ಈಶ್ವರಂ, ತ್ರಿಜಗದ್ವಂದ್ಯನು, ಎನಗೆ ನೀನು ವಲ್ಲಭೆಯಾಗ್, ಎಂದು ಪಲವು ತೆರದ ವಚನರಚನೆಗಳಿಂ ವಡಂಬಡಿಸಿ ಮದುವೆಯಾಗಿ ಮತ್ತಂ ಊರ್ವರು ಕ್ರೀಡಾವಿನೋದದಿಂದ್ ಇರ್ದು ಕೈಲಾಸಗಿರಿಯನ್ ಐದೆ ಗೌರಿಗಂಗೆಯ ಸಂಭೋಗದಿಂದ್ ಇರ್ದ್ದ ಇಂತು ಆರು ಕೊಡಕೊಳದ ಗಂಗೆಯುಂ ಸ್ವೀಕೃತಂ ಮಾಡಿ ಜಡೆಯು ನಡುವೆ ಮುಡುಗಿಶ್ ಇರಿಸ್ ಇಟ್ಟಂ ; ವೈದ್ ಇಟ್ಟಡೆ, ನಂಮ ಕನ್ಯಯುಂ ಬಿಡುವನಲ್ಲ್, ಎನೆ, ಕೇಳ್ದು ಡಿಂಡಿಭಿ ಮಾಂಡವ್ಯಗ್ ಇಂತ ಎಂದಳ್.

Shiva married to Gange.

ಕಂದ.

1385 ವನಜಜನ ಹೊರೆಯೊಳ್ ನಂ
ದನೆಯುಂ ಬೈಕಿರಸುಗು ತಕ್ಕುದೆನೆ, ಸತಿಗೆಂದಂ
ಮುನಿಮಾಂಡವ್ಯಂ : ಪುಷ್ಕರ
ವನಜಭವಾಂಡ[1]ಪುರಾಣಮ ನೀ ಕೇಳ್ದರಿಯಾ ?

b. Brahma not fit, to be the guardian of our girl.

1. ಪದ್ಮ ಮತ್ತು ಬ್ರಹ್ಮಾಂಡ ಪುರಾಣಗಳು.

ವಚನ.

1386. ಎನಲ್, ಆಪುರಾಣಮಂ ಕೇಳ್ದರಿಯೆ, ಅದರ ವೃತ್ತಾಂತಮಂ ತಿಳಿದು ಪೇಳ್? ಎಂದು ಡಿಂಡಿಭಿ ಬೆಸಗೊಳೆ, ಮಾಂಡವ್ಯ ಪೇಳಲ್ ನೆಗಳ್ದಂ

ಕಂದ.

1387. ಭವನ ಗಿರಿರಾಜಪುತ್ರಿಯ
ವಿವಾಹದೊಳುಂ ಬ್ರಹ್ಮನೆ ಪುರೋಹಿತನಾಗಿ
ರ್ದವರಮರಿ ಹೋಮಕುಂಡವ
ನವಯವದಿಂದ ವರಪ್ರದಕ್ಷಣ ಬರಿಸುತ್ತಂ,

ವಚನ.

1388. ಅಂತು ಪ್ರದಕ್ಷಣಂ ಬರಸುತ್ತಂ, ಪಾರ್ವತಿಯ ನೂತನವಾಗಿರ್ದ ನವರತ್ನಖಚಿತದಿವ್ಯಾಭರಣಂ ಮೆರೆಯೇ,

ಕಂದ.

1389. ಗಿರಿಜೆಯವಳ ದೊಡೆಚಲ್ವಂ
Mean origin of Agastza-muni from Brahma, ಪರಿಕಿಸಿ ಸರಸಿರುಹಸಂಭವಂ ಸೋಲ್ತು, ಕರಂ
ಪರವಶನಾಗಲ್ಕಳೆ ಸೋ
ರ್ದಿರೆ, ಕಳಸದೊಳಗಲ್ಲಿ ಕಲಶಜ ತಾನೊಗೆದಂ.

1. ಅಗಸ್ತ್ಯಮುನಿ.

1390. ಇಳೆ ಕಿರಿದಿಂದ್ರಿಯವದು ತಾ
and of many saints, ಕೆಳಗುಗೆ ವೃಷಭನೆ ಪೆಜ್ಜೆ ಯೊಂದರೊಳೆ, ಮತ್ತದ

ರೊಳು ವಾಲಿಖಿಲ್ಯಾದಿಮುನಿ
ಗಳ ಕೋಟಿಪ್ರಸಿದ್ಧರುವಯಿಸಿವರ್ಬಳಕಂ.

1. ರಾಕ್ಷಸರು ಬಂದು ಸೂರ್ಯನನ್ನು ಹಿಡಿಯುವ ಹಾಗೆ ಇವರು ಕತ್ತಿಹಿಡಕೊಂಡು ಕಾಯುತ್ತಾರೆ.

1391. ಪಿರಿದುಂ ಲಜ್ಜಿಸಿ ಯಲ್ಲಿಂ
and of Válmíkí, ತೆರಳ್ದು ಪೋಪಲ್ಲಿ, ವಂದು ವಾಲ್ಮೀಕದ ಮೇ
ಲಿರದಿಂದ್ರಿಯವುಗೆ, ಯದರೋ
ಳ್ನಿರುತಂ ವಾಲ್ಮೀಕಿ ಯೆಂಬ ಮುನಿ ವುದಯಿಸಿದಂ.

1392. ತಡಿಯುದಲ್ಲಿಂ ಮುಂದಕ್ಕೆ
and of the king Burishravana, ನಡಿಯುತ್ತಿರೆ; ಭಸ್ಮದೊಳೊಗೆ ಕಿರಿದಿಂದ್ರಿಯು ವ
ಕ್ಕಡೆ, ಯವರೊಳುದಯಿಸಿವ, ನೋ
ಳ್ಪಡೆ, ಭೂರಿಶ್ರವನೆನಿಪ್ಪನೋರ್ವಸಮರ್ಥಂ.[1]

1. ಒಬ್ಬ ಅರಸನು.

1393. ಮತ್ತಲ್ಲಿಂ ಮುಂದಕ್ಕೆ ನಡೆ
and of king Thálza, ಯುತ್ತಿರ್ಪೆಡೆಯಲ್ಲಿ, ನೆಲದೊಳ್ಕಳೆ ಸೋರಲು,
ಬಿತ್ತರದಿಂದದರೊಳು ಭೂ
ಪೋತ್ತಮನೊಗೆದ, ಪ್ರತಾಪಿಶಾಲ್ಯನೆನಿಪ್ಪಂ.

1394. ಮುಂದಕೆ ನಡಿಯುತ್ತಿರಲ
and of Urvasi, ಲ್ಲೊಂದೆಡೆಯೊಳು ಕಿರಿದಂಶ ವ್ರೊಗೆ, ಯೂರ್ವಶಿ ಯಾ
ನಂದದಿ ಯೊಗೆದಳ್ಮತ್ತಂ
ಲ್ಲಿಂದ ಮುಂದಕ್ಕೆ ಬೇಗದಿಂ ನಡೆಯುತ್ತಿರಲುಂ,

1395. ನಿಡುಲಿಂಗಮನೆಡಗೈಯಿಂ

and of the Rishi Shakuni, ಪಿಡಿದುರೆ ನಡೆವಾಗಲಿಂದ್ರಿಯ ಮೋಗಣ್ಗಂ

ಖಿಡಿಯೆ, ಖಗ ವಂದು ನುಂಗಲು,

ಪೊಡವಿಯೊಳು ಶಕುನಿ[1] ಯೆಂಬವನುದಯಂ ಗೈದಂ.

1. ಬಬ್ಬು ರಿಷಿ.

ವಚನ.

1396. ಅಂತು ನಡೆಯುತ್ತಂ ಇರಲ್, ಅಂದ್ ಉದಯಿಸಿದರ್, ಪಲವು ಮು
and of a daughter Padmi. ನೀಂದ್ರರ್ ; ಅಲ್ಲಿಂ ಮುಂದ್ ಬಂದು ಸರಸಿ ಯೆಡೆಯೊಳು ಲಿಂಗಮ
ಪಿಡಿದು ಪಶಿಯಿಸಿ ಜಡಿಯಲು, ಮತ್ತ ಇಂದ್ರಿಯ ಪದ್ಮದೊಳ್ ಬ
ಕ್ಕಡೆ, ಸಲೆ ಪದ್ಮಿ ಯೆಂಬ್ ಆಸುತೆ ಉದಯಿಸಿದಳ್; ತಕ್ಕಳ್ ಇ
ವಳ್ ಎನ್ನ ಸುರತ ಸುಖಕೆ, ಎನುತ್ ಅವಳ ಕೈಯ ಪಿಡಿಯಲ್, ಆ
ಕ್ಷಣದೊಳೆ ನವಯವ್ವನ ಪ್ರಾಪ್ತಿಯಾಗೆ, ಎಲೆ ಮಗಳೆ! ಎಂನ್ ಬ
ಲವಿಂ ಕೂಡ್! ಎನೆ, ನೀಪಿತಂ, ನೀನ್ ಎಂನೊಳ್ ಎಂತು ಕೂಡಲ
ಕ್ಕುಮೆ? ಎನೆ ಪುತ್ರಾರ್ಥದಿಂ ತಾಯ ತಂಗಿ ಶೊಶಿ ಯಾವಳನ ಅವ
ಡಂ, ಕೂಡಿದಪ್, ಏಂ ದೋಷಮಿಲ್ಲ ; ಎಂದು ಪೇಳ್ವ ವೇದವಾಕ್ಯ
Brahma commits incest. ಕ್ರಮದಿಂ ಕೇಳ್ದ್ ಅರಿವುದಿಲ್ಲ, ಅಕ್ಕಂ ಎನೆ, ನಾಂ ಕೇಳ್ವ
ರಿಮದಿಲ್ಲ ; ಆವೇದಕ್ರಮಂ ಎಂತು? ಪೇಳೆ! ಎಂದ್ ಆಕಾಂತೆ ಬೆ
ಸಗೊಳೆ, ಸರೋಜಸಂಭವ ವೇದಮಂತ್ರವಂ ಉಚ್ಚರಿಸಿ ಯಾಚಂ
ನೆಯುಂ ವಶೀಕರಣಮುಂ ಮಾಡಿಕೊಂಡು ದಿವ್ಯಷಣ್ಮಾಸಂ ಸುರತ
ಸುಖಾರ್ಣವದೊಳ್ ಓಲ್ಯಾಡುತ್ತಂ, ತನ್ನ ತಾನ್ ಅರಿಯದೆ, ಆಸ
ಕ್ತಚಿತ್ತನಾಗಿ ಕೂಡಿರ್ದನ್; ಆಗ ಸರ್ವಗೀರ್ವಾಣರ್ ಅರಿದ್, ಎಲ್ಲ
ರುಂ ನೆರದ್ ಅಂಭೋಜಗರ್ಭ ನಿಕೃಷ್ಟಪ್ರೊಲ್ಲಮೆಯುಂ ಮಾಡಿದಂ,
ಎಂದು ಪಿರಿದುಂ ದೂಷಿಸಿ ಗಂಧರ್ವರಂ ಕರದು ನೀವ್ ಅಜನ ಸಂ
ಭೋಗಮ ಕೆಡಿಸಿ! ಎನೆ, ಯಾಗಲಿ ಯೆಂದು ಕೈಕೊಂಡು ಸುರತ

ಗೃಹಸಮೀಪಕ್ಕೆ ಬಂದು ಅಬ್ಬರಿಸಿ ಬೊಬ್ಬೆಯಂ ಕೊಟ್ಟೆ ಎಬ್ಬಿಸಿ ದಡೆ ಶಾಪಂ ಈಗುಂ ಎಂತ್ ಎನುತ್ತಂ, ಬೊಬ್ಬುಳಿ ಗೊಳುತಂ, ಬ್ರಹ್ಮನಂ ಎಬ್ಬಿಸುವ್ ಅನುಮಾನಮಂ ಮನಸಿನಿಂ ನೆನದು, ಹಾಡಿದಡೆ, ಸುರತಸುಖಮು ನಾದಿ ಕರಂ ಮಾಣಿಸುಗುಂ ಎಂದು ಗೀತಮಂ ಬಂದಂ ಮಾಡಿ ಮನೋಮುದದಿಂದ ಪಾಡಿದರ್; ಆಗೀತಕ್ಕೆ ಗಾಯತ್ರಿ ಎಂಬ ಪೆಸರಂ ಇಟ್ಟು ಪಾಡೆ, ಕೇಳ್ದು, ಕರಂ ಲಜ್ಜಿಸಿ, ಸುರತಂ ಮಾಣ್ದು, ವನಿತೆಗೆ ಗರ್ಭವಾದುದ್ ಅರಿದು, ತನ್ನ ಮನದೊಳೆ ಪೂರ್ವೋಕ್ತಮಂ ನೆನದು, ಲೋಕಾಪವಾದಂ ಅಕ್ಕುಂ ಎಂದ್ ಅಂಜಿ ತನ್ನ ಲಿಂಗದಿಂ ಆಕೆಯುದರದ ಗರ್ಭಮಂ ಆಕರಿಸಿ ತನ್ನ ಅಂಡದೊಳ್ ತಳೆದು, ಅಂದಿಂದ್ ಅಂಡವಾತನಾಗಲ್, ಅಂದ್ ಆಸುರತಗೃಹಮಂ ಪೊರಮಟ್ಟು, ಸ್ಮರವಿಕಾರಂ ಲೋಕಭ್ರಮಣೆಯಿಂ ಬರುತ್ತಿರೆ;

ಚಂಪಕಮಾಲಾ ವೃತ್ತ.

1397. ಸುರಪುರಕ್ಕೈದೆ, ರಂಭೆ ಮೊದಲಾದ ಸುರಾಂಗನೆಯರ್ಕಳಂ ನಿರಂ
ತರಮೊಳೆ ನೋಡಿ ಸೋಲ್ತು ನೆರೆಯಲ್ಕನುವಿಲ್ಲದೆ ಚಿಂತಿಸುತ್ತೆ, ತಾ
ನೆರೆದು, ಕಳತ್ರದಾನಮುಮನೀವಡಿದಕ್ಕನುವೇನೆನುತ್ತೆ, ತಾಂ
ಪಿರಿಕಿಸಿ, ಪದ್ಮಸೂನು ನೆನದಂ ತಪದಿಂದಮೆ ಸಾಧ್ಯಮೆಂಬುದಂ.

Brahma captivated and overcome by Tilottame.

1. ಅನ್ವಯ: ಎಂಬುದಂ ಪದ್ಮಸೂನು ನೆನದಂ.

ಶ್ಲೋಕ.

1398. ಯದ್ದೂರಂ, ಯದ್ದುರಾರಾಧ್ಯಂ,
ಯಚ್ಚ ದೂರಂ, ವ್ಯವಸ್ಥಿತಂ,
ತತ್ಸರ್ವಂ ತಪಸಾಸಾಧ್ಯಂ
ತಪ್ರೋಹಿದುರಿತಕ್ಲವಂ.

ಅರ್ಥ: ಯಾವದು ದೂರವೋ, ಯಾವದು ದುರಾರಾಧ್ಯವೋ, ಯಾವದು ದೂರದಲ್ಲಿ ಇರುತ್ತದೋ ಅದು ತಪಸಿಗೆ ಸಾಧ್ಯ, ತಪಸು ಪಾಪವನ್ನು ಅಂಜಿಸುವಂಥಾದ್ದು

ವಚನ

1399. ಎಂದ್ ಅವ್ರುದ್ ಅನೊಂದು ಕಾರ್ಯಂ ಸಾಧ್ಯವಾಗದಡೆ, ತಪಸಿಂ ಸಾಧ್ಯ ಮಾಡಿಕೊಳ್ವುದು ; ತಪಸಿಂ ಸಾಧ್ಯಂ ಅಗದ ಕಾರ್ಯಂ ಇಲ್ಲೆಂದು ತನ್ನ ಮನದೊಳ್ ನಿಶ್ಚೈಸಿ.

ಕಂದ.

1400. ತಪದುನ್ನತಿಯಿಂ ಸುರರಾ
ಜಪದವಿಯ ಪಡವು ದೇವಕಾಂತೆಯರೊಳ್ಭೋ
ಗಿಪೆನೆಂದು ಬ್ರಹ್ಮನಾಂತಂ
ತಪಮಂ ಮೂರುವರೆ ದಿವ್ಯಸಾಸಿರಯುಗಮಂ.

ವಚನ.

1401. ಅಂತು ತಪಂ ಬಡುತ್ತಿರೆ, ಇಂದ್ರಂ ಅರಿದು ಚಿಂತಾಕ್ರಾಂತನಾಗಿರೆ, ಬೃಹಸ್ಪತಿ ಕಂಡು, ನೀವ್ ಅವ್ ಯಾತಕೆ ಚಿಂತಿಸುತ್ತಿರ್ಪರ್? ಎನೆ, ಬ್ರಂಹ್ಮಂ ಎಂಸು ಈ ಪದವಿಯ ಪಡೆಯಲೆಂದು ತಪಂ ಬಡುತಿರ್ಪಂ ಎಂಬುವಕ್ಕೆ ಚಿಂತಿಸುತ್ತಿರ್ದಪ್ಪೆನ್, ಎನೆ, ಸುರಾಚಾರ್ಯಂ ಇಂತ್ ಎಂದಂ:

ಕಂದ.

1402. ತರುಣಿಯರೆ ತಪೋಗ್ರತೆಯುಂ
ಪರಿಹರಿಸುವವಕ್ಕೆ ಕಾರಣಂ ಕೇಳೆಂದಾ
ಸುರಮಂತ್ರಿ ಪೇಳೆ, ಕೇಳ್ದಾ
ಸುರಪಂ ತತ್ಕ್ರಮದಿ ಕೆಡಿಸುವನುನಂ ಬಗೆದಂ.

ಚಂಪಕಮಾಲಾ ವೃತ್ತ.

1403. ಸತಿಯರೊಳೆಲ್ಲನಿಂತುಟುರೆ ಚೆಲ್ವಮನುಳ್ಳಡೆಮಲ್ಲಂ ಕೊಂಡುಮೊಂ
ದತಿಶಯಮಪ್ಪನಿಂ ಪಡೆದು ಮಾಡಿ ತಿಲೋತ್ತಮೆ ಯೆಂಬ ನಾಮವ
ನ್ವಿತಮೆನಲಿಟ್ಟು ದುರ್ಧನತಪಂ ಕೆಡುವಂತಿರೆ, ಮಾಳ್ಪದೆಂದು
[ತಾಂ
ಶತಮುಖನೆಂದಪಾಕೆ ಪರಿದೈದಿವಳಬ್ಜಜನಿರ್ವ ತಾಣಮಂ.

1. ಅಪ್ಪವ ಹಾಗೆ=ಆಗುವ ಹಾಗೆ.

ಕಂದ.

1404. ಅಂತೈಯ್ದಿ ಯಬ್ಜಗರ್ಭನ
ಮುಂತಿದಿರೊಳ್ನಿಂದು ನೋಡಿ ಕಣ್ದೆರಿಸುವೆನಾ
ನೆಂತೆಂದು ತನ್ನ ಮನದೊ
ಳ್ಚಿಂತಿಸುತಿದೊಂದುಪಾಯಮಂ ನೆರೆ ಬಗೆವಳ್.

ಉತ್ಪಲಮಾಲಿಕಾ ವೃತ್ತ.

1405. ಆವಧು ರಾಯಬಾಗುಮ[1]ಹಚಾಳಿಯುಮಂ ನೆರೆ ಮಾಡಿ ಕೊಂಡು ವೇ
ಳಾವಳದೇಶಿಗುರ್ಜರಿ[2]ವರಾಳಿಗಳಿಂಪಮ ಯಾಡಿ ಪಾಡುತಂ
ಭಾವಮನೂನರೇಚಗತಿ[3]ತೀರ್ಪರಿಯಂತಿರಿಪ್ರೋಜೆ ಜಾತಿನಾ
ನಾವಿಧಚಾಳಿಯುಂ ಮೆರೆಯೆ, ನರ್ತಿಸೆ, ನೋಡಿದನಬ್ಜಸಂಭವಂ.

1. ಇವು ನರ್ತನ ಭೇದಗಳು. 2. ಇವು ರಾಗ ಭೇದಗಳು. (32. ರಾಗಗಳಲ್ಲಿ.) 3. ಇವು ಅಭಿನಯ ಭೇದಗಳು.

ಕಂದ.

1406. ಅಂತೆವೆ ಯಿಕ್ಕದೆ ನೋಡ
ಲ್ಕಾಂತೆ ಇವಂ ಸೋಲ್ತನೆಂದು ಪರಿಕಿಸಲಲ್ಲಂ
ದಂ ತಿರುಗಿ ಬಲದ ದೆಶೆಗಿರ
ದಂತುಂ ಭರದಿಂದಲಂದು ನರ್ತಿಸುತಿರೆಯುಂ,

1407. ಈಕೆಯುನೆ ತಿರಿಗಿ ನೋಡಲಿ
ರೀಕೆೞಗಣ ಯತಿಗಳ್ನಗುಗುಂ ; ಪಿರಿದುಮಿಹತ್ರ
ಲೋಕಾಪವಾದವೆಂದರಿ
ದಾಕೆಮುಳಿದನೆಂದುಮಾಯುಮಂ ಚಿಂತಿಸಿದಂ.

1. ಮತ್ರ್ಯಲೋಕದವರು.

1408. ಚಳಿಸದಲೆ ಮುನ್ನ ತಪಮಂ
ತಳೆದಾಮೂರುವರೆಸಾಸಿರಬ್ದಮಂತಾ
ಫಲದೊಳ್ಸಾಸಿರವರುಷದ
ಫಲಕ್ಕೆ ಮುಖ ಮಂದು ಬಳಿದೋಱುವಯಿಸಲೆಂದಂ.

1409. ಎನೆ, ಬಲದೋಳ್ಜನಯಿಸಿ
ದಾನನದಿಂ ನೋಡುತ್ತಿರಲ್ಕೆ ಪಿಂತಣ ದೆಸೆಗಾ
ವನಿತೆ ಬರೆ, ಮುನ್ನಂದದೊಳೆ
ವನಜಜನಾದೆಶೆಯೊಳೊಂದು ಮುಖಮಂ ಪಡೆದಂ.

1410. ಆವದನದೊಳೀಕ್ಷಿಸುತಿರೆ,
ಯಾವಧುವಲ್ಲಿಂದೆ ತೆರಳ್ದು ವಾಮಕೆ ಬರ
ಲ್ಕಾವನಜಜನೀಕ್ಷಿಸಲೆಂ
ದೋವದೆ ಮುನ್ನಿನ ವೊಲಲ್ಲಿ ಪಡೆದಂ ಮುಖಮಂ.

ವಚನ.

1411. ಅಂತು ಪಡೆದ ಆನನದಿಂ ಈಕ್ಷಿಸುತ್ತಿರೆ, ಯಾಕೆ ಗಗನತಳಕ್ಕೆ ನೆಗದು ಮಸ್ತಕಾಗ್ರದೊಳ್ ನರ್ತಿಸುತ್ತಿರೆ, ನೋಡಲ್, ಆನನಮಂ ಕಾಣದೆ, ಮುಳಿದು ಐನೂರುವರುಷದ ತಪದ ಫಲಕ್ಕೆ ತಕ್ಕ ಮುಖಂ ಶಿರದೊಳ್ ಪುಟ್ಟಲಿ ಯೆಂದು ನೆನೆಯಲ್, ಅಲ್ಲಿ ಯೊಂದು ಗಾರ್ದಭ

ಮುಖಂ ಜನಯಿಸಿ, ಯಾಮುಖದಿಂ ನೋಡುತ್ತಿರೆ, ಯಾನರ್ತಿಸು
ವ ತಿಲೋತ್ತಮೆ ಯಲ್ಲಿಂದ್ ಅದೃಶ್ಯವಾಗಿ ಪೋಗೆ ಸುರಲೋಕ
ಕ್ಕೆ ; ಯಾಕೆಯಂ ಕಾಣದೆ, ಕಳವಳಿಸಿ ವಿಕಳಗೊಂಡು ದೆಶೆದೆಶೆಗೆ
ವಿಸುಟಂ—ಬರಿದು ಸುರವಿದ್ಯಾಧರರೆಲ್ಲರಂ ಗಗನತಳದೊಳ್ ಪರಿದು
ನುಂಗುತ್ತಿರೆ, ಇಂದ್ರಾದಿದೇವರ್ಕಳ್ ಉಪರೋಧಮಂ ಸದಾಶಿವಂ
ಅರಿದು ಬ್ರಹ್ಮನ ಶಿರಮಂ ಚಿವಟ ಕಳೆಯೆ, ಜಿಸನದ್ಎಸಕದಿಂ ಕ
ಣ್ಗಾಣದೆ, ಮೈಯರಿಯದೆ, ಲಜ್ಜೆಯಂ ತೊರದು ಪೊರೆಯೊಳಿರ್ದ
ಪೇರ್ಗರಡಿಯಂ ಕಂಡು ಕಾತುರತನದಿಂ ಪಿಡಿದು ಅವಂ ನೆರೆಯಲ್,
ಅದು ನಖದಿಂ ಶೀಳೆ, ಯದೆ ಕ್ರಮವೆಂದು ನರರ್ ಅಂದಿಂದ್ ಇತ್ತಲ್

Mean origin of Jámbuvanta from Brahma,

ಆಕ್ರಮದಿಂ ಆಚರಿಸುವರ್ ; ಅಭಲ್ಲೂಕೆಗಂ ಬ್ರಹ್ಮಗಂ ಜಾಂಬು
ವಂತನ್ ಅಂತ್ ಎಂಬ ಮಗಂ ಪುಟ್ಟಿದನ್ ; ಅವಂ ತ್ರಿದಶರೆಲ್ಲ ಕಂ

and of the Rishi Vasishta ;

ಡು ಪರಿಹಾಸ ಗೈಯೆ, ಲಜ್ಜಿಸಿ ಯಲ್ಲಿಂ ಪೊರಮಟ್ಟು ಭ್ರಮಣೆಯಿಂ
ಬರುತ್ತ, ಯಮರಾವತಿಯ ಬಹಿರ್ಭಾಗದೊಳ್ ಊರ್ವಶಿ ಎಂಬ
ಪಣ್ಯಾಂಗನೆಯಂ ಕಂಡು ಆಕೆಯ ಸಮೀಪಕ್ಕೆ ಪೋಗಿ ನಾನಾತರ
ದ ವಚನರಚನೆಯಿಂ ಬಡಂಬಡಿಸಿ ಯಾಕೆಯೊಳ್ನೆರದು ಮುಂನ್ದ
ಆಕರ್ಷಣಂ ಗೈದ್ ಅಂಡದೊಳ್ ಇಟ್ಟುಕೊಂಡಿರ್ದ ಗರ್ಭಮಂ ಆ
ಕೆಯ ವುದರದೊಳ್ ಇಕ್ಕಿದಡ್, ಅಲ್ಲಿ ವಶಿಷ್ಠ[1] ಪುಟ್ಟಿದಂ; ಆತಂಗೆ
ಬ್ರಹ್ಮ ತನ್ನ ಪದವಿಯಂ ಕೊಟ್ಟು ತಾಂ ತಪಕ್ಕೆ ಪೋದಂ ; ಇ
ತ್ತ ವಶಿಷ್ಠಂ ಸಕಲಶಾಸ್ತ್ರ ಕುಶಲನಾಗಿ ವಂದು ದಿನಂ ಕೆಲವು

This Rishi is not saluted by the brahmans as the son of a harlot.

ಭೂದೇವರ್ಗೆ ವಂದನೆಯಂ ಮಾಡಲ್, ಅವರು ತನಗೆ ಪ್ರತಿವಂದನೆ
ಯಂ ಮಾಡದಿರೆ, ಯಾಕೆ ನೀವ್ ಎನಗೆ ಪ್ರತಿವಂದನೆಯಂ ಮಾಡರಿ ?
ಎಂದು ಬೆಸಗೊಳೆ, ನೀ ವೇಶ್ಯಾಪುತ್ರನ್ಅಪ್ಪುದರಿಂ, ನಿನಗೆ ಪ್ರತಿವಂ

1. ಸಪ್ತ ಋಷಿಗಳಲ್ಲಿ ಒಬ ನು.

ಡನೆಯುಂ ಮಾಡೆವ್ ಎನೆ ಪಿರಿದು ಲಜ್ಜಿತನಾಗಿ ವೇದಪರ್ವತಕ್ಕೆ ಪೋ
ಗಿ ತಪಂ ಗೈವುತ್ತುಂ ಇರ್ದರ್.

ಕಂದ.

1412. ಆಗದು ತಪಕ್ಕೆ ವಿಘ್ನಂ;
ಬಾಗಿದ ಬೆನ್ನುಡಿಗಿದುರವಡಂಗಿದ ಜಘನಂ
ತೂಗುವ ತಲೆ ಕಂಪಿಸುವ ಕೈ,
ಬೀಗಿದ ಶಿರ, ಕವಿದ ಪುರ್ಬು, ನುಗ್ಗಿದ ಪಲ್ಗಳ್,

ಶಾರ್ದೂಲವಿಕ್ರೀಡಿತ ವೃತ್ತ.

1413. ಅಂದಾಭೂಧರದಿಂ ತೆರಳ್ದು ಪಲವುಂ ದೇಶಂಗಳಂ ನೋಡುತಂ
ಬಂದೊಂದೂರೊಳಗಕ್ಷಮಾಳೆಯೆನಿಪಾಚಾಂಡಾಲಿ ದೂರಾಂತರಂ
ಮುಂದೈತಪ್ಪಳ ರೂಪನೀಕ್ಷಿಸಿ ಕರಂ ಸೋಲಾಕೆಯಿರ್ದಲ್ಲಿಗೈ
ತಂದಾಕಾಂತೆಯ ಹಸ್ತಮಂ ಪಿಡಿದನತ್ಯಾಸಕ್ತಿಯಿಂತಾಪಸಂ.

In his old age Vasishta has a son from a low caste woman;

ವಚನ.

1414. ಅಂತು ಕೈಪಿಡಿದು ಪಲವು ತೆರದ ವಚನಾಳಾಪದಿಂದ್ ಆಕೆಯಂ ಬಡಂಬಡಿಸಿ ಕೂಡಲು, ಆಕಿಗೆ ಶಕುನಿ ಯೆಂಬ ಮಗಂ ಪುಟ್ಟಿ ಯಾತಂ ತಂಮ ತಂದೆಯಂತೆ ಪರ್ವತಾಗ್ರದೊಳ್ ಅತ್ಯುಗ್ರತಪಮಂ ಗೈದು ಕರಂ ವೃದ್ಧನಾಗಿ ಬಳಿಕ ದೇಶಭ್ರಮಣೆಯಿಂ ಬರುತ್ತೆ, ಗೌತಮಂ ಎಂಬ ಪುರದೊಳ್ ಓರ್ವ ಪೋಲತಿಯುಂ ಕಂಡು ಆಸಕ್ತಚಿತ್ತನಾಗಿ ನೀನ್ ಎನ್ನೊಳ್ ಬಲಿದು ಕೂಡು! ನಿನಗ್ ಆಸಕ್ತನಾದೆನ್, ಎನಲ್, ಆ ಪೋಲತಿ ನಿಮಗಿ ಇದ್ ಅನುಚಿತಂ; ಎನಲಾತಂ ಪೂರ್ವದೊಳ್ ಪಲವು ಪುರಾಣದೊಳ್ ಸ್ತ್ರೀಯಳಿಗೆ ದುಃಕುಲಂ ಅಶುಚಿತ್ವಂ ಇಲ್ಲ್ ಎಂದು ಪೇಳ್ದುದಂ ಕೇಳ್ದುದಿಲ್ಲ್? ಅಕ್ಕುಂ, ಎನೆ, ಯಾಕೆ ನಾಂ ಕೇಳ್ದುದಿಲ್ಲಾ; ಅದ್ ಎಂತ್? ಎನೆ, ಶಕುನಿ ಇಂತ್ ಎಂದಂ:

This son Shakuni has also a son born to him from a low-caste woman Parásharamuni.

ಶ್ಲೋಕ.

1415. ಅಜಾಶ್ವಮುಖತೋಮೇಧ್ಯಃ,
ಗಾವೋಮೇಧ್ಯಾಸ್ತುಪೃಷ್ಠತಃ,
ಬ್ರಾಹ್ಮಣೋವೇದತೋಮೇಧ್ಯಃ,
ಸ್ತ್ರೀಮೇಧ್ಯಂಚತುಸರ್ವತಃ.

ಅರ್ಥ: ಕುರಿಗಳು ಹಾಗು ಕುದರಿಗಳು ಮುಖದಿಂದಲೆ ಪವಿತ್ರ; ಆಕಳವು ಬೆಂನಕಡೆಯ ಭಾಗದಿಂದಲೆ ಶುದ್ಧ, ಬ್ರಾಹ್ಮರು ವೇದವನ್ನು ಪೋದುವವರಿಂದಲೇ ಶುದ್ಧ; ಸ್ತ್ರೀಯು ವಿಷ್ಟರಿಂದಲೇ ಶುದ್ಧ.

ವಚನ.

Parashara has a son Vyása from a fisher-woman, and Vyása has three sons from his nieces, namely Dhrutarashtra, Pándu, and Vidura.

1416. ಎಂದ್ ಅನೇಕವಚನರಚನೆಯಿಂದ್ ಒಡಂಬಡಿಸಿ ಆಕೆಯೊಳ್ ಸುರತ ಸುಖಮಂ ಅನುಭವಿಸಿ ಆಕೆಗಂ ಪರಾಶರಂ ಪುಟ್ಟಿ ವಿಂಧ್ಯಗಿರಿಯೊಳ್ ತಂದೆಯುಂದೆ ತಪಂ ಗೈವುತ್ತಂ ಇರ್ದು, ವೃದ್ಧನಾಗಿ ಕೆಲವಾನುದಿವಸಕ್ಕೆ ವಿಹರಿಸುತ್ತಂ ಬರುತ್ತೆ, ಗಂಗೆಯುಂ ಪಾಯ್ವಾಗಳ್, ಅಂಬಿಗರ ಮಗಳು ಮತ್ಸ್ಯಗಂಧಿ ಎಂಬ ಕಂನಿಕೆಗಂ, ನಾವಿಗೆ ಹುಟ್ಟಂ ಇಕ್ಕುವಲ್ಲಿ, ನಡುಹೊಳೆಯೊಳು ಆಸಕ್ತಚಿತ್ತನಾಗಿ ಆಕೆಯ ಕೈಯುಂ ಹಿಡಿದು ಕೇಳಲ್ ಆಕೆಯು, ಎಲೆ ದೇವ! ಇಲ್ಲಿ ಜನಸಂಕೀರ್ಣಂ; ನಿನಗ್ ಉಚಿತವೆ? ಯನೆ, ಮುನಿ ವಿಭೂತಿಯಂ ಅಭಿಮಂತ್ರಿಸಿ ತಳಿದು ತೀವಿದು ಮಂಜಂ ಪಡೆದು ಕಡಲ ನಡುವೆ ಮಂಜಿನ ಕತ್ತಲೆಯೊಳ್ ನೆರೆಯಲ್, ಅವರೀರ್ವರ ಸಂಗದಿಂ ವ್ಯಾಸಂಪುಟ್ಟಿದಂ; ಆವ್ಯಾಸಂ ತಂಮ ತಾಯಿ ಯೋಜನಗಂಧಿ ಯೊಡ ಹುಟ್ಟಿದವನ ಮಕ್ಕಳು ಯುಂಬಿ ಯುಂಬಾಲೆ ಯುಂಬಿಕೆ ಎಂಬ ಮೂರು ಕಂನಿಕೆಯರಂ ಮದುವೆಯಾಗಿ ಕೆಲವಾನುದಿವಸಕ್ಕೆ ಯಾಮೂವರು ಕಂನಿಕೆಯರೊಳ್ ಧೃತರಾಷ್ಟ್ರ ಪಾಂಡುರಾಜಂ ವಿದುರಂ ಎಂ

ಬ ಮೂವರು ಮಕ್ಕಳಂ ಪಡೆದನ್ ಎಂದು ಪುಷ್ಕರ ಬ್ರಹ್ಮಾಂಡಪುರಾಣಂಗಳೊಳ್ ಪೇಳ್ವುದು; ಕಾರಣಂ ತಂನ ಮಗಳೊಳ್ ತಾ ನೆರದಂ ಅರವಿಂದ ಸಂಭವಂ; ನಾವ್ ಇಟ್ಟಡೆ, ಈ ಕನ್ಯಯುಂ ಬಿಡುವವನಲ್ಲೆಂದು ಪೇೞ, ಡಿಂಡಿಭೆ ಮತ್ತ್ ಇಂತ್ ಎಂದಳ್.

ಕಂದ.

1417. ಶ್ರೀಪತಿಯು ಪೊರೆಯೊೞರಸುವೆ
c. Vishnu not fit to be the guardian of our girl; ನೀಪುತ್ರಿಯನೆಂದೊಡಾಕಿಗಾವಮಾಂಡವ್ಯಂ
ಕೋಪಿಸಿ ಯಿರಿಸದಿರವನ ಸ
ಮಾಪದೊಳೆನಲ್ಕವಳೀಕೆನಲು, ಕೇಳೆಂದಂ.

1418. ಮೊದಲೊಳು ದ್ವಾರಾವತಿಯೊಳು
ಪದಿನಾರು ಸಾವಿರ ಸಮಸ್ತಗೋಪಿಜನದೋ
ಳ್ಮುದದಿಂ ಕೂಡಿ ವಿಂಧ್ಯಾಟವಿ[1]
ತುದಿಯೊಳ್ಯೆದೆ ಸುತ್ತಿ ಮುತ್ತಿ ಬರುತ್ತಲಲ್ಲಿಂ.

1. ವಿಂಧ್ಯಾಪರ್ವತದ ಅಡವಿ.

ವಚನ.

1419. ಮತ್ತಂ ರಾಜಮತಿ ಚಂದ್ರಮತಿಯರ್ ಎಂಬ ಗೋಪಿಕಾಂತೆಯರಂ ಕಂಡು ಪಲವು ತೆರದ ವಚನರಚನೆಯಿಂ ಒಡಂಬಡಿಸಿ ಸಂಭೋಗಸುಖದಿಂ ಇರುತ್ತಂ, ಇಂತು ಪದಿನಾರುಸಾವಿರ ಕಾಂತೆಯರೊಳ್ ನೆರದು ತಣಿಯದ್ ಅಂನ್ಯಾಂಗನೆಯರೊಳ್ ಸಂತತ ವಿಳಾಸದಿಂ ಕೂಡಿದವಂ ಎಂತು ಈದಾಯಯ ಸ್ವರೂಪೆಯುಂ ಬಿಟ್ಟಪನೆ ?

ಕಂದ.

1420. ಎನೆ, ಡಿಂಡಿಭೆ ಭರದಿಂ ಚಂ
d. nor the Moon ದ್ರನ ಪೊರೆಯಲ್ಲೀಸುತೆಯುಂ ನಾನಿರಿಸುವೆನೆ

ದೆನೆ, ಮಾಂಡವ್ಯನದನುಚಿತ
ವೆನಲೇನೆಂದು ಕೇಳಲ್ಪೇಳಲ್ನೆಗಳ್ದಂ.

1421. ಕಂಡಾವಿಶ್ವಾಮಿತ್ರನ[1]
ಹೆಂಡತಿಗೆ ಸೋಲ್ತುಂ ಸೊಗಯಿಪಾಕೃತಿಯಂ ಕೈ
ಕೊಂಡಾಲಿಸಿ ಕೂಡುವಾಗ,
ಗಂಡಂ ಬರಲರಿದವ ಪಾಣ್ಬೆ ಪಾಣ್ಬಿಗೆಂದಳ್.

1. ಸಪ್ತ ಋಷಿಗಳಲ್ಲಿ ಒಬ್ಬನು.

ಕಳಾಭಾಷಿಣಿ ವೃತ್ತ.

1422. ಬಂದನೆಂನ ಪತಿ, ಮಾಂಜರರೂಪದಿ ಪೋಗು ! ನೀ
ನೆಂದು ಪೇಳೆಮುವನಾಗ ತದಾಕೃತಿ ಗೊಂಡು ಬೇ
ಗಂದು ಪೋಗುತಿರೆ ; ತಾಪಸ ಕೋಪದಿ ಚರ್ಮಗೊಂ
ಡುಂ ಧಿಟಂಮೊಗೆಯೆ, ತಗಲ್ದುದಾತನ ವಕ್ಷಮಂ.

ವಚನ.

1423. ಅಂತು ತಾಗಲ್, ಆಕಲೆಯುಂ ಕಳಂಕಾಂಕಂ[1] ಎಂಬುದ್ ಆತ್ ಆತಂ ; ರೋಹಿಣಿ ಮೊದಲಾದ್ ಅಪ್ಸರಸ್ತ್ರೀಯರ್[2] ಪಲಂಬರ್ ಇರ್ದುಂ ತಾಪಸಪತ್ನಿಗ್ ಅಳುಪಿದಂ ಚಂದ್ರ, ದಾಯುಯಂ ಬಿಡುವವನಲ್ಲೆಂದು ಪೇಳಲು, ಯಾದಡ್ ಈಕನ್ಯೆಯುಂ ಶಕ್ರನ ಸಮೀಪದೊಳ್ ಇರಿಸುವೆಂ! ಎಂದಡೆ, ಮಾಂಡವ್ಯಂ ಅಲ್ಲ ಇರಸಲಾಗದು; ಆತನ ವೃತ್ತಾಂತಮುಂ ಕೇಳೆಂದು ಪೇಳಲ್ ನೆಗಳ್ದಂ; ಅದ್ ಎಂತೆನೆ.

e nor Indra,

1. ಕಳಂಕ ಎಂಬ ಚಿಹ್ನವನ್ನು ಆತನು (ಧರಿಸಿ ಕೊಂಡನು). 2. ಇವರು ಚಂದ್ರನ ಹೆಂಡರು.

ಚಂಪಕಮಾಲಾ ವೃತ್ತ.

1424. ಸುರಪತಿ ಗೌತಮಾಖ್ಯಮುನಿನಾಥನ ಕಾಂತೆ ಯಹಲ್ಯೆಯಂ ವನಾಂ
ತರದೊಳ್ ಕಂಡೊಡಂಬಡಿಸಿ ಕೂಡುತಿರಲ್ಮುನಿ ಕಂಡು ಕೋಪದಿಂ
ದರಿದು ಸಹಸ್ರಯೋನಿ ನಿಜಗಾತ್ರದಿ ಪುಟ್ಟಲಿ! ಯೆಂದು ಶಾ
ಪಮಂ ಭರವಸದಿಂ ಕೊಡಲ್ಕವನ ದೇಹದೊಳಾದವು ಯೋನಿ
ಸಾವಿರಂ.

ವಚನ.

1425. ಅಂತು ಜನಯಿಸಿದ ಯೋನಿಸಾವಿರಮುಂ ಕಂಡು ಲಜ್ಜಿತನಾಗಿ ತಲೆ
ಯಂ ಬಾಗಿ ಮುನಿಪತಿಯ ಚರಣಸರಸಿರುಹದೊಳ್ ಕೆಡದು ಕರು
ಣ ಬಪ್ಪಂತೆ, ನುಡಿದು ಕ್ಷಮಿಸುವದ್ ಎಂದು ಬೇಡಿಕೊಳೆ, ಯಾ
ಯೋನಿಗಳೆಲ್ಲಂ ನೇತ್ರಂಗಳ್ ಅಗಲಿ! ಎಂದು ಮಾಡಿದಂ; ಅಗಲೆ
ಶಕ್ರಂ ಸಹಸ್ರನೇತ್ರಂ ಆದಂ; ಅತಂ ಅನೇಕದೇವಕಾಂತೆಯರ್ ಇ
f. nor the Sun, ದುರ್ ಮುನಿಪತ್ನಿಗ್ ಅಳುಪಿದಂ, ದಾಯಾಕನ್ಯಯಂ ಬಿಡುವನಲ್ಲೆಂದು
ಪೇಳೆ, ಯಾವಡೆ ಸೂರ್ಯನ ಸಮೀಪಮೊಳ್ ಇಡುವೆಂ! ಎನೆ, ಯಾ
ಡಿಂಡಿಭಿಗೆ ಮಾಂಡವ್ಯಂ ಅಪ್ಪಿರಿಸುವಪ್ ಅನುಚಿತಂ, ಎನೆ, ಯಾತ
ಮಾಡಿದ ದೋಷಂ ಏಂ ? ಎಂದು, ಬೆಸಗೊಂಡಡೆ, ಇಂತ್ ಎಂದ.

ಕಂದ.

1426. ಕ್ಷಿತಿಯೊಳ್ಶೌರಿಪ್ರರಕ್ಕಧಿ
ಪತಿ ಯಂಧಕವೃಷ್ಣಿ, ಕುಂತಿ ಯಾತನ ಸುತೆ, ಯಾ
ಸತಿ ಸವಿತೃನೊಳು ಪ್ರೈ ದೊಳವಾ
ಗತಿಶಯರೂಪಿಂದೆ ಬಂದು ನೆರೆದಾಸೂರ್ಯಂ.

1427. ಆರುಂ ಕೂಡದ ಕುಂತ್ರಿಯೊ
ಳೋರಂತಿರೆ, ನೆರದ ತರಣಿಯೊಳು ತರುಣಿಯು ನಾ
ವಾರ್ಕೈದಿಡೆ, ಬಿಡುವವನೇ ?
ವಾರಿಜಮುಖಿದಾಯಯನವ ? ಕೇಳೆಲೆ ಕಾಂತೇ !

ವಚನ.

1428. ಎನೆ; ಈಕಾಂತೆಯುಂ ಯಮನ ಸಮೀಪದೊಳ್ ಇರಿಸುವೆಂ ! ಆತಂ ಬಾಲಬ್ರಹ್ಮಚಾರಿ, ಸಕಲವಿದೂಷಣವಿದೂರಂ, ಸತ್ಯಂ, ಎಂದು ಡಿಂಡಿಭಿ ಯೆನೆ, ಮಾಂಡವ್ಯಂ ಅವಕ್ ಒಡಂಬಟ್ಟು ಯಮಪ್ರಕಕ್ಕೆ ಪೋಗಿ ಯಾಕನ್ಯೆಯಂ ಕಾಲನ ಸಮೀಪದೊಳ್ ಇರಿಸಿ, ತೀರ್ಥಯಾತ್ರೆಗೆ ಪೋಗಲ್, ಆತಂ ಕನ್ಯೆಯ ರೂಪುಯೌವನವಂ ಕಂಡು ಸೋಲ್ತು ಕನ್ಯೆಯ ಸ್ವೀಕೃತಂ ಮಾಡಿ ತನಗೆ ಬ್ರಹ್ಮಚಾರಿ ಯೆಂಬ ಪ್ರಸಿದ್ಧಿ ಯುಳ್ಳದರಿಂ, ಜನಾಪವಾದಂ ಅಕ್ಕುಂ ಎಂದ್ ಅಂಜಿ ಯಾಕೆಯುಂ ಪಗಲ್ ನುಂಗಿ, ಇರುಳಾಗಲ್, ಉಗುಳಿ, ದಿನಂಪ್ರತಿ ಸಂಭೋಗಸುಖಮಂ ಅನುಭವಿಸುತ್ತಂ ಇರ್ದ್, ಒಂದು ದಿನಂ ಗಂಗಾಸ್ನಾನಕ್ಕೆ ಪೋಗಿ ಯಾಕನ್ಯೆಯ ಪೊಟ್ಟೆಯೊಳ್ ಇರ್ದಳಂ ಪೊರಡಿಸಿ ಲತಾಮಂಟಪದೊಳ್ ಇರಿಸಿ ಜಳಮಂ ಪೊಕ್ಕು ಅಘಮರ್ಷಣಮಂ ಗೈದು, ಅನುಷ್ಠಾನಮಂ ದಿನಂಪ್ರತಿಯಲ್ಲಿ ಮಾಡುತಿರ್ಪಲ್ಲಿ, ವಂದು ದಿನಂ ಅವಳ ವಹ್ನಿ ಕಂಡುಂ ಆಸಕ್ತಚಿತ್ತನಾಗಿ ತನ್ನ ಸಖಂ ಅಪ್ಪ ಅನಿಲನಂ ಕರದು ಎನಗ್ ಈ ಕಾಂತೆಯ ವಶಂ ಮಾಡಿ ಕೊಡುವುದ್ ! ಎನೆ, ಯಾತಂ ಇಂತ್ ಎಂದಂ :

g. Yama, a proper guardian of our girl.

Disgrace of the girl.

ಕಂದ.

1429. ಅಂತೆನಕನತಿಬಲನಾತನ
ಕಾಂತೆಯುಳಂ ತಪ್ಪುದೆನಗೆ ವಶವಲ್ಲಿಂತೀ

1. ಶರುವದು. (ವ್ಯಾ. ಸೂ 95.)

ಭ್ರಾಂತೇಕೆನೆ ಯುವಳೊಲಿದಡೆ,
ಯಂತಕನೇಗ್ಗೈವನವಳನೊಡಬಡಿಸೆಂದಂ.

ವಚನ.

1430. ಎಂದ್ ಎನಲ್ ಆಕೆಯು ಹೊರೆಗ್ ಅಮುಂದಾನಿಲಂ ಐದೆ, ಪಲವು ವ
ಚನೋಕ್ತಿಗಳಿಂದೆ ಇಂದುಮುಖಿಯುಂ ಕಿರಿದ್ ಒಡಂಬಡೆಂದ್ ಒಡೆ
ನುಡಿಸಿ ಕೊಡೆ, ಯಾಕೆಯೊಡನೆ ಕೂಡಿದಂ ಅವನ್ನಿ ; ಕಂಡ್ ಆಸ
ಮಯದೊಳ್ ಆಸತಿ ಜೇಡ ! ಯಮಂ ಬರ್ಪ ಪೊತ್ತಿಲ್ಲ್ ಇರದ್
ಇರ್ಪೆ ! ಯೆಂದ್ ಅಡಿದಪ್, ಅಗ್ನಿ ಯೇನಾದಡುಂ ನಿನಗ್ ಒಲ್ದೆಂ !
ಅಬಲೆ ! ಮಿಡುಕಲಾರೆ ಯೇಂ ?

ಕಳಾಭಾಷಿಣಿ ವೃತ್ತ.

1431. ಎಂದರಾಸುದತಿ ನುಂಗಿದಳಗ್ನಿಯನಂತಕಂ
ಬಂದು ತತ್ಸತಿಯನೊಯ್ಯನೆ ನುಂಗಿ ನಿಜೋತ್ಸುಖಂ
ಪೊಂದಿರಲ್ಕವಳು ಯಗ್ನಿಯನಾಗಳೆ ಸಂಮುದ
ದಿಂದುಗುಳ್ದು ನೆರೆ ಕೂಡಿದಳಾತನ ಪೊಟ್ಟೆಯೊಳ್.

ವಚನ.

1432. ಅಂತ್ ಇರುತ್ತಿರೆ, ಲೋಕದೊಳ್ ಅಗ್ನಿ ಯಭಾವಂ ಆಗಿರೆ, ದ್ವಿ
ಜೋತ್ತಮರ ಹೋಮಾದಿಕರ್ಮಂ ಕೆಡೆ, ತ್ರೈಲೋಕಕ್ ಎಲ್ಲಂ
ಸಂತಾಪಂ ಪುಟ್ಟೆ ಸಕಳದೇವರ್ಕಳೆಲ್ಲ ಜ್ಞಾನದಿಂ ಅರಿದು ಮರುತ
ನಂ ಕರೆದು ಯಗ್ನಿ ಯಲ್ಲಿಗೆ ಪೋದನೆಂದು ಬೆಸಗೊಳೆ, ನಾನ್ ಅರಿ
ದುದಿಲ್ಲ್ ಎನೆ, ಯಾತಂ ಎಲ್ಲ್ ಇರ್ದಡಂ, ನೀನ್ ಅರಸಿ ತರ ಪೇಳು
ದ್ ! ಎನೆ, ಯಾತಂ ಆಗಲಿ ಯಂದ್ ಎಲ್ಲಾ ಸುರರ್ಗೆ ಔತಣಮಂ ಪೇ

ಳ್ದು ತಂನ ಮನೆಗ್ ಅವರೆಲ್ಲರಂ ಕರವು ಕೊಂಡು ಬಂದು ಪಾದಪ್ರ
ಕ್ಷಾಳನಂ ಗೈದು ಅವರೆಲ್ಲರ್ಗ್ಗೆ ಬಂದೊಂದಾಸನವಂ ಇತ್ತು ಯವಂ
ಗೆ ಮೂರಾಸನವಂ ಇಕ್ಕೆ, ಯನಗೆ ಮೂರಾಸನಂ ಯಾಕ ?
ಎನೆ, ವಾಯುಂ ಇಂತ್ ಎಂದಂ:

ಕಂದ.

1433. ನಿನ್ನುದರದೊಳುಂ ಚೈತಾ
ಕನ್ಯಯನುಗುಳೆಂವಡೆ, ಯುಗಳ್ದನಂತಕನೆಲೆ
ಕನ್ಯಯೆ ! ನಿನ್ನುದರದ ಶಿಖಿ
ಯಂ ನೆರೆ ನೀನುಗುಳೆಂದೊಡೆ, ಯುಗಳ್ದಳ್ಗೀಗಂ.

1434. ಅಂತುಗಳಲ್ಕಾಗುರಿದವು
ಕಾಂತೆಯ ರಂಜಿಸುವ ಗಡ್ಡವಿಸೆಗಳಂದಿಂ
ದಂತಡಿಗಿ ಪೋದವೆಲ್ಲಾ
ಕಾಂತಾಳಿಯ ಗಡ್ಡವಿಸೆ, ಇನಿತಿಲ್ಲವ ವೊಲ್.

1. ಪೂರ್ವದಲ್ಲಿ ಸ್ತ್ರೀಯರಿಗೂ ವಿಸೆಗಳು ಇದ್ದವು ಅಂತೆ.

ಉತ್ಪಲಮಾಲಿಕಾ ವೃತ್ತ.

1435. ಅಂತಕನಾಗಳಗ್ನಿಯನಭೀಕ್ಷಿಸಿ ದಂಡಮನೆತ್ತಿ ಕೋಪದಿಂ
ದಂ ಶಿರುಪುತ್ತಲೈಯ್ದಡವ ಸರ್ವರೊಳಂದಿರದೋಡಿ ಪೊಕ್ಕು ನಿ
ಶ್ಚಿಂತವಡಂಗಿ ಸರ್ವಗತನಾದನೆನಿಪ್ಪದು ವೇದಶಾಸ್ತ್ರದೊ
ಳ್ಸಂಕೇತವಮುಂಟೆ ? ಪೇಳ ! ಯೆನೆ, ಯಾದ್ವಿಜರೆಂದರು ಸತ್ಯಮೆಂ

[ಬುದಂ.

ವಚನ.

1436. ಅದಲ್ಲದೆಯು ಸರ್ವಜ್ಞಂ, ಗಡ ! ಕಾಲನುದರದೊಳ್ ತಾನಿರ್ದುದ್ ಅ
ರಿಯಂ ಗಡ ! ತಾಂ ಸರ್ವಜ್ಞತೆ ಘಟಿಸುವದ್ ಅಪೂರ್ವಂ, ಇದಂ ಪೇ
ಳಿಂ! ಎಂದಡ್, ಅವರ್ ಇಂತ್ ಎಂದರ್ ಆತನ ಗುಣಂ ಕೆಡೆ, ದೇವ
ತ್ವಮುಂ ವಂದ್ಯತ್ವಮುಂಕೆಡವುದೆ ? ಪೇಳಿಂ! ಎನೆ, ಅವರ್ ಎಂಮ
ಮಾರ್ಜಾಲಂಗೆ ಕಿಂಚಿದ್ದೂಷಣೆ ಬರೆ, ಯುವರ ಸಾಮರ್ಥ್ಯ ಕೆಡವು
ದೆ ? ಪೇಳಿಂ ! ಎಂದು ವಾದಂ ಗೆಲ್ದು ಬೆಕ್ಕಂ ಮಾರಿ ಯುದ್ಯಾನಕ್ಕೆ
ಬಂದರು.

ON THE DIVINE WEAPONS OF ISHVARA AND THE OTHER GODS.

4. ಈಶ್ವರಾದಿ ಸಕಲ ದೇವಾಸುರಾರ್ಜುನ ಶಸ್ತ್ರಾಸ್ತ್ರ ಸಮರ್ಥ
ಪರಿಕ್ಷಾವರ್ಣನ. (4ನೇ ಆಶ್ವಾಸ.)

ಕಂದ.

1437. ನೆರೆ ಭ್ರಮರ[1]ರತಿಪರಮಸಖ
ವರನುದಯದಿ ಸಂವ[2]ರಥನುವಂ ಗದೆ ಪಿಡಿದಾ
ದರದೊಳ್ ಬೇಡರ ರೂಪವ
ಧರಿಯಿಸಿ ತತ್ಕ್ಷಣದೊಳಗವರೊಲವಿಂ ನಡದರ್.

1. ಕಮಲ. 2. ಸಂ+ವರ=ಬಹಳ ಚಲೋದು.

ಚಂಪಕಮಾಲಾ ವೃತ್ತ.

1438. ನಿರುಪಮಪಾಟಲೀಪುರದ ಪಿತ್ತ ಪದಿಕ್ಕಿನ ಶೋಭೆ ವೆತ್ತ ಗೋ
ಪುರದೊಳುಮೊಯ್ಯೊಯ್ಯ ಕಂಜಭವನಾಲಯಮಂ ನೆರೆ ಪೊಕ್ಕು ಭೇ [ರಿಯಂ

Third meeting of these princes and the brahmans in the temple of Brahma.

ತ್ವರದೊಳ್ ಪೊಯ್ದು ಕುಳ್ತಿರಲು ಯುಂನತಪೀಠದ ಮಧ್ಯದಲ್ಲಿ, ತ
ತ್ಪುರವರವಿಪ್ರರೈದೆ ನಡೆತಂದರನೂನಕಳಾಸುಕೋವಿದರ್.

ವಚನ.

1439. ಅಂತು ಬಂದವರಂ ಕಂಡು, ನೀವ್ ಯಾಕೆ ಭೇರಿಯು ಪ್ರೊಯ್ದಿರಿ ? ಸಿಂಹಾಸನದೊಳ್ ಯೇಕೆ ಕುಳ್ತಿರಿ ? ಎನೆ, ವಿನೋದದಿಂ ಭೇರಿಯಂ ಸ್ರೊಯ್ಟುವತ್ತಿ ! ಕುಳ್ಳಿರ್ಪ ತಾಣಂ ಎಂದು ಕುಳ್ಳಿರ್ದೆವು ; ಇದು ದೋಷವೆ ? ಪೇಳ್ ! ಎನೆ, ಯಾದರೆ ವಿದ್ವಾಂಸರಾದವರು ವಾದ ಮಾಳ್ಪಡೆ, ಭೇರಿಯಂ ಪೊಯ್ದು ವಾದಂ ಗೆಲ್ದಲ್ಲದೆ, ಸಿಂಹಾಸನದೊಳ್ ಕುಳ್ಳಿರ ಬಾರದ್, ಎನೆ, ಆದಡೆ ಮಾಣಲಿ ಎಂದು ಕೆಳಗೆ ಕುಳ್ಳಿರೆ, ಮತ್ತು ವಿಪ್ರರ್ ಇಂತ್ ಎಂದರ್ :

ಕಂದ.

1440. ಇಲ್ಲಿಗೆ ಬಂದೀಕಾರ್ಯಮ
ನೆಲ್ಲಮನೆಮಗರುಪೆಂದಡೆ, ಯವರಿಂತೆಂದರು.
ಬಿಲ್ಲಂ ಗದೆಯಂ ಮಾರುವ
ಡಿಳ್ಳಿಗಂ ಕೊಂಡು ಬಂದೆವು ನಾವಿವನೆಂದರ್.

1441. ಎನೆ ಯಿವಗಳ ಬೆಲೆಯು ಪೇಳಿ
ಮೆನೆ, ಪ್ರತ್ಯೇಕ[1]ದ್ವಾದಶಸಹಸ್ರದ್ರವ್ಯಂ !
ಯನೆಮಿವಗಳ ಸಾಮರ್ಥ್ಯೇ
ನೆನೆ, ಈಬಿಲ್ಲಿಂ ಬಾಣಮ ಪೂಡೆಚ್ಚಡೆಯುಂ,

1. ಬಂದೊಂದಕ್ಕೆ ಹಂನೆರಡು ಸಾವಿರ

ವಚನ.

1442. ಶತಯೋಜನಮಂ ಪೋಗಿ ಶತ್ರುಛೇದನಂ ಮಾಳ್ಪುದ್ ; ಈಗದೆಯಂ ಮಹಾಪರ್ವತದೊಳ್ ಇರಿಸೆ, ಸಂಚೂರ್ಣಮಂ ಮಾಳ್ಪುದ್, ಎನೆ, ಇವಂ ಏತರಿಂ ಮಾಡ್ದಿರ್ ? ಎನೆ, ಕೃತಕಕಿರಾತರ್ ಇಂತ್ ಎಂದರ್

ಚಂಪಕಮಾಲಾ ವೃತ್ತ.

1443. ಅಡವಿಯೊಳಾಂ ತೊಳಲ್ದು ಬರುತೊಂದೆಡೆಯೊಳ್ಕೃತವಾದ ಮೂಷಿ [ಕಂ
ಕೆಡದಿರಲೀಗಡಾಘನುವನಂತವಸ್ಥಯಲಿಂದೆ ಮಾಡಿ ಮೆಂ
ಡೊಡೆ, ಬೆರಗಾಗಿ, ನಿಂಮ ಗುಣನಾಮಮದಾವುದು ? ಪೇೞಮೆಂದು [ಕೇ
ಳ್ದೊಡೆ, ಧರೆಯಲ್ಲಿ ಕೋಟಿಭಟರೆಂಬುದು ನಂಮ ಗುಣಾಭಿಧಾನಕಂ.

ಕಂದ.

1444. ಎನಲೀಯಾಯುಧವೀಪೆಸ
ರಿನಿತನಾಂತು ನಿಮಗಿದ್ಯಾಕೆ ? ಯುಣಾಲುಡಲಿಲ್ಲಂ
ದೆನೆ, ಬರ್ಪ ಬಟ್ಟೆಯೊಳ್ಬೋಂ

1445. ಕನೆ ಕಳಸ್ರಲಕೊಂಡೆರೆನಲು, ಕೇಳ್ದಾಗಳ್
ನಗೆ ಘೋಷ್ಣನೆ ಸಭೆಯೆಲ್ಲಂ ;
ನಗಲೇತಕ್ಕುಳ್ಳದನಿತು,[1] ಪುಶಿ ಯುಂಟೆ ? ಪೇೞೀ !
ಜಗದೊಳಗೆ ನಿಂಮ ಮತದೊಳೆ
ಬಗೆದರಿವುದು ನಿಮ್ಮ ಮತಪುರಾಣಕ್ರಮದೋಳ್ !

1. ಇದ್ದದ್ದು ಅಷ್ಟು=ಸುಳ್ಳಲ್ಲ.

1446. ಎಂದಡೆ, ಸಭೆಯೆಲ್ಲಂ ತಾ
ಮೆಂದರಿಂತೊಂದು ಪುಶಿ ಪೇೞಲಂಮವೆನೆ, ಯುಂ
ತೆಂದೊ[2]ಸುಮತಿಯಮರರ್ಪೇ
ಳೆಂದುಂ ಬೆಸಗೊೞೆ, ಮನೋವೇಗ ಪೇೞ್ದಂ ತಾಂ:

1. ನಮ್ಮ ಮತ ಪುರಾಣಗಳು ಅಂಥಾ ಸುಳ್ಳು ಹೇಳಲಾರವು. 2. ವಸುಮತಿ.

1447. ಅಹಿರದೇಶದೊಳಗೊಪ್ಪುವ

a. the story of the fool. ಮಹೂರಿ ಯೆಂದಿರವುದೊಂದು ಪುರವಾಪುರದೋ

ಳ್ಸಹನಿಲ್ಲದ ಕಡು ಮೂರ್ಖಂ

ಬಹುಬಳ್ಳದೀರ್ಘಕಾಯನೆಂತೆಂಬತುಳ ಭಟಂ

ಚಂಪಕಮಾಲಾ ವೃತ್ತ.

1448. ತವಕದಿ ಜೆಲ್ಲವಂ ಮೆಲುತೆ ನಾಲಿಗೆಯುಂ ಬಿಡದರ್ಘ ಕಚ್ಚಿ ಕೊಂ

ಡವ ಕಡು ನೊಂದು ತಾನುಮವಿವೇಕದೊಳುಂ ಮುರಕೊಂಡ ಪ [ಲ್ಲಗೆ

ಲ್ಲವನವ ಜೆಲ್ಲ ಮೆಬ್ಬತಧಿದೇವಿಯುರಾತೆ! ಯನುತ್ತ ಭಾಷೆಯಿಂ

ದವನಿರದಾತೆ ಕೊಟ್ಟು ತೊರದಂ ಕಡು ಕೋಪದಿ ಮೂರ್ಖನೆಂ [ಬವಂ.

ವಚನ.

1449. ಅಂತು ತನ್ನ ಯೋಗ್ಯತನವುಂ ಅರಿಯದೆ, ಜೆಲ್ಲಮುಂ ತೊರದು ತ

ನ್ನ ಸುಖಕ್ಕೆ ತಾನೆ ಇತರನಾದ ಗುಡಭೀತಿ ಯೆಂಬ ಮೂರ್ಖನಂ

ತಪರು ನಿಮ್ಮ ಸಭೆಯೊಳುಳ್ಳಡೆ, ಪೇಳಲಮ್ಮವೆನೆ, ಇಂತಪ್ಪವರ್

ಎಮ್ಮ ಸಭೆಯೊಳ್ ಇಲ್ಲ ಪೇಳಿಂ ಎನೆ, ಮನೋವೇಗಂ ಇಂತ್

ಎಂದಂ

ಕಂದ.

1450. ಉಂಡುಟ್ಟು ಬಾಳ್ವ ನರರಂ

b. the story of Chandavega. ಕಂಡರೆ, ಸೈರಿಸದ ಚಂಡವೇಗನ ಕಥೆಗೋ

ರಂಡಲೆ[1] ಯೆನಿಪ್ಪತಿ ಭಯಂ

ಗೊಂಡಪ್ಪೆನಂತಪ್ಪರಿಲ್ಲೆನೆ ನಿಜಸಭೆಯೊಳ್?

1. ಆ ಕಥೆಗೆ ಮಿಕ್ಕದ್ದು ಎನಿಸುವ ಭಯ=ಆಚಂಡವೇಗನಿಗಿಂತ ಹೆಚ್ಚು ಸೈರಿಸಲಾರದವರು.

ವಚನ.

1451. ಎನಲ್, ಅಚಂಡವೇಗನ ಕಥೆ ಎಂತ್? ಎಂದು ವಿಪ್ರರ್ ಕೇಳೆ, ಮ
ನೋವೇಗಂ ಪೇಳ್ದಂ:

ಕಂದ.

1452. ಧರೆಗೊಪ್ಪುವ ಪುಜ್ಜನಿಯಾ
ಪುರದೊಳು ವ್ಯವಹಾರಿಚಂಡವೇಗನೆನಿಪ್ಪಂ
ಪರದಾಡಿ ಪಲವು ಸೂಳೊಳು
ಪಿರಿದರ್ಥಂ ನಷ್ಟವಾಗಿ ಬಡತನವಾಗಲ್.

ಉತ್ಪಲಮಾಲಿಕಾ ವೃತ್ತ.

1453. ಅಂತು ದರಿದ್ರನಾಗಿ ಯುಣಲಿಲ್ಲುಡಲಿಲ್ಲೆನಗೆಂದು ದುಃಖದಿಂ
ಚಿಂತಿಸಿ ತಾಳಿದಂ ತಪವನೊಲ್ದು ಬಲಾರಿಯ ಮುಂದೆ; ಯಾಕೆ ಬೇ
ಳ್ಪಂ[1]ತುಟನೀವೆನುಂ! ಪಡೆದು[2] ಬೇಡುವೆನಾಂ; ನೆನೆದತ್ತು ಸಾಧ್ಯವ
ಪ್ಪಂತುಟನೀವುವಂ ದಯೆದಿಮೆಂದರವಂಗೆ ಬಲಾರಿ ಬೇಗದಿಂ

1. ಬೇಡುವಷ್ಟು. 2. ವ್ಯವಹಾರಿಯ ಮಾತು: ನೆನಿಸಿದ್ದು ಸಾಧ್ಯವಾಗುವಷ್ಟನ್ನು ಕೊಡುವದು.

ಕಂದ.

1454. ಮುನ್ನ ನೀ ಕೊಟ್ಟಿರಿಸಿರ್ದ
ಪೊನ್ನಿನ ಫಲವಿಲ್ಲದಾಗಿ ಯದೊಂದುಳಿಯಲುಂ,
ನಿನ್ನಭಿಮತಫಲವೀವೆನ
ದಂ ನೆಟ್ಟನೆ ಬೇಡನಲ್ಕೆ,[1] ಯವನಿಂತೆಂದಂ:

1. ನೀನು ಮುಂಚೆ ಹೊನ್ನು ದೊರೆಯುವಂತೆ ದಾನ ಮಾಡಲಿಲ್ಲ—ಅದನ್ನು ಬಿಟ್ಟು ಬೇಡು.

1455. ಮುಂ ಕೊಟ್ಟಿಟ್ಟದನುಳ್ಳಡೆ,
ನೀಂ ಕೊಡಲ್ಯಾಕೆನೆ ತಾನೆ ಮಾಳ್ಪುದು ಫಲಮುಂ !
ಮುಂ ಕೊಂಡದಿರ್ದವರಿಂ, ಪಲ
ವುಂ ಕಾಲಂ ನಿನ್ನ ಮುಂದೆ ತಪದೊಳ್ಸವ ದೇಂ.

ವಚನ.

1456. ಎನೆ, ಮೆಚ್ಚಿ, ನಿನಗೆ ಭಾಗ್ಯಂ ಇಲ್ಲಪಡಂ, ನಿನ್ನ ನೆರೆಮನೆಯುವರ ಭಾಗ್ಯಮಂ ಪಚ್ಚಿ ಕೊಡುವೆನ್! ಎಂದು ಬಿರಿದ್ ಅಪ್ಪ ಜಾಗಟೆಯಂ ಕೊಟ್ಟು, ಇದಂ ನೀನ್ ಏನಾವಡಂ ನೆನದು ಬಾರಿಸಲಾಕ್ಷಣದೊಳೆ ಬರ್ಕುಂ; ಅವರ ಅರ್ಥಂ ನಿನ್ನ ನೆರೆಮನೆಯುವರ್ಗೆ ಬರ್ಕು; ಪೋಗ್! ಎಂದ್ ಎನಲು, ಯಾಜಾಗಟೆಯುಂ ಕೊಂಡು ಬಂದು ತನ್ನ ಮನೆಯೊಳ್ ಎಲ್ಲಧನಕನಕ ಸಮೃದ್ಧಿ ಯಾಗಲ್ ! ಎಂದು ಬಾರಿಸೆ, ಧನಕನಕ ಸಮೃದ್ಧಿಯಾಯ್ತು; ಅವರರ್ಥಂ ನೆರಮನೆಯುವರ್ಗೆ ಆಯ್ತುಂ; ಅದಂ ಕಂಡು ಸೈರಿಸಲಾರದೆ ಕರಂ ಶಿಡಿಮಿಡಿ ಗೊಂಡು ಮತ್ತೆ ತನ್ನಯ ವಿತ್ತವೆಲ್ಲಂ ಪೋಗಲಿ ! ಎಂದು ಬಾರಿಸೆ, ಯಲ್ಲಂ ಪೋಯ್ತು; ಆ ನೆರಮನೆಯುವರ್ ಅರ್ಥಂ ಅರ್ಥಂ ಪೋಯ್ತು ; ಮತ್ತೆ ನಿತ್ತರಿಸದೆ ಸನ್ನ ವೆರಡು ಕಂಣ್ ಬಡದು ಪೋಗಲಿ! ಎಂದು ಬಾರಿಸೆ, ತನ್ನ ವೆರಡು ನೆರಮನೆಯುವರದ್ ಬಂದು ಕಂಣ್ ಬಡದು ಪೋಯಿತು ; ಮತ್ತೆ ತನ್ನ ವೆರಡು ಕಾಲಂ ಮುರಿದು ಪೋಗಲಿ! ಯುಂದು ಬಾರಿಸೆ, ತನ್ನ ವೆರಡು, ನೆರಮನೆಯುವರದ್ ಬಂದು ಕಾಲಂ ಮುರಿದು ಪೋದುದು ; ಇಂತು ಪೆರರ್ ವುನ್ನತಿಯ ಸೈರಿಸದ್ ಅಸಂಹ್ಯರು ನಿಮ್ಮ ಸಭೆಯೊಳ್ ಉಳ್ಳಡೆ, ಪೇಳೆಲಂಮೆಂ, ಎನೆ, ಇಂತಪ್ಪವರ್ ಎಮ್ಮ ಸಭೆಯೋಳ್ ಇಲ್ಲ; ನೀವ್ ಅಂಜದೆ ಪೇಳಿಂ! ಎನೆ, ಮನೋವೇಗಂ ಪೇಳಲ್ ನೆಗಳ್ದಂ :

ಕಂದ.

1457. ಶತಬಲಿ ಯೆಂಬ ಮಹೀಪತಿ

Different divine weapons made of the bones of king Shatabali.

ಯತಿಶೂರಂ ಮೋಹವಳಿದು ತಂನಯ ಪದಮಂ
ಸುತನೆನಿಪ ಸಹಸ್ರಬಲಿ
ಕ್ಷಿತಿಪತಿಗಿತ್ತೊಂದು ಗಿರಿಯೊಳಿರ್ದಂ ತಪದಿಂ.

ವಚನ.

1458. ಅಂತು ತಪಂ ಬಡುತ್ತಿರೆ, ದೇವರ್ಕಳ್ ಅದಂ ಅರಿದು ಸಹಸ್ರಬಲಿ ಬಲಿಯುದ ಮುನ್ನವೆ, ಕೊಲ್ಲದಿರ್ದಡೆ, ನಂಮ ಜಿಶೆ ಗೆಡಿಸಿ ಕೊಲ್ದಪಂ; ಎಂದು ತಾವೆಲ್ಲರುಂ ನೆರದು ಪಿರಿದಾಲೋಚನೆಗೈವುತ್ತಂ ಇರೆ; ಮುನ್ನಲ್ ಈತನಂ ಕೊಲ್ಲವಡ್, ಆತಂ ಸಾಧ್ಯನಾಗಂ; ಈತಂ ತಾಪಸಂ; ಶಸ್ತ್ರದಿಂ ಕೊಲ್ಲಲು ಪಾಪಂ ಸಮನಿಸುಗುಂ; ಎಂದು ತಾವೆಲ್ಲರುಂ ಕೂಡಿ ವಜ್ರಕಂಟಕಾನ್ವಿತಂ ಅಪ್ಪ ಜಿಂಕೆಯ ಗೋವಂ ಸೃಷ್ಟಿಸಿ ಯಾಗೋವಿಂ ನೆಕ್ಕಿಸಿ ಕೊಲ್ಲಲ್, ಆತನ ಮಸ್ತಕದ ಅಸ್ಥಿಯೊಳ್ ಅರ್ಧಂ ಶಕ್ರಂಗೆ ವಜ್ರಾಯುಧವಾಯ್ತು; ಮತ್ತೆ ಅರ್ಧಂ ಹರಿಗೆ ಚಕ್ರವಾಯ್ತು; ಮತ್ತ ಆತನ ಪೃಷ್ಠದ ಅಸ್ಥಿಯರ್ಧಂ ಹರಂಗೆ ಪಿನಾಕವಾಯ್ತು; ಮತ್ತೆ ಅರ್ಧ ಗಾಂಡೀವ ಎಂಬ ಬಿಲ್ಲಾಯ್ತು; ಮತ್ತೆ ಅದಂ ವರುಣಂಗೆ ಕೊಟ್ಟರ್; ಆತಂ ಅದಂ ಪಾರ್ಥಂಗೆ ಕೊಟ್ಟಂ; ಅಲ್ಲದೆಯುಂ.

ಕಂದ.

1459. ಉದರದೆಲುವುಗಳನಿತು ತಾಂ
ತ್ರಿದಶವ್ರಾತಕ್ಕೆ ಬಿಲ್ಗಳಾದವು; ತೈಕಾ
ಲೊದವಿರ್ದಲ್ಲಿಯ ಎಲು ಬ
ಲ್ಗದೆ ಯಾದವು; ಸಪ್ತಸಹಸ್ರಕ್ಷಿಸಲದರೊಳ್.

1. ಬಹಳ ಬಲವುಳ್ಳದ್ದು.

1460. ನೀಲಮುಖಿ[1] ಕೌರುವಕ್ಷಿತಿ
ಪಾಲಂಗುದ್ದಂಡರುಧಿರ[2]ಮುಖಿ, ಭೀಮಂಗಾ
ಕಾಲಂಗೆ ಕಾಲ[3]ದಂಡಂ
ಮೇಲಾದೆಲುವೃಳಿದ ಸುರಸಮೂಹಕ್ಕನಿತುಂ.

1. ಅವನ ಗದೆಯ ಹೆಸರು. 2. ಭೀಮನ ಗದೆಯ ಹೆಸರು. 3. ಕಾಲನಗದೆ.

1461. ಅಂದಾಮುನಿಪತಿಯಸ್ತ್ರಗ
ಳಿಂದಂ ತೇಜತ್ರಯ[1] ತ್ರಿಂಶಕ್ಕೋಟಿಸುರಗ್ರ್ಯಾಯುಧ
ಸಂದಾಯುದಿಮಾದವು ; ನರ
ದಿಂದಾದುದು ಬಗೆವಡಬ್ಜ[2]ಸಂಭವಪಾಶಂ.

1. ಮೂರಕ್ಕೆ ಚಿನ್ಹವಾದ ತೇಜತ್ರಯ=33. 2. ಬ್ರಹ್ಮನು ಅದರಿಂದ ವೈರಿಗಳನ್ನು ಹಿಡಿಯುತ್ತಾನೆ ಅದನ್ನ ಎಸೆದರೆ, ಉರುಲು ಬೀಳುವದು.

1462. ದೇವಾಸುರಯುದ್ಧದಿ ಮಹ
ದೇವಂಗೆಲ್ದಂ ಪಿನಾಕದಿಂ ದಾನವರಂ;
ದೇವೇಂದ್ರನ ಬಸಮಂ ಗಾಂ
ಡೀವಾಸ್ತ್ರದಿ ಪಾರ್ಥನೈದೆ ಸುಟ್ಟಂ ಬಳಿಕಂ

1463. ಅರಿ[1]ದಂ ಶಲ್ಯದ ಬಾಣದಿ
ಧುರದೊಳು ಸೈಂಧವನ ತಲೆಯುವದರಿಂ ಬಳಿಕಾ
ಹಿರಿಯಣ್ಣನ ಯಾಗಕ್ಕತಿ
ಭರದಿಂದಂ ತಂದ ಮುಂದೆ ಲಂಕೆ[2]ಯ ಧನಮಂ.

1. ಅರ್ಜುನನು ಕರ್ತೃ, 2. ಪಾಂಡವರು ಲಂಕೆಗೆ ಹೋಗಿದ್ದರು.

ಶರಳ ವೃತ್ತ.

1464. ಇಳೆಯನಾಃಶರದಿಂದ ಬೇಗದಿ ನಾಗಲೋಕಕೆ ಖಂಡಿಯಂ
ಕಳೆದು ಪೊಕ್ಕಡೆ, ಕಂಡು ವಾಸುಗಿ ಕಾದಿ ಸೋಲ್ತತಿಮೆಚ್ಚಿ ತಂ
ನೊಳು ವಿಚಾರಿಸಿ ನಾಗದೂತಿ ಯನಿಪ್ಪ ತಂನಯ ಪುತ್ರಿ ಯಾ
ಗಳೆ ವಿವಾಹವ ಮಾಡಲಾಂತೊಲವಿಂದಲೊಪ್ಪಿದನರ್ಜುನಂ.

ವಚನ.

The exploits of Arjoona with his divine weapon; yet he is plundered on the road by hunters.

1465. ಆ ಸಮಯದೊಳು ಪ್ರತಿಸಂಧಿಸಿಂಹಸಹಸ್ರಬಲಾನ್ವಿತಂ[1] ಅಪ್ಪ ಭೀ
ಮಂ, ಪಾರ್ಥಂ ನೋಡೆ, ನಕುಲಬಲಂ ಎಂಬ ರಾಕ್ಷಸಂಗೆ ಪಿಡಿವೆ
ತ್ತನಂ[2] ತಂದಂ ; ಮತ್ತಂ ಆ ಸವ್ಯಸಾಚಿ ಇಂದ್ರಕೀಲದೊಳು ಅ
ತ್ಯಾಯಾಸ ಸೂಕರ ನಿಮಿತ್ತಂ ಹರನೊಳು[3] ಕಾದಿ ಗೆಲ್ದಂ ; ಸ್ವಾಮಿ
ನಿ ಯಂಬ ಬ್ರಾಹ್ಮಣಿಯಂ ವಿವಾಹಸಮಯಪಸೆಯ ಮೇಲ್ ಇ
ರ್ದಳಂ ಯಮಂ ಯಮಪುರಕ್ ಒಯ್ಯೆ, ಯಾಕೆಯ ಭರ್ತಾರಂ
ಪಿರಿದುಕ್ಲೇಶಂಗೈಯ್ಯೆ, ಕೇಳ್ದು ಪಾರ್ಥಯಮಪುರಕ್ಕೆ ಧಾಳಿ ಇಟ್ಟು
ಕಾಲನೋಳ್ ಕಾದಿ ಗೆಲ್ದು ಅವನಂ ಕಟ್ಟಿ ಯುರಳ್ಚಿಯಾ ಬ್ರಾಹ್ಮ
ಣಿಯ ಪ್ರಾಣಮ ತಂದಂ ; ಅಲ್ಲದೆ ತಂನ ಬಾಣವ ಗರಿನಿಮಿತ್ಯ ಗ
ರುಡನ ಪಕ್ಷಮಂ ಕೊಳ್ವಾಗಲ್, ಅಡ್ಡಂ ಬಂದ ನಾರಾಯಣನಂ ಕ
ಟ್ಟಿ ಯೇಳು ದಿನಂ ನೆಲಮಾಳಿಗೆಯೊಳ್ ಇರಿಶಿ ಬಿಟ್ಟಂ ; ಅದಲ್ಲದೆ
ಯುಂ ಆ ಅರ್ಜುನಂ ತಾಯಿನೋಂಪಿಗೆ ದೇವೇಂದ್ರನೊಳು ಕಾದಿ

1. ಬಂದೊಂದುವೇಳೆ ಸಾವಿರ ಸಿಂಹಗಳ ಬಲವುಳ್ಳವನು. 2. ಅರ್ಜುನ ರಾಕ್ಷಸರಿಗೆ ಶೆರೆ ಬಿದ್ದಿದ್ದ ಭೀಮನನ್ನು ಬಿಡಿಸಿಕೊಂಡು ಬಂದನು. 3. ಅರ್ಜುನನು ಪಾಶುಪತಬಾಣ ದೊರಕಿಸಿ ಕೊಳ್ಳಲಿಕ್ಕೆ ಇಂದ್ರಕೀಲ ಪರ್ವತದಲ್ಲಿ ತಪಸಿಗೆ ಕೂತಿದ್ದನು—ಆಗ ಈಶ್ವರ ಅವನ ತಪಕ್ಕೆ ಮೆಚ್ಚಿ ಶಬರ ರೂಪದಿಂದ ಬಂದು ಇವನ ಸಾಮರ್ಥ್ಯ ನೋಡಬೇಕೆಂದು ಬಂದು ಹಂದಿಯ ನಿಮಿತ್ತ ಯುದ್ಧ ಮಾಡಿ ತನ್ನ ನಿಜರೂಪ ತೋರಿಸಿ ಆ ಬಾಣ ಕೊಟ್ಟನು.

ಐರಾವತಮುಂ ಶರಪಂಜರಮುಂ ಸ್ವರ್ಗಲೋಕದಿಂ ಇಳುಹಿ ತಂದ[4] ಪರಾಕ್ರಮಿ ದಿವ್ಯಾಯುಧಸಮರ್ಥನಾಗಿರ್ದ ಬಟ್ಟೆಯೊಳ್ ಬರ್ಪಲ್ಲಿ, ಬೇಡರಂ ಸುಲಿಸಿಕೊಂಡಂ ಎಂಬುದ್ ಇದು ನಿಂಮ ಮತಪುರಾಣಶಾಸ್ತ್ರಂಗಳೊಳ್ ವುಂಟೋ? ಇಲ್ಲವೋ? ಪೇಳಿಂ! ಎನೆ, ಯಾವಿಪ್ರರ್ ಉಂಟೆ ಎನೆ, ಯಾವಡ್ ಅವು ಸುಲಿಸಿಕೊಂಡೆವ್ ಎನೆ, ಯುಂಮ ನುಡಿಯುಂ ಯಾಕೆ ಅಸತ್ಯಂ ಎಂಬಿರ್? ಎನೆ, ಆ ವಿಪ್ರರೆಲ್ಲ ನಿರುತ್ತರರಾಗಿ ಮೌನ ಗೊಂಡಿರೆ; ವಾದಂ ಗೆಲ್ದು ಜಯಪತ್ರಮುಂ ಕೊಂಡು ಮುಂನಿನಂತೆ ವುದ್ಯಾನವನಕ್ಕೆ ಬಂದು ಸುಖದಿಂದಿರುತ್ತಿರಲ್, ಆ ಸಮಯದೊಳ್ ನೇಸರ್ ಪಡವುದು ನಿದ್ರಾಮುದ್ರಿತರಾದರು.

4. ಮಂಣಿನಿಂದ ಒಂದು ಆನೆ ಮಾಡಿ ಅದರ ಮೇಲೆ ಗೌರಿಯ ವಿಗ್ರಹ ಕುಳ್ಳಿರಿಸಿ ಪೂಜೆ ಮಾಡುವರು—ಕುಂತಿ ಅದನ್ನು ಮಾಡುವಾಗ, ನಾನು ಐರಾವತ ತಂದು ಕೊಡುತ್ತೇನೆಂದು ಅರ್ಜುನನು ಹೇಳಿ ಹೋಗಿ ತಂದನು.

ಕಂಡ.

1466. ಮಿತ್ರಾಭ್ಯು[1]ದಯಮನೀಕ್ಷಿಸಿ
ಮಿತ್ರಾಭ್ಯು[2]ದಯಮನೆ ಮಾಳ್ಪ ಬಗೆಯುಂ ಬಗೆದಂ
ಧಾತ್ರಿ ಮುಖಭಾಪುರೆನುತಿರೆ,
ಗೋತ್ರಶಿರೋಮಣಿ ಯನಿಪ್ಪ ವೃತ್ತವಿಳಾಸಂ.

1. ಸೂರ್ಯ. 2. ಸ್ನೇಹಿತ.

ON BRAHMA, THE CREATOR, &c.

5. ಬ್ರಹ್ಮನ ಜಗತ್ಕರ್ತೃತ್ವ, ವಿಷ್ಣುವಿನ ಪಾಲಕತ್ವ
ಅಗಸ್ತ್ಯನ ಸಾಮರ್ಥ್ಯತ್ವ ನಿರೂಪಣಂ. (5ನೇ ಅಶ್ವಾಸ.)

ಚಂಪಕಮಾಲಾ ವೃತ್ತ.

1467. ಪರಮಸುಖಾ[1]ನ್ವಿತಂ ವಿರ[2]ತಿರೂಪದಿ ಪೋಗಿ ಸರಾಗಪಾಟಲೀ
The fourth meeting of the ಪುರದ ಸಮೀರಣಾಶೆಯೊಳು ರಾಜಿಪ ಗೋಪುರದಬ್ಜಜಾಲಯಾಂ

1. ಸಖನನ್ನು ಕೂಡಿ ಕೊಂಡಿರುವವನು. 2. ವಿರಕ್ತರ ರೂಪದಿಂದ.

princes and the brahmans. ತರದೊಳ್ ಪೊಕ್ಕು ಭೇರಿಯುನೆ ಬಾರಿಸಿಮುಂನತಪೀಠದಲ್ಲಿ ಕು
ಳ್ಳಿರೆ ಖಚರೇಂದ್ರನಾಪುರದ ವಿಪ್ರಜನಂ ಬರೆ ತೀವ್ರರಾಗದಿಂ;

3. ಮನೋವೇಗ.

ವಚನ.

1468. ಅಂತು ಬಂದು ಸಿಂಹಾಸನದೊಳ್ ಕುಳ್ಳಿರ್ದರಂ ಕಂಡು, ನೀಂ ಈ ಭೇರಿಯಂ ಪೊಯ್ದು ಸಿಂಹಾಸನದೊಳ್ ಕುಳ್ಳಿರ್ದರ್ ಯಾಕ್? ಎನೆ ಯವರ್ ಈ ಸಿಂಹಾಸನದೊಳು ಕುಳಿತರ್ ಯೇನು ದೋಷಂ? ಎನೆ, ಅವರ್ ಈ ಪುರದೊಳ್ ವಿದ್ವಾಂಸರಾದವರು ವಾದಾರ್ಥದಿಂ ಬಂದು ಭೇರಿಯಂ ಪೊಯ್ದು ವಾದಂ ಗೆಲ್ದಲ್ಲದೆ ಸಿಂಹಾಸನದೊಳ್ ಕುಳ್ಳಿರ ಬಾರದ್, ಎನೆ, ಯಾ ಮಾತಿಗೆ ಯಮಂ ಮಾಣಲಿ ಯಿಂದು ಕೆಳಗೆ ಕುಳ್ಳಿರೆ, ಮತ್ತಂ ಇಂತ್ ಎಂದರು.

ಕಂದ.

1469. ಆರು ಗುರುವಾರದೆಶೆಯಿಂ
ವೈರಾಗ್ಯಂ ಬೆತ್ತು ತಪಮುನಾಂತಿರಿ? ನೀವೀ
ಕಾರಣಮುನೆಮಗೆ ತಿಳಿವ ವೊ
ಲೋರಂತಿರೆ, ಪೇಳಿಮೆಂದಡವರಿಂತೆಂದರ್:

1470. ಯೆಮಗೆ ಗುರುವಿಲ್ಲ; ವೈರಾ
ಗ್ಯಮು ದಾರಿಂ ಬಂದುದಿಲ್ಲಾ; ನಾವಾಗಿ ವೇ
ಷಮುನಾಂತುದಿಲ್ಲಿದುಂ ತಾಂ
ಸಮನಿಸಿದುದು; ವಿಧಿಯುನೇಂಮಾರು ಮೀರುವರೇ!

ವಚನ.

1471. ಎನಲ್, ಆವಿಧಿಯ ವೃತ್ತಾಂತಮಂ ಯಥಾಕ್ರಮದಿಂ ಪೇಳಿಂ! ಎನೆ, ನಾವು ಪೇಳಲ್ ಅಂಜುವೆಂ, ಎನೆ, ಅಂಜಲ್ ಯಾಕೆ? ಎನೆ, ಗುಣವರ್ಮನ ವೃತ್ತಾಂತವ್ ಅಂತವರ್ ಉಳ್ಳಡೆ, ಪೇಳಲ್ ಅಂಜುವೆಂ, ಎನೆ, ಆವೃತ್ತಾಂತಂ ಎಂತ್? ಅದಂ ಪೇಳಿಂ! ಎನೆ, ಮನೋವೇಗಂ ಪೇಳಲ್ ನೆಗಳ್ದಂ:

ಕಂದ.

1472. ಕ್ಷಿತಿನುತಚಂಪಕಪುರದಧಿ
The story of Gunavarma; ಪತಿಗುಣವರ್ಮಂ; ಪ್ರಧಾನಿಹಿರಿಯಾತಂ ಪೋ
ಗುತಲ್ಲೊಂದು ಸರಸಿಯೊಳ್ಸಿಲೆ
ಯತುಳನೀರೊಳಗೆ ಚಂಡುಂ ನೆಗದಿರೆ, ಕಂಡಂ.

1473. ಆರಸಗದನರುಪಲೀತಂ
ಮರುಳಾಗದೆ ಮಾಣನೆಂದು ಭಾಧಿಸಿ ಕಟ್ಟು
ತ್ತಿರೆ, ಬೊಮ್ಮರಕ್ಕಸಂ[1] ನಿ
ತ್ತರಿಸೇ, ನಾಂ ಪೋಪೆನೆಂದು ನುಡಿದರೆ, ಬಿಟ್ಟರ್.

1. ನಾನು ಬೊಂಮರಕ್ಕಸನು, ತಾಳಲಾರೆವುಂ, ಪ್ರಧಾನಿಯ ಮಾತು.

ವಚನ.

1474. ಅಂತು ಬಿಡಿಸಿಕೊಂಡು ವೈರಮಂ ಮನದೆ ಗೊಂಡು ಪುರದ ವುದ್ಯಾನವನದೊಳು ಮರ್ಕಟಂಗಳ[1], ಮನುಷ್ಯರಂ ಕಾಣಲ್ ಬಡನೆ, ಗೀತಮಂ ಪಾಡುವ ವಾದ್ಯಮಂ ಬಾರಿಸುವ ನೃತ್ಯಮಂ ಆಡುವಂತೆ, ಶಿಕ್ಷಿಸಿರೆ; ಅರಸಂ ಅವಶದಿಂದ್ ಅಲ್ಲಿಗೆ ಪೋಗೆ, ಯಾಮರ್ಕಟಂಗ

1. ಅನ್ವಯ: ಮರ್ಕಟಂಗಳನ್ನು ಪ್ರಧಾನಿ—ಶಿಕ್ಷಿಸಿರೆ.

ಳು ತೂರ್ಯತ್ರಯಮುಂ ಎಸಗೆ, ಕಂಡು ಬಂದ್ ಅರಸಂ ಆದಂ ಮಂತ್ರಿಗೆ ಪೇಳ್, ಯರಸಂ ಗ್ರಹಚೇಷ್ಟಿತನಾದಂ ಎಂದ್ ಆತಂಗೆ ಧೂಪವಂ ಇಕ್ಕಿ, ನಿಗ್ರಹಿಸಿ ಯಾತರಿಂದಂ ಪೋಪಂ ಎಂದು ಬಿಡಿಸಿ ಕೊಂಡರಸಂ ಮಂತ್ರಿವೆರಸ್ ಜಲಗದೊಳ್ ಇರ್ದಲ್ಲಿ, ವಾನರಸಂಗೀತವಂ ನಾಂ ಸಮಕ್ಷವಾಗಿ ಕಂಡೆ, ಪುಸಿಯಲ್ಲ, ಬರಿದ್ ಎಂಸಂ ಯೇಕೆ ನಿಗ್ರಹಂ ಗೈಯ್ಯೆ? ಪೇಳಿಂ! ಎನೆ ಮಂತ್ರಿ ಇಂತ್ ಎಂದಂ:

2. ಗೀತವಾದ್ಯ ನೃತ್ಯ ಎಂಬೀಮೂರು

ಶ್ಲೋಕ.

1475. ಅಶ್ರದ್ಧೆಯಂ ಸ ವಕ್ತವ್ಯಂ
ಪ್ರತ್ಯಕ್ಷಮಪಿ ಯದ್ಭವೇತ್
ಯಥಾ ವಾನರಸಂಗೀತಂ
ತಥೈವ ಪ್ಲವತೆ ಶಿಲಾ.

ಅರ್ಥ: ನಂಬತಕ್ಕದ್ದಲ್ಲದು, ಪ್ರತ್ಯಕ್ಷವಾದರೂ, ಹೇಳತಕ್ಕದ್ದಲ್ಲ. ವಾನರ ಸಂಗೀತವು ಹ್ಯಾಗೋ ಹಾಗೆ ಕಲ್ಲು ತೇಲುತ್ತದೆ.

ವಚನ.

1476. ಎಂದು ಮಂತ್ರಿ ಯರಸಂಗೆ ಪೇಳ್ದಂ; ಅದರಿಂ ಪೇಳ್ವುದು ಪರೀಕ್ಷಿಸದೆ; ಮನೋದ್ವೇಷಮಂ ತಾಳ್ವವರ್ ನಿಮ್ಮ ಸಭೆಯೊಳುಳ್ಳಡೆ, ಪೇಳಲಮ್ಮೆನೆ, ಇಂತಪ್ಪವರ್ ಎಮ್ಮ ಸಭೆಯೊಳ್ ಇಲ್ಲ್ ಅಂಜದೆ ಪೇಳಿಂ! ಎನೆ, ಮತ್ತೆ ಮನೋವೇಗಂ ಇಂತ್ ಎಂದಂ:

ಕಂದ.

1477. ಯೇಕಾಂತಗ್ರಹಣಸು ಯಂ
The story of the foolish king. ಬಾಕಥೆಯುಂಥವರುಳ್ಳಡೆ, ಪೇಳಲಂಮುವೆನೆ,

ಆಕಥೆಯನರುಪಿ ಯೆನೆ, ಸಭೆ
ಭೂಕಾಂತನಾಗ ಪೇಳಲುದ್ಯುಕ್ತನಾದಂ.

1478. ನಂದುರಬಾರಿಪುರಂ ರಾ
ಜಂ ದುರ್ಧರನಾತ್ಮಜನಾದನವಂಗಂ ಜಾ
ತ್ಯಂಧಕ[1] ; ಭಂಡಾರೇಶಂ
ತಂದಿಕ್ಕಿದನವಗೆ ರತ್ನಭೂಷಾಳಿಯಂ.

1. ಹುಟ್ಟು ಕುರುಡನು.

1479. ಅಂಧಕನಗರಸಂ ಬೆಸಸಿದ
ನಂದುಂ ; ಲೋಹದಾಭರಣವಿಕ್ಕೆಯುದಿರಾ
ಗೆಂದುಮಿವ[1] ನಂದು ಕುಲಿತೇ[2]
ವಿಂ ದಿಟವೊಳಿದಿತ್ತು ದಿವ್ಯಭೂಷಣವೆಂದಂ.

1. ಇವನ್ನು, ಆಭರಣಗಳನ್ನು. 2. ದೇವಿಸು.

ವಚನ

1480. ಅಂತು ಕುಮಾರಂಗೆ ನೇಮವಂ ಕೊಟ್ಟು ಲೋಹದವೆಂದು ಪೇಳ್ದೊಡೆ, ನಾಶ ಮಾಡಂ ಎಂಬ ಅವಿವೇಕನೃಪನ ಕಥೆಯುಳ್ಳವರ್ ಉಳ್ಳಡೆ, ಪೇಳಲುಂ ಮತ್ತೆ ಮಾತಾಡಲ್ ಅಂಮೆವ್ ಎನೆ, ಇಂತಪ್ಪವರ್ ಎಂಮ ಸಭೆಯೊಳ್ ಇಲ್ಲ, ಅಂಜದೆ ಪೇಳಂ ! ಎನೆ, ವಿಪ್ರರ್ ಕೇಳೆ, ಮನೋವೇಗಂ ಪೇಳ್ದಂ.

ಕಂದ.

1481. ಕರಮೆ ಸೊಗಯಿಸುವಯೋಧ್ಯಾ
ಪುರವರನಿವಾಸಿ ವಣಿಕ್ಪತಿ ಸಮುದ್ರದತ್ತ

The fiction about their hav-

ing become ascetics. ಪರದನ ಸುತರಾವೀರ್ವರು;

ಗುರುಗಳ ಪೊರೆಯಲ್ಲಿ ವೋದುತಿರಲೊಂದು ದಿನಂ

1482. ಆಗುರುಗಳವುಲಸಂಜೆಗೆ

ಪೋಗುತ್ತಂ ತುಂಬಿ ತಂನಿನೀರ್ಗುಂಡಿ ! ಯೆನ

ಲ್ಬೇಗದೊಳ್ ತುಂಬಿ ತರುತಿ

ಪೆರ್ಗಳ್ಕ್ರದದಾನೆ ಯೊಂದು ಭೂಪನದುಮದುಂ

1483. ಹರಿದುದು ಹೊರಜೆಯುಮಿಳಿಯುಂ ;

ಮುರಿದುದು ಮಂದು ಸೊಕ್ಕಿ ಕಟ್ಟಿದಾಳದ ಮರಂ[1]

ತರಿದೊಡ್ಡಿಕೊಳುತ್ತೆ ಬರು

ತ್ತಿರೆ, ಯಟ್ಟಿ ನಂಮಿರ್ವರ, ನಾವ್ ಕಂಡಾಗಳ್ ;

1. ಆಲದ ಮರವನ್ನ.

ವಚನ.

1484. ಅಂತು ಬೆಂನ್ ಅಟ್ಟಿ ಬರೆ, ಪುರದ ಬಹಿರ್ಭಾಗದೊಳು ಕೊಗ್ಗಿನ ಗಿಡದ ಶಾಖೆಯೋಳ್ ಗುಂಡಿಗೆಯು ನೆರೆ ಕಟ್ಟಿ ನಾವ್ ಈರ್ವರುಂ ಆ ಗುಂಡಿಗೆಯೊಳ್ ಪೊಕ್ಕು ಮುಚ್ಚಳವುಂ ಇಕ್ಕಿಕೊಂಡು ಪಿಪ್ಪಲೀ[1] ದ್ವಾರಮಂ ಮುಚ್ಚಲ್ ಮರದಿರೆ, ಆ ದ್ವಾರದಿಂ ಗಜಂ ಪೊಕ್ಕು ಯುಂಮಂ ಕಂಡು ಬೆಂನ್ ಅಟ್ಟಿ ಬರಲ್, ಆ ವೀರ್ವರ್ ಆ ಗುಂಡಿಗೆಯೊಳ್ ಅಲ್ಲೆಯುಂ ಆರು ತಿಂಗಳ್ ಓಡ್ಯಾಡುತ್ತಿರಲ್, ಅದು ಬೆಂನ್ ಅಟ್ಟಿ ಬಿಡದಿರೆ, ನಿತ್ತರಿಸಲಾರದೆ ಆಪಿಪ್ಪಲ ದ್ವಾರದಿಂ ನಾಂ ಈರ್ವರು ಪೊರಮಡೆ, ಯಾಗಜಂ ಪಿಂತಮೆ ಪೊರಮಡುವಾಗಳ್, ಅವರ ಮೈಯೆಲ್ಲಂ ಪೊರಮಟ್ಟು ಪಿಂತಣ ಬಾಲದೊಳಗ್ ಬಂದು ರೋ

1. ಗುಂಡಿಗೆಗೆ ಹಚ್ಚಿರುವನಳಿ.

ಮಂ ಶಿಲ್ಕಿ ಯಾಗಂಧಗಜಂ ಅಲ್ಲಿಯೇ ನಿಂದುದ್; ಆಂ ಈರ್ವರು ನಿಲ್ಲದ್, ಓಡಿ ಯಡೆವಡವಿ ಬಿದ್ದ್ ಓಡಿ ಬಪ್ಪ್ ಅಗಳ್, ಮಂಡೆಗಳ್ ಸಿಕ್ಕಿ ಪರಿಪಟ್ಟುವಾವವ್; ಅದರಿಂ ತಾಪಸರೂಪದ್ ಇವ್ ಎಂಬ ತಪಶ್ಚರಣಕ್ಕೆ ಕಾರಣಂ ಎಂದು ಪೇಳೆ, ವಿಪ್ರರೆಲ್ಲ: ಇಂತಪ್ಪ ಅಸತ್ಯ ವಚನಮಂ ನಿಂಮಂತ ದರುಶನದವರ್ ಆಡಲಾಗದ್! ಎಂಬಿರಿ, ನಿಂಮಂತ ತಾಪಸರ್ ಆಡಲ್ ಅಕ್ಕುಮೆ ? ಯನೆ, ಯಾತಾಪಸರ್ ಇಂತ್ ಎಂದರ್.

1. ಗುಂಡಿಗೆಗೆ ಹಚ್ಚಿರುವ ನಳಿ.

ಕಂದ.

1485. ಉಳ್ಳಾತಂ ಕಾಲ್ಗೆಡದೊಡೆ,
ಯೊಳ್ಳಿತ್ತೆಂಬರ್ಯ್ಯದ್ದೆ ಬಡವಂ ಪಿರಿದುಂ ತಾ
ನುಳ್ಳದ ನುಡಿದಡೆಯುಮದುಂ
ಪೊಳ್ಳೆಂಬರ್ಕಷ್ಟವಲ್ಲವೇ ದಾರಿದ್ರ್ಯಂ ?

Application of the fiction.

ವಚನ.

1486. ಎನೆ, ವಿಪ್ರರ್ ಇಂತ್ ಎಂದರ್: ಆಗುಂಡಿಗೆಯೊಳ್ ನೀವ್ ಯಿಬ್ಬರುಂ ಪೋಗುವದು ; ಪೊಕ್ಕದರ ಮುಚ್ಚಳವುಂ ಇಕ್ಕಿಕೊಳಲು, ಪಿಪ್ಪಲದ್ವಾರಂ ತೆರದ್ ಇರಲ್, ಅಲ್ಲಿಗೆ ಗಜಂ ಬಂದು ಪೊಗುವುದುಂ ; ಇನಿತು ಭಾರವಂ ಆನಾಟೆ ಯಾಂತ್ ಇರ್ಪುದು ; ನೀಂ ಆಗಜವುಂ ಕಂಡ್ ಅದರೊಳ್ ಓಡುವದು; ಮತ್ತೆ ಅದು ಬೆಂನ್ ಅಟ್ಟುವದುಂ ; ನೀಂ ಅದರೊಳ್ ಆರು ತಿಂಗಳೊಳ್ ತೊಳಲುವದುಂ ; ಮತ್ತೆ ಅದರೊಳ್ ನಿತ್ತರಿಸದೆ, ನೀವ್ ಈರ್ವರು ಪೊರಮಡುವುದು ; ನಿಮ್ಮ ಪಿಂತವೆ ಗಜಂ ಬಂದುದ್, ಅದು ಚೋದ್ಯಂ ; ಆದರುಂ ಆಗಲಿ ! ಯದರ ಶರೀರವೆಲ್ಲ ಪೊರಮಟ್ಟು ಅವರ ಬಾಲದ್ ಬಂದುರೋಮ

ಸಿಲ್ಕಿ ಯಲ್ಲಿಯೇ ನಿಲ್ಲುವದು ; ನೀಂ ಈರ್ವರು ಓಡಿ ಬಂದೆವು ಎ
ಬುದ್; ಇದುವೆ ವಿರುದ್ಧಂ, ಪಿರಿದು ಪ್ರಸಿಯುನೆ, ಮನೋವೇಗ
ಇಂತ್ ಎಂದಂ: ನಿಮ್ಮ ಪುರಾಣದ ಪುಶಿ ಇದರ ಪವಣೆ? ಪೇಳಂ
ಎನೆ, ನಮ್ಮ ಪುರಾಣದೊಳ್ ಅನಿತು ಪುಶಿ ಯುಂಟಾದರೆ, ಪೇಳಂ
ಎನೆ, ಮನೋವೇಗಂ ಪೇಳಲ್ ನೆಗಳ್ದಂ:

ಮತ್ತೇಭವಿಕ್ರೀಡಿತ ವೃತ್ತ.

1487. ಜಗಮಂ ನಿರ್ಮಿಸಿ, ರಕ್ಷಿಸೆಂದು ಹರಿಗಿತ್ತಂ ಕಂಜಜಂ ಪೇಳೆ; ಶಿ
The whole creation in the belly of Vishnu.
ಕ್ಷೆಗೆ ರುದ್ರಂ ಬರೆ; ಕೊಲ್ಲುವೆಂದುದರದೊಳ್ಪೊಕ್ಕಿಟ್ಟು ಕೊಂಡ
[ರ್ದು, ವಿ
ಲ್ಲಗೆ ಕುಂಭೋದ್ಭವನಲ್ಲಿಗೈದೆ, ಹರನಂ ತಾ ವಂಚಿಪಾತಾವನಂ
ಜಗದಾನಂದದೊಳೀವುದೆಂದಡದಕಿಂತೆಂದಂ ಮುನೀಂದ್ರೋತ್ತಮಂ

1. ಅಗಸ್ತ್ಯಮುನಿ (ಕಳಶಜ). 2. ಹರ ತನ್ನ ನಾಶಮಾಡ್ಯಾನೆಂಬ ಭಯದಿಂದ.

ಕಂದ.

1488. ಪೋಗು ನೀ ಬೇಗದೊಳಾನಿ
Vishnu in the water vessel of Agastya.
ಪ್ಪಗಸೆಯ ಗೊಂದಣದ ಶಾಖೆಯೊಳ್ಕಟ್ಟಿದ ಗುಂ
ಡಿಗೆಯೊಳೆನೆ, ಪೊಕ್ಕು, ನೀರಿಂ
ಸೊಗಸುವ ಕಮಂಡಲದಿ ಕಂಡನಬ್ಧಿಗಳೇಳಂ.

1489. ಆಜಳರಾಶಿಗಳೊಳ್ವಿ
ಭ್ರಾಜಿಪ ವಿಂಗಡಲ ನಡುವೆ ಯುದಸಂಖ್ಯಾಮಿತ
ಯೋಜನದಗಲದಿ ನೆರೆ ವಟ
ಭೂಜವಿರಲ್ ಕಂಡು ಬಂದನಾಯಡಿಗೆ ಕೃಷ್ಣಂ.

1490. ಬಂದಾಭೂರುಹದೆರಡೆಲೆ
ಯೊಂದಿವ ಮಧ್ಯದೊಳೆ ಪೊಕ್ಕು, ಮರದೊಱಗಿರೆ ಗೋ
ವಿಂದಂ ; ಮತ್ತತ್ತಲ್ಪರಿ
ತಂದಭೀಕ್ಷಿಸಲು ಫೋಗಿ ಸರಸಿರುಹಗರ್ಭಂ.

ಉತ್ಪಲಮಾಲಿಕಾ ವೃತ್ತ.

1491. ಬಂದು ಸರೋಜಜಂ ಹರಿಯನೀಕ್ಷಿಸಿ ಕಾಣದೆ, ಕೂಡೆ ನೋೞ್ಪೆನೆಂ
ತೆಂದು ಬರುತ್ತಗಸ್ತ್ಯಮುನಿಯಂ ನೆರೆ ಕಂಡು ವಿಚಾರಿಸಲ್ಕಗು
ತ್ತಂ ದಯದಿಂದಲೆನ್ನಯ ಕಮಂಡಲದೊಳ್ತವೆ ಪೊಕ್ಕು ನೋಡು !
[ಪೋ
ಗೆಂಪಡೆ, ಯಾರು ತಿಂಗಳದರೊಳ್ನೆರೆ ಪೊಕ್ಕು ತೊಳಲ್ದು ನೋಡಿದಂ.

ವಚನ,

1492. ಅಂತು ನೋಡುತ್ತೆ ವಟವಿಟಪಿಯಂ ಕಂಡ್, ಅದರ ಮೇಲೆ ಎಲೆ ಎಲೆ ದಪ್ಪದೆ, ಕೂಡಿ ಶೋಧಿಸಿ ನೋಡುತ್ತ ಬಪ್ಪ ಆಗಳ್, ಎರಡ್ ಎಲೆಯ ಮಧ್ಯದೊಳು ನಿದ್ರಾಮುದ್ರಿತನಾಗಿರ್ದಂ ಎಂದು ಬಗೆದ್ ಅರಿದು ಪೊಟ್ಟೆಯಂ ಪೊಗಲ್ ಉಪಾಯಮಂ ಕಾಣದೆ, ಚಿಂತಿಸುತ್ ಇಪ್ಪ ಆಗಳ್, ಅಚ್ಯುತಂ ಆಕಳಿಸೆ, ಬ್ರಹ್ಮ ವಕ್ತ್ರದಿಂ ಫೋಕ್ಕು ಪೊಟ್ಟೆಯೊಳ್ ಇರ್ದ ಸೃಷ್ಟಿಯಂ ಕಂಡು ಇದಂ ಎಲ್ಲಿ ಪೊರಮಡಿಸುವೆಂ ! ಎಂದು ದೆಶೆದೆಶೆಯಂ ನೋಡಿ ನಾಭಿಕಮಳಮಂ ಕಂಡು ಕಮಲನಾಳದಿಂ ಸೃಷ್ಟಿಯಂ ಪೊರಮಡಿಸಿ ಪಿಂತನೆ ತಾನುಂ ಪೊರಮಡುವಾಗಳು, ಯಲ್ಲಾಸರ್ವಾಂಗಂ ಪೊರಮಟ್ಟು ವೃಷಣಂ ಶಿಲ್ಕಿ ಯಾ ಕಮಳಜಂ ಮೆಲ್ಲನೆ ಯಲ್ಲಿ ನಿಂದು ಕಮಳಾಸನಂ ಆದಂ ಎಂದು ನಿಮ್ಮ ಪುರಾಣದೊಳ್ ಉಂಟೋ ಇಲ್ಲವೋ ? ಪೇಳಿಂ ! ಎನ್ನೆ, ಇ

ದುಂಟೆ ಎನೆ, ಯಾದರ್, ಇದು ಪುಶಿಯಲ್ಲವೆ? ಪೇಳಿಂ! ಎನೆ, ಇದ
ಲ್ಲದೆ ಮತ್ತೆ ಇಂತಪ್ಪ ಪುಶಿ ಪುರಾಣದೊಳ್ ಉಂಟೋ? ಪೇಳಿಂ!
ಎಂದು ವಿಪ್ರರ್ ಕೇಳೆ, ಇನ್ನು ಯಲ್ಲನ್ರಂ ಪುಶಿಯುಂಟೆ ಎನೆ, ಅದಂ
ಪೇಳಿಂ! ಎನೆ, ಮನೋವೇಗಂ ಪೇಳಲ್ ನೆಗಳ್ದಂ.

ಕಂದ.

1493. ವಿದಿತಂ ಕುರುಜಾಂಗಣಮೆಂ
ಬುದು ನಾಡು; ನಾಡೊಳಪ್ಪುದು ಅತಿಶಯಶೋಭಾ
ಸ್ಪದಮಾಗಿ ಹಸ್ತಿನಾಪುರ
ದಧಿನಾಥಸತ್ಯನಿಧಿಯುಧೀಷ್ಟರನೆಂಬಂ

Arjuna descends with his great army into hell, through the hole which he had made with his arrow.

1494. ಅನರಪತಿ ಯೊಂದು ದಿನಂ
ನಾನಾಯಾಗಮನೆ ಮಾಳ್ಪ ಬಗೆಯಂ ಬಗೆನಂ
ದಾನ್ಯೈಮಿತ್ರ್ಯ[1]ರನವರ ವಿ
ಧಾನಮನರಿಪಿಮೆಂದಡವರಾಗಿಂತೆಂದರ್.

1. ಯಾಗನೇಮ ಮುಂತಾದದ್ದ ಬಲ್ಲವರು.

ಶ್ಲೋಕ.

1495. ಅಶ್ವಮೇಧೆ ಹಯಂ ಹಂನ್ಯಾತ್
ಪುಂಡರೀಕೇಣ ದಂತಿನಾ
ವಾರಾಹಿಸೂಕರಂ ವಿಂದ್ಯಾತ್
ಗೋಸೂಯೇ ಕಪಿಲಾಂ ವಿದುಃ.

ಅರ್ಥ: ಅಶ್ವಮೇಧವಲ್ಲಿ ಕುದರೆಯನ್ನು, ಪುಂಡರೀಕಯಜ್ಞದಲ್ಲಿ ಆನೆಯನ್ನು ಕೊಲ್ಲಬಹುದು, ವಾರಾಹಿಯಜ್ಞದಲ್ಲಿ ಹಂದಿಯನ್ನು ಗೋಸೂಯದಲ್ಲಿ ಆಕಳನ್ನು ಕೊಲ್ಲಬಹುದು.

ವಚನ.

1496. ಎಂದ್ ಅನೇಕತೆರದ ಯಾಗಂಗಳಂ ವೇದೋಕ್ತಕ್ರಮದಿಂ ಸವಿಸ್ತಾರದಿಂ ಪೇಳ್ದು ಮತ್ತಂ ಇಂತ್ ಎಂದರ್ : ಈ ಯಾಗದಂ ಆವನೋರ್ವ ಮಾಡಲ್, ಆಫಲಮಂ ಸಾಮರ್ಥ್ಯದಿಂದ್ ಅನ್ಯರು ಕೊಳ್ವರ್; ಅದರಿಂ ಪೇಳ್ದರ್: ಆಕೊಳ್ಳದಂತಾಗಿ ಮಾಡಲ್ ವೇಳ್ಪುದ್; ಎನೆ, ಯದಂ ಆರಂ ಕೊಳ್ಳದಂತಾಗಿ ಮಾಳ್ಪುದ್, ಉಪಾಯಂ ಏನ್ ಉಂಟೆ? ಎಂದು ಯುಧಿಷ್ಠಿರಂ ಅನ್ನೈಮಿತ್ತ್ಯಕರಂ ಬೆಸಗೊಳೆ, ಯುವರ್ ಇಂತ್ ಎಂದರ್; ಪಾತಾಳದೊಳು ನಾಥದೇವಂ ಎಂಬ ಯೋಗೀಶ್ವರಂ ಇರ್ಪಂ; ಆತನಂ ಧರಣೀಧರಂ[1] ಬೆರಸು ವಡಗೊಂಡು ತಂದು ಯಾಗಮಂಟಪದೊಳ್ ಕುಳ್ಳಿರಿಸಲ್, ಆಫಲಮಂ ಆರುಂ ಕೊಳಲ್ ಪಡಿಯರೆಂದು ಪೇಳೆ, ಕೇಳ್ದು.

1. ಆದಿಶೇಷ.

ಸ್ರಗ್ಧರ ವೃತ್ತ.

1497. ಪಾತಾಳಂ ತಾನಭೇದ್ಯಂ , ಪೊಗುವಡರಿದು; ಮೇಣ್ಪೊಕ್ಕಡಂ ಬಾ
[ರ[1]ನಾರ್ಗಂ
ಖ್ಯಾತಂ ನಾಥಾಖ್ಯಯೋಗೀಶ್ವರನವನೊಲಿದಿಂ ಬಂದಡಂ, ಬಾರ
[ನಾರ್ಗಂ
ಸೋತುಂ ನಾಗೇಂದ್ರನಾತಂ ಮತಿ ಬಳನವನಂ ತಪ್ಪ[2]ರಾರೆಂದು
[ಚಿಂತಾ
ಚೇತಂ ತಾನಾಗೆ ಧರ್ಮಾತ್ಮಜನದನರಿಂದಾಪಾರ್ಥ ನಾಂ ತರ್ಪೆ
[ನೆಂದಂ.

1. ಈ ಕ್ರಿಯಾಪದಕ್ಕೆ ನಾಥ ಎಂಬ ಶಬ್ದ ಕರ್ತೃ. 2. ತರುವವರು. ವ್ಯಾ. ಸೂ. 95.

ವಚನ.

1498. ಎಂದು ಧನಂಜಯಂ ಗಾಂಡೀವಮಂ ತಿರಿವಿ ತೊಟ್ಟು ನೀವೀ ತೊ
ಟ್ ಎಸೆಯೆ, ನೆಲಂ ರಸಾತಳಕೆ ಬಾವಣಂ ಅಪ್ಪಿ ನಿಂ, ಎಚ್ಚು ಪೊ
ಕ್ಕಂ; ಅಲ್ಲಿಂದಾ ಅಹಿಲೋಕಮಂ ಬಗೆಯದ್ ಐತಂದುದಂ ಈಕ್ಷಿಸಿ
ನಾಗರಾಜಂ ಐತಂದು ಪಳಂಚಿ ತಳ್ತಿರದೆ ಯಾತನ ಬಲಂ ಬೆರಸ್ ಆ
ಜಿರಂಗದೊಳ್ ಶಕ್ತಿಯಿಂದ್ ಅಶೇಷನಾಳಿಗಳಿಂದ್ ಇಡೆ, ಸಬಳಂಗಳಿಂ
ದ್ ಇಡೆ, ತೋಮರದಿಂದ್ ಇಡೆ, ಪಿಂಡಿವಾಳದಿಂದ್ ಇಡೆ, ಕರಚಕ್ರ
ದಿಂ ಘಣಿಪಂ; ಅಂತ್ ಅನಿತಂ ತೆಗದ್ ಬಂದು ಬಾಣಿದಿ ಕಡಿಕಡಿಪಲ
ವುಂ ಗೆಪೆ, ಬೈಚಿವಂ ಇಂದ್ರನಂದನಂ; ಅಂತು ಬೈಚಿ ನಾಗೇಂದ್ರ
ನಂ ವಿರಥೆನಂ ಮಾಡಿವಡೆ, ಪಾರ್ಥಂಗೆ ನಾಗಧರೆ ಯಂಬ ಕುಮಾರಿ
ಯಂ ಕೊಡೆ, ಶುಭದಿನಮುಹೂರ್ತದೊಳು ಮದುವೆಯಾಗಿ ಚತು
ರ್ಥಿಯಂ ಮಾಡಿ ಮದುವೆಯಿಂ ಕಳುಪೆ, ನೀಂ ಇಲ್ಲದೆ ಯಾಂ ಓರ್ವನೆ
ಪೋಗೆಂ, ಎಂದು ನಾಥದೇವನಂ ನಾಗೇಂದ್ರನಂ ದಶಕೋಟಿಬಲಚಿರ
ನ್ ಆಚ್ಛಿದ್ರದಿಂದವೆ ಪಾರ್ಥಂ ಬಡಗೊಂಡು ಬಂದು ಯಾಗಮಂಟಪ
ದೊಳ್ ಕುಳ್ಳಿರಿಸಿದಂ ಎಂಬುದು ನಿಂಮ ಪುರಾಣದೊಳ್ ಉಂಟೋ
ಇಲ್ಲೋ? ಎನೆ ಅವರ್ ಇದ್ ಉಂಟು, ಎನೆ, ಯಾವಡೆ ಮುನಿಯ
ಗುಂಡಿಗೆಯ ರಂಧ್ರದೊಳ್ ಎಂತು ಪೊಕ್ಕಿರ್? ಎಂದು ವೃಥಾ ಮರು
ಳ್ ಆಡುವಿರ್ ಯಾಕ್? ಎನೆ, ಯವರ್ ಇಂತ್ ಎಂದರ್: ಆದ್ವಾರದಿಂ
ಪೋಗಲಕ್ಕುಂ; ಆಗುಂಡಿಗೆಯೊಳು ನೀಂ ಇಬ್ಬರುಂ ಆಗಜಮಂ
ಸಿದ್ಧರು ಎಂತು? ಪೇಳಂ! ಎನೆ ಮನೋವೇಗಂ ಇಂತ್ ಎಂದಂ.

1. ತೀರದಂಥಾ (ಬಾಕಿ ಇಲ್ಲದ). 2. ರಥವಿಲ್ಲದವನನ್ನ.

ಕಂದ.

1499. ಕಿರುಕಣಿಕೆಯ ಬಟ್ಟಿದ್ದದ
ಕಿರಿಯನಗಸ್ತ್ಯಂ ಪಯೋಧಿಯಂ ಕುಡಿಯಲೊಡಂ,

ನೆರಮುದುದಕಕ್ಕುದರವೆನೆ,
ನೆರೆಯದೆ ಗುಂಡಿಗೆಯುಂ ಮದೇಭಕಂ ನಮಗಂ ?

1500. ಆಮುನಿಯ ಕಮಂಡಲದೊಳು
ಭೂಮಿನದಾದ್ರಿವ್ರಾತಾಖಿಳನದಿವಾರಾಸಿ
ಸ್ತೋಮಮವಿರಲಕ್ಕು, ಗಡ ! ನಾ
ವೀ ಮದಗಜವೆರಸು ಗುಂಡಿಗೆಯೊಳಿರಲರಿದೇ ?

ವಚನ.

1501. ಎಂದ್ ಅನೇಕದ್ ಉಪಮೆಯಂ ಕೊಟ್ಟು ನಿಮ್ಮ ಪುರಾಣಂ ಏನ್ ಅ
ಸತ್ಯಮಂ ಆಡಿದಡಂ, ಸತ್ಯಂ ಎಂಬಿರಿ; ನಾವು ಸತ್ಯಮಂ ಆಡಿದಡಂ
ಅಸತ್ಯಂ ಎಂಬಿರಿ; ಲಕ್ಷದೋಷಾನ್ನಪಶ್ಯತೆ ಯಂಬ್ ಆನೀತಿ ನಿಮ್ಮ
ಲ್ಲಿಯೆ ಸಾರ್ಥಕಮಾಯ್ತೆಂದು ನುಡಿದು ಮತ್ತಂ ಇಂತ್ ಎಂದಂ:

1. ಲಕ್ಷದೋಷ ತೋರುವದಿಲ್ಲ.

ಕಂದ.

1502. ತನಗುಳ್ಳವಗುಣಮಂ ಗುಣ
ವೆನುತಿರ್ಪರನ್ಯರ ಗುಣಂಗಳಂ ದುರ್ಗುಣಂ
ವೆನುತಿರ್ಪ ಪಾಪರ ಚಿತ್ತ
ವನಾವಂ ತಿಳಿಪಲಾರ್ಪನಾತನೇ ದೇವಂ.

1503. ಎನೆ, ಕೇಳ್ದು ವಿಪ್ರರೆಲ್ಲಾ
ಮನದೊಳ್ನೆರೆ ಮೆಚ್ಚುತ ಜಯವಾದಿಗಳೇ ಮೋ
ದಿನಿಯೊಳಗೆ ನೀವೆಂದಿತ್ತ
ರನರ್ಘ್ಯಗುಣನಿಳಯವಿಜಯಪತ್ರಮನೊಲವಿಂ.

ವಚನ.

1504. ಅಂತು ಜಯಪತ್ರಮಂ ಕೊಂಡು, ತಾಂ ಈರ್ವರು ವಿಮಾನಮಂ
ಬೈಚಿಟ್ಟು ವುದ್ಯಾನಕ್ಕೆ ಬಂದು ಸುಖದೊಳಿರುತ್ತಿರಲ್, ಆಸಮಯ
ದೊಳು ನೇಸರ್ ಪಡವುದು; ನಿದ್ರಾಮುದ್ರಿತರಾಗಿ ನಿದ್ರೆ,ತಿಳಿದ್ ಎದ್ದು
ಕುಳ್ಳಿರ್ದ ಸಮಯದೊಳ್ ನೇಸರ್ ಉದಯಂ ಆಗಲ್, ಆಗಳ್

ON BRAHMA, VISHNU AND SHIVA.

6. ಬ್ರಹ್ಮ ವಿಷ್ಣು ಮಹೇಶ್ವರ ದೇವತಾ ಪರೀಕ್ಷೆ.
ನಿರೂಪಣ ವರ್ಣನ. (6ನೇ ಆಶ್ವಾಸ.

ಕಂದ.

1505. ಭೂಜನವಂದ್ಯಂ[1] ಘನತರ
ತೇಜಂ ತನ್ನಯ ಸಖಾನ್ವಿತಂ[1] ನಡೆತಂದಂ
ರಾಜೀವಸಖೋದಯದೊಳು
ಭ್ರಾಜಿತರುಷಿರೂಪನಾಂತು ಭರವಸದಿಂದ.

1. ಮನೋವೇಗನನ್ನು ವಿಶೇಷಿಸುವ ವಿಶೇಷಣಗಳು.

ಉತ್ಪಲಮಾಲಿಕಾ ವೃತ್ತ.

1506. ಭಾಸುರಪಾಟಲೀಪುರದ ಪಶ್ಚಿಮಗೋಪುರದಬ್ಜಸಂಭವಾ
ವಾಸಮನೈಯ್ದೆ ಪೊಕ್ಕು ತುಳದುಂದುಭಿಯಂ ಭರದಿಂದೆ ಪೊಯ್ದು ಸಿಂ
ಹಾಸನದಲ್ಲಿ ಕುಳ್ಳಿರಲು, ಭೇರಿಯ ನಾದಕೆ ತತ್ಪುರಾಧಿಪ
ಭೂಸುರರೈದೆ ಬಂದರಖಿಳಾಗಮತತ್ವಕಳಾಸುಕೋವಿದರ್.

The fifth meeting of the princes and the brahmans.

ಕಂದ.

1507. ಬಂದವರಂ ಕಂಡು ದ್ವಿಜ
ರೆಂದರ್ನೀವಾರ ಮಕ್ಕಳೀಹರೆಯದೊಳೇ
ನೊಂದು ವಿರಕ್ತಿಯನಾಂತಿರೆ?
ಯೆಂದಡೆ, ಮೆಲ್ಲನೆ ನಗುತ್ತಲವರಿಂತೆಂದರ್:

ವಚನ.

1508. ನಾವ್ ಈವತ್ಸದೇಶದ ಕೌಸಂಬಿಪುರಮಂ ಆಳ್ವ ಚಂದ್ರಶೇಖರಂ ಎಂಬ್ ಅರಸಂ, ಆತಂ ಅರಸಿ ಮೃಗಾವತಿ ಯೆಂಬಳ್, ಈರ್ವರ್ಗಂ ನಾಂ ಮೊದಲಾಗಿ ಯುಂಧಕಂ ವೃಷಭಂ ವಿಮಳಂ ಎಂಬ ನಾಲ್ವರ್ ಕುಮಾರರ್ ಅನ್ಯಪಾಳಂ ಒಂದು ದಿನಂ ಒಡ್ಡೋಲಗಂ ಗೊಟ್ಟು ಕುಳ್ಳಿರಲ್, ಅಮೋಘ ಮಂಡಲಂ ಗಗನ ಮಂಡಲದೊಳ್ ಪಲವು ಬಂಣ್ಣದಿಂ ನೆಗದು ನಿಮಿಷಕ್ಕೆ ನಾನಾರೂಪಾಗಿ ನಿಃಶೇಷವಾಗಿ ಕರಗಿ ಪೋಗೆ, ಪುದ್ಗಲಸ್ವಭಾವಂಗಳೆಲ್ಲಂ ಈಯಂದವು ಎಂದು ಸಂಸಾರಕ್ಕೆ ಪೇಸಿ ನಿರ್ಯೋಗಪರಾಯಣನಾಗಿ ಯಲ್ಲರಿಂ ಕಿರಿಯ ಮಗನಿಂಗೆ ಪಟ್ಟಮಂ ಕಟ್ಟಿ ದೀಕ್ಷಾಗ್ರಹಣಕ್ಕೆ ಪೋಗೆ, ಇತ್ತಲಾಂ ಜ್ಯೇಷ್ಟಂ ಇರೆ, ಕನಿಷ್ಟಗೆ ಪಟ್ಟಮಂ ಕಟ್ಟಿದ ಬಳಿಕ, ಮುನಿದು ವಿರಕ್ತನಾಗಿ ಯುಮಂಧರರೆಂಬ ಋಷಿಗಳ ಸಮೀಪದೊಳು ದೀಕ್ಷೆಯ ಗೊಂಡು ಸಕಲ ಶಾಸ್ತ್ರವ್ಯಾಕರಣ ಛಂದೋಲಂಕಾರಕಾವ್ಯನಾಟಕಂಗಳೊಳ್ ಅತಿ ಪ್ರವೀಣನಾಗಿ ಗುರುಗಳ ಬೀಳ್ಕೊಂಡು ನಡೆವಾಗಳ್, ಪ್ರಖ್ಯಾತಪುರಂ ಎಂದು ಪಲಬರ್ ಪೊಗಳೆ, ಕೇಳ್ದು ನೋಡಲ್ ಎಂದು ಬಂದೆವ್ ಎನೆ, ಯಾವಿಪ್ರರೆಲ್ಲರ್ ಇಂತ್ ಎಂದರ್.

The fictitious story about their life.

ಕಂದ.

1509. ಆದರೆ ಪುರಮಂ ನೋಳ್ಪಂ
ದಾದರತೆಯಿಂ ಬಂದಡೆ, ಸರಿ ! ನೀವೀಭೇರಿ
ನಾದಮನೆಸಗಿದಿರ್ಯಾಕೆನೆ ?
ವಾದಂ ಮಾಳ್ಪರ್ಥಿಯಿಂದಮೆ ವೆಸಗಿದೆವೆಂದಂ.

1510. ಎಂದಡೆ, ಕೇಳ್ದವರಿವರುಂ
ಮಂದರಗಿರಿಧೈರ್ಯರ್ನರತುಳಕಾರಣಪುರುಷ
ರ್ನಂದೇಹವೆ ? ಯೆನುತ ದ್ವಿಜ
ವೃಂದಂ ತಂಮಯ ಮನಸಿನೊಳ್ನೆರೆ ಬಗೆದರ್.

1. ಗುಡ್ಡದಂತೆ ಘಟ್ಟ ಧೈರ್ಯವುಳ್ಳವನು.

ವಚನ.

1511. ಅಂತು ಬಗೆದು ಪಿರಿದು ಪ್ರೊತ್ತು ಅವರೊಡನೆ ಗೋಷ್ಟಿಯಂ ಮಾಡಿ ಇವರ್ ಮಹಾವಿದ್ವಾಂಸರು ಕಾರಣಪುರುಷರ್ ಎಂದ್ ಅರಿದು ನೀವ್ ಎಂಮೊಡನೆ ವಾದಂ ಮಾಳ್ಪ ಬಗೆ ವೃಳ್ವಡೆ, ನಿಂಮ ಜಿನೇಶ್ವರಂ ನಂಬಿರ್ ಆಪ್ರೊಡೆ, ಸರ್ವಸಿದ್ಧಿಯುಂ ಮಾಡಿ ! ಎನೆ, ಮನೋವೇಗಂ ಇಂತ್ ಎಂದಂ : ಚರಾಚರಾದಿಸರ್ವಸೃಷ್ಟಿ ಸರ್ವಜ್ಞಂ ಇಲ್ಲದ್ ಅವನಿಂದ್ ಆಗದ್ ಅಪ್ಪುದರಿಂ ಸರ್ವಜ್ಞಂ ಉಂಟೆ, ಇದಂ ಜಗಕ್ಕ ಅರಿಯೆ, ಜಿನೇಶ್ವರನೆ ಸರ್ವಜ್ಞ.

ಎನೆ, ವಿಪ್ರರ್ ಇಂತ್ ಎಂದರು.

ಮತ್ತೇಭವಿಕ್ರೀಡಿತ ವೃತ್ತ.

1512. ಅರುಹಂ ತಪ್ಪಿಸಿ ಮಿಕ್ಕ ದೇವರೆನಿಪರ್ಸರ್ವಜ್ಞರಲ್ಲೆಂದು ಪೇ
ಳ್ದಿರಿ ; ನಾಂ ಪೇಳ್ವೆವು : ಕಂಜಜಂ ಹರಿಹರರ್ಸರ್ವಜ್ಞರೆಂಬಂದು ವಿ
ಪ್ರರೆನಲ್ಕಾಬಚರೇಂದ್ರನೆಂತವರು ಸರ್ವಜ್ಞರ್ಕಳಿಂತೆಂದು ಪೇ
ಳ್ದಿರಿ ? ಮಾತೊಪ್ಪದದ್ಯಾಕೆ ? ನಿಂಮಯ ಪುರಾಣಂ ಕೇಳ್ವುದೇನಿ
[ಲ್ಲವೇ ?

1. ಅರುವಿಲ್ಲದ.

ಕಂದ.

1513. ಎಂಬ ನುಡಿ ಗೇಳ್ದು ವಿಪ್ರಜ
ನಂ ಬೇಗದಿ ಪೇಳಿ ಯಾಪುರಾಣಮನೆನೆ, ಭೂ
ಪಂ ಬಗೆದು ನೋಡಿ ಕಾಪಿಳ
ನೆಂಬನ ಕಥೆಯುವರಿರ್ದಡೆ ಯೆಂಜುವೆನೆಂದಂ.

ಆ ಕಥೆ ಎಂತೆಂದು ವಿಪ್ರರ್ ಕೇಳೆ, ಮನೋವೇಗಂ ಪೇಳ್ಗಂ.

ಉತ್ಪಲಮಾಲಿಕಾ ವೃತ್ತ.

1514. ಮಾಳವದೇಶದೊಳ್ಮಧುರೆ ಯೆಂಬುದು ಪಟ್ಟಣವಾಪುರೇಶ್ವರಂ
a. The story of Kapila. ಕಾಳಕರಾಳನೆಂಬವನದೊಂದು ದಿನಂ ಮನದರ್ಥಿಯಿಂದೆ ವೈ
ಯ್ಯಾಳಿಗೆ ಪೋಗುತಿರ್ದಡಿದಿರೋಳ್ಜಯನೆಂಬನ ಸೂನು ಕಾಪಿಳಂ
ಬಾಳಕನಾಡುತಿರ್ದರಿಯುದಾಗಳ್ ಸೀತಡೆ, ಕೇಳ್ದು ಬೇಗದಿಂ

ಕಂದ.

1515. ಕೋಪಿಸಿ ಮೂಗಂ ಕೊಯಿಸಿದ
ಭೂಪತಿ ಶಿಶುವೆಂನವಂತದುಂ ಪ್ರಾಯಶ್ಚಿ
ತ್ತಾಪನಿತು ತಾಂ ಪಿಂತೆ ಮರ
ದಾಪುರದೊಳ್ವರ್ತಿಸುತ್ತಮಿರ್ದೊಂದು ದಿನಂ

1516. ಪಲಬರ ಗಡಣದಿ ಯಂಗಡಿ
ಯೊಳಗಂ ಬರುತಿರ್ದು, ಪಲವು ಕಂನಡಿಗಳಿರ
ಲ್ಪಲಬರವನೀಕ್ಷಿಸುತ್ತಿರೆ,
ಯೊಲವಿಂ ತಾನೊಂದು ಕಂನಡಿಯನೀಕ್ಷಿಸಿದಂ.

ವಚನ.

1517. ಅಂತು ನೋಡಿ ಮೂಗಿಲ್ಲದವಂ, ಇದು ಮೂಕೊಱೆಯ ಕಂನಡಿ ಇವಂ ಧೂರ್ತ ತೋಱಿದ ಯೆಂದ್ ಅದಂ ಶಿಲೆಯ ಮೇಲ್ ಇಕ್ಕಿ ಚೂರ್ಣಂ ಮಾಡಿ ಕಳೆಯಲ್, ಆ ಕಂನಡಿಯೊಡೆಯಂ ಪಿಡಿದು ಮಹಾ ಕೋಪಿಸಿ ಧರ್ಮಾಧಿಕರಣರ್ಗೆ ಬಯ್ಯಲ್, ಅವರ್ ಆತನ ಕಂನಡಿಯಂ ಯಾಕೆ ಒಡೆದೆ ಯೆಂದು ಕೇಳೆ, ಇವಂ ಎನಗೆ ಮೂಗಿಲ್ಲದ ಕಂನಡಿಯ ಕೊಟ್ಟಪ್, ಆಂ ಕೋಪಿಸಿ ಒಡೆದೆನ್, ಎಂದೊಡ್, ಅವೇಳ್ಪದಿ ಘೊಳ್ಳನೆ ನಗುತ್ ಅವನ ಅವಿವೇಕತೆಯಂ ಕ್ರಮದಿಂ ತಿಳುಪಿ, ಕನ್ನಡಿಯ ಬೆಲೆಯಂ ತೆರಿಸಿದರ್; ಇಂತು ತಮ್ಮ ಕುಂದು ತಾಪ್ ಅಱಿಯದೆ, ಪೆಱರೊಳ್ ವಾದಿಸುವ ಪಾಪಿಳನ ಕಥೆಯಂಥವರ್ ವೃಳ್ಪಡೆ, ಪೇಳಲ್ ಅಂಜುವೆಂ, ಎನೆ, ಇಂತಪ್ಪವರ್ ಎಂಮ ಸಭೆಯೊಳ್ ಇಲ್ಲ್; ಅಂಜದೆ ಪೇಳಿಂ! ಎನೆ, ಮನೋವೇಗಂ ಮತ್ತಂ ಇಂತ್ ಎಂದಂ: ಪಾಪಿ ಯೆಂಬ್ ಅರಸಿನ ಕಥೆಯವರ್ ವೃಳ್ಪಡೆ, ಪೇಳಲ್ ಅಂಜುವೆಂ ಎನೆ, ಯಾಕಥೆಯಂತ್ ಎಂದು ವಿಪ್ರರ್ ಕೇಳೆ, ಮನೋವೇಗಂ ಪೇಳ್ದಂ.

ಮತ್ತೇಭವಿಕ್ರೀಡಿತ ವೃತ್ತ.

1518. ಕ್ಷಿತಿಯೊಳ್ ಕಂಸಿಕಮೆಂಬ ಪಟ್ಟಣದಧೀಶಂ ಪಾಪಿ ಯೆಂತೆಂಬ ಭೂ
ಪತಿ, ಯಂತಾತನ ಮಂತ್ರಿ ದುಷ್ಟನತಿಭೂತದ್ರೋಹ, ಯುದ್ಘ್ ತನ
ಳ್ಗಿ ತಳಾರಂ; ಪೆಱಕೋರ್ವ ಕಳ್ಳನಿರುಳೊಳ್ಪಂ ದೋರ್ವ ನಾನಾವಾಸ [ದೊ
ಳ್ಕಲೆತಕಂ ಕಂನಮನಿಕ್ಕಿ, ಮೇಲ್ಗೆ ಡಮದಂತಾಭಿತ್ತಿಯುಂ ಕಳ್ಳನಾ.

b. The story of the king Papi.

1. ಭಿತ್ತಿ ಕಳ್ಳನ ಮೇಲ್ಗೆ ಡಮಡು.

ವಚನ.

1519. ಅಂತು ಗೋಡೆ ಬಿದ್ದು ಕಳ್ಳಂ ಸಾಯಲ್, ಅವಂ ಅರಸಂ ಕೇಳ್ದು ಶೆಟ್ಟಿಯುಂ ಕರದು ನಿನ್ನ ಮನೆಯ ಗೋಡೆ ಕಳ್ಳನಂ ಕೊಂದುದಕ್ಕೆ ನಿನ್ನ ಶೀಕ್ಷೆಯುಂ ಮಾಡುವೆಂ, ಎನೆ, ಯಾಶೆಟ್ಟಿ ನಾಂ ಗೋಡೆಯು ಕೂಲಿಯುಂ ಕೊಟ್ಟು ಇಕ್ಕಿಸಿದೆಂ, ಎನೆ, ಯಾದೊಡೆ ಇಕ್ಕಿದ ಕೂಲಿಯವರಂ ಕರಸಿ, ಕಳ್ಳಂ ಸಾವಂತೆ, ಗೋಡೆಯುಂ ಇಕ್ಕಿದಿರಿ! ನಿಂಮಂ ಶೀಕ್ಷೆಯ ಮಾಡುವೆಂ ! ಎನೆ, ಯವರ್ ಇಂತ್ ಎಂದರ್: ಸೂಳೆಯೋರ್ವಳ್ ಅಲ್ಲಿಯೇ ಪಲವು ಸೂಳ್ ಎಡೆಯಾಡುವಳಂ ಕಂಡು ಅಧಿಕವಾಗಿ ಸೋಲ್ತು

ಕಂದ.

1520. ತನು ಕೆಲಸಕ್ಕೆಳಸಿದಡಂ,
ಮನವಚನಂ ನೆಸಪ್ರತಿಸ್ಪರ್ದದು ಕಾರಣದಿಂ
ದಿನಿಸುಂ ಮಾಡಿದ ಕೆಲಸಂ
ಮನದಂತಿರೆ, ಬಳಿಕಮಾದುದಾಕೆಯದರಿಂದಂ.

ವಚನ.

1521. ಎಂದು ಬಿನ್ನವಿಸಲ್, ಸೂಳೆಯುಂ ಕರದು ನೀಂ ಇವರ ಮುಂದ್ ಎಡೆಯಾಡೆ, ಯವರ ಸೋಲ್ತು ಮಾಡಿದ ಗೋಡೆಯಿಂ ಕಳ್ಳಂ ಸತ್ತಂ ಅದರಿಂ ನಿನ್ನ ಶೀಕ್ಷೆಯ ಮಾಡುವೆಂ ! ಎನೆ, ಯವಳು ನಾಂ ಅಕ್ಕಸಾಲಿಗಗೆ ಭಂಗಾರಮುಂ ಕೊಡ ಪೇಳ್ದು ಪೊನ್ನ ಕೊಟ್ಟಡೆ, ಯವಂ ಭಂಗಾರಮುಂ ಕೊಟದ್ ಎಡೆಯಾಡಿಸಿದಂ ; ಎನೆ, ಯಾಯಕ್ಕಸಾಲೆಯುಂ ಕರಿಸಿ ನೀಂ ಪೂಕೆಯ ಯಡೆಯಾಡಿಸಿದ ಕಾರಣಕ್ ಅ ಗೋಡೆ ಬಿದ್ದು ಕಳ್ಳಂ ಸತ್ತಂ; ಅದಕ್ಕೆ ನಿನ್ನ ಶೀಕ್ಷೆ ಮಾಡುವೆಂ ; ಎನೆ, ಯವಂ ನಾ ಭಂಗಾರಮ ಕೊಳ್ಳಲು, ಸಂತೆಗೆ ಪೊನ್ನ ಕಟ್ಟಿ

ಕೊಂಡು ಪೋಗೆ, ಕಳ್ಳಂ ಚೇಲಮಂ ಕತ್ತರಿಸಿಕೊಂಡು ಪೋದಂ; ಎನೆ, ಯರಸಂ ತಳವಾರನ ವಿಚಾರಿಸಿ ನೀಂ ಆಕಳ್ಳನಂ ಬೇಗದಿಂ ಪಿಡಿದು ತಾರ್! ಎನೆ, ತಳವಾರಂ ಪಿರಿದ್ ಆಕಳ್ಳನಂ ಕಾಣದೆ, ಸಂತಿಯ ಮಂದಿಯೆಲ್ಲರಂ ಪಿಡಿದು ತಂದ್ ಈಯೆ, ಸಚಿವಂ ಇಂತ್ ಎಂದಂ; ನೀಂ ಇವರೆಲ್ಲರಂ ಶಿಕ್ಷೆಯ ಮಾಡೆ ಕಳ್ಳಂ ಇವರೊಳ್, ಆವಂ ಆದಡುಂ, ಸಾವಂ, ಎನೆ, ಯರಸಂ ಅಂತ್ ಎಸಗಿದಂ; ಅಪಾಪಿಯರಸಿನ ಕಥೆಯವರು ನಿಮ್ಮ ಸಭೆಯೊಳ್ ಉಳ್ಳಡೆ, ಪೇಳಲ್ ಅಂಜುವೆಂ ಎನೆ, ಇಂತಪ್ಪವರ್ ಎಂಮ ಸಭೆಯೊಳಗ್ ಇಲ್ಲ್ ಅಂಜದೆ ಪೇಳಿಂ! ಎನೆ, ಮನೋವೇಗಂ ಪೇಳಲ್ ನೆಗಳ್ದಂ:

ಉತ್ಪಲಮಾಲಿಕಾ ವೃತ್ತ.

1522. ಒಂದು ದಿನಂ ಮನೋಜರಿಪು ದಾರುಕವೆಂಬ ಬನಕ್ಕೆ ಪೋಗಿ ಪೊಕ್ಕಿಂದುನಿಭಾಸ್ಯತಾಪಸವಧೂಟಿಯನೀಕ್ಷಿಸಿ ಮೋಹಿಸೊಂದು ಮಾಸಂ ಧಿಟಮಾಂತು ತಾನೊಲಿಸಿ ಯಾಕೆಯೊಳೊಂದಿರೆ ನಿಚ್ಚನಿಚ್ಚಕಂ; ಪಿಂಪಣ ಚಿತ್ತವಿಲ್ಲಿವಳ ಚಿತ್ತಮನೀಕ್ಷಿಸೆ ನೆಂದು ತಾಪಸಂ

c. The origin of all the worlds from Shiva,

ಕಂದ.

1523. ಸ್ನಾನಕ್ಕೆ ಪೋಗಿ ಬಂದಪೆ
ನಾನೆಂದಾಸತಿಗೆ ಪೇಳಿ ಪೋಗುತ್ತೆ, ಮುಗುಳಾ
ಮಾನಿನಿಯುಂ ವಂಚಿಸಿ ಬಂ
ದಾನಿಳಯಮನೈದೆ ಪೊಕ್ಕಡಂಗಿರ್ದಾಗಳ್

1524. ಬಂದು ಹರನಾವಧೂಟಿಯೊ
ಳೊಂದಿರೆ ಮುನಿ ಕಂಡು ಮುನಿದು ಈತನ ಲಿಂಗಂ
ಸಂದಿಳಿಗೆ ಪರಿದು ಬೀಳಲಿ!
ಯೆಂದಿತ್ತಂ ಕೋಪದಿಂದೆ ಶಾಪಮನಾಗಳ್.

ವಚನ.

1525. ಇಂತು ಕೋಪದಿಂ ಶಾಪಮಂ ಕೊಡೆ, ಲಿಂಗಂ ಪಱಿದು ಬೀೞಲು ಶಂಕರಂ ಕಂಡು ರೋಷದಿಂ ಪಱಿದು ಬಿದ್ದ ಲಿಂಗಂ ತಾಪಸನ ಪಣೆಯಂ ಪತ್ತಲಿ! ಯೆಂದು ನಿಯಮಮಂ ಗೊಡೆ, ಯದು ಪತ್ತಲುಂ, ಅವಂ ಈಶ್ವರಂ ಎಂಬ್ ಅಱಿದು ಪಾದಾಂಭೋಜದೊೞ್ ಕೆಡೆದ್ ಇದ್ ಬಂವೊ ಕ್ಷಮಿಸುವದ್! ಎಂದು ಲಜ್ಜೆ ಗೆಟ್ಟು ಬಾಯಂ ಬಿಟ್ಟು ಯಾ ಲಿಂಗಮಂ ಕಳೆದು ಕರುಣಿಸುವುದ್! ಎನೆ, ಈ ಲಿಂಗಮಂ ಪೊತ್ತು ಕೈಲಾಸಕ್ಕೆ ಬಂನಿ! ಕಳೆವೆಂ! ಎನೆ, ಯಂತೆ ಗೈದಪೆಂ ಎಂದು ಪೊತ್ತು ನಡೆಯಲ್, ಅಸಿತನಿತು ಬೆಳಯೆ; ತಿಳಯೆ, ಪಲಂಬರ್ ತಾಪಸರ್ ಪೊತ್ತು ಪೋಗೆ, ಪಾರ್ವತಿ ಕಂಡ್ ಅಟ್ಟಹಾಸತೆಯಾಗಿ, ಯದಕ್ ಈಶ್ವರ ಸಂತುಷ್ಟಚಿತ್ತನಾಗಿ, ಹ್ಯಾಗೆ ಪೂಜಾರ್ಹಂ ಅಪ್ಪುದೋ, ಹಾಂಗೆ ಮಾಡುವದ್! ಎಂದ್ ಬಂದು ಭಾಗದಿಂ ಎಸಗಿದ ತ್ರಿಭಾಗಮಂ.

ಕಂದ.

1526. ಅದರ ಮೇಗಣ ಭಾಗದಿಂ
ದುದಯಿಸಿದವಾಸ್ವರ್ಗಲೋಕವೆಂಬನೇಕಂ;
ಪದಪಿ ಕೆಳ್ಭಾಗದಿಂದೊ
ಗೆದವು ಧಾತ್ರಿಗಿರಿಚಯಂ ವನಂ ವಾರಿಧಿಗಳ್;

1527. ಅಂತಾಗದರ ನಡುವೆ ತಂ
ನಿಂ ತಾನೆ ಪುಟ್ಟಿದಂ ಸದಾಶಿವಂ ಮೇಣ್ದೆ
ಕುಂ ತಿರಿಗಿ ನೋಡಿ ಯಖಿಳದಿ
ಗಂತರಾಂಬರಂ ವಾರ್ಧಿಗಳಿರೆ, ಕಂಡಾಗಳ್.

ಉತ್ಪಲಮಾಲಿಕಾ ವೃತ್ತ.

1528. ಶಂಕಿಸಿ ಶಂಕರಂ ಬಳಿಪ ತ್ರಿಶೂಲಸಮಾಕ್ಷಿಸಲಲ್ಲಿ ಕೃಷ್ಣದಿಂ
and of Brahma and Vishnu. ಪಂಕಜಗರ್ಭನಂಜಿಡಿಪ ಬಾಹುಮನೀಕ್ಷಿಸಲಲ್ಲಿ ತೀವ್ರದಿಂ
ದಂ ಕಮಲಾಯತಂ ಜನಿಸಿ ಕಾಂತೆಯಿಲ್ಲದೆ ತಾನನೇಕಕಾ
ಲಂ ಕಳೆದಂನಮಿರ್ದು, ಸತಿ ಸ್ವೈರಿಸಲಾರದೆ, ತಾನ್ನು ಸಮಾಪದಂ.

ಚಂಪಕಮಾಲಾ ವೃತ್ತ.

1529. ಸ್ಮರಪರಿತಾಪದಿಂ ಬೆದರಿ ಬೆಚ್ಚನೆ ಸೊಯ್ದು ಬಳಿಕ್ಕಳಲ್ದು ನಿ
These three quarrel about one wife. ತ್ರ್ರರಿಸದೆ, ಧಾತ್ರಿಯೊಳ್ಬಳಜದಿಂ ಬರೆಪಂ ಸತಿರೂಪ, ವಸ್ತ್ರವಂ
ತಿರೆ ಪರಿ, ಜೀವಮುಂ ಪಡೆದನಬ್ಜಜನಂತದು ನಗ್ನರೂಪದಿಂ
ದಿರೆ, ನಡೆ ನೋಡಿ ತಂದುಡಿಸಿದಂ ವರವಸ್ತ್ರಮನುಗ್ರಲೋಚನಂ

ಕಂದ.

1530. ಅಸುಪತಿಗೆ ಕೂರ್ತು ಸರೋ
ಜಾಸನನಂಭೋಜನೇತ್ರನದ್ರಿತನೂಭವ
ಳೀಶರಿವರೆಮಗೆ ತಮಗೆಂ
ದೋಸರಿಸದೆ ತಳ್ತು ಮುಷ್ಟಿಯುದ್ಧಂ ಗೈದರ್.

ವಚನ.

1531. ಅಂತು ಯುದ್ಧಸಂನದ್ಧರಾಗಿರೆ, ಸಕಲಸುರಸಮಿತಿ ಬಂದ್ ಬಡ
ಬೊಕ್ಕುಂ ಅವರಂ ಬಿಡಿಸಿ ಇಂತಪ್ಪ ಅನುಚಿತಮಂ ನೆಗಳಲ್ಲಾಗ
ದು; ಯಥೋಚಿತಂ[1] ಎಂತ್, ಅಂತೆ ಮಾಳ್ಪುದ್! ಎನೆ ಯವರ್ ಎ
ಮಗೆ ನೀವೇ ಸಮರ್ಥರಾಗಿ ಇದಂ ತಿಳುಪಿ! ಎನೆ, ಯವರ್ ತಂ
ಮೊಳ್ ಆಲೋಚಿಸಿ ತಿಳಿದ್ ಇಂತ್ ಎಂದರ್:

1. ಯಥಾ+ಉಚಿತ, ಹ್ಯಾಗೆ ತಕ್ಕದ್ದು.

ಕಂದ.

1532. ಮುಂನೆ ಬರದವ ತಂದೆ; ಚೈ
ತನ್ಯವ ಪಡದಾತಂ ತಾಯಿ ; ತಾನೊಸ್ತ್ರಮಂ
ಮಂನಿಸಿ ಕೊಟ್ಟವ ಗಂಡಂ
ಕಂನಿಕೆಗೆಂವವಳ ಶಿವಂಗೆ ಕೊಟ್ಟರೊಲವಿಂ.

ವಚನ.

1533. ಅಂತು ಕೊಡೆ, ಸುಖದಿಂದ್ ಇರಲು, ನಿತ್ತ್ರಿಸಲಾರದೆ, ಪರಿಬ್ರಹ್ಮರ್ ಈರ್ವರು ಬಂದು ಕನ್ಯೆಯಂ ಪಿಡಿದು ಚುಂಬಿಸಲ್, ಆಕೆ ಲಜ್ಜೆಯಿಂ ಕರಗಿ ನೀರಾಗಿ ಗಂಗೆ ಯೆಂಬ ನದಿಯಾಗಿ ಪೋದಳ್; ಆಕೆ ಪೋಗಲ್ ಬಡನೆ, ತಾಂ ಮೂವರುಂ, ಮುಂನಿನಂತೆ ಸ್ತ್ರೀರೂಪಂ ಒರೆ ಪರಿ, ಕಂಜಜಂ ಜೀವಮಂ ಪಡೆದು, ಈಶ್ವರ ವಸ್ತ್ರಮಂ ಕೊಟ್ಟು ಸುಖದಿಂದ್ ಇರುತ್ತಿರೆ, ಲೋಕೋಕ್ತಿ ಇಂತ್ ಎಂದುದು.

ಶ್ಲೋಕ.

1534. ಕಾರ್ಯಂವಿಷ್ಣುಃಕ್ರಿಯಾಬ್ರಹ್ಮಾ
ಕಾರಣಂತುಮಹೇಶ್ವರಃ
ಯೇಕೋಮೂರ್ತಿತ್ರಯೋಭಾಗಾ
ಬ್ರಹ್ಮಾವಿಷ್ಣುಮಹೇಶ್ವರಾಃ.

ಅರ್ಥ: ವಿಷ್ಣು ಬ್ರಹ್ಮರು ಕಾರ್‍ಯರೂಪವಾಗಿದ್ದಾರೆ. ಮಹೇಶ್ವರ ಕಾರಣರೂಪವಾಗಿದ್ದಾನೆ. ಒಂದೇ ಮೂರ್ತಿ ಬ್ರಹ್ಮ ವಿಷ್ಣು ಮಹೇಶ್ವರ ಎಂಬೀ ಮೂರು ಭಾಗವಾಗಿದೆ.

ವಚನ.

1535. ಇಂತು ಮೂವರಿಂದ್ ಉದಯಿಸಿತ್ ಇಂತ್ ಈಚರಾಚರ್; ಅನಂತರದಿಂದ ಅವು ಅಂತು ವರ್ತಿಸುತಿರ್ದುಂ ಅನಂತಯುಗಂ ಪೋದ ಬಳಿಕಂ, ಒಂದು ದಿನಂ.

ಚಂಪಕಮಾಲಾ ವೃತ್ತ.

1536. ಸರಸಿಜಗರ್ಭನಿಂದಧಿಕ ನಾನೆನೆ ವಿಷ್ಣು ಸಮಂತು ವಿಷ್ಣು ವಿಂ
ಸರಸಿಜಗರ್ಭ ನಾನಧಿಕನೆಂದು ವಿವಾದಿಸಿ ಯೋರ್ವರೋರ್ವರುಂ
ಪಿರಿದುರೆ ಗರ್ವದಿಂದೆ ಸೆಣಸುತ್ತಿರೆ, ನೋಡಿ ಸಮರ್ಥರಾರಿದಂ
ಪಿರಿಕಿಪೆನೆಂದು ತಾ ಬೆಸಸಿದಂ ಬೆಸನಂ ಫಣಿರಾಜಭೂಷಣಂ.

Quarrel of Brahma and Vishnu about superiority.

ಮತ್ತೇಭವಿಕ್ರೀಡಿತ ವೃತ್ತ.

1537. ಭರದಿಂದೀಕ್ಷಿಸಿ ಬಪ್ಪುದೆನ್ನ ಪದಮಂ, ಕಂಜಾಕ್ಷ ನೀ ! ಪದ್ಮವಿ
ಷ್ಟರ ! ನೀನೀಕ್ಷಿಸಿ ಬಪ್ಪುದೆನ್ನ ಶಿರಮಂ ! ನಿಂಮಿರ್ವರೊಳ್ಮುಂ [ದೆ ಬಂ
ದರದಾರಾತನೆ ಲೋಕವಂದ್ಯನಧಿಕಂ ! ಕೇಳೆಂದುಮಾಚಂದ್ರಶೇ
ಖರನಿಂತೆಂದುಮವರ್ಗೆ ಪೇಳೆ, ಬೆಸನಂ ತಾಳ್ದರ್ಮನೋರಾಗದಿಂ.

ವಚನ.

1538. ಅಂತುಂ ಅವರ್ ಬೆಸನಂ ಕೈಕೊಂಬುದುಂ; ಶಂಕರಂ, ಸ್ವರ್ಗ ಲೋಕದೊಳ್ ಶಿರಂ, ಮಧ್ಯಮಲೋಕದೊಳ್ ಲಿಂಗಂ, ಪಾತಾಳ ಲೋಕದೊಳ್ ಪಾದಂ, ಈ ಪ್ರಕಾರಂ, ಬೆಳದು ನಿಂದಿರೆ, ಬ್ರಹ್ಮ ಲಿಂಗಪ್ರದೇಶದಿಂದೆ, ದಣಿಯೆ, ನಾನಾ ಕೃತೆಯಂ ತಳದು ಅನೇಕ ಕ್ಲೇಶಾಯಾಸದಿಂದೆ ತಾನುಂ ನಾಭಿಪ್ರದೇಶಮಂ ಐದಿ, ಮೇಗಣಿಂ ಬಪ್ಪ ಕೇತಕಿಕುಸುಮಮಂ ಕಂಡು, ಯೆಲ್ಲಿಂದ ಬಂದೆ? ಎಂದು ಅಜಂ ಬೆಸಗೊಳೆ, ನಾಂ ಈಶ್ವರನ ಪಿಂಗಳಜಟಾಜೂಟದಿಂ ಬಂದೆಂ, ಎನೆ, ಯಾದಡ್ ಅಲ್ಲಿಂ ಪೊರಮಟ್ ಎನಿತು ಕಾಲಂ ಉಂಟ್? ಎನೆ, ನಾಂ ಪೊರಮಟ್ಟು ದಿವ್ಯಷಣ್ಮಾಸಂ ವುಂಟ್; ಎನೆ, ಕೇಳ್ದು ಮನಗುಂದಿ, ಪೋಪೆಷ್ಟ್, ಎಂನ್ ಆಳವ್ ಅಲ್ಲವ್, ಎಂದು ಕೇತಕೆಯಂ ನಾ

Brahma tells lie.

ನಾಪ್ರಕಾರದಿಂ ಪ್ರಾರ್ಥಿಸಿ, ನೀಂ ಈಶ್ವರನ ಮುಂದೆ ಈತನ ಪಿಂ
ಗಳ ಜಟಾಜೂಟದ ಸಮೀಪದೊಳ್ ಕಂಡೆಂ, ಎಂದ್ ಉಸಿರ್! ಎಂ
ದು ಪೇಳೆ, ತಾಂ ಅದಂ ಈಗ ಕಂಡೆಂ ಎಂದಂ.

ಉತ್ಪಲಮಾಲಿಕಾ ವೃತ್ತ.

1539. ವಾರಿಜನೇತ್ರಮೀಶ್ವರನ ಸಾರಿ ಸಮೀಪದೊಳಿರ್ದು, ಸೂಕರಾ
ಕಾರಮನಾಂತು ಜಂಘೆಯನನೇಕದಿನಂ[1] ಪರಿದೈದೆ, ಪೋಪರಿಂ
ನಾರುಮಿದೀಗಸಾಧ್ಯಮೆನುತಂ ತವೆ ನೋಡಿ ಸರಾಗಧಿಂ ಮನೋ
ಜಾರಿಯ ಸಂನಿವೇಶವನು ಸಾರ್ದಿದಿರೊಳ್ಳುಗಿದಂ ಕರಂಗಳಂ.

1. ಜಂಘೆಯ ತನಕ ಹೋದನು.

ಕಂದ.

1540. ಸಂನುತವಗಜಾಧೀಶ್ವರ[1]!
ನಿಂಸಂಘ್ರಿಯನೀಕ್ಷಿಸಲ್ಕೆ ಪೋಪಡೆ, ಮಗುಳ್ದು
ಮೆಂನಳವಲ್ಲದೆ, ಜಂಘಾ
ಸಂನಿಧಿಯಿಂ ಬಂದೆನೀಗಳವಧರಿಸೆಂದಂ.

1. ಗುಡ್ಡದ ಮಗಳ ಗಂಡ=ಶಿವ.

1541. ಎಂದೆನೆ, ಲಾಲಿಸಿ ಪುಸಿಯ
ಲ್ಲೆಂದು ಮನಂ ಮೆಚ್ಚಿ ರಾಜ್ಯಪೂಜ್ಯತೆಯೊಳು[1] ಬಾ
ಳೆಂದುಂಮೈಶ್ವರ್ಯಪನಾ
ಗೆಂದಿತ್ತಂ ಕೇಶವಂಗುಮೇಶಂ ವರವಂ.

1. ರಾಜ್ಯದಲ್ಲಿ ಪೂಜೆ ಮಾಡಿಸಿ ಕೊಳ್ಳುವ ಯೋಗ್ಯತೆ. ಅಂತು ವರವಂ ಕೊಟ್ಟು ಕ
ಮಳ ಸಂಭವನ ಪುಗೆ ಕಡು ಮುಳಿದು ಆತನ ಮೊಗನುಂ ನೋಡಿ.

ಶ್ಲೋಕ.

1542. ಸತ್ಯಾದುತ್ಪದ್ಯತೆ ಧರ್ಮಂ
ದಯಾದಾನೇನ ವರ್ಧತೇ
ಕ್ಷಮಾಯಾಂ ಸ್ಥಾಪಿತೊ ಧರ್ಮಃ
ಕ್ರೋಧೊಲೋಭಾದ್ವಿನಸ್ಯತೇ.

ಅರ್ಥ: ಸತ್ಯದಿಂದ ಧರ್ಮ ಉತ್ಪತ್ತಿ ಯಾಗುತ್ತದೆ; ದಯ ದಾನದಿಂದ ಬೆಳೆಯುತ್ತದೆ; ಕ್ಷಮೆಯಿಂದ ಧರ್ಮಸ್ಥಾಪನೆ ಆಗುತ್ತದೆ; ಸಿಟ್ಟು ಲೋಭದಿಂದ ವಿನಾಶವಾಗುತ್ತದೆ.

ಕಂದ.

1543. ಎಂದು ಪಲತೆರದೊಳಾಗೋ
ವಿಂದನನಾನಂದದಿಂದೆ ಯಾದರಿಸಿ ಬಳಿ
ಕ್ಕಂದು ವರಮೂರ್ತಿ ಭರದಿಂ
ಮುಂದಿರ್ದ ಸರೋಜಭವನನೀಕ್ಷಿಸಿ ಬೇಗಂ

1544. ಪುಸಿದನಿವನೆಂದು ಕಡು ಕೋ
ಪಿಸಿ ಭಿಕ್ಷಾವೃತ್ತಿಯಾಗಿ ಬಾಳ್ಗುಂ ನೀಂ ! ಪೂ
ಜಿಸದಿರ್ಕೆ ನಿಂನನೆಂದಾ
ವಿಷಮಾಕ್ಷಂ[1] ವಿಷಜಜಂಗೆ ಶಾಪವನಿತ್ತಂ

1. ಸಮವಿಲ್ಲದ ಕಂಣಿನವನು=(ಹಣೆಯಲ್ಲಿರುವಕಂಣಿನವನು) ಶಿವ.

ವಚನ.

1545. ಅಂತು ಶಾಪವ ಕೊಟ್ಟ ಬಳಿಕ, ಪಕ್ಷನುಂ ಆಡಿನ ಗೇದಿಗೆಯಂ ಕಂಟಕ ವೃತ್ತಿಯಾಗಿ, ಯಂಂನ್ ಆಜಟಾಮಕುಟಕ್ಕೆ ಯೋಗ್ಯಂ ಅಗದೆ ಪೋಗ್ ! ಎಂದು ಶಾಪಮಂ ಕೊಟ್ಟಂ; ಅಂದಿಂದ ಬಳಿಕ

ಗೇದಿಗೆ ಹೆರಂಗೆ ಹೊರಗಾದುದ್ ಎಂಬರ್ ಆಹರಂ ಬೆಳದ್ ಆಕ್ರಮ
ದೊಳ್ ನಿಂದಂ; ಊರ್ಧ್ವಲೋಕದೊಳ್ ಶಿರಮಂ, ಮಧ್ಯಮಲೋ
ಕದೊಳ್ ಲಿಂಗಮಂ, ಪಾತಾಳಲೋಕದೊಳ್ ಪಾದಮಂ ಪೂಜಿಸು
ವರು, ಯೆಂದು ಶೈವಸಿದ್ಧಾಂತದೊಳ್ ಪೇಳ್ದುದ್ ಅದರಿಂ, ಈಶ್ವರಂ
ಸರ್ವಗತಂ ಎಂಬರ್; ಅದ್ ಎಂತ್ ಎನೆ :

ಶ್ಲೋಕ.

1546. ಸ್ಥಾವರಂ ಜಂಗಮಂ ಚೈವ
ತ್ರೈಲೋಕ್ಯಂ ಸಚರಾಚರಂ
ಯೇಕೋದೇವಃಶಿವೋಲೋಕೆ
ಪೂಜನೀಯೋನಸಂಶಯಃ.

Conclusion: these three cannot be omniscient, nor omnipotent.

1547. ಲಿಂಗಮಧ್ಯೆ ಜಗತ್ಸರ್ವಂ,
ತ್ರೈಲೋಕ್ಯಂ ಸಚರಾಚರಂ,
ಲಿಂಗಬಾಂಹ್ಯಾತ್ಪರಂ ನಾಸ್ತಿ;
ತಸ್ಮಾಲ್ಲಿಂಗಂಪ್ರಪೂಜಯೆತ್.

ಅರ್ಥ: ಸ್ಥಾವರಜಂಗಮಗಳು ಇವೆಲ್ಲ ಏಕದೇವರಾದ ಶಿವನೆ—ಲೋಕದಲ್ಲಿ ಅವನು ಪೂಜಿಸಿ
ಕೊಳ್ಳತಕ್ಕವನು, ಇದಕ್ಕೆ ಸಂಶಯುವಿಲ್ಲ.
ಲಿಂಗದ ಮಧ್ಯದಲ್ಲಿ ಎಲ್ಲಾ ಲೋಕವು ಅದೆ. ಲಿಂಗದ ಹೊರ್ತು ಬೇರೊಂದು
ಇರುವದಿಲ್ಲ. ಆದಕಾರಣ ಲಿಂಗವ ಪೂಜಿಸ ಬಹುದು.

ತ್ರಿಪದಿ.

1548. ಆಹರಂ ತಂನುಭಯ ಬಾಹುವಿಂದೊಗೆದವರಾ
ಸಾಹಸದ ಹವಣಮರಿಯದೆ ಸರ್ವಜ್ಞ
ನೇ? ಹೇಳಿ ! ನೀವು ಹುಸಿಯದೇ !

1549. ಹುಸಿಯು ದೇಹವ ಸಂಮಿ, ಯುಸವಸಡೆಂ ಪರಾ
ಮಶರ್ಯೆದೆ ದೇವ[1]ರ್ಮಪ್ಪಡೆ, ಒಳಿಕ ಮಾ
ನಸರಾರೆಂಬಿರದ ಪೇಳೀ !

1. ದೇವರುಮಪ್ಪಡೆ.

ವಚನ.

1550. ಅಂತ್ ಅನೇಕಮುಪಾಯದಿಂ ಮನುಷ್ಯಧರ್ಮದೊಳ್ ನಡೆವ ಮಾನ
ಮರ್ಗೆ ನಿರ್ಭರರುಂ ಅಪ್ಪರು ದೇವರ್ ಎಂದು ನುಡಿವಿರಿ ; ಅದು ದೇ
ವರ್ ಅಲ್ಲ ! ಎಂದು ಮನೋವೇಗಂ ಪೇಳೆ, ಕೇಳ್ದು ವಿಪ್ರರ್ ಇಂತ
ಎಂದರ್ :

ಕಂದ.

1551. ನೀವೆಂದಂದದೊಳಾಜಿನ
ದೇವಂ ಸರ್ವಜ್ಞನಪ್ಪನಾದೊಡಾವೆಲ್ಲಂ
ದೇವರ ಗುಣಮ ಬಣ್ಣಿಸುವ
ದೇ ವೇದಂ ಜನರನ್ಯಾಕೆ ಬಣ್ಣಿ[1]ಸದೆಂದರ್.

1. ವೇದಗಳು ಈ ದೇವರುಗಳನ್ನು ಸ್ತುತಿಸುತ್ತವೆ. ನೀವು ಅವರಿಗೆ ಮನುಷ್ಯರು ಅನ್ನುತ್ತೀರಿ. ಹಾಗಾದರೆ ವೇದಗಳು ಇವರನ್ನಲ್ಲದೆ ಉಳಿದ ಮಂದಿಯನ್ನು ಯಾಕೆ ಸ್ತುತಿಸುವದಿಲ್ಲ.

ವಚನ.

1552. ಎನೆ, ವೇದಂ ಜನರಂ ಅನೇಕತೆರದಿಂ ಸ್ತುತಿಸುವದ್ ಬಂದು ಶಾ
ಸ್ತ್ರಮುಂಟುಂ; ಅದು ನೀಂ ಅರಿಯಲ್ ಆಕ್ಕುಂ ; ಮತ್ತಂ ಜೀವಾದಿ
ಪದಾರ್ಥಂಗಳಂ ಪೂರ್ವಾಪರವಿರೋಧವಿಲ್ಲದೇ ಪೇಳ್ದುದೆ ವೇದಂ ;
ಪೂರ್ವಾಪರವಿರೋಧಂ ಉಳ್ಳದೆ ವೇದಂ ಅಲ್ಲ ಎಂದು ನಿರುತ್ತರರಂ
ಮಾಡಿ ವಾದಂ ಗೆಲ್ದು ಜಯಪತ್ರಮಂ ಕೊಂಡು ಮುದ್ಯಾನಕ್ಕೆ ಬಂ
ದು ಯಥೋಚಿತಕ್ರಮದಿಂದಿರ್ದರ್.

ON THE ORIGIN OF THE KAURAVAS, &c.

7. ಕೌರವಭಗೀರಥನಭಿಮನ್ಯುವಿಂದ್ರಜಿತು ವೇದವ್ಯಾಸ ಕರ್ಣತೃಣಬಿಂದುಗಳ ಉತ್ಪತ್ತಿ ವರ್ಣನ. (7ನೇ ಆಶ್ವಾಸ.)

ಉತ್ಪಲಮಾಲಿಕಾ ವೃತ್ತ.

1553. ಮಿತ್ರಸಮನ್ವಿತಂ ಪಮುಳಭೂತಿಕರಾಗಿ, ಯನೂನಪಾಟಲೀ
ಪುತ್ರಪುರಕ್ಕೆ ಬಂದದರ ಕೋಣಪದಿಕ್ಕಿನ ಗೋಪುರಾಂತದೋ
ಳ್ಛತ್ರಮೆನಿಪ್ಪ ಕಂಜಭವನಾಲಯಮಿರ್ಪುದನಾಗ ಪೊಕ್ಕು ಲೋ
ಕತ್ರಯವೈದೆ ಕೇಳೆ, ಪೊಡೆದಂ ಖಚರಾಧಿಪನಲ್ಲಿ ಭೇರಿಯಂ.

The sixth meeting of the princes and the brahmans.

ವಚನ.

1554. ಅಂತು ಭೇರಿಯಂ ಪೊಯ್ಯೆ, ಕೇಳ್ದು ಸಕಳಕಳಾಪ್ರವೀಣರ್ ಅಪ್ಪ ತತ್ಪುರದ ವಿಪ್ರರೆಲ್ಲಂ ನೆರದು ಬಂದ್ ಅವರಂ ಕಂಡು ಇಂತ್ ಎಂದರ್ ಅಲ್ಲಿ ಭೇರಿಯಂ ಪೊಯ್ದು ಸಿಂಹಾಸನದೊಳ್ ಏಕೆ ಕುಳ್ಳಿರ್ದಿರ್? ಇಲ್ಲಿ ವಿದ್ವಾಂಸರಾದವರು ವಾದಾರ್ಥದಿಂ ಬಂದು ಭೇರಿಯಂ ಪೊಯ್ದು ವಾದಂ ಗೆಲ್ದಲ್ಲದೆ ಸಿಂಹಾಸನದೊಳ್ ಕುಳ್ಳಿರ ಬಾರದ್! ಎನೆ, ಯಾದಡೆ ಮಾಣಲಿ! ಯೆಂದು ಅವರ್ ಇಳಿದು ಕುಳ್ಳಿರೆ, ಮತ್ತೆ ಇಂತ್ ಎಂದರ್.

ಕಂದ.

1555. ಆರು ಗುರು ನಿಮಗೆ? ಪೇಳೆನೆ,
ಆರು ಗುರುವಿಲ್ಲ ನಮಗೆನಲಾದ್ವಿಜರೆಂದರ್:
ಧಾರುಣಿಯೊಳು ಗುರುವಿಲ್ಲದ
ರಾರುಮುನ್ನತತಪವನಾಂತು ಬಾಳ್ದವರುಳರೇ?

ವಚನ.

1556. ಎನೆ, ಯೆಂಬ ತಪದ ವೃತ್ತಾಂತಮಂ ಪೇೞ್ದೊಡೆ, ಪಿತ್ತಜ್ವರವಿಾತಂಗೆ ಪಾಲುಸಕ್ಕರೆಯುಂ ಕೊಳ್ವುದ್! ಎಂದು ಪೇೞ್ದಡೆ, ಕೆರಳ್ವಂ ಅಲ್ಲದೆ, ಕೈಕೊಳ್ವನಲ್ಲ್; ಅಂತು ನಮ್ಮ ವೃತ್ತಾಂತ ನಿಮ್ಮ ಮನಕ್ಕೆ ಬಪ್ಪುದ್ ಅಲ್ಲ್, ಎನೆ, ಯುವರ್ ಆದರ ತೆರನಂ ಪೇೞಿ! ಕೇಳ್ವೆಂ! ಎನೆ, ಯಮೃತಫಲದ ವೃತ್ತಾಂತದ್ ಅರಸಿನಂತ್ ಅಪ್ಪರುಂ ಇರ್ದಡೆ, ಪೇೞಲಱೆವ್, ಎನೆ, ಯಾಯಮೃತಫಲದ ವೃತ್ತಾಂತಂ ಎಂತ್? ಎಂದು ವಿಪ್ರರ್ ಕೇಳೆ, ಮನೋವೇಗಂ ಪೇೞ್ದಂ.

ಕಂದ.

1557. ಪಿರಿದೆನಿಸುವಂಗದೇಶಾಂ
ತರದೊಳು ಶೋಭಿಪುದೊಂದು ಚಂಪಕಾಪುರವಾ
ಪುರದಧಿನಾಥಂ, ನೃಪಶೇ
ಖರನೆಂಬವ, ಪಲವು ಕಾಲಮರಸಾಗಿರ್ದಂ.

a. the story of the stupid king.

ವಚನ.

1558. ಅಂತು ರಾಜ್ಯಂಗೈವುತ್ತಂ ಇರಲ್, ಒಂದು ದಿನಂ ವಣಿಗ್ವರಂ ಒರ್ವಂ ಅಮೃತಫಲದ ಬೀಜಮಂ ತಂದು ಕಾಣಿಕೆಯುಂ ಕೊಟ್ಟುಂ ಇದಂ ಬಿತ್ತಿದಡೆ, ಮಹಾವೃಕ್ಷಂ ಅಪ್ಪುದ್; ಅಲ್ಲಿ ಅತಿಸ್ವಾದುವಪ್ಪ ಫಲಂಗಳ್ ಅಪ್ಪವು; ಮೆಲ್ಲಿದಡೆ, ಯಷ್ಟೋತ್ತರ[1]ಶತಂ ಆಯುಃರೋಗಾದಿ ಪಿಂಗುಗು, ಎಂದ ಪೇೞೆ, ಕೇಳ್ದ್ ಅರಸಂ ವನಪಾಲಕನಂ ಕರೆದು ಬೀಜಮಂಬಿತ್ತಿ ಫಲಮಂ ಪಡೆ; ಯೆಂದು ಕೊಡೆ, ಯುವಂ ಬಿತ್ತಿ ಬೆಳೆದು ಫಲಭರಿತಮಾದ ಸಮಯದೊಳ್ ಬಂದು ಸರ್ಪನ ತಾ

1. ನೂರಾ ಎಂಟು. 2. ಬಳ್ಳೀಸ್ತಂಭವಾಗಿ.

ಕ್ಷ್ಯಂ ಪಿಡಿದು ಗಗನಕ್ಕೆ ನೆಗೆಯಲ್, ಅಪಾವಿನ ವದನದಿಂ ವಿಷ ಪ್ರೇರಮುಟ್ಟು ಮರದ ಮೇಲ್ ಬಂದು ಕಾಯೊಳ್ ಬೀಳೆ, ಯಾ ವಿಷ ದ ವೂಷ್ಣದಿಂದೆ ಫಲಂ ತ್ವರದಿಂ ಪಕ್ವಮಾಗಲುಂ, ಅದಂ ವನಪಾ ಲಕಂ ತಂದು ಅರಸಂಗ್ ಈಯ್ಯಲ್, ಅವಂ ಓರ್ವವೃದ್ಧಂಗೆ ಕೊ ಟ್ಟು ಮೆಲ್ಲಿಸಲ್, ಆವಂ ಅವಿಷಪೂರದಿಂದ್ ಆಗಳೆ ಸಾಯಲ್, ಅದಕ್ ಅರಸಂ ಆಮರವಂ ಆಗಳೆ ಬೇರ್ವರಿಸಿ ಕಡಿಸಿ ಬಿಸುಡೆ, ಯಾಪುರ ದೊಳು ಸಾಯ ಬಯಸುವ ತೊಂನರುಂ ತುರಜರುಂ ಮಹಾರೋ ಗಿಗಳುಂ ಬಂದ್ ಆಮರದ ಫಲಮಂ ತಿಂನಲು ನಿರೋಗಿಗಳಾಗಿ ವಳಿ ಪಳಿಸ್ತಂಭವಾಗಿ ಸುಖಮಾಗೆ, ಕಂಡ್ ಅರಸಂ ಮಲಮಲಮರುಗಿ ದಂ ; ಎಂಬ್ ಅವಿವೇಕಿಯರಸಿನ ಕಥೆಯವರ್ ನಿಮ್ಮ ಸಭೆಯೊಳ್ ಉಳ್ಳಡೆ, ಪೇಳಲ್ ಅಂಜುವೆಂ ; ಎನೆ, ಇಂತಪ್ಪವರ್ ಎಂಮ ಸಭೆ ಯೊಳ್ ಇಲ್ ; ಅಂಜದೆ ಪೇಳಿಂ ; ಎನೆ, ಮನೋವೇಗಂ ಪೇಳ್ದಂ.

ಕಂದ.

1559. ಘನವೆನಿಪಪಯೋಧ್ಯಪುರದೊಳು
ಧನದತ್ತನೆನಿಪ ವಾಣಿಗ್ವರನಂತು ತನ್ನ
ತನುಜಾತೆದೇವದತ್ತೆಯು
ನನುಪಮವಸುದತ್ತನೆಂಬ ಪರದಂಗಿತ್ತಂ.

Fictitious story of the birth ... of Manove-...

ವಚನ.

1560. ಅಂತ್ ಇತ್ತು ಶುಭದಿನಮುಹೂರ್ತದೊಳು ಮದುವೆಯಂ ಮಾಡ ಲ್, ಎಂದು ವೇದಿಕಾಗ್ರದೊಳು ತೆರೆಶಾಲೆಯ ಪಿಡಿದು ವರನಂ ಕಂ ನಿಕೆಯುಂ ಮನ್ನಿಸಿ ಕೆಲದೊಳ್ ಇರಿಸಿ ಮುಹೂರ್ತದೊಳು ಪಾಣಿ ಗ್ರಹಣಂ ಗೈವುತ್ತಿರಲ್ ; ಆಸಮಯದೊಳ್ ಬಂದು ರಾಜಹಸ್ತಿ ಮ

ಡೊನ್ಮತ್ತವಾಗಿ ಬಂಧನಮಂ ಪರಿದು ಕೊಂಡು ಕೊಲ್ಲುತ್ತಂ ಬರೆ,
ಕಂಡ್ ಓಡುವಾಗಳ್, ಆವಸುಪತ್ತನ ಪಸ್ತಿ ದೇವವತ್ತೆಯುಂ ಸೊಂ
ಕೆ, ಗರ್ಭಂ ಪುಟ್ಟಿ ನವಮಾಸಂ ತೀವಿದ್ ಆಸಮಯದೊಳು.

ಕಂದ.

1561. ದಕ್ಷಿಣದಿಂದಂ ಬಂದ
ಭಿಕ್ಷೆಗೆ ಧನದತ್ತನಾಲಯಕ್ಕೆ ಪಲಂಬ
ಭಿಕ್ಷುಕರವರಂ ಕಂಡ
ಬ್ಜಾಕ್ಷಿವರದೇವವತ್ತೆ ಯುವರ್ಗಿಂತೆಂದಳ್:

ಉತ್ಪಲಮಾಲಿಕಾ ವೃತ್ತ.

1562. ಆವೆಡೆಯಿಂದ ಬಪ್ಪ ಪರಿ? ಯಲ್ಲಿಗೆ ಪೋಪಿರಿ? ಬಂದ ಕಾರ್ಯವಿ
ನ್ನಾವುದು? ಪೇಳಮೆಂದು ಬೆಸಗೊಂಡಡೆ, ಬಂದೆವು ದಕ್ಷಿಣಾಶೆಯಿಂ
ದಾವೆಡೆ, ಯುರ್ಘವುಳ್ಳೆಡೆಗೆ ಪೋದಪೆವಿಲ್ಲಿರಲಾಗದಪ್ಪುದಿಂ
ನೀವಿಷಯಾಂತರಾಳದೊಳೆ ಬರ್ಕುಗು ಪಂನೆರಡೊತ್ಸರಂಬರಂ.

ವಚನ.

1563. ಎಂದು ಭಿಕ್ಷುಕರ್ಕಳ್ ಮಜ್ಜನೆನಿಗೆ ಪೇಳೆ, ನಾಂ ಪೊಟ್ಟೆಯೊಳ್ ಇ
ರ್ದು ಕೇಳ್ದು ಬರ್ಕ ಅಂಜಿ ಪೊರಮಡಲಂಮದೆ ಪಂನೆರಡು ವರು
ಷ್ ಅಂನಬರಂ ಪೊಟ್ಟೆಯೊಳ್ ಇರೆ, ಯಾಭಿಕ್ಷುಕರ್ ಮರಳ್ದು ಬಂ
ದು ಸುಭಿಕ್ಷೆಯಾಯಿತ್; ಎಂಮ ದೇಶಕ್ಕೆ ಪೋದಪೆನ್ ಎಂದು ಪೇ
ಳೆ, ಕೇಳ್ದು ಯಂಮ ತಾಯಿಯ ವಚನದಿಂ ಪೊರಮಟ್ಟ ಕ್ಷಣದೊ
ಳಗೆ ತಲೆಯಂ ಪಿಡಿದು ಭೋಜನಮಂ ಮಾಡಿಸ! ಎಂದು ಬೇಡಿ

1. ನಮ್ಮ ತಾಯಿ.

ಕಾಡಿದೊಡೆ, ಶಂಕಿಸಿ ಇವಂ ರಾಕ್ಷಸಂ, ಎಂದ್ ಓಡಿ ಪೋಗಲ್, ಎಲ್ಲ ರುಂ ನೆರೆದು ವಿಚಾರಿಸಿ ನಿರ್ಧಾರಿಸಿ ಕಳೆಯೆ, ತಲೆಗ್ ಎಂಣೆಯುಂ ಪಡೆಯದೆ ಜಟಾಧಾರೆಯಾದೆ ; ಕೆಲವು ದಿನಕ್ಕೆ ವಿಹರಿಸುತ್ತವೆ ಆ ಯೋಧ್ಯೆಗೆ ಬಂದ್ ಎಂಮ ತಾಯಿತಂದೆಯ ವಿವಾಹವಾಗುತ್ತಿರೆ, ನೋಡಿ ಬಂದೆವ್; ಇದು ನಂಮ ತಪಶ್ಚರಣಕ್ಕೆ ಕಾರಣಂ ಎನೆ, ಕೇಳ್ದು ವಿಪ್ರರ್ ಇಂತ್ ಎಂದರ್.

ಕಂದ.

1564. ಪುಸಿಯುನಸತ್ಯಮನಿದೆ ತಾ
ಪಸರಾಡಲ್ತಕ್ಕದಲ್ಲವಲ್ಲದೆ ಕೇಳ್ವ
ಬಿಸುಡುಗು ಭಾಷೆಯುನೆನಲ್ಕೆ,
ಪುಶಿ ಇದರೊಳಗಾವುದೆಂದಡಾದ್ವಿಜರೆಂದರ್:

1565. ಪುಟ್ಟಿದುದು ಪತಿಯು ಹಸ್ತಂ
ಮುಟ್ಟಲೊಡಂ ಸತಿಗೆ ಗರ್ಭವಾಗರ್ಭದೊಳುಂ
ಪೆಟ್ಟುಗೆಗೆ ಪೇಳ್ದ ಮಾತು
ಪೊಟ್ಟೆಯ ಶಿಶು ಕೇಳ್ದುದೆಂಬುದಿದು ವಿಪರೀತಂ.

ವಚನ.

1566. ಅದಲ್ಲದೆಯುಂ ಬರದ ಸುದ್ದಿಯ ಕೇಳ್ದುಂ ಅಂಜಿ ಪಂನೆರಡು ವರುಷ ಅಂನಬರಂ ಪೊಟ್ಟೆಯುಂ ಪೊರಮಡದ್ ಇರ್ದೆನ್ ಎಂಬುದಂ; ಪೊರಮಡುವಾಗಳ್ತಾಯ ಬಾಯಿಂ ಪೊರಮಟ್ಟೆನ್ ಎಂಬುದಂ ; ತತ್ಕ್ಷಣದೊಳೆ ತಾಯಿತಲೆಯುಂ ಪಿಡಿದು ಊಣಲ್ ಬೇಡಿದೆ ಎಂಬುದಂ; ಮತ್ತಂ ತಾ ಮಗನಾಗಿ ತಾಯಿ ಕನ್ಯೆಯಾಗಿರ್ದಳ್ ಎಂಬುದಂ;

ವಿರುದ್ಧಂ ಅಪ್ಪ ಪುಶಿ ಯಲ್ಲದೆ, ಸತ್ಯಮಲ್ಲ ಎಂದುಪೇೞೆ, ನಿಂಮ ಮತದೊಳ್ ಇಂತಪ್ಪ ಪುಶಿ ಇಲ್ಲಿವೆ? ಪೇೞಿಂ! ಎನೆ, ಯವರ್ ಇಂತ್ ಅಪ್ಪ ಪುಶಿ ಯುಂಮ ಮತದೊಳ್ ಉಳ್ಳಡೆ, ಪೇೞ! ಎನೆ, ಮನೋವೇಗಂ ಪೇೞಲ್ ನೆಗೞ್ದಂ.

ಕಂದ.

1567. ಕ್ಷಿತಿಗೆಸವಯೋಧ್ಯಾಪುರದ

c. Application of the story: ತೃತಯುರಥನೆಂಬ ನೃಪನ ತನೂಜೆಯರೀರ್ವ
ರ್ಚತುರೆಯರು ಶುದ್ಧನಿರುತಂ
ಸತತಂ ಮಿಂದೊಂದೆ ತಾಣದೊಳ್ಪವಡಿಸಲುಂ,

1568. ಓರ್ವಳೋರ್ವಳನು ಸೊಂಕಿಂ

aa. miraculous birth of Bhagiratha. ದೋರ್ವಳಿಗೆ ಸಮಂತು ಗರ್ಭಮುದಯಿಸಿ ಲೋಕ
ಕ್ಕೋರ್ವನೆ ಸದ್ಭಟನೆನಿಸಿದ
ದೋರ್ವಳನಪ್ರತಿಮನಪ ಭಗೀರಥನೊಗೆದಂ.[1]

.1 ತೋೞಿನ ಬಲವುಳ್ಳವನು.

1569. ಅತಿಶಯ ಶೌರಿಪುರಕ್ಕಧಿ
ಪತಿಯುಂಧಕವೃಷ್ಟಿ ಯುಂಬನಾತನ ತಂಮಂ
ಕ್ಷಿತಿಪತಿವೃಷ್ಟಿಯು ಯಾತನ
ಸುತೆ ಗಾಂಧಾರಿ ಯುಂಬೆಂಬ ಕನ್ಯಾರತ್ನಂ;

1570. ಆಸುದತಿಗೆ ಪತಿಯಾದಂ

bb. birth of the Kaurava princes ಬಾಸುತವರಹಸ್ತಿನಾಪುರಾಧೀಶಂ, ತಾ

by magic power.

ರೇಶಕು[1]ಲೇಶಂ, ಭವಗುಣ[2]
ಕೋಶಂ ; ಧೃತರಾಷ್ಟ್ರನೆಂಬವಂ ಪುಟ್ಟುಗುರುಡಂ.

1. ನಕ್ಷತ್ರಗಳಿಗೆ ಒಡೆಯನು=ಚಂದ್ರ. ಚಂದ್ರಕುಲದ ಮುಖ್ಯನು. 2. ಪಾಪಗುಣಕ್ಕೆ ಕೋಶವಾದವನು

ಚವನ.

1571. ಅಂತು ಅವರ್ ಈರ್ವರ್ಗೆ ನೂರ್ವರ್ ಕುಮಾರರ್ ಇರ್ದರ್ ಎಂಬುದು ನಿಂಮ ಮತದೊಳುಂಟೋ? ಇಲ್ಲೋ? ಪೇಳಿಂ! ಎನೆ, ಯುವರ್ ಉಂಟು ಎನೆ, ಯಾವಡ್ ಅಸ್ತ್ರೀಸೊಂಕಿಂ ಮಂ[1]ತ್ರದಿಂ ಗರ್ಭವಾಗಲಕ್ಕು ಗಡ! ಎಂಮ ತಂದೆಯ ಸೊಂಕಿಂದಾ ಎಂಮ ಜನನಿಗೆ ಗರ್ಭವಾಗಲಾಗದೆ? ಪೇಳ್ದಂ! ಎನೆ, ಗರ್ಭವಾವರ್ ಆಗಲಿ! ಯಾಪೊಟ್ಟೆಯ ಶಿಶು ಮಾತಂ ಕೇಳ್ದು, ಇದು ನಂಮ ಮತಪುರಾಣದೊಳ್ ಇಲ್ಲ ; ಈಪುಶಿ ಯುಂಟಾವಡಂ, ಪೇಳಿಂ! ಎನೆ, ಮನೋವೇಗಂ ಪೇಳಲ್ ನೆಗಳ್ದಂ.

1. ಧೃರಾಷ್ಟ್ರನಿಗೆ ಮಂತ್ರದಿಂದ ಮಕ್ಕಳು ಹುಟ್ಟಿದರು.

ಕಂದ.

1572. ದ್ವಾರಾವತಿಯಧಿನಾಥಂ
ನಾರಾಯಣನಾತನನುಜೆ ಯಪ್ಪ ಸುಭದ್ರಾ
ನಾರಿಯನೊಲವಿಂದರ್ಜುನ
ವೀರಂಗೀಯ್ವಲ್ಕೆ, ಮದುವೆಯಾಗಿರುತಿರ್ದಂ.

cc. birth of Abhimanju.

1573. ಅಂತಿರೆ, ಕೆಲವು ದಿವಸಕ್ಕೆ
ಕಾಂತೆಗೆ ಬಸುರಾಗಿ, ತೀವಿ ನವಮಾಸಂ ನಿ
ಶ್ಚಿಂತಂ ಬೆಸಲಾಗಲು, ಶ್ರೀ
ಕಾಂತಂ ತಂನಾಲಯಕ್ಕೆ ಕರಿಸಿದನಾಗಳ್.

ಮಹಾಸ್ರಗ್ಧರ ವೃತ್ತ.

1574. ಬೆಸಲಾಗಲ್ಕೆಂದು ಬಂದಿರ್ದನುಜೆಗೆ ಯೊಲವಿಂದೊಂದಿರುಳ್ಕೇಶವಂ [ಸಂ
ಬೆಸಿ ಚಕ್ರವ್ಯೂಹವೃತ್ತಾಂತಮನೊರೆಯಲದಂ ಕೇಳುತಾಕಾಂತೆ [ನಿದ್ರಾ
ವಶದಿಂ ಕಣ್ಮುಚ್ಚಿ ಚಿತ್ತಂ ಮರದಿರೆ, ಯರಿದಾಪೊಟ್ಟೆಯೊಳ್ಕೂಸೂ [ಹೂ ! ಯಂ
ದುಸರಲ್ಕಂ, ಶಂಕೆ ಗೊಂಡೀಸುದತಿಯುದರದೊಳ್ಪುಟ್ಟುಗುಂ ದೈ [ತ್ಯಂ, ಎಂದಂ.

ಕಂದ.

1575. ಎನಲಭಿಮನ್ಯುಕುಮಾರಂ
ಜನಿಸಿದನೆಂದೆಂಬುದುಂಟೆ ? ಪೇಳೆನಲವರುಂ
ಟೆನಲಾದಡೆ ನಾವೆಂಮ ಜ
ನನಿಯುದರದಿ ಕೇಳ್ದೆವೆಂದು ಪೇಳ್ವುದುಪುಸಿಯೋ ?

ವಚನ.

1576. ಎಂಬುದು, ಪೊಟ್ಟೆಯೊಳ್ ಇರ್ದು ಕೇಳಲ್ ಅಕ್ಕು ; ನವಮಾಸಂ ತೀವಿ ಬಳಿಕ್ ಆಪೊಟ್ಟೆಯೊಳ್ ಪಂನೆರಡು ವರುಷಂ ಇರ್ದನ್ ಎಂಬುದು ಯಂತ್ ಅಕ್ಕುಂ ? ಎನೆ, ಇದು ನಿಂಮ ಮತಪುರಾಣದೊಳುಂಟೋ ? ಯಿಲ್ಲೋ ? ಪೇಳಿಂ ! ಎನೆ, ಈಪುಸಿ ನಂಮ ಪುರಾಣದೊಳ್ ಇಲ್ಲಾ ; ನೀಂ ಅರಿದಡೆ, ಪೇಳಿ ! ಎನೆ, ಮನೋವೇಗಂ ಪೇಳ್ದಂ

ಚಂಪಕಮಾಲಾ ವೃತ್ತ.

1577. ಅನುಪಮಮಪ್ಪ ಪೇರಡವಿಯೊಳ್ಮಯನೆಂಬ ತಪಸ್ವಿ ಯೊಂದಿರು
id. birth of Indrajitu from Ravana.
ಳ್ಕನಸಿನೊಳಿಂದ್ರಿಯಂ ಚಲಿಸಿ ಕೌಪದೊಳುಂ ಕೆಡೆ, ಪೋಗಿ ತಾ ಸ
ರಸ್ಸಿನೊಳೊಗೆದೊಂದು ಪಂಕಜದೊಳಾಗಲದೊಯ್ಯನೆ ಹಿಂಡಲಲ್ಲಿ
ನೆಟ್ಟನೆ ಪೊಳೆವುತ್ತಿರಲ್ಕೆ, ಪರಿದಲ್ಲಿಗೆ ಬಂದುವದೊಂದು ಮಂಡುಕಂ.

ವಚನ.

1578. ಅಂತು ಬಂದ್ ಇಂದ್ರಿಯಂ ಕಂಡು ನುಂಗೆ, ಗರ್ಭೋತ್ಪತ್ತಿಯಾಗಿ
ಪೆಣ್ಗೂಸಂ ಪೆತ್ತು ಮೊಗಮಂ ನೋಡಿ ನೀ ಮನುಷ್ಯಳಾದಿ; ನಿ
ಮಗ್ ಎಮಗೆ ಸಂಮಂಧಂ ಇಲ್ಲೆಂದು ಕಮಳ ಕರ್ನಿಕೆಮಧ್ಯದೊ
ಳ್ ಇರಿಸಿ ಪೋಗಲ್; ಆಶಿಶುಂ ಆರನಂ ಕಾಣದೆ ದೆಶೆದೆಶೆಗೆ ನೋ
ಳ್ಪಾಗಂ;

ಕಂದ.

1579. ಮುನಿಪತಿ ಬರೆ, ಸಂಧ್ಯಾವಂ
ದನೆಗಲ್ಲಿಗೆ, ಕಮಲಮಧ್ಯದೊಳು ಶಿಶುವಿರೆ, ನೆ
ಟ್ಟನೆ ದಿವ್ಯಜ್ಞಾನದಿಂ ನಿಜ
ತನುಜೆಯುಳೆಂದರಿದು ತಂನ ಮನೆಗೈದಾಗಳ್;

1580. ಪರಿಕಿಸಿ, ಯುವಳ್ಗೆ ಮಂಡೋ
ದರಿ ಯುಂಬ ಪೆಸರನಿಟ್ಟು ಸಲಹಲ್ಕೆ, ನೆರದುಂ
ತರುಣಿ ಯೊಂದಿನ ಮುನಿಯುದಿಂ
ದರಕೌಪೀನವನಿಟ್ಟು ಮಿಾವವಸರದೊಳ್

1581. ರುಂದ್ರವೈದಿ ನೆನೆದುಂ ನೆರೆ
ಯಿಂದ್ರಿಯು ವಳುದರಂ ಬೊಕ್ಕು ಗರ್ಭವಾಗೆ; ಭರ
ದಿಂದವಳುವರವನಾಗ ಮು
ನೀಂದ್ರನೀಕ್ಷಿಸಿ ಭೂನುತಜ್ಞಾನದಿಂದರಿದಂ.

ವಚನ.

1582. ಅಂತ್ ಅರಿದು ಗಂಡಂ ಅದಲ್ಲದೆ, ಗರ್ಭ ಸತಿಗ್ ಬಪ್ಪುದು, ಯೆಂದು ಗರ್ಭಮಂ ತಂಬಿಸಲ್, ಏಳು ನೂರು ವರುಷ್ ಅಂನಬರಂ ಇರಲ್; ಅತ್ತಲ್ ಲಂಕೆಯೊಳ್ ರಾವಣಂ ಪುಟ್ಟಿ ಬೆಳದು ರಾಜನಾಗ್ ಬಂದು ದಿನ ವಿಹಾರದ ನಿಮಿತ್ಯ ಕಾನನದೊಳು ತೊಳಲುತ್ತ ಬಂದ್ ಆ ಮುನಿಯಾಶ್ರಮಮಂ ಪೊರ್ದಿಯಲ್ ಇರ್ದ ಕಂನಿಕೆಯಂ ಕಂಡು ಸೋಲ್ತು ಮುನಿಪತಿಯು ಬೇಡಲ್, ಆಮುನಿ ಯಾತಂಗೆ ಕೊಡೆ, ಶುಭದಿನಮೂಹೂರ್ತದೊಳು ಮದುವೆಯಾಗಿ ಕಳುಹಿಸಿಕೊಂಡು ಸತಿವೆರಸಿ ಲಂಕಾಪುರಮಂ ಪೊಕ್ಕು ಸುಖದಿಂ ಇರಲ್, ಅಂದು ಸ್ತಂಬಿಸಿದ ಗರ್ಭವು ಕ್ರಮದಿಂ ಬೆಳದು ಪ್ರಸೂತೆಯಾಗಲ್, ಇಂದ್ರಜಿತ್ತು ಪುಟ್ಟಿದಂ ಎಂಬುದು ನಿಂಮ ಮತದೊಳ್ ಉಂಟೊ? ಇಲ್ಲವೋ? ಪೇಳಿಂ! ಎನಲ್, ಅವರ್: ವುಂಟ್ ಎನೆ, ಯಾದಡ್ ಆತ ತಂನ ತಾಯಿಗರ್ಭದೊಳು ಯೇಳು ನೂರು ವರುಷ್ ಅಂನಬರಂ ಇರಲಕ್ಕು ಗಡ! ನಾಂ ಎಂಮ ತಾಯಿಗರ್ಭದೊಳು ಪಂನೆರಡು ವರುಷಂ ಇರ್ದೆವ್, ಎಂದಡ್, ಅದ್ ಯಾಕೆ ಪುಸಿಯಂಬಿರಿ? ಯನೆ, ಯೇನಾದಡ್ ಆಗಲಿ! ಪುಟ್ಟಿದಾಗಲ್, ಉಣಲಿಕ್ಕು ಎಂದುದು; ಬಾಯೊಳು ಪುಟ್ಟಿದೆವ್ ಎಂಬುದು; ಬಹುಚೋದ್ಯಂ; ಇದ್ ಇಂತ್ ಅಕ್ಕುಂ? ಎನೆ, ಇದು ನಿಂಮ ಮತದೊಳ್ ಇಲ್ಲವೆ? ಪೇ

ಳಂ ! ಎನೆ, ಇಂತಪ್ಪ ಸಟೆ ಯುಂಮ ಮತದೊಳ್ಇಲ್ಲ ; ನೀಂ ಅರಿ
ವಡೆ, ಪೇಳಿಂ ! ಎನೆ, ಮನೋವೇಗಂ ಪೇಳ್ದಂ.

ಮತ್ತೇಭವಿಕ್ರೀಡಿತ ವೃತ್ತ.

1583. ನಿರವದ್ಯಂ ಜಗದೊಳ್ಪರಾಶರಮುನೀಶಂ ಗಂಗೆಯಂ ಪಾಯ್ದುನಿ
ರ್ಭರದಿಂದಾತಡೆಗೈವಲಂಬಿಗರನೆಲ್ಲುಂ ಕಾಣದಾಲೋಕಿಸು
ತ್ತಿರಲೋರ್ವಣಂಬಿಗಪುತ್ರಿಕಂನಿಕೆ ಯಿರಲ್ಕಂಡಾಕೆಯಂ ಬೇಗದಿಂ
ಕರದಾನಾವಿಗೆ ಪುಟ್ಟನಿಕ್ಕುವದೆನಲ್ಕಾಕೆಂದಳಾಶಂಕೆಯಿಂ.

ee. birth of Vyása, from Parashara and a fisherwoman.

ಕಂದ.

1584. ದೇವರುಷಿ ! ನೀ ವಿಚಾರಿಸೆ,
ನಾವೆಯು ನಾ ನಿಂಮ ಸರಿಯೊಳೇರಲ್ಬಹುದೆ ?
ದೇವ ! ಕುಲಹೀನೆ ಯಾನೆನೆ,
ನಾವೆಯೊಳ್ಲಿಲ್ಲದೋಷನಂಜದಿರೆಂದಂ.

1585. ಎನಲಂಜದವಳು ನಾವೆಯು
ಮುನಿಪತಿಯೊಡನೇರಿ ಹುಟ್ಟನಿಕ್ಕುತ್ತಿರೆ, ಯೋ
ಜನಗಂಧಿ ಯುಂಬಳಿಗಾಗ
ಮನಸಂದಂ ನದಿಯ ಮಧ್ಯದೊಳ್ಮುನಿನಾಥಂ.

1586. ಎಂನೊಡನೆ ಕೂಡು ನೀನೆಲೆ
ಕನ್ಯ ! ಯನಲ್ಯನ್ನ ಮೈಯ್ಯ ದುರ್ಗಂಧದ ನಾ
ತಂ ನಿಲ ಬಾರವದಂ ಕೆಳೆ !
ನಿಂನೊಳ್ಕೆರೆವೆಸಿಲ್ಲಿದಿರ್ದಡೆ, ನೆರೆಯೆಂ ನಾಂ

1587. ಎಂದಡೆ, ಕಳದಂ ತತ್ಕ್ಷಣ
ದಿಂದಂ ದುರ್ಗಂಧಮು ; ಸುಗಂಧಮುಂ ತನುವಿಂ
ದೊಂದಿರ್ಪಂತಿರೆ ಮಾಡಿದ
ನಂದಿಂದ ಸುಗಂಧೆ ಯಂಬ ಪೆಸರಂ ಪಡೆದಳ್.

ವಚನ.

1588. ಅಂತ್ ಆಕೆಯೊಳ್ ಕೂಡಲ್ ಉಜ್ಜುಗಂಗೈಯ್ಯಲ್, ಆಕನ್ಯ ಇಕ್ಕೆ
ಲದತೀರಂ ಬಿಡದೆ ನೋಡುವ ಜನಗಳ್ ಕಂಡಡ್, ಅಪವಾದ ಬಕ್ಕು
ಲಜ್ಜೆಯಕ್ಕು ; ಇದಕ್ ಉಪಾಯಮಂ ಮಾಡಿಂ ! ಎನೆ, ಯದಕ್ಕೆ
ವಿಭೂತಿಯಂ ಅಭಿಮಂತ್ರಿಸಿ ತಳಿದು ಮತ್ ಓರ್ವರ್ ಪರಿಕಿಸದಂತೆ,
ಮಾಡಲ್, ಆನಾವೆ ನಿಲ್ಲುವದಕ್ ಉಪಾಯಮಂ ಮಾಡಿ ! ಎನೆ, ಬ
ಳಿಕ್ಕಂ

ಕಂದ.

1589. ಅಲ್ಲಿಯೆ ಕುರುವಂ ಮಾಡಿಯೆ,
ನಿಲ್ಲಿಸಿ ನಾವೆಯನವಳಂ ಕೂಡಿದಂ ; ಬಳಿ
ಕ್ಕಲ್ಲಿಂದಾತಡೆಗೈದ
ಲ್ಲಲ್ಲಲಿತಜಡೆಕೈಪಸಹಿತೊಗದಂ ವ್ಯಾಸಂ.

ವಚನ.

1590. ಅಂತು ಜನಿಸಿದ್ ಆಕ್ಷಣದೊಳೆ ಪರಿದ್ ಐದೆ ಬೊಪ್ಪ ! ನಾಂ ಎಂ
ತು ಬದುಕುವೆಂ ? ಬೆಸಸುಂ ? ಎಂದಡ್, ಎಂನಂತೆ ತಾಪಸನಾಗಿ
ರುಂ ! ಎನುತ್ತೆ ಪೋದಂ ; ಇಂತ್ ಇದು ನಿಂಮ ಪುರಾಣಶಾಸ್ತ್ರ
ದೊಳ್ ಸಂತತಂ ಉಳ್ಳುದು, ಪುಶಿಯೆ ? ಪೇಳಿರ್ ! ಎನುತ್ತೆ, ಮನೋ
ವೇಗಂ ಕೇಳ್ದಂ ಅದಲ್ಲದೆಯುಂ

ಕಂದ.

1591. ಕುಂತಿ ಗಡಾದಿತ್ಯಂಗಂ

ff. birth of Karna from the ear of Kunti. ದುಂ ತಜೆಯುದೆ ಪಡಮು ಕರ್ಣನನಾಕೆ[1] ಕನ್ನಿಕೆ

ಎಂತೆಂಬಮು ಪುಶಿಯಲ್ಲವೆ ?

ಯಿಂತುಟು ಮುಂನೊಂದು ಕಥೆ; ಯುದಂ ಕೇಳೆಂದಂ.

1. ಕರ್ಣದಿಂದ ಹುಟ್ಟಿದವನು.

ವಚನ.

1592. ಅದ್ ಎಂತ್ ಎಂತಡ್, ವೃದ್ಧಾಲಕಂ ಎಂಬ ರುಷಿ ಯೊಂದು ದಿನಂ

gg. birth of Trinabindu. ಗಂಗೆಯೊಳ್ ಸ್ನಾನಂ ಮಾಡಿ ಕೌಪೀನಮಂ ಪ್ರಕ್ಷಾಲಿಸಿ ಕಮಳ ಕರ್ನಿಕೆಯೊಳು ನಿಪ್ಪೀಡನಂ ಗೈಯ್ಯೆಲ್ ಆ ಕೌಪೀನಮಂ ಪರದ್ ಇಂದ್ರಿಯಂ ಕಮಳದೊಳ್ ಬೀಳಲ್, ಅಲ್ಲಿಗ್ ಓರ್ವಳ್ ಅಯೋಧ್ಯಾ ಪುರಪತಿಯಪ್ಪ ರಘುವಿನ ಮಗಳು ಚಂದ್ರಮತಿ ಯೆಂಬಳು ಬಂದು ಮಗಳ ಕರ್ನಿಕೆಯೊಳ್ ಇರ್ದ ಸುಕಲಮಂ ಕಂಡ್ ಅಘ್ರಾಣಿಸೆ, ಗರ್ಭಂ ಜನಯಿಸಿ ಮನಗೆ ಬರೆ, ಮಾತಾಪಿತರ್ ಕಂಡ್ ಎಲೆ ಮಗಳೆ! ನಿನಗ್ ಆವನಿಂ ಗರ್ಭ ಜನಯಿಸಿತೆ ? ಎನೆ, ನಾಂ ಅರಿಯೆಂ ; ಆರೊಳುಂ ಕೂಡಲಿಲ್ ; ಎನೆ, ವಿಸ್ಮಯಚಿತ್ತರಾಗ್ ಇರುತ್ತಿರೆ.

ಕಂದ.

1593. ನವಮಾಸಿಂ ತೀವಿತುಮಾ

ಗವಳುಂ ತೃಣಬಿಂದು ಯೆಂಬನಂ ಪಡೆ, ಜಾರೋ[1]

ದ್ಭವನಿವನೆನಲ್ಕೆ ಜನಮು

ತ್ತವ ಭಿಕ್ಷಕ್ಕೆ ಬಂದುಮುನಿಪತಿಯಂ ಕಂಡಂ.

1. ಸೂಳೆ ಮಗನೆಂದು ಜನರು ಅಂದದರಿಂದ ಅವನು ಭಿಕ್ಷಕ್ಕೆ ಹೋಗಿದ್ದನು.

ವಚನ.

1594. ಅಂತು ಕಂಡ್ ಉದ್ದಾಲಕಮುನೀಶ್ವರಂ ತನ್ನ ಮಗಂ ಎಂದ್ ಅರಿದು ರಘುಭೂಪನಲ್ಲಿಗೆ ಬಂದು ಕನ್ಯೆಯಂ ಬೇಡಿ ಮದುವೆ ಯಾದಂ ಎಂಬುದು ಇದು ನಿಮ್ಮ ಮತಪುರಾಣದೊೞ್ ಉಂಟೋ? ಇಲ್ಲೋ? ವೇೞ್! ಎನೆ, ಯವರ್ ಇದ್ ಉಂಟ್, ಎನೆ, ಯಾದಡ್ ಅವರು ಕನ್ನೆಯರ್ ಆಗಲಕ್ಕು, ಗಡ! ಯುಂಮ ತಾಯಿ ಕನ್ಯೆಯಾಕ್ ಆಗಳು? ಎನೆ, ಅನೇಕತೆರದಿಂದ ಹಿತವಚನದಿಂ ಉಪಮೆಯಂ ಕೊಟ್ಟು ದೃಷ್ಟಾಂತೋತ್ತರಂ ಪೇೞ್ದು ವಾದಂಗೆಲ್ದು ಜಯಪತ್ರಮಂ ಕೊಂಡು ವನಕ್ಕೆ ಬರೆ, ಇನಂ ಅಸ್ತಾಗ್ ಉದಯಿಸಲ್ ಆಗ.

THE POWER OF RAMA AND LAKSHMANA.

8. ರಾಮ ಲಕ್ಷ್ಮಣರ ಸಾಮರ್ಥ್ಯಂ (8ನೇ ಆಶ್ವಾಸ)

ಕಳಾಭಾಷಿಣಿ ವೃತ್ತ.

1595. ಮಿತ್ರನಃ ಕರೆದು ಬೌದ್ಧತಪೋಧನರಾಗಿ ಲೋ
ಕತ್ರಯಂ ಪೊಗೞೆ, ಸಂಭ್ರಮದಿಂದವೆ ಪಾಟಲೀ
ಪುತ್ರಪಟ್ಟಣದ ದಕ್ಷಿಣಗೋಪುರದುಂನತಂ
ಚಿತ್ರಮಪ್ಪ ಚತುರಾಸ್ಯನಿವಾಸನೈದಿದರ್.

The seventh meeting of these princes and the brahmans.

ಕಂದ.

1596. ಆನಿಳಯದೊಳೆ ಖಚರಮ
ಹೀನಾಥಂ ಪೊಕ್ಕುರೆ ಭೇರಿಯುಂ ಪೊಯ್ಯ್ಯ, ಯಾ
ಸ್ಥಾನದೊಳಿರೆ, ಈಭೇರಿಯ
ಧ್ವಾನಮಿದೇನೆಂದು ಬಂದರಲ್ಲಿಯ ವಿಪ್ರರ್.

ವಚನ.

1597. ಅಂತು ಬಂದ್ ಆನಿಳಯದೊಳಗಂ ಪೊಕ್ಕು ಸಿಂಹಾಸನದೊಳಗ್ ಇರ್ದ ಬೌದ್ಧರಂ ಕಂಡು, ನೀಂ ಯಾಕೆ ಭೇರಿಯಂ ಪೊಯ್ದು ಸಿಂಹಾಸನದೊಳು ಕುಳ್ಳಿರ್ದಿರೆ ? ಯೆಂದರೆ, ವಿನೋದದಿಂದೆ ಬಾರಿಸಿದಿವಿ ; ಮತ್ತಂ ಕುಳ್ಳಿರುವ ಸ್ಥಾನಂ ಎಂದು ಕುಳ್ಳಿರ್ದೆವು, ಎನೆ, ವಿದ್ವಾಂಸರಾದವರು ಪೊಯ್ದು ವಾದಂ ಗೆಲ್ದಲ್ಲದೆ ಈ ಸಿಂಹಾಸನದೊಳ್ ಕುಳ್ಳಿರ ಬಾರದ್ ! ಎನೆ, ಯಾದಡೆ ಮಾಣಲಿ ಎಂದು ಸಿಂಹಾಸನದಿಂ ಇಳಿದು ಕುಳ್ಳಿರೆಂ, ಇಂತ್ ಎಂದರು,

ಕಂದ.

1598. ಆರು ಗುರು ನಿಮಗೆ ? ತಪವೇಂ
ಕಾರಣವಿದೆಮಗೆ ತಿಳಿಯ ಪೇಳಿಮೆನೆ, ಬಿಚರೋ
ರ್ವೀರಮಣಂ[1] ನಗುತ್ತೆ, ನಮ
ಗಾರುಂ ಗುರುವಿಲ್ಲದಾದೆವೆನಲವರೆಂದರ್.

1. ಉರ್ವೀರಮಣ=ಅರಸ.

1599. ಗುರುವಿಲ್ಲದ ತಪಮುರ್ವೀ
ಶ್ವರನಿಲ್ಲದ ದೇಶಮಮೃತಕರನಿಲ್ಲದ ಶಾ
ರ್ವರಿ, ಜೀವನಿಲ್ಲದ ಪ್ರೊಲ್ದಮನ
ಕರಿ ಯಿಲ್ಲದ ಸೇನೆ ಯೊಪ್ಪಲಾರ್ಕುಮೆ ? ಜಗದೊಳ್ ?

ವಚನ.

1600. ಇಂತು ಗುರುವಿಲ್ಲದ್ ಆರುಂ ತಪಂ ಬಟ್ಟವರ್ ಇಲ್ಲ; ನಿಮಗ್ ಯಾಕೆ ಗುರುವಿಲ್ ಎಂಬುದಂ ಪೇಳಿ ! ಯೆನೆ, ನಾಂಪೇಳಲ್ ಅಂಜುವೆಂ ಎನೆ, ಅಂಜಲ್ ಯಾಕೆ ? ಪೇಳಿ ! ಎನೆ, ಕ್ಷೀರಕಥಾಕಾರುಕಂ ಅಂತ್ ಅವರ

ಉಣ್ಕಡೆ, ಅಂಜುವೆಂ ಎನೆ, ಆ ಕಥೆಯು ಎಂತ್ ಎಂದು ವಿಪ್ರರ್ ಕೇ
ಳೆ, ಮನೆ ಗೋವೇಗಂ ಪೇಳಲ್ ನೆಗಳ್ದಂ.

ಮತ್ತೇಭವಿಕ್ರೀಡಿತ ವೃತ್ತ.

1601. ಪರದಾಡಲ್ಪಲವಾಕಳ್ಗಂ ಕರೆವವಂ ತಾ ಬೈತ್ರದಿಂದೊಯ್ಯೆ, ಸಾ
ಗರಪತ್ತ್ರಂ ವರನಾರಿಕೇಳವಿಲಸದ್ವೀಪಕ್ಕೆ[1]; ಯಲ್ಲಿರ್ಪ ತೋ
ಮರನಾಥೇನುಗಳಂ ನಿರೀಕ್ಷಿಸಿಮಿವಂಮೇನಂಡಾವೀವವಾ
ಪರದಿಂ ಬೇಡೆ, ರಸಾಯನಂಗಳನೆನಲ್ತ್ರೋರೆಂತವಂ ನೋಡುವೇಂ.

a. The story of the foolish Tomara.

1. ಅನ್ವಯು: (ಬಬ್ಬನು) ತೆಂಗಿನ ಕಾಯಿಂದ ಶೋಭಿಸುವ ದ್ವೀಪಕ್ಕೆ ಆಕಳಂ ಕರೆವ
ವನ್ನು ವೈಯೆ 2. ಆವು, ಇವು ಕೊಡುವವು.

ವಚನ.

1602. ಕಂಪಿಸುವ ನೊರೆವಾಲಂ ಕೆನೆಮೊಸರಂ ಸದ್ಯೋಘೃತವಮಂ ತ
ಕ್ರಮುಂ ಮನಂ ಬಸದ್ ಉಣಲ್ ಇಕ್ಕಲ್ಕೆ, ನೆಟ್ಟನೆ ತೋಮರಂ
ಉಂಡು ದಣಿದು ಮತ್ ಇಂತ್ ಎಂದಂ.

ಕಂದ.

1603. ನಿನಗಾವನಾರಿತ್ತರ್ವೇ
ಳೆನಲೆಂಮಯು ಕುಲದೇವಿ ಯಿತ್ತಳೆಂದೆನಲಿವ
ನನಗೀವುದೆಂದು ಬೇಡಿದ
ಧನಮಂ ಕೊಟ್ಟಾಗಳೊಯ್ಯೆನಾಗೋವುಗಳಂ

ವಚನ.

1604. ಅಂತ್ ಬಯ್ದು ತನ್ನ ಮನೆಯೊಳ್ ಆವಂ ಇರಿಸಿ ಭೋಜನ ಸಮ
ಯದೊಳು ಭಾಂಡಮುಂ ತಂದು ತೋರಿ ರಸಾಯನಮುಂ ಕೊಡು
ಧೇನುವೆ! ಎಂದು ಬೇಡಲು, ಮೌನದಿಂ ಇರೆ, ಯುವಂ ಬಂದ್ ಎ

ರಡು ಮೂರು ದಿವಸಂ ಸಂಧಿಸಿ ಬೇಡೆ, ಉಸರದ್ ಇರೆ, ಯಾಗೋ
ವುಗಳ ನಿಂದಿಸಿ ಹಿಂದಕ್ಕೆ ಬಿಟೆ ಅಮರುಳನ್ ಅಂತವರ್ ನಿಮ್ಮ ಸ
ಭೆಯೊಳ್ ಉಳ್ಳಡೆ, ಪೇಳಲಂಮೆವ್ ಎನೆ, ಯಂತವರ್ ನಮ್ಮ ಸಭೆ
ಯೊಳ್ ಇಲ್ಲಂ, ಅಂಜದೆ ಪೇಳಂ ! ಎನೆ, ಮನೋವೇಗಂ ಪೇಳ್ದಂ.

ಕಂದ.

1605. ಕ್ಷಿತಿನುತಕರ್ಮಾಪುರದೊಳು
ಮತಿಬಂಧನನೆಂಬ ಸೆಟ್ಟಿ ಯಾತನ ಸುತರಾ
ವತಿ ಬೌದ್ಧಭಕ್ತೆನೆಂಮಯ
ಪಿತನೋದಿಪರಲ್ಲಿ ಬುದ್ಧತಾಪಸರೆಂಮಂ

b. Fictitious story of their life.

ಉತ್ಪಲಮಾಲಿಕಾ ವೃತ್ತ.

1606. ಬಂದು ದಿನಂ ಮುಗಿಲ್ಕವಿದಕಾಲದ ವೃಷ್ಟಿ ಸಮಗ್ರವಾಗಿ ಘೋ
ರೆಂದಿರುಳುಂ ಪಗಲ್ಸುರಿಯೆ, ಬೌದ್ಧಗೃಹಂ ನಿಲ ಬಾರದೆಂಡೆನಿ
ಪ್ಪಂಪದಿ ಸೋರಿ ನಾಣ್ದಿರೆ, ತಪೋಧನರೆಂಬರವಾರಿಸತ್ಕಿ ನಾ
ವೊಂದು ಮಹೀಧರಾಗ್ರಮುಮನೇರಿ ಯದಂ ಪಿರಿದಾರಿಸುತ್ತಿರಲ್ ;

1607. ಆಗಿರಿಯುಂ ಸೃಗಾಲಯುಗಳಂ ಪಿಡಿದೊಯ್ಯೆನೆ ಕಿತ್ತು ಪೋತ್ತವುಂ
ಬೇಗದಿ ಬಂಮ ಪಂನೆರಡು ಯೋಜನಮಂ ಕಳೆದೊಂದು ತಾಣದಿಂ
ಬಾಗಿರಲಿಪ್ಟೊಡಾಮುನಿಯ ಲಾಂಛನವಸ್ತ್ರಮನಾಂತು ಬೌದ್ಧರೂ
ಪಾಗಿ ದರಿದ್ರೆಯಿಂ ತಿರಗಿ ಬಂಡಿವಿದೆಂಮ ತಪಕ್ಕೆ ಕಾರಣಂ.

ವಚನ.

1608. ಎನೆ, ವಿಪ್ರರ್ ಇಂತ್ ಎಂದರು : ರಕ್ತಾಂಬರಧಾರಿಗಳಪ್ಪ ತಾಪಸರ
ಮಾತು ವಿಚಿತ್ರಂ ಅಪ್ಪ ಪುಶಿ ; ಜಂಬುಕಂಗಳ್ ಎರಡ್ ಬಂದಾಗಿ ಪ
ರ್ವತಮಂ ಕಿತ್ತು ಪೊತ್ತು ದ್ವಾದಶಯೋಜನಮಂ ಕೊಂಡು ಪೋಗ್

ಇರಿಸಿದವು ಎಂಬೊದು ಯೆಂತು ಘಟಿಸುವದು ? ಇಂತಪ್ಪ ಪ್ರತಿ
ಯಂ ಕಂಡು ಕೇಳ್ದುಂ ಅರಿದುದಿಲ್, ಎನೆ, ಇದು ನಿಮ್ಮ ಪುರಾಣ
ದೊಳ್ ಇಲ್ಲವೆ? ಪೇಳಿಂ ! ಎನೆ, ನಾಂ ಅರಿದುದಿಲ್ಲ; ನೀಂ ಅರಿಪಡೆ,
ಪೇಳಿಂ ಎನೆ, ಮನೋವೇಗಂ ಪೇಳಲ್ ನೆಗಳ್ದಂ,

ಕಂದ.

1609. ಸೀತೆಯನೊಯ್ಯೆ ದಶಾನನ
ನಾತನೊಳಾಂತು ರಣದೊಳ್ ಕಾದಿ ಗೆಲ್ದುಂ ಭೂ
ಜಾತೆಯ ತರಲಬ್ಧಿಗೆ ಚಿಂ
ತಾತುರನಾಗಿ ರಾಮು ನೆರೆ ಕಪಿನಾಯಕರಂ

c. Application of the story,

ವಚನ.

1610. ಕರೆದ್ ಅದ್ರಿಯಂ ತಂದು ಸೇತುವಂ ಕಟ್ಟಿ, ಕಟಕಂ ನಡೆವಂತೆ,
ಮಾಡು ! ಎನೆ, ಯವರು ಮಾಳ್ಪಂ ಅಬ್ಧಿಯಂ, ಎಂದು ಕಪಿವ್ರ
ಜಂ ಬೆಟ್ಟಗಳಂ ನೆರೆ ಕೀಳ್ತು ನೆತ್ತಿಯೊಳ್ ಸಂದಿಸಿ ಮೂರು
ನಾಲ್ಕಂ ಅಡಕಂ ಇಕ್ಕಿ ಆಗಿರಿಯಂ ಪೊತ್ತು ಬೇಗದಿಂ ತಂದು ಸ
ಮುದ್ರಮಂ ಸೇತುಗಟ್ಟಿದರ್ ಎಂಬುದು ನಿಂಮ ಶಾಸ್ತ್ರದೊಳ್ ಸಂ
ದ ಪುರಾಣದೊಳ್ ಪುದಿದಿಹುದು ; ಸತ್ಯಮೊ ? ಅಸತ್ಯಮೊ ? ಯದ್
ಎಲ್ಲಮಂ ಮನೋವೇಗಂ ಬೆಸಗೊಳೆ, ವಿಪ್ರರೆಲ್ಲಂ ಸತ್ಯಂ ಎನೆ,
ಯಾವಡ್ ಅಸತ್ಯಂಗಳ್ ಅಪ್ಪ ವಾನರಂಗಳು ಗಡ ! ಗಿರಿಗಳಂ ಕಿತ್
ಬಂದೆ ಪೊತ್ತು ಪಲವು ಯೋಜನಮಂ ತರಲಕ್ಕು, ಗಡಂ! ಇವುಂ
ವನಚರಂಗಳಂ[1] ಸತ್ವಮುಳ್ಳ ಜಂಬುಕಂಗಳ್ ಎರಡ್ ಬಂದಾಗಿ ಮಂ
ದೆ ಗಿರಿಯಂ ಪೊತ್ತು ತಂದವ್ ಎಂದಪ್, ಎಮ್ಮ ನುಡಿಯಂ ಪ್ರತಿ
ಮಾಳ್ಪರ್ ; ಎನೆ, ಯಾವಿಪ್ರರೆಲ್ಲರ್ ನಿರುತ್ತರರಾಗಿ ಇವರು ಕಾರ

Monkeys make a dridge for Rama,

1. ವನದಲ್ಲಿ ಆಡ್ಡಾಡುವಂಥಾವು=ಮಂಗ.

ಣಿಪುರುಷರ್ ಎಬ್ ಅರಿದು ನೀವು ಜಯವಾದಿಗಳ್ ಎಂದು ಜಯಪ
ತ್ರಮಂ ಕೊಡೆ, ತಾವೀರ್ವರುಂ ತಾವ್.ಇರ್ಪ ಉದ್ಯಾನಕ್ಕೆ ಬಂ
ದು ರಮ್ಯಕ್ಷೇತ್ರದೊಳ್ ಕುಳ್ಳಿರೆ, ಪವನವೇಗಂ ಇಂತ್ ಎಂದಂ.

ಉತ್ಪಲಮಾಲಿಕಾ ವೃತ್ತ.

1611. ಖೇಚರನಪ್ಪ ರಾವಣನು ಭೂಮಿಜೆಯಂ ತೆಗದೊಯ್ಯೆ ಲಂಕೆಗಾ
ಭೂಚರ[1]ರಾಮಲಕ್ಷ್ಮರು ರಾಜಿಪಯೋಧಿಗದೆಂತು ಪೊಯ್ದು ರಾ
ತ್ರೀಚರರಾಜಿಯುಂಗಣದೊಳೇ ತರಿದಿಕ್ಕುವರೆಂಬ ಭೇದಮಂ
ಸೂಚಿಪುದೆಂನೆ ಕೇಳೆಂಪಡರುಪಲ್ಬಗದಂ ಖಚರಾಧಿನಾಯಕಂ.

1. ಭೂಮಿಯ ಮೇಲೆ ಇರುವವರು=ಮನುಷ್ಯರು.

ಕಂದ.

1612. ಸತತಂ ಸೊಗಯಿಸುತಿಪ್ಪಂ
ರಥನೂಪುರಚಕ್ರವಾಳಪುರಧೀಶ್ವರ ವಿ
ದಿತಜಯ ಸಂಪೂರ್ಣಗುಣಾ
ನ್ವಿತಖ್ಯಾತನುಂನತನು ತೋಯದವಾಹಂ.

ವಚನ.

1613. ಅಂತ್ ಆತಂಗೆ ಭೀಮಂ ಎಂಬ ರಾಕ್ಷಸಂ ಚಿತ್ರಸೇನಂ ಎಂಬ ದೇ
ವಂ ಪೂರ್ವಭವಸ್ನೇಹಕಾರಣಂ ಲಂಕಾಪುರಕ್ ಬಯ್ದು ರಾಕ್ಷಸವಿ
ದ್ಯಮಂ ಅರುಪಿಸವಮುಖದ ಕಂಠಾಭರಣಮಂ ಕೊಟ್ಟುಂದಿಂದ
ತೋಯದಯನ ಕುಲರಾಕ್ಷಸಕುಲವಾದುದು ; ಆಕುಲದೊಳ್ ಅನೇ
ಕರು ಪುಟ್ಟಿ ರಾಜ್ಯಂಗೈದು ಪೋದ ಬಳಿಕಂ, ಧವಳಕೀರ್ತಿಯಂ
ಬವನ್ ಆಟೀರದೊಳ್ ರಾಜ್ಯಂ ಗೈಯುತ್ತಂ ಇರ್ದಂ ; ಇತ್ತಲ್

ವಿಜಯಾರ್ಧಪರ್ವತದ ದಕ್ಷಿಣಶ್ರೇಣಿಯೊಳು ಮೇಘಪುರಾಧಿಪಂ ಅ
ಲಿಂಪ್ರಂ ಎಂಬಂ; ಆತನ ಮಗಂ ಶ್ರೀಕಂಠಂ ಎಂಬಂ; ಆತನ ತಂಗಿ
ದೇವಿ ಯುಂಬಳ್; ಆಕೆಯಂ ಆಧವಳಕೀರ್ತಿ ಮದುವೆಯಾಗಿ ದೇವಿ
ಯಗ್ರಜನಪ್ಪ ಶ್ರೀಕಂಠಂಗೆ ವಾನರದ್ವೀಪಮಂ ಕೊಡೆ, ಯಾದ್ವೀ
ಪದೊಳ್ ಅರಸಾಗಿ ಯಿದ್ದ ಕಾರಣಂ, ಶ್ರೀಕಂಠನ ಕುಲ ವಾನರಂ
ಎಂದ್ ಆದುದು; ಆರಾವಣಂ ರಾಕ್ಷಸಕುಲದೊಳ್ ಪುಟ್ಟಿದಂ ಎಂಬರ್
ಆತಂ ಪಿಶಾಚನೇನಲ್ಲ; ಸುಗ್ರೀವ ಹನುಮಾದಿಗಳು ಶ್ರೀಕಂಠನಕು
ಲದೊಳ್ ಉದ್ಭವರಾಗಿ ವಾನರದ್ವೀಪದೊಳ್ ಇರ್ದರ್; ಅವರಿಂ ವಾ
ನರ್ ಎಂಬರು; ವಾನರರೇನಲ್ಲ; ಅವರ್ ಆಕಾಶಗಾಮಿವಿದ್ಯಭಾವ
ದಿಂ ಲಂಕೆ ಮೊದಲಾದ್ ಅನೇಕದ್ವೀಪಂಗಳಿಗೆ ಪೋಪ ಸಾಮರ್ಥ್ಯಂ
ಉಂಟು; ಸೇತುವಂ ಕಟ್ಟಲಿಲ್ಲ; ಸಂಮಂಧವಿಲ್ಲ ಎಂದು ಸ್ವಸಮ
ಯಪ್ರಸಿದ್ಧಮಹಾಪುರಾಣೋಕ್ತಿಯಿಂ ರಾಮಾಯಣದೊಳು ಸುರ
ವಾನರಕುಲೋತ್ಪತ್ತಿಯುಂ ತಿಳಿಯೆ, ಪೇಳ್ದು, ಮಿತ್ರನಂ ಸಂತುಷ್ಟ
ನಂ ಮಾಡಿ ಸುಖಸಂಕಥಾವಿನೋದದಿಂ ಇರಲ್, ಆಸಮಯದೊಳ್
ನೇಸರ್ ಪಡುವುದು; ನಿದ್ರಾಮುದ್ರಿತರಾಗಿ ಬೇಗದಿಂ ಬೆಳಗಾಗಿರೆ,

1. ಮೇರುಪರ್ವತ. 2. ಆಕಾಶದಲ್ಲಿ ಸಂಚರಿಸುವ ವಿದ್ಯೆ.

RAVANA JARASANDRA, &c.

9. ರಾವಣನ ಶಿರವರಿದು ಪತ್ತಿದ್ದು ಜರಾಸಂಧನೋತ್ಪತ್ತಿ
ವಾಲಿಯ ಸುತನ ಶಿರ ಪತ್ತಿರ್ದ ವರ್ಣನ. (9ನೇ ಅಧ್ಯಾಯ)

ಕಂದ.

1614. ವರಸಖಸಮೇತಶ್ವೇತಾಂ
The eighth meeting. ಬರವೇಷಧಾರಿಯಾಗಿ ಯಸವಸದಿಂದಲ

ಚ್ಚರಿ ಯನಿಸಿರ್ದ ಪಾಟಲೀ
ಪುರವರಕೈತಂದನಾಗಳಾಖಚರೇಂದ್ರಂ.

1615. ಆಪುರದಾಗ್ನೆಯ ಕೋಣೆಯ
ಗೋಪುರದಬ್ಜಭವನ ನಿವಾಸಮಂ ಪೊಕ್ಕಂ
ಭೂಪತಿ ದುಂದುಭಿಯಂಮಾ
ಟೋಪದಿಂ ಪೊಯ್ದಿಳದಂ ಮೃಗೇಂದ್ರಾಸನದೊಳ್.

ಉತ್ಪಲಮಾಲಿಕಾ ವೃತ್ತ.

1616. ಆಗಳಪೂರ್ವಡರ್ಚತುಳದುಂದುಭಿಯುಂನತಘೋಷವಷ್ಟದಿ
ಗ್ಭಾಗಮನೈದೆ ತೀವಿರಲು, ತತ್ಪುರವಿಪ್ರರು ಕೇಳ್ದು ವೇದಶಾ
ಸ್ತ್ರಾಗಮಕಾವ್ಯನಾಟಕವಿಚಕ್ಷಣರೆಂದೆನಿಸಿಪ್ಪರೆಲ್ಲರೊಂ
ದಾಗಿ ಯಿದೇನೆನುತ್ತೆ ತಣೆಯಲ್ಕಮಲಾ[1]ಸನಿವಾಸಕೈದಿದರ್.

1. ಕಮಲದ ಮೇಲೆ ಕೂತಿರುವವನು=ಬ್ರಹ್ಮ.

ವಚನ.

1617. ಅಂತ್ ಐತಂದು ಪೞಪೊಕ್ಕು ಶ್ವೇತಾಂಬರರಂ ಕಂಡು ನೀವ್ ಎ
ತ್ತಣಿಂ ಬಂದಿರಿ ? ಇಲ್ಲಿಯ ಭೇರಿಯಂ ಪೊಯ್ದು ಸಿಂಹಾಸನದೊ
ಳು ಕುಳ್ಳಿರ್ದಿರಿ ! ವಾದ್ವಿಂಸರಾದವರು ವಾದಾರ್ಥದಿಂ ಬಂದು ಭೇರಿ
ಯಂ ಪೊಯ್ದು ವಾದಂ ಗೆಲ್ದಲ್ಲದೆ ಸಿಂಹಾಸನದೊಳ್ ಕುಳ್ಳಿರ ಬಾ
ರದ್ ! ಎನೆ, ಯಾವಡೆ ಪಾಣಲಿ ! ಯೆಂದವರ್ ಇಳಿದು ಕುಳ್ಳಿರೆ,
ಮತ್ತೆ ಯಾವಿಪ್ರರು ನಿಮ್ಮ ಗುರುಸ್ ಆರು ? ನೀಸ್ ಏನು ಕಾರ
ಣ ತಪಂ ಗೊಂಡಿರ್ ? ಎನೆ, ಯಮಗ್ ಆರು ಗುರುವಿಲ್ಲ ; ಯೆಂ
ಮ ತಪದ ಕಾರಣಮಂ ಪೇಳ್ವಡೆ, ರಜಕಚಂದನ ಕಥೆಯುವರ್ ಉ

ಕ್ಕಡೆ, ಪೇೞಲಂವೆನ್, ಎನೆ, ಯಾಕಥೆ ಯಂತ್ ಎಂದು ವಿಪ್ರರ್ ಕೇ
ೞೆ, ಮನೋವೇಗಂಪೇೞ್ದಂ.

ಕಂದ.

1618. ಧರೆಗಧಿಕವೆನಿಪ್ಪುಜ್ಜೆನಿಯ
ಪುರದಧಿಪಂ ಶಾಂತನೆಂಬನಾತಂಗಾಹ
ಜ್ವರಮಾಗಿ ವೈದ್ಯರಾರುಂ
ಪರಿಹರಿಸದಿರಲ್ಕೆ, ನಿತ್ತರಿಸದಿಂತೆಂದಂ

a. Story of the stupid washerman.

1619. ಎಂನಯ ದೇಹಜ್ವರಮಂ
ಸಂನುತಮಾಗಲ್ಕೆ, ಬೇಗದಿ ಕಳೆದಡಾನುಂ
ಮುಂನಣೆಯ ಮಾಡ್ಯವರ್ಗ
ತ್ಯಂನತಪದವಿಯನನೂನಮಿರಲಾನೀವೆಂ.

ಕಳಾಭಾಷಿಣಿ ವೃತ್ತ.

1620. ಎಂದವಂಮುಡಗೆರಿಟ್ಟದ ಕೇಳ್ದು ವಣಿಗ್ವರಂ
ಬಂದು ತಾ ಕಳೆವೆನೆಂದುರೆ ಸೀತಳವಸ್ತುವಂ
ತಂದಪೆಂ, ನದಿಯ ತೀರದೊಳೀಕ್ಷಿಸಿ ಬೇಗದಿಂ
ದೆಂದು ಪೋದ ರಜಕವ್ರಜಮಿರ್ದೆಡೆಗಾಗಳುಂ.

ಕಂದ.

1621. ಆರಜಕನೋರ್ವ ಚಂದನ
ಭೂರುಹ[1] ಪ್ರವಾಹದಿ ಬಂದಾತೀರಮನೈಡಲ
ದಾರ್ಕೈಯ್ಯದೆ, ಕಾಷ್ಟವೆನು
ತ್ತೋರಂತೆ ಕಡಿವುತಲಿರ್ದನವನವಸರದೊಳ್.

1. ಭೂಮಿಯಿಂದ ಬೆಳೆಯುವಂಥಾದ್ದು = ಗಿಡ.

ಉತ್ಪಲಮಾಲಿಕಾ ವೃತ್ತ.

1622. ಅಲ್ಲಿಗೆ ಬಂದವಂ ಪರದನೀಕ್ಷಿಸಿ ಚಂದನವಪ್ಪುದೆಂದವಂ
ಮೆಲ್ಲನೆ ಚಿತ್ತದಿಂದರಿದು ನೀನಿದನಂ ಕಡುವಾಸಿ ಯಾಕೆ? ನೀ
ನೊಲ್ಲದಡೀವೆ ದೊಡ್ಡಪೊರೆಕಾಷ್ಟವ; ನೀನಿದಕಿನ್ನು ಚಿಂತೆಯಿಂ.
ತಲ್ಲಣವಾಗದೀವುದೆನೆ, ಯಾರಜಕಂ ಕೊಡೆ, ಕೊಂಡು ಬೇಗದಿಂ,

1. ಕಡೆಯುವ ಆಶೆ.

ಕಂದ.

1623. ಬಂದಾಪರದಂ ತೈದಾ
ಚಂದನಮಂ ನೃಪತಿಗಿತ್ತ ಜ್ವಲ್ಲಾಕ್ಷ್ವರ ತಾ
ನೊಂದೆ ನಿಮಿಷ ವರಿಯಲಿ
ಕಂಡಾತಂಗಿತ್ತನೊಲ್ದು ಬೇಡಿದ ಪದಮಂ.

ವಚನ.

1624. ಇಂತು ಪರೀಕ್ಷೆಯಂ ಅರಿಯದೆ, ಚಂದನಮಂ ಇಂಧನಂ ಎಂದು ಕಡಿವ ರಜಕರ್ ಅಂತು ಅವರ್ ನಿಂಮ ಸಭೆಯೊಳ್ ಉಳ್ಳಡೆ, ಪೇಳಲಂಮೆವ್, ಎನೆ, ಅಂತವರ್ ನಂಮ ಸಭೆಯೊಳ್ ಇಲ್ಲ; ಅಂಜದೆ ಪೇಳಿಂ! ಎನೆ, ಮನೋವೇಗಂ ಮತ್ತೆ ಮೂರ್ಖಚತುಷ್ಟಯದವರ್ ಉಳ್ಳಡೆ, ಪೇಳಲಂಮೆವ್, ಎನೆ, ಯಾಕಥೆ ಯಂತೆಂದು ವಿಪ್ರರ್ ಕೇಳೆ, ಮನೋವೇಗಂ ಪೇಳ್ದಂ.

b. Story of the four fools.

ಚಂಪಕಮಾಲಾ ವೃತ್ತ.

1625. ಬರುತಿರೆ, ಬಟ್ಟೆಯೋಳ್ಗುರುಗಳೋರ್ವರವರ್ಗಿದಿರಾಗಿ ನಾಲ್ವರ್ವೈ
ತರುತಿರಲೆಲ್ಲರೊಂಮಿಗೆ ನಮೊಸ್ತು! ಯೆನಲ್ಕೆ, ಸುಧರ್ಮವೃದ್ಧಿ
[ಯಂ

1. ನಮಃ ಇರಲಿ (ಸಂಸ್ಕೃತ).

ದಿರವವರೊಂದೆ ಸೂೞ್ಪರಸಿ ಪೋಗುತಿರಲ್ಕವರೆಂದರಿಂತಿವರ್
ಪೞಿಸಿದುದೊಂದೆ ; ಯಾಪರಕೆ ನಮ್ಮೊಳದಾರ್ಗದನಿಂತು ಪೇೞರೇ.

ಕಂದ.

1626. ಎಂದು ವಿಚಾರಿಸುತೆಲ್ಲ
ರ್ನಿಂದಿರ್ದುಂ, ಪರಕೆಯುಮಗೆ ತಮಗೆನುತಂ ಭೋ
ರೆಂದುಂ ಗುದ್ದ್ಯಾಡುತಲುಂ
ನಿಂದು ಬೞಿಕ್ಕೈದೆ ತಂಮೊಳು ತಾವಿಂತೆಂದರ್:

1627. ಆಗುರುಗಳು ಪೋಪಲ್ಲಿಗೆ
ಬೇಗಂ ಪರಿದೈದಿ ಕೇಳ್ವುದೀಪರಕೆಯಿ ನೀ
ವಾರ್ಗಿತ್ತಿರೆನುತ್ತಲ್ಲಿಗೆ
ಪೋಗಿ ಕೇಳೆ, ಮುನಿ ಇವರು ಮೂರ್ಖರೆಂದರಿದುಂ ;

1628. ನಾಲ್ವರೊಳೋರ್ವರ್ಗೆಂವಡೆ,
ತಾಳ್ವರ್ಮುನಿಸನು ಮೂವರುಮದರಿಂದಮಗಂ
ಸಲ್ವುದಲ್ಲಂ ; ಪೊಲ್ಲೆ ! ಯಂ
ದುಳ್ವ[1]ಾತ್ಮರಕ್ಷೋಪಾಯಮ ಮನದೊಳ್ಬಗದುಂ.

1. ಉಳಿವ.

ವಚನ.

1629. ಈ ನಾಲ್ವರೊಳತಿಮೂರ್ಖರಾದವರ್ಗೆ ಪರಕೆದೆವೆ, ಎಂದು ಮುನಿಪತಿ ಯತ್ತಲ್ ಪೋಗಲ್, ಆಚತುಷ್ಟಯಂ ಮಗುಳ್ದು ಬರುತ್ತಂ ಆಗಳ್ ಆಮೂರ್ಖ, ನಾ ಮೂರ್ಖಂ, ಎಂದು ವಾದಿಸಿ ಬಿರೋರ್ವರು ಕಾದುತ್ತ ಬರ್ಪ್ಪ ಎಡೆಯೊಳ್

ಕಂದ.

1630. ಪಿರಿಯಪಟ್ಟಣಮಂ ಪ್ರೊಕ್ಕು
ವರಸಭೆಯುಂ ಮೇಳೈಸಿ ನಾಲ್ವರೊಳಾರು ಮೂ
ರ್ಖರು ? ಪೇಳಿರಿ ನೀವೆನಲೆಂ
ದರು ನಿಂಮ ಮೂರ್ಖತೆಯ ಬೆಸಸಿ ಯನಲಿಂತೆಂದರ್.

ವಚನ.

1631. ಆನಾಲ್ವರೊಳಗೆ ಓರ್ವ ಸಭೆಗೆ ಯಭಿಮುಖವಾಗಿ ನಿಂದ್ ಇಂತ
ಎಂದಂ:

ಕಂದ.

1632. ಎನಗೀರ್ವರ್ಪೆಂಡಿರು ; ನಾ
ನನುವಶನಾಗಿರ್ಪೆನವರ್ಗುಚಿತಮ ಮುಂನಾ
ಮನಪೊಸೆದಿಬ್ಬರಿಗುಂ ನೆ
ಟ್ಟನೆ ಸಮನಾಗಿಯೆ ಮಾಡುತ್ತಿರಲೊಂದು ದಿನಂ.

ಶಾರ್ದೂಲವಿಕ್ರೀಡಿತ ವೃತ್ತ.

1633. ನಿದ್ರಾಮುದ್ರಿತನಾಗಿರಲ್ಕ್ರಮಭುಜದ್ವಂದ್ವಂಗಳೊಳ್ಕಾಂತೆಯ
ರ್ನಿದ್ರಾಸಕ್ತಿಯರಾಗಿರಲ್ಕುರಿವ್ರದೊಂದಂಬತ್ತಿಯಂಮಾಕು ತಾ
ನುದ್ರೇಕಂ ಬಡೆ, ಕಚ್ಚೆ ಪಾರಲದು ಬೀಳಲ್ಕೆಂನ ಮೇಲಾರಿಸ
ಲ್ನಿದ್ರಾಭಂಗಮವರ್ಗೆನುತ್ತೆ ಕರಮೆತ್ತಲ್ಬಿಟ್ಟೆ ; ಕಂಣ್ಸುಟ್ಟುದೂ.

ಕಂದ.

1634. ಅದರಿಂದ ಬಳಿಕೆನಗಾ
ಮದು, ಭಾವಿಸಿಡೆ, ಸುಡಗಂಣನೆಂದು ನಾಮಮಂ ;

ಸದಪಿಂದವಧರಿಸುವದಿಂ
ತಿದುವೊಂದ ಮೂರ್ಖತೆ ಯುಂದವಂ ಕೆಲದಗದಂ.

ವಚನ.

1635. ಅಂತು ಕೆಲದೆಗೆಯೆ, ಮತ್ತೊರ್ವ ಬಂದ್ ಇಂತ್ ಎಂದಂ: ಎನಗೆ ಕರಿದಿಭಿ ಯುಂಬರ್ ಈರ್ವರು ಪೆಂಡಿರುಂ; ಇರ್ಪ ಅವರ್ ನಿಚ್ಚಲ್ ಬಂದೊಂದು ಕಾಲಂ ಬರಸುವರ್; ಬಂದು ದಿನ ಕರಿ ಯುಂಬ ಕಿರಿಯವಲ್ಲಭೆ ಬಲಗಾಲಂ ಪೂಸುತಿರ್ದು ಬಿಸಿನೀರಂ ತರಲ್ ಪೋಗೆ, ದಿಭಿ ಯುಂಬ ಕಿರಿಯವಲ್ಲಭೆ ಯಡಗಾಲಂ ಪೂಸುತಿರ್ದು ಕರಿ ಯೊರಸಿದ ಬಲದ ಕಾಲ ಮೇಲೆ ಇರಿಸಿ ತಾನುಂ ಬಿಸಿನೀರಂ ತರಲ್ ಪೋಗಲ್, ಆಕರಿ ಬಿಸಿನೀರಂ ತಂದು ನೋಡಿ ಯಾನ್ ಬರಸಿದ ಕಾಲ ಮೇಲೆ ತಾನ್ ಬರಸಿದ ಕಾಲಂ ಇರಿಸಿದಳ್ ಎಂದು ಕೋಪಿಸಿ ವನಿಕೆಯಿಂ ಆಕಾಲಂ ಮುರಿದಳು; ಆದಿಭಿ ಪಿಂತನೆ ಬಂದು ಆನ್ ಬರಸಿದ ಕಾಲ ಮುರಿದಳು, ಅವಳ್ ಬರಸಿದ ಕಾಲ ಮುರಿವೆನ್ ಎಂದು ವನಿಕೆಯುಂ ತಂದು ಪೊಯ್ದು ಮುರಿದಳ್; ಅದರಿಂ ಪಿಂಜಂ ಎಂಬ ಪೆಸರಾದುದು; ಇದ್ ಎಂನ ಮೂರ್ಖತ್ವಂ ಎಂದು ಬಿಂನವಿಸಿ ಕೆಲಸಕ್ಕೆ ಸಾರೆ, ಮತ್ತೊರ್ವಂ ಬಂದ್ ಎಂನ ಬಿಂನಪವಂ ಅವಧರಿಪುದ್ ಎಂದಂ.

ಚಂಪಕಮಾಲಾ ವೃತ್ತ.

1636. ಪರಿಕಿಸೆ, ಪೆಂಡಿರೀರ್ವರೆನಗಂತವರೊಳ್ಪುಪಿಗೊಪ್ಪುಯಿಂ ನಗುತ್ತಿರೆ, ಋಪರೆಂದರರ್ಕನುದಯುಂ ಬರೆಗಂ, ಸತಿ ಮೌನದಿಂದ ದಾರಿರವಡೆ, ಪನೆರಡ್ಪಡಿಯ ಮುಂಡಿಗೆ, ಪೊಂಮನತುಪ್ಪ ಕೆಂನೆವಾಲ್ವೆರಸಿನಿತುಂ ತೆರುಂಗುವೆನಲಾಗಲು ಮೌನದೊಳಿರ್ದ್ದವೆಲ್ಲರುಂ.

ಕಂದ.

1637. ಆಸಮಯದಲ್ಲಿ ತಸ್ಕರ
ವೋಸದಿ ಕಂನವನಿಕ್ಕಿ ಮನೆಯೊಳ್ಪೊಕ್ಕರೆ
ಸಾಸಿಗನಾವಿರ್ದುದ ಕಂ
ಡೋಸರಿಸದೆ ವಡವೆ ಯಲ್ಲವ ತೆವರಿ ಕೊಂಡಂ.

1638. ಅದರಿಂ ನಿಲ್ಲದೆ ತಣಿವಂ
ದದಿನುಂಡ ಪಂಚಭಕ್ಷಪಾಯಸವಟ್ಟಿರ್ದಂ
ನವಕಳುಪಿ, ಬಳಿಕಲ್ಲಿ ವ್ರ
ಟ್ಟಿದವಂ, ಪೆಂಡಗರ್ಗಳುಟ್ಟಿದಂ ಸುಲಕೊಂಡಂ.

1639. ಮಡದಿಯ ಹಚ್ಚಡವಂ ಸುಲ
ದ ಡೆನ್ನಯ ಕಿವಿಯ ಕೊಪ್ಪನೀಮೂಗುತೆಯಂ ಕೊ
ಳ್ವಡೆ, ನೋಯದಂತೆ, ತೆಗೆ ! ಯಂ
ದೊಡೆ, ಮೌನಗೆಟ್ಟಿಳಿವಳೆಂದು ನಾಂ ನೆರೆ ಕುಣಿದೆ.

ವಚನ.

1640. ಅಂತು ಸೋತಳ್ ಎಂದು ಪಂನೆರಡು ಪಡಿ ಮುಂಡಿಗೆ ಪ್ರೊಂಮಣ ತುಪ್ಪವಂ ಪಾಲು ಸಕ್ಕರೆಯಂ ತಂದ್ ಈಗಳೆ ಕೊಡಲ್ ಬೇಕೆಂದು ನಾ ಕುಣಿದಾಡಿದೆ ; ಪೋದ ಪೊಂನು ಭಂಗಾರವಂ ಈತೆರ ಕೆಡಿಸಿದೆ; ಈಬಗೆ ಎನ್ನ ಮೂರ್ಖತ್ವಮೆಂದು ಪೇಳ್ದಾತಂ ಕೆಲಕ್ಕೆ ಸಾರೆ, ಮತ್ತೊರ್ವ ಕನ್ನೆಯ ಮೂರ್ಖತ್ವಮಂ ಪೇಳಲ್ ನೆಗಳ್ದಂ.

ಉತ್ಪಲಮಾಲಿಕಾ ವೃತ್ತ.

1641. ಎಂನ ಪಿತಂ ಮಹಾಪ್ರಭು ; ಸಮಾನಗುರುಸ್ತನ ಪುತ್ರಿಯೋರ್ವಳಂ
ಚಂನೆಯನೋಲ್ದು ತಂದೆನಗೆ ಲಗ್ನವಮಾಡಲು, ಯಾವಧೂಟಿ ತಾ

ತಂನಯ ತಾಯಿತಂದೆಯನಗಲ್ದಿರಲಾರದೆ, ಯವ್ವನಂಬರ
ಲ್ಸಂನುತವಪ್ಪಿನಿಂ, ಸತಿ ತವರ್ಮನೆಯೊಳ್ಪಲಕಾಲಮಿರ್ದಳುಂ.

ಕಂದ.

1642. ಅಂತಿರೆ, ಕೆಲವು ದಿನಕ್ಕಾ
ಕಾಂತೆಯಳನೊಡಗೊಂಡು ಬಪ್ಪೆನೆಂಬ ಬಗೆ ಯೋ
ರಂತೆಂನ ಮನದೊಳುದಯಿಸ
ಲುಂ, ತಾಯಿತಂದೆ ಪೋಗುವಾಗಲವರೆಂದರ್ :

ವಚನ

1643. ಎಲೆ ಮಗನೆ ! ನೀ ಬಹು ಅಶನಿ ; ಯದರೊಳ್ ಹಶಿಯುಳ್ಳ[1] ಐದ್ ಆರು ಸೂಳ್ ಉಂಡಲ್ಲದೆ ನಿಲಲಾರೆ ; ಬಿಯ್ಯಗರ ಮನೆಯುವರ್ ಇದಂ ಕಂಡರೆ, ಮರುಳಾಡುವರು ; ಅವರಿಂ ಕಿರಿದಾಗಿಯುಂ ಬಂದ್ ಉಣಲರಿಯೆ ; ಪಿರಿದುಂ ಪ್ರಾರ್ಥಿಸಿಕೊಂಬುದ್ ! ಎಂದು ಬುದ್ಧಿಯುಂ ಪೇಳಲ್, ಅಂತೆ ಗೈವೆನ್ ಎಂದು ಪೋಗಿಯಾತೆರದಿಂ ಅವರು ಪ್ರಾರ್ಥಿಸೆ, ಹಶಿವಿಲ್ಲೆಂದು ವುಣದೆ, ಪಸಿದರೆ, ಯಾಸಮಯದೊಳುಂ ನೇಸರ್ ಪಡವುದು ; ರಾತ್ರಿಯೊಳ್ ಉಣಲ್ ಎಬ್ಬಿಸಲ್ಕ, ಎನಗೆ ಪಶುವಿಲ್ಲಪ್, ನಾ ಪಶಿದಾಗಲ್, ಅಡಿಗಿಯಂ ಮಾಡಿ ಉಣಲ್ ಇಕ್ಕ್ ! ಎಂದ್ ಎನ್ನ ಪೆಂಡತಿಗೆ ಪೇಳೆ, ಕೊಟ್ಟ ಅಕ್ಕಿಯುಂ ನೀರ್ಪಡಿಸಿ ನಾ ಮಲಗಿರ್ದ ಮಂಚದ ಸಮೀಪದೊಳ್ ಇರಿಸಿ ಯಲ್ಲಾ ನಿದ್ರಾಸಕ್ತರಾಗಿ ತಂಮ ತಂಮ ಶಯನಸ್ಥಳಕ್ಕೆ ಪೋಗೆ.

1. ಹಸಿವು ವುಳ್ಳವನು.

ಚಂಪಕಮಾಲಾ ವೃತ್ತ.

1644. ಸತಿ ಸಹಿತಂಮಿರುಳ್ಪಿರಿದು ನಿದ್ರೆಯೊಳಿರ್ಪುದಯಕ್ಕೆ ಮುಂನಮಾ
ಸತಿ ಪೊರಮಟ್ಟು ಪೋಗೆ, ಪಶಿವಿಂ ನಿಲಲಾರದೆ, ಕಂಡು ತನ್ನಪೆಂ

ಪತಿ ಸಮವಾಗಿ ನೀರ್ಪಡಿಸಿದಳಿ ಇರಲ್ಪಕ್ಕಿವಿಂ ಬಳಿಕ್ಕಲಾ
ರ್ತತೆ ಪಿರಿದಾಗಿ ತೀವಿ ಕೊಳಲಾಗಳೆ ಕಾಂತೆ ಮಗುಳ್ದು ಬೇಗದಿಂ

1. ಬಾಯೊಳಗೆ ಹಾಕಿಕೊಂಡನು.

ಕಂದ.

1645. ಬಂದಾಕಿ ನುಡಿಸೆ, ಬಾಯ್ಬಿರಿ
ವಂಪದಿ ನೀರ್ಪಡಿಸಿದಕ್ಕಿ ತೀವಿರೆ, ನುಡಿಯುಂ
ಕುಂದಿರೆ, ಯಱ್ಱರಿ ಪಟ್ಟದೇ
ನೆಂದೆನ್ನ ಗಲ್ಲಮ ಬಾರಿಸಿ ನೋಡ್ದಳಾಗಳ್

ಕಳಾಭಾಷಿಣಿ ವೃತ್ತ.

1646 ಕೆಟ್ಟೆನೆಂಸ ಪತಿಗಾದುದು ರೋಗವೆನುತ್ತವ
ೞ್ಟಟ್ಟ ಚೀರಿ ವದರುತ್ತಳುವಾಗಲುಮೆಲ್ಲರುಂ
ತೊಟ್ಟನೆದ್ದು ಪರಿತಂಪವರೀಕ್ಷಿಸಿ ಬೇಗದಿಂ
ಪುಟ್ಟದೀರುಜೆಗೆ ತಕ್ಕನುವಾವುದು ? ಯೆಂದರುಂ.

ವಚನ.

1647. ಆಗಳ್ ನೇಸರ್ ಮೂಡಲುಂ ಹಲಸಿಗಂ ಓರ್ವಂ ವಾತಪಿತ್ತಶ್ಲೇಷ್ಮ
ಕ್ಕ ಎಲ್ಲವಕ್ಕೆ ಬಲ್ಲಂ; ಕಳವೆನೆಂದು ಕೇರಿಕೇರಿಯಂ ಸುತ್ತಿ ಬ
ರುತ್ತಿರೆ, ಕಂಡು ಕರದ್ ಆವೈದ್ಯಗೆ ತೋರೆ, ಕಂಡ್ ಆವೈದ್ಯಂ
ರೋಗವಲ್ಲೆಂದು ತಂನ ಮನದೊಳ್ ಅರಿದು ಇವಂ ಏನಾದರು ಮು
ಕ್ಕಿರ್ದ ಸಮಯದೊಳ್ ಅಲ್ಲಿ ಮನುಷ್ಯರ ಸುಳುವಂ ಕಂಡು ಬಾ
ಯಿ ಮುಚ್ಚಿದ; ಗಲ್ಲ ಬುಗುಟಾಯಿತು ಎಂದು ಪರೀಕ್ಷಿಸಿ ಮುಟ್ಟಿ
ನೋಡೆ, ತಂಡುಲಂ ಎಂದ್ ಅರಿದು ಈವ್ಯಾಧಿಗೆ ತಕ್ಕ ಔಷಧ ಕೊ

ಡಬೆ ಪೋದರೆ, ಸಾವುದ್ ಎನೆ, ಯಾಮನೆಯವರೆಲ್ಲರುಂ ನೂರು ಗದ್ಯಾಣ ಪೊಂನಂ ಅವನ್ ವಶಕೆ ಕೊಟ್ಟು ಪ್ರಾಣಮಂ ಕಾವುದು! ಎನೆ, ಹಾಗಾದರೆ ನೀವೆಲ್ಲರು ದೂರ ಪೋಗಿ ಸೆರಗುಬರಗು ಸೋಂಕಲು, ಕಷ್ಟ ಹಾಗೆಂದು ದೂರ ಮಾಡಿ ಶಸ್ತ್ರದಿಂ ಗಲ್ಲವಂ ಪಾಳಿಸಿ ಬ್ರಣಪೆಸರಕ್ಕಿ[1]ಯುಂ ತೆಗದು ಕತ್ತಿ ಯುಂದ್ ಎತ್ತಿ ತೋರಿ ಗುಪ್ತದಿಂ ಬಂದು ಕಂಬಳಿಯುಂ ಮುಚ್ಚಿದಡ್, ಆನು ತಂಡುಲಮಂ ಉಗುಳಿ ಕಳೆದೆನ್ ಅಂದಿಂದ ಎಲ್ಲರ್ ಎನಗೆ ಗಲ್ಲಪಾಟನೆಂದು ಪೆಸರಿಟ್ಟರು. ಇದ್ ಎಂನ ಮೂರ್ಖತ್ವಂ ಎಂದು ಪೇಳೆ, ಕೇಳ್ದು ಧರ್ಮಾಧಿಕರಣಂ ನೀವೆಲ್ಲ ಸಮಾನಮೂರ್ಖರ್; ಅಪರಕೆಯುಂ ಪಂಚಿ ಕೊಳ್ಳಿಂ ಎಂದು ಪೇಳ್ದರು; ಇಂತಪ್ಪವರ್, ಆರ್ ಆವದು, ನಿಂಮ ಸಭೆಯೊಳ್ ಉಳ್ಳಡೆ, ವಿಚಾರಿಸಿ ಪೇಳಿಂ! ಎನೆ, ಕೇಳಿ ವಿಪ್ರರೆಲ್ಲರ್ ಖದಖದಿಸಿ ನಗುತ್ ಇಂತಪ್ಪ ಮೂರ್ಖದುರ್ಜನರು ನಂಮ ಪಟ್ಟಣದೊಳ್ ಇಲ್ಲ; ನೀವ್ ಅಂಜದಲೆ ಪೇಳಿಂ! ಎನಲ್, ಆಗ ಖಗಕುಲತಿಲಕಂ ಇಂತ್ ಎಂದಂ: ಅದ್ ಎಂತ್ ಎಂದರೆ: ಗುಜ್ಜರದೇಶದೊಳ್ ವಂಶಗ್ರಾಮಂ ಎಂಬ ಪಟ್ಟಣದೊಳು ಶ್ವೇತ ಪಟನ್ವಯದಲ್ ಆವು ಗೌಡಂ

c. Fictitious story about their having become ascetics.

ಗಳ ಮಕ್ಕಳು; ನಾವು ಕುರಿಯ ಪರಿದಾಡಿಪಾವನದೊಳ್ ಪುಟ್ಟಿ ವಂಣಾದ ಬೆಳವಲಮರಸಂ ಕಂಡು ಮೆಲಲು ಬಯಸಿ ಮರಂ ಏರಲ್ ಅರಿಯದೆ, ಬಿಡಿಮಿಡಿಗೊಳುತ್ತಲ್ ಆಗ ಪೂರ್ವೋಕ್ತಮಂ ನೆನದೆವ್; ಅದ್ ಎಂತ್ ಎನೆ.

1. ಹುಂಣು ಎಂಬ ಹೆಸರುಳ್ಳ ಅಕ್ಕಿ.

ಇಂದ್ರವಜ್ರವೃತ್ತ.

1648. ಸರ್ವೌಷಧೀನಾಮಶನಂ ಪ್ರಧಾನಂ
ಸರ್ವೇಷು ಪಾನೇಷು ಜಲಂ ಪ್ರಧಾನಂ

ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ
ಸರ್ವೇಷು ಗಾತ್ರೇಷು ಶಿರಃ ಪ್ರಧಾನಂ.

ಟೀಕು: ಎಲ್ಲ ಔಷಧಿಗಳಲ್ಲಿ ಅಶನ ಮುಖ್ಯ ; ಎಲ್ಲ ಪಾನಗಳಲ್ಲಿ ನೀರು ಮುಖ್ಯ ; ಸರ್ವೇಂದ್ರಿಯಗಳಲ್ಲಿ ಕಣ್ಣು ಮುಖ್ಯ ; ಸರ್ವ ಅವಯವಗಳಲ್ಲಿ ತಲೆ ಮುಖ್ಯ.

ವಚನ.

1649. ಎಂಬ ನೀತಿಶಾಸ್ತ್ರವಂ ಅರಿವ್ ಆಹುವ್ ಎಂದು ಪಿಡಿದಿರ್ದ ಕತ್ತಿಯಿಂದ ಶಿರವರಿಯ ಕೊರಮ ಮೇಗಣ್ಗೆಡಲ್, ಆನಂದದಿಂ ತುದಿಗ್ ಅಡರ್ದ ಕೊಂಬಿಂದೆ ಕೊಂಬಿಂಗೆ ಪೊಯ್ದು ಜೇಗದಿಂ ಆಗಳ್ ;

ಮತ್ತೇಭವಿಕ್ರೀಡಿತ ವೃತ್ತ.

1650. ತನಿವಣ್ಣಂ, ಹಸಿವಾರುವಂತೆ, ಬಸುರಂ ಶೀವಳ್ಸಿರಂ ತಿಂದ ಭೋಂ
ಕನೆ ತಾವಾಗಿಳತಂದು ಭೂತಳದೊಳಿರ್ದೀಮುಂಡಮಂ ಪತ್ತೆ, ಮೆ
ಲ್ಲನೆ ಸಾವೆದ್ದು ಬರುತ್ತಲೆಂಮ ಕುರಿ ಯಲ್ಲಂ ಕೆಟ್ಟು ಪೋಗಲ್ಕೆ ಕಾ
ನನದೊಳ್ಕಡೆ ತೊಳಲ್ದು ನೋಡಿ ಯವನೊಂದಂ ಕಾಣದಾವೀ
[ರ್ದರುಂ.

ಕಂದ.

1651. ಮನೆ ಯತ್ತಂ ಪೋಗೆ, ಪಿತಂ
ಕನಲ್ದು ಮೊಂದಂಜಿ ಪಲವು ನಾಡಂ ಕಾದೊ
ಯ್ಯನೆ ಬಂದೆಪಿಸ್ತುರದ ಚೆ
ಲ್ವ ನೋಡುವದೆಂಬುದೆಂಮ ಬಗೆಯೊಳ್ಪುಟ್ಟಲೊಡಂ.

ವಚನ.

1652. ಬಂದೆವು ಯನಲ್, ಆದ್ವಿಜರ್ ಇದು ವಿಚಿತ್ರಂ ಎನೆ, ಯವರ್ಗೆ ಶ್ವೇತಾಂಬರರ್ ಇಂತ್ ಎಂದರ್ :

ಕಂದ.

1653. ನೀವಾಡಿದ ಪುಶಿ ಯಲ್ಲಂ
ಭಾವಿಸುವಡೆ, ಸತ್ಯಮೆಂಬಿರಿ ; ಯಾವಡೆಮಗಂ
ಚೋವಾಡುವಿರಿನಿತರೊಳಂ
ಗಾವುದು ಪುಶಿ ? ಪೇೞಿಮೊಂದಡವರಿಂತೆಂದರ್ :

1654. ಅರಿದೀಡಾಡಿದ ಮನುಜನ
ಶಿರಮುರ್ವೀರುಹಮನಡರಿ ತುದಿಗೊಂಬಿನಲ
ಜ್ಜರಿ ಯೆನಿಸುವ ತನಿವಣ್ಣಂ
ಪಿರಿದಾಗಿರೆ, ತಿಂದು ತಣಿದುದೆಂಬುದಿದು ಚಿತ್ರಂ !

ವಚನ.

1655. ಅದಲ್ಲದೆಯುಂ ನೆಲದೊಳ್ ಇರ್ದ ತಂಮ್ ಅಟ್ಟೆಗಳ ಬಸುರ್ ತೀವಿದುದು ; ತೀವಲೊಡಂ, ಆಮರದಿಂ ಇೞಿದು ಬಂದ್ ಆತಂಮ ಅಟ್ಟೆಯ ಕೊರಳೊಳ್ ಶಿರಪತ್ತಿತ್ ಎಂಬುದು ಪುಸಿಯುಂ, ಚೋದ್ಯಂ ಅಲ್ಲದೆ, ಸತ್ಯಂ ಉಂಟೆ ? ಪೇೞಿಂ ! ಎನೆ, ಶ್ವೇತಾಂಬರರ್ ಇಂತ್ ಎಂದರ್.

ಶಾರ್ದೂಲ ವಿಕ್ರೀಡಿತ ವೃತ್ತ.

1656. ನಾವಿಂದುಳ್ಳದನಾಡಲ್ವೆದೆ ಪುಶಿ ಯುಂಟೇ, ಹೇೞಣಂ ಗೈವಿರ್ಕೈ !
d. Application of this story.
ನೀಮೆಲ್ಲಂ ನೆರೆ ಪೇೞ್ವ ಪುಣ್ಯಕಥನಂ ರಾಮಾಯಣಂ ಭಾರತಂ
ತಾವೆಲ್ಲಂ ಪುಶಿ ಯುಂಮ ನೀವರಿವಿರೇ? ಪೇೞೆಂದಡೆಂದರ್ದ್ವಿಜ
ನಿರ್ವೇವೆಂಬೀಪುಶಿ ಯುಂಮ ಧರ್ಮಕಥೆಯೊಳಿಂತುಳ್ಳಡಂ, ಪೇೞರೇ.

ವಚನ.

1657. ಎನೆ, ಶ್ವೇತಾಂಬರಧಾರಿಗಳ್ ಇಂತ್ ಎಂದರು : ನಿಂಮ ರಾಮಾಯ
ಣದೊಳು ರಾವಣಂ ಎಂಬ ರಾಕ್ಷಸಂ ದಿಗ್ವಿಜಯಕ್ಕೆ ಪೊರಮಟ್ಟು
ಭೂಮಿಯುಂ ಸುತ್ತಿ ಬರುತ್ತೆ ಕೈಲಾಸಮಂ ಕಂಡ್ ಈಗಿರಿ ಯಾ
ವದ್ ? ಎಂದು ಸಮೀಪದೊಳ್ ಇರ್ದ ಶಚಿವರಂ ಕೇಳೆ, ಯವರ್
ಇದು ಕೈಲಾಸಗಿರಿ ಯೆಂಬುದು ಮಹಾಪಿರಿಯದ್; ಇಲ್ಲಿ ಈಶ್ವರಂ
ಎಂಬ ನೆಲಸಿ ಪಿರಿಯದೇವಂ ಅಗ್ ಓರ್ವಂ ಉಂಟು, ಗಡಾ ! ಎಂ
ದು ಪೇಳೆ, ಕೋಪಿಸಿ ಪುಷ್ಪಕದಿಂ ನೆಲಕ್ ಇಳಿದು, ತಂನ ಇಪ್ಪ
ತ್ತು ತೋಳ್ಗಳಿಂ ಅಗಿರಿಯುಂ ತಕ್ಕೈಸಿ ಯೆಲ್ಲಾಡೆ, ಗಿರಿಜೆ ನಡನಡು
ಗಿ ಭಯಂ ಗೊಂಡು ಹರನಂ ಆಲಿಂಗಿಸಲ್, ಇರದೆ ಹರಂ ಉಂಗು
ಟದಿಂ ಆಗಿರಿಯುಂ ಒತ್ತಲ್, ಆಪರ್ವತಂ ಮಿಡುಕದಂತ್ ಆಗೆ ಯು
ದಂ ಬಿಟ್ಟು ಚೋದ್ಯಬಟ್ಟು ಇಂನೇನು ಮಾಳ್ಪೆಂ ? ಎಂದು ಪೋಗಿ
ತನ್ನ ದಶಶಿರದಿಂ ದಂಡೆಯು ಕಟ್ಟಿ ಪೂಜಿಸಿ ಚಂದ್ರಹಾಸಮಂ ಪಡೆ
ದಂ ; ಆಶಿರಂಗಳಿಂ ಅರ್ಚಿಸಿದ್ ಏಳುದಿನಕ್ಕೆ ತಂಮ ತಂಮ ಕೊರ
ಳೊಳ್ ಪತ್ತಿದವು ಎಂಬ್ ಇದು ನಿಂಮ ಮತದೊಳ್ ಉಂಟೊ ? ಇ
ಲ್ಲೋ ? ಪೇಳಿಂ ! ಎನೆ, ಯವರ್ ಇದು ಪ್ರಸಿದ್ಧವಾಗ್ ಉಂಟ್,
ಎನೆ, ಎಂಮ ಶಿರ ಪರಿದಾಗಳೆ, ನಂಮ್ ಅಟ್ಟೆಯೊಳ್ ಪತ್ತಿತ್ ಎಂದಡ್,
ಎಂತು ಪುಶಿಯುಂ ಚೋದ್ಯಂ ಎಂಬಿರಿ ? ಯೆಂದು ಮತ್ತಂ ಇದದ್
ಇಂತ್ ಎಂದರ್

aa. Ravana cuts off his ten heads and after seven days puts them on again;

ಕಂದ.

1658. ಪರಿಕಿಸಲುಂ, ಕಾಂತಾರಾಂ
ತರದೊಳು ಪೆಸರ್ವೆತ್ತ ವಾಲಿಸುಗ್ರೀವ ವಾ

bb. story of Angada;

ನರವಂಶರಾಜವಾಲಿಯ
ವರತನುಜನಂಗದನೆಂಬ ಪೆಸರುಳ್ಳನೋರ್ವಂ

1659. ರವಿವಂಶಜನೆನಿಸುವ ರಾ
ಘವನಲ್ಲಿಗೆ ಬಂದು ಕಂಡು ವಾಲಿಯ ತನಯಂ
ಸವಿನುಡಿಯಿಂದೆರಗಿ ಮನೋ
ತ್ಸವದಿಂದಂ ಬೆಸನನೀವುದೆನೆ, ಕೇಳ್ದಾಗಳ್ ;

ಉತ್ಪಲಮಾಲಿಕಾ ವೃತ್ತ.

1660. ಭೂಸುತೆಯಾಣ್ಮನೊಲ್ದು ಬೆಸನಂ ಕುಡೆ, ಲಂಕೆಗೆ ಪೋಗಿ ದಾನವಾ
ಧೀಶನ ರಾಜಮಂದಿರಮುಮಂಜದೆ ಪೊಕ್ಕವ ಕೈಕಶಾಂಗನೀ[1]
ಕೇಶಮ ಕೀಳ್ತು ತಾಂ ಪಿಡಿದು ಭಂಗಮನಾಗಿಸೆ, ಕಂಡು ರಾವಣಂ
ರೋಷಮನಾಂತು ಕೀಳ್ತು ಪೊಡೆದಂ ಪಿಡಿದೊಪ್ಪುವ ಚಂದ್ರಹಾಸ
[ದಿಂ.

1. ರಾವಣನ ತಾಯಿ.

ಕಂದ.

1661. ಪೊಡೆದಡೆ, ವಾಲಿಯ ಸುತನಿ
ಕ್ಕಡಿಯಾಗಿ ಬೀಳೆ ನೆಲಕಂ; ಹನುಮಂ ಕಂಡಾ
ಕಡಿಗಳನತಿಭರವಸದಿಂ
ಪಿಡಿದೆಳದು ತಂದು ತೋರಿಸೆ ರಘುಪತಿಗಾಗಳ್ ;

ವಚನ.

1662. ಅಂತು ತಂದ್ ಎರಡು ಕಡಿಗಳಂ ಆಗ ರಾಮಂ ಪತ್ತಿಸಿ ಸಂದಿಬಂ
ದವ್ ಎಂಬ ಮದ್ದ ತರಿಸಿ ಅರದು ಹಿಂಡಲ್, ಆ ಕಡಿಗಳ್ ಪತ್ತಿ ಜೀವ್
ಐದಿದ್ ಅಂಗದಂ ಬದುಕಿದಂ, ಎಂಬುದು ನಿಂಮ ಮತದ ರಾಮಾ

ಯಣದೊಳ್ ಉಂಟೋ ಇಲ್ಲವೋ ? ಪೇಳಿಂ ! ಎನೆ, ಯವರ್ ಇ
ದು ಸುಪ್ರಸಿದ್ಧವಾಗ್ ಉಳ್ಳುದ್, ಎನೆ, ಯಾವಡ್ ಎಂದು ಶಿರಂ ಪತ್ತಿತ್
ಎಂದು ಪೇಳೆ, ಪುಶಿ ಯಂದು ಚೋದ್ಯ ಬಡುವಿರ್ ; ಇದಲ್ಲದೆ ಇಂ
ನೊಂದು ಕೇಳಿಂ ! ಎನುತ್ತೆ ಮತ್ತಂ ಇಂತ್ ಎಂದಂ :

ಕಂದ.

1663. ಸದಮಲಗರ್ಭಂ, ಕಾರ್ಗಾ
ಲದ ಮೇಘದೊಳಗೆ, ನವಿಲಿಗೆ ಪುಟ್ಟುವ ಪೊಲ್ಪು
ಟ್ಟಿದುದೋರ್ವಸತಿಗೆ ಗರ್ಭಂ,
ಮುದದಿಂದಂ ಪುರುಷಮೋಘರವಮಂ ಕೇಳ್ದುಂ.

cc. story of the gardener of Sugríva.

ಮಹಾಸ್ರಗ್ಧರ ವೃತ್ತ.

1664. ನವಮಾಸಂ ಶ್ರೀವಿ ಪೆತ್ತಳ್ಬರಿಯುದತಿಯನಾಕಾಂತೆ; ಯಾಮುಸ್ತಕಂ [ಕಾ
ಡುವದುಂ, ತಾನೂರೊಳೆಲ್ಲಾ ಜನರ ಮನೆಗಳಂ ಕೂಡೆ ತಾಂ ಪೊ [ಕ್ಕು ಪೊಯಿದಾ
ಟವನಾಯ್ತುಂ ಪೊಯ್ದು ಮತ್ತಂ ನೆಲಹನಡರಿ ತಾನಾರ್ತದಿಂ ಪಾ [ಲ್ಮಸರ್ತುಪ
ಪ್ಪವನೆಲ್ಲಂತಿಂವಜೆಂದರ್ಧಿಮುಖನಿವನೆಂದೆಲ್ಲರೊಳ್ವ್ಯಕ್ತವಾಗಲ್.

ವಚನ.

1665. ಅಂತು ದಧಿಮುಖನಾಮದಿಂ ವರ್ತಿಸುತ್ತಿರೆ, ಕೆಲವು ದಿನಕ್ಕೆ ಆಯು
ಡೆಗ್ ಅಗಸ್ತ್ಯಂ ತೀರ್ಥಯಾತ್ರೆಗಂ ಪೋಗುತ್ತ ಬರೆ, ಯವರಂ
ಕಂಡ್ ಎರಗಿ, ಯತ್ತಣಿಂ ಬಂದಿರ್ ? ಎಲ್ಲಿಗೆ ಪೋದಪಿರ್ ? ಎಂಸ ಮ
ನೆಯೊಳ್ ಇಂದ್ ಅಭ್ಯಾಗತರಾಗಿ ! ಯನೆ, ಯಾಮುನಿ ಇಂತ್ ಎಂದಂ

ಚಂಪಕಮಾಲಾ ವೃತ್ತ.

1666. ನಿನಗೆ ಕಳತ್ರಮಿಲ್ಲ; ಪೆಱರಿಕ್ಕಿದಡಂಮುಣಲಿಕ್ಕುಪಾಯಮಿ
ಲ್ಲಿನಿತಿರಲುಂಬೆವೇನ ಮನೆಯಿಲ್ಲವದೆಂತುಣಲಕ್ಕು ? ನೋಡೆ, ನೆ
ಟ್ಟನೆ ನಿನಗಂ ಗೃಹಂ ಸತಿಯುಳಲ್ಲವು; ದಾನವ ಮಾಡೆ, ಧರ್ಮವಾ
ಮನೆಯುವಗಪ್ಪುದತ್ತಿಮಿಳೆಯೊಳ್ತವೆ ದಾತೃಗದಿಲ್ಲ ನಿಚ್ಚಯಂ !

ವಚನ.

1667. ಅದಱಿಂ ನಿನಗ್ ಓರ್ವ ಪೆಂಡತಿಯಂ ಮಾಡಿಕೊಂಡು ಗೃಹಸ್ತನಾಗಲ್ಲದೆ, ನಿಂನ ಮನೆಯೊಳ್ ಉಣಲಾಗದು ; ಎಂದು ಮುನಿ ಪೋದಂ; ಇತ್ತಲ್ ಆದಧಿಮುಖಂ ತಂನ ತಾಯಲ್ಲಿಗೆ ಬಂದು ತನಗೆ ಮದುವೆಯಾಗಲ್ಲದೆ, ಮಾಡಿದ ದಾನ ಧರ್ಮ ಸಲ್ಲದು ಯೆಂದ್ ಅಱುಪಿದರ್; ಎನಗ್ ಓರ್ವಪೆಂಡತಿಯಂ ಮಾಡ್ ! ಎನೆ, ಯಂತು ಗೈವೆನೆಂದು ಕೂಡೆ ನೋಡಿ ಯೋರ್ವನಿರ್ಧನಗೆ ಸಲ್ವನಿತು ಪೊಂನಂ ಕೊಟ್ಟು ಕೊಡಗೂಸಂ ತಂದು ಮದುವೆಯಂ ಮಾಡೆ, ಗ್ರಹಸ್ತನಾಗಿ ಕೆಲವಾನುದಿವಸಂ ಇರುತ್ತಿರೆ, ಯಾದಧಿಮುಖನ ತಾಯಿ ಇಂತ್ ಎಂದಳ್ :

ಕಂದ.

1668. ಘಳಿಸಿರ್ದ ಧನವನೊಂದಂ
ಮುಳಿಸದೆ ನಿಂನಯ ವಿವಾಹದೊಳು ಪೋದುದು ; ನಾ
ಸಲಹಲ್ಕಾರೇಂ ; ನೀನೀ
ಗಳೆ ಪೋಪುದು ! ಬದುಕಲಾರ್ಪ ತಾಣಕ್ಕೆಂದಳ್.

ವಚನ.

1669. ಎನಲ್, ಅಂತೆ ಗೈವೆಂ ಎಂದು ದಧಿಮುಖಂ ತಂನ ಪೆಂಡತಿಯಂ ಪೋಪೆವ್ ಏಳ್ ! ಎನಲ್, ಆಕೆ ತಂನ ಗಂಡಂ ಅಪ್ಪ ತಲೆಯ ನೆಲಹಿ

ನೊಳಗ್ ಇಕ್ಕಿ ಪೆಗಲೋಳ್ ತಳೆದು ಪೋಗಿ ಯೊಂದು ಮಹಾಪಟ್ಟಣದೊಳ್ ಮನ್ನೆಯರ್ ಅಲ್ಲಿ ಜೂಜಾಡುತಿರ್ಪ ದೇಗುಲದ ತೊಲೆಯೊಳ್ ಆನೆಲಹಂ ಕಟ್ಟಿ ನೀರಿಗೆ ಪೋಗೆ, ಯಾದೇಗುಲದೊಳು ಜೂಜುಗಾರರ್ ಓರ್ವರೋರ್ವರು ಕಲಹಂಗೈದು ಕಡಿತಲೆಯುಂ[1] ಕೊಂಡು ಕಡಿದಾಡಿ ವೋರ್ವನ ಶಿರಂ ಮರಳೆ ಪೊಯ್ಯಲ್, ಆಕಡಿದಲೆಯು ಕೊನೆ ತಾಗಿ ನೆಲ ಪರಿದು ನೆಲಹಿನೊಳಗ್ ಇರ್ದ ದಧಿಮುಖನ ಶಿರಂ ಬೀಳಲು, ಜೂಜುಗಾರನ ಮುಂಡದೊಳ್ ಪತ್ತಿ ಯದ್ದು ಕುಳ್ಳಿರ್ದ ಸಮಯದೊಳ್.

1. ಜಗಳದಲ್ಲಿ ಒಬ್ಬನ ತಲೆ ಕಡಿದಿದ್ದರು ಅದನ್ನು ಮುಂ.

ಕಂದ.

1670. ಪೋಗಿ ನೀರಿಂ ಮಗುಳೆ ಬಂ
ದಾಗಾಸಮಯದಿ ಲಲನೆ ಪರಿದೊಳಪೊಕ್ಕಾಗ
ದೇಗುಲವಾತಲೆಗವಯವ
ವಾಗಿ ಕೆಳಗೆ ಕುಳ್ಳಿರ್ದುದ ಕಂಡಿಂತೆಂದಳ್ :

1671. ಅಪ್ಪುದನಜಹರಿರುದ್ರ
ರ್ತಪ್ಪಿಸಲಾರ್ತಪರೆ[1] ? ಬರಿಯ ರುಂಡಕ್ಕಂಗಂ
ವೊಪ್ಪುವವಕಟಿದು ಯೆಂನಯ
ಯೊಪ್ಪಕ್ಕಿಂಮುಡಿಸಿದಂತಾಯ್ತೆನಗೀಗೆಂದಳ್.

1. ತಪ್ಪಿಸಲಾಗುತ್ತಾರೆ.

ಮತ್ತೇಭವಿಕ್ರೀಡಿತ ವೃತ್ತ.

1672. ಎನುತಾಕಾಮಿನಿ ಕಾಂತನೊಂದಿ ಕೆಲದೊಳ್ಕುಳ್ಳಿರ್ಪುದುಂ ; ಜೂ [ಜುಗಾ
ರನ ಚಿತ್ತಪ್ರಿಯ ಕಾಂತೆ ಬಂದು ಭರದಿಂದೆಂನಾಣ್ಮನಿಂತೀತನೆಂ
ದೆನೆ, ಯಾಕಾಂತೆಯರೆಂನ ತಂಸವನೆನುತ್ತೋರೋರ್ವರೊಳ್ಕಾ [ದು[1]ತಿ
ರ್ಪಿನದಂ ಮಾಣಿಸಿ, ಯಿರ್ವ ನಾಲ್ವರವರಂ ಧರ್ಮಾಧಿಕರ್ಗಟ್ಟಿದರ್.

1. ಕಾದುತ್ತಿರುವಷ್ಟರಲ್ಲಿ.

ವಚನ.

1673. ಅಂತು ಕಳುಪೆ ಧರ್ಮಾಧಿಕರಣಂಗಳಲ್ಲಿಗೆ ಬಂದು ತಂಮ ತಂಮ ವೃತ್ತಾಂತಮಂ ಸವಿಸ್ತಾರಂ ಪೇಳೆ, ಕೇಳ್ದು ತಾವ್ ಅನಿಬರು ಪೂರ್ವೋ[1]ಕ್ತಿಯ ವಿಚಾರಿಸಿ ಇಂತ್ ಎಂದರ್ :

1. ನೋಡು ೧೬೪೮ನೇದು.

ವಚನ.

1674. ಎಂದು ಶಿರವ್ ಅರವ್, ಅವರ್ಗೆ ಪತಿ ಯುಪ್ಪಂ, ಎಂದು ಧರ್ಮಾಧಿಕರಣಂ ಪೇಳ್ದ ಅನಂತರಂ ಪೋದರ್ ; ಎಂಬ್ ಇದು ನಿಂಮ ಪುರಾಣದೊಳ್ ಉಂಟೋ ಇಲ್ಲೋ ? ಪೇಳಿಂ ! ಎನೆ, ಯವರ್ ಇದು ಪ್ರಸಿದ್ಧವಾಗ್ ಉಳ್ಳದ್, ಅದಂ ಇಲ್ಲ್ ಎನಲ್ ಅಪ್ಪುದೆ ? ಯನೆ, ಯಾವಡೆ ಬರಿಯುಶಿರಂ ಮತ್ತೊಂದು ಮುಂಡಮಂ ಪತ್ತಿತ್ ಎನಲ್, ಅಕ್ಕುಗಡ ! ಯುಂಮ ಶಿರಂ ಯುಂಪ್ ಅಟ್ಟಿಯುಂ ಪತ್ತಿತ್ ಎಂವಡೆ, ಪುಶಿಯುಂ ಚೋದ್ಯಂ ಎಂಬಿರ್; ಇಂತಪ್ಪ ಪುಶಿಯುಂ ಚೋದ್ಯಂಗಳು ನಿಂಮ ಮತದೊಳ್ ಅನೇಕಂ ಉಳ್ಳವ್ ಎನೆ, ಯಾವಿಪ್ರರ್ ಇಂತ್ ಎಂದರು :

ಮತ್ತಂ ನಂಮಲ್ಲಿ ಪುಶಿ ಯೇನ್ ಉಂಟು ? ನೀವು ಪೇೞಂ ! ಎನೆ,
ಮನೋವೇಗಂ ಪೇೞಲ್ ನೆಗಳ್ದಂ :

ಮಹಾಸ್ರಗ್ಧರ ವೃತ್ತ.

1675. ಪಿರಿದೊಂದುಗ್ರಾಜಿಯೊಳ್ದುಂದುಭಿಯ[1] ಶಿರಮ ತಾನೊಂದು ಕೊಂ [ಡುಗ್ರನೇತ್ರಂ[2]

dd. story of Dundubhi the giant, who became Ghatodgaja.

ಗರುಡಂಗೊಲ್ದಿತ್ತನೆಂದುಂ ಪಳದೆನಿಸದಿದಾರ್ತಿಂಪಡಂ ತೀರದಂತೀ
ಸಿರಮಂ ನೀ ಕೊಂಡು ನಿಂನೀಬಸುರ ಹಸಿವಡಂಗಲ್ಕೆ ನೀ ನಿತ್ಯ [ತಿಂದಿಂ
ತಿರು ! ಕ್ಕೈಯಿಂದೆಲ್ಲಿಯುಂಮತ್ತಿಳುಪದೆ ಧರೆಯೊಳ್ವರ್ತಿಸೆಂದಿಂತು [ಪೇೞ್ದಂ

1. ಈ ರಾಕ್ಷಸನ ತಲೆ ವಾಲಿ ಹೊಡೆದನು. 2. ಶಿವ.

ವಚನ.

1676. ಎಂದು ಪೇೞೆ, ಕೇಳ್ದ್ ಆವೂಳ್ಕೆಯೊಳಗೆ ಗರುಡಂ ವರ್ತಿಸುತ್ತಿರೆ ; ಇತ್ತಲ್ ಆದುಂದುಭಿ ಇರದೆ ಭೀಮಸೇನನ ವಲ್ಲಭೆ ಯಪ್ಪ ಹಿಡಂಬಿಯ ಗರ್ಭದೊಳ್ ಜನಯಿಸಿ ನವಮಾಸಂ ತೀವಿ ಬರಿಯುಮುಂಡಮಂ ಬೆಸಲಾಗಿರೆ ; ಯಮಂ ಕಂಡು ಪೇಸಿ ಪೆಕ್ಕಾಡಿನೊಳ್ ಬಿಸುಟು ಕಳೆಯೆ, ಅಲ್ಲಿಗೆ ಗರುಡಂ ತೊಳಲುತ್ತ ಬಂದು, ಬಿದ್ದಿರ್ದ ಮುಂಡಮಂ ಕಂಡು ಪಿಡಿದಿರ್ದ ಶಿರಮ್ ಅಕಟದೊಳ್ ಬೀೞಲಿಕೆ, ಮುಂಡಮ್ ಅತ್ತಲ್ ಗರುಡ ನಡಿಯಲ್, ಅದರಿಂ ಮುಂನಮೆ ನಡದು ಶಿರಂ ಪತ್ತಿತ್ ಐದೆ ಮುಂಡಮಂ ಆಗಳ್ ;

ಉತ್ಪಲಮಾಲಿಕಾ ವೃತ್ತ.

1677. ಸತ್ತ ಶಿರಂ ಪೊರಳು ಕೆಲನಂ ಬಲನಂ ನೆರೆ ನೋಡುತಿರ್ದು ಪೋ
ಗುತ್ತಿರೆ, ಕಂಡು ಚಿತ್ತದೊಳೆ ಶಂಕಿಸಿ ಕಶ್ಯಪನಾತ್ಮಸಂಭವಂ[1]
ಚಿತ್ತಜವೈರಿ ಯಿರ್ದ್ದೆಡೆಗೆ ಪೋಗಿ ಪದಾನತನಾಗಿ ದೇವ! ನೀ
ನಿತ್ತ ಶಿರಂ ಕರಂ ಪರಿದು ಪತ್ತಿದುದೊಂದು ಮಹೋಗ್ರಮುಂಡ
[ಮಂ.

1. ಕಶ್ಯಪನ ಮಗನು ಗರುಡನು.

1678. ಎಂದು ವಿಚಿತ್ರಮಾಗಿ ವಿನುತಾತ್ಮಭವಂ[1] ಕ್ರಮದಿಂದೆ ಪೇಳೆ, ಕೇ
ಳ್ದಿಂದುಧರಂ ನಗುತ್ತೆ ಬೆರಗಾಗಿರಲಿತ್ತ ಸಿರಸ್ಸು ಮುಂಡಮಂ
ಸಂದಿಸಿದಾಗಳೈದೆ ನಿಜಗೇಹಮನಾತನ ಮಾತೆ ನೀನು ದಾ
ರೆಂದು ಹಿಡಂಬಿ ಕೇಳಿದಡೆ, ನಿನ್ನ ತನೂಭವನೆಂದು ಪೇಳಿದಂ.

1 ವಿನುತೆ ಎಂಬ ಕಸ್ಯಪನ ಹೆಂಡತಿಯ ಮಗ=ಗರುಡ.

ವಚನ.

1679. ಅಂತು ಪೇಳೆ, ಕೇಳ್ದು, ನಿನ್ನ್ ಅಶಿರಂ ಪುಟ್ಟಿದ ವೃತ್ತಾಂತಂ ಎಂತ್? ಎಂದು ಬೆಸಗೊಳೆ, ಯಮಂ ವಿಸ್ತಾರದಿಂ ಪೇಳೆ, ಕೇಳ್ದು ಸಂತೋಷಂ ಬಟ್ಟು ತಾಂ ಪುಟ್ಟಿದಕ್ ಅನ್ವಯಾರ್ಥಂ ಅಪ್ಪ ಘಟೋದ್ಗಜನೆಂಬ ಪೆಸರು ಕೊಟ್ಟರ್; ಇತ್ತಲ್ ಈಶ್ವರಂ ಇಂತ್ ಎಂದಂ: ಆತಂ ಸಮರ್ಥಪುರುಷನ್, ಆತಂಗೆ ನೀಂ ಧ್ವಜಮಾಗಿರೆಂದು ಗರುಡಂಗೆ ನಿಯಮಂ ಕೊಡಲ್, ಅಂತೆ ಗೆಯ್ವೆನೆಂದ್ ಅರಸುತ್ತೆ ಪೋಗಿ ಘಟೋದ್ಗಜಂಗೆ ಧ್ವಜಮಾಗಿರ್ದನ್, ಅವರಿಂ ಪಟ್ಟಿನ ಧ್ವಜಂ ಅದುವ್; ಆತಂ ಪಲವು ಕಾಲಂ ಇರ್ದಂ ಎಂಬುದ್ ಇದ್ ಉಂಟೋ ಇಲ್ಲೋ? ನೀಂ ಪೇಳಿಂ! ಎನೆ, ಇದು ಲೋಕಪ್ರಸಿದ್ಧಿಯಾಗ್ ಉಳ್ಳದ್, ಇದ್ ಇಲ್ಲ್ ಎನಲ್ ಎಂತ್ ಅಪ್ಪುದೆಂದು ವಿಪ್ರರ್ ಎನೆ, ಯಾದವ್ ಬಂದು

ಭವದ ಶಿರಂ ಮತ್ತೊಂದು ಭವದ ಮುಂಡಮಂ, ಪತ್ತಲ್ಅಕ್ಕುಗ
ಡಂ ! ಎಂದು ಶಿರಪ್ ಒಂದು ಭವದ ಮುಂಡಮಂ ಪರಿದಾಗಳೆ, ಪ
ತ್ತಿತ್ ಎಂದಡೆ, ಪುಶಿಯುಂ ಚೋದ್ಯಂ ಆದುದ್ ಎಂಬಿರಿ ; ಇಂತ್ ಅ
ಪ್ಪ ಪುಶಿಯುಂ ಇಂನೊಂದು ಕೇಳಿಂ ! ಎಂದು ಮನೋವೇಗಂ ಪೇ
ಳಲ್ ನೆಗಳ್ದಂ :

ಕಂದ.

1680. ಆದಿಯ ಕ್ಷತ್ರಿಯನೋರ್ವಂ
ಮಹಾದೇವನನೊಲಿಸಿ ದಿವ್ಯಪಿಂಡಮನೊಂದಂ
ಸಾಧಿಸಿ ಭರವಸದಿಂ ಪ್ರಿ
ಯ್ಯಾದರದಿಂ ಪಂಚಿ ಪೆಂಡಿರಿರ್ವರ್ಗಿತ್ತಂ.

ಮಹಾಸ್ರಗ್ಧರ ವೃತ್ತಂ.

1681. ಅವನಿಬ್ಬರ್ಗಂ ಗರ್ಭಂ ಜನಿಸಿ, ಬಳಿಕ ಪ್ರೊಂಬತ್ತು ಮಾಸಕ್ಕೆ [ಪೆತ್ತ
ರ್ಪದಿದರ್ಧಾರ್ಧಾಂಗಮಂ ; ಕಂಡೊಗೆವ್ರುದಿವಮುಪ್ಯಾಕೆಂಮಗೆಂಡೊ [ಲ್ಲದೀಡಾ
ಡಿಪರಾಗ್ತ್ವಪ್ಪಿಯತ್ತಲ್ಜ[1]ರಿ ಯನಿಸುವಳುಂ ಕಂಡು ಕೊಂಡೊಯಿದು [ಸಂದಿ
ಕ್ಕಿದಡಂ, ತಾ ಸಂದುಮೊಂದಿಲ್ಲೆಸಿಪ ತೆರದಿ ಪತ್ತಿತ್ತಿಳಾಸೇವ್ಯಮಾ [ಗಲ್

1. ಒಬ್ಬ ರಾಕ್ಷಸಿ.

ಕಂದ.

1682. ಸಂದಿಶಿದಳು ಜರೆ ಯುಂಬುದ
ರಿಂದೆ ಜರಾಸಂಧನೆಂಬನ್ವರ್ಥದ ನಾಮ

ವಂ ಧಿಟದಲಿಕ್ಕಲವನಾ
ನಂದನೆ ಪಲಕಾಲಮರಸುಯಾಗಿರುತಿರ್ದಂ.

ಚಂಪಕಮಾಲಾ ವೃತ್ತ.

1683. ಇರದೆ ಭುಜಪ್ರತಾಪದ ಸಗರ್ವದಿನುರ್ವಿ ಕಡಂಗಿ ಭೀಮನೋ
ಳ್ದೊರದೊಳದಿರ್ಚಿ ತಳ್ಕಿದೊಡವಂ ಮಗುಳೊತ್ತಿ ಮಗುಳ್ದು ಮೇಲೆ [ವಾ
ಯ್ದುರವಣಿಯಿಂದೆ ಕುಟ್ಟಿ ಪಿಡಿದೊತ್ತುತೆ ಸೀಳ್ದು ಬಿಸುಟಡೂ [ರ್ವಿಗ
ಜ್ಜರಿ ಯೆನಿಪಂತೆ, ಸೀಳ್ಗಳೆರಡುಂ ನೆರೆ ಪತ್ತಿದವ್ವೆದೆ ಬೇಗದಿಂ.

ವಚನ.

1684. ಅಂತು ಪತ್ತಿ ಬೇಗಂ ಭೀಮನೋಳ್ ಕಾದಲ್ ಎಂದ್ ಇರ್ದಂ ಎಂ
ಬ್ ಇದು ನಿಂಮ ಮತದ ಭಾರತಕಾವ್ಯದೊಳ್ ಉಂಟೊ ಇಲ್ಲೋ?
ಪೇಳಿಂ! ಎನೆ, ವಿಪ್ರರ್ ಇದು ಜಗತ್ಪ್ರಸಿದ್ಧಮಾಗ್ ಉಂಟು ಯೆನೆ,
ಯಾವಡೆ ಈರ್ವರ್ ಅಂಗನೆಯರ್ ಉದರದೊಳು ಬೇರೆಬೇರೆ ಪುಟ್ಟಿ
ದವ್ ಎರಡು ಭಾಗಂಗಳು ಪತ್ತಿ ಭೀಮನೋಳ್ ಕಾದೆ ಸೀಳಲ್, ಆ
ಶೀಳ್ ಪತ್ತಿ ಕಾದಲ್ ಅಕ್ಕು, ಗಡ? ಎಂಮ ಶಿರವ್ ಎಂಮ್ ಅಟ್ಟಿ
ಯೋಳ್ ಪತ್ತಿತ್ ಎನೆ, ಪುಶಿಯಂ ಚೋದ್ಯಂ ಎಂಬಿರಿ; ಯಂದಡ್,
ಆದ್ವಿಜರ್ ಶಿರಂ ಪತ್ತಲ್! ಅವ್ ಅಂತ್ ಅಲ್ಲದೆಯುಂ.

ಕಂದ.

1685. ಶಿರಮುಂ ತೊರದೀಡಾಡ
ಲ್ಕರನಂ ಪರಿದೇರಿ ಪಣ್ಗಳಂ ತಿನಲಿತ್ತ
ಲ್ದರೆಗೊರಗಿರ್ದ ಮುಂಡಗಳು
ದರವದುಂ ತೀವಿದೆಂಬುವ ಪುಶಿಯೆ ವಿಚಿತ್ರಂ.

1686. ಎಂದರಾದ್ವಿಜರ್ಕನೆ, ಖೇಚರ
ರೆಂದರ್ನಿಜಮತದ ವೇದಶಾಸ್ತ್ರಪುರಾಣಂ
ಸಂದೇಹಮಿರದೆ ಪುಶಿದೊಂ
ದಂದದ ಪುಶಿಯಲ್ಲದೆಂಬವೊಳುಂಟೆ ? ವಿಚಿತ್ರಂ.

ಚಂಪಕಮಾಲಾ ವೃತ್ತ.

1687. ಎನಲವರಿಂತು ಪೇಳ್ದುಶಿಯು ಯುಂಮಯ ವೇದಪುರಾಣಶಾಸ್ತ್ರದೊ
ಳನಿತಿರಲೆಂಬವೊಳುಂ ತಿಳಿಪುದೆಂದು ವಿಪ್ರರೆಲ್ಲರಿಂಗೆ ತಾ
ಮನಮುದದಿಂದೆ ಸೂಚಿಪ ಪ್ರೊಲಂತದನಾಗಳೆ ತೀವ್ರಖೇಚರಾ
ವನಿಪತಿ ಪೇಳಲುಜ್ಜುಗಿಸಿದಂ, ಸಭೆ ಭಾಪುರೆ ಭಾಪೆನಿಪ್ಪಿನಂ.

ವಚನ.

1688. ಅದ್ ಎಂತ್ ಎಂದಡೆ: ಮುಂನ ಪಿತಪಿತಾಮಹರ್ಕಳ್ಗೆ ಎಂದು ಮಾ
ಳಪಕ್ಷದೊಳ್ ಪಂಚಭಕ್ಷ್ಯಪಾಯಸತುಪ್ಪಮುಂ ಪೆರರ್ಗೆ ಇಕ್ಕೆ, ಸ್ವ
ರ್ಗ ಮೊದಲಾದ್ ಅನೇಕಗತಿಯೊಳ್ ಇರ್ದ ಪಿತಪಿತಾಮಹರ್ಕಳ
ಬಸುರಂ ತೀವಲ್ ಅಕ್ಕು ಗಡ ! ಎಂಮ ಶಿರಂ ಮರದ ಮೇಲ್ ಇ
ರ್ದು ತಿಂದಡೆ, ಕೆಳಗಿರ್ದ ಅಟ್ಟೆಯ ಬಸುರು ತೀವಿತ್ ಎಂದೊಡೆ, ನಿ
ಮಗೆ ಪುಶಿ ಚೋದ್ಯಮು ಯುಂತ್ ಆದದು ? ಪೇಳಿಂ ! ಎನೆ, ಯಾ
ಪರವಾದಿಗಳ್ ಅದಕ್ಕೆ ಮಾರುತ್ತರಂ ಕೊಡದ್ ಇರೆ ಶ್ವೇತಭಟರ್
ಇಂತೆಂದರ್ :

ಕಂದ.

1689. ಸ್ಥಳಚರಜಲಚರಖಗಸಂ
ಕುಳದಡಗಿಂದ ಪಂಚಭಕ್ಷ್ಯಪಾಯಸಮ ಕಾ

ಲ್ತೊಳದು ತಣಿ[1] ಯೂಡೆ ವಿಪ್ರಾ
ವಳಿಗಂ, ತಣಿವರ್ಸಮಸ್ತಪಿತರ ಪ್ರಕರಂ.

1. ತೃಪ್ತಿಯಾಗುವಂತೆ.

ವಚನ.

1690. ಎಂಬುದು ನಿಂಮ ಮತದೊಳ್ ಉಂಟೊ? ಇಲ್ಲವೊ? ಪೇಳಿ! ಎನೆ, ಯವರ್ ಇದು ಜನಪ್ರಸಿದ್ಧವಾಗುಂಟು; ಇಲ್ಲವ್ ಎಂದ್ ಯಾಕೆ ಸಂದೇಹದಿಂ ನುಡಿವಿರ್? ಎನೆ, ಹಿಂದೆ ಯೊಂದಾನೊಂದು ಕಾಲದಲ್ಲಿ ಸತ್ತು ಪರತ್ರವಂ ಐದಿದ ಪಿತಪಿತಾಮಹರೆಲ್ಲಂ ಈ ಲೋಕದೊಳ್ ಪಾರ್ವರ್ ಉಂಡರೆ, ತಣಿವರ್, ಎಂದು ಪೇಳ್ವುದು ನಿಶ್ಚಯವ್ ಎಂಬಿರಿ; ಯಂಮ ಶಿರಮುರನ್ ಏರಿ ಮೇಲ್ ಉಣ ಪತ್ತಿದಡೆ, ಕೆಳಗಿರ್ದ ಮುಂಡಗಳ ಪೊಟ್ಟೆ ತೀವಿತ್ ಎಂದಪ್, ಯಾಕೆ ಪುಶಿಚೋದ್ಯಂ ಎಂಬಿರ್? ಎನೆ, ಯಾವಮಾತಂ ಕೇಳಿ ವಿಪ್ರರೆಲ್ಲಂ ಬೆರಗಾಗಿ ಮಱುಮಾತಂ ಕೊಡದಿದ್ದರು.

ಆಮೇಲೆ ಅವರು ಬ್ರಾಹ್ಮಣರಿಗೆ ತಮ್ಮ ನಿಜಸ್ಥಿತಿಯನ್ನು ತಿಳಿಸಿದರು.

IV. NATIVE CHRISTIAN LITERATURE.

ಪೀಠಿಕೆ.

ಕರ್ಣಾಟಕದೇಶದಲ್ಲಿ ಕ್ರೈಸ್ತ ಧರ್ಮಹಿಡಿದವರು ಸ್ವಲ್ಪ ಜನ. ಯಾಕಂದರೆ ಈ ಧರ್ಮ ಕರ್ಣಾಟಕ ಜನರೊಳಗೆ ಇನ್ನು ಬಹಳ ಪ್ರಕಟವಾಗಿರುವದಿಲ್ಲ ಆದರೂ ಈ ಧರ್ಮಕ್ಕೆ ಸಂಬಂಧವಾದ ಕೆಲವು ಕೃತಿಗಳು ಅವೆ. ಅವುಗಳಲ್ಲಿ ಪ್ರಸಿದ್ಧಿಯಾಗಿರುವ ಗೀತಪುಸ್ತಕ ಎಂಬ ಕೃತಿಯಿಂದ ಕೆಲವು ಗೀತಗಳನ್ನು ಆರಿಸಿಕೊಂಡಿದ್ದೇವೆ. ಅವು ಪೂರ್ವದಲ್ಲಿ ಇಂಗ್ಲಿಷ್ ಜರ್ಮನ್ ಭಾಷೆಗಳಲ್ಲಿ ರಚನೆಯಾಗಿದ್ದವು. ಇತ್ತಲಾಗಿ ಕೆಲವರು ಅವನ್ನು ಅದೇ ಛಂದಸ್ಸಿನಿಂದ ಕನ್ನಡಿಸಿದರು. ಆ ಭಾಷೆಗಳ ಛಂದಸ್ಸಿನಲ್ಲಿಯೂ ಇವೇ ಗಣಗಳೆಲ್ಲ ಅವೆ; ಅಂತ್ಯ ಪ್ರಾಸಮಾತ್ರ ವರ್ತಿಸುವದು. ಆದರೆ ಇದಾದರೂ ಕೆಲವು ಕಾವ್ಯಗಳಲ್ಲಿ ಇಲ್ಲ. ಎಲ್ಲಾ ಕಾವ್ಯಗಳು ವಿಶೇಷವಾಗಿ ಗಣನಿಬಂಧನೆಯಿಂದ ಆಗುವವು. ಗುರುಲಘು ಭೇದದ ವಿಷಯದಲ್ಲಿ ಮಾತ್ರ ಆ ಭಾಷೆಗಳ ಛಂದಸ್ಸಿಗೂ ಈ ಕನ್ನಡ ಛಂದಸ್ಸಿಗೂ ಒಂದು ದೊಡ್ಡ ಹೆಚ್ಚು ಕಡಿಮೆ ಅದೆ ಹ್ಯಾಗಂದರೆ ಸ್ವಾಭಾವಿಕವಾಗಿ ಒಂದು ಅಕ್ಷರ ಗುರುವಾದರೂ ಸ್ವರಿತ, ಉದಾತ್ತ, ಅನುದಾತ್ತ ಎಂಬೀ ಮೂರು ತರದ ಸ್ವರಭೇದಗಳಲ್ಲಿ ಒಂದನೇದು ಅಥವಾ ಯರಡನೇದು ಆ ಅಕ್ಷರಕ್ಕೆ ಬೀಳದ ಪಕ್ಷದಲ್ಲಿ ಅದು ಲಘುವೇ ಸರಿ. ಉದ: ಓ ಕರ್ತ: ಇಲ್ಲಿ ಓ ಎಂಬ ನಿಪಾತಕ್ಕೆ ಸ್ವಾಭಾವಿಕವಾಗಿ ಗುರುತ್ವ ಇದ್ದದರಿಂದ ಸ್ವರಿತ ಉದಾತ್ತಗಳು ಇಲ್ಲದರಿಂದ ಲಘುತ್ವ ಬರುವದು. ಹಾಗೂ ಸ್ವಾಭಾವಿಕವಾಗಿ ಒಂದು ಅಕ್ಷರ ಲಘುವಾದರೂ ಆ ಸ್ವರಭೇದಗಳಲ್ಲಿ ಸ್ವರಿತವಾಗಲಿ, ಉದಾತ್ತವಾಗಲಿ ಆ ಅಕ್ಷರಕ್ಕೆ ಬೀಳುವ ಪಕ್ಷದಲ್ಲಿ ಅದು ಗುರುವೇ ಸರಿ. ಉದ: ಕರೆ: ಇಲ್ಲಿ ಕ ಎಂಬ ಅಕ್ಷರ ಸ್ವಾಭಾವಿಕವಾಗಿ ಲಘುವಾದರೂ ಅದಕ್ಕೆ ಉದಾತ್ತ ಹತ್ತುವದರಿಂದ ಗುರುವಾಗುವದು.

PRAISE OF GOD.

ದೈವ ಸ್ತೋತ್ರವು.

1693. ಸ್ತೋತ್ರಮನತ್ತಮದೇವರಿಗರ್ಪಿಸ ಬರ್ರಿ !
ವೀಣೆಯು ಗಾಯನವೇ ! ಸಮುದಾಯವ ಕರಿ !
ದೂತರೊಳೂ
ಕೀರ್ತನೆ ಏಳಲಿಯೂ !
ಸ್ತೋತ್ರಸುಗಂಧವ ತರ್ರಿ !

1694. ಭೂದಿವಲೋಕಗಳಾತನ ಸ್ವಾಶ್ರಿತರಾಜ್ಯ;
ಯಾವನು ಭೂದಿವರಾಜನ ಸಂಗಡ ವ್ಯಾಜ್ಯ

ಮಾಡುವನು ?
ಕೇಳಿಸೆ ನುಡಿ[1]ಯನು,
ಮರ್ತ್ಯರ ಗದ್ದಲ ತ್ಯಾಜ್ಯ.

1. ಆತನು ನುಡಿದರೆ.

1695. ಕ್ರಿಸ್ತನು ಕ್ರಯಕೆ ಕೊಂಡ ಜನಾಂಗವಿದ್ದೇವೆ ;
ರಾಜನ ಚಿತ್ತಕೆ ಬಪ್ಪಲಿ ದಾಸರ ಸೇವೆ !
ಹೃದಯದೊಳೇ
ಕ್ರಿಸ್ತನು ವಾಸಿಸಲೇ,
ಹರ್ಷದಿ ಜೀವಿಸುತ್ತೇವೆ.

ಈ ಗೀತದ ಪದದ ಪ್ರಸ್ತಾರ:

1. —◡◡ | —◡◡ | —◡◡ | —◡◡ | —◡
2. —◡◡ | —◡◡ | —◡◡ | —◡◡ | —◡
3. —◡◡ | —
4. —◡◡ | —◡◡ | —
5. —◡◡ | —◡◡ | —◡

1. 2. 5. ಚರಣಗಳ ಅಂತ್ಯದಲ್ಲಿ ಅದೇ ಪ್ರಾಸ ಬರುತ್ತಿರಬೇಕು.
3. 4. ಚರಣಗಳ ಅಂತ್ಯದಲ್ಲಿ ಬಂದೇ ಪ್ರಾಸ ಇರಬೇಕು.

DIFFERENCE BETWEEN THIS AND THE FUTURE WORLDS.

2. ಇಹಪರ ಭೇದ.

1696. ಉಂಟು ನಿಷ್ಕಳಂಕದೇಶ ;
ಅಲ್ಲಿ ನಮಗೇ ಪ್ರವೇಶ ;
ಅಲ್ಲಿ ನಾವು ಸೇರೋದು ;
ನಿತ್ಯಕ್ಷೇಮ ಸಿಕ್ಕೋದು.

1697. ಮೃತ್ಯು ಆಪಗಾಪ[1]ಘೋಷ
ನಮ್ಮ ಕಿವಿಗೇ ಸಂತೋಷ;
ನಂಬಿಗೆಂಬ ನಾವೆಯು
ದಾಟಿ ಪೋಪುದ್ ಶೀವಿಯು.

1. ನದಿಗಳ ಪತಿ=ಸಮುದ್ರ.

1698. ಇಲ್ಲಿ ನಮ್ಮ ಸುಖ ಕಷ್ಟ;
ಇಲ್ಲಿ ನಮ್ಮ ಲಾಭ ನಷ್ಟ;
ನಮ್ಮ ಕ್ಷೇಮ ತಾಪವು;
ನಮ್ಮ ನೀತಿ ಪಾಪವು.

1699. ಅಲ್ಲಿ ಪೀಡೆ, ಸಾವು, ಶಾಪ,
ಅಂಧಕಾರ ಸೂರ್ಯತಾಪ,
ಚಿಂತೆ, ದುಃಖ ಕಾಣೆವು;
ಅಲ್ಲಿ ಸೌಖ್ಯತಾಣವು.

ಈ ಗೀತದ ಪದದ ಪ್ರಸ್ತಾರ.

1. — ◡ | — ◡ | — ◡ | — ◡
2. — ◡ | — ◡ | — ◡ | — ◡
3. — ◡ | — ◡ | — ◡ | —
4. — ◡ | — ◡ | — ◡ | —

1. 2. ಚರಣಗಳ ಅಂತ್ಯದಲ್ಲಿ ಒಂದೇ ಪ್ರಾಸ, ಮತ್ತು, 3. 4. ಚರಣಗಳ ಅಂತ್ಯದಲ್ಲಿ ಒಂದೇ ಪ್ರಾಸ ಇರಬೇಕು. ಈಗೀತ ಎರಡು ಅಕ್ಷರವುಳ್ಳ ಗಣಗಳಿಂದ ರಚಿಸಿದ್ದು. ಆ ಛಂದಸ್ಸಿನಲ್ಲಿ ಎರಡು ಅಕ್ಷರವುಳ್ಳ ನಾಲ್ಕು ಗಣಗಳು, ಮೂರು ಅಕ್ಷರವುಳ್ಳ ಎಂಟುಗಣಗಳು, ನಾಲ್ಕು ಅಕ್ಷರವುಳ್ಳ ಹದಿನಾರು ಗಣಗಳು ಅವೆ.

EVENING HYMN

ಸಾಯಂಕಾಲ ಗೀತ.

1700. ಈಹಗಲೀಗ ಸಂತು ;
ಅಗಾಧನಿದ್ದೆ ಬಂತು
ಸಮಸ್ತಲೋಕಕ್ಕೇ ;
ಓ ಮನವೇ ! ಬಿಸಾಡು
ಆಲಸ್ಯವನ್ನು ! ಹಾಡು !
ಸುಸಿದ್ಧವಾಗು ಸ್ತೋತ್ರಕ್ಕೇ !

1701. ಅಗೋ ನೀ ಹೋದಿ ಅರ್ಕ !
ಈ ರಾತ್ರಿ ಎಂಬ ಕರ್ಕ
ನಿನ್ ಜ್ಯೋತಿ ಅಟ್ಟಿದಂ ;
ನೀ ಹೋಗು ! ರವಿಯಾಗಿ
ನನ್ನೀಶ ಸವಿಯಾಗಿ
ನನ್ ಹೃದಯವಲ್ಲಿ ಮೂಡಿದಂ.

ಈ ಗೀತದ ಪದದ ವಿಸ್ತಾರ.

1. ⏑— | ⏑— | ⏑— | ⏑
2. ⏑— | ⏑— | ⏑— | ⏑
3. ⏑— | ⏑— ¦ ⏑— |
4. ⏑— | ⏑— | ⏑— | ⏑
5. ⏑— | ⏑— | ⏑— | ⏑
6. ⏑— | ⏑— ¦ ⏑— | ⏑—

1. 2. ಚರಣಗಳ ಅಂತ್ಯದಲ್ಲಿ ಬಂದೇ ಪ್ರಾಸ
4. 5. ಚರಣಗಳ ಅಂತ್ಯದಲ್ಲಿ ಬಂದೇ ಪ್ರಾಸ.
3. 6. ಚರಣಗಳ ಅಂತ್ಯದಲ್ಲಿ ಬಂದೇ ಪ್ರಾಸ ಬರುತ್ತಿರಬೇಕು.

VOCABULARY.

ಪುಷ್ಪಮಾಲಿಕಾ ಶಬ್ದಕೋಶ.

ಅಂದರೆ

ಈ ಪುಸ್ತಕದಲ್ಲಿರುವಂಥಾ ಈಗ ರೂಢಿಯಿಲ್ಲದಂಥಾ ಶಬ್ದಗಳ ವಿವರ.

ಅ.

ಅ=ಇಲ್ಲ, ಅಯುಕ್ತ=ತಕ್ಕದಲ್ಲ. ಶಬ್ದದ ಆದಿಯಲ್ಲಿ, ಸ್ವರವಿದ್ದರೆ ನಕಾರಾಗವು ಬರುವದು: ಅ×ಏಕ=ಅನೇಕ=ಬಹಳ

ಅಂಕ=ಗುರ್ತು, ಯುದ್ಧ, sign, war.

ಅಂಕಿತ=ಗುರ್ತು, sign, name.

ಅಂಕುರ=ಮೊಳಕೆ, germ.

ಅಂಕುರಿತ=ಮೊಳೆತ, germinated.

ಅಂಗ=ಅವಯವ, ಶರೀರ, ಮನ (ಅಂತರಂಗ) limb, body.

ಅಂಗಜ=ಶರೀರದಲ್ಲಿ ಹುಟ್ಟಿದವನು ಮನ್ಮಥ, cupid, mud.

ಅಂಗಣ=ಅಂಗಳ, court 396

ಅಂಗನೆ=ಸ್ತ್ರೀ, woman.

ಅಂಗುಲಿ=ಬೆರಳು, finger.

ಅಂಗವಣೆ=ಇಚ್ಛೆ, wish, 410.

ಅಂಘ್ರಿ=ಪಾದ, 429, leg.

ಅಂಚಿತ=ಪೂಜ್ಯ, ಸುಂದರ, beautiful.

ಅಂಚೆ=ಹಂಸಪಕ್ಷಿ, swan.

ಅಂಜನ=ಕಾಡಿಗೆ, collyrium, magic.

ಅಂಡ=ತತ್ತಿ, egg.

ಅಂಡಜ=ತತ್ತಿಯಿಂದ ಹುಟ್ಟಿದ್ದು; oviparous, bird.

ಅಂಡಲೆ=ಉಪದ್ರಮಾಡು, to vex, 228.

ಅಂತ=ಕಡೆ, end.

ಅಂತಃಕಲಹ=ತಮ್ಮೊಳಗಿನ ಗುದ್ದ್ಯಾಟ(ಅಂತಃ=ಒಳಗೆ) intestine quarrel, 506.

ಅಂತಃಪುರ=ರಾಣಿವಾಸ, seraglio, Queen.

ಅಂತಕ=ಅಂತ ಮಾಡುವವನು, ಯಮ, Yama, death.

ಅಂತರ=ಎರಡರ ನಡುವಿನ ಸ್ಥಳ, interval, midst. 216.

ಅಂತರಿಸು=ಅಡ್ಡಮಾಡು, to hinder.

ಅಂತಸ್ತಾಪ=ಒಳಗಿನದುಃಖ, repentance.

ಅಂತಸ್ಥ=ಅಂತರಂಗ, secresy.

ಅಂತಿಕ=ಸಮೀಪ, vicinity, 513.

ಅಂದ=ರೀತಿ, ಚಂದ, made, elegance, 489, 343.

ಅಂದಣ, ಅಂದಳ=ಪಾಲಕಿ, palankeen, 430.

ಅಂಧ=ಕತ್ತಲೆ, ಕುರುಡು, darkness, blind,

ಅಂಧಕ=ಕುರುಡನು, blind man.

ಅಂಧಕಾರ=ಕತ್ತಲೆ, darkness

ಅಂಬಕ=ಕಣ್ಣು, eye.

ಅಂಬರ=ಆಕಾಶ, ವಸ್ತ್ರ, sky, clothes 755.

ಅಂಬಿಕೆ=ತಾಯಿ, mother, Parvati.

ಅಂಬು=ಬಾಣ, arrow.

ಅಂಬು=ನೀರು, water.

ಅಂಬುದ=ನೀರುಕೊಡುವಂಥಾದ್ದು, ಮೇಘ, cloud.

ಅಂಬುಜ=ನೀರಲ್ಲಿ ಹುಟ್ಟುವಂಥಾದ್ದು, ಕಮಲ, (ಅಂಬುರುಹ, ಅಂಬುರುಟ್) lotus.

ಅಂಬುನಿಧಿ=ನೀರಿನರಾಶಿ, ಸಮುದ್ರ, ocean.

ಅಂಭ, ಅಂಭಸ್ಸು=ನೀರು, water.

ಅಂಭೋಜ=ಕಮಲ, lotus. 755.

ಅಮ್ಮು=ಅಪೇಕ್ಷಿಸು, to wish.

ಅಂಶ=ಪಾಲು, share.

ಅಂಶು=ಕಿರಣ, ಅಮೃತಾಂಶು=ಚಂದ್ರ, ray.

ಅಂಶುಕ=ಬಟ್ಟೆ, cloth.

ಅಕ್ಕಜ=ಆಶ್ಚರ್ಯ, wonder. 561.

ಅಕ್ಕರ=ಸಂತೋಷ, attachment.

ಅಕ್ಕಳಿಸು=ಭಯದಿಂದ ಹಿಂಜರಿ, to flinch.

ಅಖಂಡ=ಎಲ್ಲಾ, ತುಂಡಿಲ್ಲದ್ದು, whole, indivisible.

ಅಖಿಲ=ಎಲ್ಲಾ, all.

ಅಗ=ಹೋಗದ್ದು=ಗುಡ್ಡ, mountain, 738.

ಅಗಡು=ಕಾಡು, wild 352. fierce.

ಅಗಲ, ಅಗಳ=ಗಂಗಾಳ, plate of leaves.

ಅಗಳು=ಅಗಿ, to dig.

ಅಗಿ=1. ಅಂಜು,2. ತಿನ್ನು, 3. ಸಂತೋಷ, to fear, to chew, to be glad. 750.

ಅಗ್ನಿ=ಬೆಂಕಿ, fire.

ಅಗ್ಗ (ಅಗ್ರ)=ಮುಖ್ಯ, principal.

ಅಗ್ಗಲ=ಹೆಚ್ಚಿಗೆ, (ಅಗ್ಗಳ, ಅರ್ಗಳ) superiority.

ಅಗ್ಗಳಿಕೆ=ಬಲ, strength.

ಅಗ್ನಿಹೋತ್ರ=ಹೋಮಾಗ್ನಿ, sacrificial fire.

ಅಗ್ರ=ತುದಿ, ಮುಖ್ಯ, ಅಭ್ಯಗ್ರ=ಹೆಚ್ಚು chief, 196.

ಅಗ್ರಜ=ಮೊದಲು ಹುಟ್ಟಿದವನು, ಅಣ್ಣ, elder brother.

ಅಗ್ರಣಿ=ಹೆಚ್ಚಿನವನು, principal.

ಅಘ=ಪಾಪ, sin.

ಅಚಲ=ಅಲ್ಲಾಡದಂಥಾದ್ದು, ಗುಡ್ಡ, mountain, 417.

ಅಚೇತನ, ಅಚೇತನ್ಯ=ಜೀವವಿಲ್ಲದ್ದು, exhausted.

ಅಚ್ಚರಿ=ಆಶ್ಚರ್ಯ, wonder.

ಅಚ್ಛ ತಿಳಿ, clear, crystal.

ಅಚ್ಛಿದ್ರ=ತೂತಿಲ್ಲದು=ಹೊಸತು, new fresh, 17.

ಅಜ=ಅ+ಜ=ಹುಟ್ಟಿದವನು=ಬ್ರಹ್ಮ. 2. ಹೋತು 3. ಕುರಿ, Brahma, he-goat, sheep.

ಅಜಸ್ರ=ಸರ್ವದಾ, eternally.

ಅಜಿನ=ತೊಗಲು, hide.

ಅಜೇಯ=ಅಪಜಯವಿಲ್ಲದ, invincible.

ಅಜ್ಞ=ಅರಿಯದ, ignorant.

ಅಟಮಟ=ಮೀರಿ ಹೋಗುವದು, escape, 438.

ಅಟ್ಟಹಾಸ=ಬಡಿವಾರ, laughter, pomp.

ಅಟ್ಟೆ=ಮುಂಡ, headless, trunk.

ಅಡಂಕು, ಅಡಕು=ಬಿಡುವಿಲ್ಲದೆ ಇಡು, to stuff.

ಅಡಗು=ಮಾಂಸ, meat.
ಅಡಸು=ಕವಿದುಬರು, to hold, 523.
ಅಡಿ=ಪಾದ, foot, bottom.
ಅಡಿಗಡಿಗೆ=ಮೇಲೆಮೇಲೆ, frequently.
ಅಣಕ=ಸುಮಾರು, close, mean,
ಅಣಿ=ಸಮಾನ, readiness, order, like.
ಅಣಿಯರ=ದೊಡ್ಡದು, great, high, 767.
ಅಣು=ತೀರಸಣ್ಣದು, atom, 296.
ಅಣುಗ=ಹುಡುಗ, boy, 399.
ಅಣೆ=ಹೊಡೆ, to strike against.
ಅತಿ=ಮೇಲೆ, ಬಹಳ, over, much.
ಅತಿಗಳೆಯು=ಕಳೆ, to spend, to blot out.
ಅತಿರೇಕ=ಬಹಳ, excessive,
ಅತಿಶಯ=ಹೆಚ್ಚು, much, excellent.
ಅತುಲ=ತೂಕವಿಲ್ಲದು, ಅಸಮ (ಅತು ಲಿತ) unequalled.
ಅದಿಮುರ್ತ್ತಿ=ಬಿಂದುಪುಷ್ಪ, trumpet-flower.
ಅದ್ಭುತ=ಆಶ್ಚರ್ಯ, (ಅದು ಭುತ), miracle, 489.
ಅದ್ರಿ=ಗುಡ್ಡ, hill 950.
ಅಧಟು=ಗದರಿಸು, to rebuke.
ಅಧಟನು=ಗದರಿಸುವವನು, rebuker.
ಅಧಮ=ಕೆಳಗೆ, ಕಡಿಮೆ, inferior.
ಅಧರ=ಕೇಗೆ, ಕೆಳಗಣತುಟಿ lower lip, 380.
ಅಧಿಕ=ಹೆಚ್ಚು, exceeding, 1091.
ಅಧಿನೇತೃ, ಅಧಿಪ, ಅಧಿಪತಿ=ಒಡೆಯ, master.
ಅಧೀಶ್ವರ=ದೊಡ್ಡರಾಜನು, emperor.
ಅಧೋಗತಿ=ಕೆಳಗೆಹೋಗುವದು, ನಾಶ; ruin.
ಅಧ್ಯಾತ್ಮ=ಹೆಚ್ಚಿನವನು, superior.
ಅಧ್ಯಾಹಾರ=supplying an ellipsis.
ಅಧ್ವ=ಮಾರ್ಗ, road, march.
ಅಧ್ವರ=ಯಜ್ಞ, sacrifice.
ಅನರ್ಘ್ಯ=ಹುಟ್ಟು, very costly, 1074.
ಅನಲ=ಬೆಂಕಿ, fire.
ಅನವರತ=ನಿತ್ಯ, eternal, eternally.
ಅನಶನ=ಉಪವಾಸ, fast, 295.
ಅನಾಥ=ದಿಕ್ಕಿಲ್ಲದ್ದು, destitute.
ಅನಾರತ=ನಿತ್ಯ, always.
ಅನಿಮಿಷ=ದೇವತೆ–ಮೀನ, gods, fish.
ಅನಿಲ=ಗಾಳಿ, wind, air.
ಅನಿಶ=ನಿತ್ಯ, eternally, 864.
ಅನಿಷ್ಟ=ಅಪೇಕ್ಷಿಸದ್ದು, ruin, 349.
ಅನೀಕ, ಅನೀಕಿನಿ=ದಂಡು, army, 424.
ಅನುಕರಿಸು=ಅನುಸರಿಸು, to imitate.
ಅನುಗುಣ=ತಕ್ಕಗುಣ, conformable, 596
ಅನುಜ್ಞೆ=ಅಜ್ಞೆ, order.
ಅನುಗ್ರಹ=ಕೃಪೆ, mercy.
ಅನುಚಿತ=ತಕ್ಕದ್ದಲ್ಲದು, unfit.
ಅನುಜ=ತಮ್ಮ, ಅನುಜೆ=ತಂಗಿ younger brother, sister.
ಅನುತಾಪ=ದುಃಖ, sorrow.
ಅನುನಯ=ಉಪಚಾರ, civility, 858.
ಅನುಪಮ=ಸಮವಿಲ್ಲ, peerless, 515
ಅನುಮತಿ=ಒಪ್ಪುವದು, ಅಜ್ಞೆ, consent, 219.
ಅನುರಕ್ತಿ, ಅನುರಾಗ=ಪ್ರೀತಿ, love, passion.
ಅನುರೂಪ=ಸಮ, resembling.

ಅನುಲೇಪನೆ, ಅನುಲೇಪಿಸು=ಹಚ್ಚುವದು, annointing.

ಅನುವರ=ಯುದ್ಧ, war.

ಅನುಷ್ಠಾನ=ಯಾವದೊಂದು ಆಚಾರ, performance.

ಅನ್ಯಥಾ=ಬೇರೆಯಾಗಿ, ಸುಮಾರು, otherwise, badly.

ಅನ್ಯೋನ್ಯ=ಪರಸ್ಪರ ಸ್ನೇಹ, reconciliation.

ಅನ್ವಯ=ವಂಶ, lineage.

ಅನ್ವಿತ=ಕೂಡಿದ, 860, united to.

ಅಪಗಮಿತ=ಹೋದಂಥಾ, gone, 508.

ಅಪರಾಹ್ಣ, ಅಪರಾಹ್ನ=ಮಧ್ಯಾಹ್ನ, afternoon, 214.

ಅಪವರ್ಗ=(ಅಪ × ವೃಜ್=ಬಿಡು) ಮೋಕ್ಷ, liberation.

ಅಪಾಂಗ=ಕಡೆಗಣ್ಣು, ಕರುಣ, mercy, 490.

ಅಪಾಯ=(ಅಪ+ಇ) ನಷ್ಟ, peril, mischief.

ಅಪೂರ್ವ=ಅಪರೂಪ, uncommon, 219.

ಅಪ್ಪು=ನೀರು, water, 577.

ಅಪ್ರತಿಮ=ಸಮಾನವಿಲ್ಲದವನು, incomparable, 592.

ಅಪ್ಸರಸೆ, ಅಪ್ಸರೆ=ದೇವತಾ ಸ್ತ್ರೀ, nymphs, 995.

ಅಬಲೆ, ಅಬಳೆ=ಬಲವಿಲದಾಕೆ=ಸ್ತ್ರೀ, woman.

ಅಬ್ಜ=ಕಮಲ (ನೀರಲ್ಲಿ ಹುಟ್ಟುವಂಥಾದ್ದು) ಅಬ್ಜಭವ=ಕಮಲದಿಂದಹುಟ್ಟಿದವನು =ಬ್ರಹ್ಮ, lotus.

ಅಬ್ದ=ಮೇಘ. (ನೀರುಕೊಡುವದು ವರುಷ, cloud, year.

ಅಭವ=ಜನನವಿಲ್ಲದವನು=ದೇವರು, god.

ಅಭಿಧೆ, ಅಭಿಧಾನ, ಅಭಿಧಾನಕ=ನಾಮ, name. 182.

ಅಭಿನವ=ಹೊಸತು, new, 421.

ಅಭಿಭೂತ= (ಅಭಿ × ಭೂತ=ಇದ್ದ) ಒಳಗಾದ, subdued, 806.

ಅಭಿಮತ=ಅಪೇಕ್ಷೆ, ಒಪ್ಪು, wish, consent. 1026.

ಅಭಿಮುಖ=ಇದಿರು, in front.

ಅಭಿಲಷಿತ=ಒಪ್ಪುವಂಥಾ, charming, 945.

ಅಭಿವಾದನೆ=ನಮಸ್ಕಾರ, obeisance, 459.

ಅಭಿಷೇಕ=ಸ್ನಾನ, bathing, initiation, 5.

ಅಭೀಕ್ಷಿಸು=ನೋಡು, to see, 936.

ಅಭೀಷ್ಟ=ಆಶಿಸಿದ, desired, 922.

ಅಭ್ಯರ್ಚನೆ=ಪೂಜೆ, veneration, 629.

ಅಭ್ಯಾಗತ=ತಾವಾಗಿಬಂದಅತಿಥಿ (ಅಭಿ × ಆ+ಗಮ್) guest, 1236.

ಅಭ್ಯುದಯ=ಜನನ–ಹೆಚ್ಚಿಗೆ, birth, 1038.

ಅಭ್ರ=ಆಕಾಶ, ಮೇಘ, ಮಿಂಚಕಲ್ಲು. sky, cloud, talc, 753—482.

ಅಮರ=(ಮರಣವಿಲ್ಲದ) ದೇವತೆ, deity, 412.

ಅಮರ್ದು=ಅಮೃತ, nectar, 718.

ಅಯಸ್ಸು=ಉಕ್ಕು, iron, 795.

ಅಯುತ=ಹತ್ತುಸಾವಿರ, ten thousand.

ಅರಕೆ=ಅರ್ಧ, half.

ಅರಚು=ಕೂಗು, to roar, 480.

ಅರಮೆ= ಸಣ್ಣದು, very small.

ಅರರ, ಅರರಿ, ಅರರೆ=ನಿಪಾತ, interjection, 460.

ಅರವಿಂದ=ಕಮಲ, 939.

ಅರಸು=ಹುಡುಕು, to seek, 534.

ಅರಿ=ವೈರಿ, adversary, 730.

ಅರುಣ, ಅರುಣತೆ=ಕೆಂಪು, ಸೂರ್ಯ, ಸೂರ್ಯನಸಾರಥಿ, ಅರುಣಾಂಬು=ರಕ್ತ, red, sun, 804, blood, 482.

ಅರೋಚಕ=ಸಪ್ಪಗೆ, insipid, 534.

ಅರ್ಕ=ಸೂರ್ಯ, sun.

ಅರ್ಘ=ಅಗ್ಗ, cheap.

ಅರ್ಘ್ಯ=ಪೂಜ್ಯ, ಬಂದವರಿಗೆ ಮಾಡತಕ್ಕ ಉಪಚಾರ, venerable, respectful oblation.

ಅರ್ಚನೆ=ಪೂಜೆ, adoration, 1228.

ಅರ್ಥನೆ=ಪ್ರಾರ್ಥನೆ, asking, 508.

ಅರ್ಭಕ=ಹುಡುಗ, child, 565.

ಅಲಂಕೃತ=ಭೂಷಣ, ornament, 860.

ಅಲಗು=ಅಲ್ಲಾಡಿಸು, to shake. 786.

ಅಲರು=ಅರಳು, ಹೂವು, to blossom, a flower, 724.

ಅಲಸು=ಬೇಸಾಯು, to be tired.

ಅಲಿ, ಅಲೆ=ತಿರುಗು, to roam, to vex, 796.

ಅಲ್ಲರಿ=ಬಾಧೆಪಡಿಸು, to trouble, 822.

(ಅವಘಡಿಸು) ಅವಗಡಿಸು=ಅಡ್ಡಿಮಾಡು, to confuse, to hinder, 233.

ಅವಜ್ಞೆ=ಅಲಕ್ಷ್ಯ, disrespect, 939.

ಅವತಂಸ=ಜುಟ್ಟು, crest,

ಅವಧರಿಸು, ಅವಧರಿಪು=ಕೇಳು, to listen, 1111.

ಅವಧಿ=ಮೇರೆ, limit, 545.

ಅವಧೂತ=ಎಲ್ಲಾ ಬಿಟ್ಟವನು, a naked mendicant.

ಅವನಿ=ಭೂಮಿ, ಅವನಿ+ಪ=ಅರಸ earth, 449.

ಅವಲಂಬನೆ=ಆಶ್ರಯ, protection, 467.

ಅವಶ=ವಶವಿಮಾರಿದ್ದು, unawares, 1045.

ಅವಿರಲ=ದಟ್ಟಗೆ, coarse.

ಅಶೋಕ=ಬಂದುಗಿಡ, Asoka-tree, 484.

ಅಶ್ಮ=ಕಲ್ಲು, rock.

ಅಶ್ರು=ಕಣ್ಣೀರು, tear, 449.

ಅಶ್ವತ್ಥ=ಅರಳೆಗಿಡ, the holy fig tree, 511.

ಅಷ್ಟಾಂಗಯೋಗ=ಎಂಟುತರದಯೋಗ, 563.

ಅಸವಸ=(ಅಸ್ವವಶ) ಅವಸರ, hurry, 791.

ಅಸಾಮ್ಯ=ಸಮವಲ್ಲ, 464, improper.

ಅಸಿತ=ಕಪ್ಪು(ಅ+ಸಿತ=ಬಿಳುಪು) black, 385.

ಅಸು=ಜೀವ, ಅಸವಳಿಯು=ಜೀವಕಳೆ, life.

ಅಸುರ=ರಾಕ್ಷಸರು=(ಅ+ಸುರ) giant.

ಅಸೂಯ=ಹೊಟ್ಟೆಕಿಚ್ಚು, envy.

ಅಸ್ತ, ಅಸ್ತಮಯ=ಸೂರ್ಯಮುಣಗು, sunset, 1166.

ಅಸ್ತ್ರ=ಆಯುಧ, ಬಾಣ weapon.

ಅಹರ್ನಿಶ=ಹಗಲುರಾತ್ರಿ, day and night, 822.

ಅಹಿ=ಸರ್ಪ, snake, 490.

ಅಹಿತ=ವೈರಿ,(ಅ+ಹಿತ enemy.

ಅಳರು=ಭಯಪಡು, (ಅಳುರು), to fear, 804.

ಅಳಲು=ದುಃಖಿಸು, to grieve. 358—450.

ಅಳವಡು=ಸಿದ್ಧವಾಗು, ಅಳವಡಿಸು=ಸಿದ್ಧಮಾಡು, to be placed, to garnish, 316.

ಅಳವಳು=ಚಿಂತೆಮಾಡು, to be sorrowful.

ಅಳವು=ಬಲ–ಅಳವಳಿ=ಬಲಗುಂದು, strength.

ಅಳಿ=ಭ್ರಮರ, ಸಣ್ಣದು, black bee, small, 702—406.

ಅಳುವು=ನಾಶ, destruction, grief, 405.

ಅಳ್ಕಜ=ಹೊಟ್ಟೆಕಿಚ್ಚು, (ಅಳ್ಕಜಕಾರ), envy, 710.

ಅಳ್ತಿ=ಸಂತೋಷ, joy, 594.

ಅಕ್ಷಮಾಲೆ=ಜಪಮಾಲೆ, rosary, 461.

ಅಕ್ಷಯ=ನಾಶವಾಗದ್ದು, indelible.

ಅಕ್ಷಿ=ಕಣ್ಣು, eye. 460.

ಆ.

ಆಂದೋಳ=ಚಿಂತೆ,(ದುಲ್=ಬಗೆ, ಅಲ್ಲಾಡು 460, sorrow.

ಆಂದೋಳಿತ=ನಡಗುವ, 793, swinging.

ಆಕಾರ, ಆಕರಣೆ=ಅಧಿಕಾರ, authority 445.

ಆಕರಿಸು=ತಕೊಳ್ಳು, 967, to take.

ಆಕರ್ಷ, ಆಕರ್ಷಣ=ಎಳಕೊಳ್ಳುವದು, 493, attraction.

ಆಕಸ್ಮಿಕ=ಥಗ್ಗನೆ, 347, sudden.

ಆಕರಣ=ಕರೆಯುವದು, calling.

ಆಕುಲ=ಗಲಿಬಿಲಿ, 650, ನಿರಾಕುಲ=ಗಲಿಬಿಲಿಲ್ಲದ್ದು 424, confounded.

ಆಕೃತಿ=ಆಕಾರ, 831, form.

ಆಕೆವಾಳತನ=ಶೂರತ್ವ, 355, valour.

ಆಕೆವಾಳರು=ಶೂರರು, valiant men.

ಆಕ್ರಮಿಸು=ವಶಮಾಡಿಕೊಳ್ಳು (ಆ+ಕ್ರಮ್) ಹೋಗು) 500, to grasp, seize.

ಆಕ್ರಾಂತ=ವಶಮಾಡಿಸಿಕೊಂಡ, 892, seized.

ಆಖು=ಇಲಿ, (ಆಕು) 879, a rat.

ಆಖ್ಯ, ಆಖ್ಯೆ=ಹೆಸರು (ಆಖ್ಯಾತ) 887, name.

ಆಗಮ=ಬರುವದು, 15, coming.

ಆಗಸ=ಆಕಾಶ, sky.

ಆಗಾರ=ಮನೆ, house.

ಆಗ್ರಹ=ಸಿಟ್ಟು, 812, rage, 416.

ಆಘ್ರಾಣಿಸು=ಮೂಸಿನೋಡು, 1163, (ಆಗ್ರಾಣಿಸು) to smell, 1163.

ಆಚ್ಚರ=ಆಶ್ಚರ್ಯ, surprise.

ಆಜಿ=ಯುದ್ಧ, (ಆಜಿರಂಗ), 1069, war, battle.

ಆಡಂಬರ=ದಂಭ, ಸಮೂಹ, 792, ostentation.

ಆಣ್ಮ, ಆಣ್ಬ=ಒಡೆಯ, ruler.

ಆತಪ,=ಬಿಸಲು. ಆತಪವಾರಣ, ಆತಪಪತ್ರ=ಕೊಡೆ, sunshine, parasol.

ಆತಿಥೆಯ, ಆತಿಥ್ಯ=ಬಂದವರಿಗೆ ಉಪಚಾರಮಾಡುವದು, 344, hospitality.

ಆತ್ಮ, ಆತ್ಮೀಯ=ತನ್ನ, 220, self.

ಆದರ=ಪ್ರೀತಿ, ಆದರಿಸು, 285, kindness.

ಆದಿತ್ಯ=ಸೂರ್ಯ, Sun.

ಆನತ=ಅಡ್ಡಬಿದ್ದ, 899, bent.

ಆನನ=ಮುಖ, face, mouth.

ಆನೀತ=ತರಲ್ಪಟ್ಟ, 751, brought.

ಆಪಗ, ಆಪಗಾ=ಹೊಳೆ, 751 river.

ಆಪನ್ನ=ದುಃಖಿತ, 337, afflicted.

ಆಮಾತ್ಯ=ಪ್ರಧಾನಿ, minister.

ಆಮೋದ=ಸಂತೋಷ, ಸುಗಂಧ, 776, joy, perfume.

ಆಯತ=ಉದ್ದ, 434, long.
ಆರಡಿ,=ಆರುಕಾಲುಳ್ಳದು=ಭ್ರಮರ, ದು ರಾಚಾರ, 705, black bee, enemy.
ಆರತ=ಸಂತೋಷಪಟ್ಟ, pleased.
ಆರಾಮ=ತೋಟ, garden.
ಆರೂಢ=ಹತ್ತಿದ, ರೂಢಿ, mounting, common.
ಆರೋಪಣ=ತಪ್ಪುಹೊರಿಸು, imputation.
ಆರ್ಜನೆ=ಘಳಿಸಿಕೊಳ್ಳುವದು, ಆರ್ಜಿಸು, 815
ಆರ್ಜಿತ=ಘಳಿಸಿಕೊಂಡ, acquirement.
ಆರ್ಣವ=ಸಮುದ್ರ, 220 ocean
ಆರ್ತಿ=ದುಃಖ, ಆರ್ತ=ದೈನ್ಯ, ದುಃಖಿತ, 347, sorrow
ಆರ್ದ್ರ=ತೊಯಿದ 907, wet.
ಆರ್ಯ,=ಪೂಜ್ಯ, 573, venerable.
ಆಲಂಬ, ಆಲಂಬನೆ=ಆಶ್ರಯ, ಆಲಂಬಿತ, dependence.
ಆಲವಟ್ಟ,=ಬೀಸಣಿಗೆ, parasol.
ಆಲವಾಲ=ಗಿಡಗಳಿಗೆ ಮಾಡುವಮಡಿ, 719, basin.
ಆಲಾಪ=ಮಾತು, conversation.
ಆಲಿ=ಕಣ್ಣು, 202, eye.
ಆಲಿಂಗನೆ=ಅಪ್ಪಿಕೊಳ್ಳುವದು, embracing.
ಆಲಿಪರಲು=ಆಣೆಕಲ್ಲು, 764, hail.
ಆಲೋಕ, ಆಲೋಕನೆ=ನೋಡುವದು, 850, sight.
ಆವಗಂ=ಯಾವಾಗಲು, always.
ಆವರಣ=ಮುಚ್ಚೋಣ, (ಆವರಿಸು=ಮುಚ್ಚು,) 527, surrounding.
ಆವರ್ತ=ಸುಳಿ; ಆವರ್ತಿಸು=ತಿರುಗು, 808, taming.
ಆವಳಿ=ಪಂಕ್ತಿ ಸಾಲು (ಆಳಿ) 475, line, row.
ಆವಾಸ, ಆವಸ=ಮನೆ, 842, a house.
ಆವೇಶ=ದೆವ್ವಹಿಡಿಯುವದು, ಪ್ರವೇಶ, 418, possession.
ಆಶಾ=ದಿಕ್ಕು, 692, point of the compass.
ಆಶಯ=ಅರ್ಥ, ಅಪೇಕ್ಷೆ, meaning.
ಆಶಿ=ಸರ್ಪದಹಲ್ಲು, 813, serpent's fang.
ಆಶ್ವಾಸ=ಉಸರು ಬಿಡೋಣ, 743, breath.
ಆಸುರ=ರಾಕ್ಷಸ, giant.
ಆಸ್ಥಾನ=ಸಭೆ, an assembly.
ಆಸ್ಫೋಟನ=ಅರಳುವದು, ಒಡೆಯೋಣ, expanding.
ಆಸ್ಯ=ಮುಖ, 747, face, mouth.
ಆಸ್ವಾದ,ಆಸ್ವಾದಿಸು=ಸವಿನೋಡು, 515, to taste.
ಆಹವ=ಯುದ್ಧ, war, battle.
ಆಹಿಕ, ಆಹಜ್ವರ=ದಿನದಿನಕ್ಕೆ ಬರುವ ಜ್ವರ, 11. fever.
ಆಳಿ=ಗೆಳತಿ, 204, female friend.
ಆಳಿಗೊಳ್ಳು=ತಿರಸ್ಕಾರ ಮಾಡು, 664, to disregard.
ಆಳು=ಮುಣುಗು, to dive.

ಇ.

ಇಂ=(ಸಮಾಸ) ಶಬ್ದಗಳಲ್ಲಿ ಸವಿ, sweet.
ಇಂಗಡ=ಬೇರೆಬೇರೆ, separate.
ಇಂಗಡಲು=(ಇಂ=ಸವಿ+ಕಡಲು=ಸಮುದ್ರ ಹಾಲಿನ ಸಮುದ್ರ, 1060, the sea of milk.
ಇಂಡೆಯು=ಮುದ್ದೆ, 594, a lump.

ಇಂದಿರೆ=ಲಕ್ಷ್ಮಿ, 816, Lakshme.
ಇಂದು=ಚಂದ್ರ, 725. (ಐಂದವ=ಚಂದ್ರಗೆಸಂಬಂಧಪಟ್ಟ 893) moon.
ಇಂದ್ರಜಾಲ=ಮೋಸ, ಮಂತ್ರ, cheating, legerdemain.
ಇಂಧನ=ಕಟ್ಟಿಗೆ 787, fuel.
ಇಕ್ಕೆ=ಸ್ಥಳ, place.
ಇಟ್ಟಣಿಸು=ಗುಂಪಾಗು, to be crowded.
ಇಡಿ, ಇಡಿಯು=ಗುಂಪಾಗಿರು, ಬಡಿ, 787, to beat, to be filled.
ಇತರ=ಬೇರೆ (ಇತರೇತರ) ಅನ್ಯ, 670. different.
ಇತ್ತಂಡ=(ಇರ್+ತಂಡ=ಸಮೂಹ) ಎರಡುಸರ್ತಿ=ಎರಡುಪಕ್ಷ, twice, two parties.
ಇತ್ತಡ=(ಇರ್+ದಡ=ದಂಡೆ) ಎರಡು ಕಡೆ, either shore
ಇನ=ಸೂರ್ಯ, sun, master.
ಇನಿ=ಸವಿ, 718 (ಇನಿಯಂ, ಇನಿಯಳ್) 765, sweet.
ಇಭ=ಆನೆ, an elephant.
ಇಬ್ಭಗಿ=ಎರಡು ಭಾಗ, 813, two parts.
ಇರುಳು=ರಾತ್ರಿ, 894, night.
ಇಲ, ಇಳಾ, ಇಳೆ=ಭೂಮಿ, 718, earth.
ಇಷು=ಬಾಣ, 513, arrow.
ಇಷ್ಟಿಕೆ=ಹೆಂಟೆ, ಇಟ್ಟಿಗೆ 947, brick.
ಇಳುಕೆ=ಕುಂದು. ಇಳಿಕೆ ಕಾಣು, 435, defect.
ಇಳಿತರು=ಇಳಿದು ಬರು, to come down.

ಈ.

ಈ=ಕೊಡು, to give.
ಈಂಟು=ಕುಡಿ, to drink.
ಈಡಾಡು=ಕಳೆ, 379, to scatter.
ಈಡಿರಿ=ಹಾರ್‍ಯಾಡು, ಅಲ್ಲಾಡಿಸು, 840, toss.
ಈಷಣ=ಆಸೆ, love
ಈಕ್ಷಿಕೆ=ನೋಟ,ಈಕ್ಷಿಸು=ನೋಡು, 849, see.

ಉ.

ಉಂನಿಸು=ಒಪ್ಪಿಕೊಳ್ಳು, 99, consent.
ಉಂಮಳ, ಉಮ್ಮಳಿಕೆ=ಚಿಂತೆ, anguish.
ಉಕ್ತಿ=ಮಾತು; ಉಕ್ತ=ಮಾತಾಡಿದ್ದು, word.
ಉಗಿ, ಉಗಿಯು=ಹಿರಿ, ಸುಲಿ, ಅಂಜು, 248, 822, 338, pull, peel, fear.
ಉಗು=ಹರಿ, 961, flow.
ಉಗ್ಗಡ=ಹೆಚ್ಚಿಗೆ, 374, superior.
ಉಗ್ರ=ಸಿಟ್ಟು, 392 (ಉಗ್ರಾಕ್ಷ=ಶಿವ) anger.
ಉಘ್ಘಡಣೆ=ಹೆಚ್ಚಿಗೆ, excess.
ಉಚ್ಚ=ಎತ್ತರ, 731, tall, high.
ಉಚ್ಚಳಿಸು, ಉಚ್ಛಳಿಸು=ಹೊರಡು, ಅಲ್ಲಾಡು, 667, burst forth.
ಉಚ್ಛಿಷ್ಟ=ಎಂಜಲು, leavings.
ಉಜ್ವಲ=ಉಜ್ವಳ, ಪ್ರಕಾಶ, 746, shining.
ಉಜ್ಜುಗ=ಪ್ರಯತ್ನ,ಉಜ್ಜುಗಿಸು, effort.
ಉಡಿ=ಮುರಿ, 375, break.
ಉಡು=ನಕ್ಷತ್ರ, 725, star.
ಉಣ್ಮು=ಹೊರಡು, ಹುಟ್ಟು, 773, to come forth.
ಉತ್ಕಟ=ಉತ್ಕೃಷ್ಟ, excessive.
ಉತ್ಕರ=ಗುಂಪು, ಹೆಚ್ಚು, 357, heap, much.
ಉತ್ಕರ್ಷ=ವಿಶೇಷ, 347, excellence.
ಉತ್ತರೋತ್ತರ=ಉತ್ತಮ, long, excellent.

ಉತ್ತರಿಸು=ದಾಟು, to cross.

ಉತ್ತಾರಕ=ಪಾರಾಗುವದು, 442, crossing.

ಉತ್ತುಂಗ=ಬಹಳ ದೊಡ್ಡದು, very large.

ಉತ್ಪಲ=ನೈದಿಲೆ, 385, water lily.

ಉತ್ಸುಕ=ಆಸಕ್ತ, zealous.

ಉದಗ್ರ=ಶ್ರೇಷ್ಠ, pre-eminent.

ಉದಿತ=ಹುಟ್ಟಿದ, 777, born

ಉದ್ಗಮ, ಉತ್ಪತ್ತಿ, ಮೇಲೆ ಹೋಗುವದು, 779 birth.

ಉದ್ಘ=ವಿಶೇಷ, 860, excellence.

ಉದ್ಘೋಷಿಸು=ಬಹಳ ಸಪ್ಪಳ ಮಾಡು, roar.

ಉದ್ದಂಡ=ದೊಡ್ಡದು, ಬಲತ್ಕಾರ, 476, violence.

ಉದ್ದಾಮ=ಉತ್ತಮ, chief.

ಉದ್ದೀಪಿತ=ಪ್ರಜ್ವಲ, 654, shining.

ಉದ್ಭವ=ಉತ್ಪತ್ತಿ, 446, birth

ಉದ್ಭಿನ್ನ=ಪ್ರತ್ಯೇಕ, different.

ಉದ್ಯಾನ, ಉದ್ಯಾನವನ=ಉಪವನ, 860, grove.

ಉದ್ರೇಕ=ಬಹಳ, ಮೀರಿದ್ದು, 632, excess.

ಉದ್ವಾಹ=ಮದಿವೆ, marriage.

ಉನ್ಮತ್ತ=ಹುಚ್ಚು, 418, mad.

ಉಪಕಂಠ=ಸಮೀಪ proximate.

ಉಪಕರಣ=ಸಮಾನ. ಉಪಕರಿಸು=ಮಾಡು, means.

ಉಪಟಳ=ಸಂಕಟ, 741, trouble.

ಉಪಮ, ಉಪಮಾನ, ಉಪಮೆ=ಸಮಾನ (ನಿರುಪಮ, ಅನುಪಮ) 1009, resemblance.

ಉಪರೋಧ=ವಿರೋಧ, 982, enmity.

ಉಪಲ=ಕಲ್ಲು, ಘನೋಪಲ=ಆನೆಕಲ್ಲು (ಮೇಘದಿಂದ ಬೀಳುವಂಥಾದ್ದು, 772, stone, hail.

ಉಪಹತಿ=ಉಪದ್ರ, 349, mischief.

ಉಪಹಾರ=ದಾನ, present.

ಉಪಾದಾನ=ಕಾರಣ, ಭಿಕ್ಷೆ, motive, begging.

ಉಪಾರ್ಜಿಸು=ಘಳಿಸು, 809, acquire.

ಉಪೇಕ್ಷೆ=ತಿರಸ್ಕಾರ, contempt.

ಉಪ್ಪವಡಿಸು=ಎಬ್ಬಿಸು, awake.

ಉಮೆ=ಪಾರ್ವತಿ, 637, Párvate.

ಉರ=ಎದೆ, ಉರಗ=ಎದೆಯ ಮೇಲೆ ನಡೆಯುವಂಥಾದ್ದು=ಸರ್ಪ, 743 breast, serpent.

ಉರವಣಿ=ಅವಸರ, haste.

ಉರು=ದೊಡ್ಡದು, 476, large.

ಉರೆ=ದೊಡ್ಡದು, great.

ಉರ್ಕು=ಸೊಕ್ಕು, 746, pride.

ಉರ್ಬು=ಉಬ್ಬು, swell.

ಉರ್ವಿ=ಭೂಮಿ, (ಉರ್ವರೆ) earth.

ಉಲಿ, ಉಲಿಯು=ಹಾಡು=ಮಾತಾಡು, 617, to sing, to speak.

ಉಲುವು, ಉಲುಹು=ಶಬ್ದ, 269, sound.

ಉಲ್ಕ=ಕೊಳ್ಳಿ, ಸಿಡಿಲು, 658, meteor

ಉಲ್ಲಂಘನೆ=ತಿರಸ್ಕಾರ, (ಉಲ್ಲಂಘಿಸು,) despise.

ಉಲ್ಲಸನ=ರೋಮೋದ್ಗಮನ, horripilation.

ಉಷ, ಉಷಃಕಾಲ, ಉಷಸ್ಸು=ಮೂಡಲು ಹರೆಯುವ ಹೊತ್ತು, 803, dawn.

ಉಷ್ಟ್ರ=ಒಂಟೆ, a camel.

ಉಳು=ನೇಗಿಲುಹೊಡೆ, 829, to plough

ಉಳ್ಕು=ಪ್ರಕಾಸಿಸು, to shine, sparkle

ಊ.

ಊಡು=ತಿನ್ನು, ಕುಡಿ, ತಿನ್ನಿಸು, 827, eat, drink.

ಊರ್ಧ್ವ=ಎತ್ತರ, aloft.

ಊರ್ಜ=ನಡು, ಪುಬ್ಬು, pierce, swell.

ಊಳು, ಊಳಿಡು=ಬೊಗಳು, 658, bark.

ಋ.

ಋತ್ವಿಕ್ಕು, ಋತ್ವಿಜನು=ಪುರೋಹಿತನು, family priest.

ಋಕ್ಷ=ಕರಡಿ, 745, ನಕ್ಷತ್ರ, bear, star.

ಎ.

ಎಕ್ಕಡ, ಎಕ್ಕವಡ=ಕೆರವು, 430, shoe.

ಎಕ್ಕಸ, (ಪೆಕ್ಕಸ)=ಬಹಳ, ostentatious.

ಎಡರು=ತೊಡಕು, ಎಡವು, 523, strait, stumble.

ಎಡೆ=ಸ್ಥಳ, ದಾರಿ, 367, place, road.

ಎಡ್ಡವಣೆ=ಮನೋಹರ, 749, pleasant.

ಎಣೆ=ಸರಿ, ಸಮಾನ, 843, likeness.

ಎರಕ=ಪ್ರೀತಿ, ದಯ, love, kindness.

ಎರಕಿ, (510) ಹುಲ್ಲುಕಡ್ಡಿ, grass.

ಎರಪು=ನಮಸ್ಕರಿಸು, 841, make obeisance.

ಎರವು=ಹೆಚ್ಚುಕಡಿಮೆ, difference.

ಎರೆಯ=ಒಡೆಯ, 729, master.

ಎಲರು=ಘಾಳಿ, (733) ಪುಷ್ಪ, air, flower.

ಎಸಕ=ಚಂದ, 733, lustre.

ಎಸಗು ಮಾಡು attempt, make.

ಎಸಮು, ಎಸೆಯು=ಪ್ರಕಾಶಿಸು, 200, to shine.

ಎಸೆ=ಎಸೆದಂಥಾದ್ದು, 795, shot.

ಎಳತಟ=ದಣಿಯುವದು, fatigue.

ಎಳೆವಾಡಿವ=ಹುಡಗತನ, 844, young.

ಎಳ್ತರು=ಎಳೆಯು, ಬರು, 793 (ಏಳ್ತರು) come.

ಏ.

ಏಡಿಸು=ತಿನಿಸು, ಅಣಕಿಸು, 369, to feed, deride.

ಏಳ್ಗೆ=ಏಳಗೆ, increase.

ಐ.

ಐಕಿಲು=ಚಳಿ, cold, frost.

ಐತರು=ಬರು, come.

ಐದು=ಹೊಂದು, ಬರು, get, arrive.

ಐದೆ=ನೆಟ್ಟಗೆ, well.

ಐದುತನ=ಸ್ತ್ರೀಮುದಿವೆಯಾಗಿರುವದು, wedded state.

ಐಸತಿ=ಅಷ್ಟೆ, well done!

ಐಸು=ಎಲ್ಲ, ಅಷ್ಟು, all.

ಒ.

ಒಕ್ಕಣಿಸು, ಒಕ್ರಣಿಸು=ಹೇಳು, say.

ಒಕ್ಕಲಿಕ್ಕು=ಕೊಲ್ಲು, kill.

ಒಗಲು=ಒಕೊಡು, to throw away.

ಒಗು=ತುಳುಕು, overflow.

ಒಗುವಿಗೆ=ತುಳುಕುವದು, ಒತ್ತರ, 278 overflowing, vehement.

ಒಗೆ=ಹುಟ್ಟು, 964, to be born.

ಒಡಚರ್ಜ ಕೂಡಿಸು, ಮಾಡು, 733, unite, make.

ಒಡ್ಡಣ=ಗುಂಪು, 749, cluster, heap.

ಒತ್ತವ=ಬೇರೊಬ್ಬರಂತೆ ಮಾಡಬೇಕೆಂಬುದು, 269, rivalry.

ಒದವು=ಒದಗು, 712, to be at hand.

ಒಪ್ಪರಂ=ಮನೋಹರ, agreeable.

ಒಯ್ಯನೆ=ಮೆಲ್ಲಗೆ, slowly, softly.
ಒರು, ಒರೆಯು=ಹೇಳು, 522, tell, say.
ಒಲವು= ಪ್ರೀತಿ, affection.
ಒಲಹು=ಅಲ್ಲಾಡುವದು, 401, vibrating
ಒಸಗೆ=ಸಂತೋಷ, 483, joy.
ಒಸೆ=ಮೆಚ್ಚು, be pleased.
ಒಳ್ಪು=ಒಳ್ಳೆದು, good.

ಓ.

ಓ=ಸಖತ್ವಮಾಡು, to form acquaintance.
ಓಗರ=ಅನ್ನ, 350, boiled rice.
ಓಘ=ಸಮೂಹ, flock, multitude.
ಓಜ=ಆಚಾರ್ಯ, ಬಡಗೆಯವನು, teacher, carpenter.
ಓಜೆ=ನ್ಯಾಯ, 411, ಶೂರತ್ವ, 367, justice, valour.
ಓದನ=ಅನ್ನ, boiled rice.
ಓರಂತೆ=ನೆಟ್ಟಗೆ, alike, well.
ಓರಂಡಲೆ=ಮಿಕ್ಕದ್ದು 1021, surpassing.
ಓರಣಿಸು=ಸಾಲಾಗಿರು, 362, to be in a row.
ಓಲಾಡು=ನೀರಾಟ ಮಾಡು, to sport in the water.
ಓಲು=ಒಲಿ, 373, love.
ಓವು=ಸಾಕು, 742, to nourish.
ಓಸರಿಸು=ಬಲದಿಂದ ಮಾಡು, 205, ದಾರಿ ಬಿಡು 221, ಬಾಗು 246, to force, get out of the way, incline.

ಔ.

ಔಕು=ಹಿಚಕು, 395, to squeeze.
ಔಘ=ಸಮೂಹ, 713 multitude.
ಔರಸ, ಔರಸನು=ಹಡೆದಮಗ, legitimate child.
ಔರ್ವ, ಔರ್ವವು, ಔರ್ವಾನಲವು=ಸಮುದ್ರದೊಳಗಣ ಬೆಂಕಿ, ಬಡಬಾನಲ, 730, sub-marine fire.

ಕ.

ಕಂ=ನೀರು (ಕಂಜ=ಕಮಲ) water.
ಕಂಕಾಳ=ಎಲುವು, 615, skeleton.
ಕಂಗೊಳಿಸು=ಕಾಣು (ಕಣ್ಣಗೊಳಿಸು) to appear.
ಕಂಚುಕ=ಅಂಗಿ 205, jacket, coat of mail.
ಕಂಠೀರವ=ಸಿಂಹ, 396, lion.
ಕಂತು=ಮನ್ಮಥ, 895, cupid.
ಕಂದ=ಬೇರು, ಗಡ್ಡೆ 751, bulbous. root.
ಕಂದ=ಮಗನು, 518.
ಕಂಧರ=ಕೊರಳು, 407, neck.
ಕಂಬನಿ=ಕಂಣಹನಿ=ಕಣ್ಣೀರು, tears.
ಕಜ್ಜ, ಕಜ್ಜಂ=ಕೆಲಸ, work.
ಕಟಕ=ಪಟ್ಟಣ, ದಂಡು, 642, 1181, city, army.
ಕಟಕಿ=ಹಾಸ್ಯಕ್ಕೆ ಸಂಬಂಧ, 692, ironical.
ಕಟು=ಕಠಿಣ, 756, hard, fierce.
ಕಡಂಗು, ಕಡಂಕು, ಕಡಕು,=ಬಹಳಪ, ಯತ್ನ ಮಾಡು, 1254, to strive.
ಕಡಲು=ಸಮುದ್ರ, 545, ocean.
ಕಡವರಂ=ಭಂಗಾರ, gold.
ಕಡು=ಬಹಳ, much
ಕಣ=ಹನಿ, ಕಿಡಿ, 724, 736, drop, spark.
ಕಣಾ=ಕಂಡ್ಯಾ, well done.

ಕಣೆ=ಬಾಣ, an arrow.
ಕತಿಪಯ,=ಕೆಲವು, 344, a few.
ಕದಂಕು=ಅಲ್ಲಾಡು, to shake.
ಕದಂಬ=ಸಮುದಯ (ಕದಂಬಕ) 401, heap.
ಕದನ=ಯುದ್ಧ, 281, war.
ಕದಪು=ಗಲ್ಲ, (ಕದಂಪು) 380, cheek.
ಕದಳಿ=ಬಾಳೆಗಿಡ, (ಸಮುದಯ) plantain.
ಕದಿರು=ಕಿರಣ, 721 ray.
ಕನಕ=ಭಂಗಾರ, 5, gold.
ಕನಲು=ಸಿಟ್ಟು ಮಾಡು, to be angry, anger.
ಕಪೋತ=ಪಾರಿವಾಳ, pigeon.
ಕಬರಿ=ತುರುಬು, 479, top-knot of hair.
ಕಬ್ಬ=ಕಾವ್ಯ, poem.
ಕಮನೀಯ=ಮನೋಹರ, 428, pleasing.
ಕರ=ಕೈ, 219 ಕಿರಣ, 641, hand, a spark.
ಕರಂ=ಬಹಳ, great, much.
ಕರಂಡ=ಭರಣಿ, small box 439.
ಕರಪತ್ರ=ಗರಗಸ, 112, saw.
ಕರವಾಲ, ಕರವಾಳ,=ಒಂದು ಕತ್ತಿ,731, scymitar.
ಕರಾಳ=ಭಯಂಕರ, 1085, dreadful.
ಕರಿ=ಕರ=ಸೊಂಡಿಲುಳ್ಳದ್ದು, ಆನೆ.
ಕರುಬು=ಹೊಟ್ಟೆಕಿಚ್ಚು, ಕರು ರು,=ಹೊಟ್ಟೆಕಿಚ್ಚಿನವರು, 290, envy, envious persons.
ಕರ್ಕಟ=ಏಡಿ, crab, cancer.
ಕರ್ಚು=ಕಚ್ಚು, ತೊಳೆ, 771, bite, wash
ಕರ್ಣಿಕ=ಕಮಲದ ಒಳಗಣ್ಣಾಗ, (424) (ಕರ್ನಿಕೆ,) pericarp of the lotus.
ಕರ್ಬುರ=ಭಂಗಾರ, 438, gold.
ಕರ್ಮಾಟ=ಕುಲಿಮೆ, 722, work shop,
ಕಲ=ಸವಿಸ್ವರ, (ಕಳ) 793, pleasing sound.
ಕಲಕಂಠ=ಕೋಗಿಲೆ, ಕಲಕಂಠಿ=ಕೋಗಿಲೆ ಹೆಣ್ಣು, 793 (ಕಳಕಂಠ) black cuckoo.
ಕಲಿ=ಶೂರ, 782, hero.
ಕಲಿತ=ಹೊಂದಿದ, 428, united.
ಕಲ್ಲೋಲ=ದೊಡ್ಡ ತೆರೆ, large wave.
ಕವರು=ಕಸಗೊಳ್ಳು, to seize.
ಕವಳಿಗೆ=ಪಾತ್ರೆ, 655, drinking vessel.
ಕವಾಟ=ಬಾಗಿಲು, 317, door.
ಕಳ= (ಖಳ) ಯುದ್ಧದ ಸ್ಥಳ, 497, battle-field.
ಕಳಚು=ತೆಗದುಹಾಕು, 394, take away.
ಕಳತ್ರ=ಹೆಂಡತಿ, wife.
ಕಳಲು=ತೀರು, (772) ಕಳಲಿಸು=ತೀರಿಸು, 347, be spent, spend.
ಕಸೈವರಿ=ಹೆಚ್ಚಾಗು, 252, increase.
ಕಳೇವರ=ದೇಹ, body.
ಕಳ್ತು=ತೃಪ್ತಿ, 841, satisfaction.
ಕಳ್ತಳೆ, ಕಳ್ತಲೆ=ಕತ್ತಲೆ, 721, darkness.
ಕಾಂಚನ=ಭಂಗಾರ, 474, gold.
ಕಾಂತ=ಪ್ರಿಯ; ಕಾಂತೆ=ಹೆಂಡತಿ, husband, wife.
ಕಾಂತಾರ=ಅಡವಿ, forest 440
ಕಾಕು=ಕೆಟ್ಟದು, 544, bad.

ಕಾತರಿಸು=ಅವಸರಪಡು, 363, to be rash.

ಕಾತುರ=ಅವಸರ, 984, rashness.

ಕಾದಂಬಿನಿ=ಮೇಘದಸಾಲು, 712, line of clouds.

ಕಾಪಥ=ಕೆಟ್ಟಮಾರ್ಗ, 340, bad road.

ಕಾಪು=ಆಶ್ರಯ, ಕಾವಲಿ, 484, protection.

ಕಾಮುಕ=ಕಾಮವುಳ್ಳವನು, 473, libidinous.

ಕಾಮಿನಿ=ಸ್ತ್ರೀ woman.

ಕಾಯ್ಪು=ಸಿಟ್ಟು, ಕಾಪ್ರು, 746, heat, anger.

ಕಾರ್ (ಕಾರು)=1. ಕಪ್ಪು, 2. ಕಾಡು, 3. ಮಳೆಕಾಲ, black, wild, wet.

ಕಾರಾಗಾರ=ಸೆರೆಮನೆ, jail.

ಕಾರುಕ=ಕಮ್ಮಾರ, 722, blacksmith.

ಕಾರ್ಷ್ಣ್ಯ=ಕಪ್ಪು, 770, black.

ಕಾಲುರಿಚ=ತಿರುಕೊಳ್ಳುವವನು, beggar.

ಕಾಷಾಯ=ಕೆಂಪು, 461. (ಕಾಷಾಯಾಂಬರ), red.

ಕಾಷ್ಠ=ಕಟ್ಟಿಗೆ, wood.

ಕಾಸ=ಕೆಮ್ಮು, 807, cough.

ಕಾಹುರ=ಆತುರ, vexation.

ಕಾಳ್ಗಿತು=ತಿರಸ್ಕಾರ, 711, contempt.

ಕಿರಾತ=ಬೇಡನು, 568, hunter.

ಕಿರಿ=ಕಡಿ, 568, to cut.

ಕಿಲ್ಬಿಷ=ಪಾಪ, guilt.

ಕೀನಾಶ=ಯಮ, 495, Yama.

ಕಿಳ್ಪೊಟ್ಟೆ, ಕಿಳ್ಪೊಡೆ,=ಕೆಳಹೊಟ್ಟೆ, 791, abdomen.

ಕುಂಜರ=ಆನೆ, 747, an elephant.

ಕುಂಭ=ಕೊಡ, ಆನೆಯ ಕುಂಭಸ್ಥಳ, 745, pot.

ಕುಂಭಿಣಿ=ಭೂಮಿ, earth.

ಕುಕಿಲು=ಕೋಗಿಲೆಕೂಗು, 836, cry of the cuckoo.

ಕುಕ್ಕು=ಪ್ರವೇಶಿಸು, penetrate, 874.

ಕುಚ=ಮೊಲೆ, Breast of a female.

ಕುಟಿಲ=ಮೋಸ, ಸೊಟ್ಟು, 438., trick, crooked.

ಕುಡುಪ,=ಗುಣುಕು 876, drumstick,

ಕುಣಪ=ಕುಣಬ=ಹೆಣ, a corpse.

ಕುತ್ತು=ಹೊಡೆ stab, beat.

ಕುದ್ದಾಲ=ಗುದ್ದಲಿ, a hoe

ಕುಣಿಕಿಲು=ಚೀಲ, 361, a bag.

ಕುಮುದ=ನೈದಿಲೆ,ದಿಗ್ಗಜ, a water lily

ಕುರಂಗ=ಜಿಗರಿ, 428, an antelope.

ಕುರುಪು=ಗುರುತು, ಸ್ಥಳ sign, place.

ಕುಲ=ಸಮೂಹ, 765, flock.

ಕುಲಟೆ=ಕೆಟ್ಟಾಕೆ, 819, unchaste woman.

ಕುವರ=ಮಗನು, son.

ಕುವರಿ ಮಗಳು, 249, daughter.

ಕುವಲಯ=ನೈದಿಲೆ, a water lily, ಭೂಮಿ, earth.

ಕುಸುರಿ=ಸಣ್ಣು, ಕುಸುರಿದರಿಯು=ಸಂಣವಾಗಿ, ಕೊಯಿ pulp, cut up fine.

ಕುಳಿ=ತಗ್ಗಾಗು, ತಗ್ಗು, 907, a pit, to sink in.

ಕುಳಿರು=ಚಳಿ chilliness.

ಕುಕ್ಷಿ= ಹೊಟ್ಟೆ, belly.

ಕೂಟ=ತುದಿ, 842, summit.

ಕೂಪ=ಭಾವಿ, a well.

ಕೂರ್=ತೀಕ್ಷ್ಣ, ಕ್ರೂರ 442, sharp, cruel.

ಕೂರು=ಪ್ರೀತಿಯಾಗು. ಕೂತುಕೊಳ್ಳು 836, be fond of, to sit down.
ಕೃತಕ=ಮಾಡಿದ್ದು, ಕಲ್ಪಿಸಿದ್ದು 388, artificial.
ಕೃಪಣ=ಲೋಭವುಳ್ಳದ್ದು, avaricious.
ಕೃಶಾನುವು=ಬೆಂಕಿ, 828, fire.
ಕೆರಳು=ಸಿಟ್ಟು ಮಾಡು, 1127, to be angry.
ಕೆರು=ಪ್ರಕಾಶಿಸು (ಕೆತ್ತ= ಪ್ರಕಾಶಿಸಿದ,) shine.
ಕೆಳದಿ=ಗೆಳತಿ, female friend.
ಕೆಳೆಗೊಳ್ಳು=ಸಖಿತ್ವಮಾಡು, 766, to become intimate.
ಕೇಕಿ=ನವಿಲು, 774, peacock.
ಕೇಗು=ನವಿಲುಕೂಗು, 767, cry as a peacock.
ಕೋಪ=ಸಿಟ್ಟು, ನಾಚಿಕೆ, 530, wrath, shame.
